START

START

MICRO FILMED

By

KARNATAKA STATE ARCHIVES

File No.: AUM 6 APP 90.

CAMP:-

MYSORE

DATE

10th July-1991

VIDYA DAYINI

1894 to 1914.

Contd/. from Pg No 1 of 1906

VIDYA DAYINI

1894 to 1914.

Contd. from Pg No 1 of 1906

887

ವಿದ್ಯಾದಾಯಿನಿ.

K1232
186



ಲೇಖಕ.

ಮೈಸೂರು

ಗ್ರಾಜುಯೇಟ್ಸ್ ಪ್ರಿಂಟಿಂಗ್ ಅಸೋಸಿಯೇಷನ್ ಪ್ರೆಸ್.

ತ್ತಾ ಬಂದರು. ಆದುದರಿಂದ ಆ ದೇಶಿಯರಲ್ಲಿ ಸಕ್ಕರೆಯನ್ನು ಮಾಡುತ್ತಿದ್ದವರಿಗೆ ನಮ್ಮ ದೇಶದಲ್ಲಿ ಸುಂಕ ಹಾಕಿದ್ದರಿಂದ ಯಾವ ಬಾಧಕವೂ ಆಗಲಿಲ್ಲ. ಸುಂಕ ಹಾಕದಿದ್ದರೆ ಹೇಗೋ ಹಾಗೆಯೇ ಅದರ ಕೆಲಸಗಳನ್ನು ಮಾಡುತ್ತಾ ಬಂದರು. ಅದರಿಂದ ಅವರಿಗೆ ಜೀವನವು ಸಲೀಸಾಗಿ ನಡೆಯುತ್ತಾ ಬಂತು. ಪ್ರಜೆಗಳಿಗೆ ಜೀವನಕ್ಕೆ ಇಲ್ಲದೇ ಹೋದರೆ ಅವರು ಸನ್ಮಾರ್ಗವನ್ನು ಬಿಟ್ಟು ದುರ್ಮಾರ್ಗಕ್ಕೆ ಬೀಳುವರೆಂಬುದಾಗಿಯೂ ಹಾಗೆ ಆಗದಂತೆ ಮಾಡುವುದಕ್ಕೆ ಎಷ್ಟು ಖರ್ಚುತಗಲಿದಾಗ್ಯೂ ಅದಕ್ಕೆ ಹಿಂತೆಗೆಯದೆ ಅದರ ಕೆಲಸಕ್ಕೆ ಸಹಾಯಮಾಡಬೇಕೆಂಬುದಾಗಿಯೂ ತಿಳಿದುಕೊಂಡು ಕೆಲಸವನ್ನು ಮಾಡುವುದರಿಂದ ಪಾಶ್ಚಾತ್ಯರು ಉತ್ತಮಸ್ಥಿತಿಯಲ್ಲಿ ಇರುತ್ತಾರೆ. ನಾವು ಈ ವಿಷಯದಲ್ಲಿ ಉಪೇಕ್ಷೆಯುಳ್ಳವರಾಗಿ ನಮ್ಮ ಕರ್ತವ್ಯವನ್ನು ಸರಿಯಾಗಿ ಮಾಡದೆಜನಗಳಿಗೆ ಅವರು ಹೇಗೆ ಜೀವಿಕೆಯನ್ನು ಸಂಪಾದಿಸಿಕೊಳ್ಳಬೇಕೋ ಅದಕ್ಕೆ ಸಹಾಯವನ್ನು ಮಾಡದೇ ಹೋಗುತ್ತಲಿರುವುದರಿಂದ ನಮ್ಮ ದೇಶವು ಇಂಥಾ ಹೀನಸ್ಥಿತಿಯಲ್ಲಿರುತ್ತಲಿರುವುದು.

ಕೈಗಾರಿಕೆಗಳು ವೃದ್ಧಿಗೆ ಬರಬೇಕಾದರೆ ಲೋಕವ್ಯವಹಾರಜ್ಞಾನವನ್ನುಂಟು ಮಾಡತಕ್ಕ ವಿದ್ಯಾಭ್ಯಾಸವು ಸಾಮಾನ್ಯ ಜನಗಳಲ್ಲಿ ವಿಶೇಷವಾಗಿ ವ್ಯಾಪಿಸುವಂತೆ ಮಾಡಬೇಕು. ಹೀಗೆ ಮಾಡಿದರೆ ವಿದ್ಯಾಭ್ಯಾಸದ ಸಹಾಯದಿಂದ ಅನೇಕ ಉದ್ಯೋಗಗಳ ಮರ್ಮಗಳು ತಿಳಿಯುವದಕ್ಕೆ ಅವಕಾಶವಾಗುವುದು. ತಿಳುವಳಿಕೆಗೆ ವಿದ್ಯಾಭ್ಯಾಸವೇ ಮೂಲಕಾರಣ. ವಿದ್ಯಾಭ್ಯಾಸದ ಜೊತೆಗೆ ದೇಶಾಟನವೂ, ವಿಚಾರವೂ ಇರಬೇಕು. ಪ್ರಥಮತಃ ನಾವು ಪ್ರತಿಊರಿನಲ್ಲಿಯೂ ಮತ್ತು ಗ್ರಾಮದಲ್ಲಿಯೂ ವಿದ್ಯಾಭ್ಯಾಸವು ಲಭಿಸುವಂತೆ ಮಾಡಬೇಕು. ಪ್ರೈಮರೀ ವಿದ್ಯಾಭ್ಯಾಸವನ್ನಾದರೂ ಕಡ್ಡಾಯವಾಗಿ ಮಾಡಿಸುವ ಏರ್ಪಾಡನ್ನು ಮಾಡಬೇಕು. ಇಂಡಿಯಾ ಗವರ್ನಮೆಂಟಿನವರು, ಪ್ರೈಮರೀ ವಿದ್ಯಾಭ್ಯಾಸವನ್ನು ಉಚಿತವಾಗಿ ಮಾಡಿಸುವ ಏರ್ಪಾಡನ್ನು ಪರ್ಯಾಲೋಚಿಸುತ್ತಲಿದಾರೆ. ಇದು ತುಂಬಾ ಸಂತೋಷಜನಕವಾದದು. ಉಚಿತವಾಗಿಯೂ, ಬಲಾತ್ಕಾರವಾಗಿಯೂ ಮಾಡಲ್ಪಡುವ ವಿದ್ಯಾಭ್ಯಾಸದ ಏರ್ಪಾಡು ನಮ್ಮ ದೇಶದಲ್ಲಿ ಹೊಸದಾದುದು. ಇದು ಹೊಸ ಪದ್ಧತಿಯೆಂದು ನಾವು ಹೆದರಿಕೊಳ್ಳಕೂಡದು. ಪಾಶ್ಚಾತ್ಯ ದೇಶಗಳಲ್ಲಿ ಕೆಲವು ದೇಶಗಳಲ್ಲಿ ಬಡವರು ಭೋಜನಗಳಿಗೂ ವಸ್ತ್ರಗಳಿಗೂ ಅವಶ್ಯಕವಾದ ಉಡಿಗೆಗಳಿಗೂ ಏರ್ಪಾಡನ್ನು ಸಮಸ್ತ ಜನಗಳಿಗೂ ಮಾಡಬೇಕೆಂದು ವಾದಿಸುವರು. ಅಂಥಾ ವಿಷಯುಗಳನ್ನು ನಾನು ಸೂಚಿಸುವದಿಲ್ಲ. ಪ್ರೈಮರೀ ವಿದ್ಯಾಭ್ಯಾಸವು ಉಚಿತವಾಗಿಯೂ, ಕಡ್ಡಾಯವಾಗಿಯೂ ಇರಬೇಕೆಂದು ನಾನುವಾದಿಸುತ್ತೇನೆ. ಇದು ತಪ್ಪೆಂದು ಯಾರೂ ಭಾವಿಸಲಾರರು.

ಸಶೇಷ.

ವಿಷಯಗಳನ್ನು ಬರೆದವರ ಹೆಸರು.

ಮು॥ ರಾ॥ ರಾ॥ ಶ್ರೀ॥

1. ಎಡಿಟರ್.
2. ಎಸ್. ವೆಂಕೋಬರಾವ್ ಬಿ. ಎ. ಯವರು.
3. ಎಂ. ವೆಂಕಟಕೃಷ್ಣಯ್ಯನವರು.
4. ಸಿ. ಕಪ್ಪಣ್ಣನವರು.
5. ಎಚ್. ಚಿದಂಬರಯ್ಯನವರು.
6. ಹಿತವಾದಿ ಎಡಿಟರವರು.
7. ಆರ್. ಶಾಮಶಾಸ್ತ್ರಿ, ಬಿ. ಎ. ಯವರು.
8. ಬಿ. ಎಸ್. ರಾಘವೇಂದ್ರರಾವ್‌ಯವರು.
9. ಕೆ. ರಾಮಸ್ವಾಮೈಯ್ಯಂಗಾರ್ರವರು.
10. ಎಂ. ಎಸ್. ಶ್ರೀನಿವಾಸೈಯ್ಯಂಗಾರ್ರವರು.
11. ಎಚ್. ಸೂರ್ಯನಾರಣಪ್ಪನವರು.
12. ಎಲ್. ಭೀಮರಾವ್‌ಯವರು.
13. ಕೆ. ವರದಾಚಾರ್ಯರವರು.
14. ಎಸ್. ಶ್ರೀಕಂಠಯ್ಯನವರು.
15. ಐಯ್ಯಾಶಾಸ್ತ್ರಿಗಳವರು.
16. ಬಿ. ಅನಂತಾಚಾರ್ರವರು.

ಮೊದಲಾದವರು.

ವಿದ್ಯಾದಾಯಿನಿಯ 14 ನೆಯ ಭಾಗ. 1906 ನೆಯ ಇಸವಿ.

ವಿಷಯಗಳು.

---

1. ಪ್ರಸಿದ್ಧರು (ಪ್ರಾಚೀನರು ಮತ್ತು ನವೀನರು.)

1. ವಿದ್ಯಾರಣ್ಯರ ಚರಿತ್ರೆ. 49
2. ಶ್ರೀಮಾ. ಪಂಡಿತರತ್ನಂ ಕಸ್ತೂರಿರಂಗಾಚಾರ್ಯರು. 284
3. ಗತಿಸಿದ ವಿದ್ವಾ ಜಯರಾಯಾಚಾರ್ಯರು. .. 140

2. ಶಾಸ್ತ್ರೀಯ ವಿಷಯ ವಿಚಾರ.

1. ಗೋಲ್ಡ್. ಸುವರ್ಣ 91
2. ಜಿಂಕ್. 107,135
3. ಭೂಮಿಯ ಮೂಲವಸ್ತುಗಳು. 100
4. ಭೂಮಿ 123
5. ಭೂವಿವರಣೆ (ನಿಮ್ನೋನ್ನತ ಪ್ರದೇಶಗಳು). ... 78
6. ಭೂಮಿಯ ಸ್ವರೂಪ ಮತ್ತು ವ್ಯತ್ಯಾಸ. ... 248
7. ಭೂಮಿಯ ಚಲನ. 273
8. ಪರ್ವತಗಳು. 28
9. ಜ್ವಾಲಾಮುಖಿಗಳು. 147,175
10. ಭೂಗೋಳಶಾಸ್ತ್ರ. ... 234, 260, 280.
11. ಚಂದ್ರೋತ್ಪತ್ತಿ. 82
12. ವ್ಯವಸಾಯಶಾಸ್ತ್ರ. ... 153, 185, 202, 230.
13. ಗಣಿತ. 183, 211, 264
14. ಮಾನಸಗಣಿತ. 231
15. ಕ್ಷೇತ್ರಗಣಿತ. ... 16, 56, 89, 114, 216.
16. ಕರ್ಣಾಟಕ ಭಾಷೆಯಲ್ಲಿ ಅಕ್ಷರಗಳೆಷ್ಟು? ... 202, 250
17. ಮನುಷ್ಯಜಾತಿ ... 12, 132, 156, 177

3. ವಿವಿಧವಿಷಯ ವಿಚಾರ.

1. ಯೂರೋಪಿನ ಇತರ ವಿಶ್ವವಿದ್ಯಾಲಯಗಳು. ... 31, 69, 83

2. ಯೂರೋಪಿನ ಪಕ್ಷಿಗಳು. ... 103
3. ಯೂರೋಪಿನ ವೃಕ್ಷಗಳು. 105
4. ಎಲಿವ್ಯಾಂಟಾ ಗುಹೆಗಳು. 182
5. ಕಬ್ಬಿಣ. 113
6. ಮೈಸೂರು ವಿದ್ಯಾಭ್ಯಾಸದ ಇಲಾಖೆ. ... 76
7. ಮೈಸೂರು ಮಹಾರಾಣಿಯವರ ಕಾಲೇಜು. ... 73
8. ಕರ್ಣಾಟಕ ವಿದ್ಯಾವರ್ಧಕಸಂಘ. (ಧಾರ್ವಾಡ) ... 121
9. ಮೆ॥ ತ್ಯಾಗರಾಜರ್ಜರವರು. 145

4. ಹಿತೋಪದೇಶ—

1. ಶಿಕ್ಷಾಕ್ರಮ. 1
2. ಪಾಠಕರು. 25, 97
3. ಪಾಠಕವೃತ್ತಿ 125
4. ಮಾನಸಿಕ ಶಿಕ್ಷಣ. 159
5. ನೀತಿಶಿಕ್ಷಣ. 169
6. ಕೈಬರಹ. 99, 272
7. ಉಕ್ತಲೇಖನಕ್ರಮ. 201
8. ನೋಟ್ಸುಗಳನ್ನು ಉಪಯೋಗಿಸುವುದರ ಫಲಗಳು. 149

5. ಬೋಧನಾಕ್ರಮ—

1. ಭೂವಿವರಣೆ. (ಟಿಪ್ಪಣಿ) 207, 255
2. ವಸ್ತುಪಾಠ. 228

6. ಉಪನ್ಯಾಸ.

1. ವಿದ್ಯಾಭ್ಯಾಸ. 195, 219, 241, 265
2. ಬಲಾತ್ಕಾರವಾದ ವಿದ್ಯಾಭ್ಯಾಸ. ... 269
3. ವ್ಯಾಪಾರದ ವಿದ್ಯಾಭ್ಯಾಸ. 271
4. ಜರ್ಮಾದೇಶದ ಸ್ತ್ರೀವಿದ್ಯಾಭ್ಯಾಸ ಕ್ರಮ. ... 6
5. ಜರ್ಮಾದೇಶದ ಪ್ರೈಮರಿ ಸ್ಕೂಲುಗಳು. 74
6. ತಾಯಿಯ ಕರ್ತವ್ಯ. 244

7. ಸ್ವಶಿಕ್ಷಣೆ. 222
8. ಸಂಭಾಷಣೆ. 7

7. ಸರ್ಕಾರಿ ವಿಷಯ—

1. ಮೈಸೂರು ಸಂಸ್ಥಾನದ ಶ್ರೀಮಾನ್ ದಿವಾನ್ ಸಾಹೇಬರವರು ಮೈಸೂರು ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ವಿದ್ಯಾಭ್ಯಾಸದ ವಿಚಾರವಾಗಿ ಹೇಳಿದ ವಿಷಯಗಳು. ... 217
2. ಮೈಸೂರು ಗೆಜೆಟ್ ಸಂಗ್ರಹ (ಕೋಆಪರೇಟಿವ್ ಸೊಸೈಟಿಯ ಕಾನೂನುಗಳು.) 33, 57
3, ಮೈಸೂರು ದೇಶೀಯ ಪರೀಕ್ಷೆ. .. 163

8. ಗ್ರಂಥಶೋಧನೆ—

1. ನಮ್ಮ ಪುಸ್ತಕಭಂಡಾರ 87
2. ಚಂದ್ರಾಲೋಕ 96

9. ವೃತ್ತಾಂತ—

1. ಸೂಚನೆ ಮತ್ತು ಸಮಾಚಾರ. ... 162, 189

10. ಮಕ್ಕಳಿಗೆ ಉಪಯುಕ್ತವಾದಂಶಗಳು—

1. ಪ್ರಭಾವಳಿ. 116
2. ದಶಸ್ತೋತ್ರಂ 232

* ವಿದ್ಯಾದಾಯಿನಿ. *

ಭಾಗ ೧೪.] ಜನವರಿ—೧೯೦೬. [ಸಂಚಿಕೆ ೧.

ಶಿಕ್ಷಾಕ್ರಮ.

ಅನೇಕ ಪಾಠಕರು ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸುವ ವಿಷಯದಲ್ಲಿ ತಕ್ಕ ಪ್ರಯತ್ನವನ್ನು ಮಾಡುವುದಿಲ್ಲ. ಈ ಉಪೇಕ್ಷೆಯಿಂದ ಪಾಠಕರ ಬೋಧೆಯು ವ್ಯರ್ಥವಾಗುವುದು. ಪಾಠಕರು ವಿದ್ಯಾರ್ಥಿಗಳಲ್ಲಿ ವಿಶ್ವಾಸವುಳ್ಳವರಾಗಿ ಇರಬೇಕು. ಆದರೆ ವಿಶ್ವಾಸದ ಜತೆಗೆ ಭಯವನ್ನು ಇಟ್ಟಿರಬೇಕು. ವಿಧೇಯರಾಗಿಯೂ ಹೇಳತಕ್ಕ ಪಾಠಗಳ ಮೇಲೆ ಮನಸ್ಸನ್ನು ಇಟ್ಟು ತಿಳಿದುಕೊಳ್ಳುವವರಾಗಿಯೂ, ಒಳ್ಳೆಯ ನಡತೆಯುಳ್ಳವರಾಗಿಯೂ, ಶ್ರದ್ಧೆಯುಳ್ಳವರಾಗಿಯೂ ಇರತಕ್ಕವರು ಮಾತ್ರವೇ ವಿಶ್ವಾಸಕ್ಕೆ ಅರ್ಹರು. ಅವರ ವಿಷಯದಲ್ಲಿ ಭಯವನ್ನು ತೋರಿಸುವುದಕ್ಕೆ ಕಾರಣವೇ ಇರುವುದಿಲ್ಲ. ಆದರೆ ಎಲ್ಲಾ ವಿದ್ಯಾರ್ಥಿಗಳೂ ಈ ಗುಣಾತಿಶಯಗಳನ್ನು ಹೊಂದಿರುವುದಿಲ್ಲ. ವಿಶ್ವಾಸದಿಂದಲೂ ಸಲಿಗೆಯಿಂದಲೂ ನೋಡಿದರೆ ಅದಕ್ಕೆ ಅರ್ಹರಾಗುವುದಕ್ಕೆ ಪ್ರತಿಯಾಗಿ ಕೆಲವ್ರಜನ ವಿದ್ಯಾರ್ಥಿಗಳು ಮೇರೆಯನ್ನು ಮೀರಿ ನಡೆಯುವರು. ನಿಯಮಿಸಲ್ಪಟ್ಟ ಪಾಠಗಳನ್ನು ಒಪ್ಪಿಸುವುದಿಲ್ಲ. ಗೊತ್ತು ಮಾಡಲ್ಪಟ್ಟ ಅಭ್ಯಾಸದ ಪಾಠಗಳನ್ನು ಬರೆದುಕೊಂಡು ಬರುವುದಿಲ್ಲ. ಸುಳ್ಳುನೆಪಗಳನ್ನು ಹೇಳುವರು. ಅಂಥವರನ್ನು ಪ್ರಥಮತಃ ಎಚ್ಚರಿಕೆಯಿಂದಲೂ, ಬುದ್ಧಿವಾದದಿಂದಲೂ ಅನಂತರದಲ್ಲಿ ಶಿಕ್ಷೆಯಿಂದಲೂ ನಿಗ್ರಹಿಸುವುದು ಬಹಳ ಅವಶ್ಯಕವಾದುದು. ಹಾಗೆ ನಿಗ್ರಹಿಸದೆಹೋದರೆ ಒಳ್ಳೆಯ ವಿದ್ಯಾರ್ಥಿಗಳೂ ಕೂಡಾ ಇವರನ್ನು ನೋಡಿ ಅವಿಧೇಯರಾಗಿ ಕೆಟ್ಟುಹೋಗುವರು. ವಿದ್ಯಾರ್ಥಿಗಳು ಬಹಳ

ಬುದ್ಧಿಶಾಲಿಗಳು. ತುಂಟರಾದ ವಿದ್ಯಾರ್ಥಿಗಳು ಸಾಧಾರಣವಾದ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಾಗಿ ಬುದ್ಧಿಯುಳ್ಳವರು. ಇವರು ಪ್ರಥಮಕಃ ಸಾಮಾನ್ಯವಾದ ತಪ್ಪುಗಳನ್ನು ಮಾಡಿ, ಪಾಠಕರ ಯೋಗ್ಯತೆಯನ್ನು ಪರೀಕ್ಷಿಸುವರು. ಆ ತಪ್ಪುಗಳಿಗೆ ಶಿಕ್ಷೆಯಾಗದೆಹೋದರೆ ಪ್ರಬಲವಾದ ತಪ್ಪುಗಳನ್ನು ಮಾಡುವರು. ಅವುಗಳಿಗೂ ಶಿಕ್ಷೆಯಾಗದೇಹೋದರೆ, ಉಚ್ಛೃಂಖಲಪ್ರವರ್ತರಾಗುವರು. ಪಾಠಕರು ಇವುಗಳನ್ನು ಉಪೇಕ್ಷಿಸುತ್ತಾ ಬಂದರೆ, ಪಾಠಶಾಲೆಯೇ ಹೀನಸ್ಥಿತಿಗೆ ಬರುವುದು. ಪಾಠಕರು ಅಲ್ಪವಾದ ತಪ್ಪುಗಳಿಗೂ ಕೂಡ ಅವಕಾಶವನ್ನು ಕೊಡದೆ ಯಾರು ತಪ್ಪು ಮಾಡಿದಾಗ್ಗೂ ಆ ತಪ್ಪಿಗೆ ಅನುರೂಪವಾದ ಶಿಕ್ಷೆಯನ್ನು ಮಾಡುತ್ತಾ ಬಂದರೆ, ತಪ್ಪುಗಳೇ ನಿಂತುಹೋಗುವುವು. ಪಾಠವು ನಡೆಯುವಾಗ್ಗೆ ನಗುವುದು, ಒಬ್ಬರೊಡನೆ ಒಬ್ಬರು ಮಾತನಾಡುವುದು, ಒಬ್ಬನು ಪಾಠ ಒಪ್ಪಿಸುವಾಗ್ಗೆ ಒಬ್ಬನು ಹೇಳಿಕೊಡುವುದು, ಪುಸ್ತಕಗಳನ್ನು ನೋಡಿಕೊಂಡು ಪಾಠ ಒಪ್ಪಿಸುವುದು, ಪರೀಕ್ಷೆಯ ಕಾಲುಗಳಲ್ಲಿ ಒಬ್ಬನು ಬರೆದ ಉತ್ತರಗಳನ್ನು ನೋಡಿಕೊಂಡು ಇನ್ನೊಬ್ಬನು ಬರೆಯುವುದು, ಪಾಠಗಳು ಉಪಕ್ರಮವಾದಮೇಲೆ ಪುಸ್ತಕಗಳನ್ನು ಹುಡುಕುವುದು, ಬರೆಯುವುದಕ್ಕೆ ಉಪಕ್ರಮವಾದಮೇಲೆ ಕಾಗದ ಕಡ್ಡಿ ಮೊದಲಾದುವುಗಳನ್ನು ಹುಡುಕುವುದು, ಪಾಠವು ಉಪಕ್ರಮವಾಗುವುದಕ್ಕೆ ಮುಂಚೆ ಮಾಡಿಕೊಂಡು ಸಿದ್ಧವಾಗಿರಬೇಕಾದ ಕೆಲಸಗಳನ್ನು ಪಾಠವು ಉಪಕ್ರಮವಾದಮೇಲೆ ಮಾಡುವುದು ಇವುಗಳಿಗೆಲ್ಲಾ ಪಾಠಕರು ಅವಕಾಶವನ್ನು ಕೊಟ್ಟರೆ, ಕ್ಲುಪ್ತ ಕಾಲದಲ್ಲಿ ಪಾಠಪ್ರವಚನಗಳನ್ನು ಮುಗಿಸುವುದೇ ಅಸಾಧ್ಯವಾಗುವುದು. ಇಂಥಾ ಪಾಠಕರು ತಮ್ಮ ಕೆಲಸದಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವನ್ನುಂಟುಮಾಡುವುದೇ ಅಸಾಧ್ಯವಾಗಿರುವುದು. ಅನೇಕ ಹುಡುಗರು ಪಾಠ ನಡೆಯುತ್ತಲಿರುವಾಗ ನೀರು ಕುಡಿಯುವುದಕ್ಕೂ, ಜಲಮಲ ವಿಸರ್ಜನೆಗಳಿಗೂ ಹೋಗಬೇಕೆಂದು ಹೇಳಿ, ಅಪ್ಪಣೆಯನ್ನು ತೆಗೆದುಕೊಂಡು ಹೋಗಿ, ವೃಥಾ ಕಾಲಕ್ಷೇಪವನ್ನು ಮಾಡಿ ಪಾಠಗಳನ್ನು ಕಳೆದುಕೊಳ್ಳುವರು. ಪಾಠವು ಉಪಕ್ರಮವಾಗುವುದಕ್ಕೆ ಮುಂಚೆಯಾಗಲೀ, ಪಾಠವು ಮುಗಿಸಿದಮೇಲಾಗಲೀ ಹೋಗುವುದಕ್ಕೆ ಅವಕಾಶವನ್ನು ಕೊಟ್ಟು, ಪ್ರತಿಯೊಂದು ಗಂಟೆಯಲ್ಲಿಯೂ ಗಂಟೆಯ ಮಧ್ಯದಲ್ಲಿ ಅವಕಾಶವನ್ನು ಕೇಳಿದವರಿಗೆ ಕೊಡದೇ ಇರುವುದು ಉತ್ತಮ. ಪಾಠಪ್ರವಚನಗಳು ಸರಿಯಾಗಿ ನಡೆಯುವುವು. ಹಾಗಿಲ್ಲದಿದ್ದರೆ ಪಾಠಪ್ರವಚನಗಳು ಸರಿಯಾಗಿ ನಡೆಯುವುದಕ್ಕೆ ಅವಕಾಶವಾಗುವುದಿಲ್ಲ. ವಿಶ್ವಾಸದಿಂದಲೂ,

ದರ್ಪದಿಂದಲೂ ಹುಡುಗರನ್ನು ಹತೋಟಿಯಲ್ಲಿಟ್ಟುಕೊಳ್ಳದೆ ಇರತಕ್ಕ ಪಾಠಕರ ವಿದ್ಯಾರ್ಥಿಗಳು ಗಲಾಟೆಯನ್ನು ಮಾಡುತ್ತಾ ತರಗತಿಯಲ್ಲಿ ಪಾಠಪ್ರವಚನಗಳು ನಡೆಯದಂತೆ ತೊಂದರೆಯನ್ನು ಮಾಡುವರು. ಈ ತೊಂದರೆಯಿಂದ ವಿದ್ಯಾರ್ಥಿಗಳಿಗೆ ವಿದ್ಯೆ ಶೀಘ್ರವಾಗಿ ಬರುವುದಿಲ್ಲ; ಪಾಠಕರಿಗೆ ಅಪಯಶಸ್ಸು ತಪ್ಪುವುದಿಲ್ಲ. ಆದುದರಿಂದ ಪಾಠಕರು ದರ್ಪವುಳ್ಳವರಾಗಿರಬೇಕು. ತರಗತಿಯಲ್ಲಿ ಪಾಠಪ್ರವಚನಗಳು ನಡೆಯುವುದಕ್ಕೆ ಮುಂಚೆ ವಿದ್ಯಾರ್ಥಿಗಳು ಮಾಡಿಕೊಂಡು ಬರಬೇಕಾದ ಕೆಲಸಗಳನ್ನೆಲ್ಲಾ ಕ್ಲುಪ್ತ ಮಾಡಿರಬೇಕು ಆ ವಿಧಿಗಳಿಗೆ ಅನುಸಾರವಾಗಿ ವಿದ್ಯಾರ್ಥಿಗಳು ನಡೆಯುವಂತೆ ಏರ್ಪಾಡು ಮಾಡಿಕೊಳ್ಳಬೇಕು. ಈ ಏರ್ಪಾಡನ್ನು ಮಾಡಿಕೊಳ್ಳುವುದರಲ್ಲಿ ಬರೀ ವಿಶ್ವಾಸದಿಂದಲೂ ದರ್ಪದಿಂದಲೂ ಕೆಲಸಗಳು ನಡೆಯುವುದಿಲ್ಲ. ದುರ್ಮಾರ್ಗರಾದ ವಿದ್ಯಾರ್ಥಿಗಳು ತಂದೆತಾಯಿಗಳಿಗೂ ಪಾಠಕರಿಗೂ ಇಬ್ಬರಿಗೂ ಮೋಸಮಾಡುವರು. ಈ ಮೋಸವನ್ನು ತಪ್ಪಿಸಬೇಕಾದರೆ ಪಾಠಕರು ವಾರಕೊಮ್ಮಂದಾವೃತ್ತಿಯಾದರೂ ವಿದ್ಯಾರ್ಥಿಗಳ ತಂದೆತಾಯಿಗಳಿಗೆ ಅವರ ವಿದ್ಯಾಭಿವೃದ್ಧಿಯನ್ನೂ ನಡೆನುಡಿಗಳನ್ನೂ ಕುರಿತು ತಿಳಿಸುತಿರಬೇಕು. ಹೀಗೆ ಮಾಡುತ್ತಾಬಂದರೆ, ಪಾಠಕರ ಕೆಲಸಕ್ಕೆ ತಂದೆತಾಯಿಗಳೂ ಸಹಾಯ ಮಾಡುವರು. ಕೆಲವರು ವಿದ್ಯಾಭ್ಯಾಸದ ವಿಷಯದಲ್ಲಿ ಕಳ್ಳಾಟವನ್ನು ಮಾಡಿ ಪಾಠಶಾಲೆಗೆ ಹೋಗುವುದರಲ್ಲಿ ತಂದೆತಾಯಿಗಳಿಗೆ ಪ್ರತ್ಯಯವನ್ನುಂಟುಮಾಡಿ, ಪಾಠಶಾಲೆಗೆ ಹೋಗುವುದನ್ನೇ ತಪ್ಪಿಸಿಕೊಳ್ಳುವುದುಂಟು. ಇದನ್ನು ತಪ್ಪಿಸಬೇಕಾದರೆ ಪಾಠಕರು ತಂದೆತಾಯಿಗಳ ಅಥವಾ ಪೋಷಕರ ಸಂಬಂಧವನ್ನು ಇಟ್ಟುಕೊಂಡು, ಅವರ ಸಹಾಯದಿಂದ ಇಂಥ ತುಂಟಹುಡುಗರ ವಿದ್ಯಾಭ್ಯಾಸದಲ್ಲಿ ಆಸಕ್ತಿಯನ್ನುಂಟುಮಾಡಬೇಕು. ಪಾಠಕರು ಸ್ವಲ್ಪವೂ ಬೇಜಾರನ್ನು ಹೊಂದದೆ, ಕ್ಲುಪ್ತವಾದ ಕಾಲದಲ್ಲಿ ತಮ್ಮ ತರಗತಿಯ ವಿದ್ಯಾರ್ಥಿಗಳ ಯೋಗಕ್ಷೇಮ ಚಿಂತೆಯನ್ನು ಮೇಲೆಹೇಳಿದ ರೀತಿಯಲ್ಲಿ ನಡೆಸುತ್ತಾಬಂದರೆ ತಾವು ಮಾಡತಕ್ಕ ಕಾರ್ಯವನ್ನು ಕೂಡಿದಮಟ್ಟಿಗೂ ಆದರದಿಂದ ಮಾಡಿದಂತಾಗುವುದು.

ಭೂ ಮಿ .

ಸಮಸ್ತ ಪದಾರ್ಥಗಳೂ ಮೂರು ಅವಸ್ಥೆಯಲ್ಲಿರುವುವು. ಶಿಲಾವಸ್ಥೆ ಜಲಾವಸ್ಥೆ ಅನಿಲಾವಸ್ಥೆ ಎಂದು ಈ ಮೂರಕ್ಕೂ ಹೆಸರು. ಶಿಲಾವಸ್ಥಗೆ ದೃಷ್ಟಾಂತವೇ ಭೂಮಿ. ಜಲಾವಸ್ಥಗೆ ದೃಷ್ಟಾಂತವು ಸಾಗರ. ಅನಿಲಾವಸ್ಥಗೆ ದೃಷ್ಟಾಂತವು ವಾಯುಮಂಡಲ. ವಾಯುಮಂಡಲವನ್ನು ಆಕಾಶಬುಟ್ಟಿ ಮೊದಲಾದವುಗಳಲ್ಲಿ ಹೋಗಿ ಪರೀಕ್ಷಿಸಬಹುದು. ನೀರಿನಲ್ಲಿ ಮುಳುಗುವುದರಿಂದಲೂ ಆಳ ಮೊದಲಾದವುಗಳನ್ನು ನೋಡತಕ್ಕ ಇತರ ಯಂತ್ರಗಳ ಸಹಾಯದಿಂದಲೂ ನೀರಿನಲ್ಲಿಯೂ ನೀರಿಗೆ ಆಧಾರವಾಗಿರತಕ್ಕ ನೆಲದಲ್ಲಿಯೂ ಇರುವ ಪದಾರ್ಥಗಳನ್ನೂ ಗೊತ್ತುಮಾಡಬಹುದು. ಭೂಮಿಯು ಶಿಲಾವಸ್ಥೆಯಲ್ಲಿರುವುದರಿಂದ ಅದರೊಳಗಿರತಕ್ಕ ಪದಾರ್ಥಗಳನ್ನು ಅಷ್ಟು ಸುಲಭವಾಗಿ ಪರೀಕ್ಷಿಸುವುದು ಸಾಧ್ಯವಲ್ಲ. ಆದರೆ ಭೂಮಿಯನ್ನು ಕೂಡಾ ಆಗೆದು ಯಾವ ಯಾವ ಪದಾರ್ಥಗಳು ಸೇರಿ ಭೂಮಿಯಾಗಿರುವುದೋ ಎಂಥಾ ಲೋಹಗಳು ಅದರಲ್ಲಿ ದೊರೆಯುವುವೋ ಇವುಗಳಿಗೆಲ್ಲಾ ಕಾರಣಗಳೇನೋ ಬೆಟ್ಟಗಳೂ ಕಣಿವೆಗಳೂ ಮೈದಾನಗಳೂ ಆಗುವುದಕ್ಕೆ ಕಾರಣವೇನೋ ಇವುಗಳನ್ನೆಲ್ಲಾ ಪರೀಕ್ಷಿಸಿ ಗೊತ್ತುಮಾಡಬಹುದು.

ಒಹಳ ಉನ್ನತವಾದ ಪರ್ವತಗಳನ್ನು ಅದಕ್ಕಿಂತಲೂ ಸ್ವಲ್ಪ ಕಡಮೆಯಾಗಿರತಕ್ಕ ಬೆಟ್ಟಗಳನ್ನೂ ಅದಕ್ಕಿಂತಲೂ ಕಡಮೆಯಾಗಿರತಕ್ಕ ಗುಡ್ಡಗಳನ್ನೂ ಅದಕ್ಕಿಂತಲೂ ನಿಮ್ನವಾದ ಮೈದಾನಗಳನ್ನು ಅವುಗಳಿಗಿಂತಲೂ ನಿಮ್ನವಾಗ ಕಣಿವೆಗಳನ್ನು ನೋಡಿದರೆ ಈ ನಿಮ್ನೋನ್ನತೆಗಳಿಗೆ ಕಾರಣವೇನಾಗಿರಬಹುದೆಂದು ಮನಸ್ಸಿಗೆ ಒಂದು ಪ್ರಶ್ನೆಯು ತೋರುವುದು. ಪರ್ವತಾಗ್ರಗಳಲ್ಲಿ ಮೇಘಗಳು ಸೇರುವುದನ್ನು ಗುಡುಗುಗಳ ಶಬ್ದವಾಗುವುದನ್ನು ಮಳೆ ಬೀಳುವುದನ್ನು ಹಿಮ ಬೀಳುವುದನ್ನು ನೋಡುತ್ತೇವೆ. ಪರ್ವತಗಳ ಶಿಖರಗಳಲ್ಲಿ ನಿರಂತರವಾದ ಶಿಡಿಲು ಮತ್ತು ಗುಡುಗಿನ ಶಬ್ದವು ಕೇಳಲ್ಪಡುವುದು. ಅಲ್ಲಿನ ಬಿರುಗಾಳಿಯೂ ನಿರಂತರವಾದ ಮಳೆಯೂ ಹಿಮವೂ ಗಿರಿನದಿಗಳೂ ಇವುಗಳೆಲ್ಲಾ ಯಾವಕೆಲಸಗಳನ್ನು ಮಾಡುತ್ತವೆ. ಈ ಕೆಲಸಗಳೆಲ್ಲಾ ಭೂಮಿಯಮೇಲೆ ಯಾವಬದಲಾವಣೆಗಳನ್ನು ನಡೆಯಿಸುತ್ತವೆ. ಈ ಗಿರಿ ನದಿಗಳು ಎಲ್ಲಿಗೆ ಹೋಗುತ್ತವೆ? ಈ ಪ್ರಶ್ನೆಗಳೆಲ್ಲಾ ತೋರುವುವು. ದೊಡ್ಡ ನದಿಗಳ ಮುಖ್ಯಭಾಗಗಳನ್ನು ಹೋಗಿ ನೋಡಿದರೆ ಅಲ್ಲಿ ಜಲಾವಣೆಯಾಗತಕ್ಕ ಮಣ್ಣು

ಮರಳು ಇವುಗಳ ರಾಶಿಯು ದೃಷ್ಟಿಪಥಕ್ಕೆ ಬೀಳುವುವು. ಇಷ್ಟು ಮಣ್ಣು ಮತ್ತು ಮರಳು ಎಲ್ಲಿಂದ ಬಂತು? ಇದನ್ನು ನದಿಯು ಹೇಗೆ ತೆಗೆದುಕೊಂಡು ಬರುತ್ತದೆ? ಎಂಬ ಪ್ರಶ್ನೆಯು ಹುಟ್ಟುವುದು?

ನಾವು ಯಾವ ಪ್ರಾಂತ್ಯದಲ್ಲಿದ್ದಾಗ್ಯೂ ಅಲ್ಲೆಲ್ಲಾ ಈ ವಿಧವಾದ ಪ್ರಶ್ನೆಗಳಿಗೆ ಅವಕಾಶವು ಸಿಕ್ಕುವುದು. ಪರ್ವತಗಳ ನಾಲುಗಳು, ಮೈದಾನ, ಗುಡ್ಡಗಳು ನದಿಗಳಿಗೆ ನೀರನ್ನು ಒದಗಿಸತಕ್ಕ ಉನ್ನತಪ್ರದೇಶಗಳೂ, ಚಿಲುಮೆಗಳೂ, ಕಾಲುವೆಗಳೂ, ನದಿಗಳೂ, ಕೆರೆಗಳೂ ಇವುಗಳ ವಿಷಯವನ್ನೆಲ್ಲಾ ಪರಿಶೀಲಿಸಿ ತಿಳಿದುಕೊಳ್ಳಬೇಕಾಗುತ್ತದೆ. ಇವುಗಳ ಉತ್ಪತ್ತಿ, ಸ್ಥಿತಿ, ಲಯ ಮೊದಲಾದವುಗಳನ್ನು ಪರೀಕ್ಷಿಸಿ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಿದರೆ ಎಷ್ಟೋ ವಿಷಯಗಳು ಗೊತ್ತಾಗುತ್ತವೆ. ನೀರಿನಿಂದ ಮುಚ್ಚಲ್ಪಡದೇ ಇರತಕ್ಕ ಭೂಮಿಯು ಐದುಕೋಟಿಯು ಇಪ್ಪತ್ತುಲಕ್ಷ ಚದರಮೈಲಿಗಳಿರುವುದು. ಈ ಭೂಮಿಯು ಖಂಡಗಳಾಗಿ ವಿಭಾಗಿಸಲ್ಪಟ್ಟಿರುವುದು. ಪಶ್ಚಿಮದಿಕ್ಕಿನಲ್ಲಿ ಉತ್ತರ ಮತ್ತು ದಕ್ಷಿಣ ಅಮೇರಿಕಾಖಂಡಗಳೂ, ಮಧ್ಯಭಾಗದಲ್ಲಿ ಯೂರೋಪ್ ಆಫ್ರಿಕಾ ಮತ್ತು ಏಸ್ಯಾಖಂಡಗಳೂ, ಇವುಗಳ ಪಶ್ಚಿಮ ಮತ್ತು ಆಗ್ನೇಯದಿಕ್ಕಿನಲ್ಲಿ ಈಸ್ಟ್ ಇಂಡಿಯರ್ಚಿ, ಆಸ್ಟ್ರೇಲಿಯಾ ಟಾಸ್ಮೇನಿಯಾ ಮತ್ತು ನ್ಯೂಜಿಲೆಂಡ್ ಎಂಬ ದ್ವೀಪಗಳೂ ಇರುತ್ತವೆ. ಈ ಖಂಡಗಳೂ ದ್ವೀಪಗಳೂ ಇವುಗಳಲ್ಲೆಲ್ಲಾ ಪರ್ವತಾಗ್ರಗಳಾಗಿರುತ್ತವೆ. ನಿಮ್ನವಾದ ಭೂಭಾಗಗಳಲ್ಲಿ ಸಮುದ್ರದ ನೀರು ಸೇರಿಕೊಂಡಿರುತ್ತದೆ. ಇವುಗಳಿಗೆ ಸಾಗರಗಳೂ ಸಮುದ್ರಗಳೂ ಕೊಲ್ಲಿಗಳೂ ಖಾರಿಗಳೂ ಎಂದು ನಾನಾವಿಧವಾದ ಹೆಸರುಗಳು ಇರುತ್ತವೆ. ತೀರಪ್ರದೇಶಗಳಲ್ಲಿ ಮರಳಿನಿಂದ ತುಂಬಲ್ಪಟ್ಟ ತೀರಗಳೂ ಮತ್ತು ಕಲ್ಲುಗಳ ಬಂಡೆಗಳುಳ್ಳ ತೀರಗಳೂ ಇರುವುವು. ಪ್ರಾಯಕವಾಗಿ ಉತ್ತರದಿಕ್ಕಿಗೆ ಇರತಕ್ಕ ತೀರದೇಶಗಳಿಗೆಲ್ಲಾ ಸಮುದ್ರವು ದಾರಿಮಾಡಿಕೊಂಡು ನುಗ್ಗಿ ಕೊಲ್ಲಿಗಳನ್ನು ಮಾಡಿರುತ್ತವೆ. ಯಾವದೇಶಗಳಲ್ಲಿ ಹೀಗೆ ಅನೇಕ ಕೊಲ್ಲಿ ಇರುತ್ತವೋ ಅಲ್ಲಿ ಹಡಗುಗಳು ಬಂದು ಇಳಿಯುವುದಕ್ಕೆ ಅನುಕೂಲವಾದ ರೇವ್ರಪಟ್ಟಣಗಳು ಇರುತ್ತವೆ. ಇವುಗಳ ಸಹಾಯದಿಂದ ವ್ಯಾಪಾರಕ್ಕೆ ತುಂಬಾ ಸಹಾಯವಾಗುವುದು. ಸಮುದ್ರಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗುವುದಕ್ಕೆ ಪ್ರತಿಬಂಧಕರೂಪವಾದದ್ದೆಂದು ಅನೇಕರು ಭಾವಿಸುತ್ತಿದ್ದರು. ಈಗ ವ್ಯಾಪಾರಸ್ಥರಿಗೆ ಸಮುದ್ರದಷ್ಟು ಪ್ರಯೋಜನಕಾರಿಯಾದದ್ದು ಯಾವುದೂ ಇಲ್ಲ. ಸಮುದ್ರಗಂ

ತೆಯೇ ದೊಡ್ಡ ನದಿಗಳೂ ಕೂಡಾ ವರ್ತಕರಿಗೆ ತುಂಬಾ ಉಪಕಾರವಾಗಿರುತ್ತದೆ. ಈ ಭೂಮಿಯಲ್ಲಿ ಉಂಟಾಗಿರುವ ನಿಮ್ನೋನ್ನತಿಗಳಿಗೂ ಆಗಾಗ್ಯೆ ಆಗುವ ಪ್ರಳಯಗಳಿಗೂ ಭೂಗರ್ಭದಲ್ಲಿರತಕ್ಕ ಬೆಂಕಿಯೇ ಮುಖ್ಯಕಾರಣ. ಮಣ್ಣು ಕಲ್ಲು ಮೊದಲಾದವುಗಳೆಲ್ಲಾ ಬಲವಾದ ಅಗ್ನಿಯ ಸಂಸರ್ಗವನ್ನು ಹೊಂದಿದರೆ ಶಿಲಾವಸ್ಥೆಯನ್ನು ಬಿಟ್ಟು ಜಲಾವಸ್ಥೆಗೂ ಇನ್ನೂ ಹೆಚ್ಚಾದ ತಾಪದ ಸಂಸರ್ಗವನ್ನು ಹೊಂದಿದರೆ ಅನಿಲಾವಸ್ಥೆಗೂ ಬರುವುದು. ಭೂಗರ್ಭದಲ್ಲಿ ಇರತಕ್ಕ ಅಗ್ನಿಯ ಸಂಸರ್ಗದಿಂದ ಅನೇಕವಿಧವಾದ ಲೋಹಗಳು ಕರಗಿ ಪ್ರಥಮತಃ ಜಲಾವಸ್ಥೆಗೂ ಅನಂತರ ಅನಿಲಾವಸ್ಥೆಗೂ ಒಂದು, ವಿರಳವಾದ ಪ್ರದೇಶಗಳಲ್ಲಿ ಸೇರಿ ಭೂಕಂಪಗಳಿಗೂ ಪರ್ವತಾಗ್ರಗಳಿಂದ ಅಗ್ನಿಜ್ವಾಲೆಯೂ ಲ್ಯಾವಾ ಎಂಬ ಜಲಾವಸ್ಥೆಯಲ್ಲಿರತಕ್ಕ ಲೋಹಗಳ ಪ್ರವಾಹಕ್ಕೂ ಕಾರಣವಾಗುವುದು. ಇದಲ್ಲದೆ ಶಾಖವನ್ನು ಕಳೆದುಕೊಳ್ಳತಕ್ಕ ಪದಾರ್ಥಗಳು ಸಂಕುಚಿತವಾಗುವುವು. ಕೆಂಪಗೆ ಕಾದ ಚಕ್ರದ ಪಟ್ಟಿಯು ಚಕ್ರಕ್ಕೆ ಜೋಡಿಸಲ್ಪಟ್ಟು ನೀರು ಹಾಕಲ್ಪಟ್ಟ ಕೂಡಲೇ ಸಂಕೋಚವಾಗಿ ಚಕ್ರವನ್ನು ಬಿಗಿದು ಹಿಡಿಯುತಕ್ಕದ್ದು ಎಲ್ಲರಿಗೂ ಅನುಭವಸಿದ್ಧವಾಗಿಯೇ ಇರುವುದು. ಭೂಗರ್ಭದಲ್ಲಿರತಕ್ಕ ಶಾಖವು ದಿನೇ ದಿನೇ ಕಡಮೆಯಾಗುವುದರಿಂದ ಬೆಂಕಿಯು ಭಾಗವು ಸಂಕುಚಿತವಾಗಿ ಬೆಂಕಿ ಇಲ್ಲದ ಭಾಗವು ಮಣ್ಣು ಕಲ್ಲುಗಳ ರೂಪವನ್ನು ವಹಿಸಿರುವುದು. ಬೆಂಕಿಯುಳ್ಳ ಭಾಗವು ಸಂಕುಚಿತವಾದಕೂಡಲೇ ಅದನ್ನು ಆವರಿಸಿಕೊಂಡಿರತಕ್ಕ ಕಲ್ಲು ಮಣ್ಣು ಮೊದಲಾದ ಭಾಗಗಳೆಲ್ಲಾ ಒಂದು ಭಾಗ ಮೇಲಕ್ಕೇಳುವುದು; ಒಂದು ಭಾಗ ಕೆಳಕ್ಕೆ ಬೀಳುವುದು; ಈರೀತಿಯಲ್ಲಿ ಆಗುವುದು. ನಿಮ್ನೋನ್ನತಗಳಿಗೂ ಕಣಿವೆ ಮೈದಾನ ಗುಡ್ಡ ಬೆಟ್ಟ ಪರ್ವತ ಮೊದಲಾದವುಗಳ ಉತ್ಪತ್ತಿಗೂ ಆಗಾಗ್ಯೆ ನಡೆಯುವ ಪ್ರಳಯಗಳಿಗೂ ಇದೇ ಮುಖ್ಯಕಾರಣ. ಈ ವಿಧವಾದ ಪ್ರಳಯಗಳು ಭೂಮಿಯಮೇಲೆ ಅನೇಕ ಭಾಗಗಳಲ್ಲಿ ಆಗಾಗ್ಯೆ ನಡಿಯುತ್ತಲಿರುವುವು.

ಜಪಾನ್ ದೇಶದ ಸ್ತ್ರೀ ವಿದ್ಯಾಭ್ಯಾಸ ಕ್ರಮ.

ಈಗ ಐದು ವರುಷಗಳಿಗೆ ಮುಂಚೆ ಜಪಾನ್ ದೇಶದ ಸ್ತ್ರೀವಿದ್ಯಾಭ್ಯಾಸಕ್ಕೋಸ್ಕರ ಟೋಕಿಯೋ ಪಟ್ಟಣದಲ್ಲಿ ಒಂದು ಯೂನಿವರ್ಸಿಟಿಯು ಸ್ಥಾಪಿಸಲ್ಪಟ್ಟಿತು.

ಇಂಥಾ ಯೂನಿವರ್ಸಿಟಿಯು ಸ್ಥಾಪಿಸಲ್ಪಡಕೂಡದೆಂದು ಪ್ರತಿಕ್ಷ್ಣಿಗಳುಂಟಾದರು. ಆದಾಗ್ಯೂ ಈ ಯೂನಿವರ್ಸಿಟಿಯು ಸ್ಥಾಪಿಸಲ್ಪಟ್ಟಿತು. ಈಗ ಈ ಯೂನಿವರ್ಸಿಟಿಯಲ್ಲಿ 700 ಜನ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಲಿರುವರು. ದಿನೇ ದಿನೇ ಇಲ್ಲಿನ ವಿದ್ಯಾರ್ಥಿನಿಯರ ಸಂಖ್ಯೆಯು ಹೆಚ್ಚುತ್ತಲಿರುವುದು. ಕಳೆದ ಯುದ್ಧದಿಂದ ವಿತಂತುಗಳಾದ ಅನೇಕ ಸ್ತ್ರೀಯರು ಸ್ವಶಕ್ತಿಯಿಂದ ಜೀವಿಸಿಕೊಳ್ಳಬೇಕೆಂಬ ಅಭಿಲಾಷೆಯಿಂದ ಇಲ್ಲಿಗೆ ವಿಶೇಷವಾಗಿ ಸೇರುತ್ತಲಿರುವರು. ಈ ಯೂನಿವರ್ಸಿಟಿಯಲ್ಲಿ 67 ಜನ ಪಾತಕರಿರುವರು. ಇವರಲ್ಲಿ ಇಬ್ಬರು ಪಾತಕರು ಇಂಗ್ಲೀಷಿನವರು. ಒಬ್ಬರು ಅಮೆರಿಕಾ ಖಂಡದವರು, ಉಳಿದವರೆಲ್ಲರೂ ಜಪಾನ್ ದೇಶೀಯರು. ಈ ಯೂನಿವರ್ಸಿಟಿಯಲ್ಲಿ ಮಕ್ಕಳಪೋಷಣೆ, ಆರೋಗ್ಯಶಾಸ್ತ್ರ, ರೇಷ್ಮೆಕೆಲಸ, ಕೈಗಾರಿಕೆಗಳು, ಕುಶಲವಿದ್ಯೆಗಳು, ಧರ್ಮಶಾಸ್ತ್ರ, ವ್ಯವಸಾಯ, ವ್ಯಾಪಾರ, ನಡೆನುಡಿಗಳ ಧರ್ಮಗಳು, ವಸ್ತುಶಾಸ್ತ್ರ, ಗೃಹಕೃತ್ಯಶಾಸ್ತ್ರ, ಆಸ್ಯಾಖಂಡದ ಚರಿತ್ರೆ, ಸಂಗೀತ, ಡ್ರಾಯಿಂಗ್, ಚಿತ್ರಕೆಲಸ, ಪಾಕಶಾಸ್ತ್ರ–ಇವೇ ಮೊದಲಾದವುಗಳೆಲ್ಲಾ ಕಲಿಸಲ್ಪಡುತ್ತಲಿರುವುವು. ಇವುಗಳಲ್ಲಿ ಯಾರಿಗೆ ಯಾವುದರಲ್ಲಿ ಪ್ರವೇಶವಿರುವುದೋ ಅವರು ಆ ವಿದ್ಯೆಯನ್ನು ಕಲಿತುಕೊಂಡು ಅದರಿಂದ ಜೀವನ ಮಾಡುವ ಶಕ್ತಿಯನ್ನು ಪಡೆಯುತ್ತಾರೆ. ನಮ್ಮ ದೇಶದಲ್ಲಿಯೂ ಸುಯೋಗ್ಯವಾದ ಜೀವನೋಪಾಯಗಳಿಲ್ಲದ ವಿತಂತುಗಳಲ್ಲಿ ಅನೇಕರು ಬಹಳ ಕ್ಲೇಶಪಡುತ್ತಾ ಇರುವರು. ಲಾಭಕರವಾದ ಕೈಗಾರಿಕೆಗಳ ಕಲಾಶಾಲೆಯೊಂದನ್ನು ಏರ್ಪಡಿಸಿ, ಸ್ವಶಕ್ತಿಯಿಂದ ಜೀವಿಸುವ ಶಕ್ತಿಯನ್ನುಂಟುಮಾಡಿಕೊಟ್ಟರೆ ಬಹಳ ಉಪಕಾರ ಮಾಡಿದಂತಾಗುವುದು.

ಸಂಭಾಷಣೆ.

ಒಬ್ಬನು ಒಂಟಿಯಾಗಿಯೇ ಇದ್ದುಕೊಂಡು ಯೋಚಿಸುವುದಾದರೆ, ಅವನ ಆಲೋಚನೆಗಳು ಅಲ್ಪವಾದುವುಗಳಾಗಿರುವುವು. ಮತ್ತು ಅವಗಳ ಬೆಳವಣಿಗೆಯು ನಿದಾನವಾಗಿ ನಡೆಯುವುದು. ಆದರೆ ಅದೇಮನುಷ್ಯನೇ ನಾಲ್ಕುಮಂದಿಯು ನಡುವೆ ಸೇರಿ, ಅವರ ಪರಿಚಯವನ್ನು ಬಳಸಿಕೊಂಡರೆ ಆಗ ಅವನಲ್ಲಿಯೇ ಹೊಸಹೊಸ

ಊಹೆಗಳು ಸುಲಭವಾಗಿ ಅಂಕುರಿಸುತ್ತ್ಹಬರುವುವು; ಮನಸ್ಸಿಗೆ ಚಟುವಟಿಕೆಯುಂ ಟಾಗುವುದು. ಮತ್ತು ನಾಲಿಗೆಗೆ ಜಾಣ್ಮೆ ಮೆಯ್ಗೂಡುವುದು. ಮಿತ್ರಮಂಡಲಿ .ಯಲ್ಲಿ ಸಲಿಗೆಯಿಂದ ಸಂಭಾಷಿಸುವ ಸುಸಮಯದಲ್ಲಿ ಆಲೋಚನಾ ಶಕ್ತಿಯಿಂದ ಅಪೂರ್ವವಾದ ಮತ್ತು ಅಮೂಲ್ಯವಾದ ವಾಕ್ಯಗಳು ಆವಿರ್ಭವಿಸುವುವು. ಹೃದ ಯಸಂಜರದಲ್ಲಿಯೇ ಸುತ್ತಾಡುತ್ತಾ ಹೊರಬೀಳಲಾರದೆ ತೊಳಲುತ್ತಿದ್ದ ಅನೇಕ ಭಾವನೆಗಳು ಆಗ ನಾಲಿಗೆಯ ತುದಿಗೆ ಬಂದು ನಿಲ್ಲುವುವು. ಆಮೇಲೆ ಪೀಠಿಕೆಯ ಮಾತುಗಳು ಒಂದೊಂದಾಗಿ ಸಾಗುವುವು. ಅವುಗಳು ತಟ್ಟಾಡುತ್ತ ಕೊನೆಯಾಗು ವವರಿಗೆ ಅಂತರಂಗದಲ್ಲಿಯೇ ಕ್ರಮಕ್ರಮವಾಗಿ ವಿಕಾಸವನ್ನು ಹೊಂದಿ, ಪ್ರಭಾಮ ಯವಾಗಿ ಬೆಳಗುವುದಕ್ಕಾರಂಭಿಸಿದ ಆಲೋಚನಾಶಕ್ತಿಯ ಉಜ್ಜ್ವಲವಾದ ಕಿರಣ ಗಳು ಒಂದೊಂದಾಗಿ ಬಹಿರಂಗಕ್ಕೆ ಬರುವುದಕ್ಕೆ ಮೊದಲುಮಾಡುವುವು. ಹೃದಯ ವೆಂಬ ಕರ್ಪೂರಖಂಡಕ್ಕೆ ಬುದ್ಧಿಶಕ್ತಿಯೆಂಬ ತೀಕ್ಷ್ಣತೇಜಸ್ಸಿನ ಸಂಪರ್ಕದಿಂದ ಒಂದುಕಡೆ ಉಂಟಾದ ಆಲೋಚನಾ ಶಕ್ತಿಯೆಂಬ ಪ್ರಭಾವಿಶೇಷವು ಮತ್ತೊಂದು ಹೃದಯವನ್ನು ಅರಿಸುತ್ತಾ ಹೋಗುವಂತೆ ಮಾಡುವ ಸಂಭಾಷಣೆಯು ಜಾಣ್ಮೆ, ಸ್ನೇಹ ಮತ್ತು ಸಲಿಗೆಗಳಿಂದ ಸಂಯುಕ್ತವಾದ ಅನಿರ್ವಚನೀಯವಾದ ಮಹಿಮಾತಿ ಶಯವುಳ್ಳ ಶಕ್ತಿಯಾಗಿದೆ.

ಮನುಷ್ಯನು ಯಾವಾಗಲೂ ನಾಲ್ವರ ಬಳಕೆಯಲ್ಲಿಯೇ ಇರಬೇಕಾದವನು. ಆ ಒಳಕೆಗೆ ಇಂಪಾದ ಸಂಭಾಷಣೆಗಿಂತಲೂ ಹೆಚ್ಚಿನ ಸಾಧಕವಾವುದೂ ಇಲ್ಲ. ಇಂಪಾದ ಸಂಭಾಷಣೆಗವಕಾಶ ದೊರೆಯುತ್ತಲೇ ಪ್ರೇಮಾತಿಶಯದಿಂದ ಹೃದಯವು ಪೂರ್ವಾಧಿಕವಾಗಿ ವಿಸ್ಫುರಿಸುವುದು; ಮನಸ್ಸಿನ ಭಾವನೆಗಳು ಸುಲಕ್ಷಣವಾದ ಶಬ್ದಗಳ ಮೂಲಕ ಮುಂದುವರಿದು ಬರುವುವು. ಉಲ್ಲಾಸಕರವಾದ ನಾಲಿಗೆಯೂ ಭೂತದಯ ಪಶ್ಚಾತ್ತಾಪಾದಿ ಗುಣಗಳೂ ಆ ಶಬ್ದಗಳನ್ನು ಶ್ರಾವ್ಯಗಳಾಗಿ ಮಾಡು ವುವು. ಇಂತಹ ಸಂದರ್ಭಗಳಲ್ಲಿ ಜಾಣ್ಮೆಯು ಆ ಚಿಕ್ಕಚಿಕ್ಕ ಮಾತುಗಳ ಹಿಂದೆ ಅಡಗಿಕೊಂಡಿದ್ದು ಮಾಯಾದೀಪ ಪ್ರದರ್ಶನದಲ್ಲಿ ಪರದೆಯ ಹಿಂದೆ ಇದ್ದು ಸುಂದರ ವಾಗಿ ಕಾಣಿಸಿಕೊಳ್ಳುವ ಚಿತ್ರಪಠದಂತೆ ತನ್ನ ಸೊಗಸನ್ನು ಬೀರುತ್ತಿರುವುದು. ಸಂಭಾಷಣೆಯು ನಮ್ಮ ಭಾವನೆಗಳೆಂಬ ತೋಶಗೃಹದ ಬಾಗಿಲನ್ನು ತೆಗೆಯುತ್ತದೆ. ಮತ್ತು ನಮ್ಮ ಊಹೆಗಳು ಬಗೆಬಗೆಯಾಗಿ ಪ್ರಸರಿಸುವಂತೆ ಮಾಡುತ್ತದೆ. ಅದು ನಮ್ಮನ್ನು ಪ್ರಪಂಚದ ಸರ್ವವ್ಯವಹಾರಗಳ ಕಡೆಗೂ ತಿರಿಗಿಸುತ್ತದೆ. ಮತ್ತು ಆ

ಅನೇಕ ವಿಧವಾದ ವ್ಯವಹಾರಗಳಲ್ಲಿ ಇದುವರಿಗೂ ಯಾರ ವಿಚಾರಪಥಕ್ಕೂ ಸುಳಿಯದೆ ಮಲಿನವಾಗಿ ಅತ್ಯಂತ ಅಧೋಗತಿಯುನ್ನೈದಿದ್ದ ವಿಷಯಗಳನ್ನು ಬೆಳಕಿಗೆ ಹಿಡಿದು ತೋರಿಸುತ್ತದೆ. ಸಂಭಾಷಣೆಯು ಮನುಷ್ಯನಿಗೆ ಚೈತನ್ಯವನ್ನು ಕೊಡುತ್ತದೆ. ಅದು ಒಂದುಸಲ ಬೆಳೆದು ಫಲವನ್ನು ಕೊಟ್ಟು ತಟಸ್ಥವಾದರೂ, ಮತ್ತೆ ಉಜ್ಜೀವಿಸಬಲ್ಲದು; ತನ್ನ ಆಶ್ರಿತರನ್ನು ಅಸಂಖ್ಯಾತವಾದ ಭಾವನೆಗಳಿಂದ ಪುಷ್ಟಿಗೊಳಿಸುವುದು, ಆನಂದಪಡಿಸುವುದು, ಪ್ರೋತ್ಸಾಹಿಸುವುದು ಮತ್ತು ಲಾಭವಂತರನ್ನಾಗಿ ಮಾಡುವುದು. ಅದು ನಮ್ಮ ಕಾರಣಶಕ್ತಿಯನ್ನು ಒಲಿಸುವುದು, ಮತ್ತು ಶೀಲಸ್ವಭಾವಗಳನ್ನು ಸಾಧುವಾಗಿ ಮಾಡುವುದು. ಸಹಜವಾಗಿ ಉಲ್ಲಾಸಕರವಾದ ಮತ್ತು ಸರ್ವಸಮ್ಮತವಾದ ಸಂಭಾಷಣೆಯುಲ್ಲಿ ಎಲ್ಲಾ ಬಗೆಯಾದ ಆಲೋಚನೆಗಳೂ ಎಲ್ಲಾ ಬಗೆಯಾದ ಚಿತ್ತವೃತ್ತಿಗಳೂ ಮತ್ತು ಸಮುಯೋಚಿತವಾಗಿ ಒದಗಿದ ನವೀನವಾದ ಅರ್ಥ ಗಾಂಭೀರ್ಯವುಳ್ಳ ಶಬ್ದಗಳೂ ಸೇರಿಕೊಂಡಿರುವುವು.

ಜ್ಞಾನವು ಅಭಿವೃದ್ಧಿಯಾಗಬೇಕಾದರೂ, ಕಾರ್ಯನಿರ್ವಾಹವಾಗಬೇಕಾದರೂ, ಸಾಮಾನ್ಯ ಜೀವನ ಯಾತ್ರೆಯಲ್ಲಿ ಸುಖಾತಿಶಯವುಂಟಾಗಬೇಕಾದರೂ ಮನುಷ್ಯರ ಪರಸ್ಪರ ವ್ಯವಹಾರಗಳಲ್ಲಿ ಒಬ್ಬರಿಂದೊಬ್ಬರಿಗೆ ಪರಿವರ್ತನೆಯಾಗುವ ಆಲೋಚನೆಗಳಲ್ಲಿನ ಜಾಣ್ಮೆ, ಯಥಾರ್ಥತ್ವ, ನಿಪುಣತೆಗಳಿಗಿಂತಲೂ ಬೇರೆ ಯಾವುದೂ ಕಾರ್ಯಕಾರಿಯಲ್ಲ. ಆ ಆಲೋಚನೆಗಳ ಪರಿವರ್ತನೆಯೇ ಇಲ್ಲಿ ಸಂಭಾಷಣೆಯೆಂದು ವ್ಯವಹರಿಸಲ್ಪಡುವುದು. ಆ ಸಂಭಾಷಣೆಗತ್ಯವಶ್ಯಕವಾದ ಕೆಲವು ನಿಯಮಗಳನ್ನು ಇಲ್ಲಿ ಆರಿಸಿ ಸೂಚಿಸುವುದೇ ಈ ಲೇಖನದ ಉದ್ದೇಶ.

ನಿಯಮಗಳು ಬಳಕೆಗೆ ಬರದೆ ಕೇವಲ ಗ್ರಂಥಸ್ಥವಾಗಿರುವಾಗಲೆಲ್ಲಾ ಅವು ಸಂಭಾಷಣೆಗೆ ಪ್ರತಿಕೂಲಗಳೇ ಹೊರತು ಸಾಧಕಗಳಲ್ಲ. ಸಂಭಾಷಣೆಯನ್ನು ಹೇಗೆ ನಡೆಸಬೇಕೆಂಬಂಶವು ಇತ್ಯರ್ಥವಾಗಿ ನಮ್ಮ ವಿಚಾರಪಥದಿಂದ ಪಾರಾಗುವವರಿಗೂ ನಮ್ಮ ಸಂಭಾಷಣೆಯು ಚೆನ್ನಾಗಿ ಆಗಲಾರದು.

ಯಾವುದಾದರೊಂದು ಕುಶಲ ವಿದ್ಯೆಯನ್ನು ಕಲಿಯಬೇಕಾದರೆ ಮೊದಲು ಅದನ್ನು ಕಲಿತುಕೊಳ್ಳುವುದಕ್ಕೆ ಅಂತಹ ಕಾರ್ಯವನ್ನು ಮಾಡುತ್ತಿದ್ದರೆ ಅದನ್ನು ಚೆನ್ನಾಗಿ ಗಮನಿಸುವೆವು; ಇತರರು ಮಾಡಿದುದರಲ್ಲಿ ಉತ್ತಮವಾದ ಭಾಗಗಳನ್ನು ನೋಡಿ ಅನುಸರಿಸುವೆವು. ಮತ್ತು ಆ ಕಾರ್ಯಭಾಗದ ಉದ್ದೇಶಗಳನ್ನು ಸಫಲಗೊಳಿಸುವುದಕ್ಕಾಗಿ ಕಾಲಕ್ರಮವಾಗಿ ಮನಃಪೂರ್ವಕವಾದ ಪ್ರಯತ್ನ ಮಾಡುವೆವು.

ಹೀಗೆ ಅನೇಕವೇಳೆ ಅನುಕರಿಸಿದಮೇಲೆ ಆ ವಿದ್ಯೆಯು ನಮಗೆ ಚೆನ್ನಾಗಿ ವಾಡಿಕೆಯೂ ಆಗುವುದು ಸುಲಭವೂ ಆಗುವುದು. ಮಾನಸಿಕ ಶಕ್ತಿಯಾಗಲಿ ಕಾಯಿಕ ಶಕ್ತಿಯಾಗಲಿ ನೇರ್ಪಡುವುದು ಅಭ್ಯಾಸದಿಂದಲ್ಲದೆ ಬೇರೆ ಅಲ್ಲ. ಕೇವಲ ನಿಯಮಗಳನ್ನು ಕೇಳಿದ ಮಾತ್ರದಿಂದಲೇ ಆಗಲಿ ಅಥವಾ ಅವುಗಳನ್ನು ಕಂತಪಾಠ ಮಾಡಿದುದರಿಂದಲೇ ಆಗಲಿ ಯಾರೂ ಕೃತಕೃತ್ಯರಾಗಿಲ್ಲ. ನಿಯಮಗಳನ್ನು ಜ್ಞಾಪಿಸಿಕೊಳ್ಳಬೇಕಾದ ಸಂಭವವಿಲ್ಲದೆ ಕಾರ್ಯನಿರ್ವಾಹ ಮಾಡುವಿಕೆಯು ಅಭ್ಯಾಸದಿಂದ ಮಾತ್ರ ಒದಬೇಕಾಗಿದೆ. ಆದುದರಿಂದ ಈಗ ಸೂಚಿಸುವ ನಿಯಮಗಳು ಕೇವಲ ಮಾರ್ಗದರ್ಶಕಗಳು.

ಸಂಭಾಷಕನೂ ಸಂಭಾಷ್ಯನೂ ಸಮಭಾಗಿಗಳಾಗಿ ತಮ್ಮತಮ್ಮ ಬುದ್ಧಿಶಕ್ತಿಗಳನ್ನು ಮುಂದುಪರಿಸುತ್ತಾ ತಡವಿಲ್ಲದೆ ಸರ್ವಸಮ್ಮತವಾಗಿ ಆಲೋಚನೆಗಳನ್ನು ಪರಿವರ್ತನೆ ಮಾಡುವುದೇ ಸಂಭಾಷಣೆ. ಸಂಭಾಷಣೆಯು ನಿಯಮಗಳು ರೀತಿ ಮತ್ತು ವಿಷಯ ಎಂಬೆರಡು ಪಂಗಡಗಳಾಗಿರುವುವು.

ರೀತಿಯ ಮುಖ್ಯ ನಿಯಮಗಳೇನೆಂದರೆ—(1) ಮಾತಾಡುವಿಕೆ. (2) ಪರಿವರ್ತನೀಯವಾಗುವುದು. (3) ಉಭಯ ಶ್ರದ್ಧೆಗೂ ಪಾತ್ರವಾಗುವುದು. (4) ಅನೇಕ ಬಗೆ.

ವಿಷಯದ ಮುಖ್ಯನಿಯಮಗಳೇನೆಂದರೆ— (1) ಪ್ರೋತ್ಸಾಹಕರವಾಗಿರುವುದು. (2) ಯುಕ್ತಿಯುಕ್ತವಾಗಿರುವುದು.

ರೀತಿಯ ವಿಷಯವಾಗಿ ಹೇಳಿರುವ ನಿಯಮಗಳು ಇಲ್ಲಿ ನಿಯಮಿಸಲ್ಪಡುವುವು.

(1) ಮಾತಾಡುವಿಕೆ— ತಮ್ಮತಮ್ಮ ಆಲೋಚನೆಗಳನ್ನು ಹೇಳುವುದಕ್ಕೆ ಮಾತುಗಾರಿಕೆಯೇ ಯಾವಾಗಲೂ ಸುಲಭಸಾಧ್ಯವಾಗಿ ಸಿದ್ಧವಾಗುವ ಸಾಧನ. ಏಕೆಂದರೆ ಅದು ಬಹಳ ಹಿತಕರವಾಗಿರುವುದು, ಆಕರ್ಷಿಸುವುದು ಮತ್ತು ಆನಂದಗೊಳಿಸುವುದು. ಪರಸ್ಪರ ವಿಶ್ವಾಸದಿಂದ ಕೂಡಿದ ಮಾತುಗಾರಿಕೆಗೆ ಸಂಭಾಷಣೆಯೆಂದು ಹೆಸರು. ನಾವು ಆಡುವುದೆಲ್ಲಾ ಸಂಕ್ಷೇಪವಾಗಿರಬೇಕು, ಶುದ್ಧವಾಗಿರಬೇಕು, ಸರಳವಾಗಿರಬೇಕು. ಮತ್ತು ನಾವು ಆಡಬೇಕಾದ ಸಂದರ್ಭದಲ್ಲಿ ಮಾತ್ರ ಆಡಿದುದಾಗಬೇಕು.

(2) ಪರಿವರ್ತನೀಯವಾಗಿರುವುದು.— ಸಂಭಾಷಣೆಯಲ್ಲಿರುವ ಒಂದು ಅದ್ಭುತವಾದ ಮಹಿಮೆಯೇನೆಂದರೆ— ಅದು ಸರ್ವತ್ರ ಪ್ರಸರಿಸುವುದು. ಒಂದು ಸಂಘ

ದಲ್ಲಿ ಒಬ್ಬ ಸಂಭಾಷಕನಿಂದ ಹೊರಟ ಆಲೋಚನೆಯು ಏಕಕಾಲದಲ್ಲಿ ಏಕಪ್ರಕಾರವಾಗಿ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಪ್ರವೇಶಿಸುವುದು, ಪ್ರತಿಯೊಬ್ಬರ ಚಿತ್ತವೃತ್ತಿ ಮತ್ತು ಗುಣವಿಶೇಷಗಳನ್ನು ಅನುವರ್ತಿಸುವುದು; ಅಲ್ಲದೆ ಕಾಲುಹಳ್ಳದೊಳಗೆ ಬಿದ್ದ ಕಾಡು ಕಲ್ಲುಹರಳು ಒಳ್ಳೆಯ ಮೂಟೆವಾಗಿ ನಯವಾಗಿ ಘರ್ಷಣ ಪ್ರತಿ ಘರ್ಷಣಗಳ ದೆಸೆಯಿಂದ ಅಂದವನ್ನು ಹೊಂದಿ ಕಂಗೊಳಿಸುವಂತೆ ಪ್ರತಿಯೊಬ್ಬರ ಬಗೆಬಗೆಯಾದ ವಿಚಾರಶಕ್ತಿಯ ಸೆಳತಕ್ಕೆ ಸಿಕ್ಕಿದ್ದ ಆಲೋಚನೆಯು ಮತ್ತೆ ರೂಪಾಂತರಗಳಿಂದ ಫಲಿಸುವುದು.

(3) ಉಭಯರ ಶ್ರದ್ಧೆಗೆ ಪಾತ್ರವಾಗುವುದು.— ಒಂದು ಆಲೋಚನೆಯು ಸ್ವಾಭಾವಿಕವಾಗಿ ಎಷ್ಟೇ ಬೆಲೆಯುಳ್ಳದಾದರೂ ಅದು ಸಂಭಾಷಕನಲ್ಲಿರುವಂತೆ ಸಂಭಾಷ್ಯರಲ್ಲಿಯೂ ಶ್ರದ್ಧೆಯನ್ನೂ ವಿಚಾರವನ್ನೂ ಹುಟ್ಟಿಸುವುದಾಗಿದ್ದ ಹೊರತು ಆ ಸಂಭಾಷಣೆಯು ಬೆಳೆಯಲಾರದು, ಬುದ್ಧಿಶಕ್ತಿಗೆ ಉತ್ಸಾಹವನ್ನು ಕೊಡಲಾರದು. ಆ ಸಂಗತಿಯು ಆ ಸಂಘಕ್ಕೆ ಅನುಚಿತವಾಗಿರುವುದು. ಕೇವಲ ಅಗತ್ಯವಾಗಿದ್ದ ಹೊರತು ಅದರ ವಿಷಯದಲ್ಲಿ ಇತರರನ್ನು ನಿರ್ಬಂಧಗೊಳಿಸುವುದರಲ್ಲಿ ಪ್ರಯೋಜನವಿಲ್ಲ. ನಮ್ಮ ಅಭಿಪ್ರಾಯಗಳನ್ನು ಹೇಗೆ ನಮ್ಮ ಸ್ನೇಹಿತರಿಗೆ ತಿಳಿಸುವೆವೊ ಹಾಗೆಯೇ ಅವರ ಅಭಿಪ್ರಾಯಗಳನ್ನು ನಾವು ಆದರದಿಂದ ಗಮನಿಸಬೇಕು.

(4) ಅನೇಕ ಬಗೆ.—ಒಂದೇ ಸಂಗತಿಯನ್ನು ಬಹಳ ಹೊತ್ತು ಚರ್ಚಿಸುವುದು ಕೇವಲ ಬೇಸರಕ್ಕೆ ಮಾರ್ಗವಾಗುವುದು. ಅದು ಪ್ರತಿಯೊಬ್ಬರ ಮನಸ್ಸಿಗೂ ಏಕಪ್ರಕಾರವಾಗಿ ವಿಚಾರಾಸ್ಪದವಾಗಲಾರದು. ಆದುದರಿಂದ ನಾನಾ ವಿಧವಾದ ಊಹೆಗಳಿಗೂ ಆಲೋಚನೆಗಳಿಗೂ ಅವಕಾಶವಿರುವುದಿಲ್ಲ.

ವಿಷಯ—ಎಂದರೆ, ಯಾವ ಸಂಗತಿಯಮೇಲೆ ನಮ್ಮ ಆಲೋಚನೆಗಳು ನಡೆಯುವುವೋ ಅದು. ಅದಕ್ಕಿರಬೇಕಾದ ಗುಣಗಳು ಇಲ್ಲಿ ವಿವರಿಸಲ್ಪಡುವುವು.

(1) ಪ್ರೋತ್ಸಾಹಕರವಾಗಿರುವುದು— ಯಾವ ಸಂಗತಿಯು ಊಹಿಸುವ ಕುತೂಹಲವನ್ನು ಹುಟ್ಟಿಸುವುವೊ ಮತ್ತು ಬುದ್ಧಿಶಕ್ತಿಯ ವೇಗವನ್ನು ಹೆಚ್ಚಿಸುವುದೊ ಅಂತಹ ಸಂಗತಿ ಮಾತ್ರ ಸಂಭಾಷಣೆಯಲ್ಲಿ ಉಲ್ಲಾಸಕಾರಿಯಾಗಿರುವುದು. ಆದುದರಿಂದ ಸಾಮಾನ್ಯ ಸಮಾಜದಲ್ಲಿ ಹೆಚ್ಚುತೊಂದರೆಗವಕಾಶವಿಲ್ಲದೆ ಮನಸ್ಸಿಗೆ ಚೈತನ್ಯವನ್ನು ಕೊಡುವುದಾಗಿಯೂ ಆಲೋಚನಾ ಶಕ್ತಿಯನ್ನು ಕಾಲೋಚಿತವಾಗಿ ಪ್ರಸರಿಸುವುದಾಗಿಯೂ ಇರುವ ಸಂಗತಿಯೇ ಸಂಭಾಷಣೆಯಲ್ಲಿರಬೇಕು.

(2) ಯುಕ್ತಿಯುಕ್ತವಾದುದು.—ಸಂಭಾಷಣೆಯು ಮನಸ್ಸಿಗೆ ಮಿತಿಮೀರಿದ ಪ್ರಯಾಸಕರವಾಗಿರಬಾರದಾದರೂ ನಿಸ್ಸಾರವಾಗಿಯೂ ಕೇವಲ ಸಾಧಾರಣವಾಗಿಯೂ ಹರಟೆಯಾಗಿಯೂ ಇರಬಾರದು. ಯುಕ್ತಿಯುಕ್ತವಾಗಿರದ ಕೇವಲ ಶಬ್ದಾಡಂಬರವು ಬಹು ಕ್ಷುಲ್ಲಕವಾದುದು. ಸ್ವಾರಸ್ಯವಿಲ್ಲದ ಮಾತನ್ನೂ ಜನಜನಿತವಾದ ಹಾಸ್ಯವಾಕ್ಯನ್ನೂ ಕೇಳುವಾಗ ತಾಳ್ಮೆಯುಗುಣಕ್ಕೊಂದವಕಾಶವೇ ಹೊರತು ಬುದ್ಧಿಶಕ್ತಿಗಲ್ಲ.

ಸಭೆಯಲ್ಲಿ ನಾನೂ ಸಂಭಾಷಕನಾಗುವೆನೆಂದು ಸುಮ್ಮನೆ ಮಾತಾಡುತ್ತಾಹೋದರೆ ಮಾತ್ರ ಆಗದು. ಅದು ವಿವೇಕವರ್ಧಕವಾಗಿಯೂ ಇರುವಂತೆ ಮಾಡುವುದು ನಮ್ಮ ಕರ್ತವ್ಯವೆಂದು ತಿಳಿಯಬೇಕು. ಮಾನಸಿಕ ಶಕ್ತಿಯು ಕ್ರಮಕ್ರಮವಾಗಿ ಹೆಚ್ಚುತ್ತಹೋಗುವಂತೆ ಮಾಡಬೇಕು. ಮತ್ತು ಪ್ರತಿಯೊಂದು ಮಾತೂ ಕೇವಲ ಬುದ್ಧಿಶಕ್ತಿಯ ವೇಗವನ್ನು ಹೆಚ್ಚಿಸುವ್ರದಾಗಬೇಕು. ಸ್ವೇಚ್ಛಾನಿರ್ಗತಗಳಾದ ಅಭಿಪ್ರಾಯಗಳೂ ಮತ್ತು ಮೂಢಮಂಡಲಿಯಲ್ಲಿ ತುಂಬಿ ತುಳುಕುತ್ತಿರುವ ಬಣಮಾತುಗಳೂ ದಿನವೆಲ್ಲಾ ಮನುಷ್ಯರನ್ನು ಆಕರ್ಷಿಸುತ್ತಿರುವ್ರವು. ಆ ಕಾಲದಲ್ಲೆಲ್ಲಾ ಸಂಭಾಷಣೆಯನ್ನು ಸರಿಯಾಗಿ ಉಪಯೋಗ ಮಾಡಿದರೆ ನಮ್ಮ ತಿಳುವಳಿಕೆಯು ಏಳಿಗೆಯಾಗುವ್ರದಷ್ಟೇ ಅಲ್ಲ, ನಮ್ಮ ಮನಸ್ಸು ಉತ್ತೇಜಿತವಾಗುವುದು. ನಮ್ಮ ಆಲೋಚನೆಗಳು ನಮ್ಮ ಕೈಲಾದಮಟ್ಟಿಗೂ ರಮ್ಯವಾಗಿರಬೇಕು, ಕೃಪಾಮಯವಾಗಿರಬೇಕು, ವಿನಯವಾಗಿರಬೇಕು, ಮೃದುವಾಗಿರಬೇಕು, ನಿಷ್ಕಪಟವಾಗಿರಬೇಕು. ಮತ್ತು ಮಾಧುರ್ಯದ ಇಂಪನ್ನೂ ಜಾಣ್ಮೆಯ ಸೊಂಪನ್ನೂ ಬೀರುತ್ತಿರಬೇಕು.

ಎಚ್. ಚಿದಂಬರಯ್ಯ,
ಹೆಡ್ಮಾಸ್ಟರ್ ಎ. ವಿ. ಸ್ಕೂಲ್, ಕಡೂರು.

ಮನುಷ್ಯಜಾತಿ.

ತುರುಕರು.

ತುರುಕರು ಮುಸಲ್ಮಾನ ಮತವನ್ನವಲಂಬಿಸಿರುವರು. ನಿರಂಕುಶ ಪ್ರಭುವಾದ ಸುಲ್ತಾನನ ಅಧಿಕಾರಕ್ಕೆ ಒಳಪಟ್ಟಿರುವರು. ಇವರು ಇತರ ಯುರೋಪೀಯರ ಆ

ಚರಣೆಗಳನ್ನನುಸರಿಸಲು ಒಪ್ಪುವದಿಲ್ಲ. ಸರಕಾರಿ ಉದ್ಯೋಗಗಳನ್ನು ಹೊಂದಲು ತುಂಬಾ ಅಪೇಕ್ಷೆಯುಳ್ಳವರಾಗಿರುವರು. ಅದನ್ನು ಪಡೆಯಲು ಬಹು ಪ್ರಯತ್ನ ಸಾಹಸಗಳನ್ನು ಮಾಡುವರು. ಅಲ್ಪನಾದವನೂ ಕೂಡ ಕಾಲಾನುಕಾಲದಲ್ಲಿ ವ್ಯಹಾ ವಜೀರನಾಗುವನು. ಗುಲಾಮನ ಮಗನೂ ಕೂಡ ಸುಲ್ತಾ ಪದವಿಗೆ ಬರಬಹುದು. ಸುಲ್ತಾನನಿಗೆ ವಜೀರರೆಂಬ ಮಂತ್ರಿಗಳು ಅನೇಕರಿರುವರು. ಇವರ ಸಹಾಯದಿಂದ ಅತನು ರಾಜ್ಯಭಾರವನ್ನು ಮಾಡುವನು. ಈ ಮಂತ್ರಿಗಳಿಲ್ಲದೆ ದಿವಾ ಮತ್ತು ಷೇಕ್‌ಯುಲ್ ಇಸ್ಲಾಮ್, ಎಂಬ ಮಂತ್ರಾಲೋಚನ ಸಭೆಯವರು ಕುರಾ ವ್ಯಾಖ್ಯಾನಕಾರರಾದ ಯಲಿಮರೆಂಬುವರೂ ಸಹ ರಾಜ್ಯದ ಆಡಳಿತೆಯಲ್ಲಿ ಸುಲ್ತಾನನಿಗೆ ಆಲೋಚನೆಯನ್ನು ಹೇಳುವರು. ತುರಕಿ ರಾಜ್ಯವು ಅನೇಕ ನಾಡುಗಳಾಗಿ ವಿಭಾಗಿಸಲ್ಪಟ್ಟಿರುವುದು. ಪ್ರತಿನಾಡಿಗೂ ವಿಲಾಯತ್ ಎಂದು ಹೆಸರು.

ಪ್ರತಿ ವಿಲಾಯತಿಗೂ ವಲಿ ಎಂಬ ಮುಖ್ಯಾಧಿಕಾರಿ ಇರುವನು. ಸುಲ್ತಾನನು ತನ್ನ ಇಷ್ಟಬಂದವರನ್ನು ವಲಿ ಪದವಿಗೆ ನೇಮಿಸಿಕೊಳ್ಳುವನು.

ತುರುಕರು ಬಹು ಶೂರರು, ಮತಾಭಿಮಾನಿಗಳು. ತುರುಕಿ ಸೈನಿಕರು ಬಹು ಧೈರ್ಯಶಾಲಿಗಳು, ಧೃಡಮನಸ್ಕರು, ಯುದ್ಧಕಾರ್ಯದಲ್ಲಿ ನಿಪುಣರು, ಪರಾಕ್ರಮಿಗಳು. ಆದರೆ ಈಗಿನವರು ಪೂರ್ವದ ತುರುಕರಷ್ಟು ಶ್ಲಾಘ್ಯಗುಣವುಳ್ಳವರಾಗಿಲ್ಲ. ತುರುಕಿಯಲ್ಲಿ ಗುಲಾಮರ ಸಂಖ್ಯೆಯು ಹೆಚ್ಚಾಗಿರುವುದರಿಂದ ಆ ದೇಶದ ಏಳಿಗೆಗೆ ಕುಂದಕ ವುಂಟಾಗಿರುವುದು. ತುರುಕರು ಯುರೋಪೀಯ ಹೆಂಗಸರನ್ನೂ ಮದವೆ ಮಾಡಿಕೊಳ್ಳುವುದರಿಂದ, ಅಲ್ಲಿಯ ಪ್ರಜೆಗಳು ಇಟಲಿ ಮತ್ತು ಸ್ಪೈನ್ ದೇಶಗಳ ನಿವಾಸಿಗಳಷ್ಟು ಬೆಳ್ಳಗಿರುವರು. ತುರುಕರು ಮರ್ಯಾದೆವಂತರು, ಸ್ನೇಹಪರರು, ಅತಿಥಿಸತ್ಕಾರವನ್ನು ಚೆನ್ನಾಗಿ ಮಾಡುವರು. ಆದರೆ ಮೈಗಳ್ಳರು. ಪ್ರಯಾಸಪಟ್ಟು ಕೆಲಸ ಮಾಡುವವರಲ್ಲ. ಬಡವರು ಒಬ್ಬಳೇ ಹೆಂಗಸನ್ನು ಮದಿವೆಯಾಗುವರು. ದೊಡ್ಡಮನುಷ್ಯರು ಅನೇಕ ಸ್ತ್ರೀಯರನ್ನು ವಿವಾಹ ಮಾಡಿಕೊಳ್ಳುವರು. ಅವರನ್ನು (ಜನಾನಾದಲ್ಲಿ) ಘೋಷಾದಲ್ಲಿಡುವರು. ಜನಾನಾ ಸ್ತ್ರೀಯರಿಗೋಸ್ಕರ ಬಹು ಖರ್ಚಾಗುವುದಲ್ಲದೆ, ಸವತಿಯರು ಆಗಾಗ ಜಗಳವಾಡುವುದರಿಂದ, ಗಂಡನಿಗೆ ಸುಖವೂ ಇಲ್ಲದೆಹೋಗುವುದು ತುರುಕರು ಮದ್ಯಪಾನ ಮಾಡುವುದಿಲ್ಲ. ಆದರೆ ಗಂಡಸರೂ ಹೆಂಗಸರೂ ಕೂಡ ಹೊಗೆಬತ್ತಿಯನ್ನು ಬಹಳವಾಗಿ ಸೇದುವರು.

ತುರುಕರಲ್ಲಿ ವಿದ್ಯಾಪ್ರಾಚುರ್ಯವು ಕಡಿಮೆ. ದೊಡ್ಡಮನುಷ್ಯರು ಕುರಾನನ್ನು

ವ್ಯಾಸಂಗ ಮಾಡುವರು. ಬಡವರು ವಿದ್ಯಾಹೀನರಾಗಿರುವರು. ಸರಕಾರಿ ದೊಡ್ಡ ಉದ್ಯೋಗಸ್ಥರು ಪಾಶ್ಚಾತ್ಯರ ಶಾಸ್ತ್ರಗಳನ್ನು ಹೆಚ್ಚಾಗಿ ವ್ಯಾಸಂಗ ಮಾಡುವರು. ಕೈಗಾರಿಕೆಯಲ್ಲಿಯೂ ಭೂ ವ್ಯವಸಾಯದಲ್ಲಿಯೂ ತುರುಕಿಯ ಪ್ರಜೆಗಳು ನಿಪುಣರಾಗಿಲ್ಲ. ಆ ದೇಶದಲ್ಲಿ ತುರುಕರ ವ್ಯಾಬಲ್ಯವು ಕಡಿಮೆಯಾಗುತ್ತಲೂ ಗ್ರೀಕ್ ಅರ್ಮಾನಿಯನ್ ಮತ್ತು ಜ್ಯೂಜನಗಳ ಪ್ರಾಬಲ್ಯವು ಹೆಚ್ಚುತ್ತಲೂ ಬರುತ್ತಿರುವುದು. ತುರುಕಿಯ ವಿದ್ಯಮಾನ ಸ್ಥಿತಿಯನ್ನು ನೋಡಿದರೆ, ಅದು ಕ್ಷೀಣಗತಿಗೆ ಬರುವಂತೆ ತೋರುವುದು. ಈಗಿನ ತುರುಕರು ಮೊದಲಿನವರಷ್ಟು ಶೂರರಾಗಿಯೂ ಮತಾಭಿಮಾನಿಗಳಾಗಿಯೂ ಇಲ್ಲ. ರಾಜ್ಯಾಧಿಕಾರಿಗಳು ದುರ್ಬಲರಾಗಿ ತಮ್ಮತಮ್ಮ ಕೆಲಸಗಳನ್ನು ಸರಿಯಾಗಿ ಮಾಡದೆ ಇರುವರು. ತುಂಟರಿಗೆ ತಕ್ಕ ಶಿಕ್ಷೆಯಾಗುವುದಿಲ್ಲ. ಕೊಲೆ ಮಾಡಿದವರಿಗೆ ಮರಣದಂಡನೆಗೆ ಬದಲಾಗಿ ೧೦ ಅಥವಾ ೧೫ ವರ್ಷಗಳ ಸಜವು ವಿಧಿಸಲ್ಪಡುವುದು. ಇಂಥಾ ಕೈದಿಗಳಲ್ಲಿ ಅನೇಕರು ಆಗಾಗ ಕಾರಾಗೃಹದಿಂದ ತಪ್ಪಿಸಿಕೊಂಡು ಓಡಿಹೋಗುವರು. ಕಳ್ಳರಿಗೂ ಸರಿಯಾದ ಶಿಕ್ಷೆ ಇಲ್ಲ. ಕಡಿಮೆ ಸೇರುಗಳನ್ನೂ ತೂಕದ ಕಲ್ಲುಗಳನ್ನೂ ಇಟ್ಟುಕೊಂಡು ಮಾರುವವರಿಗೂ ತಕ್ಕ ದಂಡನೆಯಾಗುವುದಿಲ್ಲ. ತುರುಕಿಯ ಸುತ್ತಮುತ್ತಲೂ ಪರರಾಜ್ಯದ ಶತ್ರುಗಳು ಸಮಯವನ್ನು ನಿರೀಕ್ಷಿಸುತ್ತಾ ಕಾದುಕೊಂಡಿರುವರು. ಇವೇ ಮೊದಲಾದ ಕಾರಣಗಳಿಂದ ಆ ದೇಶವು ಕಾಲಕ್ರಮದಲ್ಲಿ ಹೀನಸ್ಥಿತಿಗೆ ಬರಬಹುದೆಂದು ತೋರುತ್ತದೆ.

ಜಿಪ್ಸಿಗಳು.

ಈ ಜನರು ಯೂರೋಪ್ ಖಂಡದ ಎಲ್ಲಾ ಭಾಗಗಳಲ್ಲಿಯೂ ವ್ಯಾಪಿಸಿರುವರು. ಏಷ್ಯದ ಅನೇಕ ಭಾಗಗಳಲ್ಲಿಯೂ ಹರಡಿಕೊಂಡಿರುವರು. ಕೆಲವರು ಅಮೇರಿಕ ಆಸ್ಟ್ರೇಲಿಯ ಖಂಡಗಳಿಗೂ ಹೋಗಿರುವರು. ಇವರು ಒಂದು ಊರಿನಲ್ಲಿಯೂ ಸ್ಥಿರವಾಗಿ ನಿಲ್ಲದೆ ದೇಶದೇಶಗಳನ್ನು ಸುತ್ತುತ್ತಿರುವರು. ಬಹು ಜಗಳಗಂಟರಾಗಿಯೂ ಅಸಭ್ಯರಾಗಿಯೂ ತುಂಟರಾಗಿಯೂ ಇರುವರು. ಹಸ್ತ ಮುಂತಾದುವನ್ನು ನೋಡಿ ಶುಭಾಶುಭಗಳನ್ನು ಹೇಳುವುದು, ಕಳಾಯಿ ಮಾಡುವುದು, ಕುರ್ಚಿಯನ್ನು ರಿಪೇರಿ ಮಾಡುವುದು, ಕೋಳಿಗಳನ್ನು ಕದಿಯುವುದು—ಇವೇ ಇವರ ಮುಖ್ಯಕಸಬುಗಳಾಗಿರುವುವು. ಇವರು ಊರಹೊರಗೆ ಇಳದುಕೊಳ್ಳುವರೇ ಹೊರತು ಊರೊಳಗೆ ವಾಸಮಾಡುವುದಿಲ್ಲ. ಇವರ ಹೂಡಲೂ ಮೈಬಣ್ಣವೂ

ಕವ್ವು. ಕಣ್ಣುಗಳು ದ್ರೋಹಸೂಚಕಗಳಾಗಿರುವವು. ಮೂಗು ಗಿಣಿ-ಮೂಗಿನಂತಿರುವುದು. ದವಡೇ ಎಲುಬುಗಳೂ ಹುಬ್ಬುಗಳೂ ದಪ್ಪವಾಗಿರುವವು. ಇಂಥಾ ಲಕ್ಷಣವುಳ್ಳವರು ಪಾಶ್ಚಾತ್ಯರಲ್ಲ. ಇವರು ಪೂರ್ವ ದೇಶಿಯರು. ೧೪ನೆಯ ಶತಮಾನದಲ್ಲಿ ಈಜಿಪ್ಟಿನಿಂದ ಇವರು ಯುರೋಪಿಗೆ ಬಂದರೆಂದು ಗೊತ್ತಾಗಿದೆ. ಆದುದರಿಂದ ಇವರಿಗೆ ಜಿಪ್ಸಿಗಳೆಂದು ಹೆಸರು ಬಂತು. ೧೫ನೆಯ ಶತಮಾನದೊಳಗಾಗಿ ಈ ಜನರು ಯುರೋಪ ಖಂಡದಲ್ಲೆಲ್ಲಾ ಹರಡಿಕೊಂಡರು. ತಾವು ಬಹು ಭಾಗ್ಯವಂತರಾಗಿದ್ದೆವೆಂದೂ ಶತ್ರುಗಳ ಬಾಧೆಯಿಂದ ದೇಶಭ್ರಷ್ಟರಾಗಿ ಯುರೋಪಿಗೆ ಬಂದೆನೆಂದೂ ಮುಂತಾಗಿ ಕಥೆಗಳನ್ನು ಹೇಳಿಕೊಳ್ಳುತ್ತಿದ್ದುದರಿಂದ, ಯುರೋಪೀಯರಾಜರು ಇವರನ್ನು ಬಹು ಮರ್ಯಾದೆಯಾಗಿ ಕಂಡು ಆದರಿಸುತ್ತಿದ್ದುದಲ್ಲದೆ, ಇವರಿಗೆ ಜಿರುದುಗಳನ್ನೂ ಕೊಟ್ಟು ಸನ್ಮಾನಿಸುತ್ತಿದ್ದರು.

ಆದರೆ ಜಿಪ್ಸಿಗಳು ಕ್ರಮೇಣ ಲೂಟಿಗಾರರೂ, ಕೇಡುಗಾರರೂ, ಪೋಸಗಾರರೂ ಆಗಿ ಪರಿಣಮಿಸಿದರು. ಆದುದರಿಂದ ಇವರು ಯುರೋಪಿನ ಅನೇಕ ರಾಜ್ಯಗಳಿಂದ ಹೊರಡಿಸಲ್ಪಟ್ಟರು, ಇಲ್ಲವೆ ಕಠಿಣವಾದ ದಂಡನೆಗೆ ಗುರಿಮಾಡಲ್ಪಟ್ಟರು. ಯುರೋಪಿಯರು ಇವರನ್ನು ತಿರಸ್ಕರಿಸಿ ಚಿತ್ರಹಿಂಸೆಯನ್ನು ಮಾಡಲಾರಂಭಿಸಿದರು. ಜಿಪ್ಸಿಗಳನ್ನು ಹಿಂಸಿಸಿದ ಯುರೋಪೀಯರಿಗೆ ಯಾವ ಶಿಕ್ಷೆಯೂ ಇರಲಿಲ್ಲ. ಶೂನ್ಯಕಾರರೆಂದು ಅನೇಕ ಜಿಪ್ಸಿಗಳನ್ನು ಯುರೋಪಿಯರು ಸುಟ್ಟು ಬೂದಿ ಮಾಡಿದರು. ಕೆಲವರನ್ನು ಗಲ್ಲಿಗೆ ಹಾಕಿದರು, ಬೇರೆಯವರನ್ನು ನೀರಿನಲ್ಲಿ ಮುಣುಗಿಸಿ ನಾಯಿಸಿದರು. ಜಿಪ್ಸಿಗಳ ಜತೆಯಲ್ಲಿ ಯಾರಾದರು ಯುರೋಪಿಯರಿದ್ದರೆ, ಅಂಥವರು ಅಪರಾಧಿಗಳಾಗಿ ಎಣಿಸಲ್ಪಡುತ್ತಿದ್ದರು. ಹೀಗೆ ಹಿಂಸಿಸಲ್ಪಟ್ಟ ಜಿಪ್ಸಿಗಳು ಯುರೋಪೀಯರ ಮೇಲೆ ಹಗೆ ತೀರಿಸಿಕೊಳ್ಳದೆ ಸುಮ್ಮನಿರಲಿಲ್ಲ. ಅವರು ಯುರೋಪೀಯರ ಮಕ್ಕಳನ್ನು ಕಳವು ಮಾಡಿಕೊಂಡು ಹೋಗುತ್ತಿದ್ದರು. ಯುರೋಪೀಯರ ಹಿಂಸೆಯು ಬಹಳವಾಗಿದ್ದಾಗ್ಗೂ ಸಹಿಸಿಕೊಂಡು ಕಡೆಗೂ ಜಿಪ್ಸಿಗಳು ಯುರೋಪ ಖಂಡದಲ್ಲೆಲ್ಲಾ ಹರಡಿಕೊಂಡರು. ಇವರನ್ನು ಸಾಧುಗಳಾಗಿ ಮಾಡಿ ಒಂದು ಕಡೆ ನೆಲೆಸುವಂತೆ ಮಾಡಬೇಕೆಂದು ಯುರೋಪೀಯರು ಬಹಳವಾಗಿ ಮಾಡಿದ ಪ್ರಯತ್ನಗಳೆಲ್ಲಾ ಭಗ್ನವಾದುವು. ಜಿಪ್ಸಿಗಳು ಅವರ ಪ್ರೇರಣೆಗೂ ಹೆದರಿಕೆಗೂ ಒಳಗಾಗದೆ ಒಂದುಕಡೆಯಲ್ಲಿಯೂ ಸ್ಥಿರವಾಗಿ ನಿಲ್ಲದೆ, ಈಗಲೂ ಊರುಊರು ಸುತ್ತುತ್ತಲೇ ಇರುವರು.

ಮನುಷ್ಯರ ಯೋಗ್ಯತೆಯನ್ನೂ ನಡತೆಯನ್ನೂ ಕಂಡು ಹಿಡಿಯುವುದರಲ್ಲಿ ಜಿಪ್ಸಿಗಳು ತುಂಬಾ ನಿಪುಣರು. ಶುಭಾಶುಭಗಳನ್ನು ಹೇಳುವೆವೆಂದು ಮುಗ್ಧರಾದ ಯುರೋಪೀಯರನ್ನು ಮರುಳುಮಾಡಿ ಅವರಿಂದ ದುಡ್ಡನ್ನು ಕಿತ್ತುಕೊಳ್ಳುವರು. ಕುದುರೆಗಳನ್ನು ಮಾರುವುದರಿಂದಲೂ ಕುರ್ಚಿಗಳನ್ನು ರಿಪೇರಿ ಮಾಡುವುದರಿಂದಲೂ ಸಹ ಹಣವನ್ನು ಸಂಪಾದಿಸುವರು. ಹಿಂದೂ ಜನರಿಗೆ ಸಂಬಂಧಪಟ್ಟವರೆಂದು ತೋರುವುದು. ಇವರ ಭಾಷೆಯಲ್ಲಿ ಅನೇಕ ಹಿಂದೂ ಪದಗಳಿರುವುವು. ಹಿಂದೂ ಆರ್ಯರ ಕೀಳುಜಾತಿಯವರ ಮತ್ತು ವನ್ಯರ ಬೆರಕೆಯಿಂದ ಜಿಪ್ಸಿಗಳು ಉತ್ಪನ್ನರಾಗಿರಬೇಕೆಂದು ಕೆಲವರು ಶಾಸ್ತ್ರಕಾರರು ನಿರ್ಣಯಿಸಿರುವರು. ಅನೇಕವಾದ ಹಿಂದೂ ಸಂಪ್ರದಾಯಗಳನ್ನೇ ಇವರು ಈಗಲೂ ಅನುಸರಿಸುತ್ತಿರುವರು. ಜಿಪ್ಸಿಗಳು ತಮ್ಮ ಜಾತಿಯವರಲ್ಲಿ ಬಹು ಪ್ರೀತಿಯುಳ್ಳವರಾಗಿಯೂ, ಪ್ರಮಾಣಿಕರಾಗಿಯೂ, ನೀತಿವಂತರಾಗಿಯೂ ಇರುವರು. ಯಾವಾಗಲೂ ಬೈಲಿನಲ್ಲಿಯೂ ಗಾಳಿಯಲ್ಲಿಯೂ ವಾಸಮಾಡಲು ಇಚ್ಛೆಯುಳ್ಳವರಾಗಿರುವರೇ ಹೊರತು ಊರೂ ಮನೆಗಳನ್ನು ಸೇರರು. ಹಂಗೇರಿ ತುರುಕಿ ಮತ್ತು ರೊಮೇನಿಯಾ ದೇಶಗಿಳಲ್ಲಿ ಜಿಪ್ಸಿಗಳ ಸಂಖ್ಯೆಯು ಮಿಕ್ಕ ದೇಶಗಳಲ್ಲಿರುವುದಕ್ಕಿಂತ ಅಧಿಕವಾಗಿರುವುದು. (ಸಶೇಷ)

S. V.

ಕ್ಷೇತ್ರಗಣಿತ.

ವೃತ್ತಗಳು.

Circles.

ವೃತ್ತದ ಕ್ಷೇತ್ರಫಲವನ್ನು ಕಂಡುಹಿಡಿಯುವಿಕೆ.

ವಿಧಿ:—೫೭. ತ್ರಿಜ್ಯದ ವರ್ಗವನ್ನು π (ಪೈ) ಯಿಂದ ಅಂದರೆ $3\frac{1}{7}$ ಅಥವಾ 3·1416 ರಿಂದ ಗುಣಿಸಿದರೆ ವೃತ್ತದ ಕ್ಷೇತ್ರಫಲವು ಬರುವುದು. *

ಉದಾ:—(54) ಒಂದು ವೃತ್ತದ ತ್ರಿಜ್ಯವು 14 ಅಡಿಯಾದರೆ, ಅದರ ಕ್ಷೇತ್ರಫಲವೆಷ್ಟು ?

* ಈ ವಿಧಿಯಲ್ಲಿನ ಎರಡು ವಿಧಿಗಳಿಂದಲೂ ವೃತ್ತದ ಕ್ಷೇತ್ರಫಲವು ವಾಸ್ತವವಾಗಿರುವುದಕ್ಕಿಂತ ಸ್ವಲ್ಪ ಹೆಚ್ಚಾಗಿ ಬರುವುದು. ಮತ್ತು 3·1416 ರಿಂದುಂಟಾಗುವ ವ್ಯತ್ಯಾಸಕ್ಕಿಂತ $3\frac{1}{7}$ ರಿಂದುಂಟಾಗುವ ವ್ಯತ್ಯಾಸವು ಹೆಚ್ಚಾಗಿರುವುದು.

$\pi = 3\frac{1}{7}$ ಆದರೆ,

ಕ್ಷೇ. ಫ. $= 14^2 \times \frac{2}{7}^2 = 14 \times 14 \times \frac{2}{7}^2 =$ 616 ಚ. ಅಡಿ.

$\pi = 3{\cdot}1416$ ಆದರೆ

ಕ್ಷೇ. ಫ. $= 14^2 \times 3{\cdot}1416 =$ 615·7536 ಚ. ಅಡಿ.

ವೃತ್ತದ ಕ್ಷೇತ್ರಫಲವು ತಿಳಿದರೆ ತ್ರಿಜ್ಯವನ್ನು ಕಂಡುಹಿಡಿಯುವಿಕೆ.

ವಿಧಿ:—53. ವೃತ್ತದ ಕ್ಷೇತ್ರಫಲವನ್ನು π ಅಂದರೆ $3\frac{1}{7}$ ಅಥವಾ 3·1416 ರಿಂದ ಭಾಗಿಸಿ; ಆ ಭಾಗಲಬ್ಧದ ವರ್ಗಮೂಲವನ್ನು ತೆಗೆದರೆ ತ್ರಿಜ್ಯವು ಬರುವುದು.

ಉದಾ:—(55.) ಒಂದು ವೃತ್ತದ ಕ್ಷೇತ್ರಫಲವು 616 ಚ.ಅಡಿಯಾ ದರೆ ಅದರ ತ್ರಿಜ್ಯವೆಷ್ಟು?

$\pi = 3\frac{1}{7}$ ಆದರೆ

ತ್ರಿಜ್ಯ $= \sqrt{616 \div \frac{2}{7}^2} = \sqrt{196} =$ 14 ಅಡಿ.

$\pi = 3{\cdot}1416$ ಆದರೆ

ತ್ರಿಜ್ಯ $= \sqrt{616 \div 3{\cdot}1416} =$ 14·0028 ಅಡಿ.

ವಿಶೇಷೋದಾಹರಣೆಗಳು.

ಉದಾ:—(56.) ಒಂದು ವೃತ್ತದ ತ್ರಿಜ್ಯವು 21 ಅಂಗುಲವಿರುವುದು. ಇದರ 4 ರಷ್ಟು ಕ್ಷೇತ್ರಫಲವುಳ್ಳ ಮತ್ತೊಂದು ವೃತ್ತದ ತ್ರಿಜ್ಯವೆಷ್ಟು? ($\pi = 3\frac{1}{7}$).

ಮೊದಲನೇ ವೃತ್ತದ ಕ್ಷೇ. ಫ. $= 21^2 \times \frac{2}{7}^2$

∴ ಎರಡನೇ ,, ,, $= 21^2 \times \frac{2}{7}^2 \times 4$

∴ ಈ ವೃತ್ತದ ತ್ರಿಜ್ಯ $= \sqrt{21^2 \times \frac{2}{7}^2 \times 4 \div \frac{2}{7}^2}$

$= \sqrt{21^2 \times 4}$

$= \sqrt{1764}$

$=$ 42 ಅಡಿ.

ಉದಾ:—(57.) ಒಂದು ಅರ್ಧವೃತ್ತದ ಕ್ಷೇತ್ರಫಲವು 308 ಚ. ಅಡಿ ಯಾದರೆ ಸುತ್ತಳತೆಯೆಷ್ಟು? $\pi = 3\frac{1}{7}$

ಅರ್ಧವೃತ್ತದ ಸುತ್ತಳತೆಯು ವೃತ್ತಪರಿಧಿಯ ಅರ್ಧ ಮತ್ತು ವ್ಯಾಸದ ಮೊ ತ್ತವಾಗಿದೆ.

ವೃತ್ತದ ಕ್ಷೇ. ಫ. $= 308 \times 2 = 616$ ಚ. ಅಡಿ.

∴ ವ್ಯಾಸ $= \sqrt{616 \div \frac{2}{7}^2 \times 2} = 28$ ಅಡಿಗಳು.

∴ ಪರಿಧಿ $= 28 \times \frac{2}{7}^2 =$ 88 ಅಡಿ.

$\therefore$ ಅರ್ಧಪರಿಧಿ $= 88 \div 2 = 44$ ಅಡಿ.

$\therefore$ ಅರ್ಧವೃತ್ತದ ಸುತ್ತಳತೆ $= 44 + 28 = \underline{72}$ ಅಡಿ.

ಉದಾ:—(58.) ಒಂದು, ವರ್ತುಳಪಾದದ* ಸುತ್ತಳತೆ 50 ಅಡಿಯಾದರೆ ಅದರ ಕ್ಷೇತ್ರಫಲವೆಷ್ಟು? $\pi = 3\frac{1}{7}$

ವ್ಯಾಸ 1 ಅಡಿ ಇದ್ದರೆ ಪರಿಧಿ $3\frac{1}{7}$ ಅಡಿ ಇರುವುದು.

ವೃತ್ತದ ಪಾದವು ವೃತ್ತದ $\frac{1}{4}$ ಭಾಗವಾಗಿರುವುದರಿಂದ ವೃತ್ತ ಪಾದದ ಕಂಸವು ಪರಿಧಿಯ $\frac{1}{4}$ ಭಾಗವಾಗಿರುವುದು.

$\therefore$ ವರ್ತುಳ ಪಾದದ ಕಂಸ $= \frac{22}{7} \times \frac{1}{4} = \frac{11}{14}$ ಅಡಿ.

ವರ್ತುಳ ಪಾದದ ಸುತ್ತಳತೆಯು, ಎರಡು ತ್ರಿಜ್ಯಗಳೂ ವೃತ್ತಪಾದದ ಕಂಸವೂ ಇವುಗಳ ಮೊತ್ತವಾಗಿರುತ್ತದೆ.

ಎರಡು ತ್ರಿಜ್ಯಗಳು = ಒಂದು ವ್ಯಾಸ.

$\therefore$ ವರ್ತುಳಪಾದದ ಸುತ್ತಳತೆ $= 1 + \frac{11}{14} = \frac{25}{14}$ ಅಡಿ.

ಸುತ್ತಳತೆ $\frac{25}{14}$ ಅಡಿ ಇದ್ದರೆ ತ್ರಿಜ್ಯ $\frac{1}{2}$ ಅಡಿ ಇರುವುದು.

$\therefore$,, 1 ,, ,, $\frac{1}{2} \times \frac{14}{25}$

$\therefore$,, 50 ,, ,, $\frac{1}{2} \times \frac{14}{25} \times 50 = 14$ ಅ.

$\therefore$ ವೃತ್ತದ ಕ್ಷೇ. ಫ. $= 14^2 \times \frac{22}{7} = 616$ ಚ. ಅಡಿ.

$\therefore$ ವರ್ತುಳ ಪಾದದ ಕ್ಷೇ. ಫ $= 616 \div 4 = \underline{154}$ ಚ. ಅಡಿ.

ವೃತ್ತದ್ವಯಾಂತರ ಕ್ಷೇತ್ರದ $\S$ ಕ್ಷೇತ್ರಫಲವನ್ನು ಕಂಡು ಹಿಡಿಯುವಿಕೆ.

ವಿಧಿ:—54. ವೃತ್ತದ್ವಯಾಂತರ ಕ್ಷೇತ್ರವನ್ನುಂಟುಮಾಡುವ ವೃತ್ತಗಳೊಳಗೆ ಬಾಹ್ಯವೃತ್ತದ ಕ್ಷೇತ್ರಫಲದಲ್ಲಿ ಅಂತರವೃತ್ತದ ಕ್ಷೇತ್ರಫಲವನ್ನು ಕಳೆದರೆ ವೃತ್ತದ್ವಯಾಂತರಕ್ಷೇತ್ರದ ಕ್ಷೇತ್ರಫಲವು ಬರುವುದು.

---

* ಒಂದು ಅರ್ಧವೃತ್ತವನ್ನು ತ್ರಿಜ್ಯದಿಂದ ಎರಡು ಸಮಭಾಗಗಳಾಗಿ ಮಾಡಿದರೆ ಆ ಪ್ರತಿಯೊಂದು ಭಾಗಕ್ಕೂ ವರ್ತುಳಪಾದ (Quadrant of a circle) ವೆಂದು ಹೆಸರು. ಇದು ಸಾಟಕೂ ನವುಳ್ಳ ತ್ರಿಜ್ಯಾಂತರ ಕ್ಷೇತ್ರವಾಗಿದೆ.

$\S$ ಒಂದು ವೃತ್ತವು ಮತ್ತೊಂದು ವೃತ್ತದೊಳಗೆ ಇರುವಾಗ ಅವೆರಡರ ಪರಿಧಿಗಳು ಸಮಾನಾಂತರದಲ್ಲಿದ್ದರೆ ಆ ಪರಿಧಿಗಳ ಮಧ್ಯದ್ರವೀಕ್ಷೆಕ್ಕೆ "ವೃತ್ತದ್ವಯಾಂತರ ಕ್ಷೇತ್ರ" (Plane Circular Ring) ವೆಂದು ಹೆಸರು.

ತ್ರಿಜ್ಯಗಳ ಮೊತ್ತ ವ್ಯತ್ಯಾಸಗಳ ಗುಣಲಬ್ಧವನ್ನು π ಯಿಂದ ಗುಣಿಸಿದರೆ ವೃತ್ತದ್ವಯಾಂತರ ಕ್ಷೇತ್ರದ ಕ್ಷೇತ್ರಫಲವು ಬರುವುದು.

* ವಿದ್ಯಾದಾಯಿನಿ. *

ಭಾಗ ೧೪.] ಫೆಬ್ರವರಿ—೧೯೦೬. [ಸಂಚಿಕೆ ೨.

ಪಾಠಕರು.

ವಿದ್ಯಾಭ್ಯಾಸವೆಂದರೆ ಪುಸ್ತಕಗಳಲ್ಲಿರತಕ್ಕ ಶಬ್ದಗಳನ್ನೂ ವಾಕ್ಯಗಳನ್ನೂ ಗಿಣಿಗಳಂತೆ ಗಟ್ಟಿಮಾಡಿ ಪರೀಕ್ಷಕರು ಬಂದಾಗ್ಗೆ ಒಪ್ಪಿಸಿಬಿಡುವುದೆಂದು ಅರ್ಥವಲ್ಲ. ಪುಸ್ತಕಗಳಲ್ಲಿರತಕ್ಕ ಶಬ್ದಗಳನ್ನೂ ವಾಕ್ಯಗಳನ್ನೂ ಅರ್ಥವತ್ತಾಗಿ ತಿಳಿದುಕ್ಕೊಂಡು ಅವುಗಳಲ್ಲಿ ಹೇಳಿರತಕ್ಕ ವಿಷಯಗಳ ಪೂರ್ವಾಪರಜ್ಞಾನವನ್ನೂ ಕೂಡ ಸಂಪಾದಿಸಿಕೊಂಡು ಅವುಗಳಲ್ಲಿ ಸಮಾಚೀನವಾದ ಸಂಗತಿಗಳನ್ನೂ ಅನುಷ್ಟಾನಕ್ಕೆ ತಂದುಕೊಳ್ಳುವದೂ, ಲೋಕವ್ಯವಹಾರದಲ್ಲಿ ಅವುಗಳನ್ನು ಉಪಯೋಗಿಸುವಂತೆ ಮಾಡಿಕೊಳ್ಳುವದೂ ವಿದ್ಯಾಭ್ಯಾಸವೆನ್ನಿಸಿಕೊಳ್ಳುತ್ತದೆ. ಆದುದರಿಂದ ಪಾಠಕರಾದವರು ವಿದ್ಯಾರ್ಥಿಗಳಿಗೆ ಪಾಠಗಳನ್ನು ಹೇಳಿ ಬರೆಯುತಕ್ಕ ಅಭ್ಯಾಸದ ಪಾಠಗಳನ್ನು ಬರೆಸಿ ರಿಜಸ್ಟ್ರುಗಳಲ್ಲಿ ಹಾಜರು ಗೈರಹಾಜರುಗಳನ್ನೂ ನಂಬರುಗಳನ್ನೂ ಹಾಕಿಸಿಕೇಳಿದ ಪಾಠಗಳನ್ನು ಅವರು ಗಿಣಿಗಳಂತೆ ಒಪ್ಪಿಸುವಂತೆ ಮಾಡಿದ ಮಾತ್ರದಿಂದಲೇ ಕೃತಕೃತ್ಯರಾಗುವುದಿಲ್ಲ. ಹೇಳಿದ ಪಾಠಗಳನ್ನು ಅವರು ನಿಷ್ಕಲ್ಮಷ್ಯವಾಗಿ ತಿಳಿದುಕೊಂಡಿದಾರೆಯೇ ಇಲ್ಲವೇ ಎಂಬುದನ್ನು ಬಾರಿಬಾರಿಗೂ ಪರೀಕ್ಷಿಸಿ ಅವರು ತಿಳಿದುಕೊಳ್ಳದೆ ಇದ್ದರೆ, ಪುನಃ ಆ ವಿಷಯಗಳನ್ನು ತಿಳಿಸಿ ಅವರಿಗೆ ಸಮಗ್ರವಾಗಿ ಜ್ಞಾನವುಂಟಾಗುವಂತೆಯೂ, ಒದಿದ ವಿಷಯವು ಸ್ಪಷ್ಟವಾಗಿ ತಿಳಿಯುವಂತೆಯೂ ಮಾಡುವುದು ಪಾಠಕರ ಕರ್ತವ್ಯವು. ಪಾಠಕರು ತಾವು ಪಾಠವನ್ನು ಹೇಳಿ ಮುಗಿಸಿದ ಮಾತ್ರದಿಂದಲೇ ತಮ್ಮ ಕರ್ತವ್ಯವು ಮುಗಿಯಿತೆಂದು ತಿಳಿದುಕೊಳ್ಳಕೂಡದು. ಹೇಳಿದ ಪಾಠವು ವಿದ್ಯಾರ್ಥಿಗಳಿಗೆ ಸಮಗ್ರವಾಗಿ ಬಂತೆಂದು ಪರೀಕ್ಷಿಸಿ ತಿಳಿದುಕೊಂಡಮೇಲೆ ತಾವು ಕೃತಾರ್ಥರಾದೆವೆಂದು ತಿಳಿದುಕೊಳ್ಳಬೇಕು. ಅನೇಕ ವಿದ್ಯಾರ್ಥಿ

ಗಳು ಪಾಠಹೇಳುವಾಗ್ಯೆ ಮನಸ್ಸನ್ನು ಇಟ್ಟು ಕೇಳುವುದಿಲ್ಲ. ಹೇಳಿದುದನ್ನು ಗ್ರಹಿಸುವುದಿಲ್ಲ. ಮನೆಗಳಲ್ಲಿ ಚಿಂತನೆಯನ್ನು ಮಾಡುವುದಿಲ್ಲ. ಹಳೇಪಾಠಗಳನ್ನು ಮರೆಯುತ್ತಾರೆ. ಹೊಸಪಾಠಗಳನ್ನು ಕಲಿಯುವುದಿಲ್ಲ. ಪಾಠಶಾಲೆಗೆ ಗೈರುಹಾಜರು ಆಗಿ ಅನೇಕ ಪಾಠಗಳನ್ನು ಕಳೆದುಕೊಳ್ಳುತ್ತಾರೆ. ಇಂಥಾವರಿಗೆ ಹೊಸಪಾಠಗಳಲ್ಲಿ ಹೇಗೋ ಹಾಗೆಯೇ ಹಳೇಪಾಠಗಳಲ್ಲಿಯೂ ಪರಿಶ್ರಮವನ್ನುಂಟುಮಾಡಬೇಕು. ಹೇಳಿದ್ದನ್ನೇ ಪುನಃಪುನಃ ಅವರಿಗೆ ಚೆನ್ನಾಗಿ ತಿಳಿಯುವವರೆಗೂ ಅವರಿಂದಲೇ ಹೇಳಿಸಬೇಕು. ಅನೇಕರು ಉಪಾಯದಿಂದಲೂ ಪ್ರೋತ್ಸಾಹದಿಂದಲೂ ಹಿತೋಪದೇಶಗಳಿಂದಲೂ ಅಗತಕ್ಕ ವ್ಯಾಸಂಗವನ್ನು ಕೋಪತಾಪಗಳಿಂದಲೂ ನಿಂದೆಯಿಂದಲೂ ದಂಡೋಪಾಯದಿಂದಲೂ ಸಾಧ್ಯವೆಂದು ಭಾವಿಸಿ ಆ ರೀತಿಯಲ್ಲಿ ಪ್ರವರ್ತಿಸಿ ವಿದ್ಯಾರ್ಥಿಗಳನ್ನು ಕೆಡಿಸುವ್ರದಲ್ಲದೆ ತಮ್ಮ ಸ್ವಭಾವವೂ ಕೆಡುವಂತೆ ಮಾಡಿಕೊಳ್ಳುವರು. ಉಪಾಯದಿಂದಾಗತಕ್ಕ ಕೆಲಸಗಳು ಪರಾಕ್ರಮದಿಂದ ಎಂದಿಗಾದರೂ ಸಾಧ್ಯವಾಗುವುದೇ? ಎಂದಿಗೂ ಆಗುವುದಿಲ್ಲ. ಯಾವ ವಿಷಯವನ್ನು ತಿಳಿದುಕೊಳ್ಳಬೇಕಾದರೂ ಮನಸ್ಸು ನಿರ್ಮಲವಾಗಿಯೂ ಶಾಂತವಾಗಿಯೂ ಇರಬೇಕು. ಕೋಪತಾಪಗಳಿಂದಲೂ ಶಿಕ್ಷೆಯಿಂದಲೂ ವಿದ್ಯಾರ್ಥಿಗಳ ಮನಸ್ಸನ್ನು ಕಳವಳಪಡಿಸಿ, ಅನಂತರದಲ್ಲಿ ಗ್ರಹಣವಾದ ವಿಷಯಗಳನ್ನು ಹೇಳಿದರೆ ಅದು ಅವರ ಮನಸ್ಸಿಗೆ ಪ್ರವೇಶಿಸುವುದೇ? ಎಂದಿಗೂ ಪ್ರವೇಶಿಸುವುದಿಲ್ಲ. ಪಾಠಕರು ಅತ್ಯಂತ ಸಲಿಗೆಯಿಂದ ವಿದ್ಯಾರ್ಥಿಗಳು ಹೆಚ್ಚಿಕೊಳ್ಳುವಂತೆ ಮಾಡಬಾರದು. ಅತ್ಯಂತ ಧೂರ್ತತ್ವದಿಂದ ಅವರು ಭಯಭ್ರಾಂತರಾಗಿರುವಂತೆಯೂ ಮಾಡಬಾರದು. ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಹದ್ದುವಿಾರದಂತೆ ಇಟ್ಟುಕೊಂಡು ಪಾಠಪ್ರವಚನಗಳನ್ನೆಲ್ಲಾ ಅವರಿಂದಲೇ ಹೇಳಿಸಿ ಮಾರ್ಗದರ್ಶನವನ್ನು ಮಾತ್ರ ಯಾವ ಪಾಠಕನು ಕೊಡುವನೋ ಅವನು ಮಾಡತಕ್ಕ ಪ್ರಯತ್ನಗಳು ಸಫಲವಾಗುವುವು. ಹಾಗಿಲ್ಲದೆ ಅತ್ಯಂತ ಕ್ರೌರ್ಯದಿಂದಲಾಗಲೀ ಅತ್ಯಂತ ಲಾಲನೆಯಿಂದಲಾಗಲೀ ಯಾವ ಪಾಠಕನು ಪ್ರವರ್ತಿಸುವನೋ ಅವನ ಪ್ರಯತ್ನವು ಭಂಗವಾಗುವುದರಲ್ಲಿ ಸಂದೇಹವೇ ಇಲ್ಲ

ಪಾಠಕನು ವಿದ್ಯಾರ್ಥಿಗಳನ್ನು ಚೆನ್ನಾಗಿ ತಯಾರು ಮಾಡಬೇಕಾದರೆ ಆ ವಿದ್ಯಾರ್ಥಿಗಳ ತಂದೆತಾಯಿಗಳಲ್ಲಿ ಪರಿಚಯವನ್ನೂ ಒಳಕೆಯನ್ನೂ ಇಟ್ಟುಕೊಳ್ಳಬೇಕು. ಯೋಗ್ಯರಾಗಿಯೂ ಶ್ರದ್ಧೆಯುಳ್ಳವರಾಗಿಯೂ ಇರತಕ್ಕ ವಿದ್ಯಾರ್ಥಿಗಳ ತಂದೆತಾಯಿಗಳಲ್ಲಿ ಪರಿಚಯವೂ ಒಳಕೆಯೂ ಇಲ್ಲದೇ ಇದ್ದಾಗ್ಯೂ ಅದರಿಂದ ಬಾಧಕವೇನೂ

ಇಲ್ಲ. ಆದರೆ ಪಾಠಗಳಲ್ಲಿ ಶ್ರದ್ಧೆಯುಳ್ಳವರಾಗಿಯೂ ವೃದ್ಧಿಗೆ ಒರಜೇಕೆಂಬ ಆಸಕ್ತಿಯಿಲ್ಲದವರಾಗಿಯೂ ತಂದೆತಾಯಿಗಳ ನಿರ್ಬಂಧಕ್ಕೊಸ್ಕರ ಪಾಠಶಾಲೆಗೆ ಹೋಗತಕ್ಕವರಾಗಿಯೂ ಪಾಠಶಾಲೆಗೆ ಹೋಗುವಂಶೆ ಪ್ರಯತ್ನವನ್ನುಂಟುಮಾಡಿ ಪಾಠಶಾಲೆಗಳಿಗೆ ಹೋಗದೆತಂದೆತಾಯಿಗಳಿಗೂ ಪಾಠಕರಿಗೂ ಮೋಸಮಾಡತಕ್ಕವರಾಗಿಯೂ ಇರತಕ್ಕ ವಿದ್ಯಾರ್ಥಿಗಳು ಅನೇಕರಿರುವರು. ಇಂಥಾ ವಿದ್ಯಾರ್ಥಿಗಳ ತಂದೆತಾಯಿಗಳೊಡನೆ ಆ ವಿದ್ಯಾರ್ಥಿಯ ಪುರೋವೃದ್ಧಿಯ ವಿಷಯದಲ್ಲಿ ಅವರ ಅವರ ಸಹಾಯವನ್ನು ಹೊಂದುವುದು ಬಹಳ ಅವಶ್ಯಕ. ಆಗಾಗ್ಗೆ ತಂದೆತಾಯಿಗಳನ್ನು ನೋಡಿ ಆ ಹುಡುಗರ ನ್ಯೂನಾತಿರಿಕ್ತಗಳನ್ನು ಅವರ ಅಶ್ರದ್ಧೆಯನ್ನು ಅದಕ್ಕೆ ಮಾಡಬೇಕಾದ ಉಪಾಯಗಳನ್ನೂ ಅವರಿಗೆ ತಿಳಿಸುತ್ತಾ ಬಂದರೆ ಉಪೇಕ್ಷೆಯುಳ್ಳ ವಿದ್ಯಾರ್ಥಿಗಳನ್ನು ಶ್ರದ್ಧೆಯುಳ್ಳವರನ್ನಾಗಿ ಮಾಡುವುದಕ್ಕೆ ತಂದೆತಾಯಿಗಳು ಎಷ್ಟೋ ಸಹಾಯ ಮಾಡುವರು. ಈ ಸಹಾಯದಿಂದ ವಿದ್ಯಾರ್ಥಿಗಳಿಗೂ ತಂದೆತಾಯಿಗಳಿಗೂ ಪ್ರಯೋಜನವಾಗುವುದಲ್ಲದೆ ಪಾಠಕರು ಕೃತಕೃತ್ಯರಾಗುವರು. ತಂದೆತಾಯಿಗಳು ಪಾಠಕರಲ್ಲಿ ನಂಬಿಕೆಯನ್ನು ಇಟ್ಟು ತಮ್ಮ ಮಕ್ಕಳ ಪುರೋವೃದ್ಧಿಯನ್ನೇ ಇವರಿಗೆ ಒಪ್ಪಿಸಿರುವುದರಿಂದ ಅಂಥಾ ಪುರೋವೃದ್ಧಿಗೆ ಬೇಕಾದ ಕೆಲಸಗಳನ್ನು ಮಾಡುವುದು ಇವರಿಗೆ ಕರ್ತವ್ಯವಾದುದರಿಂದ ಈ ಕರ್ತವ್ಯವನ್ನು ನೆರವೇರಿಸಿ ಕೃತಕೃತ್ಯರಾಗಬೇಕು.

ಹೀಗೆ ಆಗಬೇಕಾದರೆ ಪಾಠಕರಾದವರಿಗೆ ಅನ್ನವಸ್ತ್ರಗಳಿಗೆ ನೆಮ್ಮದಿಯಾಗಿರುವಂತೆ ಏರ್ಪಾಡುಗಳಿರಬೇಕು. ಅನೇಕ ಪಾಠಕರಿಗೆ ಏಳು ರೂಪಾಯಿ ಸಂಬಳಗಳಿರುವುದು. ಈ ಸಂಬಳದಲ್ಲಿ ಈ ಕಾಲದಲ್ಲಿ ಒಬ್ಬನಿಗೆ ಜೀವನವಾಗುವುದೇ ಕಷ್ಟ. ಇಂಥಾದ್ದರಲ್ಲಿ 6–7 ಜನಗಳುಳ್ಳ ಕುಟುಂಬವನ್ನು ಇಟ್ಟುಕೊಂಡು ಅವರಿಗೆ ಅನ್ನವಸ್ತ್ರಗಳಿಲ್ಲದೆ ತಾಪತ್ರಯಪಡುವ ಸ್ಥಿತಿಯಲ್ಲಿರುವಾಗ್ಯೆ ವಿದ್ಯಾರ್ಥಿಗೆ ಯಾವರೀತಿಯಲ್ಲಿ ಪಾಠಹೇಳಿ ಅಭಿವೃದ್ಧಿಗೆ ತರಬೇಕೋ ಆದನ್ನು ಮಾಡುವುದಕ್ಕೆ ಪಾಠಕರಿಗೆ ಮನಸ್ಸು ಹ್ಯಾಗೆತಾನೇ ಬರುವುದು? ಈ ವಿಷಯಗಳನ್ನು ಪರ್ಯಾಲೋಚಿಸಿ ಪಾಠಶಾಲೆಗಳ ಮೇಲುವಿಚಾರಣೆಯು ಯಾರ್ಯಾರಿಗೆ ಸೇರಿರುವುದೋ ಅವರು ಈ ಪಾಠಕರ ಸ್ಥಿತಿಯನ್ನು ಕ್ರಮಪಡಿಸುವದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಬೇಕು. ಕೂಲಿಯವರಿಗೂ ಕೂಡ ಈ ಪಾಠಕರಿಗಿಂತ ಹೆಚ್ಚು ಕೂಲಿಯು ಸಿಕ್ಕುವುದು. ಹೀಗಿರುವುದರಿಂದ ಯೋಗ್ಯರಾದ ಪಾಠಕರು ಸಿಕ್ಕುವುದೇ ಕಷ್ಟ. ಸಿಕ್ಕಿದರೂ ಶ್ರದ್ಧೆಯಿಂದ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ವಿದ್ಯಾಭ್ಯಾಸದ ಇಲಾಖೆಯವ

ಗಳು ಪಾಠಹೇಳುವಾಗ್ಯೆ ಮನಸ್ಸನ್ನು ಇಟ್ಟು ಕೇಳುವುದಿಲ್ಲ. ಹೇಳಿದುದನ್ನು ಗ್ರಹಿಸುವುದಿಲ್ಲ. ಮನೆಗಳಲ್ಲಿ ಚಿಂತನೆಯನ್ನು ಮಾಡುವುದಿಲ್ಲ. ಹಳೇಪಾಠಗಳನ್ನು ಮರೆಯುತ್ತಾರೆ. ಹೊಸಪಾಠಗಳನ್ನು ಕಲಿಯುವುದಿಲ್ಲ. ಪಾಠಶಾಲೆಗೆ ಗೈರಾಹಾಜರು ಆಗಿ ಅನೇಕ ಪಾಠಗಳನ್ನು ಕಳೆದುಕೊಳ್ಳುತ್ತಾರೆ. ಇಂಥಾವರಿಗೆ ಹೊಸಪಾಠಗಳಲ್ಲಿ ಹೇಗೋ ಹಾಗೆಯೇ ಹಳೇಪಾಠಗಳಲ್ಲಿಯೂ ಪರಿಶ್ರಮವನ್ನಿಟ್ಟುಮಾಡಬೇಕು. ಹೇಳಿದ್ದನ್ನೇ ಪುನಃಪುನಃ ಅವರಿಗೆ ಚೆನ್ನಾಗಿ ತಿಳಿಯುವವರೆಗೂ ಅವರಿಂದಲೇ ಹೇಳಿಸಬೇಕು. ಅನೇಕರು ಉಪಾಯದಿಂದಲೂ ಪ್ರೋತ್ಸಾಹದಿಂದಲೂ ಹಿತೋಪದೇಶಗಳಿಂದಲೂ ಆಗತಕ್ಕ ವ್ಯಾಸಂಗವನ್ನು ಕೋಪತಾಪಗಳಿಂದಲೂ ನಿಂದೆಯಿಂದಲೂ ದಂಡೋಪಾಯದಿಂದಲೂ ಸಾಧ್ಯವೆಂದು ಭಾವಿಸಿ ಆರೀತಿಯಲ್ಲಿ ಪ್ರವರ್ತಿಸಿ ವಿದ್ಯಾರ್ಥಿಗಳನ್ನು ಕೆಡಿಸುವುದಲ್ಲದೆ ತಮ್ಮ ಸ್ವಭಾವವೂ ಕೆಡುವಂತೆ ಮಾಡಿಕೊಳ್ಳುವರು. ಉಪಾಯದಿಂದಾಗತಕ್ಕ ಕೆಲಸಗಳು ಪರಾಕ್ರಮದಿಂದ ಎಂದಿಗಾದರೂ ಸಾಧ್ಯವಾಗುವುದೇ? ಎಂದಿಗೂ ಆಗುವುದಿಲ್ಲ. ಯಾವ ವಿಷಯವನ್ನು ತಿಳಿದುಕೊಳ್ಳಬೇಕಾದರೂ ಮನಸ್ಸು ನಿರ್ಮಲವಾಗಿಯೂ ಶಾಂತವಾಗಿಯೂ ಇರಬೇಕು. ಕೋಪತಾಪಗಳಿಂದಲೂ ಶಿಕ್ಷೆಯಿಂದಲೂ ವಿದ್ಯಾರ್ಥಿಗಳ ಮನಸ್ಸನ್ನು ಕಳವಳಪಡಿಸಿ, ಅನಂತರದಲ್ಲಿ ಗ್ರಹಣವಾದ ವಿಷಯಗಳನ್ನು ಹೇಳಿದರೆ ಅದು ಅವರ ಮನಸ್ಸಿಗೆ ಪ್ರವೇಶಿಸುವುದೇ? ಎಂದಿಗೂ ಪ್ರವೇಶಿಸುವುದಿಲ್ಲ. ಪಾಠಕರು ಅತ್ಯಂತ ಸಲಿಗೆಯಿಂದ ವಿದ್ಯಾರ್ಥಿಗಳು ಹೆಚ್ಚಿಕೊಳ್ಳುವಂತೆ ಮಾಡಬಾರದು. ಅತ್ಯಂತ ಧೂರ್ತತ್ವದಿಂದ ಅವರು ಭಯಭ್ರಾಂತರಾಗಿರುವಂತೆಯೂ ಮಾಡಬಾರದು. ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಹದ್ದುವಿಾರದಂತೆ ಇಟ್ಟುಕೊಂಡು ಪಾಠಪ್ರವಚನಗಳನ್ನೆಲ್ಲಾ ಅವರಿಂದಲೇ ಹೇಳಿಸಿ ಮಾರ್ಗದರ್ಶನವನ್ನು ಮಾತ್ರ ಯಾವ ಪಾಠಕನು ಕೊಡುವನೋ ಅವನು ಮಾಡತಕ್ಕ ಪ್ರಯತ್ನಗಳು ಸಫಲವಾಗುವುವು. ಹಾಗಿಲ್ಲದೆ ಅತ್ಯಂತ ಕ್ರೌರ್ಯದಿಂದಲಾಗಲೀ ಅತ್ಯಂತ ಲಾಲನೆಯಿಂದಲಾಗಲೀ ಯಾವ ಪಾಠಕನು ಪ್ರವರ್ತಿಸುವನೋ ಅವನ ಪ್ರಯತ್ನವು ಭಂಗವಾಗುವುದರಲ್ಲಿ ಸಂದೇಹವೇ ಇಲ್ಲ

ಪಾಠಕನು ವಿದ್ಯಾರ್ಥಿಗಳನ್ನು ಚೆನ್ನಾಗಿ ತಯಾರು ಮಾಡಬೇಕಾದರೆ ಆ ವಿದ್ಯಾರ್ಥಿಗಳ ತಂದೆತಾಯಿಗಳಲ್ಲಿ ಪರಿಚಯವನ್ನೂ ಒಳಕೆಯನ್ನೂ ಇಟ್ಟುಕೊಳ್ಳಬೇಕು. ಯೋಗ್ಯರಾಗಿಯೂ ಶ್ರದ್ಧೆಯುಳ್ಳವರಾಗಿಯೂ ಇರತಕ್ಕ ವಿದ್ಯಾರ್ಥಿಗಳ ತಂದೆತಾಯಿಗಳಲ್ಲಿ ಪರಿಚಯವೂ ಒಳಕೆಯೂ ಇಲ್ಲದೇ ಇದ್ದಾಗ್ಗೂ ಅದರಿಂದ ಬಾಧಕವೇನೂ

ಇಲ್ಲ. ಆದರೆ ಪಾಠಗಳಲ್ಲಿ ಶ್ರದ್ಧೆಯಿದ್ದವರಾಗಿಯೂ ವೃದ್ಧಿಗೆ ಬರಬೇಕೆಂಬ ಆಸಕ್ತಿಯಿಲ್ಲದವರಾಗಿಯೂ ತಂದೆತಾಯಿಗಳ ನಿರ್ಬಂಧಕ್ಕೋಸ್ಕರ ಪಾಠಶಾಲೆಗೆ ಹೋಗತಕ್ಕವರಾಗಿಯೂ ಪಾಠಶಾಲೆಗೆ ಹೋಗುವಂಥೆ ಪ್ರಯತ್ನವನ್ನುಂಟುಮಾಡಿ ಪಾಠಶಾಲೆಗಳಿಗೆ ಹೋಗದೆತಂದೆತಾಯಿಗಳಿಗೂ ಪಾಠಕರಿಗೂ ಪೋಸಮಾಡತಕ್ಕವರಾಗಿಯೂ ಇರತಕ್ಕ ವಿದ್ಯಾರ್ಥಿಗಳು ಅನೇಕರಿರುವರು. ಇಂಥಾ ವಿದ್ಯಾರ್ಥಿಗಳ ತಂದೆತಾಯಿಗಳೊಡನೆ ಆ ವಿದ್ಯಾರ್ಥಿಯ ಪುರೋವೃದ್ಧಿಯ ವಿಷಯದಲ್ಲಿ ಅವರ ಅವರ ಸಹಾಯವನ್ನು ಹೊಂದುವುದು ಬಹಳ ಅವಶ್ಯಕ. ಆಗಾಗ್ಗೆ ತಂದೆತಾಯಿಗಳನ್ನು ನೋಡಿ ಆ ಹುಡುಗರ ನ್ಯೂನಾತಿರಿಕ್ತಗಳನ್ನು ಅವರ ಅಶ್ರದ್ಧೆಯನ್ನು ಅದಕ್ಕೆ ಮಾಡಬೇಕಾದ ಉಪಾಯಗಳನ್ನೂ ಅವರಿಗೆ ತಿಳಿಸುತ್ತಾ ಬಂದರೆ ಉಪೇಕ್ಷೆಯುಳ್ಳ ವಿದ್ಯಾರ್ಥಿಗಳನ್ನು ಶ್ರದ್ಧೆಯುಳ್ಳವರನ್ನಾಗಿ ಮಾಡುವುದಕ್ಕೆ ತಂದೆತಾಯಿಗಳು ಎಷ್ಟೋ ಸಹಾಯ ಮಾಡುವರು. ಈ ಸಹಾಯದಿಂದ ವಿದ್ಯಾರ್ಥಿಗಳಿಗೂ ತಂದೆತಾಯಿಗಳಿಗೂ ಪ್ರಯೋಜನವಾಗುವುದಲ್ಲದೆ ಪಾಠಕರು ಕೃತಕೃತ್ಯರಾಗುವರು. ತಂದೆತಾಯಿಗಳು ಪಾಠಕರಲ್ಲಿ ನಂಬಿಕೆಯನ್ನು ಇಟ್ಟು ತಮ್ಮ ಮಕ್ಕಳ ಪುರೋವೃದ್ಧಿಯನ್ನೇ ಇವರಿಗೆ ಒಪ್ಪಿಸಿರುವುದರಿಂದ ಅಂಥಾ ಪುರೋವೃದ್ಧಿಗೆ ಬೇಕಾದ ಕೆಲಸಗಳನ್ನು ಮಾಡುವುದು ಇವರಿಗೆ ಕರ್ತವ್ಯವಾದುದರಿಂದ ಈ ಕರ್ತವ್ಯವನ್ನು ನೆರವೇರಿಸಿ ಕೃತಕೃತ್ಯರಾಗಬೇಕು.

ಹೀಗೆ ಆಗಬೇಕಾದರೆ ಪಾಠಕರಾದವರಿಗೆ ಅನ್ನವಸ್ತ್ರಗಳಿಗೆ ಸೆಮ್ಮಡಿಯಾಗಿರುವಂತೆ ಏರ್ಪಾಡುಗಳಿರಬೇಕು. ಅನೇಕ ಪಾಠಕರಿಗೆ ಏಳು ರೂಪಾಯಿ ಸಂಬಳಗಳಿರುವುದು. ಈ ಸಂಬಳದಲ್ಲಿ ಈ ಕಾಲದಲ್ಲಿ ಒಬ್ಬನಿಗೆ ಜೀವನವಾಗುವುದೇ ಕಷ್ಟ. ಇಂಥಾದ್ದರಲ್ಲಿ 6–7 ಜನಗಳುಳ್ಳ ಕುಟುಂಬವನ್ನು ಇಟ್ಟುಕೊಂಡು ಅವರಿಗೆ ಅನ್ನವಸ್ತ್ರಗಳಿಲ್ಲದೆ ತಾಪತ್ರಯಪಡುವ ಸ್ಥಿತಿಯಲ್ಲಿರುವಾಗ್ಯೆ ವಿದ್ಯಾರ್ಥಿಗೆ ಯಾವರೀತಿಯಲ್ಲಿ ಪಾಠಹೇಳಿ ಅಭಿವೃದ್ಧಿಗೆ ತರಬೇಕೋ ಆದನ್ನು ಮಾಡುವುದಕ್ಕೆ ಪಾಠಕರಿಗೆ ಮನಸ್ಸು ಹ್ಯಾಗೆತಾನೇ ಬರುವುದು? ಈ ವಿಷಯಗಳನ್ನು ಪರ್ಯಾಲೋಚಿಸಿ ಪಾಠಶಾಲೆಗಳ ಮೇಲುವಿಚಾರಣೆಯು ಯಾರ್ಯಾರಿಗೆ ಸೇರಿರುವುದೋ ಅವರು ಈ ಪಾಠಕರ ಸ್ಥಿತಿಯನ್ನು ಕ್ರಮಪಡಿಸುವುದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಬೇಕು. ಕೂಲಿಯವರಿಗೂ ಕೂಡ ಈ ಪಾಠಕರಿಗಿಂತ ಹೆಚ್ಚು ಕೂಲಿಯು ಸಿಕ್ಕುವುದು. ಹೀಗಿರುವುದರಿಂದ ಯೋಗ್ಯರಾದ ಪಾಠಕರು ಸಿಕ್ಕುವುದೇ ಕಷ್ಟ. ಸಿಕ್ಕಿದರೂ ಶ್ರದ್ಧೆಯಿಂದ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ವಿದ್ಯಾಭ್ಯಾಸದ ಇಲಾಖೆಯವ

ರು ಈ ವಿಷಯವನ್ನು ಪರ್ಯಾಲೋಚಿಸಿ ಪಾಠಕರಿಗೆ ಉಚಿತವಾದ ಅನುಕೂಲತೆಯು ನ್ನು ಕಲ್ಪಿಸಿ ಬಾಲವಿದ್ಯಾಭ್ಯಾಸವನ್ನು ಶ್ರದ್ಧಾಳುಗಳಿಂದ ಅಭಿವೃದ್ಧಿಪಡಿಸುವರೆಂದು ಕೋರುವೆವು.

ಪರ್ವತಗಳು.

ಈ ಭೂಮಿಯು ನಿಮ್ನೋನ್ನತಗಳುಳ್ಳ ದೊಡ್ಡ ಗೋಳವಾಗಿರುವುದು. ಇವುಗಳಲ್ಲಿ ಕೆಲವು ನಿಮ್ನವಾದ ಸಮುದ್ರದ ಕೆಳಗಿರತಕ್ಕ ಭಾಗಗಳು ಎಂಟು ಮೈಲಿಗಳ ಆಳವುಳ್ಳದ್ದಾಗಿರುವುದು. ಕೆಲವು ಪರ್ವತಾಗ್ರಗಳು ಐದು ಮೈಲಿಗಳಷ್ಟು ಎತ್ತರವುಳ್ಳವುಗಳಾಗಿರುವುವು. ಈ ಪರ್ವತಗಳೂ, ಕಣಿವೆಗಳೂ, ಮೈದಾನಗಳೂ ಇವುಗಳೆಲ್ಲಾ ಆಯಾಯಾ ಪ್ರಾಂತ್ಯಗಳ ಶೀತೋಷ್ಣಕ್ಕೂ, ಗಾಳಿಗಳಿಗೂ ಮಳೆಗಳಿಗೂ, ನದಿಗಳೇ ಮೊದಲಾದ ಜಲಾಶಯಗಳಿಗೂ ಕಾರಣವಾಗಿರುವುವು. ಪರ್ವತಗಳೆಂದರೆ, ಬಹಳ ಎತ್ತರವಾಗಿ ಇರುವ ಭೂಭಾಗವೆಂದು ಹೇಳಬಹುದು. ಕೆಲವು ಪ್ರದೇಶಗಳಲ್ಲಿ ಮೈದಾನದಲ್ಲಿ ಬಹಳ ಉನ್ನತವಾದ ಪರ್ವತಗಳು ಕಾಣುವುವು. ಇನ್ನೂ ಕೆಲವು ಪ್ರದೇಶಗಳಲ್ಲಿ ಸಮುದ್ರದಿಂದ ಒಂದೇ ಒಂದು ಬಂಡೆಯು ಅತ್ಯಂತ ಉನ್ನತವಾಗಿ ಕಾಣುವುವು. ಈ ರೀತಿಯಲ್ಲಿ ಕಾಣತಕ್ಕವುಗಳಲ್ಲಿ ಕೆಲವು ಅಗ್ನಿಪರ್ವತಗಳಾಗಿರುವುವು. ಎಟ್ನಾ, ವಿಸೂವಿಯಸ್, ಮತ್ತು ಟೆನರೀಫ್ ಎಂಬ ಪರ್ವತಗಳು ಇಂತಾವುಗಳು. ಅನೇಕ ಪ್ರಾಂತ್ಯಗಳಲ್ಲಿ ಪರ್ವತಗಳೂ ಬಹಳ ವಿಸ್ತಾರವಾಗಿರುತ್ತವೆ. ಒಂದು ಪರ್ವತದಮೇಲೆ ಮತ್ತೊಂದು ಪರ್ವತವಿರುವುದುಂಟು. ಒಂದು ಪರ್ವತಕ್ಕೆ ಮತ್ತೊಂದು ಪರ್ವತವು ಸೇರಿಕೊಂಡಿರುವುದುಂಟು. ಈ ಪರ್ವತಗಳ ಮಧ್ಯೆ ಭಾರಿ ಹಳ್ಳಗಳಿರುವುದುಂಟು. ಹೀಗೆ ಅನೇಕ ಪರ್ವತಗಳು ಒಂದಕ್ಕೊಂದು ಸೇರಿಕೊಂಡಿದ್ದರೆ ಅವುಗಳಿಗೆ ಪರ್ವತದ ಸಾಲೆಂದು ಹೇಳುವರು. ಕೆಲವು ಪರ್ವತ ಸಾಲುಗಳು ಒಂದರ ಮಗ್ಗಲಲ್ಲಿ ಒಂದಿರುವುದುಂಟು. ಯೂರೋಪ್ ಖಂಡದಲ್ಲಿ ಅಲ್ಪ್ಸೆಂಬ ಪರ್ವತಗಳ ರಾಶಿಯ ವಿಷಯವು ಅನೇಕರಿಗೆ ತಿಳಿದಿರಬಹುದು. ಉತ್ತರದಿಕ್ಕಿನಿಂದ ಈ ಪರ್ವತದ ಸಮೀಪಕ್ಕೆ ಬರತಕ್ಕವರಿಗೆ ಈ ಪರ್ವತರಾಶಿಯು ಒಂದಾವೃತ್ತಿ ಕಾಣುವುದಿಲ್ಲ. ಫ್ರಾನ್ಸ್ ಮತ್ತು ಜರ್ಮನಿ ದೇಶಗಳ ಮೈದಾನಗಳಿಂದ ಜೂರಾ ಡಿಸ್ಟ್ರಿಕ್ಟಿಗೆ ಹೋಗುವಷ್ಟರಲ್ಲಿ ಗುಡ್ಡಗಳೂ, ಪಳ್ಳಗಳೂ ಕ್ರಮಕ್ರಮವಾಗಿ

ದೃಷ್ಟಿಪಥಕ್ಕೆ ಬೀಳುವುವು. ಹಳ್ಳಗಳಲ್ಲಿ ಚಿತ್ರವಿಚಿತ್ರವಾದ ಗಿಡಗಳೂ, ಮತ್ತು ಮರಗಳೂ ಬಹಳ ಕೋಮಲವಾಗಿ ಬೆಳೆದಿರುವುವು. ಬೆಟ್ಟಗಳ ಮಧ್ಯಭಾಗದಲ್ಲಿಯೂ, ತಪ್ಪಲಲ್ಲಿಯೂ ಬಹಳ ಉನ್ನತವಾದ ಮರಗಳು ಇರುವುವು. ಶಿಖರಗಳಲ್ಲಿಯೂ ಕೂಡ ಮರಗಳು ಇರುವುವು. ಆದರೆ ತಪ್ಪಲುಗಳಲ್ಲಿಯೂ ಕಣಿವೆಗಳಲ್ಲಿಯೂ ಇರುವಂತೆ ನಿಬಿಡವಾಗಿ ಪರ್ವತಾಗ್ರಗಳಿರುವುದಿಲ್ಲ. ಪರ್ವತಶಿಖರಗಳು ಕಲಶದೊಡನೆ ಮಿಳ್ತವಾಗಿರುವಂತೆ ಕಾಣುವುವು. ಆ ಅಗ್ರಭಾಗದಲ್ಲಿ ಹಿಮವು ತುಂಬಿರುವುದು. ಮೇಘವೂ, ಹಿಮವೂ, ಎರಡೂ ಒಂದೇ ವಿದವಾಗಿ ಕಾಣುವುದರಿಂದ ಪರ್ವತಾಗ್ರಕ್ಕೂ ಆಕಾಶಕ್ಕೂ ಪರಸ್ಪರ ಸಂಬಂಧವಿರುವಂತೆ ಕಾಣುವುದು. ಸವಿಾಪಕ್ಕೆ ಹೋಗಿ ನೋಡಿದರೆ ಒಂದು ಶಿಖರದ ಮೇಲೆ ಮತ್ತೊಂದು ಶಿಖರವೂ, ಕಲ್ಲುಗಳೂ, ಬಂಡೆಗಳೂ, ಮೊದಲಾದವುಗಳ ಗುಂಪುಗಳು ಕಾಣುವುವು. ಈ ಪರ್ವತವನ್ನೇರಿ ಎಲ್ಲಾ ದಿಕ್ಕುಗಳನ್ನು ನೋಡಿದರೆ ಅತ್ಯಂತ ಮನೋಹರವಾದ ಮೈದಾನಗಳೂ, ಹುಲ್ಲುಗಾವಲುಗಳೂ, ಪೈರುಗಳಿಂದ ಪರಿಪೂರ್ಣವಾದ ಫಲಗಳೂ, ಸ್ವಚ್ಛೋದಕವುಳ್ಳ ಸರೋವರಗಳೂ, ಕತ್ತಲೆಗೆ ತೌರುಮನೆಗಳಾದ ಅರಣ್ಯಗಳೂ, ಹುಲ್ಲಿನಿಂದ ಮುಚ್ಚಲ್ಪಟ್ಟ ನಿಮ್ನೋನ್ನತ ಪ್ರದೇಶಗಳೂ, ಎಲ್ಲಾ ದಿಕ್ಕುಗಳಲ್ಲಿಯೂ ನೋಡಶಕ್ಯವರಮನಸ್ಸಿಗೂ, ಕಣ್ಣುಗಳಿಗೂ ಆನಂದವನ್ನುಂಟುಮಾಡುವುವು. ಅಲ್ಲಿಂದ ಪರ್ವತದ ಮೇಲುಭಾಗವನ್ನು ನೋಡಿದರೆ ಪರ್ವತಕ್ಕೆ ಅಗ್ರಭಾಗವೇ ಇಲ್ಲವೆಂಬದಾಗಿಯೂ, ಅದು ಆಕಾಶದೊಡನೆ ಐಕ್ಯವಾಗಿರುವುದೆಂಬದಾಗಿಯೂ ತೋರುವುದು. ಕಣಿವೆಯಲ್ಲಿ ನಿಂತು ನೋಡುವಾಗ್ಯೆ ಈ ಪರ್ವತಗಳ ಮಧ್ಯಭಾಗವೂ ಕೂಡ ದೃಷ್ಟಿಪಥಕ್ಕೆ ಬೀಳುವುದಿಲ್ಲ. ಅದೂಕೂಡ ಆಕಾಶದಲ್ಲಿ ಶೇರಿಹೋಗಿರುವಂತೆ ಕಾಣುವುದು. ಮೇಲಕ್ಕೆಹೋದಷಾಗೆಲ್ಲಾ ಶಿಖರಗಳು ರಜತಮಯವಾಗಿರುವಂತೆ ತೋರುವುದಲ್ಲದೆ ಮೇಘಗಳು ನಿಬ್ಬಡವಾಗಿರುವಾಗ ಅವುಗಳೊಡನೆ ಸೇರಿಕೊಂಡಿರುವಂತೆಯೂ ವಿರಳವಾಗಿರುವಾಗ ಪ್ರತ್ಯೇಕವಾಗಿರುವಂತೆಯೂ ಕಾಣುವುದು. ಮೇಘಗಳ ಜಲಕಣಗಳೂ ಶಿಲಾವಸ್ಥೆಯನ್ನು ಹೊಂದಿ ಪರ್ವತಾಗ್ರಗಳ ಮೇಲೆ ಅವಿಚ್ಛಿನ್ನವಾಗಿ ಬೀಳುವುದನ್ನು ನೋಡಿದರೆ ಮೇಘರೂಪವಾದ ಆಲಿಕಲ್ಲುಗಳ ವೃಷ್ಟಿಯೂ ಆಗುವುದೋ ಏನೋ ಎಂಬಂತೆ ತೋರುವುದು.

ಆ ಕಾಲದಲ್ಲಿ ಗಾಳಿಯು ಬಲವಾಗಿಲ್ಲದೆ ಇದ್ದರೆ ಈ ವೃಷ್ಟಿಯ ದರ್ಶನವು ಬಹಳ ಮನೋಹರವಾಗಿರುವುದು. ಈ ಪರ್ವತಾಗ್ರಗಳಲ್ಲಿ ಶಿಲಾವಸ್ಥೆಯನ್ನು

ಹೊಂದಿದ ಹಿಮಗಡ್ಡೆಗಳು ಉರುಳುವ ಕಾಲದಲ್ಲಿ ಮಾತ್ರ ಶಬ್ದವು ಕಿವಿಗೆ ಕೇಳು ವುದು. ಇತರ ಕಾಲದಲ್ಲಿ ಆ ಪ್ರಾಂತದಲ್ಲಿ ಯಾವಶಬ್ದವೂ ಕೇಳುವುದಿಲ್ಲ. ಗಿರಿ ನದಿಗಳ ಶಬ್ದವು ಪರ್ವತದ ಮಧ್ಯಭಾಗದಲ್ಲಿಯೂ ಕೆಳಭಾಗದಲ್ಲಿಯೂ ಕೇಳುವುದೇ ಹೊರ್ತು ಪರ್ವತದ ಮೇಲುಭಾಗದಲ್ಲಿ ನಿಂತವರಿಗೆ ಈ ಶಬ್ದವು ಕೇಳಿಸುವುದಿಲ್ಲ. ಈ ಪರ್ವತಾಗ್ರಗಳಲ್ಲಿ ಪ್ರಾಯಕವಾಗಿ ಯಾವಾಗಲೂ ಮೇಘಗಳು ಇರುವುವು. ಒಂದೊಂದು ಕಾಲದಲ್ಲಿ ಅನೇಕ ವಾರಗಳವರೆಗೂ ಮುಂಜುತುಂಬಿರುವುದು. ಆಕಾಶವು ದೃಷ್ಟಿಗೆ ಬೀಳುವುದೇ ಇಲ್ಲ. ಈ ಪರ್ವತಗಳಲ್ಲಿ ಅತ್ಯಂತ ಉನ್ನತವಾದ ಶಿಖರಗಳಿಗೆ ಏರಿದರೆ ಅಲ್ಲಿ ಬಿಸಲು ಕಾಣುವುದು. ಮೇಘಗಳು ಒಂದೊಂದು ವೇಳೆ ಅದೃಶ್ಯವಾಗುವುವು. ಆಕಾಶವು ನೀಲಿಯಾಗಿ ಕಾಣುವುದು, ಮೇಘಗಳು ಕೆಳಭಾಗಗಳಲ್ಲಿ ಕಾಣುವುವು. ಮಳೆ, ಗುಡುಗು, ಮಿಂಚು, ಶಿಡಿಲು, ವೃಷ್ಟಿ ಮೊದಲಾದವುಗಳೆಲ್ಲಾ ಕೆಳಭಾಗದಲ್ಲಿ ಕಾಣುವುವು. ಗಿರಿನದಿಗಳು ಹರಿಯುವುದು ಕಾಣಿಸುವುದು. ಸ್ವಿಡ್ಜರ್ಲೆಂಡ್ ಸಮಿಾಪದಲ್ಲಿರತಕ್ಕ ಹೊಲಗಳೂ, ತೋಟಗಳೂ, ಫಲವೃಕ್ಷಗಳೂ, ದ್ರಾಕ್ಷೆ ಜಪ್ಪರಗಳೂ, ಪೈನ್ ವೃಕ್ಷಗಳೂ ಇವುಗಳೆಲ್ಲಾ ಪರ್ವತದ ತಪ್ಪಲಿಂದ ಮೇಲೆ 9000 ಅಡಿಗಳವರೆಗೂ ಕಣ್ಣಿಗೂ ಮನಸ್ಸಿಗೂ ಆನಂದವನ್ನುಂಟು ಮಾಡುತ್ತಲಿರುವುವು. 9000 ಅಡಿಗಳ ಮೇಲೆ ಚಳಿಯು ಬಹಳ ಜೋರಾಗಿ ಇರುವುದು. ಸನ್ಯಾದಿಗಳು ವಿರಳವಾಗುವುವು ಸಮಶೀತೋಷ್ಣ ವಲಯದ ಗಿಡಗಳೂ ಶೀತವಲಯದ ಗಿಡಗಳೂ ಸ್ವಲ್ಪದೂರದವರೆಗೂ ಕಾಣುವುವು. ಅದರಿಂದ ಮೇಲಕ್ಕೆ ಹೋದರೆ ಕಲ್ಲು, ಮಣ್ಣು, ಹಿಮ, ಇವುಗಳು ವಿನಾ ಇನ್ನಾವುವೂ ಕಾಣುವುದಿಲ್ಲ. ಪ್ರತಿಯೊಂದು ಪರ್ವತಶ್ರೇಣಿಯು ಸಮಿಾಪದಲ್ಲಿಯೂ ಕಣುವೆಗಳು ಇರುವುವು. ಈ ಕಣುವೆಗಳ ಉಭಯ ಪಾರ್ಶ್ವದಲ್ಲಿಯೂ ಪರ್ವತಗಳಿರುವುವು. ಈ ಕಣುವೆಗಳಲ್ಲಿ ರೈನ್, ರೋನ್ ಮೊದಲಾದ ನದಿಗಳು ಹರಿಯುವುವು. ಇವುಗಳಲ್ಲಿ ಅನೇಕ ಘಾಟಿಗಳಿರುವುವು. ಈ ಪರ್ವತಗಳಲ್ಲಿ ಬಹಳ ಉನ್ನತವಾದ ಶಿಖರಗಳಿರುವುವು. ಅವುಗಳಲ್ಲಿ ಮುಖ್ಯವಾದವುಗಳು ಮಾಂಟ್ ಬ್ಲಾಂಗ್ ಮ್ಯಾಟರ್‌ಹಾರ್ನ್, ಮೌಂಟ್‌ರೋಜಾ, ಸೆಂಟ್‌ಗಾಥಾರ್ಡ್ ಇವೇ ಮುಖ್ಯವಾದವುಗಳು. ಈ ಪರ್ವತಶ್ರೇಣಿಗಳು ಪ್ರಾಯಕವಾಗಿ ಪಶ್ಚಿಮದಿಂದ ಪೂರ್ವದಿಕ್ಕಿಗೆ ಚಾಚಿಕೊಂಡಿರುವುದು. ಆದರೆ ಅಮೆರಿಕಾ ಖಂಡದಲ್ಲಿ ಈ ಪರ್ವತಶ್ರೇಣಿಗಳ ನಾಲು ದಕ್ಷಿಣೋತ್ತರವಾಗಿ ಚಾಚಿಕೊಂಡಿರುವುದು.

ಯೂರೋಪಿನ ಇತರ ಪ್ರಾಣಿಗಳು.

ಇದುವರಿಗೂ ಯೂರೋಪ್ ಖಂಡದ ನಿವಾಸಿಗಳ ವೃತ್ತಾಂತವನ್ನು ತಿಳಿಸಿದು ದಾಯಿತು. ಈಗ ಅಲ್ಲಿರುವ ಮೃಗಾದಿಗಳನ್ನು ವಿವರಿಸಲ್ಪಡುವುವು.

ಮಂಗಗಳ ಜಾತಿಯಲ್ಲಿ ಬಾರ್ಬರಿ ಎಂಬ ಬಗೆಯ ಮಂಗಗಳು ಯೂರೋಪಿನಲ್ಲಿ ಸಿಕ್ಕುವುವು. ಇವು ಜಿಬ್ರಾಲ್ಟರ್ ಬಂಡೆಯ ಮೇಲೆ ವಿಶೇಷವಾಗಿ ವಾಸಮಾಡುವುವು. ಬಂಡೆಗಳನ್ನು ಕಂಡರೆ ಇವಕ್ಕೆ ತುಂಬಾ ಇಷ್ಟ. ಸಾಮಾನ್ಯವಾಗಿ ಬಂಡೆಗಳ ಸವಿಾಪದಲ್ಲಿರುವ ವೃಕ್ಷಗಳ ಮೇಲೆ ಇವು ವಾಸಿಸುತ್ತಿರುವುವು. ಈ ಕೋತಿಗಳು ಆಕಾರದಲ್ಲಿ ನರಿಯಷ್ಟು ದೊಡ್ಡದಾಗಿರುವುವು. ನಾಲ್ಕು ಪಾದಗಳನ್ನೂರಿ ಚಲಿಸುವುವು. ಪೃಷ್ಠವನ್ನೂರಿ ಕೂತುಕೊಳ್ಳುವುವು. ಇವುಗಳ ಬಾಲಗಳು ಮೋಟಾಗಿರುವುವು. ಆಂಗ್ಲೇಯರು ಸ್ಪ್ಯಾನೀಯರಿಂದ ಜಿಬ್ರಾಲ್ಟರ್ ಕೋಟೆಯನ್ನು ಗೆದ್ದಾಗ ಬಾರ್ಬರಿ ಮಂಗಗಳು ರಾತ್ರಿವೇಳೆಯಲ್ಲಿ ಆ ಕೋಟೆಗೆ ಬಂದು ದಾಂದಲೆಹಾಕುತ್ತಿದ್ದುವು. ಇವನ್ನು ಕಂಡು ಇಂಗ್ಲಿಷ್ ಕಾವಲುಗಾರರು ಹೆದರಿಕೊಳ್ಳುತ್ತಿದ್ದರು. ಈ ಮಂಗಗಳಿಂದ ಇಂಗ್ಲೀಷರಿಗೆ ಬಹು ಪ್ರಯೋಜನವಾಯಿತು. ರಾತ್ರಿಯಲ್ಲಿ ಸ್ಪ್ಯಾನೀಯರು ರಹಸ್ಯವಾಗಿ ಇಂಗ್ಲಿಷರ ಮೇಲೆ ಬೀಳಲು ಪ್ರಯತ್ನಿಸಿದಾಗ ಈ ಕೋತಿಗಳ ಗದ್ದಲದಿಂದ ಇಂಗ್ಲಿಷರಿಗೆ ಎಚ್ಚರವಾಗಿ ಅವರು ಶತ್ರುಗಳನ್ನು ಹಿಮ್ಮೆಟ್ಟಿಸಲಿಕ್ಕೆ ಸಮರ್ಥರಾದರು.

ಯೂರೋಪಿನಲ್ಲಿ ಕಾಡುಬೆಕ್ಕುಗಳೆಂತಲೂ, ಊರು ಬೆಕ್ಕುಗಳೆಂತಲೂ ಎರಡು ಬಗೆಯ ಬೆಕ್ಕುಗಳಿರುವುವು. ಕಾಡುಬೆಕ್ಕುಗಳು ರಷ್ಯ, ಜರ್ಮನಿ, ಹಂಗೇರಿ ದೇಶಗಳ ಅಡವಿಗಳಲ್ಲಿ ವಿಶೇಷವಾಗಿ ವಾಸಮಾಡುತ್ತಿರುವುವು. ಇಂಗ್ಲೆಂಡ್ ಸ್ಕಾಟ್ಲೆಂಡ್ ಐರ್ಲೆಂಡ್ ದೇಶಗಳಲ್ಲಿ ಸ್ವಲ್ಪವಾಗಿರುವುವು. ಇವು ಬಹು ಹಾವಳಿ ಮಾಡುವ ಸ್ವಭಾವವುಳ್ಳವು. ಇಲಿಗಳನ್ನೂ ಸಣ್ಣ ಪಕ್ಷಿಗಳನ್ನೂ ಹಿಡಿದು ತಿನ್ನುವುವು. ತಾವು ತಿನ್ನದೆ ಇದ್ದಾಗ್ಗೂ ಅನೇಕ ಪ್ರಾಣಿಗಳನ್ನು ನಿಷ್ಕಾರಣವಾಗಿ ಕೊಂದುಹಾಕುವುವು. ಮಧ್ಯ ಮತ್ತು ಉತ್ತರ ಪ್ರದೇಶಗಳಲ್ಲಿ ಲಿಂಕ್ಸ್ ಎಂಬ ಮತ್ತೊಂದು ಬಗೆಯ ಬೆಕ್ಕುಗಳಿರುವುವು. ಇವು ಕಾಡು ಬೆಕ್ಕುಗಳಿಗಿಂತ ಆಕಾರದಲ್ಲಿ ದೊಡ್ಡವು. ಹೆಚ್ಚು ಹಾವಳಿಯನ್ನು ಮಾಡುವುದಿಲ್ಲ. ರಷ್ಯಾದೇಶದಲ್ಲಿ ಇವಕ್ಕೆ ತುಂಬಾ ಇಷ್ಟ. ಸದ್ದಿಲ್ಲದೆ

ಕಾಣದಹಾಗೆ ಒಂದು ಘಕ್ಕನೆ ಹಾರಿ ಪಕ್ಷಿ ಮುಂತಾದುವುಗಳ ಕತ್ತನ್ನು ಮುರಿದು ರಕ್ತವನ್ನು ಕುಡಿಯುವುವು.

ಯೂರೋಪಿನಲ್ಲಿ ನಾನಾಜಾತಿಯ ನಾಯಿಗಳಿರುವುವು. ಇವು ಮನುಷ್ಯರಿಗೆ ಬಹು ಪ್ರಯೋಜನಕಾರಿಯಾದುವು. ಮನೆ ಕುರಿದನಗಳನ್ನು ಕಾಯುವುವು. ವ್ಯಗ ಬೇಟೆಯಲ್ಲಿ ಸಹಾಯ ಮಾಡುವುವು. ಅತಿ ಪುರಾತನ ಕಾಲದ ಯೂರೋಪ್ ನಿವಾಸಿಗಳು ನಾಯಿಗಳನ್ನು ಸಾಕುತ್ತಿದ್ದರೆಂದು ತೋರುತ್ತದೆ. ಭೂಮಿಯನ್ನಗಿದರೆ ಪುರಾತನರ ಎಲುಬುಗಳೊಂದಿಗೆ ನಾಯಿಗಳ ಎಲುಬುಗಳೂ ದೊರೆಯುತ್ತವೆ. ಪುರಾತನರು ನಾಯಿಗಳನ್ನು ದೇವತೆಗಳಿಗೆ ಬಲಿ ಕೊಡುತ್ತಿದ್ದರೆಂದು ಗೊತ್ತಾಗಿದೆ. ಪೂರ್ವಕಾಲದ ಗ್ರೀಕರೂ ಮತ್ತು ರೋಮನರೂ ನಾಯಿಗಳನ್ನು ತಿನ್ನುತ್ತಿದ್ದರಂತೆ. ನರಿಗಳೂ ತೋಳಗಳೂ ಯೂರೋಪಿನ ಅಡವಿಗಳಲ್ಲಿ ವಾಸವಾಗಿರುವುವು.

ಈ ಭೂಖಂಡದಲ್ಲಿ ಎರಡು ಬಗೆಯ ಕರಡಿಗಳು ಸಿಕ್ಕುವುವು. ಒಂದನೆಯದು ಕಂದು ಬಣ್ಣದ ಕರಡಿ. ಎರಡನೆಯದು ಜಿಳಿಯ ಕರಡಿ. ಕಂದುಕರಡಿಯು ಸುಮಾರು ೮ ಅಡಿ ಉದ್ದವಾಗಿರುವುದು. ಹಣ್ಣುಹಂಪಲು ಕಂದಮೂಲಗಳನ್ನು ತಿಂದು ಜೀವಿಸುವುದು. ಜೇನುತುಪ್ಪವನ್ನು ಕುಡಿಯಲು ಇದಕ್ಕೆ ತುಂಬಾ ಇಷ್ಟ. ಇರುವೆಗಳನ್ನೂ ಇದು ಭಕ್ಷಿಸುವುದು. ಕೆಲವು ವೇಳೆಗಳಲ್ಲಿ ಸಣ್ಣ ಮೃಗಗಳನ್ನು ಹಿಡಿದು ತಿನ್ನುವುದು. ಪೂರ್ವದಲ್ಲಿ ಯೂರೋಪಿನ ಜನರು ಕರಡಿಗಳಿಗೂ ನಾಯಿಗಳಿಗೂ ಜಗಳಕ್ಕೆ ಬಿಟ್ಟು ವಿನೋದವನ್ನು ನೋಡುತ್ತಿದ್ದರು. ಇದರಿಂದ ಕರಡಿಗಳಿಗೆ ತುಂಬಾ ಹಿಂಸೆಯಾಗಿ ಪ್ರಾಣ ಬಿಡುತ್ತಿದ್ದುವು. ಹೀಗೆ ಮಾಡುವುದು ಶುದ್ಧ ಅನ್ಯಾಯವೆಂದು ತಿಳಿದು ಈಗಿನವರು ಇಂಥಾ ಕೃತ್ಯವನ್ನು ಮಾಡುವುದಿಲ್ಲ. ಬಿಳಿಕರಡಿಗಳು ಉತ್ತರದಲ್ಲಿ ಶೀತಪ್ರದೇಶಗಳಲ್ಲಿ ವಾಸವಾಗಿರುವುವು. ಇವು ಬಲವಾದ ಪ್ರಾಣಿಗಳು. ಸುಮಾರು ೨ ಅಡಿ ಉದ್ದವಾಗಿರುವುವು. ತಿಮಿಂಗಿಲ ಸೀಲ್ ಮುಂತಾದ ಮೃಗಗಳನ್ನು ತಿಂದು ಜೀವಿಸುವುವು. ಇವುಗಳ ಅಂಗಾಲುಗಳಲ್ಲಿ ಕೂದಲು ಬೆಳೆದಿರುವುದರಿಂದ, ಮಂಜಿನ ಗಡ್ಡೆಯಮೇಲೆ ಜಾರಿಬೀಳದೆ ಸುಖವಾಗಿ ಚಲಿಸುವುವು. (ಸಶೇಷ)

ಸ. ಗ.

ಮೈಸೂರು ಗೆಜಿಟ್ಟು ಸಂಗ್ರಹ.

———:o:———

1905 ನೆಯ ಸಾಲಿನ III ನೆಯ ನಂಬರ್ ಕೋ ಆಪರೇಟಿವ್ ಸೊಸೈಟಿ ಕಾನೂನಿನ ನಿಯಮಗಳನ್ನು ವಿಶದಪಡಿಸುವ ಮೆಮೋರಾಂಡಂ.

ಕಾನೂನಿನ ಏರ್ಪಾಟು.

"ಸಂಹತಿಃ ಕಾರ್ಯಸಾಧಿಕಾ" ಎಂಬಂತೆ, ಒಗ್ಗಟ್ಟಿನಿಂದ ಎಲ್ಲಾ ಕಾರ್ಯವು ನೆರವೇರುವುದು. ಹಾಗೆ ಜನಗಳು ಒಗ್ಗಟ್ಟಾಗಿ ಸೇರುವ ಸಂಘಗಳಿಗೆ ಸೊಸೈಟಿಗಳೆಂದು ಹೆಸರು. ಅಂತಹ ಜನರು ಪರಸ್ಪರ ಸಹಾಯದಿಂದ, ತಮ್ಮೆಲ್ಲರಿಗೂ ಪ್ರಯೋಜನವಾಗುವ ಕಾರ್ಯಗಳನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಸ್ಥಾಪಿಸುವ ಸಂಘಗಳಿಗೆ, ಕೋ ಆಪರೇಟಿವ್ ಸೊಸೈಟಿಗಳು ಅಂದರೆ ಅನ್ಯೋನ್ಯ ಸಹಾಯ ಸಂಘಗಳೆಂದು ಹೆಸರು.

ಸೊಸೈಟಿಗಳ ಪ್ರಯೋಜನ.

ಈ ತರಹೆ ಸೊಸೈಟಿಗಳನ್ನು ಏರ್ಪಡಿಸುವುದಕ್ಕೆ ಆಧಾರವಾಗಿ, ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರವರ ಸರ್ಕಾರದವರು, 1905 ನೆಯ ಸಾಲಿನ III ನೆಯ ನಂಬರ್ ಕೋ ಆಪರೇಟಿವ್ ಸೊಸೈಟಿಯ ಕಾನೂನನ್ನು ಏರ್ಪಡಿಸಿರುವರು.

ಸದರಿ ಕಾನೂನಿನ ವಿಷಯಕವಾದ ಕೆಲವು ಪ್ರಯೋಜನಾಂಶಗಳನ್ನು, ದಿವಾನ್ ಸಾಹೇಬರವರು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ, ತಾವು ಮಾಡಿದ ಉಪನ್ಯಾಸದಲ್ಲಿ ಸೂಚಿಸಿರುವರು.

ಎಲ್ಲಾ ತರಹೆ ಜನಗಳಲ್ಲಿಯೂ, ಮಿತವ್ಯಯವನ್ನು ಮತ್ತು ಮುಂಜಾಗರೂಕತೆಯನ್ನು ನೆಲೆಗೊಳಿಸಿ, ಅನ್ಯೋನ್ಯ ಸಹಾಯದಿಂದ ಅವುಗಳನ್ನು ಸಫಲಗೊಳಿಸಬೇಕೆಂಬುದೇ ಕಾನೂನಿನ ಮುಖ್ಯೋದ್ದೇಶವು. ಆದರೆ, ಅನ್ಯೋನ್ಯ ಸಹಾಯವೆಂಬ ಮಾತಿನಿಂದ ಅನಿಷ್ಟವಾದ ಮನುಷ್ಯನ ಎಲ್ಲಾ ಪ್ರಯೋಜನಗಳನ್ನು ಒದಗಿಸಿಕೊಡುವ ಸಂಘಗಳೆಂದು ತಿಳಿಯಕೂಡದು. ಜನರು ತಮ್ಮ ಗೃಹಕೃತ್ಯಗಳಿಗೆ ಬೇಕಾಗುವ ಪದಾರ್ಥಗಳನ್ನು ಒಟ್ಟಾಗಿಟ್ಟುಕೊಂಡು ಹಂಚಿಕೊಳ್ಳುವುದಕ್ಕಾಗಲಿ, ಬೇಕಾದ ಪದಾರ್ಥಗಳನ್ನು ಬೆಳೆಯುವುದಕ್ಕಾಗಲಿ, ಅವಶ್ಯಕವಾದ ಸಾಮಾನುಗಳನ್ನು ತಯಾರ್ಮಾಡುವುದಕ್ಕಾಗಲಿ, ಬಂಡವಾಳದ ಹಣಕ್ಕಾಗಿ ಲೇವಾದೇವಿ ಕೆಲಸವನ್ನು ನಡೆಸುವುದಕ್ಕಾಗಲಿ ಒಗ್ಗಟ್ಟಿನಿಂದ ಕೆಲವು ನಿರ್ದಿಷ್ಟವಾದ ಪ್ರಯೋಜನಗಳಿಗಾಗಿ ಏರ್ಪಡಿಸಿಕೊಳ್ಳುವ ಸಂಘಗಳನ್ನೇ, ಕೋ ಆಪರೇಟಿವ್ ಸೊಸೈಟಿಗಳೆಂದು ತಿಳಿಯಬೇಕು.

ಅಂತಹ ಸೊಸೈಟಿಗಳ ಮೆಂಬರುಗಳಲ್ಲಿ ಮಿತವ್ಯಯವನ್ನು ಮತ್ತು ಮುಂಜಾಗರೂಕತೆಯನ್ನು ಹೆಚ್ಚಿಸುವುದು; ಮೂಲಧನವನ್ನು ವೃದ್ಧಿಗೊಳಿಸಿ, ಅದರಿಂದ ಮೆಂಬರುಗಳಿಗೆ ನಾಲ ಕೊಡುವುದು; ಮೆಂಬರುಗಳಿಗೆ ಕಚ್ಚಾ ಸಾಮಾನು, ಬೀಜ, ಗೊಬ್ಬರ ಮುಂತಾದ್ದನ್ನು ಒದಗಿಸಿಕೊಡುವುದು; ಆಹಾರಕ್ಕೆ ಬೇಕಾದ ಪದಾರ್ಥಗಳನ್ನು, ಉಡುಪಿಗೆ ಬೇಕಾದ ಬಟ್ಟೆಗಳನ್ನು, ವ್ಯವಸಾಯಕ್ಕೆ ಅವಶ್ಯಕವಾದ ಮುಟ್ಟುಗಳು, ಜಾರ್ವಾರ್ ಮೊದಲಾದವನ್ನು, ಕೈಗಾರಿಕೆ ಕಸಬಿಗೆ ಬೇಕಾದ ಸಾಮಾನುಗಳನ್ನು ಒಟ್ಟಾಗಿ ಕೊಂಡು ಮೆಂಬರುಗಳಿಗೆ ಚಿಲ್ಲರೆ ಚಿಲ್ಲರೆಯಾಗಿ ಮಾರುವುದು; ಭೂಮಿಯಲ್ಲಿ ಬೆಳೆಯುವ ಪದಾರ್ಥಗಳನ್ನು, ಕಾರ್ಖಾನೆಗಳಲ್ಲಿ ತಯಾರಾಗುವ ಸಾಮಾನುಗಳನ್ನು ಮೆಂಬರುಗಳಿಗೆ ಬಿಕರಿ ಮಾಡುವುದಲ್ಲದೇ, ಅನ್ಯೋನ್ಯ ಸಹಾಯದಿಂದ ಮೆಂಬರುಗಳಿಂದಲೇ ಸರಕುಗಳನ್ನು ತಯಾರ್ ಮಾಡಿಸುವುದು; ಅಥವಾ ಧಾನ್ಯಗಳನ್ನು ಬೆಳೆಮಾಡಿಸುವುದು; ಯಂತ್ರಗಳನ್ನು ಕೊಂಡು ಮೆಂಬರುಗಳಿಗೆಲ್ಲಾ ಉಪಯೋಗವಾಗುವಂತೆ ಮಾಡುವುದು; ಮೆಂಬರುಗಳಿಗೆ ಮನೆಗಳನ್ನು ಕಟ್ಟಿಸಿಕೊಡುವುದು; ಜವಿರ್ಾಗಳನ್ನು ಅವರಿಗೆ ತೆಗೆದುಕೊಡುವುದು; ಹೆಚ್ಚಾಗಿ ವಿವರಿಸಲೇತಕೆ: ಕೈಗೊಂಡ ಕಾರ್ಯವು ವ್ಯವಸಾಯ ಸಂಬಂಧವಾದುದ್ದೇ ಆಗಲಿ, ಕೈಗಾರಿಕೆ ಸಂಬಂಧವಾದುದ್ದೇ ಆಗಲಿ, ಅಥವಾ ಸರಕಾರದವರು ಒಪ್ಪುವ ಮತ್ಯಾವ ಕೆಲಸವೇ ಆಗಲಿ, ಅದನ್ನು ಸರಿಯಾಗಿ ಪ್ರವರ್ತಿಗೊಳಿಸಿ, ಎಲ್ಲರ ಮುತವರ್ಜಿಯಿಂದಲೂ ಅದನ್ನು ಅಭಿವೃದ್ಧಿಗೆ ತರುವುದು; ಇವುಗಳೇ ಈ ಸೊಸೈಟಿಗಳ ಮುಖ್ಯೋದ್ದೇಶಗಳು.

ಸೊಸೈಟಿಯ ಉದ್ದೇಶಗಳು. (ಕಾನೂನಿನ 3 ನೆಯ ಅಧಿಕರಣ).

ಇವುಗಳನ್ನು ಈಗ ಸ್ವಲ್ಪ ವಿಶದಪಡಿಸಬೇಕಾಗಿರುತ್ತದೆ. ಪ್ರತಿ ಮೆಂಬರು ದುಂದುಗಾರನಾಗದೆ ಮಿತವ್ಯಯವುಳ್ಳವನಾಗಿಯೂ, ಪಡಪೋಸಿಯಾಗಿರದೆ ಜಾಗರೂಕನಾಗಿಯೂ ಇರಬೇಕೆಂಬ ಅಂಶವನ್ನು ತಿಳಿಸಬೇಕಾದುದ್ದೇ ಇಲ್ಲ. ಆದರೆ, ರೈತರಲ್ಲಿಯೂ ಮತ್ತು ಇತರ ಕಸಬುದಾರರಲ್ಲಿಯೂ ಅನೇಕರು ಒಬ್ಬಂಟಿಗರಾಗಿದ್ದುಕೊಂಡು, ಕೆಲವು ಸಂದರ್ಭಗಳಲ್ಲಿ ಸಹಾಯವಿಲ್ಲದೇ ಕಷ್ಟಕ್ಕೆ ಶಿಕ್ಕಿ, ಬಹಳ ಪೇಚಾಡುತ್ತಾರಾದುದರಿಂದ, ಅವರಲ್ಲಿ ಸದರಿ ಗುಣಗಳು ಅಂದರೆ ಮಿತವ್ಯಯವು ಮುಂಜಾಗರೂಕತೆಯು ಸಹ ವಿಶೇಷವಾಗಿ ಇರಲೇಬೇಕು.

ಉದ್ದೇಶಗಳ ವಿವರಣೆ.

ಯಾವ ಕೆಲಸವನ್ನು ಮಾಡಬೇಕಾಗಲಿ, ಬಂಡವಾಳವಿರಲೇಬೇಕೆಂಬ ಸಂಗತಿಯು ಎಲ್ಲರಿಗೂ ತಿಳಿದೇ ಇದೆಯಷ್ಟೆ; ಮಸಲ, ರೈತನಿಗೆ ಸ್ವಂತ ಬಂಡವಾಳವಿಲ್ಲದೇ ಇದ್ದರೆ, ಅವನು ವ್ಯವಸಾಯಕ್ಕೆ ಬೇಕಾದ ಜವಿರ್ಾಸನ್ನು ಹೇಗೆತಾನೇ ತೆಗೆದಾನು? ಬಂದುಪೇಳಿ ಜವಿರ್ಾ ಹೇಗೆಯಾದರೂ ದೊರಕಿದಾಗ್ಯೂ ಅವನು ಅದನ್ನು

ಬೇಸಾಯ ಮಾಡುವ ಬಗೆ ಹೇಗೆ? ಅವನಿಗೆ ಸಾಲವೇನಾದರೂ ಇದ್ದರೆ ಅದನ್ನು ತೀರಿಸುವುದಕ್ಕೆ ರಹವೆಲ್ಲಿ? ಅವನು ದನಕರುಗಳನ್ನು, ಕುರಿಮರಿಗಳನ್ನು, ಬೀಜಬಿತ್ತನೆಗಳನ್ನು, ಗೋಡುಗೊಬ್ಬರಗಳನ್ನು, ಮುಟ್ಟುಕಟ್ಟುಗಳನ್ನು, ಕೊಂಡುಕೊಳ್ಳುವ ಮಾರ್ಗವು ಯಾವುದು? ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ದಾರಿ ಎಲ್ಲಿ? ಮುಂದೆ ಬೆಳೆಯುವ ಫಲವನ್ನು ಖರೀದಿಗೆ ಕೊಡುವ ಷರತ್ತಿನಮೇಲೆಯಾದರೂ ಮುಂಗಡವಾಗಿ ಹಣವನ್ನು ತೆಗೆದುಕೊಳ್ಳದೇ ಇರುವುದಕ್ಕೆ ಅದೀತೆ? ಅವನ ಸಂಸಾರದ ಖರ್ಚಿಗೆ ಹಣ ಬೇಡವೆ? ಅವನು ಕಂದಾಯವನ್ನು ಕಟ್ಟುವತಕ್ಕ ರೀತಿ ಹೇಗೆ? ಗುತ್ತಿಗೆ ಮೊದಲಾದ ಬಾಬುಗಳಿಗಾಗಿ ಜಮೀನ್ದಾರ ಮಾಲೀಕನಿಗೆ ಹಣವನ್ನು ಹೇಗೆ ತಾನು ಕೊಟ್ಟಾನು? ಚೆನ್ನಾಗಿ ಪರ್ಯಾಲೋಚಿಸಿದಲ್ಲಿ ಮೇಲೆ ತಿಳಿಸಿದಂತಹ ಅನೇಕ ಕೆಲಸಗಳಿಗೆ ಅವನು ಸಾಲ ಮಾಡದೇ ಇದ್ದರೆ ವಿಧಿಯೇ ಇಲ್ಲವೆಂದು ಗೊತ್ತಾಗುತ್ತದೆ.

ಆದರೆ ರೈತನಿಗೆ ಸುಲಭವಾಗಿ ಸಾಲ ದೊರೆಯುವುದಕ್ಕೆ ಈಗ ಅನುಕೂಲವಾದ ಯಾವ ಆಶ್ರಯವೂ ಇಲ್ಲದೆ ಇರುವುದರಿಂದಲ್ಲವೇ, ಅವನು ಸಾಲಕ್ಕಾಗಿ ದುಬಾರಿ ಬಡ್ಡಿಯನ್ನು ತೆತ್ತು, ಸಾಲ ಕೊಡಿಸುವವರಿಗೂ ಸಾಕ್ಷಿಗಾರರಿಗೂ ಸಹರುಸುಂ ಕೂಡ ಕೊಟ್ಟು ನಷ್ಟಪಡುತ್ತಲಿರುವುದು? ಈ ಕಾರಣಗಳಿಂದ ಅವನ ವರಮಾನಗಳೆಲ್ಲಾ ವ್ಯರ್ಥವಾಗಿ ಖರ್ಚಾಗುತ್ತದೆಯಾಗಿ ಕೊನೆಗೆ ಅವನಿಗೆ ನಿಜವಾಗಿ ಉಳಿಯುವುದು ಬಹಳ ಕಡಮೆ. ಇದರಿಂದಲ್ಲವೇ ಅವನ ಉಹಸ್ಯಹನಿಕ ಕಾಲಕ್ಷೇಪವು ಎಂದಿಗೂ ಕೊನೆಗಾಣದಂತೆ ಆಗಿರುವುದು? ಇದಕ್ಕೆ ಪ್ರತೀಕಾರವನ್ನು ಕಲ್ಪಿಸಿದರಷ್ಟೇ. ಅಂತಹ ರೈತನು, ಮಿತವ್ಯಯಿಯಾಗಿ ಮುಂದಕ್ಕೆ ಬಂದಾನು? ಅದುದರಿಂದಲೇ, ಈಗ ಸೊಸೈಟಿಗಳನ್ನು ಏರ್ಪಡಿಸಲು ಪ್ರಯತ್ನಪಡುವುದು.

ಸಾಧಾರಣವಾಗಿ ರೈತನು ತನ್ನ ಕೆಲಸಗಳಿಗೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಳ್ಳುವುದಕ್ಕೆ ಸ್ವಲ್ಪದಿವಸಗಳ ಮಟ್ಟಿಗಾದರೂ ಚಿಲ್ಲರೆ ಸಾಲವನ್ನು ಮಾಡಲೇಬೇಕು. ಹಾಗೆ ಸಾಲ ದೊರಿಯದೇ ಇದ್ದರೆ ಅವನ ಕೆಲಸವೇ ಸಾಗುವುದಿಲ್ಲ. ಮೊದಲ, ರೈತನಿಗೆ ಆರಂಬಕ್ಕೆ ಎತ್ತನ್ನು ಕೊಂಡುಕೊಳ್ಳುವುದಕ್ಕೆ ಹಣ ದೊರೆಯುದೇ ಹೋದರೆ, ಆ ಸಾಲಿನಲ್ಲಿ ಬೆಳೆ ಮಾಡುವುದಕ್ಕೆ ಅವನಿಗೆ ಆಗದೇಹೋಗಬಹುದು. ಅದರಿಂದ ಅವನಿಗೆ ತುಂಬಾ ಕಷ್ಟ ಉಂಟಾಗಬಹುದು. ಹೀಗಿರುವಲ್ಲಿ ಅವನು ಕೂಪಕರ್ಮದಂತೆ ತನ್ನ ಮಟ್ಟಿಗೆ ತಾನು ಇದ್ದುಕೊಂಡು, ತನ್ನ ಕಷ್ಟಾರ್ಜಿತದಿಂದಲೇ ತನ್ನ ಆದಾಯವೆಚ್ಚಗಳನ್ನು ನಡೆಸಿಕೊಳ್ಳುತ್ತಿದ್ದಲ್ಲಿ, ಒಂದುವೇಳೆ, ಯಾತಕ್ಕಾದರೂ ಸಾಲ ಮಾಡಬೇಕಾದ ಸಂದರ್ಭವು ಅವನಿಗೆ ಒದಗಿದರೆ, ಯಾರಿಗೂ ಅವನ ಪರಿಚಯವೇ ಇಲ್ಲದ್ದರಿಂದ, ಸಾಲ ಕೊಡುವುದಕ್ಕೆ ಯಾರಿಗೆತಾನೇ ಅವನಲ್ಲಿ ಪೂರಾ ಖಾತ್ರಿ ಇದ್ದೀತು? ಒಂದುವೇಳೆ ಸಾಲಕ್ಕಾಗಿ ಅವನು ಯಾವುದನ್ನಾದರೂ ಆಧಾರ

ಮಾಡುವುದಾದರೆ, ಆ ಆಧಾರವು ಇಂಥಾದ್ದೇ ಇಷ್ಟೂರದೇ ಎಂದು ನಿಶ್ಚಯಿಸಿ ನಂಬುವುದುತಾನೇ ಹೇಗೆ? ಈ ಅನಿವಾರ್ಯಗಳು ನಿವಾರಣೆಯಾಗುವ ಬಗೆ ಹೇಗಂದರೆ; ಅಂಥಾವನು ಒಂದು ಸೊಸೈಟಿಗೆ ಮೆಂಬರಾಗಿ ಸೇರಿದರೆ, ಅವನ ಪರಿಚಯವು ಎಲ್ಲರಿಗೂ ಉಂಟಾಗುವುದರಿಂದ, ಜನರಿಗೆ ಅವನಲ್ಲಿ ಖಾತ್ರಿ ಹೆಚ್ಚುತ್ತದೆ. ಸೊಸೈಟಿಯ ಒಟ್ಟು ಖಾತ್ರಿಮೇಲೆ ಎಷ್ಟು ಹಣ ಬೇಕಾದರೂ ಸೇರಿಸಬಹುದು. ಆದರೆ ಅಷ್ಟು ಹಣವನ್ನು ಒಬ್ಬನು ಪ್ರತ್ಯೇಕವಾಗಿ ತನ್ನ ಖಾತ್ರಿ ಇಂದಲೇ ಜಮಾಯಿಸಬಲ್ಲನೇ? ಈ ಅಂಶಗಳನ್ನು ಯೋಚಿಸದೇನೆ, ಸುಲಭ ಬಡ್ಡಿಯಮೇಲೆ ಸಾಲಾತೆಗೆಯಲು ಹಣ ದೊರೆಯುವುದಿಲ್ಲವೆಂದು ಹೇಳುವುದು ಸರಿಯೇ? ಸಾಲ ಪಡೆಯುವವನ ಖಾತ್ರಿ ಸಾಲದ್ದರಿಂದ ಹಣ ದೊರೆಯುವುದಿಲ್ಲವೇ ಹೊರತು, ಸುಲಭ ಬಡ್ಡಿಗೆ ಸಾಲ ಕೊಡಲು ಹಣವೇನೋ ಬೇಕಾದಷ್ಟು ಇದ್ದೇ ಇರುತ್ತದೆ. ಇದಕ್ಕೆ ದೃಷ್ಟಾಂತವೇನೆಂದರೆ? ಈಗ ಸರ್ಕಾರದ ಸೇವಿಂಗ್ಸ್ ಬ್ಯಾಂಕಿನಲ್ಲಿ ಸುಮಾರು ಒಂದು ಕೋಟಿ ರೂ ವಾಯಿ ಇರುತ್ತದೆಯಷ್ಟೇ. ಇಷ್ಟು ಭಾರೀ ಪೊಬಳಗನ್ನು ಅಲ್ಪ ಬಡ್ಡಿಸೇಲೆ ಇಂಡಿಯಾ ಗೌರ್ನಮೆಂಟಿನ ಪತ್ರಗಳಲ್ಲಿ ಹಾಕಬೇಕು; ಇಲ್ಲವೇ ಅದು ನಿಷ್ಪ್ರಯೋಜನವಾಗಿ ಖಜಾನೆಯಲ್ಲಿ ಮೂಲುಗುತ್ತಾ ಬಿದ್ದಿರಬೇಕಾಗಿದೆ. ಸರಿಯಾದ ಖಾತ್ರಿ ಇದ್ದಲ್ಲಿ ಠೇವಣಾತಿ ಇಡುವವರು ಹಣವನ್ನು ಸರ್ಕಾರದಲ್ಲಿ ಇಡುವುದಕ್ಕೆ ಬದಲಾಗಿ ವ್ಯವಸಾಯಗಾರರಿಗೂ ಇತರ ಕಸಬುದಾರರಿಗೂ ಸುಲಭ ಬಡ್ಡಿ ಮೇಲೆ ಸಾಲವನ್ನು ಕೊಡಲೇ ಕೊಡುವರು. ಆದರೆ ಸೊಸೈಟಿಯು ಖಾತ್ರಿಯನ್ನು ತಾನೇ ಹೇಗೆ ನೆಚ್ಚುವುದೆಂದು ಕೇಳಬಹುದು. ಸೊಸೈಟಿಯು ಅಡಳಿತವು, ಕ್ರಮವಾಗಿಯೂ ಎಲ್ಲರಿಗೂ ಗೊತ್ತಾಗುವ ರೀತಿಯಲ್ಲಿಯೂ ನಡೆಯುತ್ತದೆಯಾಗಿ, ಅವು ಪ್ರತ್ಯೇಕವಾಗಿ ಯಾವ ನೊಬ್ಬನ ನಡವಳಿಕೆಗಳಿಗೂ ಸಂಬಂಧಪಡದೆ, ಸ್ವತಂತ್ರವಾಗಿರುವುದರಿಂದ, ಸೊಸೈಟಿಯು ವಿಷಯದಲ್ಲಿ ಜನಗಳಿಗೆ ಪ್ರತ್ಯೇಕವಾಗಿ ಒಬ್ಬ ಮನುಷ್ಯನಲ್ಲಿರುವುದಕ್ಕಿಂತಲೂ ಹೆಚ್ಚು ನಂಬಿಕೆಯುಂಟಾಗುತ್ತದೆ. ಆದುದರಿಂದಲೇ, ಅಂತಹ ಸೊಸೈಟಿಗಳನ್ನು ಏರ್ಪಡಿಸಲು ಅವಶ್ಯಕತೆಯುಂಟಾಗಿರುವುದು. ಆದಕಾರಣ ಈ ವಿಷಯವನ್ನು ಚೆನ್ನಾಗಿ ವಿಚಾರ ಮಾಡಬೇಕು.

ಸೊಸೈಟಿಯಿಂದುಂಟಾಗುವ ವಿಶೇಷ ಪ್ರಯೋಜನಗಳು.

ಕೋ ಆಪರೇಟಿವ್ ಸೊಸೈಟಿಗಳಿಂದ ಮೆಂಬರುಗಳಿಗೆ, ಇತರ ವಿಧವಾದ ಪ್ರಯೋಜನಗಳೂ ಉಂಟು. ಅವು ಯಾವವಂದರೆ:—

ಸದರೀ ಸೊಸೈಟಿಗಳ ಮೂಲೀಕರ್ತ, ಕಚ್ಚಾ ಪದಾರ್ಥಗಳನ್ನು, ಮತ್ತು ಗೊಬ್ಬರವನ್ನು ಕವಿಮ್ಮಾದರದ ಬೆಲೆಗೆ ಪಡೆಯಬಹುದು. ಒಬ್ಬೊಬ್ಬನು ಪ್ರತ್ಯೇಕ ಪ್ರತ್ಯೇಕವಾಗಿ ಸ್ವಲ್ಪಸ್ವಲ್ಪ ಪದಾರ್ಥಗಳನ್ನು ಕೊಂಡುಕೊಳ್ಳುವುದರಿಂದಲೂ ಅವನಿಗೆ ಪದಾರ್ಥಗಳು ಸರಿಯಾಗಿ ದೊರಿಯುವ ಸಳಗಳ ಪರಿಚಯವಿಲ್ಲದ್ದರಿಂದಲೂ, ಒಳ್ಳೆ

ಯ ತರಹೆ ಪದಾರ್ಥಗಳು ಅವನಿಗೆ ದೊರಿಯದೇ ಹೋಗಬಹುದು. ಆದರೆ, ಸೊಸೈಟಿಯ ದಾರ್ಢ್ಯದಿಂದ ಅವಲ್ ರಖಂ ಪದಾರ್ಥಗಳನ್ನು ಪಡೆಯಬಹುದು. ಅಲ್ಲದೇ ಈಗ ವೈತರಿಗೇ ಆಗಲಿ, ಇತರ ಕಸಬುದಾರರಿಗೇ ಆಗಲಿ, ಯಂತ್ರಗಳನ್ನು ಕೊಂಡುಕೊಳ್ಳುವುದಕ್ಕೆ ರಹವೂ ಇಲ್ಲ. ಯಂತ್ರಗಳ ಮೂಲಕ ನಡೆಸತಕ್ಕಷ್ಟು ಕೆಲಸವು ಅವರಲ್ಲಿ ಇಲ್ಲವೂ ಇಲ್ಲ. ಸೊಸೈಟಿಗಳು ಏರ್ಪಟ್ಟಲ್ಲಿ, ಅವು ಯಂತ್ರಗಳನ್ನು ತರಿಸಿ ಮೆಂಬರುಗಳಿಗೆ ಬಾಡಿಗೆಗೆ ಕೊಟ್ಟರೂ ಕೊಡಬಹುದು; ಅಥವಾ ಕಂತುಮೇರಿಗೆ ಮೊಬಲಗನ್ನು ತೆಗೆದುಕೊಂಡು ಖರೀದಿಗಾದರೂ ಕೊಡಬಹುದು. ಇದರಮೇಲೆ ಪ್ರತಿಯೊಬ್ಬನು ತಾನು ಬೆಳೆದ ಪದಾರ್ಥಗಳನ್ನಾಗಲಿ, ತಾನು ತಯಾರ್ ಮಾಡಿದ ಸರಕನ್ನಾಗಲಿ, ಪ್ರತ್ಯೇಕವಾಗಿ ಬಿಕ್ರಿಗೆ ಕಳುಹಿಸುವುದಕ್ಕೆ ಬದಲಾಗಿ, ಮೆಂಬರುಗಳ ಬಗೆ ಸರಕುಗಳನ್ನೆಲ್ಲಾ ರಖಂವಾರ್ ವಿಂಗಡಿಸಿ, ಮೂಟೆಗಳನ್ನು ಕಟ್ಟಿಸಿ, ಸೊಸೈಟಿಗಳ ಮೂಲಕ ಕಳುಹಿಸುವುದಾದರೆ, ಸಾಗಿಸುವ ಖರ್ಚೂ ಕಡಿಮೆಯಾಗುತ್ತದೆ. ಖರೀದಿಗೆ ಬೇಕಾದಷ್ಟು ಗಿರಾಕಿಯೂ ದೊರೆಯುತ್ತದೆ. ಇದೂ ಅಲ್ಲದೆ, ಎಂಥಾ ಪದಾರ್ಥಗಳಿಗೆ ಹೊರಗೆ ಗಿರಾಕಿ ಇರುತ್ತದೆ; ಯಾವಯಾವ ಪದಾರ್ಥಗಳನ್ನು ಯಾವಯಾವ ರೀತಿಯಲ್ಲಿ ಬೆಳೆಯಬೇಕು; ಅದನ್ನು ಯಾವ ರೀತಿಯಿಂದ ಭರ್ತಿ ಮಾಡಿ ರವಾನಿಸಬೇಕು; ವ್ಯಾಪಾರ ಮಧ್ಯರಾಷ್ಟ್ರಗಳಲ್ಲಿ ಅವುಗಳನ್ನು ಬರಮಾಡಿಕೊಂಡು, ಒಂದುಕಡೆ ಜಮಾಯಿಸಿ, ಸರಿಯಾಗಿ ಬಿಕರಿ ಮಾಡಿ, ಖರ್ಚು ಜಾತಾ ಉಳಿಯುವ ಮೊಬಲಗನ್ನು ಮಾಲೀಕರಿಗೆ ಪಾವತೀ ಮಾಡಲು ಯಾವ ಯಾವ ಏರ್ಪಾಟುಗಳನ್ನು ಮಾಡಬೇಕು, ಎಂಬ ಸಂಗತಿಗಳನ್ನು ಸೊಸೈಟಿಗಳ ಮೂಲಕ ತಿಳಿದುಕೊಳ್ಳುವುದಕ್ಕೆ ತುಂಬಾ ಅನುಕೂಲವಿರುತ್ತದೆ. ಮತ್ತು ಯಾವದಾದರೂ ಒಂದು ಸೊಸೈಟಿಯು ಸ್ಥಾಪಿತವಾಗಿ ಚೆನ್ನಾಗಿ ಅಭಿವೃದ್ಧಿಗೆ ಬಂದಮೇಲೆ, ಅದರ ಮಾರೀಫತ್ ಪೀಣ್ಯಾಗಳನ್ನು ಮಾಡಿಸಿ, ಅಲ್ಲಿ ವ್ಯವಸಾಯದ ಮುಟ್ಟುಗಳನ್ನು, ಜಾರ್ವಾರ್ ವಗೈರೆ ಸಲಕರಣಿಗಳನ್ನು ಇಡಿಸಿ, ಅದರ ಪ್ರಯೋಜನವನ್ನು ಎಲ್ಲರಿಗೂ ವ್ಯಕ್ತಪಡಿಸಬಹುದು. ಇದರಮೇಲೆ, ವ್ಯವಸಾಯ ಮತ್ತು ಕೈಗಾರಿಕೆ ಸಂಬಂಧವಾದ ವಸ್ತುಪ್ರದರ್ಶನಗಳನ್ನು ನಡೆಯಿಸಿ, ಹೆಚ್ಚು ಮುತವರ್ಜಿಯಿಂದ ಬೆಳೆದ ಪದಾರ್ಥಗಳನ್ನು ತರುವ ಜನರಿಗೂ ಬಹಳ ಪೆಹನತ್ತಿನಿಂದ ತಯಾರ್ ಮಾಡಿದ ಸಾಮಾನುಗಳನ್ನು ತರುವ ಜನರಿಗೂ ಬಹುಮಾನಗಳನ್ನು ಕೊಡಲು ಸೊಸೈಟಿಗೆ ಸಾಧ್ಯವಾಗಬಹುದು. ಈ ವಿಧಗಳಾವ ಸೊಸೈಟಿಗಳ ಪ್ರಯೋಜನಗಳನ್ನು ಸಂಕ್ಷೇಪವಾಗಿ ವಿವರಿಸುತ್ತದೆ. ಅವುಗಳಿಂದ ಮೆಂಬರುಗಳಿಗೆ ಲಾಭಕರವಾದ ಅಂಶಗಳು ಇನ್ನೂ ಅನೇಕವಿರುತ್ತದೆ. ಮುಖ್ಯವಾಗಿ ಹೇಳತಕ್ಕದ್ದೇನಂದರೆ, ಸೊಸೈಟಿಯ ಆಡಳಿತವನ್ನು ಸರಿಯಾಗಿ ನಡೆಸಿದಲ್ಲಿ, ಅದರಿಂದುಂಟಾಗುವ ಪ್ರಯೋಜನವು ಅಪಾರವಾಗಿರುವುದು.

ಈ ಸೊಸೈಟಿಗಳಿಂದ ಇಷ್ಟು ಪ್ರಯೋಜನಗಳಿದ್ದರೂ, ಜನರು ಮೈಸೂರು ದೇಶದ ವ್ಯವಸಾಯದ ಬ್ಯಾಂಕುಗಳ ಆಡಳಿತವು ಸರಿಯಾಗಿ ನಡೆಯುಲಿಲ್ಲವೆಂಬ ಕಾರಣದಿಂದ, ಅದರಂತೆಯೇ ಈ ಸೊಸೈಟಿಗಳ ಕಾರ್ಯವೂ ನಿರ್ಗಂಧಕುಸುಮದಂತೆ ನಿಷ್ಪ್ರಯೋಜನವಾಗುವುದೋ ಏನೋ ಎಂದು ಸಂಶಯ ಪಡಬಹುದು. ಆದರೆ ವ್ಯವಸಾಯದ ಬ್ಯಾಂಕುಗಳ ಆಡಳಿತವು ಕೆಟ್ಟುಹೋಗುವುದಕ್ಕೆ ಅನೇಕ ಕಾರಣಗಳಿರುತ್ತವೆ. ಅವಗಳನ್ನು ಇಲ್ಲಿ ವಿವರಿಸಬೇಕಾದ ಅವಶ್ಯಕವಿರುವುದಿಲ್ಲ. ಅಂತಹ ಪ್ರತಿಬಂಧಕ ಸಾಮಗ್ರಿಗಳಿರುವುದು ಮೈಸೂರು ದೇಶದಲ್ಲಿ ಮಾತ್ರವೇ ಅಲ್ಲ. ಇತರ ದೇಶಗಳಲ್ಲಿಯೂ ಉಂಟು. ಆದರೆ ದೇಶಾಂತರಗಳಲ್ಲಿ ಸರಿಯಾದ ರೀತಿಗಳಿಂದ ಸೊಸೈಟಿಗಳನ್ನು ಏರ್ಪಡಿಸಿದ ಬಳಿಕ ಅವುಗಳ ಕಾರ್ಯವು ಪ್ರಯೋಜನಕರವಾಗಿ ಪರಿಣಮಿಸುತ್ತದೆ.

ಮೈಸೂರು ದೇಶದ ವ್ಯವಸಾಯದ ಬ್ಯಾಂಕುಗಳ ಆಡಳಿತವು ಕೆಟ್ಟುಹೋಗುವುದಕ್ಕೆ ಅನೇಕ ಕಾರಣಗಳಿರುತ್ತವೆ.

ಬ್ರಿಟಿಷ್ ಇಂಡಿಯಾ ದೇಶದಲ್ಲಿ ಕೋ ಆಪರೇಟಿವ್ ಸೊಸೈಟಿ ಕಾನೂನು ಜಾರಿಗೆ ಬಂದಮೇಲೆ, ಅನೇಕ ಸೊಸೈಟಿಗಳು ಸ್ಥಾಪಿತವಾದವು. ಅವು ಈಗ ಪ್ರಚಾರಗೊಂಡು ಅಭಿವೃದ್ಧಿಯನ್ನು ಹೊಂದುತ್ತಲಿವೆ. ಅಂತಹ ಸೊಸೈಟಿಗಳು, ಮೈಸೂರು ದೇಶದಲ್ಲಿ ಅಭಿವೃದ್ಧಿಗೆ ಬಾರದೇ ಹೋದರೆ, ಇಂತಹ ಹೊಸ ಏರ್ಪಾಟಿಗೆ ಮೈಸೂರು ದೇಶವು ಅನುಕೂಲವಾದುದಲ್ಲವೆಂದು ಹೇಳಕೂಡದು. ಯಾಕಂದರೆ;—ಮೈಸೂರು ದೇಶದಲ್ಲಿ ನಡೆಯುವ ವ್ಯವಸಾಯ ಕಾರ್ಯಗಳು ಮತ್ತು ಕೈಗಾರಿಕೇ ಕೆಲಸಗಳು, ಮದರಾಸ್ ಬೊಂಬಾಯಿ ಆಧಿಪತ್ಯಗಳ ಕೆಲವು ಭಾಗಗಳಲ್ಲಿ ನಡೆಯುವ ಸದರೀ ಕಾರ್ಯಗಳಿಗಿಂತಲೂ ಬೇರೇ ವಿಧವಾಗಿರುವುದಿಲ್ಲ.

ಕೋ ಆಪರೇಟಿವ್ ಸೊಸೈಟಿ ಏರ್ಪಾಟಿಗೆ ಮೈಸೂರು ದೇಶವು ಅನುಕೂಲವಾದುದ್ದೇ?

ಈ ದೇಶದಲ್ಲಿ ವ್ಯವಸಾಯದ ಬ್ಯಾಂಕುಗಳ ಆಡಳಿತವು, ಹಿಂಪೆ ಸರಿಯಾಗಿ ನಡೆಯಲಿಲ್ಲವೆಂಬ ಕಾರಣದಿಂದಲೇ, ಅಂತಹ ಸಂಘಗಳ ಉದ್ದೇಶವನ್ನು ಹೇಗೆಯಾದರೂ ಸಾಧಿಸಬೇಕೆಂದು ಹೆಚ್ಚು ಪ್ರೋತ್ಸಾಹಗೊಂಡು ಈಗ ಹೊಸದಾಗಿ ಪ್ರಯತ್ನ ಮಾಡುತ್ತಲಿರುವುದು. ಇಂತಹ ಪ್ರಯತ್ನಗಳಿಗೆ ಕೋ ಆಪರೇಟಿವ್ ಸೊಸೈಟಿ ಕಾನೂನಿನ ನಿಯಮಗಳು ಬಹಳ ಸಹಕಾರಿಗಳಾಗಿರುತ್ತವೆ.

ಇಂತಹ ಸೊಸೈಟಿಗಳು ದೇಶಾಂತರಗಳಲ್ಲಿ ವಿಶೇಷವಾಗಿರುತ್ತವೆ. ಬೆಲ್ಜಿಂಡಿನಲ್ಲಿ ವ್ಯವಸಾಯದ ಬ್ಯಾಂಕುಗಳು ಈಗ್ಗೆ ಕೆಲವು ವರ್ಷಗಳ ಕೆಳಗೆ ಸ್ಥಾಪಿತವಾಗಿ ಈಗ ಶತಶಃ ಹೆಚ್ಚಿ ಅಭಿವೃದ್ಧಿಗೆ ಬಂದಿರುತ್ತವೆ. ಅವುಗಳಲ್ಲಿ ಈಗ ಕೆಲವು ವ್ಯವಸಾಯ ಸಂಬಂಧವಾದುವುಗಳಾಗಿಯೂ, ಕೆಲವು ಹೈನು ಸಂಬಂಧವಾದುವುಗಳಾ

ದೇಶಾಂತರದಲ್ಲಿ ಇಂತಹ ಸೊಸೈಟಿಗಳ ಏಳಿಗೆ.

ಗಿಯೂ, ಮತ್ತು ಕೆಲವು ಲೇವಾದೇವಿಗೆ ಅನುಕೂಲವಾದ ಬ್ಯಾಂಕುಗಳಾಗಿಯೂ ಇದ್ದುಕೊಂಡು, ಜನಗಳಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಟ್ಟು, ತುಂಬಾ ಪ್ರಯೋಜನವನ್ನುಂಟುಮಾಡಿರುವುದಲ್ಲದೆ, ಜನಗಳೆಲ್ಲರೂ, ತಮ್ಮ ತಮ್ಮ ಅಂತಸ್ತುಗಳ ತಾರತಮ್ಯವನ್ನು ತಳ್ಳಿ, ಮತಭೇದಗಳನ್ನು ಬಿಟ್ಟು, ಪಂಗಡ ಪ್ರಭೇದಗಳನ್ನು ತೊಲಗಿ, ಕೇವಲ ಐಕಮತ್ಯದಿಂದ ಸ್ವಾಸ್ಥ್ಯವನ್ನು ಪಡೆದು, ಅಭಿವೃದ್ಧಿಯನ್ನು ಹೊಂದುವಂತೆ ಮಾಡಿರುತ್ತದೆ. ಸದರೀ ಸಂಘಗಳ ಪ್ರಚಾರವನ್ನು ತಿಳಿದೇ ಅಲ್ಲಿನ ಸರ್ಕಾರದಿಂದ ಒಂದು ವ್ಯವಸಾಯದ ಇಲಾಖೆಯನ್ನು ಅಲ್ಲಿ ಸ್ಥಾಪಿಸಬೇಕಾಗಿ ಬಂತು. ಇದರಂತೆಯೇ ಇತರ ದೇಶಗಳಲ್ಲಿಯೂ ಪರಸ್ಪರ ಸಹಾಯದಿಂದ ಸದರೀ ಸೊಸೈಟಿಗಳು ಅಭಿವೃದ್ಧಿಗೆ ಬಂದಿರುತ್ತವೆ. ಡೆನ್ಮಾರ್ಕ್ ದೇಶದಲ್ಲಿ ಪ್ರತಿಹಳ್ಳಿಯಲ್ಲಿಯೂ ಒಂದೊಂದು ಸೊಸೈಟಿ ಇರುತ್ತದೆ. ಫ್ರಾನ್ಸ್ ದೇಶದಲ್ಲಿಯಾದರೆ ವ್ಯವಸಾಯದ ಬ್ಯಾಂಕುಗಳು ಅಸಂಖ್ಯಾತಗಳಾಗಿವೆ. ಈ ಸಂದರ್ಭದಲ್ಲಿ ದೇಶಾಂತರದ ಸೊಸೈಟಿಗಳು ಎರಡು ವಿಧಗಳಾಗಿರುತ್ತವೆ ಎಂಬುದನ್ನು ಸ್ವಲ್ಪಮಟ್ಟಿಗೆ ತಿಳಿದಿರುವುದು ಉತ್ತಮ. ಅವುಗಳಲ್ಲಿ ರೆಯಿಫಿಸರ್ ಎಂಬುವರು ಏರ್ಪಡಿಸಿದ ರೀತಿಗಳನ್ನು ಅನುಸರಿಸಿ ಸ್ಥಾಪಿತವಾಗುವ ಸೊಸೈಟಿಗಳಿಂದ, ಗ್ರಾಮ್ಯ ಜನಗಳಿಗೆ ಅಂದರೆ ರೈತರಿಗೆ ವ್ಯವಸಾಯ ಮುಂತಾದ ಕಾರ್ಯಗಳಿಗೆ ವಿಶೇಷ ಅನುಕೂಲವುಂಟು. ಷಲ್ಟೆಜ್ ಡೀಲಟ್ ಎಂಬುವರು ಏರ್ಪಡಿಸಿದ ಮಾರ್ಗಗಳ ಮೇಲೆ ಪಟ್ಟಣಗಳಲ್ಲಿ ಸ್ಥಾಪಿತವಾಗುವ ಸೊಸೈಟಿಗಳಿಂದ ಪಟ್ಟಣಸ್ಥರಿಗೆ ಲೇವಾದೇವಿ ಮೊದಲಾದ ಕಾರ್ಯಗಳಿಗೆ ಅನುಕೂಲವುಂಟು. ಈ ಎರಡು ವಿಧವಾದ ಸೊಸೈಟಿಗಳಿಂದ ಪರಸ್ಪರವಾಗಿ ಜನಗಳಿಗೆ ಪ್ರಯೋಜನವಾಗುತ್ತಿದ್ದರೂ, ಅನೇಕರು ರೆಯಿಫಿಸರ್‌ರ ಮಾರ್ಗಗಳನ್ನೇ ಹೆಚ್ಚಾಗಿ ಕೊಂಡಾಡುವರು. ಅದು ಹೇಗಾದರೂ ಇರಲಿ. ಈ ಉಭಯ ವಿಧವಾದ ಸೊಸೈಟಿಗಳೂ ಪ್ರಚಾರಗೊಂಡು, ಈಗ ಇಂಗ್ಲೆಂಡ್, ಐರ್ಲೆಂಡ್, ಹಾಲೆಂಡ್, ಡೆನ್ಮಾರ್ಕ್, ಜರ್ಮನಿ, ಫ್ರಾನ್ಸ್, ಆಸ್ಟ್ರಿಯಾ, ಹಂಗೇರಿ, ಇಟಲಿ ಮೊದಲಾದ ಯೂರೋಪ್ ದೇಶಗಳಲ್ಲಿಯೂ, ಅಮೇರಿಕಾ ಮತ್ತು ಏಷ್ಯಾಖಂಡದ ನಾನಾ ಪ್ರದೇಶಗಳಲ್ಲಿಯೂ, ನ್ಯೂಜಿಲ್ಯಾಂಡ್ ವಿಕ್ಟೋರಿಯಾ ಮುಂತಾದ ಸ್ಥಳಗಳಲ್ಲಿಯೂ ವ್ಯಾಪಿಸಿರುತ್ತವೆ. ಇವುಗಳ ಅಡಕಿತವು, ವ್ಯವಸಾಯ, ಹೈನು, ಲೇವಾದೇವಿ, ರೆಯಿಫ್ಫೇ, ನಾವೆ, ಕೂಲಿ ಕಸಬು ಮೊದಲಾದ ವಿಷಯಕವಾಗಿ ನಡೆಯುತ್ತದೆ. ಈಗ ಪ್ರಪಂಚದಲ್ಲೆಲ್ಲಾ ಅಂತಹ ಸೊಸೈಟಿಗಳು ಒಟ್ಟು ಸುಮಾರು 60 ಲಕ್ಷಗಳಿರುತ್ತವೆ. ಇವುಗಳಿಗೆ ಸುಮಾರು 2½ ಕೋಟಿ ಜನರು ಮೆಂಬರುಗಳಾಗಿ ಸೇರಿರುತ್ತಾರೆ.

ಇದುವರೆಗೂ ಕಾನೂನಿನಲ್ಲಿ ಸಮೂಹವಾದ ಸೊಸೈಟಿಗಳ ಕೆಲವು ಉದ್ದೇಶಗಳನ್ನು ತಕ್ಕಮಟ್ಟಿಗೂ ಬೇಕಾದಷ್ಟು ಸ್ಪಷ್ಟವಾಗಿ ವಿವರಿಸಲಾಯಿತು. ಈಗ ಕೆಲವು

ಇತರ ನಿಯಮಗಳನ್ನು ವಿಶದಪಡಿಸಲಾಗುತ್ತದೆ.

ಸೊಸೈಟಿಗಳ ಅಡಳಿತದ ಕ್ರಮ.

ಒಂದು ಸೊಸೈಟಿಗೆ ಕನಿಷ್ಟಪಕ್ಷ 10 ಜನ ಮೆಂಬರುಗಳಿರಬೇಕು. ಅವರ ವಯಸ್ಸು 18 ವರುಷಗಳಿಗೆ ಮೇಲ್ಪಟ್ಟಿರಬೇಕು. ಸೊಸೈಟಿಯ ಮೆಂಬರುಗಳಲ್ಲಿ ಒಬ್ಬರಲ್ಲೊಬ್ಬರಿಗೆ ಪಾತ್ರಿ ಇರಬೇಕು. ಹಾಗೆ ನಂಬಿಕೆಯನ್ನು ಹೆಚ್ಚುಗೊಳಿಸಲು, ಮೆಂಬರುಗಳು ಸೊಸೈಟಿಯ ಅಡಳಿತಗಳಲ್ಲೆಲ್ಲಾ ಪರಸ್ಪರ ಪರಿಚಯ ಉಳ್ಳವರಾಗಿ, ತುಂಬಾ ನಿಖಾಲ್ಸಿನಿಂದ ಕೆಲಸ ಮಾಡುತ್ತಾ, ಗೌರವವನ್ನು ಪಡೆದು, ಒಬ್ಬರನ್ನೊಬ್ಬರು ಹತೋಟಿಯಲ್ಲಿಟ್ಟುಕೊಳ್ಳಬೇಕು. ಮೆಂಬರುಗಳನ್ನು ಚುನಾವಣೆಯಿಂದಲೇ ತೆಗೆದುಕೊಳ್ಳಬೇಕೆಂತಲೂ ಅವರು ಒಂದೇಪಟ್ಟಣದವರಾಗಿಯಾಗಲಿ ಒಂದೇ ಗ್ರಾಮಸ್ಥರಾಗಿಯಾಗಲಿ, ಅಥವಾ ಒಂದೇಗ್ರಾಮ ಸಮುದಾಯಕ್ಕೆ ಸೇರಿದವರಾಗಿಯಾಗಲಿ ಇರಬೇಕೆಂತಲೂ ಕೆಲವು ಸಲಹೆಗಳು, ಕಾನೂನಿನ ಏರ್ಪಾಟಿಗೆ ಪೂರ್ವದಲ್ಲಿಯೇ ಇಂಡಿಯಾಗೌರ್ನಮೆಂಟಿನವರ ಬಳಿಗೆ ಬಂದವು. ಒಂದೇ ರೆಯಿಫ್ಫೈಯು ಮಾರ್ಗದಲ್ಲಿ ಕೆಲಸ ಮಾಡುವ ಜನಗಳ ಗುಂಪಿನಂತಹ ಕೆಲವು ಪಂಗಡಗಳಲ್ಲಿ ಜನರು ಒಂದು ಕಟ್ಟನ್ನು ಮಾಡಿಕೊಂಡು ತಮ್ಮ ಪಂಗಡದವರಿಗೆಲ್ಲ ಪ್ರಯೋಜನವಾಗುವ ಏರ್ಪಾಟುಗಳನ್ನು ಒಗ್ಗಟ್ಟಾಗಿ ಮಾಡಿಕೊಂಡಿರುತ್ತಾರೆ. ಅಂಥಾವರ ವಿಷಯದಲ್ಲಿಯೂ, ಮೇಲಿನ ಸಲಹೆಯನ್ನೂ ಅನ್ವಯಿಸುವಂತೆ ಮಾಡಿ, ಅಂಥಾವರು ಎಲ್ಲಿಯೇ ಇರಲಿ ಒಂದೇಸ್ಥಳದಲ್ಲಿರಬೇಕೆಂಬ ನಿರ್ಬಂಧವನ್ನು ಕಲ್ಪಿಸದೇ ಇದ್ದಲ್ಲಿ ಉದ್ದಿಷ್ಟವಾದ ಕಾರ್ಯವು ಅನುಕೂಲವಾಗಿ ನೆರವೇರುವುದೆಂತಲೂ, ಒಂದೇ ಪಂಗಡದವರಲ್ಲಿಯಾಗಲಿ, ಒಂದೇ ಕಸಬುದಾರರಲ್ಲಿಯಾಗಲಿ, ಬಾಧಕವಿಲ್ಲದೇ ಸೊಸೈಟಿಯನ್ನು ಸ್ಥಾಪಿಸಬಹುದೆಂದು ರಿಜಿಸ್ಟ್ರಾರರವರ ಮನಸ್ಸಿಗೆ ತೃಪ್ತಿಕರವಾಗಿ ತೋರಿದರೆ, ಅದೇ ಪ್ರಕಾರ ನಡೆಸಲು ಅವರಿಗೆ ಕಾನೂನಿನ ಮೇರಿಗೆ ಅಧಿಕಾರವಿರುತ್ತದೆ ಎಂತಲೂ ಇಂಡಿಯಾಗೌರ್ನಮೆಂಟಿನವರು ಅಭಿಪ್ರಾಯಪಟ್ಟರು.

ಆದರೆ ಮೈಸೂರು ದೇಶದ ಕಾನೂನಿನಲ್ಲಿ ಅಂತಹ ನಿರ್ಬಂಧಗಳನ್ನು ಏರ್ಪಡಿಸಿರುವುದಿಲ್ಲ. ಆದಾಗ್ಯೂ, ಸೊಸೈಟಿಗೆ ಮೆಂಬರುಗಳನ್ನು ಸೇರಿಸಿಕೊಳ್ಳುವಾಗ ಮೇಲಿನ ಅಂಶಗಳಿಗೆ ನಿಗಾ ಕೊಡುವುದು ಅತ್ಯವಶ್ಯಕವು. ಮನಸ್ಸು ಬಂದಂತೆ ನಿಯಮಗಳನ್ನು ಕಲ್ಪಿಸಿ, ಹೊಸಬರನ್ನು ಮೆಂಬರುಗಳನ್ನಾಗಿ ಸೇರಿಸಿಕೊಳ್ಳಕೂಡದು. ಹಾಗೆ ಹೊಸಬನನ್ನು ಸೊಸೈಟಿಗೆ ಮೆಂಬರನ್ನಾಗಿ ತೆಗದುಕೊಳ್ಳಬೇಕಾದರೆ, ಆಕಾಲದಲ್ಲಿ ಸೊಸೈಟಿಯಲ್ಲಿ ಮೊದಲೇ ಸೇರಿದ್ದ ಮೆಂಬರುಗಳು ಒಪ್ಪಬೇಕು; ಇಲ್ಲವೇ, ಮೆಂಬರುಗಳಿಗೆ ಪ್ರತಿನಿಧಿಗಳಾಗಿ ಏರ್ಪಟ್ಟಿರುವ ಎಕ್ಜಿಕ್ಯುಟಿವ್ ಕಮ್ಮಿಟಿಯವರು ಅಂದರೆ ಕಾರ್ಯನಿರ್ವಾಹಕ ಸಭೆಯವರು ಒಪ್ಪಬೇಕೆಂಬ ನಂಗತಿಯನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕು.

ಸೊಸೈಟಿಗೆ ಇರುವ ಸಾಲವನ್ನು ತೀರಿಸಲು ಮೆಂಬರಿಗೆ ಇರತಕ್ಕ ಜವಾಬ್ದಾರಿಯೂ ಅವಧಿಗೆ ಒಳಪಟ್ಟಾದರೂ ಇರಬಹುದು, ಒಳಪಡದೆಯಾದರೂ ಇರಬಹುದು. ಒಂದುವೇಳೆ ಅಂತಹ ಜವಾಬ್ದಾರಿಯು ಅವಧಿಗೆ ಒಳಪಟ್ಟಿದ್ದಲ್ಲಿ ಅದನ್ನು ಸಾವಧಿಕ ಜವಾಬ್ದಾರಿ ಎಂತಲೂ, ಒಳಪಡದೇ ಇದ್ದಲ್ಲಿ ನಿರವಧಿಕ ಜವಾಬ್ದಾರಿ ಎಂತಲೂ ತಿಳಿಯಬೇಕು. ಸೊಸೈಟಿಯು ಸಾಲ ತೀರಿಸುವ ವಿಷಯದಲ್ಲಿ ಮೆಂಬರಿನ ಜವಾಬ್ದಾರಿಯು ನಿರವಧಿಕವಾಗಿದ್ದಾಗ ಸೊಸೈಟಿಯನ್ನು ಮುಚ್ಚಬೇಕಾಗಿಬಂದರೆ, ಮೆಂಬರು ಸೊಸೈಟಿಯು ಸಾಲ ತೀರುವವರೆಗೂ ಕಂಪ್ರಿಬ್ಯೂಷ್ಯನ್ ಮೊಬಲಗನ್ನು ಕೊಡುತ್ತಲೇ ಇರಬೇಕು. ಆದರೆ ಒಂದು ಸೊಸೈಟಿಗೆ ಇಷ್ಟೇ ಷೇರುಗಳಿರಬೇಕೆಂದು ಅವಧಿಯನ್ನು ಗೊತ್ತು ಮಾಡಿದಾಗ ಷೇರನ್ನು ಸಪೆದವನು ಆದಕ್ಕಾಗಿ ತಾನು ಕೊಡಬೇಕಾದ ಮೊಬಲಗನ್ನು ಕೊಟ್ಟ ಬಳಿಕ, ಮುಂದೆ ಇನ್ನೇನೂ ಹೆಚ್ಚಾಗಿ ಕೊಡಬೇಕಾಗಿರುವುದಿಲ್ಲ. ಯಾವ ಮೆಂಬರೇ ಆಗಲಿ, ಸೊಸೈಟಿಯನ್ನು ಬಿಟ್ಟುಬಿಟ್ಟ ಮಾತ್ರದಿಂದಲೇ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲಾರನು. ಅಂಥವನು ಸೊಸೈಟಿಯನ್ನು ಬಿಡುವಕಾಲದಲ್ಲಿ ಸೊಸೈಟಿಗೆ ಎಷ್ಟರಮಟ್ಟಿಗೆ ಸಾಲವಿರುತ್ತದೆಯೋ ಅದನ್ನು ತಾನು ಬಿಟ್ಟ ಕಾಲದಿಂದ ಮುಂದೆ ಒಂದು ವರುಷದವರೆಗೂ ತೀರಿಸುತ್ತಿರಬೇಕಾದ ಜವಾಬ್ದಾರಿಯು ಅವನಿಗೆ ಇದ್ದೇ ಇರುತ್ತದೆ. ಇಪ್ಪೇಮೇರಿಗೆ ಫೌತಿಯಾದ ಮೆಂಬರಿನ ಆಸ್ತಿಯೂ ಕೂಡ ಫೌತಿ ಕಾಲದ ಲಾಗಾಯಿತು ಮುಂದೆ ಒಂದು ವರುಷದ ಪರ್ಯಂತ ಸಾಲಕ್ಕೆ ಈಡಾಗಿರುತ್ತದೆ.

ಮೆಂಬರಿನ ಜವಾಬ್ದಾರಿ (ಕಾನೂನಿಯು 7 ನೆಯು ಅಧಿಕರಣ).

ಕೆಲವು ಮೆಂಬರುಗಳು ಇತರ ಪ್ರಯೋಜನಕ್ಕೆ ಮುಂದುಕಪಡಿಸಿ, ಸೊಸೈಟಿಯ ಷೇರುಗಳನ್ನೆಲ್ಲಾ ತಾವೇ ತೆಗೆದುಕೊಳ್ಳಬಹುದಾದ ಪ್ರಮೇಯವೂ ಸಂಭವಿಸಬಹುದು. ಆದನ್ನು ತಪ್ಪಿಸುವುದಕ್ಕಾಗಿ ಒಬ್ಬ ಮೆಂಬರಿಗೆ ಪರಮಾವಧಿ ಇಷ್ಟೇ ಷೇರುಗಳಿರಬೇಕೆಂದು ಗೊತ್ತುಮಾಡಿರುತ್ತದೆ. ಸಾಲ ತೀರಿಸುವ ಜವಾಬ್ದಾರಿಯು ಸಾವಧಿಕವಾಗಿದ್ದಲ್ಲಿ ಒಬ್ಬ ಮೆಂಬರಿಗೆ ಸೊಸೈಟಿಯ ಒಟ್ಟು ಷೇರುಗಳ ಪೈಕಿ ಐದರಲ್ಲಿ ಒಂದು ಭಾಗವಿರಬಹುದು. ಸರ್ಕಾರದಿಂದ, ಕಂತೋಕ್ತವಾದ ಮಂಜೂರಾತಿಯನ್ನು ಪಡೆದ ಹೊರತು ಅಂತಹ ಷೇರುಗಳ ಬೆಲೆಯು ಒಂದುಸಾವಿರ ರೂಪಾಯಿಗಳಿಗೆ ಮಿಗಾದಿರಕೂಡದು.

ಷೇರಿನ ಅವಧಿ (12ನೆಯು ಅಧಿಕರಣ).

ಮೆಂಬರು ತನ್ನ ಷೇರನ್ನಾಗಲಿ, ಮೂಲಧನದಲ್ಲಿ ತನಗಿರುವ ಹಕ್ಕನ್ನಾಗಲಿ ವರ್ಗಾಯಿಸುವ ವಿಷಯದಲ್ಲಿ ಏರ್ಪಡಿಸಿರುವ ನಿರ್ಬಂಧಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದದ್ದು ಅವಶ್ಯಕವು. ಒಬ್ಬ ಮೆಂಬರು ಕಡೇಪಕ್ಷ ಬಂದು ವರುಷ

ಷೇರನ್ನು ವರ್ಗಾಯಿಸು ವುದು. (14 ನೆಯ ಅಧಿಕರಣ).

ದಮಕೆಗಾದರೂ ಸೊಸೈಟಿಯಲ್ಲಿ ಷೇರನ್ನಾಗಲಿ, ಹಕ್ಕನ್ನಾಗಲಿ ಉಂಟಾಗಿದ್ದಹೊರತು ತಾನು ಅದನ್ನು ವರ್ಗಾಯಿಸಕೂಡದು. ಹಾಗೆ ವರ್ಗಾಯಿಸಲು ಅವಕಾಶ ಉಂಟಾದಾಗಲೂ, ಅದನ್ನು ಸೊಸೈಟಿಗೇ ಆಗಲಿ ಅಥವಾ ಸೊಸೈಟಿಯ ಮೆಂಬರಿಗೇ ಆಗಲಿ ವರ್ಗಾಯಿಸಬೇಕು. ಅಂತಹ ಸಂದರ್ಭದಲ್ಲಿ ಅದನ್ನು ವರ್ಗಪಡಿಯುತಕ್ಕವನ ಒಟ್ಟು ಷೇರುಗಳ ಕ್ಲುಪ್ತವಾದ ಪರಮಾವಧಿ ಷೇರುಗಳಿಗಿಂತ ಹೆಚ್ಚಾಗಿರಕೂಡದು.

ನಿರ್ಬಂಧಗಳನ್ನು ಏರ್ಪಡಿಸುವುದರ ಉದ್ದೇಶ.

ಸೊಸೈಟಿಗಳಲ್ಲಿ ಇತರ ಮೆಂಬರುಗಳಿಗಿಂತ ಹೆಚ್ಚಾದ ಹಕ್ಕನ್ನು ಪಡೆದುಕೊಳ್ಳಲು ಯಾವ ಮೆಂಬರಿಗೂ ಸಾಧ್ಯವಾಗದಂತೆಯೂ, ಸೊಸೈಟಿಯ ಸಂಬಂಧದಿಂದ ತಮಗೆ ಮಾತ್ರ ಫಾಯಿದೆಯಾಗುವ ದುರಾಲೋಚನೆಗಳನ್ನು ಯಾವ ಮೆಂಬರೂ ಮಾಡದೇ ಇರುವಂತೆಯೂ, ಯಾವ ಉದ್ದೇಶಗಳಿಗಾಗಿ ಸೊಸೈಟಿಗಳನ್ನು ಏರ್ಪಡಿಸಬೇಕೋ ಅವುಗಳಿಗೆ ವ್ಯತಿರಿಕ್ತವಾದ ಉದ್ದೇಶಗಳಿಂದ ಜನರು ಕಾನೂನಿಂದೊದಗುವ ಸೌಲಭ್ಯಗಳ ಆಧಾರದಮೇಲೆ ಬ್ಯಾಂಕುಗಳನ್ನು ಮಾಡಿ ಅದರಿಂದ ಸ್ವಪ್ರಯೋಜನವನ್ನು ಪಡೆಯಬೇಕೆಂದು ಬಯಿಸುವುದಕ್ಕೆ ಅವಕಾಶ ಆಗದಂತೆಯೂ ಮಾಡಬೇಕೆಂಬ ಉದ್ದೇಶದಿಂದಲೇ ಮೇಲೆ ಹೇಳಿದ ನಿರ್ಬಂಧಗಳನ್ನು ಏರ್ಪಡಿಸಿರುತ್ತದೆ.

ರಿಯಾಯಿತಿಗಳು.

ಈಮೇರಿಗೆ ನಡೆದುಕೊಳ್ಳುವ ಸೊಸೈಟಿಗಳಿಗೆ ಇಂಡಿಯಾ ಗೌರ್ನಮೆಂಟಿನ ಕಾನೂನಿನಲ್ಲಿ ಏರ್ಪಡಿಸಿರುವಂತೆಯೇ ನಮ್ಮ ಮೈಸೂರು ದೇಶದ ಕೋ ಆಪರೇಟಿವ್ ಸೊಸೈಟಿ ಕಾನೂನಿನಲ್ಲಿಯೂ ಕೆಲವು ರಿಯಾಯಿತಿಗಳನ್ನು ಏರ್ಪಡಿಸಿರುತ್ತದೆ. ಅವು ಯಾವವೆಂದರೆ :—

ಕಾನೂನಿನ 15 ನೆಯ ಅಧಿಕರಣ.

ಮೆಂಬರಿನಮೇಲೆ ಸಾಲಕ್ಕಾಗಿ ಕೋರ್ಟಿನವರು ಕೊಡುವ ಡಿಕ್ರೀಗಳ ಜಾರೀಗೆ, ಸೊಸೈಟಿಯಲ್ಲಿ ಸದರಿ ಮೆಂಬರಿಗೆ ಇರುವ ಹಕ್ಕು ಗುರಿಯಾಗಿರತಕ್ಕದ್ದಲ್ಲ. ಸದರಿ ಮೆಂಬರಿನ ಅಂತಹ ಹಕ್ಕಿನಮೇಲೆ ಸರಕಾರದವರಿಗೇ ಆಗಲಿ, ಅವರಿಂದ ಸಿವಿಲ್ ಪ್ರೊಸೀಜರ್ ಕೋಡಿನ 20 ನೆಯ ಅಧ್ಯಾಯದ ಮೇಲೆ ನೇಮಕವಾಗುವವರೆಗೇ ಆಗಲಿ ಅಧಿಕಾರವಿರುವುದಿಲ್ಲ.

ಯಾವ ಮೆಂಬರಿನಿಂದಲೇ ಆಗಲಿ ಸೊಸೈಟಿಗೆ ಬಾಕೀ ಬರಬೇಕಾಗಿದ್ದರೆ ಅದನ್ನು ಸೊಸೈಟಿಯಿಂದ ಮೆಂಬರಿಗೆ ಸಲ್ಲಬೇಕಾದ ಹಂಚಿಕೆ ಹಣ, ಬಹುಮಾನದ್ರವ್ಯ, ಲಾಭದ ಪಾಲುಗಳು, ಇವುಗಳಿಂದ ಕಟಾಯಿಸುವುದಕ್ಕೆ ಸೊಸೈಟಿಗೆ ಹಕ್ಕಿರು

ಕಾನೂನಿನ 20 ನೆಯ ಅಧಿಕರಣ.

ತ್ತದೆ. ಇವು ಮುಖ್ಯವಾದ ರಿಯಾಯಿತಿಗಳು. ಸರ್ಕಾರಕ್ಕೇ ಆಗಲಿ, ಜಮೀನ್ದಾರ ಮಾಲೀಕನಿಗೇ ಆಗಲಿ ಕೊಡಬೇಕಾದ ಕಂದಾಯ, ಅಥವಾ ಕಂದಾಯದಂತೆ ವಸೂಲಾಗಬೇಕಾದ ಮೊಬಲಗಿನ ವಿಷಯಗಳನ್ನು ಬಿಟ್ಟರೆ, ಮೆಂಬರಿನಿಂದ ಬಾಕೀ ವಸೂಲಿಗೆ ಇತರ ಹಕ್ಕುದಾರರಿಗಿಂತಲೂ ಸೊಸೈಟಿಗೆ ಮೊದಲನೆಯ ಹಕ್ಕಿರುತ್ತದೆ; ಅಂದರೆ, ಮೆಂಬರಿನ ಆಸ್ತಿಮೇಲೆ ಸೊಸೈಟಿಯ ಬಾಕೀ ವಸೂಲಾದ ಬಳಿಕ ಸದರಿ ಮೆಂಬರಿಗೆ ಸಾಲ ಕೊಟ್ಟಿರುವ ಇತರ ಜನರು ಪ್ರಯೋತಿಸಬೇಕಾಗಿರುತ್ತದೆ.

ಕಾನೂನಿನ 21 ನೆಯ ಅಧಿಕರಣ.

ಯಾವ ಮೆಂಬರಿಗೇ ಆಗಲಿ ಸೊಸೈಟಿಯಿಂದ ಬೀಜ, ಬಿತ್ತನೆ, ಗೊಬ್ಬರ ಮುಂತಾದ್ದು ಕೊಟ್ಟಿದ್ದರೂ, ಅಥವಾ ಅವುಗಳನ್ನು ಕೊಂಡುಕೊಳ್ಳುವುದಕ್ಕೆ ಹಣವನ್ನು ಕೊಟ್ಟಿದ್ದರೂ, ಅಬಗೆ ಬಾಕೀ ವಸೂಲಿಗೆ ಒಂದು ವರುಷದ ವರೆಗೂ ಅವನ ಜಮೀನಿನ ಬೆಳೆಯು ಗುರಿಯಾಗಿರುತ್ತದೆ.

ಸೊಸೈಟಿಯಿಂದ ಮೆಂಬರಿಗೆ ಕೊಡುವ, ಅಥವಾ ಸೊಸೈಟಿಯ ಹಣದಿಂದ ಕೊಂಡುಕೊಳ್ಳುವ ವ್ಯವಸಾಯದ ಮುಟ್ಟುಗಳು, ಕೈಗಾರಿಕೆ ಕಸಬಿಗೆ ಬೇಕಾದ ಸಾಮಾನುಗಳು, ಕಾರ್ಖಾನೆ ಕೆಲಸಕ್ಕೆ ಅವಶ್ಯಕವಾದ ಪದಾರ್ಥಗಳು, ಇವುಗಳ ಮೇಲೆಯೂ ಸಾಲದ ವಸೂಲಿಗೆ ಸೊಸೈಟಿಗೆ ಮೊದಲನೆಯ ಹಕ್ಕಿರುತ್ತದೆ.

ಕಾನೂನಿನ 22 ನೆಯ ಅಧಿಕರಣ.

ರಿಜಿಸ್ಟ್ರಾರವರು ವರುಷಕ್ಕೆ ಒಂದುಸಲವಾದರೂ ಸೊಸೈಟಿಯ ಲೆಕ್ಕಪತ್ರಗಳನ್ನು, ಸಾಲವನ್ನು, ಸಾಲಕ್ಕೆ ಆಧಾರವಾದ ದೀಡನ್ನು ಸೊಸೈಟಿಯಿಂದ ಮೆಂಬರುಗಳಿಗೆ ಸಲ್ಲಬೇಕಾದ ಬಾಬುಗಳನ್ನು, ರುಸುಂ ತೆಗೆದುಕೊಳ್ಳದೇ ತನಿಖೆ ಮಾಡುವರು. ಹಾಗೆ ಸೊಸೈಟಿಯ ಲೆಕ್ಕ ಪತ್ರಗಳನ್ನು, ಸಾಲದ ಆಧಾರಗಳನ್ನು ಯಾವ ಕಾಲದಲ್ಲಿಯಾದರೂ ಹೋಗಿ ಅಜಮಾಯಿಷಿ ಮಾಡಲು ರಿಜಿಸ್ಟ್ರಾರವರಿಗೂ, ಡೆಪ್ಯುಟಿಕಮಿಷನರಿಗೂ, ಅವರಿಂದ ನಿಯಮಿತರಾಗುವವರಿಗೂ, ಅಧಿಕಾರವಿರುತ್ತದೆ.

ಸೊಸೈಟಿಗೆ ಯಾವ ಮೆಂಬರಿನಿಂದಲಾಗಲಿ, ರೋಜುವಾರ್ ಲೆಕ್ಕಪತ್ರ ದಾಖಲೆ ಪ್ರಕಾರ ಎಷ್ಟು ಮೊಬಲಗು ಬರಬೇಕಾಗಿರುತ್ತದೆಯೋ ಅಷ್ಟು ಮೊಬಲಗನ್ನು ಕೋರ್ಟಿನಲ್ಲಿ ದಾವೆ ಮೂಲಕ ಬರಮಾಡಿಕೊಳ್ಳಬೇಕಾದರೆ, ಕೋರ್ಟಿಗೆ ಹಾಜರ್ ಮಾಡುವ ಅಂತಹ ದಾಖಲಾತಿಗಳ ನಕಲುಗಳನ್ನು ರುಜುವಾತಿಗೆ ಆಧಾರವಾಗಿ ತೆಗೆದುಕೊಳ್ಳಬೇಕು.

ಯಾವ ತರಹ ಸೊಸೈಟಿಗಾಗಲಿ, ಸರ್ಕಾರದವರು ತೆರಿಗೆಗಳಾದ ವಿನಾಯಿತಿ

ಕೊಡಬಹುದು. ಮತ್ತು ರಿಜಿಸ್ಟ್ರೇಷನ್ ಕಾನೂನಿನ ಪ್ರಕಾರ ಕೊಡಬೇಕಾಗುವ ಸ್ಟ್ಯಾಂಪ್ ಫೀಜನ್ನು ಪಜಾ ಮಾಡಬಹುದು.

ಕಾನೂನಿನ 25 ನೆಯ ಅಧಿಕರಣ.

ಆಲ್ಲದೇ ಸೊಸೈಟಿಯನ್ನು ರಿಜಿಸ್ಟರ್ ಮಾಡುವುದ ಕ್ಕಾಗಿ ಸ್ಟ್ಯಾಂಪ್ ಫೀಜನ್ನು ಕೊಡಬೇಕಾಗಿರುವುದಿಲ್ಲ.

6 ನೆಯ ಅಧಿಕರಣದ 5 ನೆಯ ಪ್ರಕರಣ. ಸೊಸೈಟಿಗಳಿಗೆ ಸರ್ಕಾರದವರು ಏರ್ಪಡಿಸಿರುವ ನಿರ್ಬಂಧಗಳು.

ಸರ್ಕಾರದವರು ಇಂತಹ ರಿಯಾಯಿತಿಗಳನ್ನು ತೋರಿಸಿ, ಸೊಸೈಟಿಗಳ ಕಾರ್ಯವು ಸರಿಯಾಗಿ ನಡೆಯಲಿ ಎಂಬ ಉದ್ದೇಶದಿಂದ ಕೆಲವು ನಿರ್ಬಂಧಗಳನ್ನು ಏರ್ಪಡಿಸಿರುತ್ತಾರೆ.

ಒಂದು ಸೊಸೈಟಿ ಒಂದು ಸಾಲಿನಲ್ಲಿ ಬರುವ ಲಾಭವನ್ನು ಹಂಚುವುದಕ್ಕೆ ಮೊದಲು, ಆ ಪೈಕಿ ನಾಲ್ಕರಲ್ಲೊಂದು ಭಾಗಕ್ಕೆ ಕಡಿಮೆ ಇಲ್ಲದಷ್ಟು ಮೊಬಲಗನ್ನು ರಿಜರ್ವ್ ಅಂದರೆ ಜಕೇರಿ ಫಂಡಿಗಾಗಿ ಇಡಬೇಕು. ಆದರೆ ಸರ್ಕಾರದವರು ಯಾವಾದರೂ ಒಂದು ಸೊಸೈಟಿಯ ವಿಷಯದಲ್ಲಿ ಈ ಬಾಬನ್ನು ಕುರಿತು ಜೇಕೇನಿಧವಾಗಿ ಹುಕುಂ ಮಾಡಬಹುದು.

ಸೊಸೈಟಿಯು ಮೆಂಬರುಗಳಿಂದ, ಧಾರಾಳವಾಗಿ ಡಿಪಾಜಿಟ್ಟುಗಳನ್ನು ತೆಗೆದುಕೊಳ್ಳಬಹುದು. ಆದರೆ ಇತರರಿಂದ ಸಾಲ ತೆಗೆಯಬೇಕಾದರೆ, ಸೊಸೈಟಿಯ ನಿಬಂಧನೆಗಳನ್ನು ಅನುಸರಿಸಿ ಎಷ್ಟು ಬೇಕೋ ಅಷ್ಟು ಹಣವನ್ನೇ ಸಾಲ ತೆಗೆಯಬೇಕು.

ಮೆಂಬರು ಅಲ್ಲದವರಿಗೆ ಸೊಸೈಟಿಯಿಂದ ಸಾಲ ಕೊಡಕೂಡದು. ಆದರೆ ರಿಜಿಸ್ಟ್ರಾರರ ಸಮ್ಮತಿಮೇಲೆ ಒಂದು ಸೊಸೈಟಿಯಿಂದ ಮತ್ತೊಂದು ಸೊಸೈಟಿಗೆ ಸಾಲ ಕೊಡಬಹುದು.

ಸೊಸೈಟಿಯು ಹಣವನ್ನು ಸರ್ಕಾರದ ಸೇವಿಂಗ್ಸ್ ಬ್ಯಾಂಕುಗಳಲ್ಲಿಡಬಹುದು. ಆದರೆ ಇತರ ಬ್ಯಾಂಕುಗಳಲ್ಲಿಯಾಗಲಿ ಇತರ ಮನುಷ್ಯರಲ್ಲಿಯಾಗಲಿ, ಹಣವನ್ನು ಇಡಬೇಕಾದರೆ, ರಿಜಿಸ್ಟ್ರಾರರು ಒಪ್ಪಬೇಕು.

ಸಾಮಾನ್ಯವಾದ ಹುಕುಂನಿಂದಲಾಗಲಿ, ಹೆಚ್ಚುಕಡಿಮೆ ಹುಕುಂನಿಂದಲಾಗಲಿ ಸೊಸೈಟಿಗಳಿಂದ, ಜರಸ್ಥಿರ ಸ್ವತ್ತುಗಳ ಆಧಾರದಮೇಲೂ. ಇತರ ಆಧಾರಗಳಮೇಲೂ ಹಣವನ್ನು ಕೊಡಕೂಡದೆಂದು ನಿಷೇಧಿಸುವುದಕ್ಕೂ, ಅಥವಾ ಹಾಗೆ ಕೊಡುವುದಕ್ಕೆ ನಿರ್ಬಂಧಗಳನ್ನು ಕಲ್ಪಿಸುವುದಕ್ಕೂ, ಸರ್ಕಾರದವರು ಅಧಿಕಾರವನ್ನು ಇಟ್ಟುಕೊಂಡಿರುತ್ತಾರೆ. ಇಂತಹ ಅಧಿಕಾರವನ್ನು ಇಂಡಿಯಾ ಗೌರ್ನಮೆಂಟಿನವರು ರಿಜಿಸ್ಟ್ರಾರಿಗೆ

ಸೊಸೈಟಿಗಳಮೇಲೆ ಸರ್ಕಾರದವರಿಗೆ ಇರುವ ಅಧಿಕಾರ.

ಕೊಟ್ಟಿರುತ್ತಾರೆ. ಆದುದರಿಂದಲೇ ಅಲ್ಲಿನ ರಿಜಿಸ್ಟ್ರಾರರಿಗೆ ಯಾವ ಸೊಸೈಟಿಯ ವಿಷಯದಲ್ಲಿ ದೃಢವಾದ ನಂಬಿಕೆ ಇರುತ್ತದೆಯೋ, ಆ ಸೊಸೈಟಿಯಿಂದ ನಗದಿನ ಆಧಾರದಮೇಲೆ ಹಣವನ್ನು ಕೊಡಬಹುದೆಂದು ಅಪ್ಪಣೆ ಕೊಡಲು ಇಂಡಿಯಾ ಗೌರ್ನಮೆಂಟಿನ ಕಾನೂನುಮೇರಿಗೆ ಅವರಿಗೆ ಅಧಿಕಾರವಿರುತ್ತದೆ. ಆದರೆ ಮೈಸೂರು ಕಾನೂನಿನಲ್ಲಿ, ಚರಸ್ಥಿರ ಸ್ವತ್ತುಗಳ ವಿಷಯವಾಗಿ ಅಂತಹ ನಿರ್ಬಂಧಗಳನ್ನು ಏರ್ಪಡಿಸಿರುವದಿಲ್ಲ. ಸರ್ಕಾರದವರು ಹಾಗೆ ಕೊಡಕೂಡದೆಂದು ನಿರೋಧಿಸಿದ ಹೊರತು, ಅಥವಾ ಹಾಗೆ ಕೊಡಲು ಕೆಲವು ನಿರ್ಬಂಧಗಳನ್ನು ಕಲ್ಪಿಸಿದ ಹೊರತು, ಸರಿಯಾದ ಆಧಾರದ ಮೇಲೆ ಹಣವನ್ನು ಸಾಲ ಕೊಡುವದಕ್ಕೆ ಯಾವ ಸೊಸೈಟಿಗೂ ಅಭ್ಯಂತರ ವಿರುವದಿಲ್ಲ.

ಆದಾಗ್ಯೂ ನಗದಿನ ಆಧಾರದ ವಿಷಯದಲ್ಲಿ ನಿಜವಾದ ಕೆಲವು ತೊಂದರೆಗಳಿರುತ್ತವೆ. ಒಂದು ಪಟ್ಟಣದಲ್ಲಿಯೇ ಆಗಲಿ, ಒಂದು ದೊಡ್ಡ ಹಳ್ಳಿಯಲ್ಲಿಯೇ ಆಗಲಿ, ಸೊಸೈಟಿ ಇದ್ದು, ಆಲ್ಲಿ ಆಗಸಾಲೆಯೂ ಇದ್ದು, ಸವಿೂಪದಲ್ಲಿಯೇ ಎಲ್ಲಿಯಾದರೂ ಅದಕ್ಕೆ ಸರಿಯಾಗಿ ಬೆಲೆಕಟ್ಟಿ, ಕೊಂಡುಕೊಳ್ಳುವವರೂ ಇದ್ದು, ಸೊಸೈಟಿಯಲ್ಲಿ ಒಬ್ಬಿಬ್ಬಂತರಾದವರು ಮೆಂಬರುಗಳಾಗಿಯೂ ಇದ್ದಲ್ಲಿ, ಈ ವಿಧವಾದ ವ್ಯಾಪಾರವನ್ನು ನಿರ್ಭಯವಾಗಿ ನಡೆಸಬಹುದು. ಅಂತಹ ಅನುಕೂಲ್ಯಗಳಿಲ್ಲದ ಹಳ್ಳಿಗಳಲ್ಲಿನ ಸೊಸೈಟಿಗಳಲ್ಲಿ ಆಪ್ರಕಾರ ನಡೆಸುವುದು ಅಪಾಯಕರವೇಸರಿ.

ಜಮೀರ್ ಆಧಾರದ ಮೂಲಕ ನಡೆಯುವ ಲೇವಾದೇವಿ ವಿಷಯದಲ್ಲಿ ಇನ್ನೂ ಹೆಚ್ಚು ತೊಂದರೆಗಳಿರುತ್ತವೆ. ರೈತನಿಗೆ ತೊಂದರೆ ತಪ್ಪಿಸಿ, ನಿಜವಾದ ಸಹಾಯವನ್ನು ಮಾಡದೇಕಾದರೆ ಅವನು ತನ್ನ ಆಸ್ತಿಯನ್ನು ದುಬಾರೆ ಬಡ್ಡಿಯಮೇಲೆ ಪಡೆಯುವ ಸಾಲಕ್ಕೆ ಆಧಾರ ಮಾಡದಂತೆ ಮಾಡಿ, ಯುಕ್ತವಾದ ಬಡ್ಡಿಗೆ ಹಣವನ್ನು ಅವನಿಗೆ ಸಾಲ ಕೊಡಬೇಕು. ಹಾಗೆ ಜಮೀರ್ ಯೋಗ್ಯತೆಗೆ ತಕ್ಕಷ್ಟು ಮೊಬಲಗನ್ನು ಅವನಿಗೆ ಸಾಲ ಕೊಡದೇಹೋದರೆ, ಅವನ ಯಥಾಪ್ರಕಾರ ಇತರರಹತ್ರ ಸಾಲ ಮಾಡಿ ನಷ್ಟಪಡಬೇಕಾಗುತ್ತದೆ. ಹಾಗಿಲ್ಲದೇ ಮೇಲೆ ಹೇಳಿದಂತೆ ನಡೆದುಕೊಂಡರೆ ಉಭಯತ್ರರಿಗೂ ಪ್ರಯೋಜನವಾಗುತ್ತದೆ. ಹೀಗೆ ಮಾಡದೇ ಸ್ವಲ್ಪವಾಗಿ ಸೇರುವ ಮೂಲಧನವನ್ನು, ಸಮಯಕ್ಕೆ ಸಿದ್ಧವಾಗಿ ಒದಗದಂತೆ ಇಟ್ಟಿರುವುದು ಸರಿಯಲ್ಲ. ಸ್ವಲ್ಪಕಾಲದಮಟ್ಟಿಗೆ ವಾಯಿದೇ ಕೊಟ್ಟು, ಚಿಲ್ಲರೆ ಚಿಲ್ಲರೆಯಾಗಿ ಸಾಲವನ್ನು ಕೊಟ್ಟು, ಅವುಗಳನ್ನು ಜಾಗ್ರತೆಯಾಗಿ ಬರಮಾಡಿಕೊಳ್ಳುವುದರಿಂದ, ಹಣಗಳನ್ನು ಸರಿಯಾಗಿ ಉಪಯೋಗಿಸಿದಂತೆ ಆಗುತ್ತದೆ. ಮುಖ್ಯವಾಗಿ, ಸಾಲವನ್ನು ಬರಮಾಡಿಕೊಳ್ಳಲು, ಕೋರ್ಟಿಗೆ ಹೋಗಬೇಕಾದ ತೊಂದರೆ ಸಂಭವಿಸದಂತೆ ನಡೆದುಕೊಳ್ಳುವುದು ಅವಶ್ಯಕವು.

ಇವುಗಳೇ ಈ ಸೊಸಕಾನೂನಿನ ಮುಖ್ಯೋದ್ದೇಶಗಳು. ಇವುಗಳನ್ನು ಸರಿ

ಉಪಸಂಹಾರ.

ಯಾದ ರೀತಿಯಲ್ಲಿ ನೆರವೇರಿಸಿದರೆ, ದೇಶದಲ್ಲಿ ವ್ಯವಸಾಯದ ಕಾರ್ಯಗಳು, ಕೈಗಾರಿಕೆ ಕಸಬುಗಳು ಯುಕ್ತವಾಗಿ ನಡೆಯುತ್ತವೆಯಲ್ಲದೆ, ಹಿಂದೆ ಹೇಳಿದಂತೆ ಸಾಲ ಮಾಡಬೇಕಾದ ಅವಶ್ಯಕತೆಯುಳ್ಳ ರೈತರಿಗೆ ಈ ಕಾನೂನಿಂದ ಬಹಳ ಪ್ರಯೋಜನವಾಗುತ್ತದೆ.

ಈ ವಿಧವಾದ ಸೊಸೈಟಿಗಳ ಕಾರ್ಯವು ತಡೆ ಇಲ್ಲದೇ ನೆರವೇರಬೇಕೆಂಬ ಉದ್ದೇಶದಿಂದ, ಇವುಗಳನ್ನು ಕಂಪನಿಗಳ ವಿಷಯವಾಗಿ ಏರ್ಪಟ್ಟಿರುವ ಸಾಮಾನ್ಯವಾದ ಕಾನೂನಿಗೆ ಒಳಪಡಿಸದೇ ಇರುತ್ತದೆಯಲ್ಲದೇ, ಇವುಗಳಿಗೆ ವಿಶೇಷವಾದ ಕೆಲವು ಹಕ್ಕುಗಳನ್ನು ಕೊಟ್ಟು, ಸೌಕರ್ಯಗಳನ್ನು ಕಲ್ಪಿಸಿರುತ್ತದೆ.

ಇಂತಹ ಸೌಕರ್ಯಗಳು ಈ ಕಾನೂನಿನಿಂದ ಒದಗುತ್ತದೆ ಎಂದು ತಿಳಿದು, ಯಾರೇ ಆಗಲಿ, ಸ್ವಪ್ರಯೋಜನಪರರಾಗಿ ಉಪಾಯಾಂತರಗಳಿಂದ ತಮ್ಮ ಉದ್ದೇಶಗಳನ್ನು ನೆರವೇರಿಸಿಕೊಳ್ಳದಂತೆಯೂ, ಯಾವ ನೆವದಿಂದಲೂ, ಸೊಸೈಟಿಯ ನಿಜವಾದ ಉದ್ದೇಶಗಳನ್ನು ಭಂಗಪಡಿಸಿ ಅವುಗಳನ್ನು ದೂಷಣೆಗೆ ತಾರದಂತೆಯೂ ವಿಶೇಷ ಜಾಗರೂಕತೆಯಿಂದ ನೋಡಿಕೊಳ್ಳುವುದು ಅತ್ಯವಶ್ಯಕವು.

ಅಲ್ಲದೆ, ಇದೆಲ್ಲವನ್ನು ತಿಳಿದು, ತತ್ಕಾಲದಲ್ಲಿ ಉತ್ಸಾಹಗೊಂಡು, ಆರಂಭಶೂರರಾಗದೆ, ಜನಗಳು ಸೊಸೈಟಿಗಳನ್ನು ತಮ್ಮ ತಮ್ಮ ಕಸಬುಗಳ ಪ್ರಯೋಜನಕ್ಕೆ ಅನುಕೂಲವಾಗುವಂತೆ ಏರ್ಪಡಿಸಿ, ಅವುಗಳನ್ನು ಅಭಿವೃದ್ಧಿಗೆ ತಂದು, ಸರ್ಕಾರದವರ ಉದ್ದೇಶಗಳನ್ನು ಸಫಲಗೊಳಿಸಿ, ಹಿಡಿದ ಕಾರ್ಯವನ್ನು ಬಿಡದೇ ಮಾಡುವುದರಲ್ಲಿ ಬದ್ಧಾದರರಾಗಿರಬೇಕೆಂಬುವುದೇ ಮುಖ್ಯಾಭಿಪ್ರಾಯವು.

ನಮೂನೆಗಾಗಿ ಕೆಲವು ಒಳನಿಬಂಧನೆಗಳನ್ನು ಏರ್ಪಡಿಸಿ ಇದರೊಡನೆ ಜಂಟಿಸಿರುತ್ತದೆ. ಸದರಿ ಒಳನಿಬಂಧನೆಗಳನ್ನು ಆಯಾಯು ಸೊಸೈಟಿಯು ವಿದ್ಯಮಾನಗಳಿಗೆ ಅವಶ್ಯಕವಾಗುವರೀತ್ಯಾ ಬದಲಾಯಿಸಿಕೊಂಡು ಜಾರೀಗೆ ತರಬಹುದು.

ಎಂ. ಶಾಮರಾವ್,

ರಿಜಿಸ್ಟ್ರಾರ್ ಕೋಆಪರೇಟಿವ್ ಸೊಸೈಟೀಸ್ ಇನ್ ಮೈಸೂರು.

ಕೋ ಆಪರೇಟಿವ್ ಸೊಸೈಟಿಗಳ ನಡವಳಿಕೆಗಾಗಿ ಏರ್ಪಡಿಸಿಕೊಳ್ಳ ಬೇಕಾದ ನಿಬಂಧನೆಗಳ ನಮೂನೆ.

(ಇವುಗಳನ್ನು ಆಯಾಯ ಸ್ಥಳ ಸಂದರ್ಭಗಳಿಗೆನುಸಾರವಾಗಿ ಬದಲಾಯಿಸಿ ಸರಿಪಡಿಸಿಕೊಳ್ಳಬಹುದು.)

ಹೆಸರು.

1. ಈ ಸೊಸೈಟಿಗೆ.....ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ ಅಥವಾ (ಲಿ.ಲಿಮಿಟೆಡ್) ಎಂದು ಹೆಸರು.

2. ಇದರ ಮೇಲ್ವಿಚಾರಣೆಯೆಂದರೆ :—

ಗ್ರಾಮ.....ತಾಲ್ಲೂಕು.....

ಡಿಸ್ಟ್ರಿಕ್ಟ್.....

3. ಈ ಸೊಸೈಟಿಯು * ಆಡಳಿತವು ಬಾಜೂದಲ್ಲಿ ಕಂಡ ಗ್ರಾಮ ಅಥವಾ ಗ್ರಾಮಗಳಿಗೆ ಸಂಬಂಧಪಟ್ಟಿರುತ್ತದೆ.

ಉದ್ದೇಶಗಳು.

4. ಈ ಸೊಸೈಟಿಯ ಉದ್ದೇಶಗಳು ಯಾವವೆಂದರೆ :—

(ಕೆಳಗೆ ನಮೂದಾಗುವ ಉದ್ದೇಶಗಳ ಪೈಕಿ ಯಾವವನ್ನಾದರೂ ಆಗಲಿ ಅಥವಾ ಸರ್ಕಾರದವರು ಹೆಚ್ಚುಕಟ್ಟಿನಿಯಾಗಿ ಮುಂಜೂರ್ಮಾಡುವಂಥಾದ್ದಾಗಿಯೂ ಮೆಂಬರುಗಳಿಗೆ ಲಾಭಕರವಾದದ್ದಾಗಿಯೂ ಇರುವ ಮತ್ಯಾವ ಉದ್ದೇಶವನ್ನಾಗಲಿ ಉಂಟಾಗಿರಬಹುದು).

(1) ಮೆಂಬರುಗಳಲ್ಲ ಮಿತವ್ಯಯವನ್ನು ಮುಂಜಾಗರೂಕತೆಯನ್ನು ವೃದ್ಧಿಗೊಳಿಸುವುದು.

(2) ಮೂಲಧನವನ್ನು ಜಮಾಯಿಸಿ ಮೆಂಬರುಗಳಿಗೆ ಸಾಲ ಕೊಡುವುದು.

(3) ಮೆಂಬರುಗಳಿಗೆ ಕಚ್ಚಾ ಸಾಮಾನು, ಬೀಜ, ಗೊಬ್ಬರ, ಇವುಗಳನ್ನು ಒದಗಿಸಿ ಕೊಡುವುದು.

(4) ವ್ಯವಸಾಯದಿಂದುತ್ಪನ್ನವಾಗುವ ಜಿನಸಿಗಳನ್ನು ಕಾರ್ಖಾನೆಗಳಲ್ಲಿ ತಯಾರಾಗುವ ಸಾಮಾನುಗಳನ್ನು ಮೆಂಬರುಗಳಿಗಾಗಿ ಕೊಂಡುಕೊಳ್ಳುವುದು.

(5) ಪರಸ್ಪರ ಸಹಾಯದಿಂದ, ಮೆಂಬರುಗಳಿಂದಲೇ ಸಾಮಾನುಗಳನ್ನು ತಯಾರ್ಮಾಡಿಸುವುದು; ಅಥವಾ ಜಿನಸಿಗಳನ್ನು ಬೆಳೆ ಮಾಡಿಸುವುದು.

(6) ಗೃಹಕೃತ್ಯಕ್ಕೆ ಬೇಕಾದ ಆಹಾರ ಪದಾರ್ಥಗಳು, ಬಟ್ಟೆಗಳು ಅಥವ ಇತರ ಪದಾರ್ಥಗಳು ಇವುಗಳನ್ನು, ಮತ್ತು ವ್ಯವಸಾಯಕ್ಕಾಗಲಿ ಕೆ

ಗಾರಿಕೆ ಕಸಬಿಗಾಗಲಿ ಬೇಕಾದ ಜಾರ್ ವಾರ್, ಮುಟ್ಟುಗಳು ವಗೈರೆ ಸರಕುಗಳನ್ನು ಒಟ್ಟಾಗಿ ಕೊಂಡು ಮೆಂಬರುಗಳಿಗೆ ಚಿಲ್ಲರೆಯಾಗಿ ಮಾರುವುದು.

(7) ಎಂತ್ರಗಳನ್ನು ಕೊಂಡು ಮೆಂಬರುಗಳಿಗೆಲ್ಲಾ ಅದು ಸಾಮಾನ್ಯವಾಗಿ ಉಪಯೋಗವಾಗುವಂತೆ ಮಾಡುವುದು.

(8) ಮೆಂಬರುಗಳಿಗೆ ಮನೆಗಳನ್ನು ಕಟ್ಟಿಸಿಕೊಡುವುದು, ಜವಿರ್ಾಗಳನ್ನು ತೆಗೆದುಕೊಡುವುದು.

(9) ವ್ಯವಸಾಯಸಂಬಂಧವಾದ ಅಥವಾ ಕೈಗಾರಿಕೆ ಸಂಬಂಧವಾದ ಕಾರ್ಯಗಳನ್ನು ಒಗ್ಗಟ್ಟಿನಿಂದ ನೆರವೇರಿಸುವುದು ಅಥವಾ ಅಭಿವೃದ್ಧಿಗೊಳಿಸುವುದು.

ಮೆಂಬರುತನಕ್ಕೆ ಯೋಗ್ಯತೆ.

5. (1) ಸೊಸೈಟಿಯನ್ನು ರಿಜಿಸ್ಟರ್ ಮಾಡಿಸಲು ಕಳುಹಿಸುವ ಅಪ್ಲಿಕೇಷ್ನಗೆ ರುಜು ಮಾಡುವವರು; ಮತ್ತು

(2) ಸೊಸೈಟಿಯು ರಿಜಿಸ್ಟರಾದ ಬಳಿಕ, ಈ ಒಳ ನಿಬಂಧನೆಗಳ ಮೇರೆ ಆಗಾಗ್ಯೆ ಮೆಂಬರಾಗಿ ಸೇರಿಸಿಕೊಳ್ಳಲ್ಪಡುವವರು ಸಹ ಸೊಸೈಟಿಯ ಮೆಂಬರುಗಳಾಗಿರತಕ್ಕದ್ದು.

6. 3 ನೆಯ ನಿಬಂಧನೆಯಲ್ಲಿ ನಮೂದಾದ ಗ್ರಾಮ ಅಥವಾ ಗ್ರಾಮಗಳ ವಾಸಸ್ಥರು, ಅಥವಾ ಆವುಗಳಲ್ಲಿ ಜವಿರ್ಾಗಳುಳ್ಳವರು ಮಾತ್ರ, ಸೊಸೈಟಿಗೆ ಮೆಂಬರುಗಳಾಗಿರಲು ಅರ್ಹರಾಗಿರುತ್ತಾರೆ.

7. ಮೆಂಬರಾಗುವುದಕ್ಕೆ ಅಪೇಕ್ಷಿಸುವ ಪ್ರತಿ ಒಬ್ಬರೂ, ಮ್ಯಾನೇಜಿಂಗ್ ಕಮ್ಮಿಟಿ ಅಂದರೆ ಕಾರ್ಯ ನಿರ್ವಾಹಕ ಸಭೆಯವರಿಗೆ ಬರಹ ಮೂಲಕ ತಿಳಿಸಬೇಕು. ಅವರು ಸದರಿ ಅಪ್ಲಿಕೇಷ್ನ ದಾಖಲಾದ.....ದಿವಸಗಳೊಳಗಾಗಿ ಅದನ್ನು ಸರಿಯಾಗಿ ವಿಚಾರ ಮಾಡಿ ಫೈಸಲ್ಮಾಡಬೇಕು.

8. ಮೆಂಬರಾಗುವುದಕ್ಕೆ ಕೊಡುವ ಅಪ್ಲಿಕೇಷ್ನಗಳನ್ನು ಕಮ್ಮಿಟಿಯವರು ತಿರಸ್ಕರಿಸಿದರೆ, ಅಪ್ಲಿಕೇಷ್ನ ಕೊಟ್ಟವರು, ಸೊಸೈಟಿಯ ಮೆಂಬರುಗಳ ಪೈಕಿ..... ಜನರ ಅಪಲಂಬನವನ್ನು ಬರಹ ಮೂಲಕ ಪಡೆದು, ಜನರಲ್ ಕಮ್ಮಿಟಿ ಮೆಂಬರುಗಳಲ್ಲಿ ಅಪ್ಪೀಲ್ ಮಾಡಬಹುದು. ಅಂತಹ ಅಪ್ಪೀಲನ್ನು, ಅಪ್ಪೀಲ್ ತಾರೀಪಿನ ತರುವಾಯ ನಡೆಯುವ ಜನರಲ್ ಮಿಾಟಿಂಗಿನಲ್ಲಿ ವ್ಯವಸ್ಥೆ ಹೊಂದಿಸಬೇಕು.

9. ಮೆಂಬರಾಗಿ ದಾಖಲಾಗುವ ಪ್ರತಿಯೊಬ್ಬರೂ, ಮೆಂಬರುಗಳ ದಾಖಲಾತಿಗಾಗಿ ಇಟ್ಟಿರುವ ರಿಜಿಸ್ಟರಿನಲ್ಲಿ ರುಜು ಮಾಡಬೇಕು; ಅಥವಾ ಗುರ್ತು ಹಾಕಬೇಕು. ಅಂತಹ ರುಜು, ಅಥವಾ ಗುರ್ತಿಗೆ ಇನ್ನೊಬ್ಬ ಮೆಂಬರಿನ ಸಾಕ್ಷಿ ಇರ

* ವಿದ್ಯಾದಾಯಿನಿ. *

ಭಾಗ ೧೪.] ಮಾರ್ಚಿ—೧೯೦೬. [ಸಂಚಿಕೆ ೩.

ವಿದ್ಯಾರಣ್ಯರ ಚರಿತ್ರೆ.

ಈಗ್ಗೆ ಸುಮಾರು ೬೦೦ ವರ್ಷಗಳ ಹಿಂದೆ ಈ ಭರತಖಂಡಕ್ಕೊಂದುಬಗೆಯಾದ ಮೇಘಾವರಣವುಂಟಾಗಿತ್ತು. ಮೇಘಾವರಣವುಂಟಾಯಿತೆಂದರೆ ಭೂಮಿಯು ಧಗೆ ಕಡಮೆಯಾಗಿ ತಂಗಾಳಿ ಬೀಸಬೇಕಷ್ಟೆ. ಆಗ ಆದ ಮೇಘಾವರಣವು ದುರದೃಷ್ಟವಶಾತ್ ವಿಲಕ್ಷಣವಾದುದು. ಭೂಮಿಯು ಧಗೆ ಕಡಮೆಯಾಗುವುದಕ್ಕೆ ಬದಲಾಗಿ ಭೂಮಿ ಕಾದು ರಾಜಪುತ್ರಭೂಪಾಲಕರ ದೇಹಕ್ಕೆ ವ್ಯಾಪಿಸಿ ಅವರ ರಕ್ತವು ಕುದಿಯುತ್ತಿತ್ತು. ತಂಗಾಳಿ ಬೀಸುವುದಕ್ಕೆ ಬದಲಾಗಿ ರಾಜಪತ್ನಿಯರ ನಿಶ್ವಾಸದಿಂದ ಬರುವ ನಿಟ್ಟುಸಿರಿನಿಂದ ಬೆಂಗಾಳಿ ಬೀಸಿ ವಾಯು ಮತ್ತು ಅಗ್ನಿಗಳ ಸ್ನೇಹವು ಪ್ರಕಟವಾಗುತ್ತಿತ್ತು.

ಹಾಗಾದರೆ ಈ ಮೇಘಾವರಣವು ಎಲ್ಲಿತ್ತು, ಹೇಗಿತ್ತೆಂದು ಕೇಳಬಹುದು. ಇದು ಬಹಿರಂಗವಾದ ಆಕಾಶದಲ್ಲಿರಲಿಲ್ಲ. ಲೋಕವಿಲಕ್ಷಣಸ್ವಭಾವದಿಂದ ಆ ಮೇಘವು ಬಹಿರಂಗವಾಗಿ ಕಾಣಿಸಿಕೊಂಡರೆ ಆಗ ಬದುಕುವುದಕ್ಕಾಗುತ್ತಿತ್ತೆ? ಅದು ಭರತಖಂಡದ ಸಮಸ್ತ ಚರಾಚರಗಳ ಅಂತರಂಗದಲ್ಲಿ ಅಡಗಿತ್ತು. ಹಾಗಾದರೆ ಯಾವಲಕ್ಷಣದಿಂದ ಅದನ್ನು ಮೇಘವೆಂದು ಕರೆಯಬೇಕೆಂದು ಯೋಚಿಸುವಿರೋ? ನೆಲವನ್ನೆಲ್ಲಾ ಜಲಮಯವಾಗಿ ಮಾಡಿದ್ದರಿಂದ, ಉತ್ಪಾತ ಸೂಚಕವಾದ ಆಗಿನ ವಿಲಕ್ಷಣ ಮೇಘಾವರಣದ ದೆಸೆಯಿಂದ ಸಮಸ್ತ ವೀರಮಹಿಳೆಯರ ಕಣ್ಣಿಳಿಂದ ಸುರಿದ ಸಂತತಧಾರೆಯು ಭೂಭಾಗವನ್ನೆಲ್ಲಾ ನೆನೆಯಿಸಿತು. ಆದರೆ ನೆಲಕ್ಕೆ ತಂಪನ್ನು ಕೊಡುವುದಕ್ಕೆ ಬದಲಾಗಿ ನೆಲದ ಕಾವನ್ನು ಹೆಚ್ಚಿಸಿತು. ಮೋಡವಾದಮೇಲೆ ಕತ್ತಲೆ ಕವಿಯಬೇಕಷ್ಟೆ. ಸಮಸ್ತ ಭಾರತೇಯರಿಗೂ ಮುಂಜಾಮುಸೂಚಿತು. ಆ

ಮುಂಕು ಬರಬರುತ್ತಾ ಬೆಳೆದು ಪ್ರಜೆಗಳ ಮುಖದಲ್ಲೆಲ್ಲಾ ಕಪ್ಪುಬಣ್ಣವಾಗಿ ಹರಡಿ ಕೊಂಡಿತು. ಇಷ್ಟರ ಅನಾಹುತಕ್ಕೆ ಕಾರಣವಾದುದು ತುರುಕರ ಹಾವಳಿಯೊಂದ ಲ್ಲದೆ ಮತೆನ್ತಿಂದಲ್ಲ. ಪ್ರಕೃತ ಹಾವಳಿಯನ್ನು ಕುರಿತು ವಿವರಿಸುವುದು ಈಗಿನ ಕರ್ತವ್ಯವಲ್ಲವಾದುದರಿಂದ ಅದು ಹೋಗಲಿ.

ಸುಮಾರು 1323 ನೇ ಇಸವಿಯಿಲ್ಲಿ ತುರುಕರು ಬಲ್ಲಾಳರಾಜರ ಆಳಿಕೆಯ ಲ್ಲಿದ್ದ ಓರಗಲ್ಲೆಂಬ ಹಿಂದೂರಾಜ್ಯಕ್ಕೆ ಮುತ್ತಿಗೆ ಹಾಕಿದರು. ಶೀತದೇಶದಿಂದ ಆಗ ತಾನೆ ಬಂದ ಧಾಂಡಿಗರೂ ಮದಾಂಧರೂ ಆದ ಧೂರ್ತ ತುರುಷ್ಕರ ಸ್ಥೂಲವಿಗ್ರಹಗ ಳೆದುರಿಗೆ ಉಷ್ಣದೇಶದಲ್ಲಿ ಚಿರಕಾಲ ವಾಸಮಾಡಿ ಶಕ್ತಿಗುಂದಿದ ನಾಧುಗಳೂ ಕೋ ಮಲರೂ ಆದ ಸಾತ್ವಿಕ ಭಾರತೀಯರು ನಿಲ್ಲಲಾದೀತೆ? ಲೋಕದಲ್ಲಿ ವಿದ್ಯಾವಿನ ಯಾದಿ ಸದ್ಗುಣಗಳಿಗೆ ಮನಸ್ಸು ಕೊಡದೆ ಧನಪಿಶಾಚಿಯಲ್ಲಿಯೇ ಆಸಕ್ತಿಯನ್ನು ತೋರಿಸುವ ನೀಚಸ್ತ್ರೀಯು ತೆರದ ರಾಜ್ಯಲಕ್ಷ್ಮಿಯೇ ಹಿಂದೂಗಳನ್ನು ಉದಾಸೀನ ಮಾಡಿ ತುರುಷ್ಕರ ಅವಿಚಾರ ಪೂರ್ವಕವಾದ ಲಟ್ಟಿಹಾಸಕ್ಕೆ ಮರುಳಾದೆಯು? ಈ ಪಾಪಕ್ಕೆ ತಕ್ಕ ಪ್ರತಿಫಲವು ನಿನಗೆ ತಪ್ಪಿತೆ? ನಿನಗೆ ಈಗ ಮೊದಲಿನ ಗೌರವವಿದೆ ಯೇ? ಮೊದಲಿನ ಸೌಖ್ಯವಿದೆಯೇ? ಮೊದಲಿನ ಸಮಾಧಾನವಿದೆಯೇ? ಅದು ಎಲ್ಲಿಯಾದರೂ ಹೋಗಲಿ.

ಪ್ರಕೃತ ಓರಗಲ್ಲಿನಲ್ಲಿ ಅಳಿದುಳಿದ ರಾಜಪುತ್ರರು ಹತಶೇಷರಾಗಿದ್ದು ಮಿತಪ ರಿವಾರವನ್ನು ಕಟ್ಟಿಕೊಂಡು ಯಾವುದಾದರೊಂದು ಗುಹೆಯಲ್ಲಾದರೂ ನಿಂತು ಜೀವ ವನ್ನುಳಿಸಿಕೊಳ್ಳಬೇಕೆಂದು ಪಲಾಯನಸೂಕ್ತವನ್ನು ಪಾರಾಯಣಮಾಡಿದರು. ಆದರೆ ಅವರೇನು ಜೀವಗಳ್ಳರೋ? ಅವರ ಜೀವದಾಸೆಯು ಮುಂದೆ ಸುಖಪ ಡಬೇಕೆಂಬುದಕ್ಕಲ್ಲ. ಈಗ ಎಲ್ಲಾದರೂ ಅಡಗಿದ್ದು ಕಾಲಾನುಕಾಲಕ್ಕೆ ಸಿಂಹದಂತೆ ಮೇಲೆ ಬಿದ್ದು ಛಲವನ್ನು ತೀರಿಸಿಕೊಳ್ಳಬೇಕೆಂದಿತ್ತು. ದೈವಚಿಂತನೆ ಹೇಗಿದ್ದರೂ ಮನುಷ್ಯಚಿಂತನೆಯಲ್ಲಿ ತಕ್ಕ ಪ್ರಯತ್ನ ಮಾಡದಿರುವುದು ಯುಕ್ತವಲ್ಲವೆಂದು ಹೀಗೆ ನಿಶ್ಚಯಿಸಿದರು.

ನಮ್ಮ ಭಾರತೀಯರಿಗೆ ಪೂರ್ವಕಾಲದಲ್ಲಿದ್ದ ಈರೀತಿಯಾದ ಸರ್ವೋತ್ಕೃಷ್ಟ ಮನೋಭಾವಗಳನ್ನು ನೆನಸಿಕೊಂಡರೆ ವಿಧವೆಯು ತುರುಬನ್ನು ನೆನಸಿಕೊಂಡಂತೆ ಆಗುವುದು. ಆಗ ಕವಿದ ಮುಂಕಿನ ಬಲುಮೆ ಇನ್ನೆಷ್ಟೋ. ಇನ್ನೂ ಹಿಮ್ಮುಖ ವಾಗಿಲ್ಲ. ಇದಕ್ಕೆ ತಕ್ಕ ಮುಂಜಾನಿಗಳಾರಾದರೊಬ್ಬರು ಹುಟ್ಟಿದಾಗ ಮಾತ್ರ

ನಿರ್ಬಲವಾಗಿದ್ದು ಪುನಃ ಉಜ್ಜೀವನಗೊಳ್ಳುತ್ತಿದೆ. ಓರಗಲ್ಲಿನ ರಾಜಪುತ್ರರಾದ ವೀರಬುಕ್ಕ ಮತ್ತು ಹರಿಹರ ಎಂಬಿಬ್ಬರು ಅಣ್ಣತಮ್ಮಂದಿರು ತುಂಗಭದ್ರಾತೀರವನ್ನು ಸೇರಿ ಶ್ರೀರಾಮಚಂದ್ರದೇವರಿಗೆ ವಿಶ್ರಾಂತಿದಾತೃವಾಗಿ ಪ್ರಸಿದ್ಧಿಯಾಗಿದ್ದ ಪಂಪಾ ಸರೋವರದ ಬಳಿಯಲ್ಲಿ ವಸತಿಯನ್ನು ಕಲ್ಪಿಸಿಕೊಂಡರು. ಅಲ್ಲಿ ಇರುವಾಗೊಬ್ಬ ಮಹಾತ್ಮರ ಪರಿಚಯವುಂಟಾಯಿತು. ಆತನ ಮಹಾತ್ಮ್ಯದಲ್ಲಿ ಆಗ ಪ್ರಕೃತವಾಗಿದ್ದ ಮಂತ್ರವಾದಿತನವು ಅಡಗಿಕೊಂಡಿತ್ತು. ಅದುವರೆಗೂ ತಟಸ್ಥವಾಗಿದ್ದ ಆ ಮಹನೀಯರ ಪ್ರತಿಭಾಶಕ್ತಿಗೆ ಈ ಕ್ಷತ್ರಿಯರು ಉಪಕರಣರಾದರು. ಈ ಕ್ಷತ್ರಿಯರ ಪೌರುಷಪ್ರಕಾಶಕ್ಕೆ ಆ ಮಹಿಮರು ಉತ್ತೇಜಕರಾದರು. ಭಾರತೇಯರ ಪುಣ್ಯಪರಿಪಾಕದಿಂದ ಈ ಪರಸ್ಪರ ಸಾಧನಗಳು ಸಹಾಯಸಂಪತ್ತಿಗಾಗಿ ಪರಿಣಮಿಸಿತು. ಆ ಮಹನೀಯರೇ ಮಾಧವಾಚಾರ್ಯರು. ಅವರ ಪ್ರೋತ್ಸಾಹಬಲದಿಂದಲೇ ವಿಜಯನಗರದಲ್ಲೊಂದು ರಾಜ್ಯಪ್ರತಿಷ್ಠೆಯಾಯಿತು. ಆ ರಾಜ್ಯಕ್ಕೆ ಮಾಧವಾಚಾರ್ಯರೇ ಮಂತ್ರಿಯಾಗಿದ್ದರು. ಹಿಂದೂ ರಾಜವಾಡೆಗಳಿಗೆ ಸರ್ವಸಾಮಾನ್ಯವಾದ ದುಸ್ಥಿತಿಯು ಇದಕ್ಕೂ ಒದಗಿ ಈಗ ಅದೊಂದು ಕುಗ್ರಾಮವಾಗಿದೆ. ಪಂಪಾಸರೋವರವು (ಹಂಪೆ) ಎಂಬ ಹೆಸರಿನಿಂದ ತುಂಗಭದ್ರಾನದಿಯು ದಕ್ಷಿಣತೀರದಲ್ಲಿ ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿದೆ. ಅದರ ದಡದಲ್ಲಿ ವಿಜಯನಗರದ ರಾಜಧಾನಿಯಿದ್ದಕಡೆ ಇನ್ನೂ ಕೆಲವು ಗುರ್ತುಗಳು ನಾಮಾವಶೇಷವಾಗಿ ಉಳಿದು ದೇಶವಾತ್ಸಲ್ಯವುಳ್ಳ ಭಾರತೇಯನ ಮನಸ್ಸಿಗೆ ಉತ್ಕಟವಾದ ಕಳವಳವನ್ನುಂಟುಮಾಡುತ್ತಿರುವುವು. 1565 ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ವಿಜಯನಗರಕ್ಕೆ ಈಗತಿ ಬಂತು. ಅಮೇಲೆ ಅಲ್ಲಿನ ರಾಜಪುತ್ರರು ಎಲ್ಲೋರಿಗೆ ಬಂದು ಕೊನೆಗೆ ಚಂದ್ರಗಿರಿಯನ್ನು ಸೇರಿದರು.

ಈ ದಿವ್ಯ ಪುರುಷರ ತಂದೆಯ ಹೆಸರು ಮಾಯಣನೆಂದೂ ತಾಯಿಯ ಹೆಸರು ಶ್ರೀಮತಿಯೆಂದೂ ಪರಾಶರಸ್ಮೃತಿಯ ಉಪೋದ್ಘಾತದಿಂದ ತಿಳಿಯಬರುತ್ತದೆ. ಈ ಭಾರತೇಯ ಚೈತನ್ಯಪುರುಷರು ಯಜುರ್ವೇದದ ತೈತ್ತೀಯ ಶಾಖೆಯವರು. ಬೌದ್ಧಾಯನರು ಮತ್ತು ಭಾರದ್ವಾಜರ ವಂಶೀಯರು.

ಇವರು ಯಾವ ಸುಮುಹೂರ್ತದಲ್ಲಿ ಅವತರಿಸಿದರೊ ಅದು ನಿಷ್ಕೃಷ್ಟವಾಗಿ ತಿಳಿದಿಲ್ಲ. ಸುಮಾರು 14 ನೇ ಶತಮಾನದಲ್ಲಿ ಆವಿರ್ಭವಿಸಿದರೆಂದು ಹೇಳಿದರೆ ಬಹಳ ವ್ಯತ್ಯಾಸವಾಗಿರಲಾರದೆಂದು ತೋರುತ್ತದೆ. ಲೋಕದಲ್ಲಿ ಪ್ರಸಿದ್ಧಪುರುಷರಾಗುವವರೆಲ್ಲಾ ಆದಿಯಲ್ಲಿ ಬಡಸರಾಗಿದ್ದುಷ್ಟಿಯೆಂದು ದೈವನಿಯಾಮಕವಿರಬಹುದು.

ಮಾಧವಾಚಾರ್ಯರು ಬಾಲ್ಯದಲ್ಲಿ ಕೇವಲ ಬಡತನದಲ್ಲಿ ಬೆಳೆದರು. ಇವರಿಗೆ ಸಾಯಣಾಚಾರ್ಯನೆಂಬೊಬ್ಬರು ತಮ್ಮುಂದಿರಿದ್ದರು. ಸಹೋದರ ಪ್ರೀತಿಯು ವಿಷಯದಲ್ಲಿ ಬೇರೆ ಯಾವ ಉದಾಹರಣೆಯೂ ಮುಂದೆ ಸಿಕ್ಕಲಾರದಷ್ಟರ ಮಟ್ಟಿಗೆ ಈ ಸಹೋದರರು ಪರಸ್ಪರ ಪ್ರೀತಿಯಿಂದ ಒಂದೇಕಡೆ ಇದ್ದು, ಒಂದೇಕಡೆ ಓದಿ ಸಂಸ್ಕೃತಭಾಷೆಯ ಅನೇಕ ಶಾಸ್ತ್ರಶಾಖೆಗಳಲ್ಲಿ ಬಂದೇವಿಧವಾದ ಪಾಂಡಿತ್ಯವನ್ನು ಪಡೆದು, ಕೊನೆಗೆ ಒಂದೊಂದಾಗಿ ಪ್ರತಿಯೊಂದು ಗ್ರಂಥದ ಕರ್ತೃತ್ವದಲ್ಲಿಯೂ ಏಕೀಭವಿಸಿದ್ದರು. ದಾರಿದ್ರ್ಯಸಂಕಟವನ್ನು ಅನುಭವಿಸಲಾರದೆ ಅದರ ಪರಿಹಾರಕ್ಕಾಗಿ ಮಾಧವಾಚಾರ್ಯರು ಪಾರ್ವತಿಯನ್ನು ಕುರಿತು ದೀರ್ಘಕಾಲ ತಪಸ್ಸು ಮಾಡಿದರು. ಒಂದು ರಾತ್ರಿ ಸ್ವಪ್ನದಲ್ಲಿ ಆ ಇಷ್ಟಾರ್ಥವು ಪುನರ್ಜನ್ಮದಲ್ಲಿ ಸಾಧ್ಯವಾಗುವುದೆಂದು ಹೇಳಿದಂತಾಯಿತಂತೆ. ಪುನರ್ಜನ್ಮವೆಂದಕೂಡಲೆ ಮನಸ್ಸು ಸೋತು ಹೋದೀತು. ಭಗವದಾರಾಧನೆಯು ಎಂದಿಗೂ ವ್ಯರ್ಥವಾಗುವುದಿಲ್ಲ. ಭಗವಂತನು ಇಂತಹ ದೃಢಮನೋಭಾವಗಳುಳ್ಳವರು ಸಿಕ್ಕಿದರೆ ಸಾಕೆಂದು ನಿರೀಕ್ಷಿಸುತ್ತಿದ್ದು ವ್ಯಾಜಾಂತರಗಳಿಂದ ಅವರ ಹೃದಯದಲ್ಲಿ ಪ್ರವೇಶಿಸಿ ಕಾರ್ಯವನ್ನು ಸಾಧಿಸುವನು.

ಈ ಹೊತ್ತಿಗೆ ವಿಜಯನಗರದ ಉತ್ಪತ್ತಿ ಲಯಗಳೆರಡೂ ಆಗಿಹೋದವು. ಕಷ್ಟಕಾರ್ಪಣ್ಯವೇ ಹೆಚ್ಚುತ್ತಿತ್ತು. ಮಾಧವಾಚಾರ್ಯರಿಗೆ ಆ ಹಾಳು ದರಿದ್ರಾವಸ್ಥೆಯು ಬಹು ದುಸ್ಸಹವಾಗಿತ್ತು. ಈ ಸಂಕಟವು ಪುನರ್ಜನ್ಮದಲ್ಲೇ ಹೋಗುವುದೆಂದಬಳಿಕ ಅವರ ಮನಸ್ಸಿಗೆ ಮತ್ತಷ್ಟು ಬೇಸರ ಹುಟ್ಟಿತು. ಏನುಮಾಡಬೇಕು? ಭಗವತ್ಸಂಕಲ್ಪದ ಮುಂದೆ ಮನುಷ್ಯಸಂಕಲ್ಪವೆ? ಭಗವತ್ಸಂಕಲ್ಪವೇನೋ ಹೆಚ್ಚಿನದೇ ಸರಿ. ಆದರೆ ಯಃಕಶ್ಚಿದರಾದ ಜನರು ಸಮಸ್ತವೂ ದೈವೇಚ್ಛೆಯೆಂದು ತಲೆಯುಮೇಲೆ ಕೈಹೊತ್ತುಕೊಂಡು ಮೊಣಕಾಲ ಸಂದಿಯಲ್ಲಿ ತಲೆಯನ್ನು ಸಿಕ್ಕಿಸಿಕೊಂಡು ಕೂತು ತಟಸ್ಥರಾಗುವರು. ಅಂಥವರಿಗೆ ಭಗವತ್ಸಂಕಲ್ಪವೇ ಸಂಕಲ್ಪ. ಮಾಧವಾಚಾರ್ಯರು ಅಬಗೆಯುವರಲ್ಲ. ಸರ್ವವಿದ್ಯಾನಿಧಿಗಳು. ಸಮಸ್ತ ಶಾಸ್ತ್ರಗಳು ಇವರಿಗೆ ಕರತಲಾಮಲಕವಾಗಿದ್ದುವು. ಧೈರ್ಯ ಶೌರ್ಯ ಔದಾರ್ಯಾದಿ ಗುಣಗಳು ಇವರಲ್ಲಿ ಮೂರ್ತೀಭವಿಸಿದ್ದುವು.

ಮಾಧವಾಚಾರ್ಯರಲ್ಲಿ ದಾರಿದ್ರ್ಯಸಂಕಟದ ಪ್ರತೀಕಾರದ ಯೋಚನೆಯು ತಟಸ್ಥವಾಗಲಿಲ್ಲ. ಮೊದಲಿಗಿಂತ ಹೆಚ್ಚಾಗಿ ಮುಂದುವರಿಯಿತು. ಕೊನೆಗೆ ತಮ್ಮಲ್ಲಿ ತಾವು ಚೆನ್ನಾಗಿ ವಿಚಾರಮಾಡಿದರು. ದಾರಿದ್ರ್ಯವೆಂಬ ಭಾವನೆಯನ್ನೇ ಮೂಲೋ

ತ್ಸಾಟನೆ ಮಾಡುವುದು ಸರ್ವಶ್ರೇಷ್ಠವೆಂದು ತಮ್ಮಲ್ಲಿ ತಾವೇ ನಿಶ್ಚಯಿಸಿದರು. ಈ ಸಿದ್ಧಾಂತವು ಕೇವಲ ವಾಗಾಡಂಬರದಲ್ಲಿ ಪೂರ್ಯೆಸಲಿಲ್ಲ. ಮಾಧವಾಚಾರ್ಯರು ಕೂಡಲೆ ಸನ್ಯಾಸಾಶ್ರಮವನ್ನು ಸ್ವೀಕರಿಸಿದರು. ಆಶ್ರಮಭೇದವೇ ಜನ್ಮಭೇದವೆಂದು ಭಗವದಭಿಮತವಾಗಿ ಪರಿಣಮಿಸಿತು. ಮಾಧವಾಚಾರ್ಯರು ಶ್ರೀ ಶೃಂಗಗಿರಿಯ ಜಗದ್ಗುರು ಸಿಂಹಾಸನವನ್ನಲಂಕರಿಸಿ ಮಠಾಧಿಪತ್ಯವನ್ನು ವಹಿಸಿದರು.

ವಿಜಯನಗರದ ಹೆಸರುವಾಸಿಗೆ ಇವರೇ ಕಾರಣಕರ್ತರು. ಇವರ ದೆಸೆಯಿಂದಲೇ ವಿಜಯನಗರವು ದಾಕ್ಷಿಣಾತ್ಯ ರಾಜ್ಯಮಾಲೆಯಲ್ಲಿ ಅಗ್ರಸ್ಥಾನವನ್ನೇರಿತು. ಜನಮಂಡಲಿಯ ಆಚಾರ ವ್ಯವಹಾರವು ಮನುಧರ್ಮಶಾಸ್ತ್ರವನ್ನನುಸರಿಸದೆ ಪರಾಶರ ಸ್ಮೃತಿಯನ್ನವಲಂಬಿಸುತ್ತಿದ್ದುದು ಇವರ ದೃಷ್ಪಥಕ್ಕೆ ವಿಷಯವಾಯಿತು. ಈಗಲೂ ಕಲೌಪಾರಾಶರಸ್ಮೃತಿ ಎಂದು ರೂಢಿಯಾಗಿದೆ. ಆ ಪರಾಶರಸ್ಮೃತಿಯ ಅರ್ಥವು ಸರ್ವಜನರಿಗೂ ಸುಲಭವಾಗಿ ತಿಳಿಯುವಂತೆ ಮಾಧವಾಚಾರ್ಯರು ಬಹು ಪ್ರಶಸ್ತವಾದ ವ್ಯಾಖ್ಯಾನವನ್ನು ಪ್ರಕಟಿಸಿದರು. ಮತ್ತು ನ್ಯಾಯವಿಮರ್ಶೆಯ ವಿಷಯವಾಗಿ ವ್ಯವಹಾರ ಮಾಧವೀಯವೆಂದು ಹೆಸರಿಟ್ಟು ತಾವೇ ಒಂದು ಗ್ರಂಥವನ್ನು ಹೊರಡಿಸಿದರು. ಸಾಮಾನ್ಯವಾಗಿ ರಾಜಕಾರ್ಯವು ವಿದ್ಯಾಕಾಲಕ್ಷೇಪಕ್ಕೆ ಪ್ರತಿಬಂಧಕವಾದ ನೆವವಾಗಿ ಇತರರಲ್ಲಿ ಪರಿಣಮಿಸಬಹುದು. ಮಾಧವಾಚಾರ್ಯರಿಗೆ ರಾಜಕಾರ್ಯ ಗೌರವಗಳು ಅಪಾರವಾಗಿದ್ದರೂ ವಿದ್ಯಾಕಾಲಕ್ಷೇಪವನ್ನು ಸಂಕೋಚಮಾಡುತ್ತಿರಲಿಲ್ಲ. ತಮಗೆ ಸಿಕ್ಕಿದ ಅವಕಾಶದಲ್ಲೆಲ್ಲಾ ಸಂಸ್ಕೃತಭಾಷೆಯ ಸಮಸ್ತ ಶಾಸ್ತ್ರ ಶಾಖೆಗಳನ್ನು ಪರಿಶೀಲಿಸುತ್ತಿದ್ದರು. ಅದ್ವಿತೀಯಪಂಡಿತರಾದ ಸಾಯಣಾಚಾರ್ಯರು ತಮ್ಮ ಸರ್ವಶಕ್ತಿಯನ್ನೂ ಶಾಸ್ತ್ರವಿಚಾರದಲ್ಲಿ ವಿನಿಯೋಗಿಸುತ್ತಿದ್ದರು. ತಮ ಸರ್ವಕಾಲದಲ್ಲಿಯೂ ಗ್ರಂಥಕಾಲಕ್ಷೇಪ ಮಾಡುತ್ತಿದ್ದರು. ಮಾಧವಾಚಾರ್ಯರು ರಾಜಕಾರ್ಯಗಳು ಮುಗಿದನಂತರ ಪುಸ್ತಕಭಂಡಾರದಕಡೆ ತಿರಿಗಿ ತಮ್ಮ ತಮ್ಮಸೊಡನೆ ಸೇರಿ ಶಾಸ್ತ್ರವಿಚಾರವೆಂಬ ಆನಂದಸಾಗರದಲ್ಲಿ ಮುಳುಗುತ ತೇಲುತ್ತಿದ್ದರು. ನಿಷ್ಕಾರಣವಾಗಿ ಕಾಲವನ್ನು ಕಳೆಯುವೆ ಎಷ್ಟೋ ತೊಂದರೆಗಳಿದ್ದರೂ ಬೇಸರಗೊಳ್ಳದೆ ಏಕಸ್ವಕಾರವಾದ ಉತ್ಸಾಹಶಕ್ತಿಯಿಂದ ತಮ್ಮ ತನುಮನಗಳನ್ನು ಲೋಕಾನುಗ್ರಹಾರ್ಥವಾಗಿ ಅರ್ಪಿಸಿ ಪರಹಿತೈಷಿತೆಯೇ ತಮ್ಮ ಸರ್ವಸ್ವವೆಂದು ತಿಳಿದು ನಡೆಯುವ ದೇಶಬಂಧುಗಳು ಈಗ ಎಲ್ಲಿ ಮಾಯವಾದರೋ! ಎಲೈ ಭೂದೇವತೆಯೇ? ನೀನು ಕ್ಷಣೇ ಕ್ಷಣೇ ಸಾವಿರಾರು ವ್ಯಕ್ತಿಗಳನ್ನು ಹೆರುತ್ತಾ ವೃಥಾ ನಿನ್ನ ದಾರ್ಢ್ಯ

ವನ್ನು ಸೂಚಿಸಿಕೊಂಡು ನಿನ್ನ ಸಂತತಿಯಾದ ಜನಮಂಡಲಿಯಲ್ಲಿ ಅನಿರೀಕ್ಷಿತ ವಾದ ಆತಂಕವನ್ನುಂಟುಮಾಡುತ್ತಿರುವೆಯಲ್ಲ. ನೀನು ಈಗ ಹೆರುತ್ತಿರುವ ಕೇವಲ ಉದರಂಭರಿಗಳೂ ಸ್ವಾರ್ಥಪರಾಯಣರೂ ಆದ ಸಂತತಿಯಿಂದ ನೀನು ಎಂದಿಗೂ ಪುತ್ರವತಿಯೆನಿಸಿಕೊಳ್ಳಲಾರೆ. ಮಾಧವಾಚಾರ್ಯರ ಮತ್ತು ಸಾಯಣಾಚಾರ್ಯರಿರೀತಿಯಾದ ಸಂತತಿಯನ್ನು ಪಡೆಯುವುದಕ್ಕೆ ಯತ್ನಿಸು. ಭಾರತೀಯ ಪ್ರಾತ್ರಪುರುಷರನ್ನು ಪತಿಗಳಾಗಿಟ್ಟುಕೊಳ್ಳದೆ ಹೋದ ನಿನಗೆ ಅಂತಹ ಸತ್ಸಂತತಿಯಾಗುವುದೇನೋ ಸಂಪೂರ್ಣ ಸಂದೇಹವೇ ಆದರೂ ಪ್ರಯತ್ನಮಾಡು. ಆಗಾಗ್ಯೆ ಒಬ್ಬೊಬ್ಬರು ಹುಟ್ಟಿದರೂ ಸಾಕು.

ಮಾಧವಾಚಾರ್ಯರು ನ್ಯಾಯಮಾಲಾವಿಸ್ತರ ಎಂಬ ಹೆಸರಿನಿಂದ ಪೂರ್ವ ಮೀಮಾಂಸವೆಂಬ ಗ್ರಂಥವನ್ನು ಬರೆದರು. ವೇದಾಂತಸಂಬಂಧವಾದ ಅನೇಕ ಗ್ರಂಥಗಳಿಗೂ ಮತ್ತು ಅನೇಕ ಉಪನಿಷತ್ತುಗಳಿಗೂ ವ್ಯಾಖ್ಯಾನಗಳನ್ನೂ ರಚಿಸಿದದರು. ಇವರ ಅಪ್ರತಿಮವಾದ ಪ್ರತಿಭೆಯನ್ನು ನೋಡಿ ವೀರಬುಕ್ಕನು ನಾಲ್ಕು ವೇದಗಳಿಗೂ ವ್ಯಾಖ್ಯಾನವನ್ನು ಬರೆಯಬೇಕೆಂದು ಮಾಧವಾಚಾರ್ಯರನ್ನು ಕೇಳಿಕೊಂಡನು. ವೀರಬುಕ್ಕನಿಗೆ ಈ ಆಲೋಚನೆ ಹೊಳೆದುದು ಭಾರತೀಯರ ತಪಃಫಲವೇಸರಿ. ವೀರಬುಕ್ಕನು ಆಗ ಅದನ್ನು ಮಾಡಿಸದಿದ್ದರೆ ವೇದಗಳು ನಿರ್ನಾಮವಾಗಿ ಹೋಗಬೇಕಾಗಿತ್ತು. ವೀರಬುಕ್ಕನಂತಹ ರಾಜರೇ ಈಚಿಗೆ ಇನ್ನೂ ಕೆಲವುಕಾಲ ದೊರಕಿದ್ದರೆ ವೇದಾರ್ಥಗಳು ಈಗಿರುವುದಕ್ಕಿಂತ ಇನ್ನೂ ಪ್ರಭಾಮಯವಾಗಿ ಬೆಳಗುತ್ತಿದ್ದುವು. ಈ ಸಾಧಾರಣವಾದ ಕೆಲಸವನ್ನು ನೆರವೇರಿಸುವ ವಿಷಯದಲ್ಲಿ ಮಾಧವಾಚಾರ್ಯರು ಮನಸ್ಸನ್ನು ದೃಢಮಾಡಿದರು. ಸಾಯಣಾಚಾರ್ಯರೊಡನೆ ಸೇರಿ ಬರೆಯುವುದಕ್ಕೆ ಉಪಕ್ರಮಿಸಿದರು, ಈ ಸಹೋದರರಿಬ್ಬರೂ ವರ್ಷಗಟ್ಟಲೆ ತಾಳ್ಮೆಯಿಂದ ಸಮಸ್ತ ಸಾಧಕಬಾಧಕಗಳನ್ನು ವಿಚಾರ ಮಾಡಿ ಬರೆದ ಪುಸ್ತಕವೇ ಈಗ ವೇದಾರ್ಥಪ್ರಕಾಶವೆಂಬ ಹೆಸರಿನಿಂದ ಜನಗಳ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸುತ್ತಿರುವುದು. ಮಾಧವಾಚಾರ್ಯರಿಗೆ ರಾಜಕೀಯ ಕಾರ್ಯಭಾಗಗಳು ಹೇರಳವಾಗಿದ್ದುದರಿಂದ ಗ್ರಂಥರಚನಾಭಾರವೆಲ್ಲಾ ಬಹಳಮಟ್ಟಿಗೆ ಸಾಯಣಾಚಾರ್ಯರಲ್ಲಿದ್ದಂತೆ ತೋರುತ್ತದೆ. ಆದ್ದರಿಂದ ಆವರ ಗ್ರಂಥಗಳ ಪ್ರತಿಭಾಗದ ಕೊನೆಯಲ್ಲಿಯೂ ಸಾಯಣಾಚಾರ್ಯ ವಿರಚಿತೆ ಮಾಧವೀಯೆ ವೇದಾರ್ಥಪ್ರಕಾಶೆ ಎಂದಿದೆ. ಆದುದರಿಂದ ಸಾಯಣಾಚಾರ್ಯರು ಒರಪಣಿಗೆ ಕೆಲಸ ಮಾಡಿರಬಹುದು. ಮಾಧವಾಚಾರ್ಯರು ಆದ

ನ್ನು ಪರಿಶೀಲನೆ ಮಾಡಿ ಕ್ರಮಪಡಿಸಿ ಪ್ರಕಟಿಸಿದರೆಂಬ ವಿಷಯದಲ್ಲಿ ಸಂದೇಹವಿಲ್ಲ.

ಮಾಧವಾಚಾರ್ಯರು ಸನ್ಯಾಸಾಶ್ರಮವನ್ನು ಸ್ವೀಕರಿಸುತ್ತಲೇ ಜನ್ಮಭೇದವಾಯಿತೆಂದು ಹಿಂದೆ ಹೇಳಿದೆನಷ್ಟೆ. ಸಮಸ್ತ ವರ್ಣಾಶ್ರಮಧರ್ಮಗಳನ್ನು ಉಜ್ಜೀವನ ಮಾಡುವುದಕ್ಕಾಗಿ ಶೃಂಗೇರೀ ಮಠಾಧಿಪತ್ಯವನ್ನು ವಹಿಸಿದಾಗ ಅವರಿಗೆ ವಿದ್ಯಾರಣ್ಯರೆಂದು ನಾಮಭೇದವುಂಟಾಯಿತು. ವಿದ್ಯಾಗ್ರಗಣ್ಯರಾದ ವಿದ್ಯಾರಣ್ಯರು ಕೆಲಕಾಲ ಶಿಷ್ಯೋದ್ಧಾರ ಮಾಡಿ 1386 ನೇ ವರ್ಷದಲ್ಲಿ ನಶ್ವರವಾದ ಜಡದೇಹವನ್ನು ಕಳೆದು ಅಚಂದಾರ್ಕಸ್ಥಾಯಿಯಾದ ಕೀರ್ತಿಶರೀರದಿಂದ ದಿಗಂತವಿರಾಜಮಾನರಾಗಿರುವರು.

ಶ್ರೀಮತ್ಪರಮಹಂಸರಾದ ವಿದ್ಯಾರಣ್ಯರು ಈ ಲೋಕಕ್ಕೆ ಈಶ್ವರನ ಪ್ರಥಮಾವತಾರವಾಗಿ ಪರಿಣಮಿಸಿ ಭೂಸಂಚಾರ ಮಾಡುತ್ತಾ ಸಮಸ್ತ ಪ್ರದೇಶಗಳಲ್ಲಿಯೂ ನಾನಾವಿಧರಾದ ವಿತಂಡಾವಾದಿಗಳನ್ನು ಸೋಲಿಸಿ ಅದ್ವೈತಮತವನ್ನು ನೆಲೆಗೊಳಿಸಿದರು.

ವಿದ್ಯಾರಣ್ಯರು ಪ್ರಕಾಶಪಡಿಸಿದ ಗ್ರಂಥಗಳ ವಿವರ.—

(1) ವೇದಾರ್ಥಪ್ರಕಾಶ—ಇದರಲ್ಲಿ ನಾಲ್ಕು ವೇದಗಳ ಅರ್ಥವನ್ನೂ ವಿವರಿಸಿದಾರೆ. ಆವರ ಅದ್ಭುತ ಪಾಂಡಿತ್ಯ ಮತ್ತು ವಿಚಾರಶಕ್ತಿಗೆ ಈದೊಂದು ಚಿರಸ್ಥಾಯಿಯಾದ ಸ್ಮರಣೀಯ ಕಾರ್ಯ.

(2) ಐತ್ತರೀಯ ಮತ್ತು ಕಾಂಡ್ಯ ಬ್ರಾಹ್ಮಣಗಳ ವ್ಯಾಖ್ಯಾನ.

(3) ಪರಾಶರಸ್ಮೃತಿಯ ವ್ಯಾಖ್ಯಾನ.

(4) ನ್ಯಾಯಮಾಲಾವಿಸ್ತರ ಪೂರ್ವಮೀಮಾಂಸದ ವಿಷಯ,

(5) ಸರ್ವದರ್ಶನ ಸಂಗ್ರಹ—ಭರತಖಂಡದಲ್ಲಿರುವ ನಾನಾಬಗೆಯಾದ ಮತಧರ್ಮ ಮತ್ತು ವೇದಾಂತಗಳ ವಿಷಯವಾಗಿ ಸಮಗ್ರಸಿದ್ಧಾಂತ.

(6) ದಶೋಪನಿಷದ್ದೀಪಿಕಾ—ಬ್ರಹ್ಮಗೀತ ಪಂಚದಶಿ ಅಪರೋಕ್ಷಾನುಭೂತಿ ಟೀಕಾ ಮೊದಲಾದವುಗಳು ಅದ್ವೈತ ವೇದಾಂತಸಂಬಂಧವಾದ ಪುಸ್ತಕಗಳು.

(7) ಶಂಕರವಿಜಯ—ಅದ್ವೈತಮತಸ್ಥಾಪಕರಾದ ಶ್ರೀ ಶಂಕರಾಚಾರ್ಯರ ಚರಿತ್ರ ನಾರ.

ಈ ಪುಣ್ಯಪುರಷರ ವಿಷಯವಾದ ವಾರ್ತಾಸಂತತಿಗಳ ಅಗಿನ ತುರುಕರ ಧೀರ್ ಧೀರ್ ಶಬ್ದಗಳ ಗಡಿಬಿಡಿಯಲ್ಲಿ ಮುಂದುವರಿಯದೆ ಹೋಗಿರಬಹುದು. ಆದುದರಿಂದಲೇ ಅವರ ವಿಷಯವಾದ ಚರಿತ್ರೆಯನ್ನು ಯಾರೂ ಸಮಗ್ರವಾಗಿ ಬರೆದಿಟ್ಟಂತೆ ತೋರುವುದಿಲ್ಲ. ಸಮಸ್ತ ವೇದಾರ್ಥಗಳನ್ನು ಉದ್ಧಾರಮಾಡಿ ಪ್ರಜಾಹಿತೈಕಪರಾಯಣರಾಗಿ ಕೃತಾರ್ಥರಾದ ಆ ಸತ್ಪುರುಷರ, ಆ ಸಕಲಕಲಾವಿದರ, ಆ ಸರ್ವಗುಣಸಂಪನ್ನರ, ಅಸದೃಶವಾದ ಐಹಿಕಜೀವನ ಯಾತ್ರಾಗತಿ ವಿಶೇಷಗಳನ್ನು ಯಥಾಪ್ರತಿಯಾಗಿ ಚಿತ್ರಿಸುವ ಕರ್ಮವು ಅನಾಮಧೇಯನ ವಕ್ರಹಸ್ತಕ್ಕೆ ದಕ್ಕುವುದಲ್ಲ. ಆದರೂ ಯಥಾಮತಿಯಾಗಿ ಇಲ್ಲಿ ಸೂಚಿಸಿರುವ ವಾಕ್ಯಧಾರೆಯು ಅವರ ವಿಷಯವಾಗಿರುವ ಅನಿರ್ವಚನೀಯವಾದ ಭಕ್ತಿರಸದಿಂದಾದುದಲ್ಲದೆ ಬೇರೆ ಅಲ್ಲ. ಸರ್ವವೃತ್ತಾಂತಸಂಗ್ರಹಶೀಲರೂ, ಸಾರ್ವಜನಿಕಕಾರ್ಯೋತ್ಸಾಹಿಗಳೂ ಆದ ಸಾಧುಶಿರೋಮಣಿಗಳು ಸದಯರಾಗಿ ಈ ಸತ್ಕಾರ್ಯದಲ್ಲಿ ಪ್ರವರ್ತಿಸಿದರೆ ಸಂಕಲ್ಪವು ಸಾರ್ಥಕವಾದೀತು.

ಎಚ್. ಜೆಡಂಬರ್ಲೈಯ್ಯ.
ಹೆಡ್ಮಾಸ್ಟರ್. ಎ. ವಿ. ಸ್ಕೂಲ್ ಕಡೂರು.

ಕ್ಷೇತ್ರಗಣಿತ.

ವಿಷಮಬಾಹು ತ್ರಿಭುಜ.

(8) ಒಂದು ತ್ರಿಭುಜದ ಪಾದ 7 ಅ; ಲಂಬ 6 ಅ; ಬಾಹು 7 ಅ. 6 ಅಂ. ಆದರೆ, ಮತ್ತೊಂದು ಭುಜವೆಷ್ಟು ?

(9) ಒಂದು ತ್ರಿಭುಜದ ಪಾದ 21 ಅ; ಲಂಬ 18 ಅ; ಬಾಹು 22 ಅ. 6 ಅಂ; ಆದರೆ ಮತ್ತೊಂದು ಭುಜವೆಷ್ಟು ?

(10) ಒಂದು ತ್ರಿಭುಜದ ಪಾದ 378 ಲಿಂ; ಲಂಬ 324 ಲಿಂ; ಬಾಹು 405 ಲಿಂ; ಆದರೆ ಮತ್ತೊಂದು ಭುಜವೆಷ್ಟು ?

(11) ಒಂದು ತ್ರಿಭುಜದ ಪಾದ 189 ಗ, ಲಂಬ 162 ಗ, ಬಾಹು 202 ಗ. 1 ಅ. 6 ಅಂ, ಆದರೆ ಮತ್ತೊಂದು ಭುಜವೆಷ್ಟು ?

ಬೇಕು. ರಿಜಿಸ್ಟರಿನಲ್ಲಿ ಮೆಂಬರಿನ ಹೆಸರು; ಅವನ ತಂದೆಯ ಹೆಸರು; ಮೆಂಬರಿನ ಮೇಲ್ವಿಳಾಸ; ಉದ್ಯೋಗ ಇವುಗಳು ದಾಖಲಾಗಿರಬೇಕು. ಮತ್ತು 3 ನೆಯ ನಿಬಂಧನೆಯಲ್ಲಿ ನಮೂದಾದ ಗ್ರಾಮ, ಅಥವಾ ಗ್ರಾಮಗಳ ಒಳಗಾಗಲಿ, ಹೊರಗಾಗಲಿ, ಮೆಂಬರು ಉಂಟಾಗಿರುವ ಜಮೀರ್ದಾಗಳು, ಅಥವಾ ವತಾರಗಳು ಇವುಗಳ ತಪ್ಸೀಲನ್ನು ದಾಖಲೆ ಇಟ್ಟಿರಬೇಕು.

10. ಪ್ರತಿಯೊಬ್ಬನೂ ತಾನು ಮೆಂಬರಾಗುವುದಕ್ಕೆ ಕೊಡುವ ಅಪ್ಲಿಕೇಷ್ನ ಅಂಗೀಕಾರವಾದಮೇಲೆ.....ಮೊಬಲಗಿನ ಪ್ರವೇಶಧನವನ್ನು ಕೊಡಬೇಕು. ಮತ್ತು ಷೇರುಗಳಿದ್ದಹಪಕ್ಷೆ ಸೊಸೈಟಿಯ ಒಂದು ಷೇರನ್ನಾದರೂ ತೆಗೆದುಕೊಂಡು, ಪ್ರತಿ ಷೇರಿಗೂ .....ಮೊಬಲಗಿಗೆ ಕಡಿಮೆ ಇಲ್ಲದೇ ಷೇರ್ ಮೊಬಲಗನ್ನು ಕಂತಿನ ಪ್ರಕಾರ ಕೊಡಬೇಕು.

11. ಮೇಲೆ ಹೇಳಿದ ರಿಜಿಸ್ಟರಿನಲ್ಲಿ ರುಜು ಮಾಡಿ, ಪ್ರವೇಶಧನವನ್ನು ಕೊಟ್ಟು, ಷೇರುಗಳಿದ್ದಲ್ಲಿ ಷೇರ್, ಅಥವಾ ಷೇರ್‌ಗಳನ್ನು ಪಡೆದುಕೊಂಡು, ಅದಕ್ಕಾಗಿ ಒಂದು ಕಂತಿನ ಮೊಬಲಗನ್ನಾದರೂ ಕೊಟ್ಟು ಇರುವ ಪ್ರತಿಯೊಬ್ಬ ಮನುಷ್ಯನು, ಸೊಸೈಟಿಗೆ ಮೆಂಬರಾಗಿರುವುದಕ್ಕೆ ಯೋಗ್ಯನಾಗುವನು. ಮತ್ತು ಅಂಥಾವನಿಗೆ ಸೊಸೈಟಿಯ ಸಂಬಂಧವಾದ ಹಕ್ಕು ಜವಾಬ್ದಾರಿಗಳು ಅನುಬಂಧಿಸುತ್ತವೆ.

ಮೆಂಬರಾಗಿರುವುದು ತಪ್ಪಿಹೋಗುವುದು.

12. (ಎ) ರಾಜೀನಾಮೆಯಿಂದಲೂ (ಬಿ) ಮುಂದೆ ಹೇಳುವ ರೀತಿಯಿಂದ ಅಥವಾ ವಜಾ ಮಾಡಲ್ಪಡುವುದರಿಂದಲೂ (ಸಿ) ದಿವಾಳಿಯಾಗುವುದರಿಂದಲೂ (ಡಿ) ಘೌತಿಯಿಂದಲೂ ಮೆಂಬರಾಗಿರುವುದು ತಪ್ಪಿಹೋಗುವುದು.

13. ಘೌತಿ ಸಬಬು ವಿನಾ ಮತ್ಯಾವ ವಿಧದಿಂದಲಾದರೂ ಮೆಂಬರಾಗಿರುವುದು ತಪ್ಪಿಹೋದವನಿಗೆ ಸಲ್ಲಬೇಕಾದ ಷೇರ್ ಅಥವಾ ಷೇರ್‌ಗಳ ಬಗೆ ಕೊಟ್ಟಿರುವ ಮೊಬಲಗು, ಹಂಚಿಕೆ ಹಣ, ಬಡ್ಡಿ ಅಥವಾ ಈ ನಿಬಂಧನೆಗಳ ಮೇಲೆ ಬರಬೇಕಾದ ಇತರ ವಿಧವಾದ ಮೊಬಲಗು, ಇವುಗಳ ಪೈಕಿ ಸೊಸೈಟಿಗೆ ಅವನಿಂದ ಬರಬೇಕಾದ ಮೊಬಲಗು ಜಾತಾ, ಬಾಕಿ ಮೊಬಲಗನ್ನು ಪಡೆಯಲು ( ) ತಿಂಗಳ ವರೆಗೂ ಅವನಿಗೆ ಹಕ್ಕಿರುತ್ತದೆ. ಆದರೆ ರಿಜರ್ವ್ ಅಂದರೆ ಜಕೇರಿ ಫಂಡಿನ ಮೇಲೆಯೂ, ಸೊಸೈಟಿಯ ಸಂಬಂಧವಾದ ಇತರ ಆಸ್ತಿಯ ಮೇಲೆಯೂ ಅವನಿಗೆ ಯಾವ ಹಕ್ಕೂ ಇರುವುದಿಲ್ಲ.

14. (1) ಬಾಕೀದಾರನಾದ ಮೆಂಬರು, ನೋಟೀಸ್ ಕೊಟ್ಟು ಒಂದು ತಿಂಗಳೊಳಗಾಗಿ ಸೊಸೈಟಿಗೆ ಕೊಡಬೇಕಾದ ಸಾಲವನ್ನು ತೀರಿಸದೆ ಹೋದರೆ, ಅಂಥಾವನಸ್ತಿ ಪಬಾ ಮಾಡುವುದಕ್ಕೆ ಕಮಿಟಿಯವರಿಗೆ ಅಧಿಕಾರವಿರುತ್ತದೆ.

(2) ಒಬ್ಬ ಮೆಂಬರು ಆಚರಿಸುವ ಯಾವ ಕೆಲಸವೇ ಆಗಲಿ, ಸೊಸೈಟಿಯ ಪಾತ್ರಿಗೆ, ಅಥವಾ ಗೌರವಕ್ಕೆ, ಅಥವಾ ಅಭಿವೃದ್ಧಿಗೆ ಅಪಾಯಕರವಾದುದೆಂದು ಸೊಸೈಟಿಗೆ ತೋರಿದರೂ, ಸೊಸೈಟಿಯ ಒಳ ನಿಬಂಧನೆಗಳನ್ನು ಅಥವಾ ಸಹಕಾರಿ ನಿಯಮಗಳನ್ನು, ಮೆಂಬರು ಉಲ್ಲಂಘಿಸತಕ್ಕವನಾದರೂ, ಅಂಥಾವನನ್ನು ತೆಗೆದುಹಾಕುವುದಕ್ಕೆ ಸೊಸೈಟಿಗೆ ಅಧಿಕಾರವಿರುತ್ತದೆ.

15. (1) ಮೆಂಬರು ಫೌತಿಯಾದ ಸಮಾಚಾರವು ಕಮ್ಮಿಟಿಗೆ ಗೊತ್ತಾಗಿ ತಿಳಿದುಬಂದ ಒಂದು ತಿಂಗಳೊಳಗಾಗಿ, ಅಂಥಾವನ ಷೇರ್ ಅಥವಾ ಷೇರ್‌ಗಳ ಬಗೆ ಸೊಸೈಟಿಗೆ ಸಂದಾಯವಾಗಿರುವ ಮೊಬಲಗನ್ನು ಡಿಪಾಜಿಟ್ ಲೆಕ್ಕಕ್ಕೆ ದಾಖಲ್ಮಾಡಲು ಕಮ್ಮಿಟಿಯವರು ಬದ್ಧರಾಗಿರುತ್ತಾರೆ. ಹಾಗೆ ಠೇವಣಾತಿ ಲೆಕ್ಕಕ್ಕೆ ದಾಖಲಾದ 3 ತಿಂಗಳೊಳಗಾಗಿ, ಆ ಬಗೆ ಮೊಬಲಗನ್ನು ಪಡೆಯಲು ಫೌತಿಯಾದವನ ವಾರಸ್‌ದಾರನಾಗಲಿ, ಫೌತಿಯಾದವನಿಂದ ನೇಮಕವಾದ ಮನುಷ್ಯನಿಗಾಗಲಿ ಬಂದು ಕೇಳಿದಲ್ಲಿ, ಅಂಥಾವರಿಗೆ ಇತರತಕ್ಕ ಹಕ್ಕು ಸರಿಯಾದುದೆಂದು ಕಮ್ಮಿಟಿಯುವರಿಗೆ ದೃಢವಾಗಿ ತೋರಿದರೆ, ಬಳಿಕ ಫೌತಿಯಾದವನ ಷೇರ್, ಷೇರ್‌ಗಳಿಗಾಗಿ ಕೊಟ್ಟಿರುವ ವ್ಯೂರಾ ಮೊಬಲಗು, ಹಂಚಿಕೆ ಹಣ, ಅಥವಾ ಬಡ್ಡಿ, ಅಥವಾ ಫೌತೀದಾರನಿಗೆ ಸಲ್ಲಬೇಕಾದ ಇತರ ವಿಧವಾದ ಹಣ, ಇವುಗಳ ಪೈಕಿ ಸೊಸೈಟಿಗೆ ಬರಬೇಕಾದುದನ್ನು ವಜಾ ಮಾಡಿಕೊಂಡು ಬಾಕಿ ಮೊಬಲಗನ್ನು ಅಂತಹ ಹಕ್ಕುದಾರನಿಗೆ ಕೊಡಬೇಕು. ಒಂದುವೇಳೆ ಸದರಿ ಹಕ್ಕುದಾರನು ತಾನೂ ಸೊಸೈಟಿಗೆ ಮೆಂಬರಾಗಿದ್ದು ಸದರೀ ಫೌತಿಯಾದವನ ಷೇರ್ ಪ ಷೇರ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಅಪೇಕ್ಷಿಸಿದರೂ ಅಥವಾ ಅಂಥಾವನು ಮೊದಲು ಮೆಂಬರಾಗಿರದೆ ಹೊಸದಾಗಿ ಸೊಸೈಟಿಗೆ ಮೆಂಬರಾಗಿ ದಾಖಲಾದರೂ, ಈ ಉಭಯ ಸಂದರ್ಭಗಳಲ್ಲಿಯೂ ಅಂಥಾವನ ಹೆಸರಿಗೆ ಸದರಿ ಫೌತಿಯಾದವನ ಷೇರ್ ಅಥವಾ ಷೇರ್‌ಗಳನ್ನು ದಾಖಲ್ಮಾಡಬೇಕು.

(2) ಕೆಲವು ವಿಶೇಷ ಸಂದರ್ಭಗಳಲ್ಲಿ, ಫೌತಿಯಾದವನ ಉತ್ತರಕ್ರಿಯೆಗಳಿಗಾಗಲಿ, ಅವನ ಕುಟುಂಬಕ್ಕೆ ಬೇಕಾದ ಅತ್ಯಾವಶ್ಯಕವಾದ ಖರ್ಚಿಗಾಗಲಿ, ಕಮ್ಮಿಟಿಯುವರಿಗೆ ಯುಕ್ತತೋರುವಷ್ಟು ಮೊಬಲಗನ್ನು ಫೌತಿಯಾದವನಿಂದ ನೇಮಕವಾದವನಿಗೆ ಯಾವಕಾಲದಲ್ಲಿ ಬೇಕಾದರೂ ಕೊಡುವುದಕ್ಕೆ, 15 ನೆಯ ಅಧಿಕರಣದ 1 ನೆಯ ಪ್ರಕರಣದಿಂದ ತಡೆಯಾಗಲಾರದು.

ಮೂಲಧನ.

16. ಮೂಲಧನಕ್ಕೆ ಸೇರತಕ್ಕ ಬಾಬುಗಳು ಯಾವವೆಂದರೆ :—

(1) ಪ್ರವೇಶ ಧನ.

(2) ಷೇರುಗಳಿಗಾಗಿ ಬರುವ ಮೊಬಲಗು.

(3) ಛಖ್ ಮಾಹೆಯು ಬಗೆ ಬರುವ ಲಾಭದ, ಸೊಸೈಟಿಯ ತೀರ್ಮಾನದ ಮೇರೆ, ಮೂಲಧನಕ್ಕೆ ಸೇರಿಸಬೇಕಾದ ಹಣ.

(4) ಡಿವಾಜಿಟ್ಟುಗಳು.

(5) ಮೂಲಧನಕ್ಕೆ ಸೇರತಕ್ಕ ಇತರ ವಿಧವಾದ ವರಮಾನಗಳು.

17. (1) ಸೊಸೈಟಿಗೆ..... ಷೇರುಗಳಿರಬೇಕು. ಪ್ರತಿ ಷೇರಿನ ಬೆಲೆಯು.....ಮೊಬಲಗಾಗಿರಬೇಕು. ಆದರೆ, ಷೇರುಗಳನ್ನು, ಅಥವಾ ಷೇರಿನ ಬೆಲೆಯನ್ನೂ, ಅಥವಾ ಈ ಎರಡನ್ನು; ಸೊಸೈಟಿಗೆ ಯುಕ್ತ ತೋರುವಮಟ್ಟಿಗೆ ಹೆಚ್ಚಿಸುವುದಕ್ಕೂ, ತಗ್ಗಿಸುವುದಕ್ಕೂ ಸೊಸೈಟಿಗೆ ಅಧಿಕಾರವಿರುತ್ತದೆ.

(2) ಪ್ರತಿ ಷೇರಿಗೂ ಒಂದು ಗೊತ್ತಾದ ನಂಬರನ್ನು ಕೊಡಬೇಕು. ಮತ್ತು ಆ ನಂಬರುಗಳ ಕ್ರಮವನ್ನು ಅನುಸರಿಸಿ ಷೇರುಗಳನ್ನು ಮೆಂಬರುಗಳಿಗೆ ಕೊಡಬೇಕು.

(3) ಯಾವ ಮೆಂಬರಿಗೂ.....ಷೇರುಗಳಿಗಿಂತ ಹೆಚ್ಚಾಗಿ ಷೇರುಗಳಿರಕೂಡದು.

ಸಾಲವನ್ನು ತೆಗೆಯುವುದು.

18. ಮೊಬಲಗನ್ನು ಎಷ್ಟರಮಟ್ಟಿಗೆ ಯಾವರೀತಿಯಲ್ಲಿ ಯಾವ ಷರತ್ತುಗಳ ಮೇಲೆ ಸಾಲ ತೆಗೆಯುವುದಕ್ಕೆ ಸೊಸೈಟಿಗೆ ಇಷ್ಟವೋ, ಸೊಸೈಟಿಯು ಮಂಜೂರಾತಿಯುಮೇಲೆ ಅಷ್ಟು ಮೊಬಲಗನ್ನು ಆರೀತಿಯಲ್ಲಿ ಅಂತಹ ಷರತ್ತುಗಳ ಮೇಲೆ ಸಾಲಕ್ಕೆ ತೆಗೆಯಲು ಕಮ್ಮಿಟಿಯವರಿಗೆ ಅಧಿಕಾರವಿರುತ್ತದೆ. ಆದರೆ ಹಾಗೆ ಸಾಲಕ್ಕೆ ತೆಗೆಯುವ ಮೊಬಲಗು ಮತ್ತು ಡಿವಾಜಿಟು ದಾರ ಇದ್ದಲ್ಲಿ.....ಜನರಿಂದ ಬಂದಿರುವ ಡಿವಾಜಿಟ್ಟು ಮೊಬಲಗು ಸೇರಿ, ಷೇರುಗಳ ಬಗೆ ಮೂಲಧನಕ್ಕೆ ಬಂದಿರುವ .....ಮೊಬಲಗಿಗಿಂತ ಜಾಸ್ತಿಯಾಗಿರಕೂಡದು.

ಡಿವಾಜಿಟ್ಟುಗಳು.

19. (1) ಕಮ್ಮಿಟಿಯವರು ಮೆಂಬರುಗಳಿಂದ ಡಿವಾಜಿಟ್ಟುಗಳನ್ನು ತೆಗೆದುಕೊಳ್ಳಬಹುದು. ಅವಶ್ಯಕವಾದಲ್ಲಿ ಸೊಸೈಟಿಯವರು ಗೊತ್ತುಮಾಡುವಷ್ಟು ಮೊಬಲಗನ್ನು, ಇತರರಿಂದಲೂ ಡಿವಾಜಿಟ್ಟಾಗಿ ತೆಗೆದುಕೊಳ್ಳಬಹುದು.

(2) ಮೊಬಲಗಿಗಿಂತ ಕಡಿಮೆಯಾದ ಹಣವನ್ನು ಡಿವಾಜಿಟ್ಟಾಗಿ ತೆಗೆದುಕೊಳ್ಳಲಾಗದು. ಮತ್ತು ಒಂದು ರೂಪಾಯಿಗಿಂತ ಕಡಿಮೆಯಾದ ಚಿಲ್ಲರೆ ಮೊಬಲಗಿಗೆ ಬಡ್ಡಿಯು ದಾಖಲಾಗಕೂಡದು.

(3) ಪ್ರತಿ ಮಾಹೆಯು 4 ನೆಯ ತಾರೀಖು ಅಖೈರಿನೊಳಗಾಗಿ ಡಿವಾಜಿಟ್ಟು

ಇಟ್ಟ್ಟು, ಸದರಿ ಮಾಹೆಯು ಆಖೈರ್ ವರೆಗೂ ಲೆಖ್ಖದಲ್ಲಿ ದಾಖಲೆ ಇರುವ ಕಮಿಟ್ಮಾ ಮೊಬಲಗಿನ ಮೇಲೆಯೇ, ಬಡ್ಡಿ ಕೊಡತಕ್ಕದ್ದು. ಮತ್ತ್ಯಾವ ವಿಧದಿಂದಲೂ ಕೊಡತಕ್ಕದ್ದಲ್ಲ.

(4) ಸೊಸೈಟಿಯಿಂದ ಯಾವದಾದರೂ ಅವಧಿಯು ಗೊತ್ತುಮಾಡಿದ್ದಲ್ಲಿ ಅಂತಹ ಅವಧಿಗೆ ಒಳಪಟ್ಟ್ಟು, ಕಮ್ಮಿಟಿಯವರು ಬಡ್ಡಿ ದರಗಳನ್ನು ಬಿಗಾಗ್ಗೆ ನಿರ್ಣಯಿಸಬೇಕು. ಆದರೆ (ಎ) ಅಂತಹ ದರವು ರೂಪಾಯಿಗೆ ತಿಂಗಳು 1ಕ್ಕೆ.....ಪೈಗಿಂತ ಜಾಸ್ತಿಯಾಗಿರಕೂಡದು. (ಬಿ) ಕ್ಲುಪ್ತವಾದ ಡಿಪಾಜಿಟ್ಟ್ಟುಗಳು ಅಂದರೆ, ಆರು ತಿಂಗಳುಗಳಿಗೆ ಕಡಿಮೆಯಿಲ್ಲದ ಕಾಲದ ಪರೆಗೆ ಇಟ್ಟ್ಟಿರುವ ಷರತ್ತಿನಮೇಲೆಯೂ, ಅಂತಹಕಾಲ ಮುಗಿಯುವ್ವದರೊಳಗಾಗಿ ವಾಪಸ್ ತೆಗೆದುಕೊಳ್ಳವದಿಲ್ಲವೆಂಬ ಷರತ್ತಿನಮೇಲೂ, ದಾಖಲಾಗುವ ಡಿಪಾಜಿಟ್ಟ್ಟುಗಳಿಗೆ ಸಾಧಾರಣವಾದ ಡಿಪಾಜಿಟ್ಟ್ಟುಗಳಿಗೆ ಕೊಡುವ ದರಕ್ಕಿಂತಲೂ ಹೆಚ್ಚ್ಟಿ ದರದ ಬಡ್ಡಿಯನ್ನು ಕೊಡಬಹುದು.

(5) ಬಡ್ಡಿಯನ್ನು ಲೆಖ್ಖ ಮಾಡುವ್ವದರಲ್ಲಿ ಬಂದು ಪೈಗೆ ಕಡಿಮೆಯಾದ ಭಾಗವನ್ನ ಗಣನೆಗೆ ತರಕೂಡದು. ಕ್ಲುಪ್ತವಾದ ಡಿಪಾಜಿಟ್ಟ್ಟುಗಳ ವಿನಾ ಬಾಕಿ ಡಿಪಾಜಿಟ್ಟ್ಟುಗಳನ್ನು ಯಾವಾಗಬೇಕಾದರೂ ಪೂರ್ತಿಯಾಗಿ ಆಗಲಿ, ಭಾಗಶಃ ಆಗಲಿ ವಾಪಸ್ ಪಡೆಯಬಹುದು. ಆದರೆ..... ಮೊಬಲಗಿಗಿಂತ ಹೆಚ್ಚ್ಟಾದ ಹಣದ ವಿಷಯದಲ್ಲಿ 3 ದಿನ ಮುಂಚಿತವಾಗಿ ತಿಳಿಸಬೇಕೆಂದು ಯುಕ್ತಾನುಸಾರ ಕಮ್ಮಿಟಿಯವರು ಕೇಳಬಹುದು. ಡಿಪಾಜಿಟ್ಟ್ಟು ಇಟ್ಟ್ಟ 30 ದಿವಸಗಳೊಳಗಾಗಿ ವಾಪಸು ತೆಗೆದುಕೊಳ್ಳುವ ಮೊಬಲಗುಗಳಿಗೆ ಬಡ್ಡಿ ಕೊಡಕೂಡದು.

ಮೆಂಬರುಗಳಿಗೆ ಸಾಲ ಕೊಡುವ್ವದು.

20. (1) ಒಬ್ಬ ಮೆಂಬರಿಗೆ ಪರಮಾವಧಿ ಇಷ್ಟ್ಟ ಸಾಲ ಕೊಡತಕ್ಕದ್ದೆಂದು ಸೊಸೈಟಿಯವರು ಆಗಾಗ್ಗೆ ಗೊತ್ತು ಮಾಡಬೇಕು.

(2) ಅಂತಹ ಪರಮಾವಧಿಗಿಂತ ಹೆಚ್ಚಾಗಿ ಕಮ್ಮಿಟಿಯವರಿಂದ ಯಾವ ಮೆಂಬರೂ ಸಾಲ ಪಡೆಯಬಾರದು. ಆದರೆ ಸೊಸೈಟಿಯಲ್ಲಿ ಹಣವಿದ್ದಪಕ್ಷದಲ್ಲಿ, ಪ್ರತಿ ಮೆಂಬರು, ತನ್ನ ಷೇರು ಅಥವ ಷೇರುಗಳಿಗಾಗಿ ತಾನು ಕೊಟ್ಟ್ಟಿರುವಷ್ಟರವರಿಗಿನ ಮೊಬಲಗನ್ನು ಸಾಲಕ್ಕೆ ಪಡೆಯಬಹುದು; ಅಥವಾ ಮುಂದೆ ಹೇಳುವ ನಿಯಮಾನುಸಾರ ಎಷ್ಟ್ಟು ಹೆಚ್ಚ್ಟು ಮೊಬಲಗನ್ನು ಸಾಲ ಕೊಡಬಹುದೆಂದು ಕಮ್ಮಿಟಿಯವರಿಗೆ ತೋರುತ್ತದೆಯೋ ಅಷ್ಟ್ಟು ಮೊಬಲಗನ್ನು ಸಾಲಕ್ಕೆ ಪಡೆಯಬಹುದು.

21. (1) ಮೆಂಬರುಗಳಿಗೆ ಕೊಡುವ ಸಾಲದ ಮೊಬಲಗಿನಮೇಲೆ ದಾಖಲಾಗುವ ಬಡ್ಡಿ ದರವನ್ನು ಕಮಿಟಿಯುವರು ಆಗಾಗ್ಗೆ ಗೊತ್ತುಮಾಡಬೇಕು. ಅದರೆ ಸದರಿ ದರವು, ಲೇವಾದೇವಿ ವಿಷಯದಲ್ಲಿ ರೂಪಾಯಿ ಒಂದಕ್ಕೆ ತಿಂಗಳಿಗೆ.....ಪೈಗಳಿಗೆ ಮಿಾರಿರಕೂಡದು.

(2) ಚಕ್ರಬಡ್ಡಿಯನ್ನು ದಾಖಲ್ ಮಾಡಕೂಡದು.

22. (1) 12 ತಿಂಗಳ ಕಾಲದ ವಾಯಿದೆ ಅಥವಾ ಕಮ್ಮಿಟಿಯುವರು ಗೊತ್ತುಮಾಡುವ ಇನ್ನೂ ಕಡಿಮೆ ಕಾಲದ ವಾಯಿದೆಗಿಂತ ಹೆಚ್ಚಾದ ವಾಯಿದೆಮೇಲೆ ಸಾಲವನ್ನು ಕೊಡಕೂಡದು.

(2) ಕಮ್ಮಿಟಿಯವರು, ತಮ್ಮಿಗೆ ಯುಕ್ತವೆಂದು ಕಂಡುಬಂದಾಗ ಮೇಲೆ ಹೇಳಿದ ಕಾಲಕ್ಕೆ ವಿಾರದೇ ಇರುವಂತೆ, ಸಾಲದ ವಾಯಿದೆ ಕಾಲವನ್ನು ಹೊಸದಾಗಿ ಬದಲಾಯಿಸಿಕೊಡಬಹುದು. ಅದರೆ ಹಾಗೆ ಬದಲಾಯಿಸಬೇಕಾದರೆ ಸಾಲದ ಬಗೆ 4 ರಲ್ಲೊಂದು ಭಾಗದ ಮೊತ್ತವನ್ನಾದರೂ ವಾಯಿದೆಗೆ ಸರಿಯಾಗಿ ಕೊಟ್ಟಿರಬೇಕು.

(3) ವಾಯಿದೆ ಮುರೈಸುವುದಕ್ಕೆ ಮೊದಲೇ ಸಾಲದ ಹಣವು, ಪೂರಾ ಅಥವಾ ಭಾಗಶಃ ವಾಪಸ್ ಬಂದಲ್ಲಿ, ಅದನ್ನು ತೆಗೆದುಕೊಳ್ಳಬೇಕು. ಅಂತಹ ಸಂದರ್ಭದಲ್ಲಿ ಬಾಕೀ ಇರುವ ಕಾಲಕ್ಕೆ ಬರಬೇಕಾದ ಬಡ್ಡಿಯಲ್ಲಿ ಅರ್ಧವನ್ನು ಬಿಟ್ಟುಬಿಡಬೇಕು.

23 ಸಾಲ ಪಡೆಯತಕ್ಕವರು ಸೊಸೈಟಿಗೆ ಅಥವಾ ಜಾಮೀರ್ದಾರನಿಗೆ ಬಾಕೀದಾರರಾಗಿರಕೂಡದು; ಅಥವಾ ಸೊಸೈಟಿಯ ವಿಷಯದಲ್ಲಿ ಅಥವಾ ಜಾಮೀರ್ದಾರರ ವಿಷಯದಲ್ಲಿ ತಮಗಿರುವ ಜವಾಬ್ದಾರಿಯನ್ನು ತೀರಿಸದೇಯಿರುವವರಾಗಿರಕೂಡದು.

24. ಇಂತಹ ಆವಶ್ಯಕವಾದ ಸಂಗತಿಗಳನ್ನು ವಿಚಾರ ಮಾಡಿದ ಬಳಿಕ ಕೇಳಿದ ಸಾಲವನ್ನು ಕಮ್ಮಿಟಿಯುವರು ಕೊಟ್ಟರೂ ಕೊಡಬಹುದು; ಕೊಡದೆ ತಿರಸ್ಕರಿಸಿದರೂ ತಿರಸ್ಕರಿಸಬಹುದು. ಅವರು ತಾವು ಮಾಡುವ ತೀರ್ಮಾನವನ್ನು ಅಪ್ಲಿಕೇಷ್ ದಾಖಲಾದ ಒಂದು ತಿಂಗಳೊಳಗಾಗಿ ಸಾಲ ಕೇಳುವವನಿಗೆ ತಿಳಿಸಬೇಕು.

25. ಮೆಂಬರಿನ ಷೇರ್ ಅಥವಾ ಷೇರ್‌ಗಳ ಬಗೆ ಸೊಸೈಟಿಗೆ ಬಂದಿರುವ ಮೊಬಲಗಿಗಿಂತಲೂ, ಹೆಚ್ಚು ಹಣವನ್ನು ಸಾಲ ಕೊಡಬೇಕಾದರೆ, ಅದನ್ನು ಮುಂಜೂರ್ಮಾಡುವುದಕ್ಕೆ ಮೊದಲು ಷೇರ್, ಅಥವಾ ಷೇರ್‌ಗಳ ಬಗೆ ಬಾಕಿ ಇರುವ ಮೊಬಲಗನ್ನು ಒಂದು ಕ್ಲುಪ್ತವಾದ ಕಾಲದೊಳಗಾಗಿ ಕೊಡಬೇಕೆಂದು ಮೆಂಬರಿಗೆ ತಿಳಿ

ಸುವುದಕ್ಕೆ ಕಮ್ಮಿಟಿಯವರಿಗೆ ಅಧಿಕಾರವಿರುತ್ತದೆ. ಹಾಗೆ ಅದನ್ನು ಕೊಡದೆ ತಪ್ಪು ವ ಮೆಂಬರಿಗೆ ಸಾಲ ಕೊಡುವುದನ್ನು ತಿರಸ್ಕರಿಸಬಹುದು.

26. ಸಾಲ ಪಡೆಯತಕ್ಕವನು, ಸ್ವಂತ ಖರ್ಚಿನಿಂದ ಪ್ರಾಮಿಸರಿ ನೋಟ್, ಅಥವಾ ಮತ್ತಾವ ವಿಧವಾದ ದಸ್ತೈವಜನ್ನು ಬರದುಕೊಟ್ಟಲ್ಲದೇ ಸಾಲವನ್ನು ಪಡೆಯಕೂಡದು. ಅದರೆ ಸಾಲದ ಹಣವು.....ರೂಪಾಯಿಗಳಿಗೆ ಮಿಾರುವುದಾದರೆ, ಪ್ರಾಮಿಸರಿನೋಟ್ ಅಥವಾ ಇತರ ವಿಧವಾದ ದಸ್ತೈವಜನ್ನು ಸಾಲ ಪಡೆಯತಕ್ಕವನು ಮತ್ತು ಮೆಂಬರುಗಳ ಪೈಕಿ ಜಾಮಿರ್ಾ ಆಗುವನು ಸಹ ಜಾಯಿಂಟಾಗಿಯೂ, ಬೇರೆಬೇರೆಯಾಗಿಯೂ ಬರೆದುಕೊಡಬೇಕು. ಮೆಂಬರು ಕೇಳುವ ಸಾಲದ ಮೊಬಲಗು, ತನ್ನ ಷೇರ್ ಅಥವಾ ಷೇರ್‌ಗಳಿಗಾಗಿ ತಾನು ಕೊಟ್ಟಿರುವ ಮೊಬಲಗಿನಲ್ಲಿ ಅರ್ಧಕ್ಕೆ ಮಿಾರದೇ ಇರುವ ಸಂದರ್ಭದಲ್ಲಿ, ಕಮ್ಮಿಟಿಯವರಿಗೆ ಯುಕ್ತ ಕಂಡುಬಂದರೆ ಜಾಮಿರ್ಾ ಬಾಬನ್ನು ವಜಾ ಮಾಡಬಹುದು.

27. ಸಾಮಾನ್ಯವಾದ ಮತ್ತು ಕ್ಷಮಿಸುವುದಕ್ಕೆ ಅರ್ಹವಾದ ಕಾರಣಗಳಿಂದ ಮೆಂಬರು ಸೊಸೈಟಿಗೆ ಬಾಕೀದಾರನಾದಲ್ಲಿ, ಅಂಥಾವನನ್ನು ಸೊಸೈಟಿಯಿಂದ ಹೊತ್ತುಮಾಡಲ್ಪಡುವ ಯಾವದಾದರೂ ಒಂದು ವಿಧವಾದ ಶಿಕ್ಷೆಗೆ ಗುರಿ ಮಾಡಬೇಕು. ದೊಡ್ಡತಪ್ಪಿನಿಂದ ಪದೇಪದೇ ಮುಷ್ಕರವಾಗಿ ಬಾಕೀಕೊಡದೇ ತಪ್ಪಿದಲ್ಲಿ ಅಂಥಾವನನ್ನು ವಜಾ ಮಾಡಬೇಕು. ಈ ಮೇರೆಗೆ ಏರ್ಪಾಟು ಮಾಡಿ ಸಾಲದ ಮೊಬಲಗು ಕ್ರಮವಾಗಿ ವಸೂಲಾಗುವಂತೆ ಮಾಡಬೇಕು.

28. ದಸ್ತೈವಜಿನಲ್ಲಿ ಕಂಡ ವಾಯಿದೆಯೊಳಗಾಗಿ ಸಾಲ ಪಡೆದವನು, ಸಾಲದ ಮೊಬಲಗನ್ನು ವಾಪಸ್ ಮಾಡದೇ ತಪ್ಪಿದರೆ, ಅವನಬಗೆ ಸಾಲದ ಲೆಕ್ಕವನ್ನು ಖೈದ್ ಮಾಡಬೇಕು. ಮತ್ತು ಬಾಕೀ ಬರಬೇಕಾದ ಮೊಬಲಗಿಗೆ ಅವನಿಗೆ ಒಂದು ನೋಟೀಸನ್ನು ಕೊಡಬೇಕು. ಮತ್ತು ಹಾಗೆ ಬಾಕಿ ಇರುವ ಮೊಬಲಗಿನಮೇಲೆ, ಹಣ ಪಾವತಿ ಮಾಡುವ ತಾರೀಖಿನವರೆಗೂ, ತಿಂಗಳು ಒಂದಕ್ಕೆ ರೂಪಾಯಿಗೆ ಅಥವಾ ರೂಪಾಯಿನ ಬೆಲೆಗೆ.....ಪೈಗಳಂತೆ ಬಡ್ಡಿ ದಾಖಲ್ ಮಾಡಬೇಕು.

29. ಜಮಿರ್ಾ, ವಠಾರ, ಜಾರ್ಮಾರ್, ಇವುಗಳ ಆಧಾರದಮೇಲೆ ಸಾಲವನ್ನು ಕೇಳಿದರೆ, ಅಥವಾ ಶಿಫಾರಸ್ ಮಾಡಿದರೆ ಹಾಗೆ ಶಿಫಾರಸ್ ಮಾಡುವ ಮೆಂಬರುಗಳು ಕೊಡುವ ರಿಪೋರ್ಟ್ ಅಥವಾ ಸರ್ಟಿಫಿಕೆಟ್ಟಿನಲ್ಲಿ ತಮ್ಮ ಅಂದಾಜಿನ ಪ್ರಕಾರ ಸದರೀ, ಜಮಿರ್ಾ, ವಠಾರ, ಅಥವಾ ಜಾರ್ಮಾರ್ ಎಷ್ಟರ ಕಿಮ್ಮತ್ತಿನದೆಂಬುವುದನ್ನು ತಪ್ಪಿಲ್ಲದಾಗಿ ತಿಳಿಸಬೇಕು. ಮತ್ತು ಕಡೆಗೆ ಸಾಲವೇನಾದರೂ ಕೊಟ್ಟಲ್ಲಿ ಸಾಲಕ್ಕೆ ಕೊಡುವ ಮೊಬಲಗು ಸದರಿ ಜಮಿರ್ಾ, ಅಥವಾ ವಠಾರದ ಅಂದಾಜಾ ಮೊಬಲಗಿನಲ್ಲಿ ಶೇಕಡ.....ಗಿಂತಲೂ, ಜಾರ್ಮಾರ್ ಅಂದಾಜಾ ಮೊಬಲಗಿ

ನಲ್ಲಿ ಶೇಕಡ.....ಗಿಂತಲೂ ಜಾಸ್ತಿಯಾಗಿರಕೂಡದು.

30. ಸಾಲ ಕೊಟ್ಟ ಪೂರಾ, ಅಥವಾ ಭಾಗಶಃ ಮೊಬಲಗು ಕೊನೆಗೆ ವಸೂಲಾಗದೆ ಹೋಗಿ, ಅದರಿಂದ ಸೊಸೈಟಿಗೆ ನಷ್ಟಸಂಭವಿಸುವುದಾದರೆ, ಅಂದಾಜಾ ಕ್ರಮವು ಸರಿಯಾಗಿ ನಡೆಸಲ್ಪಡಲಿಲ್ಲವೆಂದು ಮ್ಯಾನೇಜಿಂಗ್ ಕಮ್ಮಿಟಿಯವರಿಗೆ ತೋರುವ ಪಕ್ಷದಲ್ಲಿ ಅವರು ಸದರಿ ಸಾಲದಬಗೆ ನಷ್ಟದ ಮೊಬಲಗನ್ನು ಪೂರ್ತಿಯಾಗಿ ಅಗಲಿ, ಭಾಗಶಃ ಅಗಲಿ ಮೊದಲು ಸಾಲ ಕೊಡಿಸುವುದಕ್ಕೆ ಶಿಫಾರಸ್ ಮಾಡಿದ ಮೆಂಬರುಗಳಿಂದ ವಸೂಲಾಗಬೇಕೆಂದು ತಿಳಿಸಬಹುದು.

31. ಸಾಲದ ಮೊಬಲಗಿಗೆ ಬಡ್ಡಿ ದಾಖಲ್ ಮಾಡುವುದರಲ್ಲಿ, ಒಂದು ತಿಂಗಳಿಗೆ ಕಡಿಮೆಯಾದ ದಿವಸಗಳನ್ನು ಒಂದು ಪೂರಾ ತಿಂಗಳಿನಂತೆ ಭಾವಿಸಬೇಕು.

32. ಸಾಲಿಯಾನಾ, ಅಥವಾ ಛಷ್ ಮಾಹೆಯಾನಾ ಲಾಭವನ್ನು ಗೊತ್ತು ಮಾಡುವಾಗ, ನಗದಾಗಿ ಬಂದಿರುವ ಮೊಬಲಗನ್ನು ಅಥವಾ ನಿಜವಾಗಿ ಬಂದಿರುವ ಬಿನತಿಗಳನ್ನು ಜಮೆಗೆ ತೆಗದುಕೊಳ್ಳಬೇಕು. ವಸೂಲಾಗದೆ ಇರುವ ಬಡ್ಡಿ ಮೊಬಲಗನ್ನು ಲೆಖ್ಖಕ್ಕೆ ತೆಗೆದುಕೊಳ್ಳಕೂಡದು. ಡಿಪಾಜಿಟ್ದಾರರಿಗೂ, ಇನ್ನೂ ಯಾರಿಗಾದರೂ ಬಾಕೀ ಕೊಡಬೇಕಾಗಿದ್ದರೆ ಅವರಿಗೂ ಕೊಡಬೇಕಾದ ಬಡ್ಡಿ ಮೊಬಲಗನ್ನು ಕೊಟ್ಟು, ಸೊಸೈಟಿಯ ಕೆಲಸಗಳನ್ನು ನಡೆಸುವುದರಲ್ಲಿ ತಗಲಿದ ಖರ್ಚನ್ನು ಕಳೆದು, ನಂತರ ಉಳಿಯುವ ಲಾಭದಲ್ಲಿ, ಶೇಕಡ 25 ಕ್ಕೆ ಕಡಮೆ ಇಲ್ಲದಂತೆ ಸೊಸೈಟಿಯಿಂದ ನಿರ್ಧರಿಸುವಷ್ಟು ಮೊಬಲಗನ್ನು ರಿಜರ್ವ್ ಅಂದರೆ ಜಕೇರಿ ಫಂಡಿಗೆ ದಾಖಲ್ ಮಾಡಬೇಕು. ಆಗಿಂದಾಗ್ಗೆ ಸೊಸೈಟಿಯಿಂದ ಯಾವ ಕ್ರಮಗಳನ್ನಾದರೂ ಏರ್ಪಡಿಸಿದ್ದಲ್ಲಿ, ಅವುಗಳಂತೆ, ಬಾಕೀ ಹಣವನ್ನು ಮ್ಯಾನೇಜಿಂಗ್ ಕಮ್ಮಿಟಿಯವರು ಯುಕ್ತಾನುಸಾರ ಮೆಂಬರುಗಳಿಗೆ ಬಟವಾಡೆ ಮಾಡಬೇಕು.

33. ರಿಜರ್ವ್ ಅಂದರೆ ಜಕೇರಿ ಫಂಡಿಗೆ ಸೇರುವ ಬಾಬುಗಳು.

(1) ಮೆಂಬರುಗಳಿಂದ ವಸೂಲಾಗುವ ಜುರ್ಮಾನೆ ಮೊಬಲಗು.

(2) ನಫೆ ಹಣದಿಂದ ಆಗಾಗ್ಗೆ ದಾಖಲ್ ಮಾಡುವ ಮೊಬಲಗು.

(3) ಸೊಸೈಟಿಯಿಂದ ಸಾಧಾರಣವಾಗಿ ಕ್ಲುಪ್ತಪಡಿಸಿರುವ, ಅಥವಾ ಆಗಾಗ್ಗೆ ಕೊಡುವ ಇತರ ಬಾಬುಗಳ ಬಗೆ ಮೊಬಲಗು.

34. ವಸೂಲಾಗುವುದಕ್ಕೆ ರಹ ಇಲ್ಲದೇ ಇರುವ ಸಾಲದ ಮೊಬಲಗುಗಳಿಗಾಗಿ ರಿಜರ್ವ್ ಫಂಡಿನಿಂದ ಭರ್ತಿ ಮಾಡಿಕೊಂಡು, ಲೆಖ್ಖದಲ್ಲಿ ಆ ಬಗೆ ಸಾಲವನ್ನು ವಜಾ ಮಾಡಬೇಕು. ಈ ಕೆಲಸಕ್ಕಾಗಿ ಸಾಲಗಳನ್ನೆಲ್ಲಾ ಆಗಾಗ್ಗೆ ಚೆನ್ನಾಗಿ ತಸಿಖೆ ಮಾಡಬೇಕು.

35. ರಿಜಿಸ್ಟ್ರಾರರವರಿಂದ ಮುಂಜೂರಾತಿಯನ್ನು ಪಡೆಯದೆ, ಜಕೇರಿ ಫಂಡಿನ ಯಾವ ಭಾಗವನ್ನು ಯಾವ ಕೆಲಸಕ್ಕೂ ಉಪಯೋಗಿಸಕೂಡದು.

ಜನರಲ್ ಮೀಟಿಂಗ್‌ಗಳು.

36. ಸೊಸೈಟಿಯ ಆಡಳಿತಗಳಿಗೆ ಸಂಬಂಧಪಟ್ಟ ಎಲ್ಲಾ ಜಾಬುಗಳ ಮೇಲೆಯೂ, ಮೇಲಿನ ಅಧಿಕಾರವು, ಸೊಸೈಟಿಗೆ ಅಂದರೆ ಜನರಲ್ ಮೀಟಿಂಗಿನಲ್ಲಿ ಸೇರುವ ಎಲ್ಲಾ ಮೆಂಬರುಗಳಿಗೂ ಇರುತ್ತದೆ. ಆದರೆ ಒಳ ನಿಬಂಧನೆಗಳನ್ನು ಬದಲಾಯಿಸದೆಯೂ, ಸೊಸೈಟಿಯ ಉದ್ದೇಶಗಳಿಗೆ ಹೆಚ್ಚಾಗಿ ಹೊಸ ಉದ್ದೇಶಗಳನ್ನು ಸೇರಿಸದೆಯೂ, ಷೇರ್‌ಗಳ ಸಂಖ್ಯೆ ಅಥವಾ ಪೊತ್ತವನ್ನು ಒದಲಾಯಿಸದೆಯೂ, ಸೊಸೈಟಿಯ ರಿಜಿಸ್ಟರಿನಲ್ಲಿ ದಾಖಲಾಗಿರುವವರ ಪೈಕಿ 3 ರಲ್ಲಿ ಒಂದು ಭಾಗದಷ್ಟು ಮೆಂಬರುಗಳು ಹಾಜರಾಗದೆ ಇದ್ದಾಗ ಸಾಲಕ್ಕೆ ಹಣ ತೆಗೆಯಲು ಮಂಜೂರ್ ಮಾಡದೆಯೂ ಇರಬೇಕು.

37. (1) ಸೊಸೈಟಿಯು ಮೀಟಿಂಗ್‌ಗಳು ಸಾಧಾರಣ, ಮೀಟಿಂಗ್‌ಗಳು ಅಸಾಧಾರಣ ಮೀಟಿಂಗ್‌ಗಳೆಂದು ಎರಡು ವಿಧಗಳಾಗಿರುತ್ತವೆ.

(2) ಕಮ್ಮಿಟಿಯವರು ಗೊತ್ತುಮಾಡುವಂತಹ ಸ್ಥಳದಲ್ಲಿ, ಗೊತ್ತಾದ ಕಾಲದಲ್ಲಿ ವರುಷಕ್ಕೆ ಕನಿಷ್ಟಪಕ್ಷ.....ಸಲವಾದರೂ ಸಾಧಾರಣವಾದ ಮೀಟಿಂಗ್‌ಗಳನ್ನು ನಡೆಸಬೇಕು.

(3) ಕಮ್ಮಿಟಿಯುವರಿಗೆ ಯುಕ್ತವೆಂದು ತೋರಿದಾಗಲೂ, 5 ಅಥವಾ ಅದಕ್ಕೆ ಹೆಚ್ಚಾದಷ್ಟು ಜನ ಮೆಂಬರುಗಳು ಬರಹ ಮೂಲಕ ಕೇಳಿಕೊಂಡಾಗಲೂ, ಅಸಾಧಾರಣವಾದ ಮೀಟಿಂಗ್‌ಗಳನ್ನು ನಡೆಸಬೇಕು. ಮೆಂಬರುಗಳ ಅಪೇಕ್ಷೆಯಮೇಲೆಯೇ ಸದರಿ ಮೀಟಿಂಗ್‌ಗಳನ್ನು ನಡೆಸಬೇಕಾದರೆ, ಹಾಗೆ ಅಪೇಕ್ಷಿಸುವ ಮೆಂಬರುಗಳು, ಯಾವ ಉದ್ದೇಶಕ್ಕಾಗಿ ಮೀಟಿಂಗ್ ಮಾಡಬೇಕೆಂಬುವುದನ್ನು, ಬರವಣಿಗೆಯ ಮೂಲಕ ನಮೂದಿಸಿ, ಸೊಸೈಟಿ ಕಾರ್ಯ ನಡೆಯುವ ಆಫೀಸಿಗೆ ಕೊಡಬೇಕು.

38. ಮೀಟಿಂಗ್ ನಡೆಯುವ ತಾರೀಖಿಗಿಂತಲೂ ಕನಿಷ್ಟಪಕ್ಷ 7 ದಿವಸಗಳು ಮುಂಚಿತವಾಗಿಯೇ ಮೀಟಿಂಗ್‌ಗಳಬಗೆ ನೋಟೀಸ್‌ಗಳನ್ನು ಮೆಂಬರುಗಳಿಗೆ ಕಳುಹಿಸಬೇಕು. ಮತ್ತು ಮೀಟಿಂಗ್‌ಗಳಲ್ಲಿ ಚರ್ಚಿಸಬೇಕಾದ ಅಥವಾ ಮೀಟಿಂಗಿನಲ್ಲಿ ಮೆಂಬರುಗಳ ಆಲೋಚನೆಗೆ ತರಬೇಕಾದ ವಿಷಯಗಳನ್ನು, ನೋಟೀಸ್‌ಗಳಲ್ಲಿ ನಮೂದಿಸಬೇಕು.

39. (1) ಕೋರಂ ಅಂದರೆ ಮೀಟಿಂಗಿನ ಕೆಲಸವನ್ನು ನಡೆಸುವುದಕ್ಕೆ ಅವಶ್ಯಕವಾಗಿ ಹಾಜರಾಗಬೇಕಾದ ಮೆಂಬರುಗಳ ನಿರ್ದಿಷ್ಟ ಸಂಖ್ಯೆಯು ಹಾಜರಾಗದೆ ಇದ್ದರೆ, ಸೊಸೈಟಿಯು ಮೀಟಿಂಗ್‌ಗಳಲ್ಲಿ ಯಾವ ಕೆಲಸವನ್ನೂ ನಡೆಸಕೂಡದು.

(2) 37 ನೆಯ ಒಳ ನಿಬಂಧನೆಯಲ್ಲಿ ನಮೂದಾಗ ನಿಯಮಗಳ ವಿಷಯದಲ್ಲಿ ಹೊರತು, ಕೋರಂ, ಅಥವಾ ನಿರ್ದಿಷ್ಟ ಸಂಖ್ಯೆಯನ್ನು ಮುಂದೆ ಹೇಳುವ ಪ್ರಕಾರ ನಿಶ್ಚಯಿಸಬೇಕು. ರಿಜಿಸ್ಟರಿ ನಲ್ಲಿರುವ ಮೆಂಬರುಗಳ ಸಂಖ್ಯೆಯು 10 ಕ್ಕೆ ಮಿಾರದಿದ್ದರೆ, ಕೋರಂಗೆ 5 ಜನ ಮೆಂಬರುಗಳಿರಬೇಕು. ಹತ್ತಕ್ಕೆ ಮಿಾರಿದರೆ, ಮೇಲೆ ನಮೂದಾದ ಕೋರಂಗೆ, ಹಾಗೆ ಹೆಚ್ಚುವ ಪ್ರತಿ ಹತ್ತು ಮೆಂಬರುಗಳಿಗೂ ಒಬ್ಬೊಬ್ಬ ಮೆಂಬರಿನ ಪ್ರಕಾರ ಹೆಚ್ಚಾಗಿ ಸೇರಿರಬೇಕು. ಆದರೆ ಯಾವ ಸಂದರ್ಭದಲ್ಲಿಯೂ, ಸದರಿ ಕೋರಂಗೆ ಗೊತ್ತು ಮಾಡುವ ಸಂಖ್ಯೆಯು 20 ಕ್ಕೆ ಮಿಾರಿರಕೂಡದು.

(3) ಮಿಾಟಿಂಗಿಗೆ ಗೊತ್ತು ಮಾಡುವ ಕಾಲದಮೇಲೆ ಒಂದು ಘಂಟೆಯೊಳಗಾಗಿ, ಕೋರಂಗೆ ಬೇಕಾದಷ್ಟು ಮೆಂಬರುಗಳು ಹಾಜರಾಗದೆ ಹೋದಲ್ಲಿ ಸದರಿ ಮಿಾಟಿಂಗು 5 ಜನ ಅಥವಾ ಇನ್ನೂ ಹೆಚ್ಚಾದಷ್ಟು ಮೆಂಬರುಗಳ ಅಪೇಕ್ಷೆಯಮೇಲೆ ಏರ್ಪಟ್ಟಿದ್ದಲ್ಲಿ ಅದನ್ನು ನಿಲ್ಲಿಸಬೇಕು. ಬೇರೆ ಸಂದರ್ಭಗಳಲ್ಲಿ ಮಿಾಟಿಂಗನ್ನು ಉದ್ದೇಶಿಸಿ ಮಾಡಿ ಆ ತಾರೀಖಿನಿಂದ ಮುಂದೆ 6 ದಿವಸಗಳ ಮೇಲೆ 4 ವಾರಗಳೊಳಗಾಗಿ ಯಾವಾಗಲಾದರೂ ನಡೆಯುವಂತೆ ಗೊತ್ತು ಮಾಡಬೇಕು.

(4) ಇಂತಹ ಅಡ್ಜರ್ನ್ಡ್ ಮಿಾಟಿಂಗುಗಳಲ್ಲಿ, ಹಿಂದಿನ ಮಿಾಟಿಂಗಿನ ಒಗೆ ಪೂರೈಸದೆ ನಿಂತಿರುವ ಬಾಬುಗಳನ್ನು, ಅಥವಾ ನೋಟೀಸಿನಲ್ಲಿ ನಮೂದಾದ ವಿಷಯಗಳನ್ನು ಬಿಟ್ಟು ಮತ್ತಾವ ಕಾರ್ಯಭಾಗವನ್ನೂ ನಡೆಸಕೂಡದು.

40. ಕ್ರಮವಾಗಿ ಮೆಂಬರಾದವರು ಸೊಸೈಟಿಯ ಪ್ರತಿ ಮಿಾಟಿಂಗಿಗೂ ಹಾಜರಾಗಬಹುದು. ಮತ್ತು ಅಂಥಾವರು ಸೊಸೈಟಿಯ ಒಳ ನಿಬಂಧನೆಗಳಂತೆ ಅರ್ಹತೆಯನ್ನು ಪಡೆದುಕೊಂಡಿದ್ದಲ್ಲಿ, ಸಮ್ಮತಿಗಳನ್ನು ಕೊಡುವುದಕ್ಕೂ, ಆವರಿಗೆ ಅಧಿಕಾರವಿರುತ್ತದೆ. ಆದರೆ ಅಂಥಾವರು ಸೊಸೈಟಿಗೆ ಯಾವ ಬಾಬಿನಲ್ಲಿಯೂ ಬಾಕೀ ಕೊಡದೇ ತಪ್ಪಿದವರಾಗಿರಕೂಡದು.

41. ಜನರಲ್ ಮಿಾಟಿಂಗಿನಲ್ಲಿ ಎಲ್ಲಾ ವಿಷಯಗಳನ್ನು ಹೆಚ್ಚು ಜನಗಳ ಸಮ್ಮತಿಯಮೇಲೆ ನಿರ್ಣಯಿಸಬೇಕು. ಸಮ್ಮತಿಗಳು ಸಮವಾಗಿದ್ದಲ್ಲಿ, ಪ್ರೆಸಿಡೆಂಟು (ಅಧ್ಯಕ್ಷರು) ಅಥವಾ ಅಗ್ರಾಸನಾಧಿಪತಿಯಾದ ಮೆಂಬರು, ನಿರ್ಧಾರಕವಾದ ತಮ್ಮ ಸಮ್ಮತಿಯನ್ನು ಕೊಡಬಹುದು.

42. ವಿಾಟಿಂಗಿನಲ್ಲಿ ಒಬ್ಬ ಮೆಂಬರಿನ ತರಫ್ ಮತ್ತೊಬ್ಬನು ಸಮ್ಮತಿಯನ್ನು ಕೊಡಕೂಡದು. ಅದರೆ ಹೆಂಗಸರ ವಿಷಯದಲ್ಲಿ ಅಗ್ರಾಸನವನ್ನು ವಹಿಸಿರುವವರಿಂದ ಪ್ರತ್ಯೇಕವಾಗಿ ಅಪ್ಪಣೆ ಪಡೆದು, ಅವರ ತರಫ್ ಸಮ್ಮತಿಯನ್ನು ಕೊಡಬಹುದು.

ಮ್ಯಾನೇಜಿಂಗ್ ಕಮ್ಮಿಟಿಯವರು.

43. (1) ಸೊಸೈಟಿಯ ಎಲ್ಲಾ ಆಡಳಿತಗಳನ್ನು ..... ಜನ ಮೆಂಬರುಗಳುಳ್ಳ ಕಮ್ಮಿಟಿಗೆ ನಿಸಬೇಕು. ಸೊಸೈಟಿಯವರು ಸದರಿ ಕಮ್ಮಿಟಿ ಮೆಂಬರುಗಳನ್ನು ಚುನಾಯಿಸಿ ... ವರುಷ ಅಥವಾ ..... ವರುಷಗಳ ವರೆಗೆ ಅಥವಾ ಅವರಿಗೆ ಬದಲಾಗಿ ನೇಮಕವಾಗುವವರು ಬರುವವರೆಗೆ, ಅವರನ್ನು ನೇಮಿಸಬೇಕು. ಅವಧಿಯು ಪೂರೈಸಿದುದರಿಂದ ನಿವೃತ್ತನಾಗಬೇಕಾದ ಯಾವ ಮೆಂಬರೇ ಆಗಲಿ, ಪುನಃ ಚುನಾಯಿಸಲ್ಪಡುವ್ದಕ್ಕೆ ಅರ್ಹನಾಗಿರುತ್ತಾನೆ.

(2) ಕಮ್ಮಿಟಿಯಲ್ಲಿ ಆಕಸ್ಮಿಕವಾಗಿ ಯಾರಾದರೂ ಒಬ್ಬ ಮೆಂಬರಿನ ಕೆಲಸವು ಖಾಲಿ ಬಿದ್ದರೆ ಅದನ್ನು ಬಾಕೀ ಮೆಂಬರುಗಳು ಭರ್ತಿ ಮಾಡಬಹುದು. ಹಾಗೆ ಖಾಲಿ ಕೆಲಸದ ಭರ್ತಿಗೆ ನೇಮಕವಾಗುವ ಮೆಂಬರು, ಖಾಲಿಯಾದ ಮೆಂಬರು ತನ್ನ ಕೆಲಸದಲ್ಲಿಯೇ ಇದ್ದಿದ್ದರೇ ಎಷ್ಟು ಕಾಲದ ವರಿಗೂ ಇರಬಹುದಾಗಿತ್ತೋ, ಅಷ್ಟು ಕಾಲದವರೆಗೆ ಮಾತ್ರ ಮೆಂಬರಾಗಿರಬೇಕು.

ಕಮ್ಮಿಟಿಯವರಿಗೆ ಇರತಕ್ಕ ಅಧಿಕಾರಗಳು.
ಮತ್ತು ಅವರು ಮಾಡಬೇಕಾದ ಕರ್ತವ್ಯಗಳು

44. (1) ಮೆಂಬರುತನಕ್ಕಾಗಿ ಬರುವ ಅಪ್ಲಿಕೇಷ್ಣಗಳನ್ನು ಫೈಸಲ್ ಮಾಡುವ್ದು.

(2) ಸಾಲಕ್ಕಾಗಿ ಬರುವ ಅಪ್ಲಿಕೇಷ್ಣಗಳನ್ನು ವ್ಯವಸ್ಥೆ ಹೊಂದಿಸುವ್ದು.

(3) ಡಿಪಾಜಿಟ್ಟುಗಳ ಮೇಲೂ ಮತ್ತು ಸಾಲಗಳ ಪೊಬಲಗುಗಳ ಮೇಲೂ ಬಡ್ಡಿ ದರಗಳನ್ನು ಗೊತ್ತು ಮಾಡುವ್ದು.

(4) ಫಿರ್ಯಾದುಗಳನ್ನು ವಿಚಾರಿಸಿ ಫೈಸಲ್ ಮಾಡುವ್ದು.

(5) ಸೊಸೈಟಿ ಶಿಬ್ಬಂದಿಗೆ ಅವಶ್ಯಕವಾದ ಕೆಲಸಗಳನ್ನು ಭರ್ತಿಮಾಡುವ್ದು. ಮತ್ತು ಶಿಬ್ಬಂದಿಯಲ್ಲಿ ನೇಮಕವಾಗುವ ವರಿಗೆ ರಜಾ ಕೊಡುವ್ದು; ಜುರ್ಮಾನೆ ಹಾಕುವ್ದು; ಅವರನ್ನು ಸಸ್ಪೆಂಡ್ ಮಾಡುವ್ದು ಮತ್ತು ಡಿಸ್‌ಮಿಸ್ ಅಂದರೆ ಕೆಲಸದಿಂದ ತೆಗೆದುಹಾಕುವ್ದು.

(6) ಸರಕುಗಳನ್ನು ಕೊಂಡುಕೊಳ್ಳುವುದಕ್ಕೂ ಅವುಗಳನ್ನು ಆಗಾಗ್ಗೆ ಗೊತ್ತುಮಾಡುವ ಬೆಲೀದಿ ಪ್ರಕಾರ ಚಿಲ್ಲರೆ ಚಿಲ್ಲರೆಯಾಗಿ ಬಿಕರಿ ಮಾಡುವುದಕ್ಕೂ, ಸೊಸೈಟಿಯ ಸಂಬಂಧವಾದ ಮತ್ಯಾವ ಉದ್ದೇಶವನ್ನಾದರೂ ಸೇರಪೇರಿಸುವುದಕ್ಕೂ, ಏರ್ಪಾಟು ಮಾಡುವುದು.

(7) ಸೊಸೈಟಿಗೆ ಬರತಕ್ಕ ಮೊಬಲಗನ್ನು ವಸೂಲು ಮಾಡಿಕೊಳ್ಳುವುದು; ಸೊಸೈಟಿಯಿಂದ ಕೊಡಬೇಕಾದ ಮೊಬಲಗನ್ನು ಖರ್ಚುಮಾಡುವುದು; ಮತ್ತು ಸರಕುಗಳನ್ನು ರುಜಿತಿ ಮಾಡುವುದು ಮತ್ತು ಸೊಸೈಟಿಯ ಇತರ ಆಸ್ತಿಗಳನ್ನು ದಾಖಲೆ ಸೋಡುವುದು.

(8) ಸೊಸೈಟಿಯ ಲೆಕ್ಕುಗಳನ್ನು ಇಡುವುದು.

(9) ಲೆಕ್ಕುಗಳನ್ನು ತನಿಖೆ ಮಾಡುವುದು; ರಶೀತಿಗಳನ್ನು ಪರೀಕ್ಷೆ ಮಾಡಿ ನೋಡುವುದು ಮತ್ತು ಒಂದು ಗೊತ್ತಾದ ಕಾಲದ ಆಖೈರಿನಲ್ಲಿ ಜಮಾ ಖರ್ಚುಗಳನ್ನು, ಸಾಲದ ಬಾಬತು ಬಾಕಿಗಳನ್ನು, ಪೇರುಗಳ ಬಾಬತು ಬಾಕಿಗಳನ್ನು ಸೊಸೈಟಿಗೆ ಬರತಕ್ಕ ಬಾಬುಗಳನ್ನು ಸೊಸೈಟಿಯಿಂದ ತೆರತಕ್ಕ ಭಾಗಗಳನ್ನು, ಜಕೇರಿ ಫಂಡಿನ ಮೊತ್ತವನ್ನು, ಮತ್ತು ಹಣ ಕಾಸಿನ ವಿಷಯದಲ್ಲಿ ಸೊಸೈಟಿಗೆ ಇರುವ ಸ್ಥಿತಿಯನ್ನು ಸೇರಿರುವಂತೆ, ಸೊಸೈಟಿಯ ಕಾರ್ಯಭಾಗಗಳನ್ನೆಲ್ಲಾ, ಬೇರೆಬೇರೆ ಶಿರನಾಮೆಗಳಲ್ಲಿ ಸ್ಪಷ್ಟವಾಗಿ ದಾಖಲು ಮಾಡಿ, ಒಂದು ಬಾಕೀಪಟ್ಟಿಯನ್ನು ತಯಾರು ಮಾಡುವುದು. ಲಾಭ ನಷ್ಟಗಳನ್ನು ತೋರಿಸುವ ಅಂತಹ ಬಾಕೀಪಟ್ಟಿಯನ್ನು, ಮೆಂಬರುಗಳ ಮತ್ತು ಡಿಪಾಜಿಟ್ಟುದಾರರ ತಿಳುವಳಿಕೆ ಬಗ್ಗೆ,... ಆಖೈರಾದ ಒಂದು ತಿಂಗಳೊಳಗಾಗಿ ಅವಶ್ಯಕವಾಗಿಯೂ ಅನುಕೂಲವಾಗಿಯೂ ಇರುವ ರೀತಿಯಲ್ಲಿ ಫಾಯಿಷ್ ಮಾಡಿಸುವುದು.

(10) ಈ ಒಳ ನಿಬಂಧನೆಗಳಿಗೆ ವಿರೋಧವಿಲ್ಲದಂತೆ ಸಹಕಾರಿ ನಿಯಮಗಳನ್ನು ಏರ್ಪಡಿಸುವುದು.

(11) ಸೊಸೈಟಿಯಿಂದಲೇ ನಡೆಸಲ್ಪಡಬೇಕೆಂದು ಈ ಒಳ ನಿಬಂಧನೆಗಳಿಂದ ವಿಶೇಷವಾಗಿ ನಮೂದು ಮಾಡಲ್ಪಡದ, ಇತರ ಕಾರ್ಯಗಳನ್ನು ನೆರವೇರಿಸುವುದು.

45. ಕಮ್ಮಿಟಿಯವರು ತಾವು ಜರಿಗಿಸುವ ಕೆಲಸಗಳಿಗೆಲ್ಲಾ ಸೊಸೈಟಿಗೆ ಜವಾಬ್ದಾರರಾಗಿರಬೇಕು. ಮತ್ತು ಕಮ್ಮಿಟಿಯವರು ಮಾಡುವ ಮೆಹನತ್ತಿಗಾಗಿ ಅವರಿಗೆ ಸೊಸೈಟಿಯವರು ಏನಾದರೂ ಬಹುಮಾನವನ್ನು ಕೊಡಬಹುದು.

46. (1) ಕಮ್ಮಿಟಿಯು ಕನಿಷ್ಟಪಕ್ಷ ತಿಂಗಳಿಗೆ.....ಸಲವಾದರೂ ಸೇರ

ಬೇಕು. ಅಂತಹ ಮೀಟಿಂಗ್‌ಗಳಲ್ಲಿ ಕೋರಂಗೆ ಅವರ ಪೈಕಿ..... ಜನ ಮೆಂಬರುಗಳು ಹಾಜರಿರಬೇಕು.

(2) ಹಾಜರಾಗುವ ಮೆಂಬರುಗಳ ಪೈಕಿ ಹೆಚ್ಚು ಜನರ ಸಮ್ಮತಿಯಿಂದ ಎಲ್ಲಾ ವಿಷಯಗಳು ವ್ಯವಸ್ಥೆಯಾಗಬೇಕು. ಸಮ್ಮತಿಗಳು ಸಮವಾಗಿದ್ದಲ್ಲಿ, ಅಗ್ರಾಸನವನ್ನು ಪಡಿಸುವವರು ನಿರ್ಧಾರಕವಾದ ತಮ್ಮ ಸಮ್ಮತಿಯನ್ನು ಕೊಡಬೇಕು.

(3) ಯಾವ ಮೆಂಬರೇ ಆಗಲಿ, ತನಿಗೇ ನಾಲಬೇಕಾಗಿರಲಿ ಅಥವಾ ತಾನು ಜಾಮೀನ್ ಆಗಬೇಕಾಗಿರಲಿ ಆ ಒಂದೆ ಕಮ್ಮಿಟಿಗೆ ಬರತಕ್ಕ ಅಪ್ಲಿಕೇಷನ್‌ಗಳ ವಿಷಯದಲ್ಲಿ ಸಮ್ಮತಿಯನ್ನು ಕೊಡಕೂಡದು.

47. (1) ಕಮ್ಮಿಟಿಯವರು, ಸೆಕ್ರೆಟರಿ ಅಂದರೆ ಕಾರ್ಯದರ್ಶಿಗಳನ್ನು, ಖಜಾನಿಯವರನ್ನು ಮತ್ತು ಆಗಾಗ್ಗೆ ಅವಶ್ಯಕವೆಂದು ತೋರುವ ಇತರ ಕೆಲಸದವರನ್ನು ತಮ್ಮೊಳಗೆಯೇ ಚುನಾಯಿಸಿಕೊಳ್ಳಬೇಕು.

(2) ಸೆಕ್ರೆಟರಿಯವರಿಗೆ, ದಸ್ತಖತ ಮಾಡುವುದಕ್ಕೂ, ಕಮ್ಮಿಟಿಯವರಿಗಾಗಿ, ಅಥವಾ ಕಮ್ಮಿಟಿಯ ಅಭಿಪ್ರಾಯಾನುಸಾರವಾಗಿ ಕೆಲಸಗಳನ್ನು ನಡೆಸುವುದಕ್ಕೂ ಅಧಿಕಾರವಿರುತ್ತದೆ.

(3) ಸೊಸೈಟಿ ಸಂಬಂಧವಾದ ಹಣವು ಖಜಾನ್ಚಿಯವರಲ್ಲಿರಬೇಕು.

(4) ಸೆಕ್ರೆಟರಿಯವರು, ಖಜಾನ್ಚಿಯವರು ಮತ್ತು ಇತರ ಕೆಲಸದವರು ಯಾರಾದರೂ ಇದ್ದರೆ ಅಂಥಾವರು ಮಾಡತಕ್ಕ ಕಾರ್ಯಗಳನ್ನು ಕಮ್ಮಿಟಿಯವರು ಗೊತ್ತು ಮಾಡಬೇಕು.

48. (1) ಕಮ್ಮಿಟಿಯವರು, ಸೊಸೈಟಿಯ ಕಾರ್ಯವನ್ನು ನಡೆಸುವುದಕ್ಕೆ ಅವಶ್ಯಕವಾದಷ್ಟು ಸಬ್ ಕಮ್ಮಿಟಿಗಳನ್ನು ಆಗಿಂದಾಗ್ಗೆ ನೇಮಕಮಾಡ ಬಹುದು.

(2) ಸಬ್ ಕಮ್ಮಿಟಿಗಳೆಲ್ಲವೂ ಕಮ್ಮಿಟಿಯ ಸರ್ವ ಸಾಮಾನ್ಯವಾದ ಅಧಿಕಾರಕ್ಕೆ ಒಳಪಟ್ಟಿರಬೇಕು. ಮತ್ತು ಕಮ್ಮಿಟಿಯವರು ತಿಳಿಸುವ ಪ್ರಕಾರ ಕೆಲಸಗಳನ್ನು ಜರಿಗಿಸಬೇಕು.

ಯೂರೋಪಿನ ಇತರ ಪ್ರಾಣಿಗಳು.

ಗ್ಲಟನ್ ಎಂಬ ಮೃಗವು ಉತ್ತರದಲ್ಲಿ ಶೀತ ಪ್ರದೇಶದಲ್ಲಿ ವಾಸಿಸುವುದು. ಸಣ್ಣ ಮೃಗಗಳನ್ನು ಹಿಡಿದು ತಿಂದು ಜೀವಿಸುವುದು. ಬಲವಾಗಿಯೂ ತಂತ್ರವುಳ್ಳ ದಾಗಿಯೂ ಇರುವುದು. ಬೇಟೆಗಾರರು ತನ್ನನ್ನು ಹಿಡಿಯಲು ಹಾಕಿದ ಬಲೆಯನ್ನು ಉಪಾಯದಿಂದ ತಪ್ಪಿಸಿಕೊಳ್ಳುವುದು. ಇತರ ಪ್ರಾಣಿಗಳನ್ನು ಹಿಡಿಯಲು ಹಾಕಿದ ಬಲೆಯನ್ನು ಸ್ವಪ್ರಯೋಜನಕ್ಕೆ ಉಪಯೋಗಿಸಿಕೊಂಡು ಸಣ್ಣ ಮೃಗಗಳನ್ನು ಹಿಡಿದು ಭಕ್ಷಿಸುವುದು. ಮಾರ್ಟನ್, ವೀಸಲ್, ಸ್ಟೋಟ್, ಪೋಲಾರ್ ಕ್ಯಾಟ್ ಎಂಬ ಪ್ರಾಣಿಗಳು ಯೂರೋಪಿನ ಸಮ ಶೀತೋಷ್ಣ ವಲಯದಲ್ಲಿ ವಾಸಿಸುವುವು. ಇಲಿಗಳನ್ನೂ ಕೋಳಿ, ಬಾತು ಮುಂತಾದುವನ್ನೂ ಹಿಡಿದು ತಿಂದು ಜೀವಿಸುವುವು. ಯೂರೋಪಿನಲ್ಲಿ ಬ್ಯಾಜರ್ ಎಂಬ ಮತ್ತೊಂದು ಪ್ರಾಣಿ ಇರುವುದು. ಇದು ನೆಲವನ್ನು ತೋಡಿ ಗುಣಿ ಮಾಡಿಕೊಂಡು ಜೀವಿಸುವುದು ಆಕಾರದಲ್ಲಿ ಸ್ವಲ್ಪ ಮಟ್ಟಿಗೆ ಬಿಕ್ಕನ್ನು ಹೋಲುವುದು. ಪೂರ್ವದಲ್ಲಿ ಯೂರೋಪೀಯರು ಬ್ಯಾಜರಿಗೂ ನಾಯಿಗೂ ಜಗಳಕ್ಕೆ ಬಿಟ್ಟು ತಮಾಷೆಯನ್ನು ನೋಡುತ್ತಿದ್ದರು. ಇದರಿಂದ ಆ ಮೃಗಕ್ಕೂ ನಾಯಿಗೂ ತುಂಬಾ ಹಿಂಸೆಯಾಗುತಿತ್ತು. ಈಗಿನವರು ಇಂಥಾ ಕ್ರೂರ ಕೃತ್ಯವನ್ನು ಮಾಡುವುದಿಲ್ಲ.

ಓಟರ್ ಎಂಬ ಮತ್ತೊಂದು ಒಗೆಯ ಮೃಗವಿರುವುದು. ಇದು ಆಕಾರದಲ್ಲಿ ಕರಡಿಯುಂತಿರುವುದು. ನೀರಿನಲ್ಲಿಯೂ ಭೂಮಿಯು ಮೇಲೂ ವಾಸಿಸುವುದು. ಇದಕ್ಕೆ ಜಾಲ ಪಾದಗಳೂ ಒಲವಾದ ಬಾಲವೂ ಇರುವುವು. ನೀರಿನಲ್ಲಿ ಚೆನ್ನಾಗಿ ಈಜಬಲ್ಲದು. ಮೀನುಗಳನ್ನು ಹಿಡಿದು ತಿನ್ನುವುದು. ಯೂರೋಪಿನ ಜನರು ಈ ಮೃಗಬೇಟೆಯನ್ನಾಡುವುದುಂಟು.

ಸಮುದ್ರ ತೀರಗಳ ಬಳಿಯಲ್ಲಿ ಸಿಲ ಎಂಬ ಮೃಗವು ವಾಸಿಸುವುದು. ಇದು ಉದ್ದದಲ್ಲಿ ೩ ರಿಂದ ೬ ಅಡಿಗಳ ವರೆಗೂ ಬೆಳೆಯುವುದು. ಇತರ ಸಮುದ್ರ ಪ್ರಾಣಿಗಳನ್ನು ತಿಂದು ಜೀವಿಸುವುದು. ಇದಕ್ಕೆ ಹೊರಭಾಗದಲ್ಲಿ ಕಿವಿಯಾಲೆ ಇಲ್ಲ. ಉತ್ತರಸ್ಕಾಟಿಷ್ ದ್ವೀಪವಾಸಿಗಳು ಸೀಲಿನಿಂದ ಬಹು ಪ್ರಯೋಜನವನ್ನು ಹೊಂದುವರು. ಅದನ್ನು ಆಹಾರವಾಗಿ ಉಪಯೋಗಿಸುವರು. ಅದರ ದೇಹದಲ್ಲಿರುವ ಎಣ್ಣೆಯನ್ನು ನಾನಾ ಕಾರ್ಯಗಳಿಗುಪಯೋಗಿಸುವರು. ಅದರ ಚರ್ಮದಿಂದಲೂ ಕೂದಲಿನಿಂದ

ಲೂ ಬಟ್ಟೆಗಳನ್ನು ಮಾಡುವರು. ಚರ್ಮವನ್ನು ಮನೆಯ ಮೇಲ್ಛಾವಣಿಗೂ ದೋಣಿಯ ತಳಕ್ಕೂ ಹೊದ್ದಿಸುವರು. ಅದರ ಸ್ನಾಯುವನ್ನು ಹೊಲಿಯುವುದಕ್ಕೆ ಉಪಯೋಗಿಸುವರು.

ಯೂರೋಪ್ ಸಮುದ್ರದಲ್ಲಿ ನ್ಹೇಲ್ ಮತ್ತು ಡಾಲ್ಫಿನ್ ಎಂಬ ತಿಮಿಂಗಿಲಗಳಿರುವುವು. ಇವಲ್ಲದೆ ಕಡಲು ಹಂದಿಗಳು ಇಂಗ್ಲೆಂಡಿನ ಸುತ್ತ ಮುತ್ತಲೂ ಭೂಮಧ್ಯದ ಸಮುದ್ರದಲ್ಲಿಯೂ ಗುಂಪುಗುಂಪಾಗಿ ವಾಸಿಸುವು.ಮೀನುಗಳನ್ನು ತಿಂದು ಜೀವಿಸುವುವು.

ಪೂರ್ವದಲ್ಲಿ ಯೂರೋಪಿನಲ್ಲಿ ಕುದುರೆಗಳೂ ಕತ್ತೆಗಳೂ ಇರಲಿಲ್ಲ. ಯೂರೊಪಿಯರು ಈಜಂತುಗಳನ್ನು ಅಷ್ಯಾಖಂಡದಿಂದ ತಂದು ತಮ್ಮ ದೇಶಗಳಲ್ಲಿ ಸಾಕುತ್ತಾ ಬಂದರು. ಈಗ ಅಲ್ಲಿ ಇವು ವಿಶೇಷವಾಗಿ ಹುಟ್ಟಿ ಬೆಳೆಯುವುವು. ಯೂರೋಪಿನಲ್ಲಿ ದನ ಕುರಿ ಹಂದಿಗಳೂ ಅಪಾರವಾಗಿರುವುವು. ಅಡವಿಗಳಲ್ಲಿ ಕಾಡುಹಂದಿಗಳೂ ಸ್ವಲ್ಪ ವಾಗಿರುವುವು. ಇವುಗಿಡದಬೇರನ್ನು ತಿಂದು ಜೀವಿಸುವುವು.ರಾತ್ರಿ ವೇಳೆಯಲ್ಲಿ ಸಂಚಾರ ಮಾಡುವುವು. ಯೂರೋಪಿನಜನರು ಕಾಡುಹಂದಿ ಬೇಟೆಯನ್ನಾಡುವುದುಂಟು.

ಯುರೊಪ್‌ಖಂಡದಲ್ಲಿರುವ ಜ್ಯೂಜನರು. (ಯಹೂದರು)

ಎಸಿರಿಯ ಮತ್ತು ಬೆಬಿಲೋನಿಯ ದೇಶಗಳಲ್ಲಿದ್ದ ಜೂಗಳುಕ್ರಮೇಣ ಇತರ ದೇಶಗಳಿಗೆ ಪ್ರಯಾಣ ಮಾಡಿದರು. ಕ್ರಿಸ್ತಶಕದ ೭೦ ನೆಯ ವರ್ಷದಲ್ಲಿ ರೋಮನರು ಜೆರೂಸಲೆಮ್ ಪಟ್ಟಣವನ್ನು ನಾಶಮಾಡಿ, ಅಲ್ಲಿದ್ದ ಜೂಜನರಲ್ಲಿ ೭೦೦೦ಕ್ಕಿಂತ ಹೆಚ್ಚು ಜನರನ್ನು ಕೈಶರೆಹಿಡಿದು ರೋಮ್ ಪಟ್ಟಣಕ್ಕೆ ತೆಗೆದುಕೊಂಡು ಹೋದರು. ಪಾಲೆಸ್ಟೈನಿನಲ್ಲಿಯೇ ನಿಂತ ಜೂಗಳು ತಮ್ಮಲ್ಲಿ ಪರಂಪರೆಯಾಗಿ ನಡೆಸಿಕೊಂಡು ಬಂದ ಸಂಪ್ರದಾಯಗಳನ್ನೆಲ್ಲಾ ಸೇರಿಸಿ ಮಿಷ್ನಾ ಎಂಬ ಹೆಸರಿನ ಒಂದು ಸಂಹಿತೆಯನ್ನು ಮಾಡಿಕೊಂಡರು. ಆಮೇಲೆ ೬ ನೆಯ ಶತಮಾನದಲ್ಲಿ ತಾಲ್ಮದ್ ಎಂಬ ಸಂಹಿತೆಯನ್ನು ಮಾಡಿಕೊಂಡರು. ಇದಾದಬಳಿಕ ಇವರ ಮತವಾದ ಜೂಡಾ ಅಥವಾ ಯಹೂದ್ಯ ಮತವು ಸ್ಥಾಪಿಸಲ್ಪಟ್ಟಿತು.

ಕ್ರಿಸ್ತಶಕದ ೧೩ನೆಯ ಶತಮಾನದಲ್ಲಿ ಗ್ರೀಸ್, ಥೆರೆಸ್, ಪೆಸೆಡೋನಿಯ, ಮತ್ತು ರೊಮ್ ರಾಜ್ಯಗಳ ಹಲವುಪ್ರದೇಶಗಳಲ್ಲಿಯೂ ಭೂಮಧ್ಯ ಸಮುದ್ರದ ಪಶ್ಚಿಮ ತೀರಗಳಲ್ಲಿಯೂ ಅನೇಕ ಜೂಗಳು ವಾಸವಾಗಿದ್ದರು. ಇವರು ಇತರ ಮತಸ

ರೊಂದಿಗೆ ಬಳಿಕೆ ಮಾಡುತ್ತಿರಲಿಲ್ಲ. ವ್ಯಾಪಾರವನ್ನು ಮಾಡಿ ಹೆಚ್ಚಾಗಿ ಲಾಭವನ್ನು ಸಂಪಾದಿಸುತ್ತಿದ್ದುದಲ್ಲದೆ, ಇತರ ಜಾತಿಯವರಿಗೆ ಸಾಲವನ್ನು ಕೊಟ್ಟು ಅಧಿಕವಾಗಿ ಬಡ್ಡಿಯನ್ನು ತೆಗೆದು ಕೊಳ್ಳುತಿದ್ದರು. ಈಕಾರಣದಿಂದ ಸ್ವದೇಶೀಯುರಿಗೆ ಇವರಲ್ಲಿ ಮತ್ಸರ ಪುಂಟಾಯಿತು. ರೋಮನ್ ಚಕ್ರವರ್ತಿಗಳು ಅನೇಕಾನೇಕ ಜೂಗಳನ್ನು ರೊಮ್ ಪಟ್ಟಣ ದಿಂದಹೊರಡಿಸಿ, ಅವರು ಪುನಃ ಅಲ್ಲಿಗೆ ಬರಕೂಡದೆಂದು ನಿರ್ಬಂಧ ಮಾಡಿದರು.

ಕಾನಸ್ಟೆಂಟೈನ್ ಎಂಬ ರೋಮನ್ ಚಕ್ರವರ್ತಿಯು ಕ್ರಿಸ್ತಮತವನ್ನ ವಲಂ ಬಿಸಿದಬಳಿಕ, ಜೂಜನಗಳಿಗೆ ಇನ್ನೂ ಅಧಿಕವಾದ ಹಿಂಸೆಯುಂಟಾದಿತು. ಯಾರೂ ಜೂಮತಕ್ಕೆ ಸೇರಕೂಡದೆಂದು ಕಟ್ಟಿದ್ದಿತ್ತು ಯಾರಾದರೂ ಆ ಮತಕ್ಕೆಸೇರಿದರೆ, ಅವರು ಪ್ರಬಲವಾದ ಶಿಕ್ಷೆಗೆ ಗುರಿಯಾಗುತ್ತಿದ್ದರು. ಚಕ್ರವರ್ತಿ ಕಾನಸ್ಟ್ಯಂಟಿ ಯ.ಸ್ಸಿನ ಕಾಲದಲ್ಲಿ ಜೂಜನರೊಂದಿಗೆ ವಿವಾಹ ಬೆಳೆಸಿದವರಿಗೆ ಮರಣದಂಡನೆಯು ವಿಧಿಸಲ್ಪಟ್ಟಿದ್ದಿತು. ಹೊನೊರಿಯಸ್ ಚಕ್ರವರ್ತಿಯಕಾಲದಲ್ಲಿ ಸರ್ಕಾರಿಯ ಯಾ ವಕೆಲಸಕ್ಕೂ ಜೂಜನರನ್ನು ನೇಮಿಸಕೂಡದೆಂದು ಕಟ್ಟುಮಾಡಲ್ಪಟ್ಟಿತು. ಜಸ್ಟಿನಿ ಯನ್ ಚಕ್ರವರ್ತಿಯು ಜೂಗಳನ್ನು ಇನ್ನೂ ವಿಶೇಷವಾದ ಹಿಂಸೆಗೆ ಗುರಿಮಾಡಿದನು.

ಜರ್ಮನ್ ಚಕ್ರವರ್ತಿಗಳ ಆಳುವಿಕೆಯಲ್ಲಿ ಹಿಂಸೆಯು ತಪ್ಪಿ ಜೂಜನರಿಗೆ ಸ್ವಲ್ಪ ನೆಮ್ಮದಿಯುಂಟಾದಿತು. ಸರ್ಕಾರದವರ ಹಿಂಸೆ ಯಿಲ್ಲದೇ ಇದ್ದಾಗ್ಗೂ ಕೆಲವು ಪ್ರದೇಶಗಳಲ್ಲಿ ಜೂಗಳಿಗೆ ಕ್ರೈಸ್ತ ಪ್ರಜೆಗಳು ತೊಂದರೆ ಮಾಡುತ್ತಿದ್ದರು. ಜೂಜ ನರು ಭೂವ್ಯವಸಾಯವನ್ನು ಮಾಡುತ್ತಿರಲಿಲ್ಲ. ವ್ಯಾಪಾರವನ್ನು ಮಾತ್ರ ಮಾಡು ತ್ತಿದ್ದರು. ಗುಲಾಮರ ವ್ಯಾಪಾರವನ್ನು ವಿಶೇಷವಾಗಿ ಮಾಡುತ್ತಿದ್ದರು. ಕ್ರೈಸ್ತ ಪಾದ್ರಿಗಳು ಜೂಗಳನ್ನು ನಿರ್ಬಂಧದಲ್ಲಿಡಲು ಆಗಾಗ ಪ್ರಯತ್ನ ಪಡುತ್ತಿದ್ದರು. ಕೆಲವು ಕಾಲಾನಂತರ ಜೂಗಳು ಪುನಃ ಹಿಂಸೆಗೆ ಗುರಿಯಾದರು. ಇವರು ಯಹೂ ದಿಮತಕ್ಕೆ ಸೇರಿದವರೆಂದು ತೋರ್ಪಡಿಸಲು ಬಹಿರಂಗವಾದ ಗುರುತುಗಳನ್ನು ಮೈ ಮೇಲೆ ಹಾಕಿ ಕೊಳ್ಳಬೇಕೆಂದು ಕ್ರೈಸ್ತ ಪ್ರಜೆಗಳು ಇವರನ್ನು ಬಲವಂತ ಪಡಿಸಿ ದರು. ಕೊನೆಗೆ ಪ್ರಜಾ ಸಾಮಾನ್ಯಕ್ಕಿದ್ದ ಹಕ್ಕುಬಾಧ್ಯತೆಗಳನ್ನು ಕೂಡ ಇವರಿಂದ ಕಿತ್ತುಕೊಂಡರು ರಾಜರೂಸಹ ಇವರ ಸೊತ್ತುಗಳನ್ನು ಅಪಹರಿಸಲು ಪ್ರಾರಂಭಿ ಸಿದರು.

೧೨೯೦ ರಲ್ಲಿ ಇಂಗ್ಲೆಂಡಿನಿಂದಲೂ ೧೩೯೪ ರಲ್ಲಿ ಫ್ರಾನ್ಸಿನಿಂದಲೂ ೧೪೯೨ ರಲ್ಲಿ

ಲೂಸ್ಪೈನಿನಿಂದಲೂ ಗಿರ್ಜಾಗಳಲ್ಲಿ ಪೋರ್ತುಗಲ್ಲಿನಿಂದಲೂ ಜೂಜನಗಳು ಬಲವಂತದಿಂದ ಹೊರಡಿಸಲ್ಪಟ್ಟರು. ಹೀಗೆ ದೇಶಭ್ರಷ್ಟರಾಗಿ ಇವರು ಜರ್ಮನಿಗೂ ಇಟಲಿಗೂ ಬಂದು ಸೇರಿದರು. ಒಂದು ರಾಜ್ಯದಿಂದಾಗಲೀ ಪಟ್ಟಣದಿಂದಾಗಲೀ ಹೊರಡಿಸಲ್ಪಟ್ಟಾಗ ಇವರು ಮತ್ತೊಂದು ಸ್ಥಳಕ್ಕೆ ಹೋಗಿ ಅಲ್ಲಿಯ ನಿವಾಸಿಗಳ ಶರಣಹೊಗುತ್ತಿದ್ದರು. ಈತರಪದ ತೊಂದರೆಯಿಂದ ಜೂಗಳಿಗೆ ಒಂದುಬಗೆಯ ಲಾಭವೇ ವುಂಟಾದಿತು. ಇಂಥಾ ತೊಂದರೆಯನ್ನು ಸಹಿಸದಿದ್ದರೆ ಅಪರಮತವೇ ಉಳಿಯುತ್ತಿರಲಿಲ್ಲ. ಎಲ್ಲರೂ ಕ್ರೈಸ್ತರಾಗಿ ಹೋಗುತ್ತಿದ್ದರು. ಆದಾಗ್ಯೂ ಸ್ಪೈನಿನಲ್ಲಿ ಅನೇಕರು ದೇಶಭ್ರಷ್ಟತೆಯನ್ನು ತಪ್ಪಿಸಿಕೊಳ್ಳುವ ಉದ್ದಿಶ್ಯ ರೋಮನ್ ಕೆಥೋಲಿಕ್ ಮತವನ್ನವಲಂಬಿಸಿ ಆ ದೇಶೀಯರೊಂದಿಗೆ ಕಲೆತು ಪ್ರಜಾ ಭಾಧ್ಯತೆಗಳನ್ನೆಲ್ಲಾ ಹೊಂದಿದರು. ಪೋರ್ತುಗಲ್ಲಿನಲ್ಲಿಯೂ ಕೆಲವು ಜೂಗಳು ಬಲವಂತದಿಂದ ಕ್ರೈಸ್ತರಾದರು. ಆದರೆ ಇವರಿಗೆ ಅಲ್ಲಿಯು ಪ್ರಜೆಗಳಿಗೆ ಕೊಡತಕ್ಕ ಬಾಧ್ಯತೆಗಳಾವುವೂ ದೊರೆಯಲಿಲ್ಲ.

ಯುರೋಪಿನಲ್ಲಿ ಜೂಗಳು ಒಂದಾನೊಂದುಕಾಲದಲ್ಲಿ ಎಂಥಾ ಹಿಂಸೆಗಳಿಗೆ ಗುರಿಯಾಗಿದ್ದರೆಂದರೆ.—ಇವರು ದೇಶೀಯು ಪ್ರಜೆಗಳೊಂದಿಗೆ ಸೇರಕೂಡದು. ಹಳೆಯ ಬಟ್ಟೆಗಳನ್ನು ಜಿಲ್ಲಜಿಲ್ಲರೆಯಾಗಿ ಮಾರುವುದರ ಹೊರತು ಮತ್ತಾವ ದಿನಸುಗಳ ವ್ಯಾಪಾರವನ್ನೂ ಮಾಡಕೂಡದು. ಕೆಲವು ಬಗೆಯ ಸಾಮಾನುಗಳನ್ನು ಇವರು ಕೊಂಡುಕೊಳ್ಳಕೂಡದು. ಇತರ ಪ್ರಜೆಗಳಿಗಿಲ್ಲದ ಒಂದು ವಿಶೇಷವಾದ ತೆರಿಗೆಯನ್ನು ಇವರು ಕೊಡತಕ್ಕದ್ದು ಕೆಲವು ಪಟ್ಟಣಗಳೊಳಗೆ ಇವರು ಬರಕೂಡದು. ಬೇರೆ ಕೆಲವು ಪಟ್ಟಣಗಳಲ್ಲಿ ಇವರ ಸಂಖ್ಯೆ ಕೆಲವು ಪರಿಮಾಣಗಳಿಗೆ ಮೀರಿರಕೂಡದು. ಇವರಲ್ಲಿ ಪ್ರಜಾಸಂಖ್ಯೆಯು ಹೆಚ್ಚಾಗದಂತೆ ಇವರು ಕೆಲವು ನಿರ್ಬಂಧಗಳಿಗೆ ಒಳಗಾಗಿ ಮದುವೆ ಮಾಡಿಕೊಳ್ಳತಕ್ಕದ್ದು. ಕ್ರೈಸ್ತರನ್ನು ಇವರು ಸೇವಕರಾಗಿ ಇಟ್ಟುಕೊಳ್ಳಕೂಡದು. ವಾಣಿಜ್ಯ ಸಂಘಕ್ಕೆ ಇವರು ಸೇರಕೂಡದು. ಇತ್ಯಾದಿ.

S. V.

* ವಿದ್ಯಾದಾಯಿನಿ. *

ಭಾಗ ೧೫.] ಏಪ್ರಿಲ್—೧೯೦೬. [ಸಂಚಿಕೆ ೪.

ಮೈಸೂರು ಮಹಾರಾಣಿಯವರ ಕಾಲೇಜು.

ಈಸಲದ ಮದರಾಸ್ ಯೂನಿವರ್ಸಿಟಿ ಕಾನ್ವೋಕೇಷನ್ ಸಭೆಯು ಕಳೆದ ಮಾರ್ಚಿ ೨೦ ನೇ ತಾರೀಖಿನಲ್ಲಿ ನಡೆಯಿತು. ಯೂನಿವರ್ಸಿಟಿ ಫೆಲೊಸರ್ ರವರು ಮೆ॥ ರಾಯಬಹದೂರ್ ನಾಗೋಜಿರಾಯರನ್ನು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಉಪಸ್ಯಾಸ ಮಾಡಬೇಕೆಂದು ಹೇಳಿದರು. ಮೆ॥ ನಾಗೋಜಿರಾಯರು ಉಪಕ್ರಮದಲ್ಲಿ ನಮ್ಮ ಶ್ರೀಮನ್ಮಹಾರಾಣಿಯವರ ಕಾಲೇಜಿನಿಂದ ಬಿ. ಎ. ಪರೀಕ್ಷೆಯನ್ನು ಕೊಟ್ಟು ಉತ್ತೀರ್ಣರಾದ ಸೌ॥ ರುಕ್ಮಿಣಿಯಮ್ಮನವರನ್ನು ಸೌ॥ ಶ್ರೀರಂಗಮ್ಮನವರನ್ನು ಶ್ಲಾಘಿಸಿ ಬ್ರಾಹ್ಮಣ ಸ್ತ್ರೀಯರು ಇಂಗ್ಲೀಷ್ ವಿದ್ಯಾಭ್ಯಾಸವನ್ನು ಮಾಡಿ ಪರೀಕ್ಷೆ ಕೊಡುವುದಕ್ಕೆ ಇದೇ ಮೊದಲೆಂಬದಾಗಿಯೂ, ಇವರ ಮೆಲುಪಜ್ಞೆಯು ಇತರರಿಂದ ವಿಶೇಷವಾಗಿ ಅನುಸರಿಸಲ್ಪಡಬೇಕೆಂಬದಾಗಿಯೂ, ಸ್ತ್ರೀ ಪುರುಷರಿಬ್ಬರೂ ಯಾವ ದೇಶದಲ್ಲಿ ಪ್ರೌಢವಿದ್ಯಾಭ್ಯಾಸವನ್ನು ಮಾಡಿರುವರೋ ಆ ದೇಶದಲ್ಲಿ ನಾಗರಿಕತೆಯು ಅಭಿವೃದ್ಧಿಯೂ ಹೆಚ್ಚಾಗಿರುವವುದೆಂಬದಾಗಿಯೂ ಹೇಳಿದರು.

ಈ ಸ್ತ್ರೀಯರಿಬ್ಬರು ಈ ಪರೀಕ್ಷೆಯನ್ನು ಕೊಟ್ಟು ತೇರ್ಗಡೆಯಾಗುವುದಕ್ಕೆ ಶ್ರೀಮನ್ಮಹಾರಾಣಿಯವರ ಕಾಲೇಜಿಗೆ ನಮ್ಮ ಮಹಾರಾಜರವರು ಮತ್ತು ನಮ್ಮ ಮಹಾ ಮಾತೃಶ್ರೀಯವರಾದ ಲೇಟ್ ರೀಜಂಟರು ಮಾಡುತ್ತಲಿರುವ ಅಸಾಧಾರಣವಾದ ಪ್ರೋತ್ಸಾಹನೇ ಮುಖ್ಯ ಕಾರಣ. ಈ ಪಾಠಶಾಲೆಯನ್ನು ನಿರ್ಮಾಣ ಮಾಡಿದವರು ನಮ್ಮ ದೇಶದ ಮೊದಲನೇ ದಿವಾನರವರಾದ ಮೆ॥ ರಂಗಾಚಾರ್ಯರವರು ಅವರ ಅನಂತರ ಸರ್ ಶೇಷಾದ್ರಿಯ್ಯರ್ ರವರು ಈ ಪಾಠಶಾಲೆಗೆ ತುಂಬಾ ಪ್ರೋತ್ಸಾಹವನ್ನುಂಟುಮಾಡಿದರು. ಸರ್ ಕೃಷ್ಣಮೂರ್ತಿಗಳು ಆ ರೀತಿಯಾದ ಪ್ರೋತ್ಸಾ

ಹವನ್ನೇ ಕೊಡುತ್ತಾ ಬಂದರು. ಇವರ ಉದ್ದೇಶವನ್ನು ನೆರವೇರಿಸಕ್ಕ ವಿಷಯು ದಲ್ಲಿ ಈ ಪಾಠಶಾಲೆಯ ಕಮಿಟಿಯವರು ಈ ಕಮಿಟಿಯ ಕಾರ್ಯ್ಯದರ್ಶಿಗಳಾದ ಮೆ॥ ರಾಯಬಹದೂರ್ ಅಂಬಿಲ್ ನರಸಿಂಹೈಯ್ಯಂಗಾರ್ಯರವರು, ಈ ಸಂಸ್ಥಾನದ ವಿದ್ಯಾ ಭ್ಯಾಸದ ಇಲಾಖೆ ಇನ್‌ಸ್ಪೆಕ್ಟರ್ ಜನರಲ್ ರವರಾದ ಮೆ॥ ಫಾಫಾ ಸಾಹೇಬರವರೂ ಬಹಳವಾಗಿ ಪ್ರೋತ್ಸಾಹ ಮಾಡಿದರು. ಮುಖ್ಯವಾಗಿ ಸ್ತ್ರೀಯರಿಗೆ ಪ್ರೌಢವಿದ್ಯಾ ಭ್ಯಾಸದಲ್ಲಿ ಆಸಕ್ತಿಯನ್ನುಂಟುಮಾಡಲು ಬಹಳ ಪ್ರಯತ್ನಪಡುತ್ತಿರುವ ರಾಯಬಹ ದ್ದೂರ್ ಅಂಬಿಲ್ ನರಸಿಂಹೈಯ್ಯಂಗಾರ್ಯರವರ ನೈಜವಾದ ಉಪಕಾರವು ಸ್ಮರಣೀ ಯವಾಗಿರುವುದು. ಇವರ ಪ್ರೋತ್ಸಾಹಕ್ಕೆ ಅನುರೂಪವಾಗಿ ಈ ಪಾಠಶಾಲೆಯ ಹೈಸ್ಕೂಲ್ ಮತ್ತು ಕಾಲೇಜು ಕ್ಲಾಸುಗಳ ಪಾಠಕರು ಅನ್ಯಾದೃಶವಾದ ಪ್ರಯತ್ನ ವನ್ನು ಮಾಡಿ, ಈ ಪಾಠಶಾಲೆಗೂ, ಇದರ ಸೂಪರ್‌ಟೆಂಡೆಂಟರಿಗೂ, ಈ ಪಾಠಶಾಲೆಯ ಕಮಿಟಿಗೂ, ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ರವರಿಗೂ, ಗೌರ್ನ ಮೆಂಟಿಗೂ, ಶ್ರೀಮನ್ಮಹಾರಾಜರಿಗೂ ಕೀರ್ತಿಯು ಬರುವಂತೆ ಮಾಡಿದರು.

ಸ್ತ್ರೀ ವಿದ್ಯಾಭ್ಯಾಸಕ್ಕೆ ಅನೇಕ ವಿಧವಾದ ಪ್ರತಿಬಂಧಕಗಳಿರುವುವು. ಹೀಗಿ ದ್ದಾಗ್ಗೂ ಈ ಪ್ರತಿಬಂಧಕಗಳನ್ನು ಜೈಸಿಕೊಂಡು ಈ ಸ್ತ್ರೀಯರು ಬಿ. ಎ. ಪರೀಕ್ಷೆ ಯನ್ನು ಕೊಟ್ಟಿದ್ದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಸಂಸಾರ ಕ್ಲೇಶಗಳಿ ಲ್ಲದ ವಿದ್ಯಾರ್ಥಿಗಳಲ್ಲಿಯೂ ಅನೇಕರು ಪ್ರತಿಬಂಧಕಗಳನ್ನು ನಿಗ್ರಹಿಸಲಾರದೆ ಪರೀ ಕ್ಷೆಗಳಲ್ಲಿ ಸೋತುಹೋಗುವರು. ಹೀಗಿರಲಾಗಿ, ಸಂಸಾರಿಗಳಾಗಿ ಪುತ್ರವತಿಯರಾ ಗಿದ್ದುಕೊಂಡು ಗೃಹಕೃತ್ಯಗಳ ಜತೆಗೆ ವಿದ್ಯಾವ್ಯಾಸಂಗವನ್ನು ಮಾಡಿಕೊಂಡು ಈ ಪರೀಕ್ಷೆಯನ್ನು ಕೊಟ್ಟು, ಇವರು ಉತ್ತೀರ್ಣರಾದುದು ವಿಶೇಷ ಶ್ಲಾಘನೆಗೆ ಅರ್ಹ ವಾದುದು. ಇವರ ಮೇಲುಪಜ್ಞೆಯನ್ನು ನಮ್ಮ ದೇಶದ ಸ್ತ್ರೀಯರಲ್ಲಿ ಇನ್ನೂ ಅನೇ ಕರು ಅನುಸರಿಸಿ ಇವರಂತೆ ವಿದ್ಯಾವತಿಯರಾಗಿಯೂ, ಗುಣವತಿಯರಾಗಿಯೂ ಹೆಸ ರವಾಸಿಯನ್ನು ಪಡೆಯುವುರೆಂದು ನಂಬಿಸ್ಪೇವೆ.

ಜಪಾನ್ ದೇಶದ ಪ್ರೈಮರಿ ಸ್ಕೂಲುಗಳು.

ಜಪಾನ್ ದೇಶದಲ್ಲಿ ಪ್ರೈಮರಿ ಸ್ಕೂಲುಗಳನ್ನು ಯಾವ ರೀತಿಯಲ್ಲಿ ಇಟ್ಟಿರು ತ್ತಾರೋ ಅದನ್ನು ಪರಿಶೀಲಿಸಿ ಅದೇರೀತಿಯಲ್ಲಿ ನಾವೂ ಇಟ್ಟುಕೊಳ್ಳುವುದು ಅನಾ ಧ್ಯವೇ ಎಂಬುವುದನ್ನು ಪರ್ಯಾಲೋಚಿಸಬೇಕು. ಜಪಾನ್ ದ್ವೀಪದಲ್ಲಿ ತಿಳಿಗಿಳಿ

ಪ್ರೈಮರಿ (ಲೋವರ್) ಸ್ಕೂಲುಗಳಿರುತ್ತವೆ. ೪೨೫೩ ಹೈಯರ್ ಪ್ರೈಮರಿ ಸ್ಕೂಲುಗಳಿರುತ್ತವೆ. ಲೋವರ್ ಪ್ರೈಮರಿ ಸ್ಕೂಲುಗಳಲ್ಲಿ ೪೦ ಜನಗಳಿಗೆ ಒಬ್ಬ ಉಪಾಧ್ಯಾಯನಂತೆ ಇರುತ್ತಾನೆ. ಕೆಲವು ಸ್ಕೂಲುಗಳಲ್ಲಿ ೫೦ ಜನಗಳಂತೆ ಇರುವುದೂ ಉಂಟು. ಗೌರ್ನಮೆಂಟಿನವರು ಈ ಸ್ಕೂಲುಗಳಿಗೆ ಒಬ್ಬ ವಿದ್ಯಾರ್ಥಿಯ ವಿದ್ಯಾಭ್ಯಾಸಕ್ಕೆ ಸರಾಸರಿ ೯ ರೂಪಾಯಿನಂತೆ ಖರ್ಚು ಮಾಡುತ್ತಾರೆ. ವಿದ್ಯಾಭ್ಯಾಸ ಕ್ಕೋಸ್ಕರ ಈ ದ್ವೀಪವಾಸಿಗಳು ೪೭೦೦೦೦೦ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಈ ಪೈಕಿ ಶೇಕಡಾ ೯೦ ರಂತೆ ಸರ್ಕಾರದವರು ಖರ್ಚು ಮಾಡುವರು. ಶೇಕಡ ೧೦ ರಷ್ಟು ಫೀಜಿನಿಂದ ಬರುವುದು.

ಇಂಡಿಯಾ ದೇಶದಲ್ಲಿ ಜನಸಂಖ್ಯೆಯು ಜಪಾನ್ ದೇಶಕ್ಕಿಂತಲೂ ೫ ರಷ್ಟು ಹೆಚ್ಚಾಗಿರುವುದು. ಪ್ರೈಮರಿ ವಿದ್ಯಾಭ್ಯಾಸಕ್ಕೆ ಆಗತಕ್ಕ ಖರ್ಚು ಜಪಾನ್ ದೇಶದಲ್ಲಿ ಆಗತಕ್ಕ ಖರ್ಚಿಗೆ ಐದರಲ್ಲಿ ಒಂದು ಭಾಗವಾಗಿರುವುದು. ಇಂಡಿಯಾ ಗೌರ್ನಮೆಂಟಿನಲ್ಲಿ ವಿದ್ಯಾಭ್ಯಾಸಕ್ಕೆ ಖರ್ಚು ಕಡಮೆಯಾಗಿದ್ದಾಗ್ಯೂ ದೇಶೀಯ ಸಂಸ್ಥಾನಗಳಲ್ಲಿ ವಿಶೇಷವಾಗಿ ಆಗುವುದಕ್ಕೆ ಅವಕಾಶವು ಇರುವುದು. ದೇಶೀಯ ಗೌರ್ನಮೆಂಟಿನವರು ಎಲ್ಲಾ ಜನಗಳಿಗೂ ಓದುಬರಹಗಳು, ಲೆಖ್ಖಾಚಾರ, ಸ್ಯಾನಿಟರಿ ಸೂತ್ರಗಳು ರೈತರಿಗೆ ಉಪಯುಕ್ತವಾದ ವ್ಯವಸಾಯ ಕೈಗಾರಿಕೆಗಳು ಇವುಗಳನ್ನೆಲ್ಲಾ ಉಚಿತವಾಗಿ ಕಲಿಸಲು ಏರ್ಪಾಟು ಮಾಡಿಸುವುದು ಅವಶ್ಯಕ. ಜಪಾನ್ ದೇಶೀಯರು ೬ ವರ್ಷದಿಂದ ೧೪ ವರ್ಷಗಳ ವರಿಗೂ ಪಾಠಶಾಲೆಗಳಿಗೆ ಎಲ್ಲಾ ಗಂಡುಮಕ್ಕಳೂ ಹೆಣ್ಣುಮಕ್ಕಳೂ ಓದುವಂತೆ ಏರ್ಪಾಡು ಮಾಡಿ ಹಾಗೆ ಬರದೇ ಇರತಕ್ಕವರಿಗೆ ಶಿಕ್ಷೆಗಳನ್ನು ಕೂಡ ಮಾಡುವರು. ೧೪ ವರ್ಷ ವಯಸ್ಸಾಗುವುದರೊಳಗಾಗಿ ಸ್ವತಂತ್ರವಾಗಿ ಜೀವಿಸುವುದಕ್ಕೆ ಬೇಕಾದ ವಿಷಯಗಳನ್ನೆಲ್ಲಾ ಬೋಧಿಸುವರು. ೬ ವರ್ಷ ವಯಸ್ಸಾಗುವ ವರಿಗೂ ಗ್ರಾಮಾಂತರಗಳಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳು ಎಂಬ ಭೇದವಿಲ್ಲದೆ ಎಲ್ಲರಿಗೂ ಒಟ್ಟಿಗೆ ಪಾಠ ಹೇಳುವರು. ಹೆಚ್ಚಾದ ಫೀಜನ್ನು ಹಾಕಿ ಒಡಬಗ್ಗರಿಗೆ ವಿದ್ಯಾಭ್ಯಾಸವಿಲ್ಲದಂತೆ ಮಾಡುವುದಿಲ್ಲ. ಒಡವರಾದವರಿಗೆ ಉಚಿತವಾದ ವಿದ್ಯಾಭ್ಯಾಸವು ದೊರೆಯುವಂತೆ ಮಾಡಿರುವರು.

ಜಪಾನ್ ದೇಶೀಯರಂತೆ ಪ್ರಜೆಗಳೆಲ್ಲಾ ಓದುಬರಹ ಕೈಗಾರಿಕೆ ಕಲಿಸಲು ಯತ್ನಿಸುವ ಜನಾಂಗವು ಏಳಿಗೆಯನ್ನು ಹೊಂದದಿರದು.

ಮೈಸೂರು ವಿದ್ಯಾಭ್ಯಾಸದ ಇಲಾಖೆ.

ಮೈಸೂರು ಡೆ' ಇನ್ಸ್ಪೆಕ್ಟರ್ ಮಾ॥ ರಾ॥ ಶ್ರೀ॥ ಎಂ. ಶ್ರೀನಿವಾಸರಾವ್ ಬಿ. ಎ. ಯವರನ್ನೂ, ತುಮಕೂರು ಹೈಸ್ಕೂಲು ಹೆಡ್ ಮಾಸ್ಟರಾದ ಮಾ॥ ರಾ॥ ಶ್ರೀ॥ ಸಿ. ಕೃಷ್ಣರಾವ್ ಬಿ. ಎ. ಯವರನ್ನೂ ಸರ್ಕಲ್ ಇನ್ಸ್ಪೆಕ್ಟರುಗಳಾಗಿ ಮುನ್ನೂರು ರೂ. ನಿಂದ ಐನೂರು ರೂಪಾಯಿನ ಗ್ರೇಡಿನಲ್ಲಿ ನಿಯಮಿಸಿರುತ್ತಾರೆ.

ಮೈಸೂರು ಸರಕಾರದವರು ವಿದ್ಯಾಭ್ಯಾಸದ ಇಲಾಖಾ ವಿಚಾರಣೆ ಕರ್ತರ (ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್) ಸಹಾಯಾರ್ಥವಾಗಿ ಇಬ್ಬರು ಸರ್ಕಲ್ ಇನ್ಸ್ಪೆಕ್ಟರುಗಳನ್ನೂ ನಿಯಮಿಸಿರುವುದು ಸರಿಯಷ್ಟೆ; ಇವರಲ್ಲಿ ಒಬ್ಬರು ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಎಲ್ಲಾ ಪಾಠಶಾಲೆಗಳನ್ನೂ, ಇನ್ನೊಬ್ಬರು ಮೈಸೂರು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಡಿಸ್ಟ್ರಿಕ್ಟುಗಳ ಪಾಠಶಾಲೆಗಳನ್ನೆಲ್ಲಾ ಪರೀಕ್ಷಿಸಲು ಗೊತ್ತಾಗಿರುವರು. ಈ ಸರ್ಕಲ್ ಇನ್ಸ್ಪೆಕ್ಟರುಗಳಲ್ಲದೆ ಒಂದೊಂದು ಡಿಸ್ಟ್ರಿಕ್ಟಿಗೂ ಒಬ್ಬೊಬ್ಬ ಡಿಪ್ಯುಟಿ ಇನ್ಸ್ಪೆಕ್ಟರೂ, ಇವರ ಸಹಾಯಾರ್ಥವಾಗಿ, ಡಿಸ್ಟ್ರಿಕ್ಟುನಲ್ಲಿನ ಪಾಠಶಾಲೆಗಳ ಸಂಖ್ಯೆಯು ಮೇರೆ, ಇಬ್ಬರು, ಮೂರುಮಂದಿ ಅಸಿಸ್ಟೆಂಟ್ ಡಿಪ್ಯುಟಿ ಇನ್ಸ್ಪೆಕ್ಟರೂ ನಿಯಮಿಸಲ್ಪಟ್ಟಿರುವರು. ಅಥವಾ ಕ್ಷಿಪ್ರದಲ್ಲಿಯೇ ಕೆಲವರು ನಿಯಮಿಸಲ್ಪಡುವರು. ಈ ತೆರನಾದ ವಿಚಾರಣ ಕರ್ತರ ಏರ್ಪಾಟಿನಿಂದ ಸಂಸ್ಥಾದದ ವಿದ್ಯಾಶಾಲೆಗಳ ಮೇಲ್ವಿಚಾರಣೆ ಸಮರ್ಪಕವಾಗಿ ನಡೆಯುವುದಕ್ಕೂ, ಹಾಗೆ ಮೇಲ್ವಿಚಾರಣೆಯಲ್ಲಿ ತೋರಿಬಂದನ್ಯೂನಾತಿರಿಕ್ತಗಳನ್ನು ವ್ಯಕ್ತಗೊಳಿಸುವುದಕ್ಕೂ ಹೆಚ್ಚಾದ ಅವಕಾಶ ದೊರೆಯುವುದು.

ಇದಕ್ಕೆ ಪೂರ್ವದಲ್ಲಿದ್ದ ಏರ್ಪಾಟಿನಲ್ಲಿ ಒಬ್ಬೊಬ್ಬ ಡೆ॥ ಇನ್ಸ್ಪೆಕ್ಟರೂ ತಮ್ಮ ಗಡಿಗೆ ಸೇರಿದ ಅನೇಕ ಸ್ಕೂಲುಗಳನ್ನೂ ಪ್ರತಿ ವರ್ಷದಲ್ಲಿ ಪರೀಕ್ಷಿಸಬೇಕಾಗಿದ್ದುದರಿಂದ, ಅವುಗಳೆಲ್ಲವನ್ನೂ ಕ್ಲುಪ್ತಕಾಲದಲ್ಲಿ ತೃಪ್ತಿಕರವಾಗಿ ಪರೀಕ್ಷಿಸಿ, ನ್ಯೂನಾತಿರಿಕ್ತಗಳನ್ನು ಕ್ರಮಪಡಿಸಿ ಬರಲು ವ್ಯವಧಾನವಿರುತಿರಲಿಲ್ಲ. ಒಂದೊಂದು ಡಿಸ್ಟ್ರಿಕ್ಟುನಲ್ಲಿ ಕಾರಣಾಂತಗಳಿಂದ ಎಲ್ಲಾ ಸ್ಕೂಲುಗಳನ್ನೂ ಪರೀಕ್ಷಿಸಲೂ ಆಸ್ತಿತರಲಿಲ್ಲ. ಈ ಕೊರತೆಯನ್ನು ಹೋಗಲಾಡಿಸುವುದಕ್ಕೋಸ್ಕರ ಹೊಸ ಏರ್ಪಾಟನ್ನು ಮಾಡಿರುವರು. ಈ ಏರ್ಪಾಟಿನಿಂದ ಯಾವ ಕೊರತೆಯೂ ಇಲ್ಲದಂತೆ ಸಮ

ರ್ಪಕವಾಗಿ ಉದ್ದಿಷ್ಟಕಾರ್ಯವು ನೆರವೇರುವುದೆಂದು ಅಲ್ಲ. ಹಿಂದಣ ಕ್ರಮಕ್ಕಿಂತ ಇದು ಮೇಲೆಂದು ಹೇಳಬಹುದು.

ಈಗಲೂ, ಈ ವಿಚಾರಣಕರ್ತರೂ, ಸಂಸ್ಥಾನದ ಸ್ಕೂಲುಗಳನ್ನೆಲ್ಲಾ ಪ್ರತಿ ಸಂವತ್ಸರವೂ ಪರೀಕ್ಷಿಸಿ, 'ಇದು ಚೆನ್ನಾಗಿದೆ ಇಲ್ಲಿ ಇಷ್ಟುಮಂದಿ ತೇರ್ಗಡೆಯಾದರು. ಉಪಾಧ್ಯಾಯರೆಲ್ಲರೂ ಕಷ್ಟಪಟ್ಟು ಕೆಲಸ ಮಾಡಿರುವರು. ಭೂವಿವರಣೆ ಪಾಠ ಸಮರ್ಪಕವಾಗಿಲ್ಲ. ಲೆಖ್ಖ ಚೆನ್ನಾಗಿ ಹೇಳಿಕೊಡಬೇಕು. ಬರವಣಿಗೆಗೆ ಹೆಚ್ಚಾದ ಗಮನ ಕೊಡಬೇಕು. ಇಲ್ಲಿ ವಸ್ತುಪಾಠ ಬೋಧಿಸಲು ತಿಳಿಯುದೆಂದು ತೋರುತ್ತೆ. ಮುಂದೆ ನಾವು ನೋಡುವುದಕ್ಕೆ ಬರುವಷ್ಟರಲ್ಲಿ ಎಲ್ಲವನ್ನೂ ಕ್ರಮ ಪಡಿಸಿ, ಅಭಿವೃದ್ಧಿಯನ್ನು ತೋರಿಸದಿದ್ದರೆ.....' ಎಂಬೀ ರೀತಿಯಲ್ಲಿ ಬರೆದು ಬಂದರೇ ಸಾಲದು. ಹೀಗೆ ಬರೆದು ಬಂದ ಮಾತ್ರಕ್ಕೆ ಪಾಠಶಾಲೆಯು ಹೇಗೆ ವೃದ್ಧಿಗೆ ಬಂದಂತಾಯಿತು? ಸರ್ಕಲ್ ಇನ್‌ಸ್ಪೆಕ್ಟರವರ ವಿಚಾರಣೆಯುಲ್ಲಿ ತೋರಿಬಂದ ನ್ಯೂನಾತಿರಿಕ್ತಗಳನ್ನು ಡೆಪ್ಯುಟಿ ಇನ್‌ಸ್ಪೆಕ್ಟರವರ ತಿಳುವಳಿಕೆಗೂ, ಅವರಿಗೆ ತಿಳಿದುಬಂದುದನ್ನು ಅವರ ಅಸಿಸ್ಟೆಂಟ್ ಡೆ॥ ಇನ್‌ಸ್ಪೆಕ್ಟರವರ ಮುದ್ದು ವಿಚಾರಣೆಗೆ ಎಂದು ಪತಿಕಾಪ್ರಸಂಗದಲ್ಲಿ ಕೊನೆಗಾಣಿಸದೆ, ಯಾವಯಾವ ಭಾಗವು ಸಮರ್ಪಕವಾಗಿಲ್ಲವೆಂದು ತೋರಿಬರುವುವೋ ಆಯಾ ಭಾಗವನ್ನು ಕ್ರಮಪಡಿಸಲು ಅ॥ ಡೆ॥ ಇನ್‌ಸ್ಪೆಕ್ಟರೇ ಆಗಲಿ, ಅನುಕೂಲವಿದ್ದಲ್ಲಿ ಅವರ ಮೇಲ್ಪಟ್ಟವರೇ ಆಗಲಿ ಆ ಸ್ಥಳದಲ್ಲಿಯೇ ನಿಂತು ಕೆಟ್ಟಭಾಗವನ್ನು ಸರಿತಂದು, ಮುಂದೆಹೋಗುವುದು ಮೇಲು.

ಹೀಗೆ ಒಂದೊಂದು ಸ್ಥಳದಲ್ಲೂ ನ್ಯೂನಾತಿರಿಕ್ತಗಳನ್ನು ಕ್ರಮಪಡಿಸುವುದಕ್ಕೆ ಇನ್‌ಸ್ಪೆಕ್ಟರುಗಳು ನಿಲ್ಲುತ ಬಂದಲ್ಲಿ ನೋಡಬೇಕಾದ ಸ್ಕೂಲುಗಳನ್ನೆಲ್ಲಾ ಕ್ಲುಪ್ತಕಾಲದಲ್ಲಿ ನೋಡಲು ಆಗುವುದಿಲ್ಲ. ಆದುದರಿಂದ ಬೋಧನಾಶಕ್ತಿಯುಳ್ಳ (ಉಪಾಧ್ಯಾಯ ಪರೀಕ್ಷೆಯುಲ್ಲಿ ತೇರ್ಗಡೆ ಹೊಂದಿರುವ) ಅನುಭವಶಾಲಿಗಳಾಗಿಯೂ, ಕನ್ನಡ, ಇಂಗ್ಲೀಷು ಸ್ಕೂಲುಗಳನ್ನು ಉತ್ತಮ ಸ್ಥಿತಿಗೆ ತಂದವರಾಗಿಯೂ ಇರುವ ಪಂಡಿತರಗಳನ್ನು (೩೦—೫೦) ರ ಗ್ರೇಡನ್ನು ಕೊಟ್ಟು, ಒಂದೊಂದು ಡಿಸ್ಟ್ರಿಕ್ಟಿಗೆ ಇಬ್ಬರಿಬ್ಬರನ್ನು ಗೊತ್ತುಮಾಡಬೇಕು. ಇನ್‌ಸ್ಪೆಕ್ಟರುಗಳ ಪರೀಕ್ಷೆಯುಲ್ಲಿ ಯಾವ ಪಾಠವು ಒಂದು ಸ್ಕೂಲಿನಲ್ಲಿ ಕೇವಲ ಹೀನಸ್ಥಿತಿಯುಲ್ಲಿ ಬೋಧನೆಯಾಗಿರುವುದೆಂದು ಕಾಣಬರುವುದೋ ಆ ಪಾಠವನ್ನು ಚೆನ್ನಾಗಿ ಬೋಧಿಸಲು ಕೆಲವು ಮಾದರಿ ಪಾಠಗಳನ್ನು ಕೊಟ್ಟು ಬೋಧಕರನ್ನು ಹುಡುಗರನ್ನು ತಿದ್ದುವಂತೆ ಈ ಪಂಡಿತರನ್ನು

ಇನ್‌ಸ್ಪೆಕ್ಟರುಗಳು ನಿಯಮಿಸಬೇಕು. ಈ ಪಂಡಿತರು ಒಂದೆರಡು ತಿಂಗಳ ವರೆಗೂ ಅವಶ್ಯವಾದಲ್ಲಿ ಅಲ್ಲಿಯೇ ನಿಂತು, ತಕ್ಕಮಟ್ಟಿಗೆ ಪಾಠವನ್ನು ಸರಿತಂದು, ತರುವಾಯ ಇವರ ಸಹಾಯವನ್ನು ಅಪೇಕ್ಷಿಸುವ ಇನ್ನೊಂದು ಪಾಠಶಾಲೆಗೆ ಹೋಗಿ ಅಲ್ಲಿ ಬೇಕಾದ ಪಾಠವನ್ನು ಹೇಳಿಕೊಡಬೇಕು.

ಈ ವ್ಯವಸ್ಥೆಯಿಂದ ಚೆನ್ನಾಗಿ ಪಾಠ ಹೇಳಿ ಪ್ರಸಿದ್ಧಿಗೆ ಬರಬೇಕೆಂಬ ಉಪೇಕ್ಷು ಶಕ್ತರಾದ ಉಪಾಧ್ಯಾಯರಲ್ಲಿ ಹುಟ್ಟುವುದು, ಆ ಉತ್ಸಾಹದಿಂದ ಸಮರ್ಥರಾದ ಉಪಾಧ್ಯಾಯರಿಗೂ, ಹೀನಸ್ಥಿತಿಯುಳ್ಳಿರುವ ಸ್ಕೂಲುಗಳಿಗೂ, ಪ್ರಯೋಜನ ಉಂಟಾದಂತೆ ಆಗುವುದು. ಬಿ. ಎ., ಪರೀಕ್ಷೆ ಕೊಡದ ಶಕ್ತರಾದ ಸಂಸ್ಕೃತ ಕನ್ನಡ ಪಂಡಿತರಿಗೆ, ಈ ತೆರನಾದ ಹೊಸ ಏರ್ಪಾಟಿನಿಂದ, ಚೆನ್ನಾಗಿ ಕೆಲಸಮಾಡಿ ಮೇಲ್ಪೈಯನ್ನು ಪಡೆಯಬೇಕೆಂಬ ಕುತೂಹಲವು ಹುಟ್ಟುವುದು.

ಭೂವಿವರಣೆ.

ನಿಮ್ನೋನ್ನತ ಪ್ರದೇಶಗಳು.

ಸಮುದ್ರದ ಮಟ್ಟದಲ್ಲಿರತಕ್ಕ ಪ್ರದೇಶಗಳು ಕೆಲವು, ಅದಕ್ಕಿಂತಲೂ ಉನ್ನತವಾದ ಪ್ರದೇಶಗಳು ಕೆಲವು ಎಲ್ಲಾವುಗಳಿಗಿಂತಲೂ ಉನ್ನತವಾದ ಪ್ರದೇಶಗಳು ಕೆಲವು ಇರುವುವು. ಸಮುದ್ರದ ಮಟ್ಟದಲ್ಲಿ ಅಥವಾ ಸ್ವಲ್ಪ ಹೆಚ್ಚು ಕಡಮೆಯಾಗಿರತಕ್ಕ ಪ್ರದೇಶಗಳಲ್ಲಿ ನಿಮ್ನಪ್ರದೇಶಗಳೆಂತಲೂ ಅದಕ್ಕಿಂತಲೂ ಉನ್ನತವಾದ ಪ್ರದೇಶಗಳಿಗೆ ಬಿಟ್ಟದ ಪ್ರದೇಶಗಳೆಂಬದಾಗಿಯೂ ಅತ್ಯುನ್ನತವಾದ ಬಿಟ್ಟಗಳಿಗೆ ಪರ್ವತಗಳೆಂಬದಾಗಿಯೂ ಹೇಳುವರು. ಸಮುದ್ರದ ತೀರದಲ್ಲಿರತಕ್ಕ ಪ್ರಾಂತ್ಯಗಳೇ ನಿಮ್ನಪ್ರಾಂತ್ಯಗಳಿಗೆ ಉದಾಹರಣೆಯಾಗಿಯೂ ಮೈಸೂರು ಬೆಂಗಳೂರು ಮೊದಲಾದ ಮೇಲುಸೀಮೆ ಎಂದು ಹೆಸರುಳ್ಳ ಪ್ರಾಂತ್ಯಗಳಿಗೆ ಬಿಟ್ಟದ ಪ್ರಾಂತ್ಯಗಳೆಂಬದಾಗಿಯೂ ಬಬಿಟ್ ಮೊದಲಾದ ಸ್ಥಳಗಳಿಗೂ ಅದರ ಸವಿಾಪದಲ್ಲಿರತಕ್ಕ ಪರ್ವತಗಳಿಗೂ ಪರ್ವತಪ್ರಾಂತ್ಯವೆಂಬದಾಗಿಯೂ ಹೇಳುವರು. ಈ ಉನ್ನತವಾದ ಪರ್ವತಶಿಖರಗಳು ಮೇಘಗಳಿಂದ ಆವೃತವಾಗಿಲ್ಲದೆ ಇರುವುದೇ ಅಪೂರ್ವ. ಕೆಲವು ಸಂದರ್ಭಗಳಲ್ಲಿ ಅನೇಕ ವಾರಗಳವರಿಗೂ ಆಕಾಶವೇ ಕಾಣುವುದಿಲ್ಲ. ಮೇಘವು

ಆಕಾಶವನ್ನೆಲ್ಲಾ ಮುಚ್ಚಿಕೊಂಡಿರುವುದು. ಹಿಮವು ಬೀಳುತ್ತಿರುವುದು. ಪರ್ವತವನ್ನು ಏರಬೇಕೆಂದು ಹೋಗುತ್ತಿರುವ ಜನಗಳು ಸ್ವಲ್ಪ ಎತ್ತರದ ವರಿಗೂ ಮೇಘದಿಂದ ಆವರಿಸಲ್ಪಟ್ಟು ಹತ್ತುವರು. ಮೇಘದ ಪ್ರಾಂತ್ಯವನ್ನು ಬಿಟ್ಟು ಮೇಲಕ್ಕೆ ಹತ್ತಿದ ತರುವಾಯ ಮೇಘದಿಂದ ಆಗುವ ವೃಷ್ಟಿಯನ್ನು ಮಿಂಚು ಗುಡುಗನ್ನು ನೋಡುವರು, ಮತ್ತು ಕೇಳುವರು.

ಈ ಪರ್ವತಗಳ ಬೇರೆಬೇರೆ ಭಾಗಗಳಲ್ಲಿ ವ್ಯತ್ಯಸ್ತವಾದ ಹವಪು ಇರುವುದು. ಸ್ವಿಟ್ಜರ್ಲೆಂಡ್ ದೇಶಕ್ಕೆ ಹೋಗಿ ನೋಡಿದರೆ ಪರ್ವತದ ತಪ್ಪಲಲ್ಲಿ ಹೊಲಗಳು, ಗದ್ದೆಗಳು, ತೋಟಗಳು, ನಾನಾವಿಧವಾದ ಫಲವೃಕ್ಷಗಳು ಕಾಣುವುವು. ಅಲ್ಲಿಂದ ಮೇಲಕ್ಕೆ ಹತ್ತಲಾರಂಭಿಸಿದರೆ ನಿಬಿಡವಾಗಿ ಬೆಳೆದುಕೊಂಡಿರುವ ಕಾಡು ವೃಕ್ಷಗಳು ಕಾಣುವುವು. ಇನ್ನೂ ಮೇಲಕ್ಕೆ ಹೋದರೆ ತಪ್ಪಲಲ್ಲಿಯೂ ಮಧ್ಯಪರ್ವತದಲ್ಲಿಯೂ ಕಾಣರುವ ವೃಕ್ಷಗಳೊಂದೂ ಕಾಣಬರುವುದಿಲ್ಲ. ೯೦೦೦ ಅಡಿ ಮೇಲಕ್ಕೆ ಹೋದರೆ ನೀರಿನ ಆವಿಯು ಶಿಲಾವಸ್ಥೆಯನ್ನು ಹೊಂದುವ ಪ್ರಾಂತ್ಯವು ಸಿಕ್ಕುವುದು. ಅಲ್ಲಿಂದ ಮೇಲಕ್ಕೆ ಹೋದರೆ ಶೈತ್ಯಕ್ಕೆ ದುಸ್ಸಹವಾಗಿರುವುದು. ಪ್ರಾಣಿಗಳು ಅಪೂರ್ವವಾಗಿರುವುವು. ಸನ್ಯಾದಿಗಳು ಕಾಣುವುದೇ ಇಲ್ಲ. ಗಂಗಾನದಿ ತೀರಕ್ಕೆ ಹೋದರೆ ಕೋವುಲವಾಗಿ ಬೆಳೆದುಕೊಂಡಿರತಕ್ಕ ಸನ್ಯಾದಿಗಳು ಕಾಣಬರುವುವು. ಹಿಮವತ್ಪರ್ವತದ ಮಧ್ಯಭಾಗಕ್ಕೆ ಹೋದರೆ, ಸಮಶೀತೋಷ್ಣವಲಯದಲ್ಲಿ ಸಿಕ್ಕುವ ವೃಕ್ಷಾದಿಗಳಿರುವುವು. ಆದರಿಂದ ಮೇಲಕ್ಕೆ ಹೋದರೆ ಶೀತವಲಯದಲ್ಲಿ ಸಿಕ್ಕುವ ಪದಾರ್ಥಗಳು ಸಿಕ್ಕುವುವು. ಪ್ರತಿಯೊಂದು ಪರ್ವತ ಶ್ರೇಣಿಯ ಪಕ್ಕದಲ್ಲೂ ನಿಮ್ನವಾದ ಕಣಿವೆಗಳಿರುವುವು. ಇವುಗಳಲ್ಲಿ ನದಿಗಳು ಪ್ರವಹಿಸುವುವು. ಸ್ವಿಟ್ಜರ್ಲೆಂಡ್ ಸಂಸ್ಥಾನದಲ್ಲಿ ಆಲ್ಪ್ಸ್ ಪರ್ವತದ ಬರ್ನೀಸ ಮತ್ತು ಪೆನ್ನಿ ಶ್ರೇಣಿಗಳಲ್ಲಿ ಡೋರ್ ಮತ್ತು ರೈನ್ ನದಿಗಳು ಇವುಗಳಿಗೆ ಸಂಬಂಧಪಟ್ಟ ಅನೇಕ ಉಪನದಿಗಳೂ ಹರಿಯುವುವು.

ಅಮೆರಿಕಾ ಖಂಡದಲ್ಲಿ ಉತ್ತರ ಅಮೆರಿಕಾ ಖಂಡದ ಉತ್ತರಾಗ್ರದಿಂದ ದಕ್ಷಿಣ ಅಮೆರಿಕಾಖಂಡದ ದಕ್ಷಿಣಾಗ್ರದ ವರಿಗೂ ಒಂದು ಪರ್ವತಶ್ರೇಣಿಯು ಇರುವುದು. ಈ ಪರ್ವತಶ್ರೇಣಿಗೆ ಅಮೆರಿಕಾಖಂಡದ ಬೆನ್ನುಮೂಳೆ ಎಂದು ಹೇಳುವುದುಂಟು. ಇದು ಉತ್ತರದಿಂದ ದಕ್ಷಿಣಕ್ಕೆ ೯೦೦೦ ಮೈಲಿಗಳಿರುವುವು. ಏಷ್ಯಾ ಮತ್ತು ಯೂರೋಪ್ ಖಂಡಗಳಲ್ಲಿ ಆಗ್ನೇಯ ದಿಕ್ಕಿನಿಂದ ವಾಯವ್ಯದಿಕ್ಕಿಗೆ ಒಂದು ಪರ್ವತ

ಶ್ರೇಣಿಯು ಇರುವುದು. ಇದು ೧೫೦೦೦ ಮೈಲಿಗಳ ಉದ್ದವಿರುವುದು. ಉತ್ತರ ಅಮೆರಿಕಾ ಖಂಡದಲ್ಲಿ ರಾಕಿ ಪರ್ವತಗಳು, ಅಲ್ಘಿನ್ ಪರ್ವತಗಳು, ಮೆಕ್ಸಿಕೊ ಸಮುದ್ರ, ಅಟ್ಲಾಂಟಿಕ್ ಸಾಗರ ಇವುಗಳ ಮಧ್ಯದಲ್ಲಿ ಒಂದು ವಿಸ್ತಾರವಾದ ಮೈದಾನವಿರುವುದು. ಅಲ್ಲಿ ಬೆಟ್ಟಗಳು, ಕಣಿವೆಗಳು ಗೊತ್ತಿಲ್ಲದಹಾಗೆ ಇರುವುವು. ೪೦೦೦ ಮೈಲಿಗಳ ಪರಿಗೂ ಹರಿಯುವ ಮಿಸೂರಿ ಮಿಸಿಸಿಪಿ ಎಂಬ ನದಿಯೂ, ಅದರ ಅಸಂಖ್ಯಾತವಾದ ಉಪನದಿಗಳೂ ಈ ಪ್ರಾಂತ್ಯದಲ್ಲಿ ಹರಿಯುವುವು. ಅನೇಕ ಸಾವಿರ ಮೈಲಿಗಳವರಿಗೂ ಈ ಮೈದಾನವು ವಿಶೇಷ ಕೋಮಲವಾಗಿ ಬೆಳೆಯುವ ಹುಲ್ಲಿಗೆ ಮಾತೃಸ್ಥಾನವಾಗಿರುವುದು. ಈ ಮೈದಾನಗಳಿಗೆ "ಪ್ರೇರಿಯಿ" ಮತ್ತು "ಸವನ್ನ" ಎಂಬದಾಗಿ ಹೆಸರು.

ಯೂರೋಪ್ ಖಂಡದಲ್ಲಿ ಅರ್ಧಕ್ಕಿಂತಲೂ ಹೆಚ್ಚಾದ ಭಾಗವು ಒಂದು ಮೈದಾನವಾಗಿರುವುದು. ಈ ಮೈದಾನದ ವಾಯವ್ಯ ದಿಕ್ಕಿನಲ್ಲಿ ಸ್ಕ್ಯಾಂಡಿನೇವಿಯಾ, ಸ್ಕಾಟ್ಲೆಂಡ್, ವೇಲ್ಸ್, ಪರ್ವತಗಳು, ಪೂರ್ವದಿಕ್ಕಿನಲ್ಲಿ ಯೂರಲ್ ಪರ್ವತಗಳು, ದಕ್ಷಿಣದಿಕ್ಕಿನಲ್ಲಿ ಪಿರನೀಸೀ, ಆಲ್ಪ್ಸ್, ಕಾರ್ಪೇಥಿಯನ್ ಮತ್ತು ಕಾಕ್ಸಸ್ ಪರ್ವತಗಳು ಇರುವುವು. ವಿಲಾಯತಿಯ ಪಶ್ಚಿಮದಿಕ್ಕಿನಿಂದ ಫ್ರಾನ್ಸ್ ಮತ್ತು ಜರ್ಮನಿ ದೇಶಗಳು, ಉತ್ತರದಿಕ್ಕಿಗೆ ಮೈದಾನವು ಇಳಿಜಾರಾಗಿರುವುದು. ರಷ್ಯಾ ದೇಶವೆಲ್ಲಾ ಸ್ವಲ್ಪ ಹೆಚ್ಚುಕಡಿಮೆಯಾಗಿ ಮೈದಾನಕ್ಕೆ ಸೇರಿರುವುದು. ಈ ಮೈದಾನವು ೧೫೦೦ ಮೈಲಿ ಅಗಲವೂ, ೪೦೦೦ ಮೈಲಿ ಉದ್ದವೂ ಇರುವುದು. ರಷ್ಯಾದೇಶದ ಜಮೀನು ಕರೀಮಣ್ಣು ಉಳ್ಳದ್ದಾಗಿಯೂ, ಧಾನ್ಯಗಳು ಬೆಳೆಯುವುದಕ್ಕೆ ತುಂಬಾ ಉಪಯೋಗವುಳ್ಳದಾಗಿಯೂ ಇರುತ್ತದೆ. ಕ್ಯಾಸ್ಪಿಯನ್ ಸಮುದ್ರದ ಬಳಿಯಲ್ಲಿ ಮಣ್ಣು ವಿಶೇಷ ಉಪ್ಪಿನಿಂದ ಮಿಶ್ರವಾಗಿರುವುದರಿಂದ ಊಷರ ಪ್ರದೇಶವಾಗಿರುವುದು. ಈ ಪ್ರದೇಶದಲ್ಲಿ ಏನೂ ಬೆಳೆಯುವುದಿಲ್ಲ. ಈ ಸಮುದ್ರದ ಉತ್ತರಭಾಗದಲ್ಲಿ ಜೇಡಿಮಣ್ಣು ವಿಶೇಷವಾಗಿರುವುದರಿಂದ ಮಳೆಗಾಲದಲ್ಲಿ ಹುಲ್ಲು ಬೆಳೆಯುವುದಕ್ಕೆ ಮಾತ್ರ ಉಪಯುಕ್ತವಾಗಿರುವುದು. ಈ ಮೈದಾನಗಳಿಗೆ "ಸ್ಟೆಪ್ಸ್" ಎನ್ನುತ್ತಾರೆ. ಇದು ಬೇಸಿಗೆ ಕಾಲದಲ್ಲಿ ಕಾದ ಪುಡಿಮಣ್ಣುಳ್ಳದ್ದಾಗಿಯೂ ಚಳಿಗಾಲದಲ್ಲಿ ಹಿಮದಿಂದ ಮುಚ್ಚಲ್ಪಟ್ಟಿದ್ದಾಗೆಯೂ ಇರುವುದು. ಉತ್ತರಸಾಗರಕ್ಕೆ ೫೦೦ ಮೈಲಿಗಳಲ್ಲಿಯೇ ಜಮೀನಿನಲ್ಲಿ ಯಾವ ಸಸ್ಯಾದಿಗಳೂ ಬೆಳೆಯುವುದಿಲ್ಲ. ಈ ಮೈದಾನಗಳಿಗೆ "ಟುಂಡರು"; ಗಳೆಂದು ಹೆಸರು. ಕೆಲವು ಮೈದಾನಗಳಲ್ಲಿ ಸಸ್ಯಾದಿಗಳು ಬೆಳೆಯದೇ

ಇರುವುದು ಮಾತ್ರವೇ ಅಲ್ಲದೆ ನೆಲವು ಮರಳುಳ್ಳದ್ದಾಗಿರುವುದು. ಏಷ್ಯಾಖಂಡದ ಗೋಬಿ ಎಂಬುವುದು ಆಫ್ರಿಕಾಖಂಡದ ಸಹರಾ ಎಂಬುವುದು ಈ ಪ್ರಪಂಚದಲ್ಲಿರುವ ಎಲ್ಲಾ ಮರಳು ಕಾಡುಗಳಿಗಿಂತಲೂ ಹೆಚ್ಚಾದ ವಿಸ್ತೀರ್ಣವುಳ್ಳವುಗಳು. ಸಮುದ್ರದ ಮಟ್ಟಕ್ಕಿಂತಲೂ ಕೆಳಗೆ ೧೫೦ ಅಡಿಗಳು ತೋಡಿದಾಗ್ಯೂ ಈ ಪ್ರಾಂತ್ಯದಲ್ಲಿ ಮರಳು ಸಿಕ್ಕುವುದು. ಈ ಮರಳು ಕಾಡುಗಳ ಮಧ್ಯದಲ್ಲಿ ಚಿಲುಮೆಗಳಿರುವುದುಂಟು. ಇವುಗಳ ಸುತ್ತಲೂ ನಾನಾವಿಧವಾದ ಗಿಡಾಗಳು ಬೆಳೆದುಕೊಂಡಿರುತ್ತವೆ. ಚಿತ್ರವಿಚಿತ್ರವಾದ ಕ್ರಿಮಿಕೀಟಾದಿ ಪ್ರಾಣಿಗಳು ಇರುತ್ತವೆ. ಇದ್ದುವಿನಾವಿಕ್ಕಾದ ಪ್ರಾಂತ್ಯಗಳೆಲ್ಲಾ ಮರಳಿನಿಂದ ತುಂಬಿರುತ್ತವೆ. ಈ ಮರಳು ಕಾಡುಗಳು ಅನೇಕ ಜಲಚರಗಳ ವಾಸಗಳನ್ನು ಒಳಗೊಂಡಿರುವುದು. ಇದರಿಂದಲೇ ಒಂದಾನೊಂದು ಕಾಲದಲ್ಲಿ ಈ ಪ್ರಾಂತ್ಯಗಳಲ್ಲಿ ಸಮುದ್ರವಿರುತ್ತೆಂದು ಗೊತ್ತಾಗುವುದು. ಸಮುದ್ರ ಮಟ್ಟಕ್ಕಿಂತಲೂ ೧೦೦೦ ಅಡಿ ಎತ್ತರ ಉಳ್ಳ ಪ್ರಾಂತ್ಯಗಳಿಗೆ ಮೋಸ್ತಮೆ ಎಂದು ಹೇಳುವರು. ಈ ಪ್ರಾಂತ್ಯಗಳಲ್ಲಿ ಬೆಟ್ಟಗಳು ಪರ್ವತಗಳು ಇರುವುದೂ ಉಂಟು. ಮಧ್ಯ ಆಸ್ಯಾಖಂಡದ ಭೂಮಿಯು ಸಮುದ್ರಮಟ್ಟದ ಮೇಲೆ ೧೦೦೦೦ ಅಡಿ ಎತ್ತರ ಉಳ್ಳದ್ದಾಗಿರುವುದು. ಉತ್ತರ ಅಮೆರಿಕಾದಲ್ಲಿ ಕಾಲರೇಡೋ, ಕೊಲಂಬಿಯಾ ಪ್ರಾಂತ್ಯಗಳು ಸಮುದ್ರಮಟ್ಟಕ್ಕಿಂತಲೂ ೫೦೦೦ ಅಡಿ ಎತ್ತರವಾಗಿರುವುವು. ಯೂರೋಪ ಖಂಡದಲ್ಲಿಯೂ ಕೂಡ ಸ್ವಿಟ್ಜರ್ಲಂಡ್ ಮತ್ತು ಪೋರ್ಚುಗಲ್ ಪ್ರಾಂತ್ಯಗಳ ಸಮುದ್ರಮಟ್ಟಕ್ಕಿಂತಲೂ ೨೬೦೦ ಅಡಿ ಮೇಲೂ ಸ್ಪೈನ್ ದೇಶವು ಸಮುದ್ರಮಟ್ಟಕ್ಕಿಂತ ೨೦೦೦ ಅಡಿ ಮೇಲೂ ಇರುವುವು. ಮಧ್ಯ ಆಸ್ಯಾಖಂಡಕ್ಕೆ ೧೦೦೦೦ ಅಡಿ ಇದ್ದಾಗ್ಯೂ ಹಿಮವತ್ಪರ್ವತವು ಅದರಮೇಲೆ ೧೯೦೦೦ ಅಡಿ ಉಳ್ಳದ್ದಾಗಿರುವುದು. ಪರ್ವತಗಳೆಲ್ಲಾ ಹಿಮವತ್ಪರ್ವತವೇ ಅತ್ಯಂತ ದೊಡ್ಡದು ಸಮುದ್ರ ಮಟ್ಟಕ್ಕಿಂತಲೂ ೨೯೦೦೦ ಅಡಿ ಎತ್ತರ ಉಳ್ಳದ್ದಾಗಿರುವುದು. ಇದೇ ರೀತಿಯಲ್ಲಿ ಸಮುದ್ರದ ಆಳವನ್ನು ಕೂಡ ಗೊತ್ತುಮಾಡಿರುವರು. ಅಟ್ಲಾಂಟಿಕ ಮತ್ತು ಫೆಸಿಫಿಕ್ ಸಾಗರಗಳಲ್ಲಿ ಕೆಲವು ಭಾಗಗಳು ೫ ಮೈಲಿ ಆಳ ಉಳ್ಳದ್ದಾಗಿರುವುವು. ಆದುದರಿಂದ ಈ ಭೂಮಿಯು ಮೇಲಿನ ಎತ್ತರವಾದ ಪ್ರದೇಶಗಳ ಔನ್ನತ್ಯಕ್ಕಿಂತಲೂ ತಗ್ಗಾದ ಪ್ರದೇಶಗಳ ನಿಮ್ನತ್ವವು ಹೆಚ್ಚಾಗಿರುವುದು.

ಚಂದ್ರೋತ್ಪತ್ತಿ.

ನಾವು ಸಾಮಾನ್ಯವಾಗಿ ನಿರ್ಧರಿಸುವುದಕ್ಕೆ ಕೂಡ ಆಗದಷ್ಟು ಕೊಟ್ಯಂತರ ವರ್ಷಗಳ ಹಿಂದೆ ಈ ಭೂಮಂಡಲವು ಈಗಿನಂತೆ ಭೂಜಲಗಳಿಂದ ವಿಭಕ್ತವಾಗಿ ಘನೀಭೂತವಾದ ಗೋಳವಾಗಿರಲಿಲ್ಲ. ಆದರೆ ಅದು ದ್ರವರೂಪವಾದ ಮುದ್ದೆಯಾಗಿ ಮೆಲ್ಲಡೆಯುಲ್ಲಿ ಸುಮಾರು ಮುವ್ವತ್ತೈದು ಮೈಲಿಯಷ್ಟು ದಪ್ಪವಾಗಿ ಹೆಪ್ಪುಗಟ್ಟಿತ್ತು. ಊಹಾತೀತವಾದ ಆ ಕಾಲದಲ್ಲಿ ಇದು ತನ್ನ ಅಕ್ಷದ ಸುತ್ತಲೂ ಈಗಿನಂತೆ ಇಪ್ಪತ್ನಾಲ್ಕು ಗಂಟೆಗೊಂದಾವರ್ತಿ ಸುತ್ತದೆ ಇನ್ನೂ ವೇಗವಾಗಿ ತಿರುಗುತ್ತಾ ಕ್ರಮ ಕ್ರಮದಿಂದ ವೇಗವು ಹೆಚ್ಚಿ ಕಡೆಗೆ ಮೂರು ಗಂಟೆಗೊಂದಾವರ್ತಿ ಸುತ್ತುತ್ತಾ ಇತ್ತು. ಶೀಘ್ರವಾಗಿ ಹೋಗುವ ತುಪಾಕಿಯ ಗುಂಡಿನ ವೇಗಕ್ಕೆ ಹದಿನಾರರಷ್ಟು ಆದ ಈ ವೇಗವು ಉಂಟಾದಾಗ ಅತ್ಯದ್ಭುತವಾದ ಒಂದು ಕೆಲಸವು ನಡೆಯಿತು. ಏನಂದರೆ, ಐನೂರು ಕೋಟಿ ಘನಮೈಲಿಗಳಷ್ಟು ಗಾತ್ರವುಳ್ಳ ಒಂದು ಭೂಭಾಗವು ಭೂಪರಿಭ್ರಮಣ ಶಕ್ತಿಯಿಂದ ಕಳಚಿ ದೂರವಾಗಿ ಹೋಗಿಬಿಟ್ಟಿತು. ಹೀಗೆ ಕಳಚಿ ಹೋದ ಭಾಗವೇ ಚಂದ್ರಮಂಡಲವಾಗಿರುವದು. ಹೀಗಾದುದರಿಂದಲೇ ಈಗಿನ ಪೆಸಿಫಿಕ್ ಮಹಾಸಾಗರದ ಪ್ರದೇಶವು ಉಂಟಾಗಿರಬಹುದೆಂದು ಕೆಲವರು ಊಹಿಸುವರು. ಆದರೆ ಇದು ಅಹುದೊ ಅಲ್ಲವೋ ನಿಶ್ಚಯಿಸಲು ಅಧಾರವಿಲ್ಲ. ಇದು ಊಹಿಸುವದಕ್ಕೆ ರಮ್ಯವಾದ ವಿಷಯಮಾತ್ರವಾಗಿರುವದು. ಚಂದ್ರಗ್ರಹವು ಸಮ್ಮ ಹದಿನೈದು ದಿನಗಳಿಗೆ ಒಂದಾವರ್ತಿ ತನ್ನ ಅಕ್ಷವನ್ನು ಸುತ್ತುವುದು. ಇದು ಹದಿನೈದು ದಿನ ಸೂರ್ಯನ ತೀಕ್ಷ್ಣಕಿರಣಗಳಿಗೆ ಎದುರಾಗಿಯೂ ಹದಿನೈದು ದಿನ ಗಾಡಾಂಧಕಾರದಲ್ಲಿಯೂ ಬುಗರಿಯಂತೆ ಸುತ್ತಿಕೊಂಡು ಬರುವದು. ಭೂಮಿಗಿಂತಲೂ ಇದು ಸಣ್ಣದಾಗಿರುವದರಿಂದ ಇದಕ್ಕೆ ಆಕರ್ಷಣಶಕ್ತಿಯು ಕಡಮೆಯಾಗಿರುವದು. ಈ ಕಾರಣದಿಂದ ಆ ಗ್ರಹದ ಸ್ಥಿತಿಯು ಬದಲಾಯಿಸಿರುವದು. ಈ ಲೋಕದ ಒಬ್ಬ ಜಟ್ಟಿಯು ಚಂದ್ರಮಂಡಲದಲ್ಲಿ ನೂರಿಪ್ಪತ್ತು ಅಡಿಗಳ ದೂರವನ್ನು ಒಡಿಬಂದು ಹಾರಬಲ್ಲನು. ಮನೆಗಳನ್ನು ದಾಟುವದಾದರೊ ಸಾಮಾನ್ಯವಾದ ಕಾರ್ಯವು. ಈ ಲೋಕದ ಮನುಷ್ಯನು ಚಂದ್ರನಲ್ಲಿ ಇಲ್ಲಿಗಿಂತಲೂ ಆರರಷ್ಟು ಭಾರವನ್ನು ಹೊರ ಒಲ್ಲನು, ಮತ್ತು ಆರರಷ್ಟು ವೇಗವಾಗಿ ಓಡಬಲ್ಲನು. ಇದಕ್ಕೆ ಕಾರಣವು ಚಂದ್ರನಿಗೆ ಆಕರ್ಷಣಶಕ್ತಿಯು ಭೂಮಿಗಿಂತಲೂ ಆರರಷ್ಟು ಕಡಮೆಯಾಗಿರುವದೇ.

ಈ ಕಾರಣದಿಂದ ಚಂದ್ರಗ್ರಹದಲ್ಲಿ ಭೂಕಂಪದಿಂದ ಉದ್ಭವವಾದ ಬೆಟ್ಟಗಳು ಯೂರೊಪ್ ಖಂಡದ ಆಲ್ಪ್ಸ್ ಬೆಟ್ಟಗಳಿಗಿಂತಲೂ ಉನ್ನತವಾಗಿರುವವು.

ಚಂದ್ರಮಂಡಲವು ಭೂಮಿಗೆ ಕೆಲವು ವೇಳೆಯಲ್ಲಿ ೨,೫೩,೦೦೦ ಮೈಲಿಯೂ ಹತ್ತಿರವಾದಾಗ ೨,೨೨,೦೦೦ ಮೈಲಿಯೂ ಅಂತರವುಳ್ಳದ್ದಾಗಿದ್ದರೂ ನಮಗೆ ಅಭಿಮುಖವಾಗಿರುವ ಭಾಗದಿಂದ ಆ ಮಂಡಲದ ಸ್ವರೂಪವನ್ನು ನಮ್ಮ ಭೂಮಿಯಲ್ಲೇ ಇರುವ ಇತರ ಭಾಗಗಳಿಗಿಂತಲೂ ಚನ್ನಾಗಿ ತಿಳಿದಿರುವೆವು. ಉತ್ತಮವಾದ ದೂರದರ್ಶಕ ಯಂತ್ರಗಳು ಇದನ್ನು ನಲವತ್ತು ಮೈಲಿಯಷ್ಟು ಹತ್ತಿರದಲ್ಲಿ ಕಾಣುವಂತೆ ಮಾಡಿರುವವು. ವಸ್ತುವಿಜ್ಞಾನ ಶಾಸ್ತ್ರಜ್ಞರು ಇದರ ತೂಕವು ಭೂಮಿಯ ತೂಕದಲ್ಲಿ ಎಂಬತ್ತನೆಯ ಒಂದು ಭಾಗವಾಗಿರುವದೆಂದು ನಿರ್ಧರಿಸಿರುವರು.

ಪ್ರಾಚೀನ ಜ್ಯೋತಿಶ್ಶಾಸ್ತ್ರ ಸಿದ್ಧಾಂತಿಗಳು ಚಂದ್ರಮಂಡಲವನ್ನು ವಾಯುವು ಆವರಿಸಿಲ್ಲವೆಂತಲೂ, ಆ ಕಾರಣದಿಂದಲೆ ಅಲ್ಲಿ ಜಲಭಾಗವೂ ಪ್ರಾಣಿಗಳೂ ಇಲ್ಲವೆಂತಲೂ ಹೇಳುತಿದ್ದರು. ನವೀನ ಸಿದ್ಧಾಂತಿಗಳು ಬೋಧಿಸುವದೇನಂದರೆ: ಅಲ್ಲಿ ಅತ್ಯಂತ ಸೂಕ್ಷ್ಮವಾದ ವಾಯುಮಂಡಲವಿರುವದೆಂಬುದಕ್ಕೆ ಫೊಟೋಗ್ರಾಫಿನ ಸಾಕ್ಷ್ಯವುಂಟು; ಮಂಜುಗಡ್ಡೆಗಳು ಕೆಲವುಕಡೆ ವಿಸ್ತಾರವಾದ ಪ್ರದೇಶಗಳನ್ನು ಆವರಿಸಿರುವವು; ಮತ್ತು ಅಲ್ಲಿ ಸಸ್ಯಾದಿಗಳ ವೃದ್ಧಿ ಕ್ಷಯಗಳಿಂದಾಗುವ ರೂಪಭೇದಗಳು ಕಾಲಾನುಸಾರವಾಗಿರುವುದೆಂಬುದಕ್ಕೂ ನಿದರ್ಶನಗಳಿವೆ.

ಅಲ್ಲಿನ ಆಕಾಶವು ಮಧ್ಯಾಹ್ನದಲ್ಲಿ ಕೂಡ ಕಗ್ಗತ್ತಲೆಯಾಗಿರುವದು. ಕೃಷ್ಣಪಕ್ಷದ ರಾತ್ರಿಯಲ್ಲಿ ಆಕಾಶವು ನಿರ್ಮಲವಾಗಿದ್ದಾಗಲೂ ನಮಗೆ ಕಾಣಿಸದ ನಕ್ಷತ್ರಗ್ರಹಾದಿಗಳು ಅಲ್ಲಿ ಮಧ್ಯಾಹ್ನದಲ್ಲಿಯೇ ಸ್ಪಷ್ಟವಾಗಿ ಕಾಣಿಸುವವು.

ಫೆಬ್ರುವರಿ "ಹಿತವಾದಿ" ಯಿಂದ ತೆಗೆಯಲ್ಪಟ್ಟಿದು.

ಯುರೋಪಿನ ಇತರ ಪ್ರಾಣಿಗಳು.

ಯುರೋಪಿನಲ್ಲಿ ಬಗೆಬಗೆಯ ರೋಮಂಥಕಗಳಿರುವವು. ರೋಮಂಥಕಗಳೆಂದರೆ ಮೆಲಕು ಹಾಕುವ ಪ್ರಾಣಿಗಳು. ಇವುಗಳಲ್ಲಿ ಮುಫ್ಲಾ, ಇಬೆಕ್ಸ್, ಪೆಯಾಲ್ಸ್, ಅರೋಚಸ್, ಎತ್ತು, ಆಕಳು, ಎಮ್ಮೆ, ಕೋಣ, ಕಡವೆ, ಹಿಮಸಾರಂಗ

ಸೈಗ—ಇವು ಮುವ್ವತ್ತಾದುವು. ಮುಫ್ಲಾನೆಂಬುವು ಒಂದುಬಗೆಯ ಕಾಡು ಕುರಿಗಳು. ಇವುಗಳ ಕೋಡುಗಳು ಬಗ್ಗಿರುವುವು. ಇವುಗಳ ಬಾಲವು ಸಣ್ಣದು. ಮೆದಿಲಿವು ಸ್ಪೈನ್ ದೇಶದಲ್ಲಿ ಅಧಿಕವಾಗಿದ್ದುವು. ಈಗ ಕಾರ್ಸಿಕಾ ಮತ್ತು ಸಾರ್ಡೆಯಾ ದ್ವೀಪಗಳಲ್ಲಿ ಹೆಚ್ಚಾಗಿ ಸಿಕ್ಕುವುವು. ಇಬೆಕ್ಸ್‌ಗಳು ಒಂದುಬಗೆಯ ಆಡುಗಳು. ಇವಕ್ಕೆ ಗಡ್ಡಗಳಿವೆ. ಅಲ್ಪಸ್ ಮತ್ತು ಪಿರನೀಸ್ ಪರ್ವತಗಳಲ್ಲಿ ಸಿಕ್ಕುತ್ತವೆ. ಗಂಡಾಡುಗಳಿಗೆ ಉದ್ದವಾದ ತರಕಲಾದ ಕೋಡುಗಳಿರುವುವು.

ಸೈಗ ಎಂಬುವು ಒಂದು ಜಾತಿ ಚಿಗರಿಗಳು. ರಷ್ಯದ ಹುಲ್ಲುಕಾಡುಗಳಲ್ಲಿ ಸಿಕ್ಕುವುವು. ಇವಕ್ಕೆ ಗಿಡ್ಡವಾದ ನೇಟಾವ ಕೋಡುಗಳೂ ಅಗಲವಾದ ಚಾಚಿ ಕೊಂಡಿರುವ ಹೊಳ್ಳೆಗಳೂ ಇರುವುವು. ಐನಾಯಿಸ್ ಎಂಬುವು ಒಂದುಬಗೆಯ ಜಿಂಕೆಗಳು. ಹಿಮಮಯವಾದ ಪರ್ವತಗಳಲ್ಲಿ ವಾಸಿಸುವುವು. ಇವುಗಳ ನೇತ್ರ ಮುಂತಾದ ಇಂದ್ರಿಯಗಳು ಬಹು ಚುರುಕಾಗಿರುವುವು. ಹಾರುವುದರಲ್ಲಿಯೂ, ಓಟದಲ್ಲಿಯೂ ಈ ಮೃಗಗಳು ಬಹು ಸಮರ್ಥವಾದುವು. ಗುಂಪುಗುಂಪಾಗಿ ವಾಸಿಸುವುವು. ಒಂದೊಂದು ಗುಂಪಿಗೂ ಒಂದೆರಡು ಕಾವಲು ಮೃಗಗಳು ಇರುವುವು. ಇವು ಇತರ ಪ್ರಾಣಿಗಳು ತಮ್ಮ ಸಮೀಪಕ್ಕೆ ಬಾರದಂತೆ ನೋಡಿಕೊಳ್ಳುವುವು.

ಅಮೋಖಗಳು ಒಂದು ಬಗೆಯ ಕಾಡುಕೋಣಗಳು ಇವಕ್ಕೆ ಗಡ್ಡಗಳೂ ಕುತ್ತಿಗೆಯ ಮೇಲೆ ಕೂದಲುಗಳೂ ಇರುವುವು. ಇವು ಲಿಥುಯೇನಿಯ ಮತ್ತು ದಕ್ಷಿಣ ರಷ್ಯಾ ಅಡವಿಗಳಲ್ಲಿ ಸಿಕ್ಕುವುವು. ಬಹು ಕ್ರೂರ ಜಂತುಗಳಾಗಿರುವುವು. ಕಡವೆಗಳು ಹುಲ್ಲೆಯ ಜಾತಿಗೆ ಸೇರಿದುವು. ಎತ್ತರದಲ್ಲಿ ೪ ಅಡಿಯುವರೆಗೂ ಬೆಳೆಯುವುವು. ಇವುಗಳ ಕೋಡುಗಳು ಅಗಲವಾಗಿ ತಾಳೇಗರಿಗಳಂತಿರುವುವು. ಗಂಡುಹುಲ್ಲೆಗಳ ಕೋಡುಗಳು ಪ್ರತಿವರ್ಷವೂ ಬಿದ್ದು ಪುನಃ ಹುಟ್ಟುವುವು ಇವು ಬಹು ಭೀರುವಾದ ಪ್ರಾಣಿಗಳು. ಇತರ ಪ್ರಾಣಿಗಳನ್ನು ವಾಸನೆಯಿಂದ ಗೊತ್ತು ಮಾಡಿಕೊಳ್ಳುವುದರಲ್ಲಿ ಬಹು ಸಮರ್ಥವಾಗಿರುವುವು. ಉತ್ತರ ಧ್ರುವದಕಡೆ ಇರುವ ಹಿಮಸಾರಂಗಗಳಲ್ಲಿ ಗಂಡುಮೃಗಕ್ಕೂ ಹೆಣ್ಣುಮೃಗಕ್ಕೂ ಕೋಡುಗಳುಂಟು. ಇವುಗಳ ಗೊರಸುಗಳು ಮಧ್ಯದಲ್ಲಿ ಆಳವಾಗಿ ಸೀಳಿಕೊಂಡು ಅಗಲವಾಗಿರುವುದರಿಂದ ಮಂಜಿನಮೇಲೆ ನಡೆಯಲು ತುಂಬಾ ಅನುಕೂಲವಾಗಿರುವುವು. ಇವು ಬಹು ಸಹನಶೀಲವಾದ ಪ್ರಾಣಿಗಳು. ಹಲವುದಿನಗಳ ಆಹಾರವಿಲ್ಲದೆ ಇದ್ದಾಗ್ಗೂ

ಇವುಗಳಿಗೆ ಏನೂ ತೊಂದರೆ ಇಲ್ಲ. ಆ ಪ್ರಾಂತ್ಯಗಳಲ್ಲಿ ವಾಸಮಾಡುವ ಜನರು ಇವನ್ನು ಗಾಡಿಗೆ ಕಟ್ಟಿ ಹೊಡೆಯುವರು. ಏನೂ ಆಯಾಸವಿಲ್ಲದೆ ಇವು ದಿನಕ್ಕೆ ೪೦ ಮೈಲಿಗಳ ದೂರ ಪ್ರಯಾಣ ಮಾಡುವುವು. ಹಿಮಗಾಲದಲ್ಲಿ ಮೇವನ್ನು ಹುಡುಕುತ್ತಾ ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಿರುವುವು. ಮರಗಳ ಮೇಲೂ ಮಂಜಿನ ಕೆಳಗೆ ಭೂಮಿಯ ಮೇಲೂ ಬೆಳದಿರುವ ಪಾಚಿಗಳನ್ನು ತಿಂದು ಜೀವಿಸುವುವು.

ಯೂರೋಪಿನಲ್ಲಿ ಎರಡುಬಗೆಯ ಕಣ್ಣುಕಪಟಗಳು ಇರುವುವು. ಒಂದನೆಯ ಜಾತಿ ಕಪಟಗಳ ಮೂಗು ಕುದುರೆ ನಾಲಿನಂತಿರುವುದು. ಎರಡನೆಯ ಬಗೆಯ ಕಪಟಗಳ ಕಿವಿಗಳು ಬಹು ಉದ್ದವಾಗಿರುವುವು. ಇವು ಕ್ರಿಮಿಗಳನ್ನು ತಿಂದು ಜೀವಿಸುವುವು. ಯೂರೋಪ್‌ಖಂಡದಲ್ಲಿ ಮುಳ್ಳುಹಂದಿಗಳೂ ಬಹಳವಾಗಿರುವುವು. ಇವುಗಳ ಮೈತುಂಬಾ ಮುಳ್ಳಿನಂತಿರುವ ಕೂದಲುಗಳಿರುವುವು. ಇವು ಹುಳ, ಕಪ್ಪೆ, ಇಲಿ, ಸಣ್ಣ ಹಾವುಗಳನ್ನು ತಿನ್ನುವುವು. ಇವು ಸುರಳಿ ಸುತ್ತಿಕೊಂಡಾಗ ಮೈ ಕೂದಲುಗಳು ನೀಟಾಗಿಯೂ ಒತ್ತಾಗಿಯೂ ಇರುವುದರಿಂದ, ಯಾವ ಶತ್ರುಗಳೂ ಇವನ್ನು ಬಾಧಿಸಲು ಸಮರ್ಥವಾಗುವುದಿಲ್ಲ. ಪೋಲ್ ಎಂಬ ಚಿಟ್ಟಲಿಗಳು ಬಿಲ ಮಾಡಿಕೊಂಡು ವಾಸಮಾಡುವುವು. ಷ್ರ್ಯೂ ಎಂಬ ಸೊಂಡಿಲಿಗಳು ಯೂರೋಪಿನಲ್ಲಿ ಬಹಳವಾಗಿರುವುವು. ಇವು ಒಂದನ್ನೊಂದು ಕೊಂದು ತಿಂದು ತಮ್ಮಲ್ಲೆ ತಾವು ಬಹಳ ಹಾವಳಿಯನ್ನು ಮಾಡುವುವು. ಇದಲ್ಲದೆ ಇವನ್ನು ಬೆಕ್ಕು, ವಿಜಲ್, ಮತ್ತು ಗೂಬೆಗಳು ಕೊಂದು ತಿನ್ನುವುವು.

ಚರ್ಮಣಕಾರಿಗಳು ಯೂರೋಪಿನಲ್ಲಿ ಹೆಚ್ಚಾಗಿರುವುವು. ಚರ್ಮಣಕಾರಿಗಳೆಂದರೆ ಜಬಡಿಸುವ ಮೃಗಗಳು. ಇವುಗಳಲ್ಲಿ ಅಳಿಲು, ಮಾರ್ಮೊಟ್, ನೀರುನಾಯಿ, ಡಾಮ್ಯೆಸ್, ಇಲಿ, ವೋಲ್, ಲೆಮಿಂಗ್, ಏದು, ಮಲ—ಇವು ಮುಖ್ಯವಾದುವು. ಅಳಿಲುಗಳು ಮರದಮೇಲೆ ಬಹು ಚುರುಕಾಗಿ ಹಾರಾಡುವುವು. ಚಿಗುರು ಹೀಚು ಕಾಯಿಗಳನ್ನು ತಿಂದು ಜೀವಿಸುವುವು. ಮಾರ್ಮೊಟುಗಳು ಗುಂಪು ಗುಂಪಾಗಿ ಬಿಲದಲ್ಲಿ ವಾಸಮಾಡುವುವು. ಇವು ಆಲ್ಪ್ಸ್, ಪಿರನೀಸ್, ಮತ್ತು ಕಾರ್ಪೇಥಿಯನ್ ಪರ್ವತಗಳಲ್ಲಿ ವಿಶೇಷವಾಗಿ ಸಿಕ್ಕುವುವು. ನೀರುನಾಯಿಗಳು, ನಾರ್ವೆ, ಸ್ವೀಡನ್, ರಷ್ಯ, ಪೋಲೆಂಡ್ ಮತ್ತು ಆಸ್ಟ್ರಿಯ ದೇಶಗಳಲ್ಲಿ ಈ ಕೊಚ್ಚೆ ನೆಲದಲ್ಲಿ ವಾಸಮಾಡುವುವು. ಇಲಿಗಳು ಯುರೋಪಿನ ಎಲ್ಲಾ ಪ್ರದೇಶಗಳಲ್ಲಿಯೂ ಅಧಿಕವಾಗಿ ದೊರಕುವುವು.

ಲೆಮಿಂಗುಗಳು ಯುರೋಪಿನಲ್ಲಿ ಅಪಾರವಾಗಿರುವುವು. ನಾರ್ವೆಯಲ್ಲಿ ಅತ್ಯಧಿಕವಾಗಿ ಸಿಕ್ಕುವುವು. ಮರಬೆಲೆಗಳನ್ನೆಲ್ಲಾ ತಿಂದು ಬರಿದು ಮಾಡುವುವು. ಇವನ್ನು ಅನೇಕ ಮೃಗಪಕ್ಷಿಗಳು ಹಿಡಿದು ತಿಂದಾಗ್ಯೂ, ಇವುಗಳ ಗುಂಪು ಕಡಮೆಯಾಗದೆ ವೃದ್ಧಿಹೊಂದುತ್ತಲೇ ಇರುವುದು. ಕೆಲವು ವೇಳೆಗಳಲ್ಲಿ ಅನೇಕ ಸಹಸ್ರ ಲೆಮಿಂಗುಗಳು ಗುಂಪುಕಟ್ಟಿಕೊಂಡು ನಾಲಾಗಿ ಪ್ರಯಾಣ ಮಾಡುವುವು. ನೀರು ಅಡ್ಡವಾಗಿ ಬಂದರೆ ಈಜಿಕೊಂಡು ಮುಂದಕ್ಕೆ ಹೋಗುವುವು. ಏದುಗಳು ದಕ್ಷಿಣ ಯುರೋಪಿನಲ್ಲಿ ವಿಶೇಷವಾಗಿ ದೊರಕುವುವು. ಇವುಗಳ ಮೈಮೇಲೆ ಬಗ್ಗಿರುವ ಮುಳ್ಳುಗಳಿರುವುವು. ಕೆಲವು ಮುಳ್ಳುಗಳು ಹದಿನೈದು ಹದಿನಾರಂಗುಲ ಉದ್ದವಾಗಿ ಬೆಳೆಯುವುವು. ಈ ಮೃಗಗಳು ಬಿಲದಲ್ಲಿ ವಾಸಮಾಡುವುವು. ಹಗಲು ಹೊತ್ತಿನಲ್ಲಿ ನಿದ್ರೆಹೋಗಿ ರಾತ್ರಿಯಲ್ಲಿ ಆಹಾರಾರ್ಥವಾಗಿ ಸಂಚರಿಸುವುವು. ಎಲೆ ಹಣ್ಣು ಹಂಪಲು ಬೇರುಗಳನ್ನು ತಿಂದು ಜೀವಿಸುವುವು. ಮಲಗಳು ಯುರೋಪಿನ ಎಲ್ಲಾ ಕಡೆಗಳಲ್ಲಿಯೂ ಸಿಕ್ಕುವುವು. ಇವು ಭೀರುವಾದ ಪ್ರಾಣಿಗಳು. ಬೇಗನೆ ಬೇಗನೆ ಓಡುವುವು.

ಯುರೋಪಿನಲ್ಲಿ ಪಕ್ಷಿ ಸಮೂಹವು ವಿಶೇಷವಾಗಿ ಉಂಟು. ಮಾಂಸಗಾಸ ಪಕ್ಷಿಗಳಲ್ಲಿ ರಣಹದ್ದು, ಗಿಡಗ, ಗರುಡ, ಸ್ಯೇನ, ಹಾಳೆಹದ್ದು, ಬಜ್ಜಾರ್ಡ್ ಮತ್ತು ಗೂಬೆಗಳು ಮುಖ್ಯವಾದುವು. ರಣಹದ್ದುಗಳಲ್ಲಿ ಅನೇಕ ಬಗೆಗಳುಂಟು. ಗಡ್ಡದ ರಣಹದ್ದುಗಳು ಯುರೋಪಿನ ಪಕ್ಷಿಗಳೆಲ್ಲೆಲ್ಲಾ ದೊಡ್ಡವು. ಆಲ್ಪ್ಸ್ ಪರ್ವತಗಳಲ್ಲಿಯೂ ದಕ್ಷಿಣಪ್ರದೇಶಗಳಲ್ಲಿಯೂ ವಿಶೇಷವಾಗಿ ಸಿಕ್ಕುವುವು. ಅನೇಕ ಇತರ ಜಾತಿ ಪಕ್ಷಿಗಳನ್ನೂ ಸಣ್ಣ ಮೃಗಗಳನ್ನೂ ಕೊಂದು ತಿನ್ನುವುವು. ಮಂದೆಯೊಳಕ್ಕೆ ನುಗ್ಗಿ ಕುರಿಮರಿಗಳನ್ನು ಹೊತ್ತುಕೊಂಡುಹೋಗಿ ಭಕ್ಷಿಸುವುವು. ಖೆಮಾಯಿಸ್ ಮರಿಗಳನ್ನೂ ಧ್ವಂಸ ಮಾಡುವುವು. ಗಿಡಗಸ್ಯೇನ್ಯ ಗರುಡಗಳ ಪಾದಗಳ ಹೊರಬೆಟ್ಟು ಹಿಂದಕ್ಕೂ ಮುಂದಕ್ಕೂ ತಿರುಗುವುದಿಲ್ಲ. ಆದರೆ ಗೂಬೆಗಳ ಹೊರಬೆಟ್ಟು ಹಾಗೆ ತಿರುಗುತ್ತದೆ. ಗೂಬೆಗಳಿಗೆ ಗಿಡ್ಡವಾದ ದಪ್ಪವಾದ ಕತ್ತೂ ದೊಡ್ಡ ತಲೆಯೂ ಇವೆ. ಇವು ಇಲಿಗಳನ್ನು ಧ್ವಂಸ ಮಾಡುವುದರಿಂದ, ರೈತರಿಗೆ ಮಹದುಪಕಾರಿಗಳಾಗಿವೆ.

ಯುರೋಪಿನಲ್ಲಿ ಇತರ ಪಕ್ಷಿಜಾತಿಗಳು ಬಹಳವಾಗಿರುವುವು. ಅವುಗಳಲ್ಲಿ ಮುಖ್ಯವಾದುವು ಮಾತ್ರ ಇಲ್ಲಿ ತಿಳಿಸಲ್ಪಡುವುವು. ಯುರೋಪಿನ ಕೋಗಿಲೆಗಳು

ಮನೋಹರವಾಗಿ ಕೂಗುವುವು. ಮರಕುಟಿಗನ ಹಕ್ಕಿಗಳ ನಾಲಿಗೆಯು ಬಹು ಉದ್ದವಾಗಿರುವುದು. ಜಾಲಗಾರ ಹಕ್ಕಿಗಳು ಬಹು ಪ್ರಕಾಶಮಾನವಾಗಿರುವುವು: ಆದರೆ ಇವು ಭೀರುಪ್ರಾಣಿಗಳು. ಬಾನಹಕ್ಕಿಗಳು ಸುತಿಸುತ್ತಿ ಹಾರುವುವು. ರುಕ್; ಕಾಗೆ, ಡೊಂಬರ ಕಾಗೆ, ಜಾಕ್ಡಾ, ಮ್ಯಾಗ್ಪಯಿ—ಇವು ಕೂಡುವ ಪಕ್ಷಿಗಳು. ಬುಲ್ಬುಲ, ಸಾರಿಕ, ಕೂಜಕ, ರೆನ್, ರೊಬಿನ್, ಟಿಟ್ಟಿಭ, ವ್ಯಾಗ್ಟೈಲ್, ಫಿಂಚ್—ಇವು ಹಾಡುವ ಪಕ್ಷಿಗಳು. ಇವುಗಳೆಲ್ಲೆಲ್ಲಾ ನಾರಕಗಳು ಬಹು ರಮ್ಯವಾಗಿ ಹಾಡುವುವು. ವ್ಯಾಗ್ಟೈಲ್ ಮತ್ತು ಟಿಟ್ಟಿಭ ಪಕ್ಷಿಗಳು ಭೂಮಿಯ ಮೇಲೆ ನಡೆಯುವುವು. ಇವಕ್ಕೆ ದೊಡ್ಡ ಪಾದಗಳುಂಟು. ಸ್ವಾಲೊ ಮತ್ತು ಮಾರ್ಟಿನ್ಗಳು ಅತಿವೇಗವಾಗಿ ಹಾರುವುವು. ಸ್ಟರ್ಲಿಂಗ್ಗಳು ಹುಳಗಳನ್ನು ಬಹಳವಾಗಿ ನಾಶಮಾಡುವುವು. ಈ ಪಕ್ಷಿಗಳಲ್ಲದೆ ಗುಬ್ಬಿ, ಕೋಳಿ, ಕಾಡುಕೋಳಿ, ಕೀಚುಹಕ್ಕಿ, ಕೌಜುಹಕ್ಕಿ, ಲಾವಕ್ಕಿ, ಪಾಲಕಹಕ್ಕಿ, ಪಾರಿವಾಳ ಮುಂತಾದುವು ಯುರೋಪಿನಲ್ಲಿ ಸಿಕ್ಕುವುವು. ಟರಕಿ ಎಂಬ ಶಾಬತ್ ಕೋಳಿಗಳು ಅಮೆರಿಕಾದಿಂದ ಯುರೋಪಿಗೆ ತರಲ್ಪಟ್ಟಿರುವುವು. (ಸಶೇಷ)

S. V.

ನಮ್ಮ ಪುಸ್ತಕಭಂಡಾರ.

* ಕಿಂಡರ್‌ಗಾರ್ಟನ್ ಕ್ರಮ. ಸಣ್ಣಮಕ್ಕಳ ವಿದ್ಯಾಭ್ಯಾಸಕ್ಕೆ ಅವಶ್ಯಕವಾಗಿದ್ದ ಈ ಪುಸ್ತಕವನ್ನು ಮು॥ ರಾ॥ ಎಂ. ವೆಂಕಟಸುಬ್ಬಯ್ಯ ಬಿ. ಎ. ಯವರು ರಚಿಸಿ ನಮ್ಮಲ್ಲಿಗೆ ಕಳುಹಿಸಿದ ಪ್ರತಿಯನ್ನು ಆದರದಿಂದ ಓದಿನೋಡಿದೆವು. ಇದರಲ್ಲಿ ಕಿಂಡರ್‌ಗಾರ್ಟನ್ ಪದ್ಧತಿಯ ಸ್ವರೂಪವನ್ನೂ, ಈ ಪದ್ಧತಿಯ ಮೇರೆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ಬೇಕಾದ 'ಕರಣ' ಗಳನ್ನೂ ಅವುಗಳ ರೀತಿಯನ್ನೂ ಉಪಯೋಗವನ್ನೂ ನಿದರ್ಶಿಸುವ ಚಿತ್ರಪಠಗಳನ್ನು ಪ್ರಕಟಿಸಿಸರುವರು. ಇದುವರೆಗೆ ಕೆಲಕೆಲವರೆ ಕಿಂಡರ್‌ಗಾರ್ಟನ್ ಎಂಬುದು ಬಾಯಿಪಾಠವಾಗಿತ್ತೆ ವಿನಾ

* ಎಂ. ವೆಂಕಟಸುಬ್ಬಯ್ಯ ಬಿ. ಎ. ಗವರ್ನಮೆಂಟ್ ನಾರ್ಮಲ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಮೈಸೂರು.—ಈ ಪುಸ್ತಕವು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಅಚ್ಚು ಹಾಕಲ್ಪಟ್ಟ ಗ್ರಂಥಕರ್ತರಲ್ಲಿ ದೊರೆಯುವುದು.

ಯಾವ ರೀತಿಯಲ್ಲಿ ಅದನ್ನು ಆಚರಣೆಗೆ ತರಬೇಕೋ ಆ ಕ್ರಮದಲ್ಲಿ ಅದನ್ನು ಬೋಧಿಸಲಿಕ್ಕೆ ಅವಕಾಶವಿರಲಿಲ್ಲ. ಕರಣಗಳ ಚಿತ್ರಗಳೊಡನೆ ಕೂಡಿರುವ ಈ ಪುಸ್ತಕವು ಈ ಪಾಠಬೋಧಕರಿಗೆ ಸಹಾಯವಾಗದಿರದು. ಮಕ್ಕಳಿಗಾದರೋ ಈ ಕ್ರಮವು ವರಿಸು ಬೋಧಿಸುವ ಪಾಠಶಾಲೆಯು, ಉಪಯುಕ್ತವಾದ ಕ್ರೀಡಾಶಾಲೆಯಾಗಿ ಪರಿಣಮಿಸುವುದು. ಪದ್ಧತಿಯು ಮೇರೆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ಕಣ್ಣಿದ್ದರೂ ನೋಡದೆ ಬುದ್ಧಿಯಿದ್ದರೂ ಉಪಯೋಗಿಸದೆ ತಿರುಗುವ ಜನಸಂಖ್ಯೆಯು ಕಾಲಕ್ರಮವಾಗಿ ಕಡಮೆಯಾಗದಿರದು. ಕಥೆಯನ್ನು ಕೇಳುವುದರಲ್ಲೂ ಗಿಡ, ಹೂ, ಕಾಯನ್ನು ಕಿತ್ತುವುದರಲ್ಲೂ, ನೆಲವನ್ನು ಕೆದಕಿ ಗುಂಡಿ ಮಾಡುವುದರಲ್ಲೂ ಮಕ್ಕಳಿಗೆ ಇಷ್ಟವೆನ್ನವರಲ್ಲವೆ? ಅವರಿಗೆ ಸಹಜವಾಗಿರುವ ಆ ಇಷ್ಟವನ್ನೇ ಕಾರಣವಾಗಿ ಮಾಡಿಕೊಂಡು, ಸ್ವಲ್ಪ ವರ್ಣನಾ ಭಾಗವೂ, ಒಂದೊಂದು ಧರ್ಮಸೂಕ್ಷ್ಮವೂ, ಒಬ್ಬೊಬ್ಬರ ಸಾಹಸಕೃತ್ಯವೂ, ಉಳ್ಳ ಸಣ್ಣಸಣ್ಣ ಕಥೆಗಳನ್ನೂ ಹೃದಯಂಗಮವಾಗಿ ಹೇಳುವುದರಿಂದಲೂ, ಮಕ್ಕಳ ಆಟಪಾಠಕ್ಕೆ ಅನುಕೂಲವಾಗುವಂತೆ ಸಸಿಯನ್ನು ಮಕ್ಕಳಿಂದಲೇ ನೆಡಿಸುವುದು, ಅದಕ್ಕೆ ಪಾತಿಮಾಡಿಸುವುದು, ನೀರು ಏರಿಸುವುದು,.ಸಸಿಯು ದೊಡ್ಡದಾಗಿ ಹೂ, ಕಾಯಿ ಬಿಡುವವರೆಗೂ ನಿದಾನವಾಗಿ ಕಾಯುವುದನ್ನು ಅಭ್ಯಾಸ ಮಾಡಿಸುವುದರಲ್ಲಿ ಮಕ್ಕಳ ಆಟವೇ ಪಾಠವಾಗಿ ಪರಿಣಮಿಸುವುದು. ಈ ಪುಸ್ತಕವನ್ನು ಓದಿದ ಉಪಾಧ್ಯಾಯರೂ, ತಾಯಿತಂದೆಗಳೂ ಮಕ್ಕಳ ಏಳಿಗೆಯಲ್ಲಿ ಆದರವುಳ್ಳವರೆಲ್ಲರೂ ಮಕ್ಕಳ ಸ್ವಭಾವವನ್ನು ದುಷ್ಟವಾದ ಚೇಷ್ಟೆಯೆಂದು ತಿಳಿದು ಕ್ರೂರದಂಡನೆಗೆ ಮಕ್ಕಳನ್ನು ಗುರಿಮಾಡಿ, ಅವರ ಉಲ್ಲಾಸವನ್ನು ಮುರಿದು ಮಂಕುಗಳನ್ನಾಗಿ ಮಾಡದೆ ಸುಜೀಷ್ಟಿತರಾದ ಮಕ್ಕಳನ್ನು ನವೀನವಾದ ಈ ಶಿಕ್ಷಣ ಕ್ರಮದಿಂದ ಉತ್ಸಾಹಿಗಳನ್ನಾಗಿಯೂ, ರಾಜಭಕ್ತಿಯುತರನ್ನಾಗಿಯೂ, ದೇಶೋನ್ನತಿಯಲ್ಲಿ ಬದ್ಧಾದರ ಉಳ್ಳ ಪ್ರಜೆಗಳನ್ನಾಗಿಯೂ ಬೆಳಸಲು ಶಕ್ತರಾಗುವರು.

ಗ್ರಂಥಕರ್ತರು ಪುಸ್ತಕವನ್ನು ಸುಲಭಶೈಲಿಯಲ್ಲಿ ಬರೆದಿರುವದಲ್ಲದೆ, ಆಂದವಾದ ಚಿತ್ರಗಳನ್ನೂ ತಾವೇ ಬರೆದು ಅಚ್ಚುಹಾಕಿರುವರು. ಮಕ್ಕಳ ವಿದ್ಯಾಭ್ಯಾಸದಲ್ಲಿ ನಿರತರಾಗಿರುವರು ಉತ್ತಮವಾದ ಈ ಪುಸ್ತಕವನ್ನು ತರಿಸಿ, ಈ ಪದ್ಧತಿಯ ಮೇರೆ ವಿದ್ಯಾಭ್ಯಾಸವನ್ನು ಮಾಡಿಸುವರೆಂದು ನಂಬುತ್ತೇವೆ.

ಕ್ಷೇತ್ರಗಣಿತ.

(ಕಾಟಕೋನ ಚೌಕೋನ)

(1) ಒಂದು ಚದರಗಜ ವಿಸ್ತೀರ್ಣವುಳ್ಳ ಹಲಗೆಯು ಅಗಲ 2 ಅ. 3 ಅಂಗುಲವಿದ್ದರೆ, ಅದರ ಉದ್ದವೆಷ್ಟು ?

(2) ಒಂದು ಕಾಟಕೋನ ಚೌಕೋನದ ಉದ್ದ 24 ಗಜ, ಕರ್ಣ 26 ಗಜವಾದರೆ, ಅದರ ಕ್ಷೇತ್ರಫಲವೆಷ್ಟು ?

(3) ಒಂದು ಆಯುದ ಸುತ್ತಳತೆ 120 ಅಡಿ, ಅದರ ಒಂದು ಬಾಹು 24 ಅಡಿಯಾದರೆ, ಕ್ಷೇತ್ರಫಲವೆಷ್ಟು ?

(4) ಎಕರಾ 1 ಕ್ಕೆ 1 ರೂ. 4 ಆಣೆಯಂತೆ 12 ಸ. ಉದ್ದ, 8 ಸ. ಅಗಲವಿರುವ ಆಯಾಕಾರವಾದ ಹೊಲದ ಕಂದಾಯವೆಷ್ಟು ?

(5) ಒಂದು ಹೊಲದ ಉದ್ದಳತೆ 24 ಸ. ಅದರ ಅಗಲ ಉದ್ದದ $\frac{3}{4}$ ಭಾಗವಾಗಿದ್ದರೆ, ಎಕರಾ 1ಕ್ಕೆ 2 ರೂ. ನಂತೆ ಹೊಲದ ಕಂದಾಯವೆಷ್ಟು ?

(6) ಒಂದು ಹೊಲದ ಉದ್ದಳತೆ 43 ಗಜ, ಅದರ ಅಗಲ ಉದ್ದದ $\frac{1}{3}$ ಭಾಗವಾಗಿರುತ್ತೆ. ಈ ಹೊಲದ ಹುಲ್ಲನ್ನು ಚ. ಗಜ 1 ಕ್ಕೆ 1 ಆಣೆಯಂತೆ ಮಾರಿದರೆ ಎಷ್ಟು ಹುಟ್ಟುವಳಿಯಾಗುವುದು ?

(7) 3 ಫರ್ಲಾಂಗ್ ಉದ್ದವಿರುವ ಒಂದು ರಸ್ತೆಗೆ ಜಲ್ಲಿ ಹಾಕಿಸಲು ಚ. ಗ. 1 ಕ್ಕೆ 9 ಪೈನಂತೆ 154 ರೂ. 11 ಅ. ಖರ್ಚಾದರೆ, ರಸ್ತೆಯು ಅಗಲವೆಷ್ಟು ?

(8) 18 ಗಜ ಉದ್ದವು ಅದರ $\frac{2}{3}$ ರಷ್ಟು ಅಗಲವೂ ಇರುವ ಒಂದು ಮನೆಯ ನೆಲಕ್ಕೆ ಗಾರೆ ಹಾಕಿಸಲು ಚ. ಅ. 1 ಕ್ಕೆ 1 ಪೆನ್ನಿಯಂತೆ ಎಷ್ಟು ಖರ್ಚಾಗುವುದು ?

(9) ಒಂದು ಆಯಾಕಾರವಾದ ಹೊಲದ ಕಂದಾಯ ಎಕರಾ 1 ಕ್ಕೆ $2\frac{1}{2}$ ರೂಪಾಯಿನಂತೆ 9 ರೂ. 6 ಅ. 6 ಪೈ. ಆಗಿರುವುದು. ಹೊಲದ ಉದ್ದ 25 ಕೋಲ್ ಇದ್ದರೆ, ಅದರ ಅಗಲವೆಷ್ಟು ?

(10) ಒಂದು ಮನೆಯು $22\frac{1}{2}$ ಅಡಿ ಉದ್ದ $10\frac{1}{2}$ ಅಡಿ ಅಗಲವಿರುತ್ತದೆ, ಅದಕ್ಕೆ ಜಮುಖಾನವನ್ನು ಹಾಸಲು ಚ. ಗ. 1 ಕ್ಕೆ 2 ಷಿ. 3 ಪೆನ್ನಿಯಂತೆ ಎಷ್ಟು ಖರ್ಚಾಗುವುದು ?

(11) ಒಂದು ಕೊಠಡಿಗೆ ಜಮುಖಾನವನ್ನು ಹಾಸಲು ಚ. ಗ. 1 ಕ್ಕೆ 6 ಷಿ. 9 ಪೆನ್ನಿಯಂತೆ 4 ಪೌ. 7 ಷಿ. ಖರ್ಚಾಗುವುದು. ಕೊಠಡಿಯು ಉದ್ದ 16 ಅಡಿಯಾದರೆ, ಅದರ ಅಗಲವೆಷ್ಟು ?

(12) 12 ಅಡಿ ಉದ್ದ 9 ಅಡಿ ಅಗಲವಿರುವ ಒಂದು ಮನೆಯ ನೆಲಕ್ಕೆ ಹಾಸಲು 9 ಅಡಿ ಉದ್ದ 6 ಅಂ. ಅಗಲವಿರುವ ಎಷ್ಟು ಇಟ್ಟಿಗೆಗಳು ಬೇಕಾಗುವುವು ?

(13) $12\frac{1}{2}$ ಅಡಿ ಉದ್ದ, 8 ಅ. 3 ಅಂ. ಅಗಲವಿರುವ ಒಂದು ಮನೆಯ ಸೂರಿಗೆ ಹೊದ್ದಿಸಲು 9 ಅಂ. ಉದ್ದ 6 ಅಂ. ಅಗಲವಿರುವ ತಟ್ಟಿಯಾಗಿರುವ ಎಷ್ಟು ಹೆಂಚುಗಳು ಬೇಕಾಗುವುದು ?

(14) ಒಂದು ಕೊಠಡಿಯು 15 ಅಡಿ ಅಗಲವು, ಅಗಲದ $1\frac{1}{3}$ ರಷ್ಟು ಉದ್ದವೂ ಇರುವುದು. ಅದರ ನೆಲಕ್ಕೆ ಚಾಪೆ ಹಾಸಲು 45 ಅಂಗುಲ ಅಗಲವಿರುವ ಎಷ್ಟು ಗಜ ಚಾಪೆ ಬೇಕಾಗುವುದು ?

(15) 24 ಅಡಿ ಉದ್ದವುಳ್ಳ ಒಂದು ಮನೆಯ ಮುಹಡಿಗೆ 6 ಅಡಿ ಉದ್ದ 1 ಅ. 4 ಅಂ. ಅಗಲವಿರುವ 27 ಹಲಿಗೆಗಳನ್ನು ಹಾಕಿದೆ. ಮನೆಯು ಅಗಲವೆಷ್ಟು ?

(16) 21 ಅಡಿ ಉದ್ದವಿರುವ ಒಂದು ಮನೆಯ ನೆಲಕ್ಕೆ ಚಾಪೆ ಹೆಣೆಸಲು 10 ಅ. 6 ಪೈ. ಖರ್ಚಾಗುವುದು. ಅಗಲದಲ್ಲಿ 3 ಅಡಿ ಕಡಮೆಯಾಗಿದ್ದರೆ, 8 ಅ. 9 ಪೈ ಖರ್ಚಾಗುತ್ತಿತ್ತು. ಮನೆಯ ಅಗಲವೆಷ್ಟು ?

(17) 14 ಅಡಿ ಉದ್ದವಿರುವ ಒಂದು ಮನೆಯ ನೆಲಕ್ಕೆ ಚಪ್ಪಡಿ ಕಲ್ಲುಗಳನ್ನು ಹಾಸಲು ಚ. ಗ. 1ಕ್ಕೆ 2 ಷಿ. 4 ಪೆನ್ನಿಯಂತೆ 1 ಪೌ. 12 ಷಿ. 8 ಪೆನ್ನಿ ಖರ್ಚಾಗುವುದು. ಉದ್ದವು 2 ಅಡಿ ಕಮ್ಮಿಯಾಗಿದ್ದರೆ, ಎಷ್ಟು ಖರ್ಚಾಗುತ್ತಿತ್ತು ?

(18) ಒಂದು ಕೊಠಡಿಯು ಅಗಲ 7 ಗ. 1 ಅ. ಇರುವುದು. ಅದರ ಉದ್ದ 6 ಅಡಿ ಕಡಮೆಯಾಗಿದ್ದರೆ, ನೆಲಕ್ಕೆ ಜಮುಖಾನವನ್ನು ಹಾಸಲು ಚ. ಗ. 1 ಕ್ಕೆ $4\frac{1}{2}$ ಪೆನ್ನಿಯಂತೆ 1 ಪೌ. $7\frac{1}{2}$ ಷಿ. ಖರ್ಚಾಗುವುದು. ಕೊಠಡಿಯು ಉದ್ದವೆಷ್ಟು ?

(19) 64 ಗಜ ಉದ್ದ 58 ಗಜ ಅಗಲವಿರುವ ಒಂದು ಉದ್ಯಾನದ ಸುತ್ತಲೂ 5 ಗಜ ಅಗಲವುಳ್ಳ ರಸ್ತೆಯಿದೆ. ರಸ್ತೆಗೆ ಗ್ರಾವಲ್ ಮಣ್ಣನ್ನು ಹರಡಿಸಲು ಚ. ಗ. 1ಕ್ಕೆ 3 ಪೈ ನಂತೆ ಎಷ್ಟು ಖರ್ಚಾಗುವುದು ?

(20) 20 ಗ. ಉದ್ದ 16 ಗ. ಅಗಲವುಳ್ಳ ಭೂಮಿಯಲ್ಲಿ ಸುತ್ತಲೂ $10\frac{1}{2}$ ಅಡಿ ಅಗಲದ ಖಣಿಯನ್ನು ಬಿಟ್ಟು ಮನೆ ಕಟ್ಟಿರುತ್ತಾನೆ. ಖಣಿಗಳ ವಿಸ್ತೀರ್ಣವೆಷ್ಟು ?

* ವಿದ್ಯಾದಾಯಿನಿ. *

ಭಾಗ ೧೫.] ಮೇ—೧೯೦೬. [ಸಂಚಿಕೆ ೫.

ಪಾಠಕರು.

ಪಾಠಕರು ಮಕ್ಕಳ ವಿಷಯದಲ್ಲಿ ಬಹಳ ಭಾರವನ್ನು ವಿಶೇಷವಾಗಿ ವಹಿಸತಕ್ಕದ್ದು. ತಾಯಿತಂದೆಗಳು ತಮ್ಮ ಮಕ್ಕಳ ಯೋಗಕ್ಷೇಮವನ್ನು ಪಾಠಕರಿಗೆ ಒಪ್ಪಿಸುವರು. ಆ ಮಕ್ಕಳು ವೃದ್ಧಿಗೆ ಬರುವುದೂ, ಹೀನಸ್ಥಿತಿಗೆ ಬರುವುದೂ ಇವೆರಡಕ್ಕೂ ಪಾಠಕರೇ ಕಾರಣಭೂತರಾಗಿರುವರು. ದೇಶಭಾಷೆಯಲ್ಲಿ ಪಾಠ ಹೇಳತಕ್ಕ ಕ್ರಮವು ಇಂಗ್ಲೀಷ್ ಮೊದಲಾದ ಅನ್ಯಭಾಷೆಗಳಲ್ಲಿ ಪಾಠ ಹೇಳತಕ್ಕ ಕ್ರಮವು ಬೇರೆಬೇರೆ ವಿಧವಾಗಿರುವುವು. ಪಾಶ್ಚಾತ್ಯರಲ್ಲಿ ವಿದ್ಯಾರ್ಥಿಗಳು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಅನೇಕ ಶಾಸ್ತ್ರಗಳನ್ನು ತಕ್ಕಮಟ್ಟಿಗೆ ಚೆನ್ನಾಗಿ ಕಲಿದಿರುವರು. ಇದಕ್ಕೆ ಸ್ವಭಾಷೆಯಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡುವುದೇ ಮುಖ್ಯಕಾರಣ. ಜನಗಳ ಅಭಿವೃದ್ಧಿಗೆ ಸಾಧಕವಾದ ಶಾಸ್ತ್ರಗಳು ಅವರ ಭಾಷೆಯಲ್ಲಿರುವುದೂ ಇಲ್ಲ. ಅದರಲ್ಲಿ ಪಾಂಡಿತ್ಯವನ್ನು ಹೊಂದುವುದು ಅವರಿಗೆ ಕಷ್ಟವಾಗುವುದಿಲ್ಲ. ನಮ್ಮ ದೇಶದಲ್ಲಿ ಸ್ವಶಕ್ತಿಯಿಂದ ಜೀವಿಸುವುದಕ್ಕೆ ಸಾಧಕವಾದ ಶಾಸ್ತ್ರಗಳೇ ಅಪೂರ್ವ. ಒಂದುವೇಳೆ ಅಂಥ ಶಾಸ್ತ್ರಗಳಿದ್ದಾಗ್ಗೂ ಅವುಗಳು ಪ್ರಚಾರದಲ್ಲಿಲ್ಲ. ಆಮುಷ್ಮಿಕ ಸಾಧನೆಗೆ ಅನುಕೂಲವಾಗಿ ಇರತಕ್ಕ ಗ್ರಂಥಗಳು ಬೇಕಾದಷ್ಟಾಗಿ ಇರುತ್ತವೆ. ಇವುಗಳನ್ನು ಹೇಳತಕ್ಕ ಪಾಠಕರು ವಿಶದವಾಗಿ ಸಿಕ್ಕುವರು. ಶಬ್ದಶಾಸ್ತ್ರವೂ ಅರ್ಥಶಾಸ್ತ್ರವೂ ಕೂಡ ನಮ್ಮಲ್ಲಿ ವಿಶೇಷವಾಗಿರುವುದು. ಈ ಶಾಸ್ತ್ರಗಳನ್ನು ಅಭ್ಯಾಸ ಮಾಡತಕ್ಕವರು ವಿಜಿಗೀಷುಗಳಾಗುವುದರಲ್ಲಿ ಎಷ್ಟು ಶ್ರದ್ಧೆಯನ್ನು ತೋರಿಸುವರೋ ತತ್ತ್ವಾರ್ಥವನ್ನು ಪರಿಗ್ರಹಿಸುವುದರಲ್ಲಿ ಅಷ್ಟು ಶ್ರದ್ಧೆಯನ್ನು ತೋರಿಸುವುದಿಲ್ಲ. ಇದರಿಂದ ಶಬ್ದಗಳ ಮೇಲೂ, ಕುತರ್ಕಗಳ ಮೇಲೂ, ವಿದ್ಯಾರ್ಥಿಗಳ ಬುದ್ಧಿಯು ಓಡುವುದಕ್ಕೆ

(11) ಒಂದು ಕೊತಡಿಗೆ ಜಮುಖಾನವನ್ನು ಹಾಸಲು ಚ. ಗ. 1 ಕ್ಕೆ 6 ಷಿ. 9 ಪೆನ್ನಿಯಂತೆ 4 ಪೌ. 7 ಷಿ. ಖರ್ಚಾಗುವುದು. ಕೊತಡಿಯು ಉದ್ದ 16 ಅಡಿಯಾದರೆ, ಅದರ ಅಗಲವೆಷ್ಟು ?

(12) 12 ಅಡಿ ಉದ್ದ 9 ಅಡಿ ಅಗಲವಿರುವ ಒಂದು ಮನೆಯ ನೆಲಕ್ಕೆ ಹಾಸಲು 9 ಅಡಿ ಉದ್ದ 6 ಅಂ. ಅಗಲವಿರುವ ಎಷ್ಟು ಇಟ್ಟಿಗೆಗಳು ಬೇಕಾಗುವವು ?

(13) 12½ ಅಡಿ ಉದ್ದ, 8 ಅ.-3 ಅಂ. ಅಗಲವಿರುವ ಒಂದು ಮನೆಯ ಸೂರಿಗೆ ಹೊದ್ದಿಸಲು 9 ಅಂ. ಉದ್ದ 6 ಅಂ. ಅಗಲವಿರುವ ತಟ್ಟೆಯಾಗಿರುವ ಎಷ್ಟು ಹೆಂಚುಗಳು ಬೇಕಾಗುವುದು ?

(14) ಒಂದು ಕೊತಡಿಯು 15 ಅಡಿ ಅಗಲವು, ಅಗಲದ 1½ ರಷ್ಟು ಉದ್ದವೂ ಇರುವುದು. ಅದರ ನೆಲಕ್ಕೆ ಜಾಪೆ ಹಾಸಲು 45 ಅಂಗುಲ ಅಗಲವಿರುವ ಎಷ್ಟು ಗಜ ಜಾಪೆ ಬೇಕಾಗುವುದು ?

(15) 24 ಅಡಿ ಉದ್ದವುಳ್ಳ ಒಂದು ಮನೆಯು ಮಹಡಿಗೆ 6 ಅಡಿ ಉದ್ದ 1 ಅ. 4 ಅಂ. ಅಗಲವಿರುವ 27 ಹಲಿಗೆಗಳನ್ನು ಹಾಕಿದೆ. ಮನೆಯು ಅಗಲವೆಷ್ಟು ?

(16) 21 ಅಡಿ ಉದ್ದವಿರುವ ಒಂದು ಮನೆಯ ನೆಲಕ್ಕೆ ಜಾಪೆ ಹೆಣಿಸಲು 10 ಅ. 6 ಪೈ. ಖರ್ಚಾಗುವುದು. ಅಗಲದಲ್ಲಿ 3 ಅಡಿ ಕಡಮೆಯಾಗಿದ್ದರೆ, 8 ಅ. 9 ಪೈ ಖರ್ಚಾಗುತ್ತಿತ್ತು. ಮನೆಯ ಅಗಲವೆಷ್ಟು ?

(17) 14 ಅಡಿ ಉದ್ದವಿರುವ ಒಂದು ಮನೆಯ ನೆಲಕ್ಕೆ ಜಪ್ಪಡಿ ಕಲ್ಲುಗಳನ್ನು ಹಾಸಲು ಚ. ಗ. 1ಕ್ಕೆ 2 ಷಿ. 4 ಪೆನ್ನಿಯಂತೆ 1 ಪೌ. 12 ಷಿ. 8 ಪೆನ್ನಿ ಖರ್ಚಾಗುವುದು. ಉದ್ದವು 2 ಅಡಿ ಕಮ್ಮಿಯಾಗಿದ್ದರೆ, ಎಷ್ಟು ಖರ್ಚಾಗುತ್ತಿತ್ತು ?

(18) ಒಂದು ಕೊತಡಿಯ ಅಗಲ 7 ಗ. 1 ಅ. ಇರುವುದು. ಅದರ ಉದ್ದ 6 ಅಡಿ ಕಡಮೆಯಾಗಿದ್ದರೆ, ನೆಲಕ್ಕೆ ಜಮುಖಾನವನ್ನು ಹಾಸಲು ಚ. ಗ. 1 ಕ್ಕೆ 4½ ಪೆನ್ನಿಯಂತೆ 1 ಪೌ. 7½ ಷಿ. ಖರ್ಚಾಗುವುದು. ಕೊತಡಿಯ ಉದ್ದವೆಷ್ಟು ?

(19) 64 ಗಜ ಉದ್ದ 58 ಗಜ ಅಗಲವಿರುವ ಒಂದು ಉದ್ಯಾನದ ಸುತ್ತಲೂ 5 ಗಜ ಅಗಲವುಳ್ಳ ರಸ್ತೆಯಿದೆ. ರಸ್ತೆಗೆ ಗ್ರಾವಲ್ ಮಣ್ಣನ್ನು ಹರಡಿಸಲು ಚ. ಗ. 1ಕ್ಕೆ 3 ಪೈ ನಂತೆ ಎಷ್ಟು ಖರ್ಚಾಗುವುದು ?

(20) 20 ಗ. ಉದ್ದ 16 ಗ. ಅಗಲವುಳ್ಳ ಭೂಮಿಯಲ್ಲಿ ಸುತ್ತಲೂ 10½ ಅಡಿ ಅಗಲದ ಜಾಗವನ್ನು ಬಿಟ್ಟು ಮನೆ ಕಟ್ಟಿರುತ್ತಾರೆ. ಜಾಗಗಳ ವಿಸ್ತೀರ್ಣವೆಷ್ಟು ?

* ವಿದ್ಯಾದಾಯಿನಿ.

ಭಾಗ ೧೪.] ಮೇ—೧೯೦೬. [ಸಂಚಿಕೆ ೫.

ಪಾಠಕರು.

ಪಾಠಕರು ಮಕ್ಕಳ ಏಳಿಗೆಯ ಭಾರವನ್ನು ವಿಶೇಷವಾಗಿ ವಹಿಸತಕ್ಕುದು. ತಾಯಿತಂದೆಗಳು ತಮ್ಮ ಮಕ್ಕಳ ಯೋಗಕ್ಷೇಮವನ್ನು ಪಾಠಕರಿಗೆ ಒಪ್ಪಿಸುವರು. ಆ ಮಕ್ಕಳು ವೃದ್ಧಿಗೆ ಬರುವುದೂ, ಹೀನಸ್ಥಿತಿಗೆ ಬರುವುದೂ ಇವೆರಡಕ್ಕೂ ಪಾಠಕರೇ ಕಾರಣಭೂತರಾಗಿರುವರು. ದೇಶಭಾಷೆಯಲ್ಲಿ ಪಾಠ ಹೇಳತಕ್ಕ ಕ್ರಮವು ಇಂಗ್ಲೀಷ್ ಮೊದಲಾದ ಅನ್ಯಭಾಷೆಗಳಲ್ಲಿ ಪಾಠ ಹೇಳತಕ್ಕ ಕ್ರಮವು ಬೇರೆಬೇರೆ ವಿಧವಾಗಿರುವುವು. ಪಾಶ್ಚಾತ್ಯರಲ್ಲಿ ವಿದ್ಯಾರ್ಥಿಗಳು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಅನೇಕ ಶಾಸ್ತ್ರಗಳನ್ನು ಶಕ್ತಮಟ್ಟಿಗೆ ಚೆನ್ನಾಗಿ ಕಲಿದಿರುವರು. ಇದಕ್ಕೆ ಸ್ವಭಾಷೆಯಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡುವುದೇ ಮುಖ್ಯಕಾರಣ. ಜನಗಳ ಅಭಿವೃದ್ಧಿಗೆ ಸಾಧಕವಾದ ಶಾಸ್ತ್ರಗಳು ಅವರ ಭಾಷೆಯಲ್ಲಿರುವುದೂ ಇಲ್ಲ. ಅದರಲ್ಲಿ ಪಾಂಡಿತ್ಯವನ್ನು ಹೊಂದುವುದು ಅವರಿಗೆ ಕಷ್ಟವಾಗುವುದಿಲ್ಲ. ನಮ್ಮ ದೇಶದಲ್ಲಿ ಸ್ವಶಕ್ತಿಯಿಂದ ಜೀವಿಸುವುದಕ್ಕೆ ಸಾಧಕವಾದ ಶಾಸ್ತ್ರಗಳೇ ಅಪೂರ್ವ. ಒಂದುವೇಳೆ ಆಂಥಾ ಶಾಸ್ತ್ರಗಳಿದ್ದಾಗ್ಗೂ ಅವುಗಳು ಪ್ರಚಾರದಲ್ಲಿಲ್ಲ. ಲೌಕಿಕ ಸಾಧನೆಗೆ ಅನುಕೂಲವಾಗಿ ಇರತಕ್ಕ ಗ್ರಂಥಗಳು ಬೇಕಾದಷ್ಟಾಗಿ ಇರುತ್ತವೆ. ಇವುಗಳನ್ನು ಹೇಳತಕ್ಕ ಪಾಠಕರು ವಿಶದವಾಗಿ ಸಿಕ್ಕುವರು. ಶಬ್ದಶಾಸ್ತ್ರವೂ ಅರ್ಥಶಾಸ್ತ್ರವೂ ಕೂಡ ನಮ್ಮಲ್ಲಿ ವಿಶೇಷವಾಗಿರುವುದು. ಈ ಶಾಸ್ತ್ರಗಳನ್ನು ಅಭ್ಯಾಸ ಮಾಡತಕ್ಕವರು ಬಿಜಗೀಷುಗಳಾಗುವುದರಲ್ಲಿ ಎಷ್ಟು ಶ್ರದ್ಧೆಯನ್ನು ತೋರಿಸುವರೋ ತತ್ವಾರ್ಥವನ್ನು ಪರಿಗ್ರಹಿಸುವುದರಲ್ಲಿ ಅಷ್ಟು ಶ್ರದ್ಧೆಯನ್ನು ತೋರಿಸುವುದಿಲ್ಲ. ಇದರಿಂದ ಶಬ್ದಗಳ ಮೇಲೂ, ಪುಸ್ತಕಗಳ ಮೇಲೂ, ವಿದ್ಯಾರ್ಥಿಗಳ ಬುದ್ಧಿಯು ಓಡುವುದಕ್ಕೆ

ಎಷ್ಟು ಅವಕಾಶವಾಗುವುದೋ ಅಷ್ಟು ಅವಕಾಶವು ವಸ್ತು ತತ್ವಗಳಳನ್ನು ತಿಳಿದು ಕೊಳ್ಳುವುದರಲ್ಲಿ ವಿನಿಯೋಗಿಸಲ್ಪಡುವುದಿಲ್ಲ.

ಜರ್ಮನಿ ದೇಶದಲ್ಲಿ ೫-೮ ವರ್ಷದ ಹುಡುಗರಿಗೆ ಐಹಿಕ ಸುಖಪ್ರಾಪ್ತಿಗೆ ಸಾಧಕವಾದ ಶಾಸ್ತ್ರಗಳಲ್ಲಿರುವಷ್ಟು ಪರಿಜ್ಞಾನವು ನಮ್ಮಲ್ಲಿ ದೊಡ್ಡ ವಿದ್ವಾಂಸರೆಂಬ ಬಿರುದನ್ನು ಹೊಂದಿದವರಿಗೂ ಇರುವ ಸಂಭವವಿಲ್ಲ. ಅವರ ಜ್ಞಾನವು ಹೀಗೆ ಒಳ್ಳೇ ಪರಿಪಾಕದಿಸೆಯನ್ನು ಹೊಂದಿರುವುದರಿಂದ ಯಾವ ಕೆಲಸದಲ್ಲಿ ಅವರು ಪ್ರವರ್ತಿಸಿದಾಗ್ಗೂ ಅವರ ಪ್ರಜ್ಞೆಯು ಸರ್ವತೋಮುಖವಾಗಿ ಪ್ರವಹಿಸುವುದು. ಆದುದರಿಂದ ಯಾವ ಕೆಲಸವನ್ನು ಪಕ್ರಮಿಸಿದಾಗ್ಗೂ ಅದರಿಂದ ಸಾಧ್ಯವಾದ ಲಾಭಗಳನ್ನೆಲ್ಲಾ ಹೊಂದುವರು ಜರ್ಮಾ ದೇಶೀಯರು ಜರ್ಮನಿ, ಅಮೆರಿಕಾ ಮೊದಲಾದ ದೇಶಗಳಿಗೆ ಹೋಗಿ ಲೌಕಿಕ ಗುಣಪ್ರದಗಳಾದ ವಿದ್ಯೆಗಳು ಯಾವುವು ಅಲ್ಲಿ ಪ್ರಚಾರವಾಗಿದ್ದವೊ ಅವುಗಳನ್ನೆಲ್ಲಾ ತಿಳಿದುಕೊಂಡೂ ಐವತ್ತು ವರ್ಷಗಳಿಂದಲೂ ಪಾಶ್ಚಾತ್ಯ ಶಾಸ್ತ್ರಗಳನ್ನು ಶಿಲ್ಪಗಳನ್ನು ಕೈಗಾರಿಕೆ ಕೆಲಸಗಳನ್ನು ತಮ್ಮ ದೇಶದಲ್ಲಿ ಆಚರಣೆಗೆ ತಂದು ತಮ್ಮ ಭಾಷೆಯಲ್ಲಿಯೇ ಗ್ರಂಥಗಳನ್ನು ರಚಿಸಿ ಅವುಗಳನ್ನು ಪ್ರಚಾರ ಮಾಡಿದರು. ಹೀಗೆ ಮಾಡಿದುದರಿಂದ ಅರ್ಧಶತಮಾನದೊಳಗಾಗಿ ಅತ್ಯಂತ ನಾಗರಿಕರಾದ ಪಾಶ್ಚಾತ್ಯರಿಗೂ ಕೂಡ ಸಮಾನವಾದ ಯೋಗ್ಯತೆಯನ್ನು ಹೊಂದಿದರು.

ಇಂಥಾ ಯೋಗ್ಯತೆಯು ಬರಬೇಕಾದರೆ ಅವರು ಯಾವರೀತಿಯಲ್ಲಿ ನಡೆದರೋ ನಾವೂ ಅದೇ ರೀತಿಯಲ್ಲಿ ನಡೆಯಬೇಕು. ಅವರು ಪ್ರಥಮತಃ ಮಕ್ಕಳಿಗೆ ಸರಿಯಾಗಿ ಯೋಜನೆ ಮಾಡಿ ತತ್ವಾರ್ಥವನ್ನು ತಿಳಿದುಕೊಳ್ಳುವ ಮಾರ್ಗವನ್ನು ಪ್ರದರ್ಶನ ಮಾಡುವರು. ಸರಿಯಾದ ಯೋಜನೆಯನ್ನು ಮಾಡುವುದನ್ನು ಕಲಿಸಬೇಕಾದರೆ ಪಾಠಕರು ಮಕ್ಕಳು ಕೇಳತಕ್ಕ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಸರಿಯಾದ ಶಕ್ತಿಯು ಬರುವಮಟ್ಟಿಗೆ ಶಾಸ್ತ್ರಾಭ್ಯಾಸವನ್ನು ಮಾಡಿರಬೇಕು. ಹಾಗೆ ಶಾಸ್ತ್ರಾಭ್ಯಾಸವನ್ನು ಪ್ರಥಮತಃ ಪಾಠಕರಿಗೆ ಮಾಡಿಸಿ ಅನಂತರ ಅವರಿಂದ ವಿದ್ಯಾರ್ಥಿಗಳಿಗೆ ಪಾಠಗಳನ್ನು ಹೇಳಿಸಬೇಕು. ಈ ರೀತಿಯಲ್ಲಿ ಮಾಡಿಸುವುದಕ್ಕೋಸ್ಕರ ನಾರ್ಮಲ್ ಸ್ಕೂಲುಗಳನ್ನು ಏರ್ಪಡಿಸಿ ಪಾಠಕರಿಗೆ ಶಿಕ್ಷೆಯನ್ನು ಮಾಡುವ ಕ್ರಮವನ್ನು ಸಮ್ಮ ದೇಶದಲ್ಲಿ ಆರಂಭ ಮಾಡಿಧಾರೆ. ಈ ಪಾಠಕರಿಗೆ ಸಹಾಯಕರಾಗಿ ತಾಯಿತಂದೆಗಳು ಮಕ್ಕಳ ಆಟಪಾಟಗಳಲ್ಲಿಯೆ ವಿಶೇಷ ವಿಷಯಗಳನ್ನು ಸುಲಭೋಪಾಯದಲ್ಲಿ ತಿಳಿಸುತ್ತಾ, ಸಾಮಾನ್ಯ ವಿಷಯಗಳನ್ನು ಪರೀಕ್ಷಿಸಿ ತಿಳಿದುಕೊಳ್ಳುವ

ಅಭ್ಯಾಸವನ್ನುಂಟು ಮಾಡಿಸುತ್ತಾ, ಸನ್ಮಾರ್ಗ ಪ್ರವರ್ತಕರನ್ನಾಗಿ ಮಾಡಿಸುತ್ತಾ ಬಂದಲ್ಲಿ ಕ್ರಮವಾಗಿ ನಮ್ಮ ವಿದ್ಯಾರ್ಥಿಗಳ ಪಾತಪ್ರವಚನಗಳು ಸಮಾಚೀನವಾದ ಸ್ಥಿತಿಗೆ ಬರಬಹುದು.

ಕೈಬರಹ.

ಪೂರ್ವಕಾಲದಲ್ಲಿ ಓಲೆಗಳ ಮೇಲೆ ಕಂಠಗಳಿಂದ ಒರೆಯಲ್ಪಡುವ ಪದ್ಧತಿಯು ಇತ್ತು. ಹಿಂದಿನ ಕಾಲದ ಓಲೆ ಪುಸ್ತಕಗಳನ್ನು ತೆಗೆಸಿ ನೋಡಿದರೆ ಆ ಕಾಲದಲ್ಲಿ ವಿದ್ಯಾರ್ಥಿಗಳು ಮತ್ತು ಪಂಡಿತರು ಅಕ್ಷರಗಳನ್ನು ಎಷ್ಟು ಸ್ಪಷ್ಟವಾಗಿಯೂ ಮುಕ್ತಾ ಫಲಗಳಂತೆಯೂ ಬರೆಯುತ್ತಿದ್ದರೋ ಅದು ಗೊತ್ತಾಗುವದು ಕ್ರಮಕ್ರಮವಾಗಿ ಕಾಗದಗಳು ನಿರ್ಮಾಣವಾದುವು. ಲೇಖಣಿಗಳಿಂದ ಬರೆಯುವ ಸಂಪ್ರದಾಯವು ಆಚರಣೆಗೆ ಬಂತು. ಆಗಲೂ ಕೂಡ ಕೈಬರಹವು ಚೆನ್ನಾಗಿತ್ತು. ಈಚೆಗೆ ಮೊಳೆ ಗಳ ಸಹಾಯದಿಂದ ಪುಸ್ತಕಗಳು ಮುದ್ರಿಸಲ್ಪಡುವ ಏರ್ಪಾಡು ಆಚರಣೆಗೆ ಬಂತು. ಇದು ಬಂದಮೇಲೆ ಕೈಬರಹಕ್ಕೆ ಅವಕಾಶವು ಹೆಚ್ಚಾಗಿ ಅದಾಗ್ಗೂ ಮೋಡಿ ಅಕ್ಷರ ಗಳನ್ನು ಒರೆಯುವುದು ಉಪೇಕ್ಷೆಯಿಂದ ಬರೆಯುವುದು ಇವೆರಡೂ ಆಚರಣೆಗೆ ಬಂ ದುವು. ಕ್ರಮಕ್ರಮವಾಗಿ ಸ್ಪಷ್ಟವಾಗಿ ಬರೆಯುವುದು ಕಡಮೆಯಾಗುತ್ತಾ ಬಂತು. ಈಚೆಗೆ ಟೈಪ್ ರೈಟಿಂಗ್ ಅಂದರೆ ರಬ್ಬರಿನ ಮೊಳೆಗಳಿಂದ ಅಚ್ಚು ಹಾಕುವುದು ಆಚ ರಣೆಗೆ ಬಂದುದರಿಂದ ಕೈಬರಹವು ಇನ್ನೂ ಹೀನಸ್ಥಿತಿಗೆ ಬರುವುದಕ್ಕೆ ಅವಕಾಶ ಉಂಟಾಯಿತು. ಈಗ ಲಕ್ಷಣವಾಗಿ ಬರೆಯತಕ್ಕವರೇ ಅಪೂರ್ವ. ಸ್ಪಷ್ಟವಾಗಿ ತಿಳಿಯುವಂತೆಯೂ ಒಳ್ಳೇ ಅಕ್ಷರಗಳಿಂದಲೂ ಒರೆಯತಕ್ಕವರಿಗೆ ಈಗಲೂ ಪ್ರಯೋ ಜನವಿರುವುದು. ಬಿ. ಎ. ಪರೀಕ್ಷೆಯನ್ನು ಕೊಟ್ಟವರಿಗೆ ಜೀವನವಾಗುವುದು ಕಷ್ಟ ವೆಂದು ಹೇಳುವರೇ ಕೈಬರಹವನ್ನು ಚೆನ್ನಾಗಿ ತಿಳಿದುಕೊಂಡವರಿಗೆ ಸುಲಭವಾಗಿ ಜೀವನವು ಸಿಕ್ಕುವುದು ಎಂದು ಹೇಳುವರು. ಈಗ ಸ್ವಲ್ಪ ದಿವಸಗಳ ಕೆಳಗೆ ನಮ್ಮ ಶ್ರೀಮನ್ಮಹಾರಾಜರ ಪ್ರೈವೆಟ್ ಸೆಕ್ರಟರಿಗಳಾದ ಮೆ॥ ಮೆಕಾನಕಿ ಐ. ಸಿ. ಎಸ್. ರವರು ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಉಪದೇಶವನ್ನು ಮಾಡು ವಾಗ್ಯೆ ವಿದ್ಯಾರ್ಥಿಗಳ ಮನಸ್ಸಿಗೆ ಹತ್ತುವಂತೆ ಇವರು ಕೈಬರಹದ ಪ್ರಯೋಜನ

ವನ್ನು ಕುರಿತು ಉಪನ್ಯಾಸ ಮಾಡಿದರು. ದೇಶಭಾಷೆಯಲ್ಲಿಯೂ, ಇಂಗ್ಲೀಷ್ ಭಾಷೆಯಲ್ಲಿಯೂ ಯಾರು ಸ್ಪಷ್ಟವಾಗಿಯೂ ಚೆನ್ನಾಗಿಯೂ ಬರೆಯುವುದನ್ನು ಕಲಿತುಕೊಳ್ಳುತ್ತಾರೋ ಅವರಿಗೆ ಜೀವನಕ್ಕೆ ಯಾವ ತೊಂದರೆಯೂ ಇರುವುದಿಲ್ಲವೆಂಬದಾಗಿ ಸೂಚಿಸಿದರು. ಇದು ನಿಜವಾದ ಹಿತೋಪದೇಶ. ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಕೊಡುವುದರಲ್ಲಿ ಎಷ್ಟು ಆಸಕ್ತಿಯುಳ್ಳವರಾಗಿರುವರೋ ಕೈಬರಹವನ್ನು ಲಕ್ಷಣವಾಗಿಯೂ ಸ್ಪಷ್ಟವಾಗಿಯೂ ಬರೆಯುವುದರಲ್ಲಿಯೂ ಅಷ್ಟು ಆಸಕ್ತಿಯುಳ್ಳವರಾದರೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೂ ಕೈಬರಹವು ಸಹಾಕಾರಿಯಾಗುವುದು. ಪರೀಕ್ಷೆಯನ್ನು ಕೊಟ್ಟ ತರುವಾಯ ಜೀವನೋಪಾಯವನ್ನು ಸಂಪಾದಿಸಿಕೊಳ್ಳುವುದಕ್ಕೆ ಪರೀಕ್ಷೆಯೂ, ಕೈಬರಹವೂ ಎರಡೂ ಸಹಾಯಕಾರಿಗಳಾಗುವುವು. ವಿದ್ಯಾರ್ಥಿಗಳು ಈ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅನಿವಾರ್ಯಗಳಿಂದ ಪರೀಕ್ಷೆಯನ್ನು ಕೊಡುವುದು ಕಷ್ಟವಾದಾಗ್ಗೂ ಲಕ್ಷಣವಾಗಿ ಬರೆಯುವುದನ್ನು ಕಲಿತುಕೊಂಡರೆ ಅದರಿಂದ ತುಂಬಾ ಪ್ರಯೋಜನವಾಗುವುದು.

ಭೂಮಿಯ ಮೂಲವಸ್ತುಗಳು.

ಶಿಭಾವಸ್ಥೆಯಲ್ಲಿರುವ ಭೂಮಿಯ ಮೂಲವಸ್ತುಗಳು ಯಾವುವು? ಇವುಗಳು ಈ ಭೂಗೋಳವಾಗಿ ಪರಿಣಮಿಸುವಂತೆ ಹೇಗೆ ರಚಿಸಲ್ಪಟ್ಟಿವೆ ಎಂಬದಾಗಿ ಆ ವಿದ್ಯಾರ್ಥಿಗಳು ಪ್ರಶ್ನೆ ಮಾಡಬಹುದು. ಈ ಭೂಮಿಯು ಮಧ್ಯಭಾಗದಲ್ಲಿ ಬೆಂಕಿಯಾಗಿಯೂ, ಮೇಲುಭಾಗ ಕಲ್ಲುಮಣ್ಣು ಲೋಹ ಮೊದಲಾದುವುಗಳನ್ನುಳ್ಳವುಗಳಾಗಿಯೂ ಇರುವುದು. ಈ ಮೇಲುಭಾಗದ ಚರಿತ್ರೆಯನ್ನು ಕೂಡಿದಮಟ್ಟಿಗೂ ಭೂಗರ್ಭದ ಚರಿತ್ರೆಯನ್ನು ಬಲ್ಲವರತಕ್ಕವರು ಗೊತ್ತು ಮಾಡಿರುವರು. ಭೂಮಧ್ಯಭಾಗದ ಚರಿತ್ರೆಯು ಅಷ್ಟು ಸ್ಪಷ್ಟವಾಗಿ ಗೊತ್ತಾಗಿರುವುದಿಲ್ಲ. ಮೇಲುಭಾಗದ ಭೂಮಿಯ ವಿಷಯದಲ್ಲಿಯೂ ಮೇಲ್ಭಾಗದ ಚರಿತ್ರೆಯು ಒಳಭಾಗದ ಚರಿತ್ರೆಗಿಂತಲೂ ಚೆನ್ನಾಗಿ ತಿಳಿದು ಇರುವುದು. ಎಲ್ಲಿ ಪರೀಕ್ಷೆ ಮಾಡಿದಾಗ್ಗೂ ಭೂಮಿಯು ಮೇಲ್ಭಾಗವು ಹುಲ್ಲು, ಗಿಡಗಳು, ಮರಗಳು ಮೊದಲಾದುವುಗಳುಳ್ಳುದಾಗಿರುವುದು. ಕೆಲವು ಪ್ರಾಂತಗಳಲ್ಲಿ ಮರಳುಕಾಡುಗಳಿರುವುದುಂಟು. ಅಲ್ಲಿ ಸಸ್ಯಾದಿಗಳಿರುವುದಿಲ್ಲ.

ಕೆಲವು ಪರ್ವತ ಪ್ರಾಂತಗಳಲ್ಲಿಯೂ ಸನ್ಯಾದಿಗಳಿರುವುದಿಲ್ಲ. ಇಂಥಾ ಪ್ರದೇಶಗಳಲ್ಲಿ ಬೇರು ಬಿಡುವುದು ಅಸಾಧ್ಯವಾದುದರಿಂದ ಸನ್ಯಾದಿಗಳಿಗೆ ಅವಕಾಶ ದೊರೆಯುವುದಿಲ್ಲ. ಅಗ್ನಿಯ ಭಾಗಕ್ಕೆ ಆಚ್ಛಾದಕವಾಗಿರುವ ಭೂಭಾಗವು ಅನೇಕ ಮಡಿಕೆಗಳೋಪಾದಿಯಲ್ಲಿ ಪದರಗಳಿಂದ ಕೂಡಿದುದಾಗಿರುವುದು. ಸನ್ಯಾದಿಗಳು ಈ ಭಾಗಗಳಿಗೆ ಬೇರುಗಳನ್ನು ಬಿಟ್ಟುಕೊಂಡು ತನ್ಮೂಲಕವಾಗಿ ಬೆಳವಳಿಗೆಗೆ ಬೇಕಾದ ಸಾಮಗ್ರಿಗಳನ್ನು ತೆಗೆದುಕೊಂಡು ಮರಗಳಾಗುವವು.

ಈ ಪರೆಗಳು ಬಣ್ಣಗಳಲ್ಲಿಯೂ ಮೂಲವಸ್ತುಗಳಲ್ಲಿಯೂ ಬಹಳ ವ್ಯತ್ಯಾಸವುಳ್ಳದ್ದಾಗಿರುವುದು. ಕೆಲವುಕಡೆ ಮಣ್ಣು ಗಟ್ಟಿಯಾಗಿಯೂ, ಬೂದುಬಣ್ಣವುಳ್ಳದ್ದಾಗಿಯೂ, ಕೆಲವುಕಡೆ ಮೃದುವಾಗಿಯೂ, ಕಪ್ಪಾಗಿಯೂ, ಮರಳಿನಂತೆಯೂ, ಇನ್ನೂ ಕೆಲವುಕಡೆ ಕಪಿಲವರ್ಣವಾಗಿಯೂ, ಹಳದಿಬಣ್ಣ ಉಳ್ಳದ್ದಾಗಿಯೂ, ಇತರಕಡೆಗಳಲ್ಲಿ ಕಲ್ಲು ಜಲ್ಲಿ ಮೊದಲಾದವುಗಳನ್ನುಳ್ಳದ್ದಾಗಿಯೂ ಇರುವುದು. ಎಲ್ಲಾ ಭಾಗಗಳಲ್ಲಿಯೂ ಭಾರಿ ಬಂಡೆಗಳು ಅಥವಾ ಚಿಕ್ಕ ಕಲ್ಲುಗಳು, ಅಥವಾ ಮರಳು ಮಣ್ಣು ಇರುವುವು. ಭೂತಕನ್ನಡಿಯ ಮೂಲಕ ನೋಡಿದರೆ ಕಲ್ಲು, ಜಲ್ಲಿ, ಮಣ್ಣು, ಮರಳು ಇವುಗಳೆಲ್ಲಾ ಭೂಮಿಯ ಮೂಲವಸ್ತುಗಳ ರೂಪಭೇದಗಳಾಗಿರುವುವು. ಸನ್ಯಾದಿಗಳು ತಮ್ಮ ಬೇರುಗಳನ್ನು ಒಟ್ಟು ಮಣ್ಣಿನಲ್ಲಿ ಅವಕಾಶವನ್ನು ಮಾಡಿ ಮಳೆಯ ನೀರು ವಾಯು ಆದರೊಳಕ್ಕೆ ಹೋಗುವಂತೆ ಮಾಡುವುದು. ಮಣ್ಣಿನ ಹುಳುಗಳು ಇದೇ ರೀತಿಯಲ್ಲಿ ಕೆಲಸವನ್ನು ಮಾಡಿ ಕೆಳಗಿನ ಮಣ್ಣನ್ನು ಮೇಲಕ್ಕೆ ಬರುವಂತೆ ಮಾಡುವುದು. ಮಣ್ಣಿನಲ್ಲಿ ಸನ್ಯಾದಿಗಳಿಗೆ ಸಾಧಕವಾದ ಅನೇಕ ಮೂಲವಸ್ತುಗಳು ಇರುವುವು. ಮಣ್ಣನ್ನು ಸುಡುವುದರಿಂದ ಈ ಪದಾರ್ಥಗಳು ನಾಶವಾಗುವುವು. ಹಾಗಾದರೆ ಅಂಥಾ ಮಣ್ಣು ಸನ್ಯಾದಿಗಳಿಗೆ ಪುಷ್ಟಿಯನ್ನು ಕೊಡುವ ಶಕ್ತಿಯನ್ನು ಕಳೆದುಕೊಳ್ಳುವುದು. ಈ ಸನ್ಯಾದಿಗಳು ಮತ್ತು ಪ್ರಾಣಿಗಳು ಸತ್ತ ಮೇಲೆ ಪುನಃ ಮೂಲವಸ್ತುಗಳಾಗಿ ಪರಿಣಮಿಸುವವು. ಅನೇಕ ಪ್ರದೇಶಗಳಲ್ಲಿ ವ್ಯವಸಾಯವನ್ನು ಮಾಡಿ ಕೆಲವು ವರ್ಷಗಳೊಳಗಾಗಿ ಸನ್ಯಾದಿಗಳಿಗೆ ಬೇಕಾದ ಮೂಲವಸ್ತುಗಳನ್ನೆಲ್ಲಾ ಉಪಯೋಗಿಸಿಕೊಳ್ಳುತ್ತವೆ. ಉಪಯೋಗಿಸಿದಹಾಗೆಲ್ಲಾ ಮೊದಲಿನ ಪೈರುಗಳಿಗಿಂತ ಅನಂತರದಲ್ಲಿ ಹಾಕಲ್ಪಟ್ಟ ಪೈರುಗಳು ಪೀಚಾಗುತ್ತವೆ. ಹೀಗೆಯೇ ಕೆಲವು ವರ್ಷಗಳು ನಡೆದರೆ ಅನಂತರ ಹಾಕಲ್ಪಟ್ಟ ಸನ್ಯಾದಿಗಳಿಗೆ ಬೇಕಾದ ಆಹಾರವು ಭೂಮಿಯಲ್ಲಿ ಕಡಮೆಯಾಗುವುದರಿಂದ ಅದು ಬೆಳೆಯು

ವುದೇ ಇಲ್ಲ. ಯಾವ ಭೂಭಾಗದಲ್ಲಿ ಇಂಥಾ ಮೂಲವಸ್ತುಗಳುಳ್ಳ ಪದರವು ಒಹ ಳ ಘನವುಳ್ಳದ್ದಾಗಿರುತ್ತದೋ ಆಂಥಾ ಸ್ಥಳಗಳಲ್ಲಿ ಈ ಮೂಲವಸ್ತುಗಳು ವಿಶೇಷ ವಾಗಿರುವುದು. ಈ ಪದರದ ಘನವು ಕಡಮೆಯಾಗಿರತಕ್ಕ ಸ್ಥಳದಲ್ಲಿ ಈ ಮೂಲ ವಸ್ತುಗಳು ಕಡಮೆಯಾಗಿರುವುದರಿಂದ ಕ್ರಮಕ್ರಮವಾಗಿ ಸಸ್ಯಾದಿಗಳ ಬೆಳವಳಿಕೆ ಗಳು ಕಡಮೆಯಾಗುವುವು.

ಮಣ್ಣು ಆಳಕ್ಕೆ ಹೋದಹಾಗೆಲ್ಲಾ ವ್ಯತ್ಯಾಸವಾಗುತ್ತದೆ. ಕೆಲವು ಪ್ರದೇ ಶಗಳಲ್ಲಿ ೩---೪ ಅಡಿಗಳವರೆಗೂ ಮಣ್ಣು ಒಂದೇ ವಿಧವಾಗಿರುವುದುಂಟು. ಆದರೆ ಬಂಡೆಗಳ ಮೇಲೆ ಮಣ್ಣು ಮುಚ್ಚಿಕೊಂಡಿರುವುದುಂಟು. ಆಂಥಾ ಸ್ಥಳಗಳಲ್ಲಿ ಮ ಣ್ಣಿನ ಪದಾರ್ಥಗಳು ಹೆಚ್ಚಾಗಿರುವುದಿಲ್ಲ. ಕೆಳಕ್ಕೆ ಹೋದಹಾಗೆಲ್ಲಾ ಸಸ್ಯಾದಿಗಳ ಬೆಳವಳಿಕೆಗೆ ಬೇಕಾದ ಪದಾರ್ಥಗಳು ವಿಶೇಷವಾಗಿ ಸಿಕ್ಕುವುದಿಲ್ಲ. ಈ ಮಣ್ಣಿನಲ್ಲಿ ಪ್ರಪಂಚದಲ್ಲಿ ಜನ್ಮವನ್ನು ಹೊಂದುವ ಸಸ್ಯಾದಿಗಳ ಮತ್ತು ಪ್ರಾಣಿಗಳ ಶರೀರವಾ ಗಿದ್ದ ಪದಾರ್ಥಗಳೆಲ್ಲಾ ಗೊಬ್ಬರದ ಅವಸ್ಥೆಯನ್ನು ಹೊಂದಿ ಮಣ್ಣಿನೊಡನೆ ಮಿಶ್ರ ವಾಗಿರುವುದು. ಮುಂದೆ ಹುಟ್ಟತಕ್ಕ ಸಸ್ಯಾದಿಗಳಿಗೂ ಪ್ರಾಣಿಗಳಿಗೂ ಇವುಗಳೇ ಆಹಾರವಾಗಿ ಪರಿಣಮಿಸುವುವು. ಮಳೆಯಾದಾಗ ಮೇಲ್ಭಾಗದಲ್ಲಿರತಕ್ಕ ಮಣ್ಣು ಗೊಬ್ಬರ ಮೊದಲಾದುವುಗಳೆಲ್ಲಾ ಕೊಚ್ಚಿಹೋಗಿ ಸಸ್ಯಾದಿಗಳ ಬೇರುಗಳೂ ಕೂಡ ಕಾಣುವುವು. ಈ ಬೇರುಗಳ ಮೂಲಕವಾಗಿ ಸಸ್ಯಾದಿಗಳು ವಾಯುವನ್ನೂ, ನೀ ರನ್ನೂ ತೆಗೆದುಕೊಳ್ಳುವುವು. ಮೇಲುಭಾಗದಲ್ಲಿರುವ ಮಣ್ಣಿನ ಕೆಳಗೆ ಬಂಡೆಗಳು ಜೇಡಿಮಣ್ಣು ಅಥವಾ ಇತರ ವಿಧವಾದ ಜವಿಾನು ಸಸ್ಯಾದಿಗಳ ಬೆಳವಳಿಕೆಗೆ ವಿಶೇ ಷವಾಗಿರುವುದು.

ಕಲ್ಲುಗಳಲ್ಲಿಯೂ ಮರಳುಕಲ್ಲುಗಳೆಂಬದಾಗಿಯೂ ಅಗ್ನಿಸಂಬಂಧವಾದ ಕಲ್ಲು ಗಳೆಂಬದಾಗಿಯೂ ಎರಡು ವಿಧವಾದ ಕಲ್ಲುಗಳುಂಟು. ಮಣ್ಣಿನಿಂದಾದ ಕಲ್ಲುಗಳು ಪುಡಿಯಾಗುತ್ತವೆ. ಭೂಗರ್ಭದ ಬೆಂಕಿಯಿಂದ ಕರಗಿಸಲ್ಪಟ್ಟ ಮಣ್ಣು ಕಲ್ಲು ಲೋ ಹ ಮೊದಲಾದವುಗಳಿಂದ ಕಲ್ಲುಗಳೇ ಬೆಣಚುಕಲ್ಲುಗಳೆಂದೆನಿಸಿಕೊಳ್ಳುವುವು. ಈ ಕಲ್ಲುಗಳೆಲ್ಲಾ ಕ್ರಮಕ್ರಮವಾಗಿ ಶೈಥಿಲ್ಯವನ್ನು ಹೊಂದಿ ಜೊರುಗಳಾಗುವುವು. ಈ ಜೊರುಗಳಿಂದ ಸಸ್ಯಾದಿಗಳೂ ಪ್ರಾಣಿಗಳೂ ತಮ್ಮ ಬೆಳವಳಿಕೆಗೆ ಬೇಕಾದ ಆಹಾರ ಗಳನ್ನು ಹೊಂದುವುವು. ಶಿಥಿಲವಾಗದೆ ಇರತಕ್ಕ ಬಂಡೆಗಳೂ ಕೂಡ ಭೂಗರ್ಭದಲ್ಲಿ ಬೇಕಾದಹಾಗೆ ಇರುವುವು. ಈ ಬಂಡೆಗಳಿಗೂ ಕೂಡ ಜನ್ಮಾಂತರಗಳುಂಟು.

ಭೂಗರ್ಭದಲ್ಲಿರುವ ಬೆಂಕಿಯಿಂದ ಕರಗಿಸಲ್ಪಟ್ಟು ಕ್ರಮಕ್ರಮವಾಗಿ ಔಷ್ಣ್ಯವನ್ನು ಕಳೆದುಕೊಂಡು ಶಿಲಾವಸ್ಥೆಯನ್ನು ಹೊಂದುವುದಕ್ಕೆ ಮುಂಚೆ ಅವುಗಳ ಬೇರೆ ರೂಪಾಂತರ ಉಳ್ಳವುಗಳಾಗಿದ್ದರೂ ಈಗಿನ ಬೆಟ್ಟಗಳಿಗೆ ಪರ್ವತಗಳಿಗೆ ಹೋಗಿ ಪರೀಕ್ಷಿಸಿದರೆ ಮರಳು ಬಂಡೆಯ ಆಕಾರವನ್ನು ಹೊಂದಿರುವುದೆಂದು ಗೊತ್ತಾಗುವುದು. ಕ್ರಮಕ್ರಮವಾಗಿ ಹಿಮ ನೀರು ವೈತ್ಯ ಮೊದಲಾದುವುಗಳಿಗೆ ಗುರಿಯಾಗಿ ಈ ಕಲ್ಲುಗಳು ಚೂರುಗಳಾಗಿ ಪ್ರವಾಹಗಳಲ್ಲಿ ಸೇರಿ ಕೊನೆಗೆ ಪೂರ್ವದಂತೆಯೇ ಮರಳಿನ ಅವಸ್ಥೆಯನ್ನು ಹೊಂದುವುದು ಕೂಡ ಉಂಟು. ಈ ರೀತಿಯಲ್ಲಿ ಸಮುದ್ರವನ್ನು ಸೇರಿದ ಮರಳು ಅನೇಕ ವರ್ಷಗಳಲ್ಲಿ ಪರಸ್ಪರ ಸಂಬಂಧ ಉಳ್ಳವುಗಳಾಗಿ ಪುನಃ ಬಂಡೆಯಾಗಿ ಪರಿಣಮಿಸುವುದೂ ಉಂಟು. ಹೀಗೆ ಬಂಡೆಗಳಾದ ಸಮುದ್ರದ ಕೆಳಗಿನ ಪ್ರದೇಶಗಳು ಭೂಗರ್ಭದಲ್ಲಿ ಅಗ್ನಿಯ ಮತ್ತು ಆವಿಯ ಪ್ರಭಾವದಿಂದ ಮೇಲಕ್ಕೆದ್ದು ಬೆಟ್ಟಗಳಾಗುವುದೂ ಉಂಟು. ಹೀಗಾಗತಕ್ಕ ಕಲ್ಲುಗಳೇ ಮರಳುಕಲ್ಲುಗಳು. ಅಗ್ನಿಸಂಬಂಧವಾದ ಕಲ್ಲುಗಳೇ ಬೆಣಚುಕಲ್ಲುಗಳು.

ಯುರೋಪಿನ ಪಕ್ಷಿಗಳು.

ಜಲಚರ ಪಕ್ಷಿಗಳು ಯುರೋಪಿನಲ್ಲಿ ಬಹಳವಾಗಿರುವುವು. ಇವುಗಳಲ್ಲಿ ಕ್ರೇಕ್, ನೀರುಕೋಳಿ, ಕೂಟ್, ಕಾಳಕ್ರೌಂಚ, ಪ್ಲೊವರ್, ಕೊಂಚೆಹಕ್ಕಿ, ಬಕ, ಬಸ್ಟರ್ಡ್, ಕೊಕ್ಕರೆ, ನಾರಾಯಣಪಕ್ಷಿ, ರಾಜಹಂಸ, ನೇರೆಹಕ್ಕಿ, ಹಂಸ, ಬಾತು, ವರಟೆ, ಕೊರ್ಮೊರಾಂಟ್, ಬೆಳ್ಳಕ್ಕಿ, ಪೆಟ್ರೆಲ್, ನೀರುಕೋಗಿಲೆ—ಇವು ಮುಖ್ಯವಾದುವು. ಈ ಪಕ್ಷಿಗಳಲ್ಲಿ ಕೆಲವು ಬಹು ದೂರದೇಶಗಳಿಗೆ ಪ್ರಯಾಣ ಬೆಳೆಸುವುವು. ಬಸ್ಟರ್ಡ್ ಪಕ್ಷಿಗಳು ಜರ್ಮನಿಯಲ್ಲಿಯೂ ಯುರೋಪಿನ ದಕ್ಷಿಣ ಮತ್ತು ಪೂರ್ವ ಪ್ರದೇಶಗಳಲ್ಲಿಯೂ ಹೆಚ್ಚಾಗಿರುವುವು. ಇವು ಕೆಲವು ವೇಳೆಯಲ್ಲಿ ಆಫ್ರಿಕಾಕ್ಕೂ ಪ್ರಯಾಣ ಮಾಡುವುವು. ಇವುಗಳಲ್ಲಿ ಅನೇಕ ಪಕ್ಷಿಗಳು ೫೦ ವರ್ಷಗಳ ಪರ್ಯಂತ ಬದುಕಿರುವುವು.

ಕೊಕ್ಕರೆ ಮತ್ತು ಬಕಗಳು ವಿಶೇಷವಾಗಿ ಪ್ರಯಾಣ ಮಾಡುತ್ತಿರುವುವು. ಬಕಪಕ್ಷಿಗಿಂತ ಕೊಕ್ಕರೆಗೆ ಜಾಡ್ಯವಾದ ಕೊಕ್ಕಿರುವುದು. ಬಕಗಳು ವಸಂತಕಾಲ

ದಲ್ಲಿ ಯುರೋಪಿಗೂ ಏಷ್ಯದ ಉತ್ತರಕ್ಕೂ ಬಂದು ಶರತ್ಕಾಲ ಪ್ರಾಪ್ತವಾಗುತ್ತಲೇ ಆಫ್ರಿಕಾಕ್ಕೂ ಏಷ್ಯದ ದಕ್ಷಿಣಪ್ರದೇಶಕ್ಕೂ ಹಿಂತಿರುಗವ್ವವು. ಬಿಳೀ ಕೊಕ್ಕರೆಗಳು ವಸಂತಕಾಲದಲ್ಲಿ ಮಧ್ಯ ಯುರೋಪಿಗೆ ಬಂದು ಸೆಪ್ಟಂಬರ್ ತಿಂಗಳಲ್ಲಿ ಏಷ್ಯ ಮತ್ತು ಆಫ್ರಿಕಾಕಡೆಗೆ ಹೊರಟುಹೋಗುವ್ವವು. ಬಕಗಳು ಬುದ್ಧಿಶಾಲಿಯಾದ ಪಕ್ಷಿಗಳು. ಇವನ್ನು ಸಾಕಿ ಸಾಧುವಾಗಿ ಮಾಡಬಹುದು. ಸಾಕಿದ ಪಕ್ಷಿಗಳು ದನಕರಗಳ ಮಂದೆಯನ್ನು ಒಂದೇಕಡೆಗೆ ಸೇರಿಸುವ್ವವು. ನಾರಾಯಣಪಕ್ಷಿಯು ಏಡಿಗಳನ್ನೂ ಜಿಂಗಿಗಳನ್ನೂ ಕಪ್ಪೆ ಮೀನುಗಳನ್ನೂ ತಿಂದು ಜೀವಿಸುವ್ವದು.

ರಾಜಹಂಸಗಳು ಯುರೋಪಿನ ಆಗ್ನೇಯ ಪ್ರದೇಶಕ್ಕೆ ಬರುವ್ವವು. ಸಮುದ್ರತೀರದಲ್ಲಿಯೂ ಖಾರಿಗಳಲ್ಲಿಯೂ ಉಪ್ಪುನೀರನ ಕೆರೆಗಳಲ್ಲಿಯೂ ವಾಸಮಾಡುವ್ವವು. ಇವ್ವಗಳಿಗೆ ಉದ್ದವಾದ ಕಾಲುಗಳೂ ಜಾಲಪಾದಗಳೂ ಇರುವ್ವವು. ಇವು ನೀರಿನಲ್ಲಿ ಚೆನ್ನಾಗಿ ನಡೆಯುವ್ವವು, ಈಚುವ್ವವು ಮತ್ತು ಮುಣುಗುವ್ವವು. ನೇರೆ ಹಕ್ಕಿಯು ಕೊಕ್ಕಿನ ಕೆಳಗೆ ದೊಡ್ಡ ಚೀಲವಿರುವ್ವದು. ಇದರಲ್ಲಿ ಮೀನನ್ನಿಟ್ಟುಕೊಂಡು ಬೇಕಾದಾಗ ಹೊರಗೆ ತೆಗೆದು ತಿನ್ನುವ್ವದು. ಇದು ದಕ್ಷಿಣ ಯುರೋಪಿನಲ್ಲಿಯೂ ಉತ್ತರ ಆಫ್ರಿಕಾದಲ್ಲಿಯೂ, ಪಶ್ಚಿಮ ಏಷ್ಯದಲ್ಲಿಯೂ ವಿಶೇಷವಾಗಿ ಸಂಚರಿಸುತ್ತಿರುವ್ವದು. ಹಂಸ, ಬಾತು, ವರಟೆಗಳಿಗೆ ಜಾಲಪಾದವಿರುವ್ವದು.

ಐದರ್ ಬಾತುಗಳು ಉತ್ತರಧ್ರುವ ಪ್ರದೇಶಗಳಲ್ಲಿ ವಾಸಿಸುವ್ವವು. ಇವಕ್ಕೆ ಉತ್ತಮವಾದ ಮೃದುವಾದ ತುಪ್ಪಳವಿರುವ್ವದು. ಇವು ತಮ್ಮ ತುಪ್ಪಳಗಳಲ್ಲಿ ಕೆಲವನ್ನು ಕಿತ್ತಿ ಗೂಡಿನೊಳಕ್ಕೆ ಹಾಸಿಕೊಳ್ಳವ್ವವು. ಆದರೆ ನಾರ್ವೆ ಮತ್ತು ಸ್ವೀಡನ್ ಜನರು ಗೂಡಿನಲ್ಲಿರುವ ತುಪ್ಪಳಗಳನ್ನು ಕದ್ದುಕೊಂಡು ಹೊಗುವರು. ಬೆಳ್ಳಕ್ಕಿ ಪೆಟ್ರೆಲ್ ನೀರುಕೋಗಿಲೆಗಳು ಸಮುದ್ರದಲ್ಲಿ ಬಹಳವಾಗಿ ಊಟಮಾಡುವ್ವವ್ವ. ಇವ್ವಗಳಲ್ಲಿ ಬೆಳ್ಳಕ್ಕಿಯು ಬಹು ಹೊಟ್ಟೆಬಾಕುವಾಗುವ್ವದು. ಸಣ್ಣ ಮೀನುಗಳು ಬಸವನಹುಳಗಳು ಏಡಿಗಳು ತೇಲುತ್ತಿರುವ ಸೀಲನ್ ಮತ್ತು ತಿಮಿಂಗಿಲಗಳ ಮೃತಶರೀರಗಳೂ ಈ ಪಕ್ಷಿಗೆ ಆಹಾರವಾಗಿರುವ್ವವು. ಯುರೋಪಿನಲ್ಲಿ ಉರಿಗಾಮಿಗಳು ವಿಶೇಷವಾಗಿಲ್ಲ. ಅಲ್ಲಿ ಪೈಪರ್ ಎಂಬ ವಿಷಮಯವಾದ ಹಾವುಗಳು ಇರುವ್ವವು. ಭೂಮಧ್ಯ ಸಮುದ್ರತೀರದ ಬಳಿಯಲ್ಲಿ ಆಮೆಗಳು ವಾಸವಾಗಿರುವ್ವವ್ವ. ಉದ್ದವಾದ ನಾಲಗೆಯುಳ್ಳ ಒಂದು ಬಗೆಯ ಓತಿಕಾಟವು ದಕ್ಷಿಣಯುರೋಪಿನಲ್ಲಿ ಸಿಕ್ಕುವ್ವದು. ಬಗೆಬಗೆಯ ಕಪ್ಪೆಗಳೂ ಪಲ್ಲಿಗಳೂ ಯುರೋಪಿನಲ್ಲಿ ಸಿಕ್ಕುವ್ವವ್ವ. ಅಲ್ಲಿರುವ

ವಿನಗಳಲ್ಲಿ ಸ್ಯಾಮನ್, ಪಾರ್ಕ್, ಸ್ಟರ್ಜನ್‌ಗಳು ಮುಖ್ಯವಾದುವು. ದಕ್ಷಿಣಯುರೋಪಿನಲ್ಲಿ ಸಣ್ಣ ಸಣ್ಣ ಜೇಳುಗಳು ವಾಸವಾಗಿರುವುವು.

ಯುರೋಪಿನ ವೃಕ್ಷಗಳು.

ಓಕ್, ಸಿಂದೂರ ಅಥವಾ ಬಾನವೃಕ್ಷ:— ಇದು ಇಂಗ್ಲೆಂಡ್ ಸ್ಪೈನ್ ಮತ್ತು ಇಟಲಿದೇಶಗಳಲ್ಲಿ ಬೆಳೆಯುವುದು. ವಿಶಾಲವಾಗಿ ಹರಡಿಕೊಂಡ ಕೊಂಬೆಗಳುಳ್ಳದಾಗಿಯೂ ಉನ್ನತವಾಗಿಯೂ ಇರುವುದು. ಪೂರ್ವದಲ್ಲಿ ಇಂಗ್ಲೆಂಡಿನಲ್ಲಿ ಡ್ರುಯಿಡ್ಸ್ ಎಂಬ ಪುರೋಹಿತರು ಓಕ್ ಮರಗಳ ಬುಡದಲ್ಲಿ ದೇವತೆಗಳನ್ನು ಆರಾಧಿಸುತ್ತಿದ್ದರು. ಆ ವೃಕ್ಷಗಳು ದೇವತೆಗಳ ವಾಸಸ್ಥಾನವೆಂದು ಭಾವಿಸಿದ್ದರು. ಸ್ಪೈನ್ ಮತ್ತು ಇಟಲಿ ದೇಶಗಳಲ್ಲಿ ಬೆಳೆಯುವ ಬಾನವೃಕ್ಷಗಳ ತೊಗಟೆಯಿಂದ ಬಿರಡೆಗಳನ್ನು ತಯಾರು ಮಾಡುವರು. ಈ ಜಾತಿಮರಗಳ ತೊಲೆಗಳು ಬಹು ಗಟ್ಟಿಯಾಗಿಯೂ ಬಾಳಿಕೆ ಒರುವುದಾಗಿಯೂ ಇರುವುದರಿಂದ ಅವನ್ನು ಮನೆ ಹಡಗು ಮುಂತಾದುವನ್ನು ಕಟ್ಟುವುದಕ್ಕೆ ಉಪಯೋಗಿಸುವರು.

ಛಸ್ನಟ್ ಅಥವಾ ಗೂರಮರವು ದಕ್ಷಿಣಯುರೋಪಿನಲ್ಲಿ ಬೆಳೆಯುವುದು. ಇದರ ಎಲೆಗಳು ದೊಡ್ಡವಾಗಿ ಅಂಡಾಕಾರವಾಗಿರುವುವು. ಇದರ ಹಣ್ಣುಗಳನ್ನು ಜನರು ತಿನ್ನುವರು. ಪ್ಲೇನ್ ಮರವು ಗ್ರೀಸಿನಲ್ಲಿ ಸಹಜವಾಗಿ ಬೆಳೆಯುವುದು. ಇತರ ದೇಶಗಳಲ್ಲಿಯೂ ಇದನ್ನು ಹುಟ್ಟಿಹಾಕಿ ಬೆಳೆಸುವರು. ಇಂಗ್ಲೆಂಡಿನಲ್ಲಿ ತೋಟಗಳಲ್ಲಿ ಈ ಜಾತಿಯ ಮರಗಳು ಅಂದವಾಗಿ ಬೆಳೆದಿರುವುವು. ಇವುಗಳ ಎಲೆಗಳು ನೋಟಕ್ಕೆ ರಮಣೀಯವಾಗಿರುವುವು. ಪೂರ್ವಿಕರು ಅಲಂಕಾರಕ್ಕೋಸ್ಕರ ಪಾಠಶಾಲೆಗಳ ಸುತ್ತಲೂ ಈ ಮರಗಳ ತೋಪುಗಳನ್ನು ಬೆಳೆಸುತ್ತಿದ್ದರು. ಮಾಡಳ ನಿಂಬೇಗಿಡಗಳೂ ದಕ್ಷಿಣ ಪ್ರಾಂತ್ಯಗಳಲ್ಲಿ ಹೆಚ್ಚಾಗಿ ಬೆಳೆಯುವುವು.

ದಕ್ಷಿಣದಲ್ಲಿ ಕಿತ್ತಳೆಗಿಡಗಳೂ ಅಧಿಕವಾಗಿರುವುವು. ಮುಖ್ಯವಾಗಿ ಸ್ಪೈನಿನಲ್ಲಿ ವಿಶೇಷವಾಗಿ ಬೆಳೆಯುವುವು. ಇವುಗಳ ಹೂವುಗಳು ಬಿಳಿದಾಗಿಯೂ ಸುಗಂಧವಾಗಿಯೂ ಪಕ್ಷಿಗಳಿಗೆ ಬಹು ಪ್ರಿಯವಾಗಿಯೂ ಇರುವುವು. ಇವುಗಳ ಹಣ್ಣುಗಳನ್ನು ಸರ್ವರೂ ತಿನ್ನುವರು. ದಾಳಿಂಬೆಯು ಮೊದಲು ಆಫ್ರಿಕಾದಿಂದ ದಕ್ಷಿಣಯುರೋಪಿಗೆ ತರಲ್ಪಟ್ಟಿತು. ಇದರ ಹಣ್ಣುಗಳನ್ನು ಎಲ್ಲರೂ ತಿನ್ನುವರು. ಪೂರ್ವಿಕರು ದಾಳಿಂಬೆಹಣ್ಣುಗಳು ಬಹು ಉತ್ಕೃಷ್ಟವಾದುವೆಂದು ಭಾವಿಸಿ ಅವನ್ನು ದೇವತೆಗಳಿಗೆ ಸಮರ್ಪಿಸುತ್ತಿದ್ದರು. ಅಂಜೂರಗಿಡದ ಎಲೆಗಳು ದೊಡ್ಡವಾಗಿಯೂ ಹಣ್ಣು

ಲನ್ನೆ ಆಗಲಿ ಮಿಶ್ರಮಾಡಿದೊಷ್ಟ ಮಡಿಕೆಗಳಲ್ಲಿ ಹಾಕಿ ಜಾರಣಪಾಕವನ್ನು distillation ಪ್ರಯೋಗಿಸುವರು. ಮಡಿಕೆಯಲ್ಲಿ ಯಶದ ಪ್ರಾಣನಿಕವು Zinc oxide ಕೆಂಪಾಗಿ ಕಾಸಲ್ಪಟ್ಟಾಗ, ಇಂಗಾಲವು ಅವರಲ್ಲಿ ಪ್ರಾಣದೊಡನೆ ಸೇರಿ ಇಂಗಾಲ್ಯೆಕ ಪ್ರಾಣನಿಕ Carbon-mon oxide ವಾಗುವುದು. ಯಶದವು ಕಾವು ಹೆಚ್ಚಾದಮೇಲೆ ದ್ರವವಾಗಿ ಕ್ರಮೇಣ ಧೂಮರೂಪವಾಗಿ ಕೊಳವೆಮುಖಲಕ ಹೊರಗೆ ಬಂದು ಕಬ್ಬಿಣದ ಪಾತ್ರೆಗಳಲ್ಲಿ ಬಿದ್ದು ಘನವಾಗುವದು.—ಅದರೆ ಹೀಗೆ ತಯಾರಾದ ಯಶದ ಲೋಹವು ಕೊಂಚ ಕಾಡ್ಮಿಯ cadmium ಲೊಹದೊಡನೆ ಮಿಶ್ರವಾಗಿರುವುದು.—

(2) ಯಶದ ಗಂಧಕಿಕದಿಂದಲೂ zinc Sulphide ಯಶದವನ್ನೂ ಸಂಗ್ರಹಿಸಬಹುದು. ಯಶದ ಗಂಧಕಿಕವನ್ನೂ ಗಾಳಿಯುಲ್ಲಿ ಸುಡುವರು. ಯಶದ ಗಂಧಕಿಕವು ಗಾಳಿಯುಲ್ಲಿರುವ ಪ್ರಾಣದೊಡನೆ ಸೇರಿ ಪಾಕವಾಗಿ, ಯಶದ ಪ್ರಾಣನಿಕವಾಗಿ ಪರಿಣಮಿಸುವದು. ಅದರಲ್ಲಿದ್ದ ಗಂಧಕವು ಪ್ರಾಣದೊಡನೆ ಶೆರಿ ಗಂಧಕದ್ವಿಪ್ರಾಣನಿಕವಾಗುವುದು.

Zinc Sulphide + oxygen = zinc oxide + Sulphur Dioxide

ಸೂ.—ಯಗೆ + ತಿಪ್ರ = ಯಪ್ರ + ಸಪ್ರ

ಯಶದ ಗಂಧಕಿಕ + ಪ್ರಾಣನ = ಯಶದ ಪ್ರಾಣನಿಕ + ಗಂಧಾದ್ವಿಪ್ರಾಣನಿಕ.

ಹೀಗೆ ತಯಾರಾದ ಯಶದಪ್ರಾಣನಿಕವನ್ನು ಮೊದಲಿನಂತೆ ಕಲ್ಲೆದ್ದಲು ಮಿಶ್ರಮಾಡಿ ಜಾರಣಪಾಕಕ್ಕೆ ಹಾಕಿ ಯಶದವನ್ನೂ ಸಂಗ್ರಹಿಸುವರು.—

ಆದರೆ ಯಶದ ಗಂಧಕಿಕವನ್ನು ಸುಡೋಣಗರಲ್ಲಿ ಅನುಭವವು ಬೇಕಾಗಿರುವದು ಯಶದ ಗಂಧಕಿಕ ಪ್ರಾಣನಸೊಡನೆ ಸೇರಿ ಯಶದ ಗಂಧಕೇತವಾಗಿಯೂ zinc Sulphate ಪರಿಣಮಿಸುವದು. ಈ ಗಂಧಕೇತಕ್ಕೆ ಇದ್ದಲನ್ನೂ ಸೇರಿಸಿ ಜಾರಣಪಾಕಕ್ಕೆ ಹಾಕಿದರೆ, ಯಶದ ಗಂಧಕೇತ ತಿರಿಗಿ ಯಶದ ಗಂಧಕಿಕವಾಗಿ zinc Sulphide ಪರಿಣಮಿಸುವದು. ಯಶದವು ಸ್ವಲ್ಪವೂ ಶಿಕ್ಕುವುದಿಲ್ಲ. ಆದ್ದರಿಂದ ಯಶದ ಗಂಧಕಿಕ ಯಶದ ಗಂಧಕೇತವಾಗಿ ಪರಿಣಮಿಸದೇ ಕೇವಲ ಯಶದ ಪ್ರಾಣನಿಕವಾಗಿಯೂ ಮತ್ತು ಗಂಧಕ ದ್ವಿಪ್ರಾಣನಿಕವಾಗಿಯೂ ಪರಿಣಮಿಸುವಂತೆ ನೋಡಿಕೊಳ್ಳುತ್ತಾ ಸುಡಬೇಕು.—

ಮಾರಾಟಕ್ಕೆ ಸಿದ್ಧವಾಗಿರುವ ಯಶದದಲ್ಲಿ ಇಂಗಾಲವು, ಕಬ್ಬಿಣವು ಸೀಸವು,

ಪತ್ತು ಕಾಡ್ಮಿಯಮ್ ಲೊಹವೂನು ಕೊಂಚಕೊಂಚ ಮಿಶ್ರವಾಗಿರುವುದು. ತಿರಿಗಿ ಇದನ್ನೂ ಜಾರಣಪಾಕಕ್ಕೆ ಹಾಕಿ ಸಂಗ್ರಹಿಸಿದರೂ, ಕಾಡ್ಮಿಯಮ್ ಮತ್ತು ಸೀಸ ಲೊಹಗಳು,ಯಶದೊಡನೆ ಧೂಮರೂಪವಾಗಿ ಅದರೊಡನೆಯೆ ಘನವಾಗುವವು. ಆದ್ದರಿಂದ ಶುದ್ಧವಾದ ಯಶದವನ್ನು ತಯಾರ್ಮಾಡಬೇಕಾದಲ್ಲಿ ಬೆರೆಉಪಾಯವನ್ನು ಉಸಯೊಗಿಸಬೇಕು. ಶುದ್ಧವಾದ ಯಶದವನ್ನು ಪಡೆಯಬೇಕಾದಾಗ, ಯಶದಗಂಧ ಕೇತ ಕಷಾಯಕ್ಕೆ Solution of zinc Sulphate and acid Sulphate of Sodium ಉಪ್ಪು ಸೊಡಿಯಮ್ ಇಂಗಾಲೆತವನ್ನೂ ಸೇರಿಸಿ ಕಾಸುವರು. ಯಶದ ಗಂಧಕೇತವು Zinc sulphate ಯಶದ ಇಂಗಾಲೊಕವಾಗಿ Zinc carbonate ಪರಿಣಮಿಸಿ ನೀರಿನಲ್ಲಿ ಮಷ್ಟಾಗಿ ನಿಲ್ಲುವದು. ಈ ಮಷ ನು ತೆಗೆದುಕೊಂಡು, ಒಣಗಿಸಿ ಸುಟ್ಟು ಯಶದ ಪ್ರಾಣನಿಕವನ್ನು ಮಾಡಿಕೊಂಡು, ಅದಕ್ಕೆ ಶುದ್ಧವಾದ ಇಂಗಾಲ ಮಿಶ್ರಮಾಡಿ, ಜಾರಣಪಾಕಕ್ಕೆ ಕೊಟ್ಟು, ಶುದ್ಧವಾದ ಯಶದವನ್ನು ಸಂಗ್ರಹಿಸುವರು.

ಯಶದ ಗುಣಗಳು.—ಇದು ಕೊಂಚ ನೀಲವಾಗಿಯೂ ಮತ್ತು ಬೆಳ್ಳಗಾಗಿಯೂ ಇರುವ ಲೋಹವು 100 ರಿಂದ 150 ಡಿಗ್ರಿವರಿಗೂ ಇದನ್ನು ಕಾಸಿದರೆ, ಹೊಳುವಾದ ತಟ್ಟೆಗಳನ್ನಾ ಮತ್ತು ತಂತಿಯನ್ನೂ ಮಾಡುವದಕ್ಕನುಕೂಲಿಸುವಷ್ಟು ಮೃದುವಾಗುವದು. 300 ಡಿಗ್ರಿವರಿಗೂ ಕಾಸಿದರೆ, ಇದು ಒರಟಾಗುವುದು. ಇದನ್ನು ಈ ಕಾವಿನಲ್ಲಿ ಒರಳಿಗೆ ಹಾಕಿ ಕುಟ್ಟಿ ಪುಡಿಮಾಡಬಹುದು. ಯಶದೊಡನೆ ಕೊಂಚ ಸೀಸವನ್ನು ಮಿಶ್ರಮಾಡಿ ಕಾಸಿದರೆ, 100 ಡಿಗ್ರಿ ಉಷ್ಣದಲ್ಲಿಯೆ ಇದನ್ನು ಬಹುಸುಲಭವಾಗಿ ತಟ್ಟೆ ತಂತಿಗಳಾಗಿ ಮಾಡಬಹುದು. ಹೀಗೆ ತಟ್ಟೆಯಾಗಿಯಾಗಲೀ ಅಥವಾ ತಂತಿಗಳಂತೆಯಾಗಲೀ ತಯಾರಾದ ಯಶದವು ಆರಿದಮೇಲೆ ಒರಟಾಗದೆ ಮೃದುವಾಗಿಯೇ ಇರುವುದು. 420 ಡಿಗ್ರಿವರಿಗೂ ಕಾಸಿದರೆ ಯಶದವು ದ್ರವರೂಪವಾಗುವುದು. ಇನ್ನೂ ಹೆಚ್ಚಾಗಿ ಕಾಸಿದರೆ, ಅದು ಹತ್ತಿಕೊಂಡು ಉರಿಯುತಾ 1000 ಡಿಗ್ರಿವರಿಗೂ ಉಷ್ಣದಲ್ಲಿ ಹೆಚ್ಚಿ ಧೂಮರೂಪವಾಗುವುದು. ಆದರೆ ಇದು ದ್ರವಿಸಿ ಉರಿಯುವಾಗ ಗಾಳಿ ಅಥವಾ ಪ್ರಾಣನ—ಇವುಗಳ ಸಂಪರ್ಕವಾದರೆ, ಯಶದವು ಪ್ರಾಣನದೊಡನೆ ಸೇರಿ ಥಳಥಳಿಸಿ ಉರಿಯುತ್ತಾ ಯಶದಪ್ರಾಣನಿತವಾಗಿ ಪರಿಣಮಿಸಿ ಬಿಳೀತುಪಟದಂತೆ ಮೃದುವಾದ ಚೂರ್ಣವಾಗುವುದು.

ಸಾಧಾರಣ ಸ್ಥಿತಿಯಲ್ಲಿ ಯಶದವು ಗಾಳಿಯಲ್ಲಿ ಬದಲಾಯಿಸದೆ ಇರುವುದು.

ಆದರೆ ಸೀತವಾದ ಗಾಳಿಯುಲ್ಲಿ ಇದು ಕೊಂಚವುಟ್ಟಿಗೆ ಮೇಲ್ಭಾಗದಲ್ಲಿ ಮಾತ್ರ ಬಣ್ಣ ಕೆಡುವುದು. ಕುದಿಯುವ ನೀರಿನಲ್ಲಿಯೂ ಯಶದವು ಬದಲಾಯಿಸದೆ ಒಂದೇ ಸಮನಾಗಿರುವುದು. ಆದರೆ ಸೋಡಿಯುಂ ಜಲಪ್ರಾಣನೀಯು ಕಷಾಯದಲ್ಲಿಯೂ Solution of Caustic Soda ಮತ್ತು ಪೊಟಾಸಿಯಂ ಜಲಪ್ರಾಣನೀಯ ಕಷಾಯದಲ್ಲಿಯೂ Solution of Caustic Potash ವಿಲಯವಾಗುವುದು. ಜಲಜನಕವು ಹೊರಗೆ ಬರುವುದು.

Caustic Potash + Zinc = Hydrogen + Zinc potassium Oxide

ಸೂ.—$_2$ಪೊಜಪ್ರ + ಯ = ಜ$_2$ + ಯಪೊ$_2$ಪ್ರ ಪೊಟಾಸಿಯುಂ ಜಲಪ್ರಾಣನೀಯು + ಯಶದ = ಜಲಜನಕ + ಯಶದಪೊಟಾಸಿಯುಂ ಪ್ರಾಣನಿಕ.

ಹೀಗೆನೆ ಸೋಡಿಯುಂ ಜಲಪ್ರಾಣನೀಯುದಲ್ಲಿಯೂ ವಿಲಯವಾಗಿ ಜಲಜನಕವನ್ನು ಹೊರಪಡಿಸುವುದು. ಶುದ್ಧವಾದ ಯಶದವು ಸಾಂದ್ರವಾದ ಶುದ್ಧಗಂಧಕಾಮ್ಲ Sulphuric acid ಅಥವಾ ಜಲಜನಕ ಕ್ಲೋರೆನಿಕಾಮ್ಲದಲ್ಲಿಯೂ Hydrocloric acid ವಿಲಯವಾಗುವುದಿಲ್ಲ. ಆದರೆ ಯಶದವು ಕೊಂಚವಾಗಿ ಇತರ ಲೋಹಗಳೊಡನೆ ಮಿಶ್ರವಾಗಿ ಅಶುದ್ಧವಾಗಿದ್ದರೂ, ಅದು ಜಲಮಿಶ್ರವಾದ ಗಂಧಕಾಮ್ಲ ಅಥವಾ ಜಲಜನಕ ಕ್ಲೊರಿನಿಕಾಮ್ಲದಲ್ಲಿಯೂ ವಿಲಯವಾಗಿ ಯಶದ ಗಂಧಕೇತವಾಗಿಯಾಗಲೀ ಅಥವಾ ಯಶದಕ್ಲೊರಿನಿಕವಾಗಿಯಾಗಲಿ ಪರಿಣಮಿಸಿ ಜಲಜನಕವನ್ನು ಹೊರಪಡಿಸುವುದು.

Zinc + Sulphuric acid = Zinc Sulphate + Hydrogen

ಸೂ.—ಯ + ಜ$_2$ಗತ್ರ = ಯಗಪ್ರ + ಜ$_2$

(1) ಯಶದ ಗಂಧಕಾಮ್ಲ ಯಶದಗಂಧಕೇತ ಜಲಜನಕ.

Zinc + Hydrocloric and = Zinc cloride + Hydrogen

(2) ಯ + $_2$ಜಕ್ಲ = ಯಕ್ಲ$_2$ + ಜ$_2$

ಯಶದ ಜಲಜನಕಕ್ಲೊರಿನಿಕ ಯಶದಕ್ಲೊರಿನಿಕ ಜಲಜಿನಕ.

ಶುದ್ಧವಾದ ಯಶದವು ಸಾಂದ್ರವಾದ ಆಮ್ಲಗಳಲ್ಲಿ ವಿಲಯವಾಗದೆ, ಅಶುದ್ಧವಾದ ಯಶದವು ಜಲಮಿಶ್ರವಾದ ಆಮ್ಲಗಳಲ್ಲಿ ವಿಲಯವಾಗುವುದಕ್ಕೂ ಅನೇಕಜನ ವಸ್ತುಶಾಸ್ತ್ರಜ್ಞರು ಅನೇಕ ವಿಧವಾದ ಕಾರಣವನ್ನು ಹೇಳಿರುವರು. ಆದರೆ

ವರ್ಕ್ ಎಂಬ ವಿದ್ವಾಂಸನು ಹೇಳುವ ಕಾರಣವನ್ನು ಸಮರ್ಪಕವಾಗಿರುವುದೆಂದು ಅನೇಕರು ಒಪ್ಪಿರುವರು. ಈ ಕಾರಣವೇನೆಂದರೆ:—ಶುದ್ಧವಾದ ಯಶದವನ್ನು ಆಮ್ಲದಲ್ಲಿ ಹಾಕಿದರೆ, ಅದು ಬಹು ಸ್ವಲ್ಪವಾಗಿ ವಿಲಯವಾಗಿ ಜಲಜನಕವನ್ನು ಹೊರಪಡಿಸುವುದು. ಈ ಜಲಜನಕವು ಯಶದದ ಮೇಲ್ಪಾದಲ್ಲಿ ಲೇಪ ಮಾಡಿದಂತೆ ಯಶದವನ್ನು ಮುಚ್ಚಿ ಆಮ್ಲ ಸಂಪರ್ಕಕ್ಕೆ ಅವಕಾಶವನ್ನು ಕೊಡುವುದಿಲ್ಲ. ಯಶದದಲ್ಲಿ ಇತರ ವಸ್ತುಗಳು ಮಾತ್ರ ಇದ್ದರೆ, ಜಲಜನಕವು ಯಶದವನ್ನು ಮುಚ್ಚಿಕೊಳ್ಳುತ್ತದೆ. ಆ ವಸ್ತುಗಳೊಡನೆ ಸೇರಿಕೊಂಡು ಯಶದವು ಆಮ್ಲ ಸಂಪರ್ಕವನ್ನು ಹೊಂದಿ ವಿಲಯವಾಗುವುದಕ್ಕೆ ಅವಕಾಶವನ್ನು ಕೊಡುವುದು. (2) ಇದಲ್ಲದೆ ಯಶದದ ಮೇಲುಭಾಗವು ನಯವಾಗಿದ್ದಲ್ಲಿ ಅದು ವಿಲಯವಾಗುವುದಿಲ್ಲ. ಅದು ಮಾತ್ರ ಅದರ ಮೇಲ್ಪಾಗಗಳಲ್ಲಿ ಒರಟೊರಟಾಗಿದ್ದರೆ, ಅದು ವಿಲಯವಾಗುವುದು. ಶುದ್ಧವಾದ ಯಶದವು ನಯವಾಗಿರುವುದು. ಅಶುದ್ಧವಾದುದು ಒರಟೊರಟಾಗಿರುವುದು. ಆದುದರಿಂದ ಅಶುದ್ಧವಾದ ಯಶದವು ಆಮ್ಲಗಳಲ್ಲಿ ವಿಲಯವಾಗುವುದೆಂದು ವೀರ್ಕ್ ವಿದ್ವಾಂಸನು ಹೇಳಿರುವನು.

ಅಶುದ್ಧವಾದ ಯಶದವನ್ನು ಕುದಿಯುವ ನೀರಿನಲ್ಲಿ ಹಾಕಿದರೆ, ಅದು ನೀರನ್ನು ವಿಭಾಗಿಸಿ ತಾನು ಯಶದಪ್ರಾಣಿಕವಾಗಿ, ಜಲಜನಕವನ್ನು ಹೊರಪಡಿಸುವುದು.

ಯಶದದ ಉಪಯೋಗಗಳು—ಕಬ್ಬಿಣದ ಸಾಮಾನುಗಳು ಗಾಳಿಯಲ್ಲಿ ಬಹು ಕಾಲವಿದ್ದಲ್ಲಿ ಉಕ್ಕುಹಿಡಿದು ಹೋಗುವುದು ಎಲ್ಲರಿಗೂ ಗೊತ್ತಿರುವುದು. ಉಕ್ಕು ಹಿಡಿಯುವುದೆಂದರೆ ಕಬ್ಬಿಣಪ್ರಾಣಿಕವಾಗಿಯೂ Iron oxide ಮತ್ತು ಕಬ್ಬಿಣ ಗಂಧಕಿಕವಾಗಿಯೂ Iron Sulphide ಪರಿಣಮಿಸುವುದು. ಮನೆಗಳಮೇಲೆ ಹೊದಿಸಬೇಕಾದ ಕಬ್ಬಿಣದ ತಗಡುಗಳೂ, ಮತ್ತು ಬೇಲಿಯಂತೆ ಉಪಯೋಗಿಸುವ ಕಬ್ಬಿಣಸರಪಣಿ ಮತ್ತು ಕಬ್ಬಿಣದೊಣ್ಣೆಗಳನ್ನು ಉಕ್ಕು ಹಿಡಿಯುವುದನ್ನು ತಪ್ಪಿಸುವುದಕ್ಕೆ ಅವುಗಳಿಗೆ ಯಶದ ಲೇಪವನ್ನು ಕೊಡುವರು. ಅಗಲವಾದ ಬಾನಿಗಳಲ್ಲಿ ಯಶದವನ್ನು ದ್ರವಮಾಡಿ, ಈ ದ್ರವದಲ್ಲಿ ಕಬ್ಬಿಣಸಾಮಾನುಗಳನ್ನು ಅದ್ದುವರು. ಅದರಿಂದ ಯಶದವು ಕಬ್ಬಿಣದ ಮೇಲೆಲ್ಲಾ ಕಲಾಯು ಮಾಡಿದಂತೆ ಲೇಪವಾಗಿ ನಿಲ್ಲುವುದು. ಹೀಗೆ ಯಶದ ಲೇಪವನ್ನು ಕೊಟ್ಟು ತಯಾರಾದ ಕಬ್ಬಿಣದ ತಗಡು ಮೊದಲಾದುವುಗಳು ಗಾಳಿಯಲ್ಲಿ ಹುಂಗದೆ ನಿಲ್ಲುವುವು.

ಯಶದವನ್ನು ತಾಮ್ರದೊಡನೆ ಮಿಶ್ರಮಾಡಿ ನಾನಾವಿಧವಾದ ಹಿತ್ತಾಳೆಯನ್ನು ಮಾಡುವರು. ಹಿತ್ತಾಳೆಯ ಉಪಯೋಗವು ಎಲ್ಲರಿಗೂ ಗೊತ್ತಿರುವುದು. ಹಿತ್ತಾಳೆಯಿಂದ ನಾನಾವಿಧವಾದ ಪಾತ್ರೆಗಳನ್ನು ಮಾಡಿ ಉಡಿಗೆ ಮಾಡುವುದಕ್ಕುಪಯೋಗಿಸುವರು. ತವರ, ತಾಮ್ರ, ಆಂಟಿಮನಿಗಳನ್ನು ಯಶದದೊಡನೆ ಅನೇಕ ವಿಧವಾಗಿ ಮಿಶ್ರ ಮಾಡಬಹುದು. ಮಿಶ್ರವಾಗುವ ಲೋಹಗಳು ಇಷ್ಟಿಷ್ಟೇ ಭಾಗಗಳಾಗಿರಬೇಕೆಂಬ ನಿಯಮವಿರುವುದಿಲ್ಲ. ನಮ್ಮ ಮನಸ್ಸಿಗೆ ಬಂದಂತೆ ಮಿಶ್ರವನ್ನು ತಯಾರ್ಮಾಡಬಹುದು. ಆದರೆ, ಸೀಸವನ್ನಾಗಲಿ, ಅಥವಾ ಬಿಸ್ಮತ್ Bismuth ಎಂಬ ಲೋಹವನ್ನಾಗಲೀ ಯಶದದೊಡನೆ ನಮ್ಮ ಮನಸ್ಸು ಬಂದಂತೆ ಸೇರಿಸಲಾಗುವುದಿಲ್ಲ. ನಮಗೆ ಬೇಕಾದರೆ ಸೀಸಯಶದಗಳನ್ನು ಮಿಶ್ರಮಾಡಿ, ದ್ರವ ಮಾಡಿದರೂ ಮಿಶ್ರವು ಆರಿದಮೇಲೆ ಮಿಶ್ರವು ವಿಭಾಗವಾಗಿ ಮೇಲ್ಭಾಗದಲ್ಲಿ ಯಶದವು ತಳದಲ್ಲಿ ಸೀಸವು ನಿಲ್ಲುವುವು.

ಆದರೆ ಹೀಗೆ ಮೇಲೆ ನಿಂತಿರುವ ಯಶದದೊಡನೆ ಶೇಕಡಾ 1·2 ರಷ್ಟು ಸೀಸವು ಸಂಯೋಗವಾಗಿರುವುದು. ಕೆಳಭಾಗದಲ್ಲಿರುವ ಸೀಸದೊಡನೆ ಶೇಕಡಾ 1·6 ರಷ್ಟು ಯಶದವು ಸಂಯೋಗವಾಗಿರುವುದು. ಹೆಚ್ಚಾದ ಭಾಗಗಳು ಆರಿದಮೇಲೆ ಬೇರೆ ಬೇರೆಯಾಗುವುದರಿಂದಲೇ ಸೀಸಧಾತುಗಳಲ್ಲಿರುವ ರಜತವನ್ನು ಯಶದದ ಉಪಯೋಗದಿಂದ ಸುಲಭವಾಗಿ ಸಂಗ್ರಹಿಸಬಹುದು. ಈ ವಿಷಯವು ರಜತಸಂಗ್ರಹ ಮಾಡುವ ಕ್ರಮದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿರುವುದು.

ಜರ್ಮನ್ ಸಿಲ್ವರ್ ಎಂದು ಕರೆಯಲ್ಪಟ್ಟ ವಸ್ತುವು ತಾಮ್ರ, ನಿಕಲ್, ಯಶದ ಲೋಹಿಗಳ ಮಿಶ್ರವಾಗಿರುವುದು. 9½ ಭಾಗ ತಾಮ್ರ, ½ ಭಾಗ ತವರ, 1 ಭಾಗ ಯಶದಗಳ ಮಿಶ್ರದಿಂದ ಕಂಚೆಂಬ ವಸ್ತುವು ಉಂಟಾಗಿರುವುದು. ಕಂಚಿನಲ್ಲಿ 100 ಭಾಗದಲ್ಲಿ 1 ಭಾಗದಷ್ಟು ಕಮ್ಮಿಯಾಗಿ ಯಶದವನ್ನು ಮಿಶ್ರಮಾಡಿರುವುದರಿಂದ ಕಂಚು ಗಟ್ಟಿಯಾಗಿಯೂ ಮತ್ತು ಸ್ಥಿರವಾಗಿಯೂ ನಿಲ್ಲುವುದು.

ಯಶದಪ್ರಾಣನಿಕ:—ಯಪ್ಸ Zinc oxide ಇದು ಸ್ವತಸ್ಸಿದ್ಧವಾಗಿಯೇ ಸಿಕ್ಕುವುದು. ಸ್ವತಸ್ಸಿದ್ಧವಾದ ಯಶದಪ್ರಾಣನಿಕವು ಮಾಂಗನೀಸೇ ಲೋಹದೊಡನೆ Manganese ಮಿಶ್ರವಾಗಿರುವುದರಿಂದ, ಅದು ಕೆಂಪಾಗಿರುವುದು. ಯಶದವನ್ನು ಗಾಳಿಯಲ್ಲಿ ಉರಿಸಿ, ಯಶದಪ್ರಾಣನಿಕವನ್ನು ಸುಲಭವಾಗಿ ತಯಾರ್ಮಾಡಬಹುದು.

(ಸಶೇಷ)

* ವಿದ್ಯಾದಾಯಿನಿ. *

ಭಾಗ ೧೫.] ಜೂನ್—೧೯೦೬. [ಸಂಚಿಕೆ ೬.

ಕರ್ನಾಟಕ ವಿದ್ಯಾವರ್ಧಕ ಸಂಘ. ಧಾರವಾಡ.

ಈ ವರ್ಷ ಈ ಸಂಘದ ವಾರ್ಷಿಕ ಪರೀಕ್ಷೆಗಳು ಮೆ ॥ ತಾರೀಖು 26 ರಲ್ಲಿ ನಡೆದವು. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ 27 ನೇ ತಾರೀಖಿನಲ್ಲಿ ಬಹುಮಾನಗಳು ಕೊಡಲ್ಪಟ್ಟವು. ಈ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ನಾನಾ ಕಡೆಗಳಿಂದ ಬಂದಿದ್ದರು. ಪರೀಕ್ಷೆಯಲ್ಲಿ ನಾಲ್ಕು ತರಗತಿಗಳು ಏರ್ಪಟ್ಟಿದ್ದವು. ಪ್ರತಿಯೊಂದು ತರಗತಿಯಲ್ಲೂ ಕೆಲವು ಮಂದಿ ವಿದ್ಯಾರ್ಥಿಗಳಿದ್ದರು. ಪರೀಕ್ಷೆ ಕೊಡುವುದಕ್ಕಾಗಿ ಪಂಪರಾಮಾಯಣ, ಕನ್ನಡ ಮಹಾಭಾರತ, ಅಜನೃಪ ಚರಿತೆ ಮುಂತಾದ ಪದ್ಯಗ್ರಂಥಗಳನ್ನು, ಮಾಳವಿಕಾಗ್ನಿಮಿತ್ರ, ಮೃಚ್ಛಕಟಿಕ ಮುಂತಾದ ನಾಟಕಗಳನ್ನೂ, ಪೇಷ್ವೆ ಇತಿಹಾಸ, ಬಾಲಮಿತ್ರ ಮುಂತಾದ ವಚನಗ್ರಂಥಗಳನ್ನೂ, ಶಬ್ದಮಣಿದರ್ಪಣ, ಕೈಪಿಡಿ ಮುಂತಾದ ವ್ಯಾಕರಣ ಗ್ರಂಥಗಳನ್ನೂ ಇಟ್ಟಿದ್ದರು. ಈ ಪರೀಕ್ಷೆಗಳನ್ನು ನಡೆಸಲು ನಮ್ಮ ಶ್ರೀಮನ್ಮಹಾರಾಜರವರ ಸರ್ಕಾರದಿಂದ ನಾರ್ಮಲ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ವ.॥ ರಾ॥ ವೆಂಕಟಸುಬ್ಬಯ್ಯನವರನ್ನೂ, ಅದೇ ಸ್ಕೂಲಿನಲ್ಲಿ ಕನ್ನಡ ಪಂಡಿತರಾದ ಮ॥ ರಾ॥ ತಿಮ್ಮಪ್ಪಯ್ಯ ಶಾಸ್ತ್ರಿಗಳನ್ನೂ, ಕಳುಹಿಸಿದ್ದರು. ಇವರು ಪ್ರಶ್ನೆ ಪತ್ರಿಕೆಗಳನ್ನು ಇಲ್ಲಿಂದ ಸಿದ್ಧಪಡಿಸಿಕೊಂಡು ಹೋಗಿ ಅಲ್ಲಿ ನಿದಾರ್ಥಿಗಳನ್ನು ಪರೀಕ್ಷಿಸಿ ಬಹುಮಾನಕ್ಕೆ ಇಂಥವರು ಯೋಗ್ಯರೆಂಬುದನ್ನು ಗೊತ್ತುಮಾಡಿದರು. ಮೇಲಾಗಿ ಸೇವಾವೃತ್ತಿಗಿಂತಲೂ ಸ್ವಾತಂತ್ರ್ಯವೇ ಉತ್ತಮವಾದುದು ಎಂಬ ವಿಷಯದಲ್ಲೂ, ಪ್ರಭುಲಿಂಗಲೀಲೆ ಯೆಂಬ ವೇದಾಂತ ಗ್ರಂಥದ ವಿಷಯದಲ್ಲೂ ಕೆಲವು ಮಂದಿ ವಿದ್ಯಾರ್ಥಿಗಳು ಉಪನ್ಯಾಸ ಮಾಡಿದವರಲ್ಲಿ ಯಾರು ಬಹುಮಾನಕ್ಕೆ ಅರ್ಹರು ಎಂಬುದನ್ನೂ ಇವ

ರೇ ಗೊತ್ತು ಮಾಡಿದರು. ಅನಂತರ ಬರವಣಿಗೆಯು ಪರೀಕ್ಷೆಯಲ್ಲೂ, ಉಪನ್ಯಾಸ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿದವರಿಗೆ ಬಹುಮಾನ ಕೊಡಲು ನೆರೆದಿದ್ದ ಸಭೆಯಲ್ಲಿ ಮ॥ ರಾ॥ ವೆಂಕಟ ಸುಬ್ಬಯ್ಯನವರು, ಮ॥ ರಾ॥ ತಿಮ್ಮಪ್ಪಯ್ಯಶಾಸ್ತ್ರಿಗಳು ಇವರಿಬ್ಬರೂ ಕನ್ನಡ ಭಾಷಾಭಿವೃದ್ಧಿಯ ವಿಷಯದಲ್ಲಿ ಉಪನ್ಯಾಸ ಮಾಡಿದರು.

ಮ॥ ರಾ॥ ವೆಂಕಟ ಸುಬ್ಬಯ್ಯನವರು ಕನ್ನಡ ಭಾಷೆಯ ಈಗಿನ ಸ್ಥಿತಿಯನ್ನು ಕುರಿತು ಅಂದರೆ ಅದು ಎಷ್ಟರಮಟ್ಟಿಗೆ ವೃದ್ಧಿ ಹೊಂದಿರುವುದು, ಇನ್ನೂ ಯಾವ ಭಾಗದಲ್ಲಿ ವೃದ್ಧಿ ಹೊಂದಲು ಅವಕಾಶವಿರುವುದು, ಇದಕ್ಕಾಗಿ ಈಗ ನಡೆಯುತ್ತಿರುವ ಪ್ರಯತ್ನಗಳೇನು, ಮತ್ತಾವ ಪ್ರಯತ್ನಗಳು ಅವಶ್ಯಕವೆಂಬ ಅಂಶಗಳನ್ನು ಕುರಿತು ಉಪನ್ಯಾಸ ಮಾಡಿದರು. ಈ ಸಂದರ್ಭದಲ್ಲಿ ಕರ್ಣಾಟಕ ವಿದ್ಯಾವರ್ಧಕ ಸಂಘದವರು ಕಟ್ಟಡ ವಿದ್ಯೆಯ ಪ್ರೋತ್ಸಾಹಕ್ಕಾಗಿ ವರ್ಷ ವರ್ಷ ಕನ್ನಡ ಗ್ರಂಥಗಳಲ್ಲಿ ಪರೀಕ್ಷೆಯನ್ನು ಏರ್ಪಡಿಸಿ ತೇರ್ಗಡೆ ಹೊಂದಿದವರಿಗೆ ಬಹುಮಾನ ಕೊಡುವುದು, ವಾಗ್ಭೂಷಣವೆಂಬ ಮಾಸಪತ್ರಿಕೆಯನ್ನು ಅಚ್ಚು ಹಾಕಿಸಿ ಪ್ರಚಾರ ಪಡಿಸುವುದು, ನಮ್ಮ ಶ್ರೀಮನ್ಮಹಾರಾಜರವರ ಸರ್ಕಾರದವರು ಕನ್ನಡದಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕೆ ನಾರ್ಮಲ್ ಸ್ಕೂಲಿನಲ್ಲಿ ಅವಕಾಶವನ್ನು ಕಲ್ಪಿಸಿರುವುದು, ಮತ್ತು ಇಂಥವರ ಯೋಗ್ಯತೆಯನ್ನು ಪರೀಕ್ಷಿಸಲು ಕನ್ನಡ ಪಂಡಿತ ಪರೀಕ್ಷೆಯನ್ನಿಟ್ಟಿರುವುದು, ಓರಿಯಂಟಲ್ ಲೈಬ್ರೆರಿ ಯೆಂಬ ಪುಸ್ತಕಾಲಯವನ್ನು ಏರ್ಪಡಿಸಿ ಅದರಲ್ಲಿ ಅನೇಕ ಕನ್ನಡ ಗ್ರಂಥಗಳನ್ನು ಅಚ್ಚು ಹಾಕಿಸಿ ಪ್ರಚಾರಪಡಿಸುತ್ತಿರುವುದು, ಹೀಗೆಯೆ ಕಾವ್ಯಕಲಾನಿಧಿಯವರೂ, ಕರ್ಣಾಟಕ ಗ್ರಂಥಮಾಲೆಯವರೂ ಅನೇಕ ಕನ್ನಡ ಗ್ರಂಥಗಳನ್ನು ಅಚ್ಚು ಹಾಕಿ ಪ್ರಚಾರ ಪಡಿಸುತ್ತಿರುವುದು ಮುಂತಾದ ಅಂಶಗಳನ್ನು ಸೂಚಿಸಿದರು. ಇಷ್ಟು ಪ್ರಯತ್ನಗಳು ನಡೆಯುತಿದ್ದರೂ ಕನ್ನಡ ಭಾಷೆಯು ಹೀನಸ್ಥಿತಿಯಲ್ಲಿರುವುದಕ್ಕೆ ಕನ್ನಡಿಗರೆಲ್ಲರೂ ದೂರದೂರವಾದ ಪ್ರದೇಶಗಳಲ್ಲಿದ್ದು ಬೇರೆಬೇರೆ ಸರ್ಕಾರಕ್ಕೆ ಸೇರಿರುವುದೇ ಕಾರಣವೆಂದು ತಿಳಿಸಿದರು. ಹೀಗಿರುವುದರಿಂದ ಇವರೆಲ್ಲರೂ ಒಂದೆ ಸ್ಥಳದಲ್ಲಿ ಕೂಡುವ ಸಂಭವಗಳು ಕಡಿಮೆಯಾಗಿರುವವು ಮತ್ತು ಇವರಿಗೆ ನಾವೆಲ್ಲರೂ ಒಂದೇ ಭಾಷೆಯನ್ನಾಡುವ ಒಂದೇ ಪಿಧವಾದ ಜನಗಳು, ನಾವೆಲ್ಲರೂ ಏಕೀ ಭವಿಸಿ ಕನ್ನಡ ಭಾಷೆಯು ಏಳಿಗೆಗೆ ಯತ್ನಿಸಬೇಕು ಇವೇ ಮುಂತಾದ ಅಭಿಪ್ರಾಯಗಳು ಕನ್ನಡಿಗರಲ್ಲಿ ಬಹಳ ಕಡಿಮೆಯಾಗಿರುವುದನ್ನು ಸೂಚಿಸಿದರು. ಮೇಲಾಗಿ ಕನ್ನಡಿಗರೆಲ್ಲರೂ ದೂರದೂರವಾದ ಪ್ರದೇಶಗಳಲ್ಲಿರುವುದ

ರಿಂಗ ಅವರ ಭಾಷೆಯಲ್ಲೂ ನಡೆನುಡಿಯಲ್ಲೂ ಅನೇಕ ವ್ಯತ್ಯಾಸಗಳುಂಟಾಗಿರುವುದನ್ನು ಸೂಚಿಸಿದರು. ಉತ್ತರ ಭಾಗದಲ್ಲಿರುವವರು ವಿಶೇಷವಾಗಿ ಮಹಾರಾಷ್ಟ್ರ ದೇಶದವರ ಪದ್ಧತಿಯನ್ನು ಅನುಸರಿಸಿರುವರೆಂತಲೂ ಮತ್ತು ಅವರ ಕನ್ನಡದಲ್ಲಿ ಅನೇಕ ಮಹಾರಾಷ್ಟ್ರ ಶಬ್ದಗಳು ಸೇರಿರುವವೆಂತಲೂ ದಕ್ಷಿಣ, ಪೂರ್ವಭಾಗದಲ್ಲಿರುವವರು ತಮಿಳು ದೇಶದವರ ಪದ್ಧತಿಯನ್ನು ವಿಶೇಷ ಅನುಸರಿಸಿ ತಮ್ಮ ಕನ್ನಡದಲ್ಲಿ ಅನೇಕ ತಮಿಳು ಶಬ್ದಗಳನ್ನು ಸೇರಿಸಿಕೊಂಡಿರುವರೆಂತಲೂ ತಿಳಿಸಿದರು. ಹೀಗೆ ಕನ್ನಡ ಭಾಷೆಯು ಒಂದೊಂದು ಭಾಗದಲ್ಲಿ ಒಂದೊಂದು ವಿಧವಾಗಿರುವುದರಿಂದ ಕನ್ನಡಿಗರೆಲ್ಲರೂ ಪರಸ್ಪರ ಅಭಿಪ್ರಾಯಗಳನ್ನು ತಿಳಿಸಿ ತಿಳಿದುಕೊಳ್ಳಲು ತೊಂದರೆಗಳುಂಟಾಗಿರುವುದನ್ನು ಸೂಚಿಸಿದರು. ಒಂದು ಭಾಗದಲ್ಲಿರುವವರು ಇನ್ನೊಂದು ಭಾಗದಲ್ಲಿರುವವರು ರಚಿಸಿರುವ ಗ್ರಂಥಗಳನ್ನು ಓದಲು ತೊಂದರೆಗಳುಂಟಾಗಿರುವುದನ್ನು ತಿಳಿಸಿದರು. ಈ ಕೊರತೆಗಳನ್ನೆಲ್ಲ ಹೋಗಲಾಡಿಸಲು ಕನ್ನಡ ಭಾಷೆಯನ್ನು ಬರೆವಣಿಗೆಯಲ್ಲಾದರೂ ಕನ್ನಡ ರಾಜ್ಯದ ಎಲ್ಲಾಭಾಗದಲ್ಲೂ ಏಕೀಕರಿಸುವುದು ಆವಶ್ಯಕವೆಂಬುದನ್ನು ಸೂಚಿಸಿದರು. ಆದರೆ ಕನ್ನಡಿಗರೆಲ್ಲರೂ ಒಂದೇ ಸರ್ಕಾರಕ್ಕೆ ಸೇರಿದಲ್ಲದೆ ಭಾಷೆಯು ಎಲ್ಲಾಕಡೆಯಲ್ಲೂ ಒಂದು ವಿಧವಾಗಿ ಪರಿಣಮಿಸುವುದು ಅಸಾಧ್ಯವೆಂದು ಅನೇಕರು ಹೇಳವರು. ಆದರೆ ಕನ್ನಡಿಗರೆಲ್ಲರೂ ಒಂದೇ ಸರ್ಕಾರಕ್ಕೆ ಸೇರುವುದರಿಂದ ಅವರೆಲ್ಲರೂ ಒಂದು ಸ್ಥಳದಲ್ಲಿ ಕೂಡುವ ಸಂಭವಗಳು ಹೆಚ್ಚಿ ಭಾಷೆಯು ಎಲ್ಲಾಕಡೆಯಲ್ಲೂ ಒಂದೇವಿಧವಾಗಿ ಪರಿಣಮಿಸುವುದು ಸುಲಭಸಾಧ್ಯವಾದರೂ ಹಾಗೆ ಒಂದೇ ಸರ್ಕಾರಕ್ಕೆ ಸೇರದಿದ್ದರೂ ಭಾಷೆಯನ್ನು ಎಲ್ಲಾ ಕಡೆಯಲ್ಲೂ ಒಂದೇವಿಧವಾಗುವಂತೆ ಮಾಡುವುದು ಅಸಾಧ್ಯವೆಂದು ತಮಿಗೆ ತೋರುವುದಿಲ್ಲವೆಂದು ಮ॥ ರಾ॥ ವೆಂಕಟಸುಬ್ಬಯ್ಯನವರು ತಿಳಿಸಿದರು.

ವರ್ಷೇವರ್ಷೆ ಕನ್ನಡಿಗರೆಲ್ಲರೂ ಆದಿನ ನೆರೆದಿದ್ದಂಥ ಸಭೆಗಳಲ್ಲಿ ಸೇರಿ, ಆ ಸಭೆಗಳಿಗೆ ಕನ್ನಡ ರಾಜ್ಯದ ಎಲ್ಲಾ ಭಾಗದಿಂದಲೂ ಪಂಡಿತರನ್ನು ಬರಮಾಡಿಕೊಂಡು ಕನ್ನಡ ರಾಜ್ಯದ ಎಲ್ಲಾ ಭಾಗದಲ್ಲೂ ಉಪಯೋಗಿಸಲು ಅನುಕೂಲವಾದ ಪಾಠ ಪುಸ್ತಕಗಳನ್ನು ಮಾಡಿಸಿ ಅಂಥ ಪುಸ್ತಕಗಳನ್ನು ಎಲ್ಲಾಕಡೆಯಲ್ಲೂ ಬಾಲಕರು ಓದುವಂತೆಯೂ, ಆ ಪುಸ್ತಕಗಳ ಭಾಷೆಯಲ್ಲಿ ಬರೆಯುವಂತೆಯೂ, ಕೆಲವು ವರ್ಷ ನಡೆಸಿದರೆ ಭಾಷೆಯು ಒರವಣಿಗೆಯಲ್ಲಾದರೂ ಎಲ್ಲಾ ಕಡೆಯಲ್ಲೂ ಒಂದೇವಿಧವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲವೆಂದು ತಿಳಿಸಿದರು. ಹೀಗೆ ಭಾಷೆಯು ಏಕೀ

ಭವಿಸುವುದರಿಂದ ಕನ್ನಡಿಗರೆಲ್ಲರೂ ಪರಸ್ಪರ ಅಭಿಪ್ರಾಯಗಳನ್ನು ತಿಳಿಸಿ ತಿಳಿದು ಕೊಳ್ಳಲು ಸಹಾಯವಾಗುವುದಲ್ಲದೆ ಕನ್ನಡಿಗರಲ್ಲಿ ಐಕಮತ್ಯವು ಹೆಚ್ಚಿ ಕನ್ನಡಭಾಷಾಭಿವೃದ್ಧಿಗೆ ವಿಶೇಷ ಸಹಾಯವಾಗುವುದೆಂದು ತಿಳಿಸಿದರು.

ಅನುತರ ಮ॥ ರಾ॥ ತಿಮ್ಮಪ್ಪಯ್ಯಶಾಸ್ತ್ರಿಗಳು ಮೇಲಿನ ಅಂಶಗಳನ್ನು ಅನುಮೋದಿಸಿ ಉಪನ್ಯಾಸ ಮಾಡುವಾಗ ಧಾರ್ವಾಡದ ಕನ್ನಡಕ್ಕೂ, ಮೈಸೂರು ಕನ್ನಡಕ್ಕೂ ಇರುವ ವ್ಯತ್ಯಾಸಗಳನ್ನು ವಿಶದಪಡಿಸಿದರು. ಅನೇಕ ಶಬ್ದಗಳು ಇಲ್ಲೊಂದು ರೂಪದಲ್ಲೂ ಅಲ್ಲೊಂದು ರೂಪದಲ್ಲೂ ಇವೆ. ಉದಾಹರಣೆ— ಸೊಂಟ, ಟೊಂಕ; ಅನೇಕ ಶಬ್ದಗಳು ಇಲ್ಲೊಂದು ಅರ್ಥದಲ್ಲೂ ಅಲ್ಲೊಂದು ಅರ್ಥದಲ್ಲೂ ಉಪಯೋಗಿಸಲ್ಪಡುವವು. ಉದಾಹರಣೆ— ಸಾಧಾರಣವಾಗಿ ಉಡುವ ಒಟ್ಟಿಯನ್ನು ನಾವು ಪಂಚೆಯೆಂದು ಹೇಳುವೆವು. ಅವರು ಸ್ನಾನಮಾಡುವಾಗ ಉಟ್ಟುಕೊಳ್ಳುವ ಸಣ್ಣ ಒಟ್ಟಿಯನ್ನು ಪಂಚೆಯೆಂದು ಕರೆಯುವರು. ಶಬ್ದಗಳಿಗೆ ಪ್ರತ್ಯಯಗಳನ್ನು ಸೇರಿಸುವಾಗ ಇಲ್ಲೊಂದು ವಿಧವಾದ ಆಗಮವು ಬಂದರೆ ಅಲ್ಲೊಂದು ವಿಧವಾದದ್ದು ಬರುವುದು. ಉದಾಹರಣೆ—ಸ್ತ್ರೀ ಅನ್ನುವ ಶಬ್ದದ ಪ್ರಥಮೈಕವಚನವು ನಮ್ಮಲ್ಲಿ ' ಸ್ತ್ರೀಯು ' ಎಂಬುದು ಅವರಲ್ಲಿ ' ಸ್ತ್ರೀಯಳು ' ಎಂಬುದು; ಅನ್ಯದೇಶದ ಶಬ್ದಗಳನ್ನು ಕನ್ನಡದಲ್ಲಿ ಉಪಯೋಗಿಸುವಾಗ ನಾವು ಒಂದು ಪ್ರತ್ಯಯವನ್ನು ಸೇರಿಸಿದರೆ ಅವರೊಂದು ಪ್ರತ್ಯಯವನ್ನು ಸೇರಿಸುವರು. ಉದಾಹರಣೆ—' ಕಾಲೇಜು ' ಎಂಬ ಇಂಗ್ಲೀಷ್ ಮಾತನ್ನು ಕನ್ನಡದಲ್ಲಿ ಉಪಯೋಗಿಸಿ ಷಷ್ಠ್ಯೈಕವಚನ ಮಾಡುವಾಗ ನಾವು ' ಕಾಲೇಜಿನ ' ಎಂದು ಹೇಳುವೆವು. ಅವರು ' ಕಾಲೇಜದ ' ಎಂದು ಹೇಳುವರು. ನಾವು ಪಂಚಮ್ಯಾವಿಭಕ್ತಿಯ ಪ್ರತ್ಯಯವಾದ ' ದೆಸೆಯಿಂದ ' ಎಂಬುದನ್ನು ಉಪಯೋಗಿಸುವ ಸ್ಥಳದಲ್ಲಿ ಅವರು ತೃತೀಯಾ ವಿಭಕ್ತಿ ಪ್ರತ್ಯಯವಾದ ' ಇಂದ ' ಎಂಬುದನ್ನು ಉಪಯೋಗಿಸುವರು. ಉದಾಹರಣೆ—' ಮರದದೆಸೆಯಿಂದ ಎಲೆಗಳು ಉದುರಿದವು ' ಎಂದು ನಾವು ಹೇಳುವ ಸ್ಥಳದಲ್ಲಿ ಅವರು ಮರದಿಂದ ಎಲೆಗಳು ಉದುರಿದವು ಎಂದು ಹೇಳುವರು. ಇರು ಧಾತುವಿನಿಂದ ಹುಟ್ಟಿದ ಇದೆ, ಇವೆ ಎಂಬ ರೂಪಗಳನ್ನು ಉಪಯೋಗಿಸುವ ಸ್ಥಳದಲ್ಲಿ ಅವರು ಅದೆ, ಅವೆ ಎಂಬ ರೂಪಗಳನ್ನು ಉಪಯೋಗಿಸುವರು. ಉದಾಹರಣೆ—ಆ ಮಾತು ನಿಶ್ಚಯವಾಗಿ ಇದೆ ಎಂದು ನಾವು ಹೇಳುವ ಸ್ಥಳದಲ್ಲಿ ಅವರು ಆ ಮಾತು ನಿಶ್ಚಯವದೆ ಎಂದು ಹೇಳುವರು. ಈ ವಿಧವಾದ

ವ್ಯತ್ಯಾಸಗಳನ್ನೆಲ್ಲಾ ಹೋಗಲಾಡಿಸಿದರೆ ಮು॥ ರಾ॥ ವೆಂಕಟಸುಬ್ಬಿಶಯ್ಯನವರು ಹೇಳುವಂತೆ ಕನ್ನಡಭಾಷೆಯು ಎಲ್ಲಾ ಕಡೆಯಲ್ಲೂ ಒಂದೇವಿಧವಾಗಿ ಪರಿಣಮಿಸಿ ಭಾಷಾಭಿವೃದ್ಧಿಯಾಗಲು ಅನುಕೂಲವಾಗುವುದೆಂದು ಮು॥ ರಾ॥ ತಿಮ್ಮಪ್ಪಯ್ಯ ಶಾಸ್ತ್ರಿಗಳು ತಿಳಿಸಿದರು.

ಅನಂತರ ಅಲ್ಲಿದ್ದ ಸಭಿಕರಲ್ಲಿ ಇನ್ನೂ ಕೆಲವರು ಇದೇ ಅಭಿಪ್ರಾಯವನ್ನು ಅನುಮೋದಿಸಿ ಉಪನ್ಯಾಸ ಮಾಡಿದರು. ಮೈಸೂರು ಸರ್ಕಾರದವರು, ಬೊಂಬಾಯಿ ಸರ್ಕಾರದವರು ಈ ವಿಷಯದಲ್ಲಿ ಪ್ರಯತ್ನಪಟ್ಟರೆ ನಾವು ನಮ್ಮ ಕೈಲಾದಷ್ಟು ಸಹಾಯ ಮಾಡುತ್ತೇವೆಂದು ಸಂಘದವರು ತಿಳಿಸಿದರು.

ಅನಂತರ ಎಲ್ಲರಿಗೂ ಪುಷ್ಪ ತಾಂಬೂಲಾದಿ ಮರ್ಯಾದೆಗಳನ್ನು ನಡೆಸಿ ಆ ದಿವಸದ ಸಭೆಯನ್ನು ಮುಗಿಸಿದರು.

ಪಾಠಕವೃತ್ತಿ.

ಬಿ. ಎ. ಪರೀಕ್ಷೆಯನ್ನು ಕೊಟ್ಟವರು ಪಾಠಕರಾಗುವುದಕ್ಕೆ ಯಾವ ಶಿಕ್ಷೆಯನ್ನು ಹೊಂದಬೇಕೋ ಅಂಥಾ ಶಿಕ್ಷೆಯನ್ನು ಹೊಂದುವುದೂ ಕೂಡ ಅಗೌರವವೆಂದು ಭಾವಿಸಲ್ಪಟ್ಟಿತ್ತು. ಬಿ. ಎ. ಪರೀಕ್ಷೆಯನ್ನು ಕೊಟ್ಟಮಾತ್ರದಿಂದಲೇ ಪಾಠಕರಾಗುವುದಕ್ಕೆ ತಕ್ಕ ಯೋಗ್ಯತೆಯು ಉಂಟಾಗುವುದೆಂಬ ಯೋಚನೆಯು ಹುಟ್ಟಿತ್ತು. ಈಗ ಈ ಪ್ರತ್ಯಯವು ಸ್ವಲ್ಪಮಟ್ಟಿಗೆ ಕಡಮೆಯಾಗುತ್ತಲಿದೆ. ಪರೀಕ್ಷೆಯನ್ನು ಕೊಟ್ಟಮಾತ್ರದಿಂದಲೇ ಪಾಠಕರಾಗುವುದಕ್ಕೆ ತಕ್ಕ ಯೋಗ್ಯತೆಯು ಉಂಟಾಗುವುದೆಂಬ ಅಭಿಪ್ರಾಯವು ಕಡಿಮೆಯಾಗುತ್ತಲಿದೆ. ಪರೀಕ್ಷೆಯನ್ನು ಕೊಟ್ಟರೂ ಕೂಡ ಪಾಠಹೇಳುವ ಕ್ರಮವನ್ನು ತಿಳಿಯಬೇಕು. ಹಾಗಿಲ್ಲದೆ ಇದ್ದರೆ ಪಾಠಹೇಳುವುದರಲ್ಲಿ ತಕ್ಕ ಯೋಗ್ಯತೆಯು ಉಂಟಾಗುವುದಿಲ್ಲವೆಂಬ ಅಭಿಪ್ರಾಯವು ಉಂಟಾಗಿದೆ. ಇದೇ ನಿಜವಾದ ಅಭಿಪ್ರಾಯ. ಪರೀಕ್ಷೆಗಳಿಗೆ ಓದಿದ ಮಾತ್ರದಿಂದಲೇ ಪಾಠಹೇಳುವ ಕ್ರಮವು ಬರುವುದಿಲ್ಲ. ಓದಿದ ವಿಷಯಗಳನ್ನು ಸಮಗ್ರವಾಗಿ ತಿಳಿದುಕೊಂಡು ನಿಷ್ಕೃಷ್ಟವಾಗಿ ತತ್ವಾರ್ಥವನ್ನು ಗೊತ್ತುಮಾಡಿಕೊಂಡು ಅದನ್ನು ಒಂದು ಮಾರ್ಗದಲ್ಲಿ ತಿಳಿಸುವುದು ಅಸಾಧ್ಯವಾದರೆ ಸೂಕ್ತವು ಮಾರ್ಗಾಂತರಗಳಲ್ಲಿ ಬೋಧಿ

ಸುವ ಶಕ್ತಿಯನ್ನು ಹೊಂದಿದ ಹೊರತೂ ಪಾಠಕನೆಂದೆನಿಸಿಕೊಳ್ಳುವುದಕ್ಕೆ ಅರ್ಹತೆ ಯುಂಟಾಗುವುದಿಲ್ಲ.

ಪಾಠಹೇಳುವ ವೃತ್ತಿಯು ಗೌರವವಾದುದಲ್ಲವೆಂಬ ಅಭಿಪ್ರಾಯವು ಒಂದಾ ನೊಂದು ಕಾಲದಲ್ಲಿ ವಿಶೇಷವಾಗಿತ್ತು. ಈಗ ಆ ಅಭಿಪ್ರಾಯವು ಬಹಳ ಅಲ್ಪವಾ ದ ವೇತನವುಳ್ಳವರಲ್ಲಿ ಇರುವುದೇ ಹೊರತು ಜೀವನಕ್ಕೆ ಸಾಕಾಗುವಷ್ಟು ವೇತನವಿ ರುವ ಪಾಠಕರಲ್ಲಿ ಈ ಅಭಿಪ್ರಾಯವು ಕಡಿಮೆಯಾಗುತ್ತಲಿದೆ. ಉತ್ತರೋತ್ತರ ಜವಾ ಬ್ದಾರೀ ಕೆಲಸಗಳಿಗೆ ಬರತಕ್ಕ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಉಂಟುಮಾಡುವ ವೃತ್ತಿಯು ಗಂಭೀರವಾದುದೆಂಬ ಅಭಿಪ್ರಾಯವೂ ಕೂಡ ಆಚರಣೆಯಲ್ಲಿ ಬರುತ್ತಿರು ವುದು. ಬಿ. ಎ., ಎಂ. ಎ. ಪರೀಕ್ಷೆಗಳನ್ನು ಕೊಟ್ಟಮಾತ್ರದಿಂದಲೇ ಹಾಗೆ ಕೊಟ್ಟ ರತಕ್ಕವರು ಉಪಾಧ್ಯಾಯ ಪರೀಕ್ಷೆಗೆ ಅರ್ಹರೆಂದು ಹೇಳುವುದಕ್ಕೆ ಆಗುವುದಿಲ್ಲ. ಅನೇಕರು ಪರೀಕ್ಷೆಯನ್ನು ಕೊಟ್ಟು ಪಾಠಗಳನ್ನು ಹೇಳುವುದರಲ್ಲಿ ವಿಶೇಷ ಶಕ್ತಿಯು ಳ್ಳವರಾಗಿರುವುದಿಲ್ಲವೆಂಬುವುದು ಎಲ್ಲೆಲ್ಲಿಯೂ ಅನುಭವಕ್ಕೆ ಬರುತ್ತಲಿದೆ. ಯಾವ ಕಸಬಿನಲ್ಲಿ ಸಮರ್ಥರಾಗಬೇಕಾದಾಗ್ಯೂ ಆ ಕಸಬಿನ ಮರ್ಮಗಳು ತಿಳಿಯುವುದು ಅವಶ್ಯಕ. ವಿದ್ಯಾಭ್ಯಾಸ ಮಾಡಿಸತಕ್ಕುದೂ ಕೂಡ ಅತ್ಯುತ್ತಮವಾದ ಕಸಬಾಗಿ ರುವುದು. ಈ ಕೆಲಸವನ್ನು ಮಾಡುವುದಕ್ಕೆ ಚೆನ್ನಾಗಿ ಶಕ್ತಿಯು ಬರಬೇಕಾದರೆ ಅದರ ಮರ್ಮಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅನೇಕ ವಿದ್ಯಾರ್ಥಿಗಳು ಅತ್ಯುತ್ತಮವಾದ ಪರೀಕ್ಷೆಗಳನ್ನು ಕೊಡುತ್ತಾರೆ. ಅಂಥಾ ಪರೀಕ್ಷೆ ಕೊಟ್ಟವರು ಪಾಠ ಹೇಳುವುದಕ್ಕೆ ಉಪಕ್ರಮಿಸಿದರೆ ಇವರು ಹೇಳುವ ಪಾಠವು ಇವರು ಕೊಟ್ಟ ರುವ ಪರೀಕ್ಷೆಗೆ ಅನುಕೂಲವಾಗಿರುವುದಿಲ್ಲ. ಪಾಠಕರಾಗತಕ್ಕವರು ಪ್ರಥಮತಃ ಯಾರಿಗೆ ಪಾಠ ಹೇಳಬೇಕೋ ಅವರ ಗ್ರಹಣ ಶಕ್ತಿಯನ್ನು ಗೊತ್ತುಮಾಡಿಕೊಳ್ಳ ಬೇಕು. ಈ ಶಕ್ತಿಯು ಕ್ರಮಕ್ರಮವಾಗಿ ವೃದ್ಧಿಗೆ ಬರುವುದು. ಈ ಶಕ್ತಿಯು ಪ್ರಮಾಣವು ಎಷ್ಟುಮಟ್ಟಿಗಿರುವುದೋ ಅದನ್ನು ಗೊತ್ತುಮಾಡಿಕೊಂಡು ಅನುಗ್ರಹಿ ಸಬೇಕಾದರೆ ಯಾವ ರೀತಿಯಲ್ಲಿ ಹೇಳಬೇಕೋ ಆ ರೀತಿಯಲ್ಲಿ ಹೇಳಿದರೆ ಹೇಳಿದ ಪಾಠಕ್ಕೆ ಪ್ರಯೋಜನವಾಗುವುದು. ಗ್ರಹಣಶಕ್ತಿಯು ಸ್ವಲ್ಪವಿರುವವರಿಗೆ ಅವರು ತಿಳಿಯಲಸಾಧ್ಯವಾದುದನ್ನೆಲ್ಲಾ ಪಾಠ ಹೇಳಿದರೆ ಪಾಠಕರ ಶ್ರಮಕ್ಕೆ ತಕ್ಕಫಲ ಉಂ ಟಾಗುವುದಿಲ್ಲ. ಅನೇಕ ಪಾಠಕರು ಶಿಷ್ಯರು ಧಡ್ಡರೆಂದು ಹೇಳುವುದುಂಟು. ಪ್ರಾ ಯಕವಾಗಿ ಇಂಥಾ ಸಂದರ್ಭಗಳಲ್ಲಿ ಶಿಷ್ಯರು ಧಡ್ಡರಾಗಿರುವುದಿಲ್ಲ. ಪಾಠಕರೇ

ಘಡ್ಡರಾಗಿರುವರು. ಶಿಷ್ಯರ ಯೋಗ್ಯತೆಯನ್ನು ತಿಳಿದುಕೊಳ್ಳದೆ ಅವರ ಗ್ರಹಣಶಕ್ತಿಯನ್ನು ಗೊತ್ತುಮಾಡಿಕೊಳ್ಳದೆ ಅವರ ಶಕ್ತಿಗೆ ಮೀರಿದ ಪಾಠಗಳನ್ನು ಹೇಳುತ್ತಾ ಬಂದರೆ ವಿದ್ಯಾರ್ಥಿಗಳು ತಿಳಿದುಕೊಳ್ಳದೇ ಇರುವುದೇನಾಶ್ಚರ್ಯವಲ್ಲ. ಹೊಸ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಆಸಕ್ತಿಯು ಅಬಾಲವೃದ್ಧರಿಗೂ ಇರುವುದು. ಆದರೆ ಅಂಥಾ ವಿಷಯಗಳನ್ನು ಮನಸ್ಸಿಗೆ ಹತ್ತುವಂತೆ ಹೇಳತಕ್ಕ ಶಕ್ತಿಯು ಬಹಳ ಕೊಂಚಜನ ಪಾಠಕರಿಗೆ ಇರುವುದು. ಚೀಲಕ್ಕೆ ದವಸವನ್ನು ತುಂಬುವಂತೆ ಮಕ್ಕಳ ಮನಸ್ಸಿಗೆ ವಿಷಯಗಳನ್ನು ತುಂಬುವುದು ಸಾಧ್ಯವೇ? ಎಂದಿಗೂ ಸಾಧ್ಯವಲ್ಲ ಅವರಿಗೆ ತಿಳಿದುಕೊಳ್ಳಬೇಕೆಂಬ ಆಸಕ್ತಿಯನ್ನುಂಟುಮಾಡಿ ಎಷ್ಟು ತಿಳಿದುಕೊಳ್ಳುವುದಕ್ಕೆ ಅವರಿಗೆ ಶಕ್ತಿಯಿರುವುದೋ ಅಷ್ಟನ್ನು ತಿಳಿಸುತ್ತಾ ಬರಬೇಕು. ಹೆಚ್ಚಾಗಿ ತಿಳಿಸಬೇಕೆಂದು ಪ್ರಯತ್ನಿಸಿದರೆ ಮೊದಲಿಗೇ ಮೋಸಬರುವುದುಂಟು. ಎಲ್ಲರ ಶಕ್ತಿಗೂ ಒಂದು ಮಿತಿಯುಂಟು. ಈ ಮಿತಿಯನ್ನು ಮೀರಿ ಆರಂಭಿಸುವುದು ಮೊದಲಿಗೇ ಮೋಸವನ್ನುಂಟುಮಾಡುವುದು. "ಅತಿಸರ್ವತ್ರವರ್ಜಯೇತ್" ಎಂಬ ಗಾದೆಯ ತತ್ವವನ್ನು ಸಮಸ್ತರೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಪಾಠಕರು ವಿಶೇಷ ಜ್ಞಾಪಕದಲ್ಲಿಡಬೇಕು. ಪಾಠಕರಾಗತಕ್ಕವರು ಪ್ರಥಮತಃ ತಾವು ಏನನ್ನು ಹೇಳುವುದೋ ಅದನ್ನು ಸಮಗ್ರವಾಗಿ ತಿಳಿದುಕೊಂಡಿರಬೇಕು. ತಾವು ಯಾರಿಗೆ ಪಾಠವನ್ನು ಹೇಳವುದೋ ಅವರ ಗ್ರಹಣಶಕ್ತಿಯನ್ನು ಸಂಪೂರ್ಣವಾಗಿ ಗೊತ್ತುಮಾಡಿಕೊಳ್ಳಬೇಕು. ಅವರ ಗ್ರಹಣಶಕ್ತಿಗೆ ಅನುರೂಪವಾಗಿರುವಂತೆ ಮನೋಹರವಾದ ರೀತಿಯಲ್ಲಿ ಅವರಿಗೆ ಪಾಠವನ್ನು ಹೇಳಿ ಅವರಿಂದ ಹೇಳಿಸಿ ಅವರಿಗೆ ಸಮಗ್ರವಾಗಿ ತಿಳಿಯಿತೆಂಬ ಪ್ರತ್ಯಯವು ಉಂಟಾದಮೇಲೆ ಅವರಿಗೆ ಸ್ವಂತವಾಗಿ ಚಿಂತನೆ ಮಾಡಿಕೊಳ್ಳತಕ್ಕ ವಿಧಾನಗಳನ್ನು ಉಪದೇಶ ಮಾಡಿ ವ್ಯಾಸಂಗ ಮಾಡುವುದಕ್ಕೋಸ್ಕರ ಪ್ರೋತ್ಸಾಹ ಮಾಡಬೇಕು. ಈ ವಿಧವಾದ ಪ್ರೋತ್ಸಾಹದಲ್ಲಿ ಒಂದೇ ವಿಧವಾಗಿರುವುದಿಲ್ಲ. ವಿದ್ಯಾರ್ಥಿಗಳೂ, ಅವರ ವಯಸ್ಸೂ, ಅವರ ಆರೋಗ್ಯ, ಅವರ ಗ್ರಹಣಶಕ್ತಿ ಇವೇ ಮೊದಲಾದ ಅನೇಕ ಸಂದರ್ಭಗಳಿಗೆ ಅನುಸಾರವಾಗಿ ಪ್ರೋತ್ಸಾಹ ವಿಧಾನಗಳನ್ನು ಕಲ್ಪಿಸಬೇಕು. ಪರೀಕ್ಷೆಗಳನ್ನು ಕೊಟ್ಟಮಾತ್ರದಿಂದಲೇ ಈ ಗುಣಾತಿಶಯಗಳೆಲ್ಲಾ ಲಭ್ಯವಾಗುವುದಿಲ್ಲ. ಯಾವ ರೀತಿಯಲ್ಲಿ ಉಪದೇಶಗಳನ್ನು ಮಾಡಿದರೆ ವಿದ್ಯಾರ್ಥಿಗಳು ವೃದ್ಧಿಗೆ ಬರುವುದಕ್ಕೆ ಮಾರ್ಗದರ್ಶನವನ್ನು ಮಾಡುವುದೋ ಅದನ್ನು ಪರೀಕ್ಷಾನುಭವಕ್ಕೆ ತಂದುಕೊಂಡ ಹೊರತೂ ಒಳ್ಳೇ ಪಾಠ

ಸುವ ಶಕ್ತಿಯನ್ನು ಹೊಂದಿದ ಹೊರತೂ ಪಾಠಕನೆಂದೆನಿಸಿಕೊಳ್ಳುವುದಕ್ಕೆ ಅರ್ಹತೆ ಯುಂಟಾಗುವುದಿಲ್ಲ.

ಪಾಠಹೇಳುವ ವೃತ್ತಿಯು ಗೌರವವಾದುದಲ್ಲವೆಂಬ ಅಭಿಪ್ರಾಯವು ಒಂದಾ ನೊಂದು ಕಾಲದಲ್ಲಿ ವಿಶೇಷವಾಗಿತ್ತು. ಈಗ ಆ ಅಭಿಪ್ರಾಯವು ಬಹಳ ಅಲ್ಪವಾ ದ ವೇತನವುಳ್ಳವರಲ್ಲಿ ಇರುವುದೇ ಹೊರತು ಜೀವನಕ್ಕೆ ಸಾಕಾಗುವಷ್ಟು ವೇತನವಿ ರುವ ಪಾಠಕರಲ್ಲಿ ಈ ಅಭಿಪ್ರಾಯವು ಕಡಿಮೆಯಾಗುತ್ತಲಿದೆ. ಉತ್ತರೋತ್ತರ ಜವಾ ಬ್ದಾರೀ ಕೆಲಸಗಳಿಗೆ ಬರತಕ್ಕ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಉಂಟುಮಾಡುವ ವೃತ್ತಿಯು ಗಂಭೀರವಾದುದೆಂಬ ಅಭಿಪ್ರಾಯವೂ ಕೂಡ ಆಚರಣೆಯಲ್ಲಿ ಬರುತ್ತಿರು ವುದು. ಬಿ. ಎ., ಎಂ. ಎ. ಪರೀಕ್ಷೆಗಳನ್ನು ಕೊಟ್ಟಮಾತ್ರದಿಂದಲೇ ಹಾಗೆ ಕೊಟ್ಟಿ ರತಕ್ಕವರು ಉಪಾಧ್ಯಾಯ ಪರೀಕ್ಷೆಗೆ ಅರ್ಹರೆಂದು ಹೇಳುವುದಕ್ಕೆ ಆಗುವುದಿಲ್ಲ. ಅನೇಕರು ಪರೀಕ್ಷೆಯನ್ನು ಕೊಟ್ಟು ಪಾಠಗಳನ್ನು ಹೇಳುವುದರಲ್ಲಿ ವಿಶೇಷ ಶಕ್ತಿಯು ಳ್ಳವರಾಗಿರುವುದಿಲ್ಲವೆಂಬುವುದು ಎಲ್ಲೆಲ್ಲಿಯೂ ಅನುಭವಕ್ಕೆ ಬರುತ್ತಲಿದೆ. ಯಾವ ಕಸಬಿನಲ್ಲಿ ಸಮರ್ಥರಾಗಬೇಕಾದಾಗ್ಯೂ ಆ ಕಸಬಿನ ಮರ್ಮಗಳು ತಿಳಿಯುವುದು ಅವಶ್ಯಕ. ವಿದ್ಯಾಭ್ಯಾಸ ಮಾಡಿಸತಕ್ಕುದೂ ಕೂಡ ಅತ್ಯುತ್ತಮವಾದ ಕಸಬಾಗಿ ರುವುದು. ಈ ಕೆಲಸವನ್ನು ಮಾಡುವುದಕ್ಕೆ ಚೆನ್ನಾಗಿ ಶಕ್ತಿಯು ಬರಬೇಕಾದರೆ ಅದರ ಮರ್ಮಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅನೇಕ ವಿದ್ಯಾರ್ಥಿಗಳು ಅತ್ಯುತ್ತಮವಾದ ಪರೀಕ್ಷೆಗಳನ್ನು ಕೊಡುತ್ತಾರೆ. ಅಂಥಾ ಪರೀಕ್ಷೆ ಕೊಟ್ಟವರು ಪಾಠ ಹೇಳುವುದಕ್ಕೆ ಉಪಕ್ರಮಿಸಿದರೆ ಇವರು ಹೇಳುವ ಪಾಠವು ಇವರು ಕೊಟ್ಟಿ ರುವ ಪರೀಕ್ಷೆಗೆ ಅನುಕೂಲವಾಗಿರುವುದಿಲ್ಲ. ಪಾಠಕರಾಗತಕ್ಕವರು ಪ್ರಥಮತಃ ಯಾರಿಗೆ ಪಾಠ ಹೇಳಬೇಕೋ ಅವರ ಗ್ರಹಣ ಶಕ್ತಿಯನ್ನು ಗೊತ್ತುಮಾಡಿಕೊಳ್ಳ ಬೇಕು. ಈ ಶಕ್ತಿಯು ಕ್ರಮಕ್ರಮವಾಗಿ ವೃದ್ಧಿಗೆ ಬರುವುದು. ಈ ಶಕ್ತಿಯು ಪ್ರಮಾಣವು ಎಷ್ಟುಮಟ್ಟಿಗಿರುವುದೋ ಅದನ್ನು ಗೊತ್ತುಮಾಡಿಕೊಂಡು ಅನುಗ್ರಹಿ ಸಬೇಕಾದರೆ ಯಾವ ರೀತಿಯಲ್ಲಿ ಹೇಳಬೇಕೋ ಆ ರೀತಿಯಲ್ಲಿ ಹೇಳಿದರೆ ಹೇಳಿದ ಪಾಠಕ್ಕೆ ಪ್ರಯೋಜನವಾಗುವುದು. ಗ್ರಹಣಶಕ್ತಿಯು ಸ್ವಲ್ಪವಿರುವವರಿಗೆ ಅವರು ತಿಳಿಯಲಸಾಧ್ಯವಾದುದನ್ನೆಲ್ಲಾ ಪಾಠ ಹೇಳಿದರೆ ಪಾಠಕರ ಶ್ರಮಕ್ಕೆ ತಕ್ಕಫಲ ಉಂ ಟಾಗುವುದಿಲ್ಲ. ಅನೇಕ ಪಾಠಕರು ಶಿಷ್ಯರು ಧಡ್ಡರೆಂದು ಹೇಳುವುದುಂಟು. ಪ್ರಾ ಯಕವಾಗಿ ಇಂಥಾ ಸಂದರ್ಭಗಳಲ್ಲಿ ಶಿಷ್ಯರು ಧಡ್ಡರಾಗಿರುವುದಿಲ್ಲ. ಪಾಠಕರೇ

ಘಡ್ಡರಾಗಿರುವರು. ಶಿಷ್ಯರ ಯೋಗ್ಯತೆಯನ್ನು ತಿಳಿದುಕೊಳ್ಳದೆ ಅವರ ಗ್ರಹಣಶಕ್ತಿಯನ್ನು ಗೊತ್ತುಮಾಡಿಕೊಳ್ಳದೆ ಅವರ ಶಕ್ತಿಗೆ ಮೀರಿದ ಪಾಠಗಳನ್ನು ಹೇಳುತ್ತಾ ಬಂದರೆ ವಿದ್ಯಾರ್ಥಿಗಳು ತಿಳಿದುಕೊಳ್ಳದೇ ಇರುವುದೇನಾಶ್ಚರ್ಯವಲ್ಲ. ಹೊಸ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಆಸಕ್ತಿಯು ಅಬಾಲವೃದ್ಧರಿಗೂ ಇರುವುದು. ಆದರೆ ಅಂಥಾ ವಿಷಯಗಳನ್ನು ಮನಸ್ಸಿಗೆ ಹತ್ತುವಂತೆ ಹೇಳತಕ್ಕ ಶಕ್ತಿಯು ಬಹಳ ಕೊಂಚಜನ ಪಾಠಕರಿಗೆ ಇರುವುದು. ಚೀಲಕ್ಕೆ ದವಸವನ್ನು ತುಂಬುವಂತೆ ಮಕ್ಕಳ ಮನಸ್ಸಿಗೆ ವಿಷಯಗಳನ್ನು ತುಂಬುವುದು ಸಾಧ್ಯನೇ? ಎಂದಿಗೂ ಸಾಧ್ಯವಲ್ಲ ಅವರಿಗೆ ತಿಳಿದುಕೊಳ್ಳಬೇಕೆಂಬ ಆಸಕ್ತಿಯನ್ನುಂಟುಮಾಡಿ ಎಷ್ಟು ತಿಳಿದುಕೊಳ್ಳುವುದಕ್ಕೆ ಅವರಿಗೆ ಶಕ್ತಿಯಿರುವುದೋ ಅಷ್ಟನ್ನು ತಿಳಿಸುತ್ತಾ ಬರಬೇಕು. ಹೆಚ್ಚಾಗಿ ತಿಳಿಸಬೇಕೆಂದು ಪ್ರಯತ್ನಿಸಿದರೆ ಮೊದಲಿಗೇ ಮೋಸಬರುವುದುಂಟು. ಎಲ್ಲರ ಶಕ್ತಿಗೂ ಒಂದು ಮಿತಿಯುಂಟು. ಈ ಮಿತಿಯನ್ನು ಮೀರಿ ಆರಂಭಿಸುವುದು ಮೊದಲಿಗೇ ಮೋಸವನ್ನುಂಟುಮಾಡುವುದು. "ಅತಿಸರ್ವತ್ರವರ್ಜಯೇತ್" ಎಂಬ ಗಾದೆಯ ತತ್ವವನ್ನು ಸಮಸ್ತರೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಪಾಠಕರು ವಿಶೇಷ ಜ್ಞಾಪಕದಲ್ಲಿಡಬೇಕು. ಪಾಠಕರಾಗತಕ್ಕವರು ಪ್ರಥಮತಃ ತಾವು ಏನನ್ನು ಹೇಳುವುದೋ ಅದನ್ನು ಸಮಗ್ರವಾಗಿ ತಿಳಿದುಕೊಂಡಿರಬೇಕು. ತಾವು ಯಾರಿಗೆ ಪಾಠವನ್ನು ಹೇಳುವುದೋ ಅವರ ಗ್ರಹಣಶಕ್ತಿಯನ್ನು ಸಂಪೂರ್ಣವಾಗಿ ಗೊತ್ತುಮಾಡಿಕೊಳ್ಳಬೇಕು. ಅವರ ಗ್ರಹಣಶಕ್ತಿಗೆ ಅನುರೂಪವಾಗಿರುವಂತೆ ಮನೋಹರವಾದ ರೀತಿಯಲ್ಲಿ ಅವರಿಗೆ ಪಾಠವನ್ನು ಹೇಳಿ ಅವರಿಂದ ಹೇಳಿಸಿ ಅವರಿಗೆ ಸಮಗ್ರವಾಗಿ ತಿಳಿಯಿತೆಂಬ ಪ್ರತ್ಯಯವು ಉಂಟಾದಮೇಲೆ ಅವರಿಗೆ ಸ್ವಂತವಾಗಿ ಚಿಂತನೆ ಮಾಡಿಕೊಳ್ಳತಕ್ಕ ವಿಧಾನಗಳನ್ನು ಉಪದೇಶ ಮಾಡಿ ವ್ಯಾಸಂಗ ಮಾಡುವುದಕ್ಕೋಸ್ಕರ ಪ್ರೋತ್ಸಾಹ ಮಾಡಬೇಕು. ಈ ವಿಧವಾದ ಪ್ರೋತ್ಸಾಹದಲ್ಲಿ ಒಂದೇ ವಿಧವಾಗಿರುವುದಿಲ್ಲ. ವಿದ್ಯಾರ್ಥಿಗಳೂ, ಅವರ ವಯಸ್ಸೂ, ಅವರ ಆರೋಗ್ಯ, ಅವರ ಗ್ರಹಣಶಕ್ತಿ ಇವೇ ಮೊದಲಾದ ಅನೇಕ ಸಂದರ್ಭಗಳಿಗೆ ಅನುಸಾರವಾಗಿ ಪ್ರೋತ್ಸಾಹ ವಿಧಾನಗಳನ್ನು ಕಲ್ಪಿಸಬೇಕು. ಪರೀಕ್ಷೆಗಳನ್ನು ಕೊಟ್ಟುಮಾತ್ರದಿಂದಲೇ ಈ ಗುಣಾತಿಶಯಗಳೆಲ್ಲಾ ಲಭ್ಯವಾಗುವುದಿಲ್ಲ. ಯಾವ ರೀತಿಯಲ್ಲಿ ಉಪದೇಶಗಳನ್ನು ಮಾಡಿದರೆ ವಿದ್ಯಾರ್ಥಿಗಳು ವೃದ್ಧಿಗೆ ಬರುವುದಕ್ಕೆ ಮಾರ್ಗದರ್ಶನವನ್ನು ಮಾಡುವುದೋ ಅದನ್ನು ಪರೀಕ್ಷಾನುಭವಕ್ಕೆ ತಂದುಕೊಂಡ ಹೊರತೂ ಒಳ್ಳೇ ಪಾಠ

ಕರಾಗುವುದು ಕಷ್ಟ. ಅಲ್ಪಸ್ವಲ್ಪ ಓದಿಕೊಂಡು ಪ್ರೌಢವಿದ್ಯಾಭ್ಯಾಸವನ್ನು ಮಾಡದೆ ಸಾಮಾನ್ಯವಾದ ಪರೀಕ್ಷೆಗಳನ್ನು ಕೊಟ್ಟು ಪಾಠಕರಾಗಿರತಕ್ಕವರ ಪಾಡೇನು? ಇಂಥಾ ಜನಗಳು ಪಾಠಕ ವೃತ್ತಿಯಲ್ಲಿ ವೃದಿಗೆ ಬರಬೇಕಾದರೆ ಪ್ರೌಢವಿದ್ಯಾಭ್ಯಾಸವನ್ನು ಮಾಡಬೇಕು. ಅಂಥಾ ವಿದ್ಯಾಭ್ಯಾಸವನ್ನು ಮಾಡಿ ಪಾಠಕರಾಗಿರತಕ್ಕವರು ಯಾವರೀತಿಯಲ್ಲಿ ವಿದ್ಯಾರ್ಥಿಗಳನ್ನು ತಯಾರ್ಮಾಡುವರೋ ಅದನ್ನು ನೋಡಿ ಅನುಷ್ಠಾನಕ್ಕೆ ತಂದುಕೊಳ್ಳುತ್ತಲೂ ಬರಬೇಕು. ಇದು ಕಷ್ಟವೆಂದು ಯಾರೂ ಅಧೈರ್ಯಪಡಕೂಡದು. ಮನುಷ್ಯ ಮಾಡಿದ ಕೆಲಸವನ್ನು ಇನ್ನೊಬ್ಬ ಮಾಡುವುದು ಕಷ್ಟವೇ? ಎಂದಿಗೂ ಇಲ್ಲ. ಆದರೆ ದೊಡ್ಡ ಕೆಲಸಗಳನ್ನು ಮಾಡಿದವರು ಆ ಕೆಲಸವನ್ನು ಮಾಡುವುದಕ್ಕೆ ಎಷ್ಟು ಶ್ರಮಪಟ್ಟರೋ ಅವನ್ನು ನೋಡಿ ಇತರರೂ ಹಾಗೆಯೇ ಶ್ರಮಪಟ್ಟರೆ ಅವರಿಗೆ ಸಂಘಟನೆಯಾದ ಫಲವು ಇತರರಿಗೂ ಲಭ್ಯವಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಎಲ್ಲಾ ಪಾಠಕರೂ ತಾವು ಹೇಳತಕ್ಕ ಪಾಠಗಳ ವಿಷಯದಲ್ಲಿ ಯಾವಯಾವ ಉದ್ಗ್ರಂಥಗಳಿರುವವೋ ಅವುಗಳನ್ನು ಪರಿಶೀಲಿಸಿ ವ್ಯಾಸಂಗ ಮಾಡುತ್ತಾ ಹೊಸ ವಿಷಯಗಳನ್ನು ಕಲಿತುಕೊಳ್ಳುತ್ತಾ ಪಾಠಹೇಳತಕ್ಕ ಮರ್ಮಗಳನ್ನು ಗೊತ್ತುಮಾಡಿಕೊಳ್ಳುತ್ತಾ ಹೀಗೆ ಗೊತ್ತುಮಾಡಿಕೊಳ್ಳುವುದಕ್ಕೆ ದಿನಕ್ಕೆ ಒಂದೆರಡು ಘಂಟೆಯನ್ನಾದರೂ ವಿಾಸಲಾಗಿಟ್ಟುಕೊಳ್ಳುತ್ತಾ ಸಾಮಾನ್ಯವಾದ ಪಾಠಕರೂ ಕೂಡ ಅತ್ಯಂತ ಒಳ್ಳೇ ಪದವಿಗೆ ಬರುವುದರಲ್ಲಿ ಸಂದೇಹಲ್ಲ.

ಭೂ ವಿ .

ಭೂಮಿಯನ್ನು ಅಗೆದು ಯಾವ ಯಾವ ಪರೆಗಳಲ್ಲಿ ಯಾವ ಯಾವ ಪದಾರ್ಥಗಳು ಶಿಕ್ಕುವವೋ ಅದನ್ನು ಪರೀಕ್ಷಿಸಿದರೆ ಚಿಪ್ಪುಗಳು, ಹವಳಗಳು, ಅನೇಕ ವಿಧವಾದ ಪ್ರಾಣಿಗಳ ಮೂಳೆಗಳೂ ಶಿಕ್ಕುವುವು. ಸುಣ್ಣದಕಲ್ಲುಗಳು ಕೆಲವು ಜಾಗಗಳಲ್ಲಿ ಶಿಕ್ಕುವುವು. ಈ ಕಲ್ಲುಗಳ ಚರಿತ್ರೆಯನ್ನು ಪರೀಕ್ಷಿಸಿದರೆ ಒಂದಾನೊಂದು ಕಾಲದಲ್ಲಿ ಇವು ಜಲಚರಗಳ ದೇಹವಾಗಿತ್ತೆಂದು ಗೊತ್ತಾಗುವುದು. ಪ್ರತಿ

ಯೊಂದು ದೇಶದಲ್ಲಿಯೂ ಅನೇಕ ಸಾವಿರ ಚದರಮೈಲಿಗಳ ವಿಸ್ತೀರ್ಣದವರೆಗೂ ಈತೆರನಾದ ಕಲ್ಲುಗಳು ತಿಕ್ಕುವುವು. ಇವುಗಳ ಪರ್ವತಗಳು ಕೂಡಾ ಇರುವುವು. ಹಿಮವತ್ಪರ್ವತ, ರಾಕೀಬೆಟ್ಟ, ಆಂಡಿಸ್ ಪರ್ವತ, ಆಲ್ಪಸ್ ಪರ್ವತ, ಇವುಗಳೆಲ್ಲಾ ಈ ಕಲ್ಲುಗಳ ಮಯವಾಗಿರುವುವು. ಇವು ಕಾಲಾಂತರಗಳಲ್ಲಿ ಪ್ರಾಣಿಗಳ ಶರೀರ ಗಳಾಗಿದ್ದುವಂತೆ. ಈ ಪರ್ವತಗಳಲ್ಲಿ ಜಲ್ಲೀ, ಮರಳು, ಜೇಡೀಮಣ್ಣು, ಸಸ್ಯಾದಿ ಗಳು, ಪ್ರಾಣಿಗಳು ಇವುಗಳೆಲ್ಲಾ ಸೇರಿಕೊಂಡಿರುವುವು. ಈಗ ಯಾವುದು ಭಣ ಗಿದ ಭೂಮಿಯಾಗಿರುವುದೋ ಅದು ಒಂದಾನೊಂದು ಕಾಲದಲ್ಲಿ ನೀರಿನ ಕೆಳಗೆ ಇದ್ದಿತೆಂಬದಾಗಿ ಗೊತ್ತಾಗುವುದು. ಈ ಮಣ್ಣು ಮತ್ತು ಕಲ್ಲುಗಳು ಒಡೆಯಲ್ಪಟ್ಟು ಪರೀಕ್ಷಿಸಲ್ಪಟ್ಟರೆ ಸಮುದ್ರದ ಕೆಳಗೆ ಇದ್ದವೇಳೆಯಲ್ಲಿ ಯಾವ ಯಾವ ಸಸ್ಯಗಳ ಮತ್ತು ಪ್ರಾಣಿಗಳ ಅಸ್ಥಿಪಂಜರಗಳ ಸಂಸರ್ಗವು ಇವುಗಳಿಗೆ ಎಂದಾದುವೋ ಅವು ಗಳೆಲ್ಲಾ ದೃಷ್ಟಿಪಥಕ್ಕೆ ಬೀಳುವುವು. ಇಂಥಾ ಕಲ್ಲುಗಳು ಈ ಪರ್ವತಗಳಲ್ಲಿ ಬೇ ಕಾದಹಾಗೆ ಸಿಕ್ಕುವುವು. ಈ ಕಲ್ಲುಗಳಲ್ಲಿ ಅಗ್ನಿಸಂಬಂಧವನ್ನು ಹೊಂದಿ ಕರಗಿ ಬೆಣಚುಕಲ್ಲುಗಳಂತೆ ಆಗಿರುವ ಬಂಡೆಗಳು ಬೇಕಾದಹಾಗೆ ಇರುವುವು. ಈ ಬಂ ಡೆಗಳಿಗೆ ಭೂಮಿಯ ಅಂತರ್ಗತವಾದ ಅಗ್ನಿಯೇ ಮುಖ್ಯಕಾರಣ. ಇನ್ನು ಕೆಲವು ಬಂಡೆಗಳು ಜಲಪ್ರವಾಹದಿಂದ ಮಾಡಲ್ಪಟ್ಟವುಗಳಾಗಿರುತ್ತವೆ. ಇವುಗಳು ಅಗ್ನಿ ಸಂಬಂಧವಾದ ಕಲ್ಲುಗಳಂತೆ ಘಟ್ಟಿಯಾಗಿರುವುದಿಲ್ಲ. ಇವುಗಳನ್ನು ಒಡೆದು ಪುಡೀ ಮಾಡುವುದೂ, ಕೂಡ ಸಾಧ್ಯ. ಇವು ನದಿಗಳೇ ಮೊದಲಾದವುಗಳಲ್ಲಿ ಪರಸ್ಪರ ಸಂಘರ್ಷಣದಿಂದ ಮರಳಾಗಿಯೂ ಪರಿಣಮಿಸುವುದುಂಟು. ಅಗ್ನಿ ಸಂಬಂಧವಾದ ಬಂಡೆಗಳೂ ಕಲ್ಲುಗಳೂ ಭೂಮಿಯ ಒಳಭಾಗದಿಂದ ಕರಗಿ ಜಲಾವಸ್ಥೆಯನ್ನು ಹೊಂದಿ ಭೂಮಿಯ ಮೇಲಕ್ಕೆ ಹರಿದು ತನುವನ್ನು ಹೊಂದಿ ಶಿಲಾವಸ್ಥೆಯನ್ನು ಹೊಂದಿದ ಬಂಡೆಗಳಾಗಿರುವುವು. ಈ ಕಲ್ಲುಗಳು ಸ್ಫಟಿಕಗಳಂತೆ ಅಲ್ಲಲ್ಲಿಯೇ ಕಾ ಣುವುವು. ಇವುಗಳನ್ನೆಲ್ಲಾ ಪರೀಕ್ಷಿಸುವುದೂ, ಅವುಗಳ ಕಾರಣಗಳನ್ನು ತಿಳಿಯು ವುದೂ ಅತ್ಯಂತ ಮನೋಹರವಾದ ವ್ಯಾಸಂಗವಾಗಿ ಇರುವುದು. ಆದರೆ ಇಂಥಾ ವ್ಯಾಸಂಗಕ್ಕೆ ಅವಕಾಶವು ಎಲ್ಲಾ ಸ್ಥಳಗಲ್ಲಿಯೂ ಸಿಕ್ಕುವುದಿಲ್ಲ.

ಭೂಮಿಯುವೇಲೆ ದೊರೆಯುವ ಬಂಡೆಯೊಂದು ಎಷ್ಟುಗಾತ್ರವಿರುವುದೋ ಅಷ್ಟು ನೀರನ್ನು ತೆಗೆದುಕೊಂಡು ತ್ಲೂಗಿದರೆ ನೀರಿನ ತೂಕಕ್ಕಿಂತಲೂ ಎರಡು ಮೂ

ರರಷ್ಟು ಹೆಚ್ಚಾಗಿರುವುದು. ಈ ಭೂಮಿಯು ಮಧ್ಯಭಾಗಕ್ಕೆ ಹೋದಹಾಗೆಲ್ಲಾ ಪ್ರತಿಯೊಂದು ಪದಾರ್ಥದ ತೂಕವೂ ಹೆಚ್ಚುವುದು. ವಾಯುವನ್ನು ಭೂಮಿಯೊಳಗೆ 34 ಮೈಲಿಗಳ ವರೆಗೂ ಹೋಗುವಂತೆ ಮಾಡಿದರೆ ಅದು ನೀರಿನಷ್ಟು ಭಾರವುಳ್ಳದ್ದಾಗುವುದು. ನೀರು ಭೂಮಿಯೊಳಗೆ 362 ಮೈಲಿಗಳ ದೂರ ಹೋದುದೇ ಆದರೆ ಪಾದರಸದಷ್ಟು ಭಾರವುಳ್ಳದ್ದಾಗುವುದು. ಆದರೆ ಭೂಮಿಯ ಒಳಭಾಗದಲ್ಲಿ ಔಷ್ಣ್ಯವು ಅತ್ಯಂತವಾಗಿರುವುದು. ಇದರ ಮಧ್ಯಭಾಗಕ್ಕೆ ಯಾವ ಪದಾರ್ಥವೂ ಹೋಗುವುದಕ್ಕಾಗುವುದಿಲ್ಲ. ಅತ್ಯಂತ ಆಳವಾದ ಗಣಿಗಳು ಮೇಲುಭಾಗದಿಂದ ಒಂದು ಮೈಲಿವರೆಗೆ ಹೋಗುವುದೂ ಕೂಡ ಕಷ್ಟವಾಗುವುದು. ಭೂಮಿಯ ಒಳ ಭಾಗಕ್ಕೆ ಒಂದು ಮೈಲಿಗಿಂತಲೂ ಹೆಚ್ಚಾಗಿ ಹೋಗುವುದು ಅಸಾಧ್ಯ. ಭೂಮಿ ಯೊಳಗೆ ಒಹಳ ಜೋರಾದ ಬೆಂಕಿಯು ಇರುವುದಕ್ಕೆ ಅನೇಕ ನಿದರ್ಶನಗಳಿರು ವುವು. ಅನೇಕ ಅಗ್ನಿಪರ್ವತಗಳ ಭೂಮಿಯು ಒಳಗಿನಿಂದ ಮಣ್ಣೂ, ಕಲ್ಲೂ, ಲೋಹಗಳೂ ಕರಗಿ ಎಲ್ಲಾ ಜಲಾವಸ್ಥೆಯನ್ನು ಹೊಂದಿ ಈಚೆಗೆ ಬರುವುದೇ ಪರಮಾಶ್ಚರ್ಯವಾದ ದೃಷ್ಟಾಂತವಾಗುವುದು. ಬಿಸಿನೀರು ಬುಗ್ಗೆಗಳೇ ಮೊದಲಾದು ವುಗಳು ಇದಕ್ಕೆ ಬೇಕಾದ ದೃಷ್ಟಾಂತಗಳಾಗಿರುವುವು. ಗಣಿಗಳು ಬಹಳ ಆಳವಾಗಿ ರುವುವು. ಗಣಿಯು ಎಷ್ಟು ಆಳವಾಗಿದ್ದರೆ ಒಳಗಿನ ವಾಯುವು ಅಷ್ಟು ಶಾಖವಾ ಗಿರುವುದು. ಮ್ಯಾಂಚಸ್ಟಿಯಲ್ ಬಳಿಯಲ್ಲಿ 2151 ಅಡಿ ಇರತಕ್ಕ ಗಣಿ ಇರುವುದು. ಈ ಗಣಿಯು ಮೇಲ್ಭಾಗದಲ್ಲಿ 51 ಡಿಕ್ರಿ ಶಾಖವೂ ಒಳಭಾಗದಲ್ಲಿ 75 ಡಿಕ್ರಿ ಶಾಖವೂ ಇರುವುದು. ಇದಲ್ಲದೆ ಬಹಳ ಆಳದಿಂದ ತೆಗೆಯಲ್ಪಡಕಕ್ಕ ಪದಾರ್ಥವು ಮೇಲ್ಭಾ ದಿಂದ ತೆಗೆಯಲ್ಪಡುವುದಕ್ಕಿಂತಸಾಧ್ಯ. ಪ್ಯಾರಿಸ್ ಬಳಿಯಲ್ಲಿ ಗ್ರೆನಲ್ ಎಂಬ ಸ್ಥಳ ದಲ್ಲಿ ಒಂದು ಭಾವಿಯು ಇರುವುದು. ಇದು 17098 ಅಡಿಯು ಆಳವುಂಟಾಗಿದೆ. ಇದರಿಂದ ಸೇರಲ್ಪಡತಕ್ಕ ನೀರು 82 ಡಿಗ್ರೀ ಶಾಖವುಳ್ಳದ್ದಾಗಿರುವುದು. ಭೂಮಿ ಯೊಳಗೆ ಆರವತ್ತು ಅಡಿ ಕೆಳಕ್ಕೆ ಹೋದರೆ ಒಂದು ಡಿಗ್ರೀ ಶಾಖವು ಹೆಚ್ಚುವು ದೆಂದು ಗೊತ್ತಾಗಿರುವುದು. ಇದೇ ರೀತಿಯಲ್ಲಿ ಪರೀಕ್ಷಿಸುತ್ತಾ ಬಂದರೆ ಬಹಳ ಗಟ್ಟಿಯಾದ ಪದಾರ್ಥಗಳೂ ಕೂಡ ಕರಗಿಹೋಗುವಷ್ಟು ಭೂಗರ್ಭದಲ್ಲಿ ಬೆಂಕಿ ಯು ಇರುವುದಾಗಿ ಗೊತ್ತಾಗುತ್ತದೆ. 12000 ಅಡಿ ಆಳಕ್ಕೆ ಹೋದರೆ ಕುದಿ ಯುವ ನೀರು ಶಿಕ್ಕೀತು. ಇಪ್ಪತ್ತುನಾಲ್ಕು ಮೈಲಿ ಆಳದಲ್ಲಿ ನೀರು ಚಿನ್ನವನ್ನು ಕರಗುವಷ್ಟು ಔಷ್ಣ್ಯವುಳ್ಳದಾಗಿರುವುದು.

ಎಲ್ಲಾ ದೇಶಗಳಲ್ಲಿಯೂ ಬಿಸಿನೀರಿನ ಬುಗ್ಗೆಗಳು ಇರುವುದುಂಟು. ಕೆಲವು ದೇಶಗಳಲ್ಲಿ ಈ ಬುಗ್ಗೆಗಳಿಂದ ಕುದಿಯುವ ನೀರೂ ಬರುವುದು. ಐಸ್ಲೆಂಡಿನಲ್ಲಿ ಭೂಗರ್ಭದಿಂದ ಮೇಲಕ್ಕೆ ಹಾರತಕ್ಕ ನೀರು 261 ಡಿಗ್ರೀ ತಾಪವುಳ್ಳದ್ದಾಗಿ ಮೇಲಕ್ಕೆ ಹಾರುವುದು. ಇದು ಮೇಲಕ್ಕೆ ಬರುವಾಗ್ಯೆ ಬಹಳ ಒಲವಾದ ಶಬ್ದವು ಆಗುವುದು. ಇಂಗ್ಲೆಂಡ್ ದೇಶದ ಬ್ಯೂಕ್ ಎಂಬ ಪಟ್ಟಣದಲ್ಲಿ ಒಂದು ಬಿಸಿನೀರಿನ ಬುಗ್ಗೆ ಇರುವುದು. ಡಾರ್ಬಿಷಿಯರ್‌ನಲ್ಲಿ ಒಂದು ಬುಗ್ಗೆ ಇರುವುದು. ಈ ಬುಗ್ಗೆಯು ನೀರು 82 ಡಿಗ್ರೀ ಔಷ್ಣ್ಯವುಳ್ಳದಾಗಿರುವುದು. ಜರ್ಮನೀ ದೇಶದಲ್ಲಿ ಒಂದು ಭಾಗದಲ್ಲಿ ಭೂಗರ್ಭದಿಂದ ಬರತಕ್ಕ ನೀರು 158 ಡಿಗ್ರೀ ಉಳ್ಳದ್ದಾಗಿಯೂ ಕಾಲೂನೀ ಬಂಡಿನ ನೀರು 167 ಡಿಗ್ರಿ ಉಳ್ಳದಾಗಿಯೂ ಸ್ವೆರ್ಜ್ ದೇಶದ ವಾಯುವ್ಯ ಪ್ರಾಂತ್ಯದ ಬುಗ್ಗೆಗಳಿಂದ ಬರತಕ್ಕ ನೀರು 192 ಡಿಗ್ರಿಗಳುಳ್ಳದಾಗಿಯೂ, ಪ್ರಾನ್ಸ್ ದೇಶದ ಮಧ್ಯಪ್ರಾಂತ್ಯದ ಬುಗ್ಗೆಗಳಿಂದ ಬರತಕ್ಕ ನೀರು 174 ಡಿಗ್ರಿಗಳುಳ್ಳದಾಗಿಯೂ ಇರುವುವು. ಈ ನೀರು ಬುಗ್ಗೆಗಳೆಲ್ಲಾ ಪ್ರಾಯಿಕವಾಗಿ ಅಗ್ನಿಪರ್ವತಗಳು ಎಲ್ಲಿ ವಿಶೇಷವೋ ಅಲ್ಲಿ ಇರುವುವು. ಐಸ್ಲೆಂಡ್ ದ್ವೀಪದ ಗೈಸರ್ ಎಂಬ ನೀರು ಬುಗ್ಗೆಯು ಅತ್ಯದ್ಭುತವಾದುದು. ಈ ಪ್ರಾಂತ್ಯವೆಲ್ಲಾ ಭೂಗರ್ಭದ ಜ್ವಾಲೆಯಿಂದ ನಡುಗುವುದು. ಭೂಗರ್ಭದಿಂದ ಮೇಲಕ್ಕೆ ಹಾರುವ ಬಿಸಿನೀರು ಎರಡುನೂರು ಅಡೀಕಂಭದಂತೆ ಮೇಲಕ್ಕೆ ಏಳುವುದು. ಅನೇಕ ಸಿಡಿಲುಗಳು ಹೊಡೆದಂತೆ ಶಬ್ದವಾಗುವುದು. ಈ ನೀರಿನ ಜೊತೆಯಲ್ಲಿ ಅನಿಲಾವಸ್ಥೆಯನ್ನು ಹೊಂದಿದ ಅನಿಯು ಮೇಲಕ್ಕೆ ಹಾರುವುದು. ವಿಪರೀತ ಶಬ್ದಕ್ಕೆ ಇದೇ ಕಾರಣವು. ಅಮೆರಿಕಾ ಖಂಡದ ಯುನೈಟೆಡ್ ಸ್ಟೇಟ್ಸ್ ಎಂಬ ಸ್ಥಾನದಲ್ಲಿ ಅನೇಕ ಬಿಸಿನೀರಿನ ಬುಗ್ಗೆಗಳಿರುವುವು. ಐಸ್ಲೆಂಡಿನ ಗೈಸ್ ಎಂಬ ಅಗ್ನಿಮುಖದಿಂದ ಹೊರಡುವ ಜಲಸ್ತಂಭಕ್ಕಿಂತಲೂ ಅಧಿಕವಾದ ಜಲಸ್ತಂಭಗಳು ಎಲ್ಲೋಸ್ಟೋನ್ ನ್ಯಾಷನಲ್ ಪಾರ್ಕ್ ಎಂಬುವುದರಲ್ಲಿ ಕಾಣುವುದು. ನ್ಯೂಜಿಲ್ಯಾಂಡ್ ದ್ವೀಪದಲ್ಲಿಯೂ ಭೂಗರ್ಭದಿಂದ ಅತ್ಯಂತ ಬಿಸಿಯಾದ ನೀರು ಬರುವುದುಂಟು. ಇವುಗಳನ್ನೆಲ್ಲಾ ನೋಡಿದರೆ ಭೂಗರ್ಭದಲ್ಲಿರತಕ್ಕ ಅಗ್ನಿಯ ವೇಗವು ಎಷ್ಟು ಔಷ್ಣ್ಯವುಳ್ಳದಾಗಿರುವುದೋ ಅದು ಊಹಿಸುವುದಕ್ಕೆ ಅಸಾಧ್ಯ. ಇದರಿಂದ ಭೂಮಿಯು ಮೇಲ್ಭಾಗವು ಮಣ್ಣು, ಕಲ್ಲು ಮೊದಲಾದ ಪದಾರ್ಥಗಳನ್ನು ಹೊಂದಿ ಇದ್ದಾಗ್ಯೂ ಒಳಭಾಗವು ಅತ್ಯಂತ ತೀಕ್ಷ್ಣವಾದ ಅಗ್ನಿಯನ್ನು ಹೊಂದಿರುವುದೆಂದೂ, ಆ ಅಗ್ನಿಯ ಔಷ್ಣ್ಯದಿಂದ ಮಣ್ಣು, ಕಲ್ಲು, ಲೋಹ

ಗಳೂ, ಮತ್ತು ಸಮಸ್ತ ಪದಾರ್ಥಗಳೂ ಕರಗಿ ಜಲಾವಸ್ಥೆಯನ್ನು ಹೊಂದಿ ಮೇಲ
ಕ್ಕೆ ಬರುತ್ತಲಿರುವುದೆಂಬದಾಗಿಯೂ ಸ್ಪಷ್ಟವಾಗುತ್ತದೆ.

ಮನುಷ್ಯ ಜಾತಿ.

ಏಷ್ಯಾಖಂಡದ ನಿವಾಸಿಗಳು.—ಇಂಡಿಯದ ಪೂರ್ವನಿವಾಸಿಗಳು.

ಇಂಡಿಯಾದಲ್ಲಿ ನಾನಾಬಗೆಯ ಜನರಿರುವರು. ಆ ದೇಶಕ್ಕೆ ಅನೇಕ ಜಾತಿ
ಯವರು ದಂಡೆತ್ತಿ ಬಂದುದರಿಂದಲೂ ಅಲ್ಲಿ ಅನೇಕ ಬದಲಾವಣೆಗಳು ನಡೆದಿರುವು
ದರಿಂದಲೂ ಆ ಭೂಭಾಗದಲ್ಲಿ ಅತ್ಯುತ್ತಮ ಜನರನ್ನೂ ಅತ್ಯಧಮರನ್ನೂ ನೋಡ
ಬಹುದು.

ಪೂರ್ವದಲ್ಲಿ ನರ್ಮದಾ ನದಿಯ ಕಣಿವೆಯಲ್ಲಿ ಒಂದು ಬಗೆಯ ಕಾಡಜನರು
ವಾಸವಾಗಿದ್ದರೆಂದು ತಿಳಿದುಬಂದಿದೆ. ಅಲ್ಲಿ ಭೂಮಿಯನ್ನಗಿದು ಪರೀಕ್ಷಿಸಿದರೆ ಈ
ಪುರಾತನರು ಎಗೇಟ್ ಕಲ್ಲಿನಲ್ಲಿ ಮಾಡಿಕೊಂಡಿದ್ದ ಚಾಕುಗಳೂ, ಚಕ್ಕಮುಕ್ಕಿ ಕಲ್ಲಿ
ನಲ್ಲಿ ಮಾಡಿದ ಒರಟಾದ ಕೆಲವು ಸಾಮಾನುಗಳೂ ಈಗ ನಷ್ಟವಾಗಿರುವ ಒಂದು
ಬಗೆಯ ಆನೆಗಳ ಮೂಳೆಗಳೂ ಹಿಪ್ಪೊಪೊಟಮಸ್ ಎಂಬ ಜಲಗಜಗಳ ಮೂಳೆಗ
ಳೂ ಸಿಕ್ಕುವುವು. ಇವರಾಗುತ್ತಲೇ ಇವರಿಗಿಂತ ಬುದ್ಧಿಚಾತುರ್ಯವುಳ್ಳ ಬೇರೆಬಗೆಯ
ಜನರು ಇಂಡಿಯಾದಲ್ಲಿ ವಾಸವಾಗಿದ್ದರೆಂದು ಗೊತ್ತಾಗಿದೆ. ಇವರು ಚಕ್ಕಮುಕ್ಕಿ
ಕಲ್ಲಿನಲ್ಲಿ ಸ್ವಲ್ಪ ನಯವಾದ ಸಾಮಾನುಗಳನ್ನು ಮಾಡಿಕೊಂಡಿದ್ದರು. ಇವರಾದ
ಬಳಿಕ ಇನ್ನೂ ಅಧಿಕವಾಗಿ ಬುದ್ಧಿಕುಶಲತೆಯುಳ್ಳ ಬೇರೊಂದು ಬಗೆಯ ಜನರು
ಹಿಂದೂದೇಶದಲ್ಲಿ ವಾಸಮಾಡಿದರು. ಇವರು ಕಬ್ಬಿಣದ ಆಯುಧಗಳನ್ನೂ ಮಣ್ಣಿ
ನ ಪಾತ್ರೆಗಳನ್ನೂ ಮಾಡಿಕೊಂಡಿದ್ದರು. ತಾಮ್ರ ಮತ್ತು ಚಿನ್ನದ ಆಭರಣಗಳನ್ನು
ಧರಿಸಿಕೊಂಡಿದ್ದರು. ಇವರು ಸ್ಮಶಾನಭೂಮಿಯನ್ನು ಅಗಿದರೆ ಒರಟಾದ ಕಲ್ಲುಗ
ಳಿಂದ ಕಟ್ಟಿದ ಗೋಳಗಳೂ ಹಾಸುಗಲ್ಲಿನ ಕಟ್ಟೆಗಳೂ ಸಿಕ್ಕುವುವು. ಕೆಲವು ಸ್ಮಶಾ
ನಗಳಲ್ಲಿ ರೋಮನ್ ಜನರ ನಾಣ್ಯಗಳೂ ದೊರಕುವುವು.

ಆಮೇಲೆ ಮಧ್ಯ ಏಷ್ಯದಿಂದ ವಾಯವ್ಯ ಮಾರ್ಗವಾಗಿ ಆರ್ಯರು ಇಂಡಿಯಾ
ಕ್ಕೆ ಬಂದರು. ಇವರು ಇಂಡಿಯಾ ಪೂರ್ವನಿವಾಸಿಗಳೊಂದಿಗೆ ಬಹುಕಾಲ ಘೋ

ರಯುದ್ಧಗಳನ್ನು ಮಾಡಿ, ಆ ದೇಶವನ್ನು ಕ್ರಮೇಣ ತಮ್ಮ ಸ್ವಾಧೀನಪಡಿಸಿಕೊಂಡರು. ಆರ್ಯರು ಬಲವುಳ್ಳವರಾಗಿಯೂ ಸುಂದರರಾಗಿಯೂ ಇದ್ದರು. ಪೂರ್ವನಿವಾಸಿಗಳು ಕಪ್ಪಾಗಿಯೂ ಕುರೂಪರಾಗಿಯೂ ಇದ್ದರು. ಇವರನ್ನು ಕಂಡರೆ ಆರ್ಯರಿಗಾಗದು. ಇವರಿಗೆ ದಸ್ಯುಗಳು, ದಾಸರು, ಚಪ್ಪಟೆ ಮೂಗಿನವರು, ಮಾಂಸಭಕ್ಷಕರು, ಆಚಾರಹೀನರು, ನಾಸ್ತಿಕರು ಎಂದು ಮುಂತಾಗಿ ಹೆಸರಿಟ್ಟು ನಾನಾ ಬಗೆಗಳಲ್ಲಿ ದೂಷಿಸುತ್ತಿದ್ದರು. ಅನೇಕ ಪೂರ್ವನಿವಾಸಿಗಳನ್ನು ಗುಡ್ಡ ಬೆಟ್ಟಗಳಿಗೆ ಅಟ್ಟಿದರು. ಇವರು ಇನ್ನೂ ಅನಾಗರಿಕರಾಗಿಯೇ ಇರುವರು. ಅದಾಗ್ಯೂ ಪೂರ್ವನಿವಾಸಿಗಳ ಸಂಖ್ಯೆಯು ಅತ್ಯಧಿಕವಾಗಿದ್ದುದರಿಂದ ಅವರನ್ನು ಸಂಪೂರ್ಣವಾಗಿ ಧ್ವಂಸಮಾಡಲಿಕ್ಕೆ ಆರ್ಯರಿಂದಾಗಲಿಲ್ಲ. ಕಡೆಗೆ ಆರ್ಯರೂ ಪೂರ್ವನಿವಾಸಿಗಳೂ ಸೇರಿ ಮಿಶ್ರಜಾತಿ ಜನರುಂಟಾದರು. ಒಟ್ಟು ಪ್ರಜಾ ಸಂಖ್ಯೆಯಲ್ಲಿ ೫/೬ ಪಾಲು ಮಿಶ್ರರಿದ್ದರು.

ಆರ್ಯರು ಬುದ್ಧಿಶಾಲಿಗಳು. ಅನೇಕ ಕಾವ್ಯಗಳನ್ನು ರಚಿಸಿದರು. ಋಗ್ವೇದವು ಇವರ ಪುರಾತನ ಗ್ರಂಥವು. ಇವರ ಬಳಿಯಲ್ಲಿ ದನಕರುಗಳಿದ್ದುವು. ಇವರು ಧಾನ್ಯಗಳನ್ನು ಬೆಳೆಯುತ್ತಿದ್ದರು. ಹಸೀ ಪದಾರ್ಥಗಳನ್ನು ತಿನ್ನದೆ ಅಡಿಗೆಮಾಡಿ ಊಟ ಮಾಡುತ್ತಿದ್ದರು. ಬಟ್ಟೆಗಳನ್ನು ನೇಯುವುದಕ್ಕೂ ಅಂಗಿಗಳನ್ನು ಹೊಲಿಯುವುದಕ್ಕೂ ಬಲ್ಲವರಾಗಿದ್ದರು. ಮೈಗೆ ಬಟ್ಟೆಗಳನ್ನು ಹಾಕಿಕೊಳ್ಳುತ್ತಿದ್ದರು. ಇವರ ಬಳಿಯಲ್ಲಿ ಲೋಹದ ಸಾಮಾನುಗಳಿದ್ದುವು. ಇವರ ಭಾಷೆಗೆ ಸಂಸ್ಕೃತವೆಂದು ಹೆಸರು. ಈ ಆರ್ಯರಿಗೂ ಈಗಿನ ಯುರೋಪೀಯು ಹಿರಿಯರಿಗೂ ಅನುಬಂಧವಿತ್ತೆಂದು ಕೆಲವು ಪದಗಳಿಂದ ಗೊತ್ತಾಗುತ್ತದೆ. ತಾಯಿತಂದೆ, ಸಹೋದರ, ಸಹೋದರಿ, ವಿಧವೆಮೊದಲಾದ ಕೆಲವು ಮುಖ್ಯಪದಗಳೂ ಸಂಖ್ಯೆಯು ಹೆಸರುಗಳೂ ಸಂಸ್ಕೃತದಲ್ಲಿಯೂ ಯುರೋಪೀಯರ ಭಾಷೆಗಳಲ್ಲಿಯೂ ಒಂದೇಯಾಗಿವೆ.

ಕ್ರಿಸ್ತ ಹುಟ್ಟುವುದಕ್ಕೆ ಎಷ್ಟೋ ವರ್ಷಗಳ ಮುಂಚೆ ಆರ್ಯರು ದೇಶದೇಶ ಸಂಚಾರ ಮಾಡುತ್ತಾ ಕ್ರಮೇಣ ಇಂಡಿಯಾಕ್ಕೆ ಬಂದರೆಂದು ಗೊತ್ತಾಗಿದೆ. ಇವರು ಪೂರ್ವನಿವಾಸಿಗಳನ್ನು ಜಯಿಸಿ ಅವರ ಸ್ಥಳಗಳನ್ನಾಕ್ರಮಿಸುತ್ತಾ ತಮ್ಮ ರಾಜ್ಯವನ್ನು ಕ್ರಮೇಣ ಹೆಚ್ಚಿಸಿಕೊಳ್ಳುತ್ತಾ ಬಂದರು. ಹೀಗಿವರು ಹಿಮವತ್ಪರ್ವತದ ಬುಡದಲ್ಲಿರುವ ಪ್ರದೇಶಗಳನ್ನೂ ಪಂಜಾಬನ್ನೂ ಗಂಗಾನದಿಯು ಹರಿಯುತ್ತಿರುವ ಪ್ರದೇಶಗಳನ್ನೂ ಸ್ವಾಧೀನ ಪಡಿಸಿಕೊಂಡರು. ಇವರ ಈ ಸಾಹಸ ಕಾರ್ಯಗಳು ಋಗ್ವೇದ

ವೆಂಬ ಗ್ರಂಥದಲ್ಲಿ ವರ್ಣಿಸಲ್ಪಟ್ಟಿವೆ. ಕ್ರಿಸ್ತ ಹುಟ್ಟಿದ ಒಳಿಕ ಎರಡು ಶತಮಾನ ದೊಳಗಾಗಿ ಆರ್ಯರು ದಕ್ಷಿಣ ಹಿಂದೂದೇಶದಲ್ಲೆಲ್ಲಾ ಹರಡಿಕೊಂಡರು.

ವೇದಕಾಲದಲ್ಲಿ ಆರ್ಯರಲ್ಲಿ ಈಗಿರುವಂತೆ ಜಾತಿಭೇದಗಳಿರಲಿಲ್ಲವೆಂದು ತೋರು ತ್ತದೆ. ಪ್ರತಿ ಕುಟುಂಬದಲ್ಲಿಯೂ ತಂದೆಯೇ ಪುರೋಹಿತನಾಗಿದ್ದನು. ಇದಲ್ಲದೆ ಕುಲಕ್ಕೊಬ್ಬ ಯಜಮಾನನಿದ್ದನು. ಇವನು ಕುಲದವರಿಗೆಲ್ಲಾ ಪುರೋಹಿತನು. ಆರ್ಯರು ಯಜ್ಞಗಳನ್ನು ಮಾಡುತ್ತಿದ್ದರು. ವಿಧ್ಯುಕ್ತವಾಗಿ ವಿವಾಹವನ್ನು ಮಾಡಿ ಕೊಳ್ಳುತ್ತಿದ್ದರು. ಹೆಂಗಸರಿಗೆ ಬಹುಮರ್ಯಾದೆ ಇದ್ದಿತು. ಅವರು ಸಹಗಮನವ ನ್ನಾಚರಿಸುತ್ತಿರಲಿಲ್ಲ. ಪುನರ್ವಿವಾಹವನ್ನು ಮಾಡಿಕೊಳ್ಳುತ್ತಿದ್ದರು. ಆರ್ಯರು ಆ ಸ್ತಿಕರು. ಅನೇಕ ದೇವರುಗಳನ್ನಾರಾಧಿಸುತ್ತಿದ್ದರು. ಭೂಮಿ, ನೀರು, ವಾಯು ಮುಂತಾದ ಪ್ರಾಕೃತಿಕ ವಸ್ತುಗಳನ್ನು ದೇವರೆಂದು ಭಾವಿಸಿ ಪೂಜಿಸುತ್ತಿದ್ದರು. ಅಗ್ನಿ ಇಂದ್ರ ವರುಣ ಮುಂತಾದ ದೇವತೆಗಳ ಹೆಸರುಗಳು ವೇದಗಳಲ್ಲಿ ಉಕ್ತವಾಗಿವೆ. ಈ ದೇವತೆಗಳು ಪ್ರಸನ್ನರಾಗಿಯೂ ಅವರನ್ನಾರಾಧಿಸುವವರಿಗೆ ಮಂಗಳವನ್ನುಂ ಟುಮಾಡುವವರಾಗಿಯೂ ವರ್ಣಿಸಲ್ಪಟ್ಟಿರುವರು. ಕಡೆಕಡೆಗೆ ಹಿಂದೂಮತ ಗ್ರಂ ಥಗಳಲ್ಲಿ ಉಕ್ತವಾದ ಭಯಂಕರವಾದ ಕ್ರೂರವಾದ ದೇವತೆಗಳ ಹೆಸರುಗಳು ಋಗ್ವೇದದಲ್ಲಿ ಉಕ್ತವಾಗಿಲ್ಲ. ಆರ್ಯರು ಶವವನ್ನು ಹೂಳುತ್ತಿರಲಿಲ್ಲ, ಸುಡುತ್ತಿದ್ದರು. ಜೀವವು ನಿತ್ಯವಾದುದೆಂದು ನಂಬಿದ್ದರು. ಮನುಷ್ಯನು ಸತ್ತಬಳಿಕ ಆತನ ಜೀವ ವು ಪರಲೋಕಕ್ಕೆ ಹೋಗಿ ಪಿತೃಗಳೊಂದಿಗೆ ಸೇರಿಕೊಂಡಿರುವುದೆಂದು ಭಾವಿಸಿದ್ದರು.

ಆರ್ಯರು ವ್ಯವಸಾಯ, ಬಡಗಿ, ಕಮ್ಮಾರ, ಕಂಜುಗಾರ, ಅಕ್ಕಸಾಲಿಗರ ಕೆಲ ಸ ಮುಂತಾದುವನ್ನು ಮಾಡುತ್ತಿದರು. ದನಗಳು ಅವರ ಮುಖ್ಯ ಧನವಾಗಿದ್ದುವು. ಅವರು ದನದ ಮಾಂಸವನ್ನು ತಿನ್ನುತ್ತಲೂ, ಮದ್ಯವನ್ನು ಕುಡಿಯುತ್ತಲೂ ಇದ್ದರೆಂ ದು ತಿಳಿದುಬಂದಿದೆ. ಅವನ್ನು ತಮ್ಮ ದೇವತೆಗಳಿಗೂ ಸಮರ್ಪಿಸುತ್ತಿದ್ದರು. ವ್ಯವ ಸಾಯವನ್ನು ಮಾಡುತ್ತಾ ಮನೆಗಳನ್ನು ಕಟ್ಟಿಕೊಂಡು ಹಳ್ಳಿಗಳಲ್ಲಿಯೂ ಪಟ್ಟಣಗ ಳಲ್ಲಿಯೂ ವಾಸಮಾಡುತ್ತಾ ಇದ್ದಾಗ್ಗೂ ಅವರಿಗೆ ಪ್ರಯಾಣ ಹೊರಡಬೇಕೆಂಬ ಆಶೆಯು ತಪ್ಪಿರಲಿಲ್ಲ. ಹೀಗವರು ಪ್ರಯಾಣ ಮಾಡುತ್ತಾ ಇಂಡಿಯದ ನಾನಾ ಪ್ರದೇಶಗಳನ್ನಾಕ್ರಮಿಸಿಕೊಂಡರು. ಇದರಿಂದ ಆರ್ಯರು ತಂಡತಂಡವಾಗಿ ಒಡೆ ದು ಬೇರೆಬೇರೆ ರಾಜರನ್ನೂ ಪುರೋಹಿತರನ್ನೂ ಮಾಡಿಕೊಂಡರು. ಆಮೇಲೆ ಅವ ರಲ್ಲಿ ಜಾತಿಭೇದಗಳೂ ಉಂಟಾದುವು.

ಹೇಳಿದುದರಿಂದ ಗುರುವಿಗೆ ವಿಶೇಷ ಪ್ರೀತಿಯುಂಟಾಗಿ ಅತಿ ಉತ್ಸಾಹದೊಡನೆ ನಾಟಕಾಂತ ಸಾಹಿತ್ಯವನ್ನು ಪಾಠ ಹೇಳಿದರು. ಆಗ ಸಂಸ್ಕೃತದಲ್ಲೂ, ಪ್ರಾಕೃತದಲ್ಲೂ ಸಾಧಾರಣವಾಗಿ ಕವಿತ್ವ ಮಾಡುತ್ತಲೇ ಇದ್ದರು. ಇವರು ಸ್ನೇಹಿತರಿಗೋಸ್ಕರ ಲಾವಣಿಗಳನ್ನೂ, ಹಾಡುಗಳನ್ನೂ, ಶ್ಲೋಕಗಳನ್ನೂ ಕವಿತ್ವ ಮಾಡುತ್ತಲೇ ಇದ್ದು ಚಿತ್ರಕವಿತ್ವದಲ್ಲೂ ಬಹು ಚತುರರಾದರು. ಹೀಗಿದ್ದಾಗ್ಗೂ ಮರಗೆಲಸ, ಚಿತ್ರಕೆಲಸ ಇವೇ ಮುಂತಾದುದರಲ್ಲಿ ಬಹು ನಿಪುಣರಾಗಿರುವುದಲ್ಲದೆ ಸಂಗೀತ ವಿದ್ವಾಂಸರೊಡನೆ ಸೇರುತ್ತಾ ಇದ್ದಪ್ರಯುಕ್ತ ಇವರಿಗೆ ಸಂಗೀತದಲ್ಲೂ ಚೆನ್ನಾಗಿ ಪರಿಶ್ರಮವಿತ್ತೆಂದು ಇವರು ಮಾಡಿರತಕ್ಕ ಗೀತಗಳು ಚಾವಡಿಗಳಿಂದ ತಿಳಿಯಬರುತ್ತದೆ. ಅನಂತರ ಕೆಲವುಕಾಲ ತರ್ಕ, ವ್ಯಾಕರಣ, ವೇದಾಂತ ಇವುಗಳ ವ್ಯಾಸಂಗ ಸಹ ಮಾಡಿದ್ದರು. ಕಾಲಕ್ರಮೇಣ ಆಳಿದ ಮಹಾಸ್ವಾಮಿಯವರಾದ ಮುಮ್ಮಡಿ ಕೃಷ್ಣರಾಜ ಭೂಪಾಲರವರ ಆಳಿಯುಂದರಾಗಿದ್ದ ಮತ್ತು ಸಂಸ್ಕೃತ ಕರ್ಣಾಟಕ ಕವಿಯಾಗಿದ್ದ ಅನೇಕ ವಿದ್ವಾಂಸರ ಪೋಷಕರಾಗಿದ್ದ ಆಳಿಯ ಲಿಂಗರಾಜೆ ಅರಸಿನವರ ವಿಶ್ವಾಸಕ್ಕೆ ಪಾತ್ರರಾಗಿ ಅಲ್ಲಿಯೂ ಗ್ರಂಥಾವಲೋಕನ ಗ್ರಂಥರಚನ ಮುಂತಾದವುಗಳಲ್ಲಿಯೇ ಕಾಲಹರಣ ಮಾಡಿದರು. ತದನಂತರ ಆಸ್ಥಾನದ ವೈದ್ಯರಾಗಿದ್ದ ಹೊಸ ಪಂಡಿತ ಭೀಮರಾಯರವರ ವಿಶ್ವಾಸಕ್ಕೆ ಪಾತ್ರರಾಗಿ ಸಂಸ್ಕೃತ ವೈದ್ಯಶಾಸ್ತ್ರವನ್ನು ಸಮಗ್ರವಾಗಿ ಓದಿಹೇಳಿದರು. ಹಾಗೆಯೇ ಶಿಲಾಯುಂತ್ರದ ಮೂಲಕ ಅನೇಕ ವಿಷಯುಗಳನ್ನು ಛಾಪಿಸುತ್ತಾ ಬಂದರು. ವೈದ್ಯಶಾಲೆಯಲ್ಲಿ ಪಾಠಹೇಳುತ್ತಿದ್ದರು. ಈ ವೈದ್ಯರ ಪ್ರೋತ್ಸಾಹದಿಂದ ನಾಡೀನಿದಾನವೆಂಬ ವೈದ್ಯಗ್ರಂಥವನ್ನು ಕನ್ನಡ ಷಟ್ಪದಿ ವೃತ್ತಗಳಲ್ಲಿ ಕವಿತ್ವ ಮಾಡಿ ಅಚ್ಚುಹಾಕಿಸಿದರು. ಅನೇಕ ಪುರಾಣೋಕ್ತ ಹರಿಕಥೆಗಳನ್ನು ಜೋಗರಪಾಡು ದೇವರನಾಮಗಳನ್ನೂ ಮಾಡುತ್ತಲೂ ಇದ್ದರು. ಕೆಲವುಕಾಲ ಇವರು ಸ್ವಂತವಾಗಿ ಶಿಷ್ಯರಿಗೆ ಕಾವ್ಯ, ಚಂಪು, ನಾಟಕ ಮುಂತಾದುವನ್ನೆಲ್ಲಾ ಪಾಠ ಹೇಳುತಿದ್ದುದಲ್ಲದೆ, ಆ ವೈದ್ಯರೊಡನೆ ದೇಶಾಟನೆ ಸಹ ಮಾಡಿದರು. ಈ ವಿಷಯುಗಳೆಲ್ಲಾ ಆಗ್ಗೆ ದಿವಾನರಾಗಿದ್ದ ರಂಗಾಚಾರ್ಯರವರೂ ದರ್ಬಾರ್ ಬಕ್ಷಿಯವರಾಗಿದ್ದ ಮೆ॥ ಅಂಬಿಲ್ ನರಸಿಹ್ಮಯ್ಯಂಗಾರ್ಯರವರೂ ಸಹ ಇವರ ವಿಚಾರವನ್ನು ತಿಳಿದು ಇವರನ್ನು ಕರೆಸಿ ಪರೀಕ್ಷೆ ಮಾಡುವಲ್ಲಿ ಸಂಸ್ಕೃತದಲ್ಲೂ, ಕನ್ನಡದಲ್ಲೂ, ಪಾಂಡಿತ್ಯವುಳ್ಳವರೆಂತಲೂ, ಉಭಯ ಭಾಷೆಗಳಲ್ಲಿಯೂ ಬಹು ಸರಳವಾಗಿಯೂ ಬಹುಬಾಗ್ರತೆ ಕವಿತ್ವ ಮಾಡತಕ್ಕವರೆಂದೂ ತಿಳಿದು ಬಹುಸಂತೋಷಪಟ್ಟು

ಚಿರಕಾಲ ಸ್ಮರಣೀಯರಾದ ಲೇಟ್ ಶ್ರೀ ಜಾಮಭೂಪಾಲರವರ ಸನ್ನಿಧಿಯಲ್ಲಿ ಅರಿಕೆ ಮಾಡಿದಮೇಲೆ ಪ್ರಥಮತಃ ಕರ್ಣಾಟಕ ಹರಿಶ್ಚಂದ್ರ ನಾಟಕವನ್ನು ೧೦—೧೫ ದಿವಸಗಳೊಳಗಾಗಿ ಕವಿತ್ವಮಾಡಿ ಪೂರೈಸಿದುದಲ್ಲದೆ, ಅಷ್ಟಭಾಷ ಮುಂತಾದ ಅನೇಕ ಚಿತ್ರಬಂಧಗಳನ್ನೂ ಸಪ ರಚಿಸಿ ಮಹಾ ಪ್ರಭುಗಳಲ್ಲಿ ಓದಿಹೇಳಿದರು. ಮಹಾ ಪ್ರಭುಗಳು ಪರಮಸಂತೋಷಯುಕ್ತರಾಗಿ ಶಾಲುಜೋಡಿಯನ್ನು ಹೊದ್ದಿಸಿ ವಿದ್ವತ್ ಸಂಬಳ ಮಾಡಿಕೊಟ್ಟುದಲ್ಲದೆ, ಅನುಕೂಲವಾಗುವಷ್ಟು ದ್ರವ್ಯಸಹಾಯ ಮಾಡಿದರು. ಮಹಾರಾಜರವರ ಅಪ್ಪಣೆಪ್ರಕಾರ ಆ ಕಾಲದಲ್ಲಿ ೩—೪ ನಾಟಕಗಳನ್ನು ಬಹು ಜಾಗ್ರತೆಯಲ್ಲೇ ಮಾಡಿಕೊಟ್ಟರು. ಅನಂತರ ಮಹಾರಾಜರವರ ನಾಕ್ಷಾತ್ ಅಪ್ಪಣೆಪ್ರಕಾರವೂ ಮೆ॥ ಅಂಜಿಲ್ ನರಸಿಹ್ಮಯ್ಯಂಗಾರ್ರವರ ಪ್ರೋತ್ಸಾಹ ಪ್ರಕಾರವೂ ಪಾಕಶಾಸ್ತ್ರ ಕಲ್ಯಾಣಗೀತಾವಳಿ ಮುಂತಾದುದನ್ನು ಮಾಡಿಕೊಟ್ಟರು. ಬಾಲಿಕಾ ಬಾಲಕರ ವಿದ್ಯಾವಿಷಯದಲ್ಲಿ ಬದ್ಧಾದರರಾಗಿಯೂ, ವಿದ್ಯಾಪಕ್ಷಪಾತಿಗಳೂ ಆದ ಮೆ॥ ನರಸಿಂಹಯ್ಯಂಗಾರ್ಯರವರು (ಹುಜೂರು ಅಪ್ಪಣೆ) ಪ್ರಕಾರ ಮಹಾರಾಣಿ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತ ಪಾಠ ಹೇಳುವುದಕ್ಕೆ ನೇಮಿಸಿಕೊಂಡು ಅಲ್ಲಿಯೂ ಬೇರೆ ವೇತನ ಕೊಟ್ಟು ಪೋಷಿಸುತಿದ್ದರು.

ಅನಂತರ ಇಂಗ್ಲೀಷ್ ಮಹಾಕವಿಯಿಂದ ರಚಿತವಾದ ನಾಟಕಗಳನ್ನು ಅ॥ ಕ॥ ಮೆ॥ ಅನಂದರಾಯರವರಿಂದ ಕರ್ಣಾಟಕ ಭಾಷಾಕ್ಕೆ ತರ್ಜುಮೆ ಮಾಡಿದುದಕ್ಕೆ ಕಂದ, ವೃತ್ತ, ಗೀತ ಮುಂತಾದುವುಗಳನ್ನು ಕವಿತ್ವ ಮಾಡಿಕೊಟ್ಟರು.

ಶ್ರೀಮ್ಮ ಮಹಿಶೂರು ಸಂಸ್ಥಾನಕ್ಕೆ ಪೂರ್ವದ ಮಹಾರಾಜರಾಗಿದ್ದ ಚಿಕ್ಕ ಕೃಷ್ಣಭೂಪಾಲರವರ ಧರ್ಮಪತ್ನಿಯರಾಗಿಯೂ ದಳವಾಯಿಯವರ ಮನೆತನಕ್ಕೆ ಸೇರಿದ ಕಳಲೆ ದಳವಾಯಿ ಕಾಂತರಾಜೆ ಅರಸಿನವರ ಕುಮಾರಿಯರಾಗಿದ್ದ ಚೆಲ್ವಾಜಮ್ಮಣ್ಣಿಯವರಿಂದ ರಚಿತವಾಗಿದ್ದ ವರನಂದಿಕಲ್ಯಾಣವೆಂಬ ಪುರಾತನ ಗ್ರಂಥವನ್ನು ಶ್ರೀಮ್ಮ ಮಹಾರಾಣಿ ರೀಜಂಟರವರ ಮತ್ತು ಶ್ರೀ ಪರಕಾಲ ಸ್ವಾಮಿಗಳವರ ಅಪ್ಪಣೆಪ್ರಕಾರ ಈ ಗ್ರಂಥವನ್ನು ಅಮೂಲಾಗ್ರವಾಗಿಯೂ ಶ್ರಮಪಟ್ಟು ಕ್ರಮಪಡಿಸಿಕೊಟ್ಟನಂತರ ಇದನ್ನು ಮಹಾಮಾತುಶ್ರೀ ರೀಜಂಟರವರು ಅಮೂಲಾಗ್ರವೂ ನೋಡಿಕೇಳಿ ಪರಮಸಂತೋಷಪಟ್ಟು ಗ್ರಂಥವನ್ನು ಆರಮನೆ ಅಧಿಕಾರದವರು ಅಚ್ಚು ಮಾಡಿಸಬೇಕೆಂದು ಅಪ್ಪಣೆ ಕೊಟ್ಟು ಅಚ್ಚುಪಾಕಿಸಿರುತ್ತಾರೆ.

ಶ್ರೀ ಶ್ರೀ ಪರಕಾಲ ಮಠದ ಸ್ವಾಮಿಗಳವರಲ್ಲೂ ಶ್ರೀ ಶ್ರೀ ಉತ್ತರಾದಿ ಮಠದ

ಸ್ವಾಮಿಗಳವರಲ್ಲೂ ಶ್ರೀ ಶ್ರಿಂಗೇರಿ ಸ್ವಾಮಿಗಳವರ ಸನ್ನಿಧಿಯಲ್ಲೂ ಇವರ ಸಂಸ್ಕೃತ ಕನ್ನಡ ಕವಿತ್ವ ಚಿತ್ರಕವಿತಾ ಸಹ ವಿದಿತವಾಗಿರುತ್ತದೆಯಲ್ಲದೆ, ಮತಗಳಿಂದ ಬಹು ಮಾನ ಸಹ ಹೊಂದಿರುತ್ತಾರೆ. ಈ ಸಂಸ್ಥಾನದ ಅನೇಕ ದೊಡ್ಡಮನುಷ್ಯರುಗಳು ಸಹ ಇವರ ಕವಿತಾ ವಿದ್ವತ್ತು ಕೇಳಿ ಇವರಲ್ಲಿ ವಿಶ್ವಾಸವುಳ್ಳವರಾಗಿದಾರೆ. ಈಗ ದರ್ಬಾರ್ ಲಕ್ಷ್ಮಿಯವರಾದ ಮೆ॥ ಲಿಂಗರಾಜೆ ಅರಸಿನವರು ಮೆ॥ ಚಿಕ್ಕಲಿಂಗರಾಜೆ ಅರಸಿನವರು ಸಹ ಈ ಕವಿಗಳಿಗೆ ಬಹು ಸಹಾಯಕರಾಗಿಯೂ, ಅಭಿಮಾನಿಗಳಾಗಿದಾರೆಯಲ್ಲದೆ, ಈ ಸಂಸ್ಥಾನಕ್ಕೆ ಇತರದೇಶದ ಮಹಾರಾಜರು ವೈಸರಾಯಿ ಗವರ್ನರುಗಳ ಸವಾರಿ ಚತ್ತೈಸಿದವೇಳೆ ಸಹ ಅನೇಕ ಶ್ಲೋಕಗಳನ್ನು ಕಂದ, ವೃತ್ತ, ಗೀತಗಳನ್ನು ಸಹ ಬಹು ಚಮತ್ಕಾರವಾಗಿ ಕವನ ಮಾಡಿರುತ್ತಾರೆ. ಪ್ರಿನ್ಸ್ ಆಫ್ ವೇಲ್ಸ್ ಮಹಾಪ್ರಭುಗಳ ಸವಾರಿ ದಯಮಾಡಿಸಿದ ವೇಳೆ ಇವರು ಮಾಡಿದ ಅಷ್ಟ ಭಾಷಾಚಿತ್ರದ ಕವಿತ್ವ ಪರಾಂಬರಿಕೆಗೆ ಬಂದಿರುವುದಲ್ಲದೆ ನಮ್ಮ ಶ್ರೀಮನ್ಮ. ಮಹಾರಾಜಾ ಕೃಷ್ಣರಾಜ ಒಡೆಯರವರ ಮಹಾಸನ್ನಿಧಾನದಲ್ಲೂ ಈ ವಿದ್ವಾಂಸರ ಯೋಗ್ಯತೆಯು ವಿದಿತವಾಗಿ ಕಟಾಕ್ಷವು ಅಭಿವೃದ್ಧಿಗೆ ಬರುವುದರೊಳಗೆ ಕಾಯಿಲೆ ಸಂಭವಿಸಿ ಇವರು ಜೂನ್ ತಿಂಗಳು ೧೫ನೆಯ ತಾರೀಖು ಶುಕ್ರವಾರ ದೈವಾಧೀನರಾದರು. ಇದನ್ನು ಕೇಳಿ ವಿದ್ವಜ್ಜನಾಭಿಮಾನಿಗಳಾದ ನಮ್ಮ ಶ್ರೀ ಕೃಷ್ಣರಾಜಭೂಪಾಲರವರು ವಿದ್ವಾಂಸರ ಸಾರ್ಥಕಕ್ಕೊಕ್ಕೇಸ್ಕರ ಇವರ ಕುಟುಂಬದವರ ಮೇಲೆ ಕಟಾಕ್ಷವಿಟ್ಟು ಉದಾರವಾದ ದ್ರವ್ಯಸಹಾಯ ಅಪ್ಪಣೆಕೊಡಿಸಿರುತ್ತಾರೆ. ಇವರ ಯಾವ ಜೀವವೂ ಗ್ರಂಥಾವಲೋಕನ, ಗ್ರಂಥರಚನ, ಇವುಗಳಲ್ಲೇ ಆಸಕ್ತರಾಗಿದ್ದರು. ಇವರಿಗೆ ಸಂಸ್ಕೃತದಲ್ಲಿ ಪಾಂಡಿತ್ಯವು ಇದ್ದುದಲ್ಲದೆ, ಕನ್ನಡ, ಜ್ಯೋತಿಷ, ವೈದ್ಯ, ಮಹಾರಾಷ್ಟ್ರದಲ್ಲೂ ಪರಿಶ್ರಮವಿತ್ತು. ಕನ್ನಡ, ಸಂಸ್ಕೃತ, ಮಹಾರಾಷ್ಟ್ರ ಇವುಗಳನ್ನು ಬಹುಸರಳ ಕವಿಗಳಾಗಿಯೂ ಬಹುಜಾಗ್ರತೆ ಕವನಮಾಡುವರಾಗಿದ್ದರು. ಅಷ್ಟಭಾಷಾ ಮುಂತಾದ ಚಿತ್ರಕವಿತ್ವದಲ್ಲಿ ಇವರು ಬಹು ನಿಪುಣರು.

ಇವರಿಂದ ರಚಿತವಾದ ಗ್ರಂಥಗಳು.

೧. ಕರ್ನಾಟಕ ಹರಿಶ್ಚಂದ್ರನಾಟಕ. ೨. ಕರ್ನಾಟಕ ಚಂದ್ರಹಾಸನಾಟಕ. ೩. ಕರ್ನಾಟಕ ಸಿರಿಯಾಳರಾಜನ ಚರಿತ್ರೆ. ೪. ಕರ್ನಾಟ ಕಭಾಷಾಕರ. ೫. ಕರ್ನಾಟಕ ವೇಣೀಸಂಹಾರ ನಾಟಕ. ೬. ಕರ್ನಾಟಕ ಮದಾಲಸಾ ಪರಿ

ಚಿರಕಾಲ ಸ್ಮರಣೀಯರಾದ ಲೇಟ್ ಶ್ರೀ ಜಾಮಭೂಪಾಲರವರ ಸನ್ನಿಧಿಯಲ್ಲಿ ಅರಿಕೆ ಮಾಡಿದಮೇಲೆ ಪ್ರಥಮತಃ ಕರ್ಣಾಟಕ ಹರಿಶ್ಚಂದ್ರ ನಾಟಕವನ್ನು ೧೦—೧೫ ದಿವಸಗಳೊಳಗಾಗಿ ಕವಿತ್ವಮಾಡಿ ಪೂರೈಸಿದುದಲ್ಲದೆ, ಅಷ್ಟಭಾಷ ಮುಂತಾದ ಅನೇಕ ಚಿತ್ರಬಂಧಗಳನ್ನೂ ಸಹ ರಚಿಸಿ ಮಹಾ ಪ್ರಭುಗಳಲ್ಲಿ ಓದಿಹೇಳಿದರು. ಮಹಾ ಪ್ರಭುಗಳು ಪರಮಸಂತೋಷಯುಕ್ತರಾಗಿ ಶಾಲುಜೋಡಿಯನ್ನು ಹೊದ್ದಿಸಿ ವಿದ್ವತ್ ಸಂಬಳ ಮಾಡಿಕೊಟ್ಟುದಲ್ಲದೆ, ಅನುಕೂಲವಾಗುವಷ್ಟು ದ್ರವ್ಯಸಹಾಯ ಮಾಡಿದರು. ಮಹಾರಾಜರವರ ಅಪ್ಪಣೆಪ್ರಕಾರ ಆ ಕಾಲದಲ್ಲಿ ೩—೪ ನಾಟಕಗಳನ್ನು ಬಹು ಜಾಗ್ರತೆಯಿಲ್ಲೇ ಮಾಡಿಕೊಟ್ಟರು. ಅನಂತರ ಮಹಾರಾಜರವರ ಸಾಕ್ಷಾತ್ ಅಪ್ಪಣೆಪ್ರಕಾರವೂ ಮೆ॥ ಅಂಬಿಲ್ ನರಸಿಹ್ಮಯ್ಯಂಗಾರ್ರವರ ಪ್ರೋತ್ಸಾಹ ಪ್ರಕಾರವೂ ಪಾಕಶಾಸ್ತ್ರ ಕಲ್ಯಾಣಗೀತಾವಳಿ ಮುಂತಾದುದನ್ನು ಮಾಡಿಕೊಟ್ಟರು. ಬಾಲಿಕಾ ಬಾಲಕರ ವಿದ್ಯಾವಿಷಯದಲ್ಲಿ ಬದ್ಧಾದರರಾಗಿಯೂ, ವಿದ್ಯಾಪಕ್ಷಪಾತಿಗಳೂ ಆದ ಮೆ॥ ನರಸಿಂಹಯ್ಯಂಗಾರ್ಯರವರು (ಹುಜೂರು ಅಪ್ಪಣೆ) ಪ್ರಕಾರ ಮಹಾರಾಣಿ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತ ಪಾಠ ಹೇಳುವುದಕ್ಕೆ ನೇಮಿಸಿಕೊಂಡು ಅಲ್ಲಿಯೂ ಬೇರೆ ವೇತನ ಕೊಟ್ಟು ಪೋಷಿಸುತಿದ್ದರು.

ಅನಂತರ ಇಂಗ್ಲೀಷ್ ಮಹಾಕವಿಯಿಂದ ರಚಿತವಾದ ನಾಟಕಗಳನ್ನು ಅ॥ ಕ॥ ಮೆ॥ ಆನಂದರಾಯರವರಿಂದ ಕರ್ಣಾಟಕ ಭಾಷಾಕ್ಕೆ ತರ್ಜುಮೆ ಮಾಡಿದುದಕ್ಕೆ ಕಂದ, ವೃತ್ತ, ಗೀತ ಮುಂತಾದುವುಗಳನ್ನು ಕವಿತ್ವ ಮಾಡಿಕೊಟ್ಟರು.

ಶ್ರೀಮತ್ ಮಹಿಶೂರು ಸಂಸ್ಥಾನಕ್ಕೆ ಪೂರ್ವದ ಮಹಾರಾಜರಾಗಿದ್ದ ಚಿಕ್ಕ ಕೃಷ್ಣಭೂಪಾಲರವರ ಧರ್ಮಪತ್ನಿಯರಾಗಿಯೂ ದಳವಾಯಿಯವರ ಮನೆತನಕ್ಕೆ ಸೇರಿದ ಕಳಲೆ ದಳವಾಯಿ ಕಾಂತರಾಜೆ ಅರಸಿನವರ ಕುಮಾರಿಯರಾಗಿದ್ದ ಚೆಲ್ವಾಜಮ್ಮಣ್ಣಿಯವರಿಂದ ರಚಿತವಾಗಿದ್ದ ವರನಂದಿಕಲ್ಯಾಣವೆಂಬ ಪುರಾತನ ಗ್ರಂಥವನ್ನು ಶ್ರೀಮತ್ ಮಹಾರಾಣಿ ರೀಜಂಟರವರ ಮತ್ತು ಶ್ರೀ ಪರಕಾಲ ಸ್ವಾಮಿಗಳವರ ಅಪ್ಪಣೆಪ್ರಕಾರ ಈ ಗ್ರಂಥವನ್ನು ಅಮೂಲಾಗ್ರವಾಗಿಯೂ ಶ್ರಮಪಟ್ಟು ಕ್ರಮಪಡಿಸಿಕೊಟ್ಟನಂತರ ಇದನ್ನು ಮಹಾಮಾತುಶ್ರೀ ರೀಜಂಟರವರು ಅಮೂಲಾಗ್ರವೂ ಓದಿಕೇಳಿ ಪರಮಸಂತೋಷಪಟ್ಟು ಗ್ರಂಥವನ್ನು ಅರಮನೆ ಅಧಿಕಾರದವರು ಅಚ್ಚು ಹಾಕಿಸಬೇಕೆಂದು ಅಪ್ಪಣೆ ಕೊಟ್ಟು ಲಚ್ಚು ಹಾಕಿಸಿರುತ್ತಾರೆ.

ಶ್ರೀ ಶ್ರೀ ಪರಕಾಲ ಮಠದ ಸ್ವಾಮಿಗಳವರಲ್ಲೂ ಶ್ರೀ ಶ್ರೀ ಉತ್ತರಾದಿ ಮಠದ

ಸ್ವಾಮಿಗಳವರಲ್ಲೂ ಶ್ರೀ ಶ್ರಿಂಗೇರಿ ಸ್ವಾಮಿಗಳವರ ಸನ್ನಿಧಿಯಲ್ಲೂ ಇವರ ಸಂಸ್ಕೃತ ಕನ್ನಡ ಕವಿತ್ವ ಚಿತ್ರಕವಿತಾ ಸಹ ವಿದಿತವಾಗಿರುತ್ತದೆಯಲ್ಲದೆ, ಮಠಗಳಿಂದ ಬಹು ಮಾನ ಸಹ ಹೊಂದಿರುತ್ತಾರೆ. ಈ ಸಂಸ್ಥಾನದ ಅನೇಕ ದೊಡ್ಡಮನುಷ್ಯರುಗಳು ಸಹ ಇವರ ಕವಿತಾ ವಿದ್ವತ್ತು ಕೇಳಿ ಇವರಲ್ಲಿ ವಿಶ್ವಾಸವುಳ್ಳವರಾಗಿದಾರೆ. ಈಗ ದರ್ಬಾರ್ ಒಕ್ಷಿಯವರಾದ ಮೆ॥ ಲಿಂಗರಾಜೆ ಅರಸಿನವರು ಮೆ॥ ಚಿಕ್ಕಲಿಂಗರಾಜೆ ಅರಸಿನವರು ಸಹ ಈ ಕವಿಗಳಿಗೆ ಬಹು ಸಹಾಯಕರಾಗಿಯೂ, ಅಭಿಮಾನಿಗಳಾಗಿದಾರೆಯಲ್ಲದೆ, ಈ ಸಂಸ್ಥಾನಕ್ಕೆ ಇತರದೇಶದ ಮಹಾರಾಜರು ವೈಸರಾಯಿ ಗವರ್ನರುಗಳ ಸವಾರಿ ಚತ್ತೈಸಿದವೇಳೆ ಸಹ ಅನೇಕ ಶ್ಲೋಕಗಳನ್ನು ಕಂದ, ವೃತ್ತ, ಗೀತಗಳನ್ನು ಸಹ ಬಹು ಚಮತ್ಕಾರವಾಗಿ ಕವನ ಮಾಡಿರುತ್ತಾರೆ. ಪ್ರಿನ್ಸ್ ಆಫ್ ವೇಲ್ಸ್ ಮಹಾಪ್ರಭುಗಳ ಸವಾರಿ ದಯಮಾಡಿಸಿದ ವೇಳೆ ಇವರು ಮಾಡಿದ ಅಷ್ಟ ಭಾಷಾಚಿತ್ರದ ಕವಿತ್ವ ಪರಾಂಬರಿಕೆಗೆ ಬಂದಿರುವುದಲ್ಲದೆ ನಮ್ಮ ಶ್ರೀಮ್ಮ ಮಹಾರಾಜಾ ಕೃಷ್ಣರಾಜ ಒಡೆಯರವರ ಮಹಾಸನ್ನಿಧಾನದಲ್ಲೂ ಈ ವಿದ್ವಾಂಸರ ಯೋಗ್ಯತೆಯು ವಿದಿತವಾಗಿ ಕಟಾಕ್ಷವು ಅಭಿವೃದ್ಧಿಗೆ ಬರುವುದರೊಳಗೆ ಕಾಯಿಲೆ ಸಂಭವಿಸಿ ಇವರು ಜೂನ್ ತಿಂಗಳು ೧೫ನೆಯ ತಾರೀಖು ಶುಕ್ರವಾರ ದೈವಾಧೀನರಾದರು. ಇದನ್ನು ಕೇಳಿ ವಿದ್ವಜ್ಜನಾಭಿಮಾನಿಗಳಾದ ನಮ್ಮ ಶ್ರೀ ಕೃಷ್ಣರಾಜಭೂಪಾಲರವರು ವಿದ್ವಾಂಸರ ಸಾರ್ಥಕಕ್ಕೋಸ್ಕರ ಇವರ ಕುಟುಂಬದವರ ಮೇಲೆ ಕಟಾಕ್ಷವಿಟ್ಟು ಉದಾರವಾದ ದ್ರವ್ಯಸಹಾಯ ಅಪ್ಪಣೆಕೊಡಿಸಿರುತ್ತಾರೆ. ಇವರ ಯಾವ ಜೀವವೂ ಗ್ರಂಥಾವಲೋಕನ, ಗ್ರಂಥರಚನ, ಇವುಗಳಲ್ಲೇ ಆಸಕ್ತರಾಗಿದ್ದರು. ಇವರಿಗೆ ಸಂಸ್ಕೃತದಲ್ಲಿ ಪಾಂಡಿತ್ಯವು ಇದ್ದುದಲ್ಲದೆ, ಕನ್ನಡ, ಜ್ಯೋತಿಷ, ವೈದ್ಯ, ಮಹಾರಾಷ್ಟ್ರದಲ್ಲೂ ಪರಿಶ್ರಮವಿತ್ತು. ಕನ್ನಡ, ಸಂಸ್ಕೃತ, ಮಹಾರಾಷ್ಟ್ರ ಇವುಗಳನ್ನು ಬಹುಸರಳ ಕವಿಗಳಾಗಿಯೂ ಬಹುಜಾಗ್ರತೆ ಕವನಮಾಡುವರಾಗಿದ್ದರು. ಅಷ್ಟಭಾಷಾ ಮುಂತಾದ ಚಿತ್ರಕವಿತ್ವದಲ್ಲಿ ಇವರು ಬಹು ನಿಪುಣರು.

ಇವರಿಂದ ರಚಿತವಾದ ಗ್ರಂಥಗಳು.

೧. ಕರ್ಣಾಟಕ ಹರಿಶ್ಚಂದ್ರನಾಟಕ. ೨. ಕರ್ಣಾಟಕ ಚಂದ್ರಹಾಸನಾಟಕ. ೩. ಕರ್ಣಾಟಕ ಸಿರಿಯಾಳರಾಜನ ಚರಿತ್ರೆ. ೪. ಕರ್ಣಾಟಕ ಕಭಾಷಾಕರ. ೫. ಕರ್ಣಾಟಕ ವೇಣೀಸಂಹಾರ ನಾಟಕ. ೬. ಕರ್ಣಾಟಕ ಮದಾಲಸಾ ಪರಿ

ಣಯ ನಾಟಕ. ೭. ಅನುಕರಣಗೀತಲಹರಿ. ೪. ಕಲ್ಯಾಣಗೀತಾವಳಿ. ೯. ಕರ್ಣಾಟಕ ಪಾಕಶಾಸ್ತ್ರ, ಇದು ತಮಿಳು, ತೆಲುಗು, ಭಾಷೆಗಳಲ್ಲಿ ಭಾಷಾಂತರದಿಂದ ಮುದ್ರಿಸಿನಲ್ಲಿ ಅಚ್ಚಾಗಿರುತ್ತೆ. ೧೦. ಕರ್ಣಾಟಕಶೌಚ ನಿರ್ಣಯ. ೧೧. ನಾಡೀನಿದಾನವೆಂಬ ವೈದ್ಯಗ್ರಂಥ. (ಹರಿಕಥೆಗಳು) ೧೨. ಉತ್ಥಾನದ್ವಾದಶಿ ಕಥೆ. ೧೩. ದ್ರೌಪದಿ ಸ್ವಯಂವರ. ೧೪. ಅನುಸೂಯಾಚರಿತ್ರೆ. ೧೫. ಪದ್ಮಾವತೀ ಕಲ್ಯಾಣ. ೧೬. ತನಕಾಂಗಿ ಕಲ್ಯಾಣ. ೧೭. ಚಂದ್ರಹಾಸನ ಕಥೆ. ೧೮. ವಾಮನಾವತಾರದ ಕಥೆ. ೧೯. ಪ್ರಹ್ಲಾದ ಚರಿತ್ರೆ. ೨೦. ಧ್ರುವಚರಿತ್ರೆ. ೨೧. ಅಜಾಮಿಳೋಪಾಖ್ಯಾನ. ೨೨. ಕುಚೇಲೋಪಾಖ್ಯಾನ. ೨೩. ಶಶಿರೇಖಾ ಕಲ್ಯಾಣ. ೨೪. ಅನೇಕ ದೇವರನಾಮಗಳು. ೨೫. ಶೃಂಗಾರ ಜಾವಡಿಗಳು. ೨೬. ವರನಂದೀ ಕಲ್ಯಾಣ, ಪರಿಷ್ಕರಿಸಿದ್ದು. ೨೭. ನರಪತಿಚರಿತ್ರೆ, ಪರಿಷ್ಕರಿಸಿದ್ದು. ೨೮. ಸೋಮೇಶ್ವರಶತಕ ಪರಿಷ್ಕರಿಸಿದ್ದು. ೨೯. ಅನೇಕ ವಿಧವಾದ ಅಷ್ಟಭಾಷಾ ಮುಂತಾದ ಚಿತ್ರಕವಿತೆಗಳು. ೩೦. ಕರ್ಣಾಟಕ ಭವಿಷ್ಯೋತ್ತರ ಪುರಾಣ (ಚಂಪು) ಇಂಗ್ಲೀಷು ನಾಟಕಗಳು, ಅಂದರೆ, ಕೋಮಿಯೋಜೂಲಿಯಟ್, ಮರ್ಚೆಂಟ್ ಆಫ್ ವೆನಿಸ್ ಮುತ್ತು ಹ್ಯಾಮ್ಲಟು ಇವುಗಳಿಗೆ ಅಮೂಲಾಗ್ರವಾಗಿ ಕಂದ ವೃತ್ತ, ಗೀತಗಳನ್ನು ರಚಿಸಿರುವರು.

ಮಹಿಶೂರ ಸಂಸ್ಥಾನದ ಶ್ರೀವ.೯ ಮಹಾರಾಜರವರ ಆಸ್ಥಾನದ ಕವಿಯಾಗಿ ಪ್ರಸಿದ್ಧಗೊಂಡಿದ್ದ ಇವರು ದೈವಾಧೀನರಾದುದು ಬಹಳ ಶೋಚನೀಯವಾಗಿರುವುದು. ದೇವರ ಇಚ್ಛೆಗೆ ಯತ್ನವಿಲ್ಲ. ಸುಚರಿತರಾದ ಇವರಿಗೆ ಶಾಂತಿಯೂ ಮೋಕ್ಷವೂ ದೊರೆಯುವುದರಲ್ಲಿ ಸಂದೇಹವಿರಲಾರದು.

* ವಿದ್ಯಾವಿನಿ. *

ಭಾಗ ೧೪.] ಜೂಲೈ—೧೯೦೬. [ಸಂಚಿಕೆ ೭.

ಮೆ॥ ತ್ಯಾಗರಾಜರವರು.

ಕಳೆದ ವರುಷದ ಕೇಂಬ್ರಿಡ್ಜ ಕಲಾಶಾಲೆಯು ಗಣಿತಶಾಸ್ತ್ರದ ಪರೀಕ್ಷೆಯಲ್ಲಿ ಅಗ್ರಗಣ್ಯರಾಗಿ ಪ್ರಖ್ಯಾತಿಗೊಂಡ ಇವರು ಮದರಾಸ ಯೂನಿವರ್ಸಿಟಿಯಲ್ಲಿ ವ್ಯಾಸಂಗ ಮಾಡಿದವರು. ತಂಜಾವೂರು ಡಿಸ್ಟ್ರಿಕ್ಟು ಇವರ ಜನ್ಮಸ್ಥಾನ. ಮೆ॥ ತ್ಯಾಗರಾಜರವರು ಇವರು ಮೆ॥ ಅರುಣಾಚಲಶಾಸ್ತ್ರಿಗಳ ಮಕ್ಕಳು. ಇವರು ಎಂ. ಎ. ಪರೀಕ್ಷೆಯನ್ನು ಕೊಟ್ಟ ತರುವಾಯ ಗಣಿತ ಶಾಸ್ತ್ರಾಭ್ಯಾಸಕ್ಕೆ ಮಾತೃಸ್ಥಾನವೆಂದು ಪ್ರಸಿದ್ಧಿಗೊಂಡಿರುವ ಕೇಂಬ್ರಿಡ್ಜನಲ್ಲಿ ವಿದ್ಯಾಭ್ಯಾಸ ಮಾಡಲು ಇಂಡಿಯಾ ಗೌರ್ನಮೆಂಟಿನವರು ವೇತನವನ್ನು ಕೊಟ್ಟು ಕಳುಹಿಸಿದರು. ಅಲ್ಲಿ ಟ್ರಿನಿಟಿ ಕಾಲೇಜಿನಲ್ಲಿ ಎರಡು ವರುಷಗಳು ವ್ಯಾಸಂಗಮಾಡಿ, ಅತ್ಯುತ್ತಮವಾದ ತೇರ್ಗಡೆಯನ್ನು ಹೊಂದಿದರು. ಈಗ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಇವರು ಓದುತ್ತಾರೆಂದು ತಿಳಿಯಬರುತ್ತಿದೆ. ಅದರಲ್ಲೂ ಅತ್ಯುತ್ತಮವಾದ ಪದವಿಯನ್ನು ಅಲಂಕರಿಸುವುರೆಂದು ಹಾರೈಸುವೆವು.

ಬೊಂಬಾಯಿ ಪ್ರೈಮರೀ ವಿದ್ಯಾಭ್ಯಾಸ.

ಬೊಂಬಾಯಿ ಪಟ್ಟಣದಲ್ಲಿ ಪ್ರೈಮರೀ ಸ್ಕೂಲುಗಳು ಅನೇಕವಿರುತ್ತಿವೆ. ಈ ಸ್ಕೂಲುಗಳ ಸಂಖ್ಯೆಯೂ ವಿದ್ಯಾರ್ಥಿಗಳ ಸಂಖ್ಯೆಯೂ ದಿನೇದಿನೇ ಹೆಚ್ಚುತ್ತಿವೆ. ಗೌರ್ನಮೆಂಟ್ ಸ್ಕೂಲುಗಳು ಅಲ್ಲದೆ ಮುನಿಸಿಪಲ್ ಮತ್ತು ಏಡೆಡ್ ಸ್ಕೂಲುಗಳು ಅನೇಕವಾಗಿರುತ್ತಿವೆ. ಕೆಲವು ಸ್ಕೂಲುಗಳು ಚೆನ್ನಾಗಿ ಬೆಳಕು ಗಾಳಿ ಸಹಾ ಇಲ್ಲದ ಸ್ಥಳಗಳಲ್ಲಿರುವುವು. ಇವನ್ನು ನೋಡಿ ಬೆಳಕು ಗಾಳಿ ಇರತಕ್ಕ ಕಟ್ಟಡಗಳು ಎಲ್ಲಾ ಸ್ಕೂಲುಗಳಿಗೂ ಕಟ್ಟಿಸಿಕೊಡಬೇಕೆಂಬ ಉದ್ದೇಶವು ಗೌರ್ನಮೆಂಟಿನವರಿಗೂ ಮುನಿಸಿಪಾಲಿಟಿಯವರಿಗೂ ಉಂಟಾಗುತ್ತಲಿರುವುದು. ಈ ಪಟ್ಟಣದಲ್ಲಿ ೩೫೦,೦೦೦ ಜನ

ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಾರೆ. ಓದುಬರಹ ಗಳನ್ನು ಕಲಿತು ಸ್ವಶಕ್ತಿಯಿಂದ ಜೀವಿಸುವುದಕ್ಕೆ ಸಾಧಕವಾದ ಯಾವುದಾದರೂ ಒಂದು ವೃತ್ತಿಯನ್ನು ಎಲ್ಲರಿಗೂ ಕಲಿಸುವುದು ಅತ್ಯಂತ ಆವಶ್ಯಕವೆಂದು ಗೌರ್ನ ಮೆಂಟಿನವರು ಭಾವಿಸಿ ರುತ್ತಾರೆ. ಪ್ರೈಮರೀ ವಿದ್ಯಾಭ್ಯಾಸವನ್ನು ಬಲಾತ್ಕರಿಸಬೇ ಕೆಂಬ ಉದ್ದೇಶವು ಮ್ಯುನಿಸಿಪಾಲಿಟಿಯವರಿಗೆ ಉಂಟಾಗಿರುವುದು. ಅದಕ್ಕಾಗಿರತಕ್ಕ ಫೀಯನ್ನು ತೆಗೆದುಹಾಕಬೇಕೆಂಬ ಅಭಿಪ್ರಾಯವನ್ನು ಅನೇಕ ವಿದ್ಯಾಭಿಮಾನಿಗಳು ಕೊಡುವರು. ವಿದ್ಯಾವಂತರಾದ ಕೇವಲ ಓದುಬರಹ ಕಲಿತವರ ಸಂಖ್ಯೆಯು ಹೆಚ್ಚಾದ ಹಾಗೆಲ್ಲ ದೇಶೋನ್ನತಿಯು ಮಾರ್ಗವು ಸುಲಭವಾಗಿ ತೋರಿಬರವುದು.

ಮೈಸೂರು ವಿದ್ಯಾರ್ಥಿಗಳ ಸಂಖ್ಯೆ.

ಮೈಸೂರಿನ ಮಕ್ಕಳಲ್ಲಿ ಶೇಕಡಾ ೨೨ ರಂತೆ ವಿದ್ಯಾರ್ಥಿಗಳು ಸೇಕಡ ೪.೩೧ ವಿದ್ಯಾರ್ಥಿನೀಯರೂ ಇರುವರು. ವಿದ್ಯಾಭ್ಯಾಸಕ್ಕೋಸ್ಕರ ೧೨,೪೪,೪೪೪ ರೂ ಪಾಯಿಗಳು ಖರ್ಚಾಗುವುವು. ಈ ಪೈಕಿ ಸೇಕಡ ೪೪ ರಷ್ಟು ಗೌರ್ನಮೆಂಟಿನಿಂದ ಬರುವುದು ಉಳಿದುದು ಫೀಸ್ ಮೊದಲಾದುವುಗಳಿಂದ ಉತ್ಪತ್ತಿಯಾಗುವುದು. ಈ ಸಂಸ್ಥಾನದಲ್ಲಿ ಎರಡು ಇಂಗ್ಲಿಷ್ ಕಾಲೇಜುಗಳೂ ಎರಡು ಓರಿಯಂಟಲ್ ಕಾ ಲೇಜುಗಳೂ ಇರುವುವು. ಇದಲ್ಲದೆ ಮಹಾರಾಣಿ ಕಾಲೇಜು ಒಂದಿರುವುದು. ೨೩೧ ಸ್ಕೂಲುಗಳಿರುವುವು. ಇವುಗಳಲ್ಲಿ ೨೩೨೩೦ ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುವರು. ಪ್ರೈಮರೀ ವಿದ್ಯಾಭ್ಯಾಸದ ಸ್ಕೂಲುಗಳು ೧೩೧೧ ಇರುವುವು. ಇಲ್ಲಿ ೫೨,೫೯೯ ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುವರು. ಕೈಗಾರಿಕೆ ಪಾಠಶಾಲೆಗಳು ಕೆಲವಿರುವುವು. ಮೈಸೂರು ಕೈಗಾರಿಕೆ ಪಾಠಶಾಲೆಯು ಅಭಿವೃದ್ಧಿ ಸ್ಥಿತಿಗೆ ಬರುತ್ತಿರುವುದು. ಹೆಂಗಸರ ಕಾಲೇಜಿನ ಜೊತೆಗೆ ವಿದ್ಯಾರ್ಥಿನಿಯರಿಗೋ ಸ್ಕರ ೪೦ ಮಿಡಲ್ ಸ್ಕೂಲುಗಳೂ, ೨೦೨ ಪ್ರೈಮರೀ ಸ್ಕೂಲುಗಳೂ ಇರುವುವು. ಇವುಗಳಿಗೆ ೧೪೧,೧೪೨ ರೂಪಾಯಿಗಳು ಖರ್ಚಾಗುವುವು. ಪ್ರೈಮರೀ ಸ್ಕೂಲು ಗಳಿಗೆ ಸ್ಕೂಲ್ 'ಫೀ' ಗಳನ್ನು ತೆಗೆದು ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಬೇ ಕೆಂಬಯೋಚನೆಯೊಂದಿರುವುದು. ಇದರಿಂದ ಪ್ರಜೆಗಳಿಗೆ ತುಂಬಾ ಅನುಕೂಲ ವಾಗುವುದು.

ಜ್ವಾಲಾಮುಖಿಗಳು.

ರೋಮ್ ಜನಗಳು ಬೆಂಕಿಗೆ ಅಧಿದೇವತೆಯಾದ ಯಜ್ಞೇಶ್ವರನಿಂದ ಈ ಜ್ವಾಲಾಮುಖಿಯು ಉಂಟಾಗುವುದೆಂಬದಾಗಿಯೂ ಈ ದೇವತೆಯು ಕುಲುಮೆಗಳು ಯಟ್ನ ಪರ್ವತದ ಕೆಳಗೆ ಇರುವುದೆಂಬುದಾಗಿಯೂ ಸಾಮಾನ್ಯವಾಗಿ ಅನೇಕ ಪರ್ವತಾಗ್ರಗಳನ್ನು ಭೇದಿಸಿಕೊಂಡು ಈ ಜ್ವಾಲೆಯು ಮೇಲಕ್ಕೆ ಏಳುವುದಾಗಿಯೂ ಇದರಿಂದ ನೀರಿನ ಆವಿಯು ಕುದಿಯುವ ಜಲವು, ಮಣ್ಣು, ಧೂಳು, ಕಲ್ಲುಗಳು, ಕರಗಿದ ಭಂಡೆಗಳೂ, ಮೇಲಕ್ಕೆ ಹಾರಿಸಲ್ಪಡುವುದೆಂಬದಾಗಿಯೂ, ಹೇಳುತ್ತಿದ್ದರು. ಈ ಭೂಮಿಯ ಒಳಭಾಗದಲ್ಲಿ ಅತ್ಯಂತ ತೀಕ್ಷ್ಣವಾದ ಅಗ್ನಿಯು ಇರುವುದು. ಈ ಅಗ್ನಿಯು ಎಲ್ಲೆಲ್ಲಿ ಅವಕಾಶವು ಸಿಕ್ಕುವುದೋ ಆ ಮಾರ್ಗಗಳಿಂದ ಮೇಲಕ್ಕೆ ಬರುವುದು. ಕೆಲವುಕಡೆ ಕುದಿಯುವ ಕೆಸರಿನ ರೂಪವಾಗಿ ಒರುವುದುಂಟು. ಕ್ಯಾಸ್ಪಿಯನ್ ಸಮುದ್ರದ ಬಳಿಯಲ್ಲಿ ಹೀಗೆ ಬರುವುದು. ಕೆಲವುಕಡೆ ಈ ಭೂಗರ್ಭದ ಅಗ್ನಿಯು ಸಂಸರ್ಗದಿಂದ ಕುದಿಯುವ ನೀರೇ ಮೇಲಕ್ಕೆ ಬರುವುದು. ಐಸ್ಲೆಂಡ್ ದ್ವೀಪದ 'ಜೈಸರ್' ಈ ರೀತಿಯಲ್ಲಿ ಒರುವುದು. ಕೆಲವುಕಡೆ ಬಿಸಿಯಾಗಿರತಕ್ಕ ಬೂದಿ ಮತ್ತು ಕಲ್ಲುಗಳು ಮೇಲಕ್ಕೆ ಹಾರಿಸಲ್ಪಡುವುದು. ಸಮುದ್ರದ ಮಟ್ಟದಮೇಲೆ 18,887 ಅಡಿ ಎತ್ತರವುಳ್ಳ ಕೋಟಪಾಕ್ಸಿ ಎಂಬ ಆಂಡೀಸ್ ಪರ್ವತದ ಶಿಖರದಿಂದ ಮೇಲಕ್ಕೇಳುವ ಜ್ವಾಲಾಮುಖಿಯು ಈ ವಿಧವಾಗಿರುವುದು. ಪರ್ವತಾಗ್ರಗಳಿಂದ ಧೂಳೂ ಮತ್ತು ಕಲ್ಲುಗಳು ಮೇಲಕ್ಕೆ ಹಾರಿಸಲ್ಪಡುವುವಲ್ಲದೆ, ಭೂಗರ್ಭದ ಬೆಂಕಿಯು ಸಂಸರ್ಗದಿಂದ ಕರಗಿಸಲ್ಪಟ್ಟ ಜಲಾವಸೆಗೆ ಬಂದಿರತಕ್ಕ ಕಲ್ಲು ಲೋಹಗಳು ಪರ್ವತಾಗ್ರದಲ್ಲಿರತಕ್ಕ ಮುಖದಿಂದ ಉಕ್ಕಿ ನದಿಯಂತೆ ಪ್ರವಹಿಸುವುದು. ವೆಸೂವಿಯಸ್ ಮೊದಲಾದ ಪರ್ವತಗಳಲ್ಲಿ ಇವು ದೃಷ್ಟಿಪಥವನ್ನೈದುವುವು.

ಯಾವ ಪರ್ವತಾಗ್ರಗಳಿಂದ ಜ್ವಾಲೆಯು ಏಳುವುದೊ ಅಲ್ಲಿ ದೂರದ ಗುಡಿಗಿನಂತೆ ಶಬ್ದವು ಕೇಳಿಬರುವುದು. ಭೂಕಂಪ ಉಂಟಾಗುವುದು. ಪರ್ವತಾಗ್ರದಲ್ಲಿ ದ್ವಾರವಾಗುವುದು. ಅಲ್ಲಿಂದ ಧೂಳು, ಹೊಗೆಯು, ನೀರಿನ ಆವಿಯು, ಮೇಲಕ್ಕೆ ಏಳುವುದು. ಮೇಲಕ್ಕೆದ್ದ ನೀರಿನಾವಿಯು ಅಂತರಿಕ್ಷಕ್ಕೆ ಹೋಗಿ ಶೈತ್ಯ ಸಂಸರ್ಗದಿಂದ ಮಳೆಯಂತೆ ವರ್ಷಿಸುವುದು. 79 ನೇ ಇಸವಿಯಲ್ಲಿ ವೆಸೂವಿಯಸ್ ಜ್ವಾಲಾಮುಖಿಯುಂಟಾಗಿ ಪರ್ಕಿಲೇನಿಯಂ ಮತ್ತು ಪಾಂಪೆಯೆಂಬ ಪಟ್ಟಣಗಳು ಜಲಾವಸ್ಥೆ

ಯಿಂದ ಪ್ರವಹಿಸಿದ ಕಲ್ಲು, ಮಣ್ಣು, ಲೋಹ ಮೊದಲಾದುವುಗಳಿಂದ ಮುಚ್ಚಲ್ಪಟ್ಟವು. 16 ಶತಮಾನಗಳವರಿಗೂ ಈ ಪಟ್ಟಣಗಳು ಶಬ್ದವು ಕಡಮೆಯಾದಪಾಗೆಲ್ಲಾ ಶಿಲಾವಸ್ಥೆಯನ್ನು ಹೊಂದಿದ ಪ್ರವಾಹದ ಕೆಳಗೆ ಹೂತುಹೋಗಿದ್ದುವು. ಇದು ಪ್ರವಹಿಸಿದಾಗ ಜನರೂ, ಇತರ ಪ್ರಾಣಿಗಳೂ ಯಾವಯಾವ ಅವಸ್ಥೆಯಲ್ಲಿದ್ದರೋ ಅದೇ ಅವಸ್ಥೆಯಲ್ಲಿ ಮೃತಪಟ್ಟು ಸಮಾಧಿಯನ್ನು ಹೊಂದಿದರು. 19 ನೇ ಶತಮಾನದಲ್ಲಿ ಈ ಪಟ್ಟಣಗಳ ಪೂರ್ವಸ್ಥಿತಿಯು ಗೊತ್ತಾಯಿತು. ಹೀಗೆ ಗೊತ್ತಾಗುವುದಕ್ಕೆ ಆ ಪ್ರಾಂತ್ಯದಲ್ಲಿ ಒಂದು ಪಗೇವನ್ನು ತೆಗೆಯುತ್ತಿದ್ದ ಜನರು, ಒಳಕ್ಕೆ ಬಿದ್ದು ಆಶ್ಚರ್ಯಕರವಾದ ಆ ಪಟ್ಟಣಗಳ ಸ್ಥಿತಿಯನ್ನು ನೋಡುವುದಕ್ಕವಕಾಶವಾದುದೇ ಮುಖ್ಯಕಾರಣವಾಯಿತು.

ಪರ್ವತಾಗ್ರಗಳಿಂದ ಮೇಲಕ್ಕೆ ಹಾರತಕ್ಕ ಕಲ್ಲುಗಳ ವೇಗವನ್ನು ಪರೀಕ್ಷಿಸಿದರೆ ಭೂಗರ್ಭದಲ್ಲಿರತಕ್ಕ ಬೆಂಕಿಯು ಸಂಸರ್ಗದಿಂದುಂಟಾದ ಸ್ಟೀಂ ಮೊದಲಾದುವುಗಳ ವೇಗವು ಗೊತ್ತಾಗುವುದು. ಕೋಟವಾಕ್ಸಿ ಪರ್ವತದಿಂದ ಮೇಲಕ್ಕೆ ಹಾರಿಸಲ್ಪಟ್ಟ 200 ಟನ್ ತೂಕವುಳ್ಳ ಒಂದು ಬಂಡೆಯು 9 ಮೈಲಿಗಳ ದೂರ ಹಾರಿಸಲ್ಪಟ್ಟಿತು. ಚಿಲ್ಲಿ ಪರ್ವದಲ್ಲಿರತಕ್ಕ ಒಂದು ಅಗ್ನಿಪರ್ವತದಿಂದ ಅನೇಕ ಕಲ್ಲುಗಳು 36 ಮೈಲಿ ದೂರ ಹಾರಿಸಲ್ಪಟ್ಟವು. ಈ ಭೂಗರ್ಭದ ಶಾಖದಿಂದ ಕಲ್ಲು, ಮಣ್ಣು, ಲೋಹಗಳು ಜಲಾವಸ್ಥೆಯನ್ನು ಹೊಂದುವುದಲ್ಲದೆ ಅನಿಲಾವಸ್ಥೆ ಹೊಂದುವುದುಂಟು.

ವೆಸೂವಿಯನ್ ಪರ್ವತವು 1 ನೇ ಶತಮಾನಕ್ಕೆ ಮುಂಚೆ ಹಿಂದೆ ಯಾವಾಗ ಜ್ವಾಲಾಮುಖಿವನ್ನು ಹೊಂದಿತೊ ಗೊತ್ತಾಗಿಲ್ಲ. ಆದರೆ ಈ ಪರ್ವತದ ಅಗ್ರಭಾಗದಲ್ಲಿ ಇದು ಜ್ವಾಲಾಮುಖಿಯಾಗಿತ್ತು ಎಂಬುದನ್ನು ತೋರಿಸುವ ಚಿಹ್ನೆಗಳು ಬಹಳವಾಗಿದ್ದುವು. 79 ನೇ ಇಸವಿಯಲ್ಲಿ ಪಾಂಪೇ ಪಟ್ಟಣವನ್ನು ನಾಶಮಾಡಿದ ಜ್ವಾಲಾಮುಖಿಯು ಉಂಟಾದಾಗ ಪೂರ್ವದ ಮುಖಭಾಗಗಳು ಛಿದ್ರಮಾಡಲ್ಪಟ್ಟುವು. ಕರಗಿಸಲ್ಪಟ್ಟ ಪದಾರ್ಥಗಳನ್ನು ಪ್ರವಾಹವು ಹೊಸಮುಖದಿಂದ ಉದ್ಗಮಿಸಿ ಹರಿಯುವುದಕ್ಕೆ ಉಪಕ್ರಮವಾಯಿತು. ಈ ಪ್ರವಾಹವು ಅತ್ಯಂತ ಭಯಂಕರವಾದುದು. ಪರ್ವತಾಗ್ರದಿಂದ ಅದು ಮೇಲಕ್ಕೆ ಏಳುವಾಗ್ಗೆ ಅದು ಬಿಳೀ ಬೆಳಕಿನಂತೆ ಏಳುವುದು. ಕರಗಿಸಿದ ಕಬ್ಬಿಣದಂತೆ ಹರಿಯುವುದು. ಕ್ರಮಕ್ರಮವಾಗಿ ಶಾಖವು ಕಡಮೆಯಾಗುವುದರಿಂದ ಅದು ಕೆಂಪು ಬಣ್ಣವನ್ನು ಮತ್ತು ಕಪ್ಪುಬಣ್ಣವನ್ನು ಹೊಂದುವುದು. ಮೇಲುಭಾಗವು ಆರಿದ್ದರೂ ಅನೇಕ ದಿನಗಳವರಿಗೂ ಒಳಭಾಗವು ಕೆಂದ

ದಂತೆ ಇರುವುದು. ಈ ಪ್ರವಾಹವು ಶಿಲಾವಸ್ಥೆಯನ್ನು ಹೊಂದಿದಹಾಗೆಲ್ಲಾ ಬೆಳ್ಳಿ ಅಥವಾ ಕಂಚಿನ ಶಬ್ದವನ್ನು ಹೊಂದುವುದು. ಇದು ಪ್ರವಹಿಸುವಾಗ್ಯೆ ಅತ್ಯಂತ ಬಿಸಿಯಾದ ಆವಿಯು ಏಳುವುದು. 1805 ನೇ ಇಸವಿಯಲ್ಲಿ ಈ ಪ್ರವಾಹವು ವೆಸೂಸಿಯಸ್ ಪರ್ವತಾಗ್ರದಿಂದ ನಾಲ್ಕು ಮಿನಿಟುಗಳಲ್ಲಿ 3 ಮೈಲಿಗಳು ಹರಿಯಿತು. ಅಲ್ಲಿಂದಾಚೆಗೆ 6 ಮೈಲಿಗಳು ಹೋಗುವುದಕ್ಕೆ 3 ಗಂಟೆಗಳಾದುವು. 1840 ನೇ ಇಸವಿಯಲ್ಲಿ ಸ್ಟ್ರ್ಯಾಂಡಿಜ್ ದ್ವೀಪಗಳಲ್ಲಿರುವ ಮಾನಲೋಆ ಎಂಬ ಪರ್ವತದ ಮೇಲಿನಿಂದ ಹರಿದ ಪ್ರವಾಹವು 2 ಘಂಟೆಗಳಲ್ಲೇ 15 ಮೈಲಿಗಳು ಸಾಗಿದವು. ಈ ಪ್ರವಾಹವು ಹರಿಯುವಾಗ್ಯೆ ಸವಿಾಪದ ವಾಯುಮಂಡಲವೆಲ್ಲಾ ಔಷ್ಣ್ಯವುಳ್ಳದ್ದಾಗುವುದಲ್ಲದೆ, ಆ ವಾಯು ಸೇವನೆ ಮಾಡತಕ್ಕವರು ಉಸುರು ಸಿಕ್ಕಿಕೊಂಡು ಪ್ರಾಣಬಿಡುತ್ತಾರೆ. ಒಳ್ಳೆ ಅಸ್ತಿಭಾರ ಹಾಕಲ್ಪಟ್ಟು ಚೆನ್ನಾಗಿ ಕಟ್ಟಲ್ಪಟ್ಟ ಕಟ್ಟಡಗಳೂ ಕೂಡ ಈ ಪ್ರವಾಹಕ್ಕೆ ಅಭಿಮುಖವಾಗಿ ಸಿಕ್ಕಿದರೆ ಅದರ ಜತೆಯಲ್ಲಿ ಕರಗಿಹೋಗುತ್ತವೆ. ಇದರ ಹಾದಿಯಲ್ಲಿ ಸಿಕ್ಕತಕ್ಕ ಕಲ್ಲು, ಮಣ್ಣು, ಗಿಡಗಳೂ, ಪೈರುಗಳೂ ಎಲ್ಲಾ ನಿರ್ಮೂಲವಾಗುತ್ತದೆ. ಆದುದರಿಂದ ಜ್ವಾಲಾಮುಖಿಗಳು ಎಲ್ಲಿ ಉಂಟಾಗುತ್ತವೆಯೋ ಆ ಪ್ರಾಂತ್ಯಗಳಲ್ಲಿ ಅತ್ಯಂತ ಅನರ್ಥಗಳನ್ನುಂಟುಮಾಡತಕ್ಕವುಗಳಾಗಿ ಇರುತ್ತವೆ.

ನೋಟ್ಸುಗಳನ್ನು ಉಪಯೋಗಿಸುವುದರ ಫಲಗಳು.

ಸ್ಕೂಲುಗಳಲ್ಲಿ ಸಾಮಾನ್ಯವಾಗಿ ನೋಟ್ಸ್ ಅಂದರೆ ಟಿಪ್ಪಣದ ವಹಿಗಳನ್ನು ಉಪಯೋಗಿಸುವ ಬಳಕೆ ಹೆಚ್ಚುತ್ತಿದೆ. ಇದನ್ನು ಉಪಯೋಗಿಸುವುದು ಯುಕ್ತವೆ? ಎಂಬುದನ್ನು ವಿಚಾರ ಮಾಡೋಣ. ಶಿಕ್ಷಣಕ್ರಮದಲ್ಲಿ ವಿದ್ಯಾರ್ಥಿಗಳ ಬುದ್ಧಿಯನ್ನು ಬೆಳಸುವುದೇ ಬೋಧಕರ ಕರ್ತವ್ಯವೆಂದು ಸ್ಪಷ್ಟವಾಗಿದೆ. ಪ್ರೈಮರಿ ಇಯತ್ತೆಯ ವಿದ್ಯಾರ್ಥಿಗಳೂ ತಮ್ಮ ಪಾಠಪುಸ್ತಕಗಳ ಜತೆಗೆ ನೋಟ್ಸನ್ನು ಉಪಯೋಗಿಸುತ್ತಿರುವುದು ಹಲವೆಡೆಗಳಲ್ಲಿ ಕಾಣಬರುತ್ತಿದೆ. ಒಂದು ಪದ್ಯಕ್ಕೆ ಬೋಧಕನು ಅರ್ಥವನ್ನು ವಿವರಿಸಿ ಹೇಳಿ, ಹುಡುಗರಿಂದ ಪದಗಳ ಅರ್ಥವನ್ನು ಹೇಳಿಸುತ್ತ ಬಂದಲ್ಲಿ ನೋಟ್ಸುಗಳ ಆಗತ್ಯವೇ ಇಲ್ಲವಷ್ಟೆ? ಬೋಧಕರ ಸಹಾಯವಿಲ್ಲದೆ ಸ್ವಂತ ವ್ಯಾಸಂಗ ಮಾಡತಕ್ಕವರ ವಿಷಯವಾಗಿ ಇಲ್ಲಿ ಏನೂ ಹೇಳಬೇಕಾದ್ದಿಲ್ಲ.

ಸ್ಕೂಲಿನಲ್ಲಿ ಬೋಧಕರು ಹುಡುಗರಿಗೆಲ್ಲ ನೋಟ್ಸುಗಳನ್ನು ಕೊಡಿಸಿ, ಇಂತಹ ಪದ್ಯಕ್ಕೆ ಅರ್ಥವನ್ನು ಕಲಿತು ಬನ್ನಿರೆಂದು ವಿಧಿಸಬಹುದು. ಆಗ ಮಾಸ್ಟರು ತನ್ನ ಕರ್ತವ್ಯವನ್ನು ಮಾಡಲಾರದೆ ಹೋದುದಲ್ಲದೆ ಬಾಲಕರ ಅವಧಾನಶಕ್ತಿಯನ್ನು ಕುಂದಿಸಿದನೆಂದು ಹೇಳಬಹುದು. ಹುಡುಗರು ಮನೆಯಲ್ಲಿ ನೋಟ್ಸಿನ ಅರ್ಥವನ್ನೇ ಕಂಠಪಾಠ ಮಾಡಿಕೊಂಡು ಬಂದು ಸ್ಕೂಲಿನಲ್ಲಿ ಅಕ್ಷರಶಃ ಒಪ್ಪಿಸುವುದಕ್ಕೆ ಬೋಧಕನು ತೃಪ್ತನಾಗಬೇಕಾಗುವುದು. ಹುಡುಗರು ಇಂತಹ ಕುರುಡುಪಾಠದ ಅಭ್ಯಾಸವನ್ನೇ ಬೆಳಸುತ್ತ ಬರುವುದರಿಂದ ಸ್ಕೂಲಲ್ಲಿ ಮಾಸ್ಟರು ಹೇಳಿದ ವಿಷಯದಕಡೆಗೆ ಮನಕೊಡದೆ ಹೋಗುವರು. ಮೇಲಿನ ವರ್ಗಗಳಿಗೆ ಬಂದಾಗಲೂ ಕೂಡ ಇದರ ದೋಷವು ಅಪರಿಹಾರ್ಯವಾಗುವುದು. ಬೋಧಕರು ಎಷ್ಟುಮಟ್ಟಿಗೆ ವಿವರಿಸುತ್ತ ಬಂದರೂ ಬಾಲಕರು ಅದನ್ನು ಗಮನಿಸುವ ಅಭ್ಯಾಸವಿಲ್ಲದೆ ಹೋಗಿ, ಅತನ ಶ್ರಮವು ವ್ಯರ್ಥವಾಗುವುದಲ್ಲದೆ, ನೋಟ್ಸುಗಳಲ್ಲಿನ ಅಬದ್ಧಗಳೇ ಅವರ ನೆನೆಪಿನಲ್ಲಿ ನಿಂತು, ಎಷ್ಟು ತಿದ್ದಿದರೂ ಬದಲಾಯಿಸದೆ ಹೋಗುವುದು. ನೋಟ್ಸುಗಳಿಲ್ಲದಿದ್ದರಂತೂ ಆ ಹುಡುಗರ ಪಾಡು ತುಂಬ ನಷ್ಟವಾಗಿರುವುದು.

ನಮ್ಮ ದೇಶದಲ್ಲಿ ಈ ದುರಭ್ಯಾಸವನ್ನು ತಪ್ಪಿಸಬೇಕೆಂತಲೇ ಸರ್ಕಾರದವರು ಬರಿಯಿಸುವ ಪ್ರಸ್ತಾಪಗಳಲ್ಲಿ ವಿಷಯಗಳನ್ನು ಸ್ಪಷ್ಟಪಡಿಸಿ, ಇತರ ಪುಸ್ತಕಗಳ ಸಹಾಯವನ್ನು ಅಪೇಕ್ಷಿಸದಂತೆ ಮಾಡಿರುವರು. ಅಧ್ಯಾಪಕರು ಇವುಗಳ ಗುಣವನ್ನು ಗ್ರಹಿಸದೆ, ಪೂರ್ವಕಾಲದ ಪುಸ್ತಕಗಳಿಗಿಂತ ಇವು ಕ್ಲಿಷ್ಟವಾದುವುಗಳೆಂತಲೂ, ನೋಟ್ಸುಗಳಿಲ್ಲದಿದ್ದರೆ ಕಲಿವುದೇ ಕಷ್ಟವೆಂತಲೂ ಹೇಳಿಕೊಳ್ಳುವರು. ಶುಕ ಪಾಠ ಮಾಡಿಸದೆ ಪ್ರತಿಬಂಧನ್ನು ಸ್ಪಷ ವಾಗಿ ವಿವರಿಸಬೇಕೆಂಬುದೇ ಗ್ರಂಥಕರ್ತರ ಉದ್ದೇಶವೆಂದು ಭಾವಿಸದೆ, ಪುಸ್ತಕಗಳಲ್ಲಿ ದೋಷವನ್ನು ಕಲ್ಪಿಸುವುದಾವ ನ್ಯಾಯವೋ ತಿಳಿಯದು. ನೋಟ್ಸುಗಳು ಕೆಲವು ಸಂದರ್ಭಗಳಲ್ಲಿ ಬೋಧಕರ ಸ್ವಂತ ಉಪಯೋಗಕ್ಕೆ ಅನುಕೂಲಿಸಬಹುದೇ ಹೊರತು ಹುಡುಗರ ಉಪಯೋಗಕ್ಕಾಗಿ ಕೊಡುವುದು ಬಹಳ ಅಕ್ರಮವೆಂದು ತೋರುವುದು. ಬಾಯಿಪಾಠ ಮಾಡತಕ್ಕ ವಿಷಯಗಳಿಂತವು, ವಿವರಣೆಯನ್ನು ತಿಳಿದುಕೊಳ್ಳತಕ್ಕವುಗಳಿಂತವು, ಎಂಬುದನ್ನು ಬೋಧಕರು ನಿರ್ಣಯಿಸಿಕೊಂಡು, ತಮ್ಮ ವಿದ್ಯಾರ್ಥಿಗಳ ಬುದ್ಧಿಯು ದಿನೇ ದಿನೇ ಬೆಳೆಯುವಕ್ಕೆ ಅನುಕೂಲಿಸುವಂತೆ ತಮ್ಮ ಬೋಧೆಯಿಂದ ಅವರ ಮನಸ್ಸನ್ನಾಕರ್ಷಿಸಿಕೊಂಡು, ತಿಳಿಯುವ ವಿಷಯಗಳನ್ನು ಸೂಚನಪ್ರಶ್ನೆಗಳಿಂದ ಅವರ ಬಾಯಿಂದಲೇ ಹೇಳಿಸುತ್ತ, ಜ್ಞಾನಾ

ಭಿವೃದ್ಧಿಯನ್ನು ಮಾಡಕಕ್ಕದ್ದು ಪ್ರತಿ ಉಪಾಧ್ಯಾಯನ ಕರ್ತವ್ಯವಾಗಿದೆ. ವಿದೇ ಶೀಯರು ಸ್ಕೂಲ್ ಮ್ಯಾನೇಜ್‌ಮೆಂಟನ್ನು, ಶಿಕ್ಷಣಕ್ರಮಗಳನ್ನು ಕಲಿತು ಪರೀಕ್ಷೆ ಕೊಟ್ಟವರಿಗೆ ಮಾತ್ರ ಮಾಸ್ಟರ ಕೆಲಸವನ್ನು ಕೊಡುವರೆಂದು ತಿಳಿಯಬರುವುದು. ಇಲ್ಲಿಯಾದರೋ ಲೋವರ್ ಸೆಕೆಂಡರಿ ಪರೀಕ್ಷೆ ಕೊಟ್ಟಕೂಡಲೇ ಮತ್ತಾವವೃತ್ತಿಯ ಕಡೆಗೂ ಮನವಿಡದೆ ಸ್ಕೂಲುಮಾಸ್ಟರ ಕೆಲಸಕ್ಕೇನೇ ಬಂದು ಕೂಡುವರು. ಇವರ ಸಂಘದಲ್ಲಿ ಟ್ರೇನಿಂಗ್ ಪರೀಕ್ಷೆ ಕೊಟ್ಟವರ ಸಂಖ್ಯೆಯು ೫—೫ ಸುದಾ ಸಿಕ್ಕಲಾರದು. ತರಬೀಯ್ತಾಗಿ ಯೋಗ್ಯತಾಪತ್ರವನ್ನು ಪಡೆದು ಬಂದವರಾದ ತಾವು ಕಲಿತುದುದನ್ನು ಜ್ಞಾಪಕದಲ್ಲಿಟ್ಟು ಹೊಸಹೊಸ ಶಿಕ್ಷಣ ಕ್ರಮವನ್ನು ಅನು ಸರಿಸಬಹುದಷ್ಟೆ? ಅವರು ಸುದಾ ಅತೃಪ್ತಿಯಿಂದಲೋ, ಔದಾಸೀನ್ಯದಿಂದಲೋ ಸಹವಾಸದೋಷದಿಂದಲೋ ತಮ್ಮ ಪೂರ್ವಸಂಸ್ಪ್ರದಾಯವನ್ನು ಬಿಡದೆ ಇರುವುದು ವಿಚಾರಾಸ್ಪದವಾಗಿದೆ. ಪ್ರಕೃತ ವಿಷಯಕ್ಕೆ ಇಂತಹ ದೋಷಾರೋಪಣೆಯ ವಿವರಣೆ ಅಗತ್ಯವಿಲ್ಲವಿದ್ದರೂ ಉಪಾಧ್ಯಾಯರಲ್ಲಿ ಪ್ರತಿ ಒಬ್ಬನೂ ಸ್ಕೂಲಿನಲ್ಲಿ ಹೇಗೆ ಬೋಧಿಸುವುದು ಫಲಕಾರಿಯಾದುದೆಂಬುದನ್ನು ತಕ್ಕ ಪುಸ್ತಕಗಳಿಂದ ತಿಳಿದುಕೊಂ ಡು, ಹುಡುಗರಿಗೆ ವಿದ್ಯಾಭ್ಯಾಸ ಮಾಡಿಸುವುದು ಉತ್ತಮವೆಂದು ಸೂಚಿಸುವುದು ಆಕ್ಷೇಪಣೀಯವಲ್ಲವು. ಗ್ರಂಥಗಳನ್ನು ಬರೆಯಿಸುವವರೂ, ಪರಿಶೀಲಿಸುವವರೂ ಸ್ವಲ್ಪ ಸಾವಧಾನದಿಂದ ನಿರ್ದುಷ್ಟವಾಗಿಯೂ, ನಿರಾಕ್ಷೇಪಕವಾಗಿಯೂ ಇರತಕ್ಕ ವಿಷಯಗಳನ್ನೇ ಸೇರಿಸಲು ಪ್ರಯತ್ನಪಡುವುದೂ ಮುಖ್ಯ ಎಂಬುದೆಂದು ತೋರು ತ್ತದೆ.

ವಿದ್ಯಾರ್ಥಿಗಳಿಗೆ ಸಾಕಾದಷ್ಟು ವಿಷಯಗಳನ್ನು ತಿಳಿಸಿ, ಜ್ಞಾಪಕದಲ್ಲಿಡಬೇ ಕಾದ ವಿಷಯುಗಳನ್ನು ಅವರಿಂದ ಬರಿಸಿಡುವುದೇ ಉತ್ತಮವಾದ ನೋಟ್ಸು ಎನಿಸಿ ಕೊಳ್ಳುವುದು. ಹುಡುಗರ ಬುದ್ಧಿಶಕ್ತಿಯನ್ನು ಬೆಳಸುವಂತೆಯೂ, ಸ್ವಂತವಾಗಿ ವಿಷಯುಗಳನ್ನು ಗ್ರಹಿಸುವಂತೆಯೂ, ಪಂಡಿತರಿಂದ ಬರೆಯಲ್ಪಡುವ ನೋಟ್ಸುಗಳು ಯಾವುದಾದರೂ ದೊರೆತಕೆ ವಿಚಾರಮಾಡಿ ಅಂತವುಗಳ ಗುಣಗಳನ್ನು ಮಾಸ್ಟರು ಗ್ರಹಿಸಿ ಉಪಯೋಗಿಸಬಹುದು.

K. R.

ವಾಕ್ಯರಚನೆ.

ವಿಭಾಗ.	ವಿವರಣೆ.	ಉದಾಹರಣೆ.
ನಾಮಪದ	ಚೇತನ ಅಥವಾ ಅಚೇತನ ವಸ್ತುಗಳ ಹೆಸರನ್ನು ಹೇಳುವುದು ನಾಮಪದ,	ನಾಯಿ, ಮರ, ಕಲ್ಲು, ಹಲಗೆ.
	ನೀವು ನೋಡಿರುವ ಕೆಲವು ಚೇತನ ವಸ್ತುಗಳನ್ನು ಹೇಳಿರಿ. (ಚೇತನ = ಪ್ರಾಣವುಳ್ಳದ್ದು.)	ಮನುಷ್ಯ, ಹಲಸು ಕುರಿ, ಮರ.
	ಕೆಲವು ಅಚೇತನ ವಸ್ತುಗಳನ್ನು ಹೇಳಿರಿ.	ಕಲ್ಲು, ಮನೆ, ಪುಸ್ತಕ, ಲೇಪನಿ,
ಕ್ರಿಯಾಪದ	ವಸ್ತುಗಳು ಮಾಡತಕ್ಕ ಹೆಸರುಗಳನ್ನು ತಿಳಿಸುವದು ಕ್ರಿಯಾಪದ. (ಕ್ರಿಯೆ = ಕೆಲಸ)	ಹೋಗುತ್ತಾನೆ, ಬರುತ್ತದೆ, ಹೊಡೆದಳು, (ಇಂತಹ ಕ್ರಿಯೆಗಳು ಕೆಲವನ್ನು ಹೇಳಿಸಿರಿ)
ವಾಕ್ಯ	ನಾಮಪದವೂ ಕ್ರಿಯಾಪದವೂ ಸೇರಿದುದು ವಾಕ್ಯವೆನಿಸುವುದು.	ರಾಮನು ಬರುತ್ತಾನೆ.
		ಮರ ಬೆಳೆಯುತ್ತದೆ.
ಪ್ರಶ್ನೆಗಳು	ನಾಯಿ ಏನುಮಾಡುತ್ತಿದೆ?	ಬಗುಳುತ್ತದೆ.
	ಗಾಳಿ?	ಬೀಸುತ್ತದೆ.
	ಹುಡುಗ?	ಓಡುತ್ತಾನೆ.
	ಕಲ್ಲು ಹೇಗೆ ಇದೆ?	ಬೆಚ್ಚಗಿದೆ.
ಪರೀಕ್ಷೆ.	ಈಗ ಹೇಳಿದ ವಾಕ್ಯಗಳನ್ನೇ ನಿಮ್ಮ ಕೋಳಿ, ಕಾಯಿ, ಪುಸ್ತಕ ನೀರು, ಹರಿದುಹೋಯಿತು, ಕರೆಗಳು, ಕೂಗುತ್ತದೆ, ಹರಿಯುತ್ತದೆ.	ಸ್ಲೇಟುಗಳ ಮೇಲೆ ಬರೆದು ತೋರಿರಿ.
		ಆ ನಾಮಪದಗಳಿಗೆ ತಕ್ಕ ಒಂದೊಂದು ಕ್ರಿಯಾಪದವನ್ನು ತಕ್ಕ ಹಾಗೆ ಸೇರಿಸಿ ವಾಕ್ಯಗಳಾಗಿಮಾಡಿರಿ.
	ನಿಮ್ಮ ಸ್ವಂತ ಮಾತುಗಳಿಂದ ನಾಲ್ಕು ವಾಕ್ಯಗಳನ್ನು ಮಾಡಿ ಹೇಳಿರಿ.	

ವ್ಯವಸಾಯ.

I. ಕಾಡಾರಂಬ, ಗೋಮಾಳ, ಪುಣಜಿ, ಹರಗುವುದು, ರಾಜಕಾಲ್ವೆ, ಯಕ್ಕಲು, ಹೈನು, ಸುಗ್ಗಿ—ಇವುಗಳ ಅರ್ಥವೇನು ?

ಉತ್ತರ— ಕಾಡಾರಂಬ = ನೀರುಕಟ್ಟದೆ ಮಳೆಯಿಂದ ಆಗುವ ಪೈರುಗಳು ವ್ಯವಸಾಯ.

ಗೋಮಾಳ = ದನಗಳು ಮೇಯುವುದಕ್ಕಾಗಿ ತೆರಿಗೆಯಿಲ್ಲದೆ ಮಾಫಿಯಾಗಿ ಬಿಟ್ಟಿರುವ ಬಂಜರು ಭೂಮಿ.

ಪುಣಜಿ = ಭತ್ತವನ್ನ ಕುಚ್ಚಿ ಬೆಳೆಯುಂತೆ ಒಣಮಣ್ಣಿನಲ್ಲಿ ಬಿತ್ತಿ ಬೆಳೆಯುವುದಕ್ಕೆ ಹೆಸರು. ಪುಣಜಿ ಪೈರು ಸುಮಾರು ಎರಡು ತಿಂಗಳಾದ ನಂತರ ಗದ್ದೆಯಲ್ಲಿ ನೀರು ನಿಲ್ಲಿಸುವುದು ವಾಡಿಕೆಯಾಗಿದೆ.

ಹರಗುವುದು = ಕುಂಟೆ ಅಥವಾ ಗುಂಟವೆ ಎಂಬ ಯಾನವನ್ನು ಉಪಯೋಗಿಸಿ ವ್ಯವಸಾಯ ಮಾಡುವದಕ್ಕೆ ಹೆಸರು.

ರಾಜಕಾಲ್ವೆ = ತೂಬಿನಿಂದ ಹೊರಡುವ ಮುಖ್ಯವಾದ ದೊಡ್ಡ ಕಾಲ್ವೆ.

ಎಕ್ಕಲು (ಮೆಕ್ಕಲು) = ಹರಿಯುವ ನೀರಲ್ಲಿ ಕೊಚ್ಚಿಬಂದು ಒಂದು ಸ್ಥಳದಲ್ಲಿ ತಡೆಯಲ್ಪಟ್ಟು ಬಿದ್ದಿರುವ ಒಂದು ಮಣ್ಣು. ಕಸಾ ಮೊದಲಾದುದು.

ಹೈನು = ಹಾಲು ಮತ್ತು ಹಾಲಿನಿಂದ ಆಗುವ ಬೆಣ್ಣೆ ಮೊದಲಾದುದಕ್ಕೆ ಒಟ್ಟು ಹೆಸರು.

ಈ ಪದವು ಪೈರುಗಳಿಗೆ ಸಂಬಂಧಿಸುವಾಗ ಆವಾಡ ಶ್ರಾವಣದಲ್ಲಿ ಬಿತ್ತುವ ಕುಚ್ಚಿಪೈರುಗಳಿಗೆ ಅನ್ವಯಿಸುತ್ತದೆ. ಉದಾಹರಣೆ ಹೈ ರಾಗಿ.

ಸುಗ್ಗಿ = ಧಾನ್ಯಗಳನ್ನ ಒಕ್ಕಣೆ ಮಾಡಿ ರೇಖೆ ವಾಡುವ ಕಾಲ ಅಂದರೆ ಕಣಗಾಲ.

II. ಶಾಸ್ತ್ರಪದ್ಧತಿಯನ್ನನುಸರಿಸಿ ವ್ಯವಸಾಯವನ್ನು ವೃದ್ಧಿಪಡಿಸಬೇಕೆಂಬ ಆವಶ್ಯಕತೆಯು ಪೂರ್ವಕ್ಕಿಂತಲೂ ಈ ಕಾಲದಲ್ಲಿ ಹೆಚ್ಚಾಗುವುದಕ್ಕೆ ಮುಖ್ಯಕಾರಣಗಳೇನು ? ಸಂಕ್ಷೇಪವಾಗಿ ವಿವರಿಸಿರಿ.

ಉತ್ತರ—ಮುಖ್ಯವಾಗಿ ಪೂರ್ವಕಾಲಕ್ಕಿಂತಲೂ ಈಗ ಅನ್ನ ದೊರೆಯುವುದು ಕಷ್ಟವಾದುದರಿಂದ ವ್ಯವಸಾಯವನ್ನ ವೃದ್ಧಿಪಡಿಸಬೇಕಾದುದು ಬಹಳ ಅವಶ್ಯ. ಈ ಕಷ್ಟ ಪ್ರಾಪ್ತವಾಗುವುದಕ್ಕೆ ಮುಖ್ಯಕಾರಣಗಳು ಏನಂದರೆ,—

ಪೂರ್ವದಲ್ಲಿ ಜನಸಂಖ್ಯೆ ಬಹಳ ಕಮ್ಮಿಯಾದುದರಿಂದ ದಿನಸಿ ಅಗ್ಗವಾಗಿತ್ತು. ಭೂಮಿಯು ನೂತನವಾಗಿ ಸಾಗುವಳಿಯಾಗಿತ್ತಾದ ಕಾರಣ ಅದರಲ್ಲಿ ಸಾರ ಹೆಚ್ಚಾಗಿತ್ತು. ಈ ಕಾರಣದಿಂದ ಹುಲಸು ಹೆಚ್ಚಾಗಿತ್ತು. ದಿನಸಿ ವಿಶೇಷವಾಗಿ ಬೆಳೆಯುತ್ತಿತ್ತು.

ಜನವಾಸ ವಿಶೇಷವಾಗಿ ಸಾಗುವಳಿಗೆ ಬೇಕಾಗಿರಲಿಲ್ಲವಾಗಿ ವ್ಯವಸಾಯವು ಬಹು ಉತ್ತಮವಾದ ಪ್ರದೇಶಗಳಲ್ಲಿ ಮಾಡುತ್ತಿದ್ದರು. ದಿಣ್ಣೆಭೂಮಿ ಕಲ್ಲುಭೂಮಿಗಳನ್ನು ಸಾಗುವಳಿ ಮಾಡಬೇಕಾದ ಆವಶ್ಯಕವಿರಲಿಲ್ಲವಾಗಿ ಉತ್ಕೃಷ್ಟವಾದ ಬೆಳೆ ಆಗುತ್ತಿತ್ತು.

ಕಾಡುಪ್ರದೇಶಗಳು ಹೆಚ್ಚಾಗಿದ್ದುದರಿಂದ ಮಳೆ ಹೆಚ್ಚಾಗಿಯೂ ಮತ್ತು ಪೈರುಗಳಿಗೆ ಅನುಕೂಲವಾಗುವಂತೆ ಬಹುದಿನಗಳ ವರಿಗೂ ಬೀಳುತ್ತಿತ್ತು.

ಗೋವಾಳ ವಿಸ್ತಾರವಾಗಿದ್ದುದರಿಂದ ದನಕುರಿಗಳಿಗೆ ಮೇವು ಸಮೃದ್ಧಿಯಾಗಿ ದೊರಕಿ ತನ್ಮೂಲಕ ಗೊಬ್ಬರ ವಿಶೇಷವಾಗಿ ಸಿಕ್ಕುತ್ತಿತ್ತು.

ರೋಡುಗಳು ಬಂಡಿಗಳು ರೈಲುಮಾರ್ಗಗಳು ಆ ಕಾಲದಲ್ಲಿ ಅಪುರೂಪವಾಗಿದ್ದುದರಿಂದ ಈ ದೇಶದ ದಿನಸಿಗಳು ಬೇರೆ ಸೀಮೆಗೆ ಸಾಗಿಹೋಗುವುದಕ್ಕೆ ಅವಕಾಶವಿಲ್ಲದೆ ಇಲ್ಲೇ ಸುಲಭ ಕ್ರಯಕ್ಕೆ ದೊರೆಯುತ್ತಿತ್ತು.

ಇಂಥಾ ಅನುಕೂಲಗಳು ಹಿಂದಿನ ಕಾಲದಲ್ಲಿ ಇಲ್ಲದುದರಿಂದ ಆಗ ವ್ಯವಸಾಯದ ಅಭಿವೃದ್ಧಿಗೆ ಅಷ್ಟು ಗಮನ ಕೊಡಬೇಕಾದ ಆವಶ್ಯಕತೆ ಇರಲಿಲ್ಲ.

ಈಗಲಾದರೋ ಮೇಲ್ಕಂಡ ಅನುಕೂಲತೆಗಳು ತಪ್ಪಿಹೋಗಿ ಅವುಗಳಿಗೆ ಪ್ರತಿಯಾದ ಅನನುಕೂಲಗಳೇ ಹೆಚ್ಚಿದವು. ಹೇಗಂದರೆ—

ಜನಸಂಖ್ಯೆ ಬಹಳ ಹೆಚ್ಚಿತು. ಆದುದರಿಂದ ಆಹಾರವು ಹೆಚ್ಚಾಗಿ ಬೇಕಾಯಿತು. ಬಹುಕಾಲದಿಂದ ರೀತಿ ತಿಳಿಯದೆ ಒಂದೇ ವಿಧವಾಗಿ ವ್ಯವಸಾಯ ಮಾಡುತ್ತಾಬಂದುದರಿಂದ ಭೂಮಿಯು ಸಾರವು ಕಮ್ಮಿಯಾಗಿ ಬೆಳೆ ಕಮ್ಮಿ ಆಯಿತು. ಕಾಡುಗಳನ್ನು ನಾಶಪಡಿಸಿದುದರಿಂದ ಮಳೆ ಕಮ್ಮಿಯಾಯಿತು. ಸಾಗುವಳಿ ಹೆಚ್ಚಿದುದರಿಂದ ಗೋವಾಳ ಕಮ್ಮಿಯಾಗಿ ಗೊಬ್ಬರ ಸಿಕ್ಕುವುದಿಲ್ಲ. ರೈಲುರಸ್ತೆ ಬಂಡಿ ಹೆಚ್ಚಿದುದರಿಂದ ದಿನಸಿಯು ಪರದೇಶಕ್ಕೆ ರಫ್ತಾಗಿ ಇಲ್ಲಿ ಕಮ್ಮಿ ಆಯಿತು. ಜನಗಳ ನಾಗರಿಕತೆ ಹೆಚ್ಚಿದುದರಿಂದ ಉತ್ತಮವಾದ ದಿನಸಿಗಳು ಹೆಚ್ಚಾಗಿ ಬೇಕಾಗಿರುವುದು. ಈ ಕಾರಣಗಳಿಂದ ವ್ಯವಸಾಯವನ್ನು ವೃದ್ಧಿಮಾಡುವುದು ಈಗ ತುಂಬಾ ಆವಶ್ಯಕ.

III. ಜೇಡು ಭೂಮಿಯಲ್ಲಿರುವ ಗುಣದೋಷಗಳನ್ನು ವಿವರಿಸಿ.

ಉತ್ತರ—ಜೇಡುಮಣ್ಣಿನಲ್ಲಿರುವ ಗುಣಗಳು.

ಸಸಿಗಳ ಆಹಾರವು ಹೆಚ್ಚಾಗಿರುವುದು. ಇದರಲ್ಲಿ ತೇವವು ಬಹುದಿನಗಳ ವರಿಗೆ ನಿಲ್ಲುವುದು. ಮತ್ತು ಇದು ಗಾಳಿಯಿಂದಲೂ ತೇವವನ್ನು ಹೀರಿಕೊಳ್ಳುವುದುಗೊಬ್ಬರದ ಸಾರ ಈ ನೆಲದಲ್ಲಿ ಬಹುಕಾಲ ದಿವಸ ನಿಲ್ಲುತ್ತದೆ.

ದೋಷಗಳು ಯಾವವೆಂದರೆ—

ತೇವ ಹೆಚ್ಚಾದರೆ ಜಿಗಟಾಗುವುದು. ಬಹಳ ಒಣಗಿದರೆ ಘಟ್ಟಿಯಾಗುವುದು. ಆದುದರಿಂದ ಈ ಎರಡು ಸಂದರ್ಭಗಳಲ್ಲೂ ವ್ಯವಸಾಯ ಮಾಡಲು ಅನುಕೂಲವಿಲ್ಲವಾಗಿ ಇಂಥಾ ಭೂಮಿಯನ್ನು ಹದಗೊಳಿಸುವುದು ಕಷ್ಟ.

ಮಳೆಯ ನೀರನ್ನು ಬೇಗ ಹೀರುವುದಿಲ್ಲವಾದ ಕಾರಣ ದೊಡ್ಡಮಳೆ ಬಂದಾಗ ನೀರೆಲ್ಲಾ ಮೇಲೆ ಹರಿದು ಸಾರವು ಕೊಚ್ಚಿಹೋಗುವುದು.

ಬಹಳ ಬಿಗಿಯಾದ ಜೇಡು ನೆಲದಲ್ಲಿ ಕಟ್ಟುವ ನೀರು ಇಂಗದೆ ಮೇಲೆಯೇ ನಿಂತು ಕೆಡಕು ಉಂಟಾಗುವುದು.

IV. ಭೂಮಿಯನ್ನು ಉಳುವ ಉದ್ದೇಶಗಳೇನು?

ಉತ್ತರ—ಉಳುವ ಉದ್ದೇಶಗಳು.

ಸಸಿಗಳ ಬೇರುಗಳು ಭೂಮಿಯಲ್ಲಿ ಸುಲಭವಾಗಿ ಆಳಕ್ಕೆ ಇಳಿಯುವ ಹಾಗೆ ಮಾಡಿ ತನ್ಮೂಲಕ ಹೆಚ್ಚು ಮಣ್ಣಿನಿಂದ ಆಹಾರ ಎಳೆಕೊಳ್ಳುವಂತೆಯೂ ಬಲವಾಗಿ ಬೇರೂರಿಕೊಳ್ಳುವಂತೆಯೂ ಮಣ್ಣು ಮಾಗಿ ಪೆತ್ತಗಾಗುವಹಾಗೂ ಮಾಡುವುದು.

ಭೂಮಿಯೊಳಗೆ ಕರಗಲಾರದ ಸ್ಥಿತಿಯಲ್ಲಿರುವ ಸಸ್ಯಾಹಾರವು ಬಿಸಿಲು ಗಾಳಿಗಳಿಗೆ ಸಿಕ್ಕಿ ಕರಗುವ ಸ್ಥಿತಿಗೆ ಬರುವುದಕ್ಕೂ ಸಸ್ಯಗಳಿಗೆ ಹಾನಿಕರವಾದ ವಸ್ತುಗಳನ್ನು ನಿರ್ಬಾಧಕವಾಗಿ ಮಾಡುವಬಗ್ಗೆ ಸಹಾ ಗಾಳಿಯು ತಡೆಯಿಲ್ಲದೆ ಭೂಮಿಯಲ್ಲಿ ಪ್ರವೇಶಿಸುವಂತೆ ಮಾಡುವುದಕ್ಕೂ ಉಳುತ್ತಾರೆ. ಮತ್ತು ಕಳೆಗಳನ್ನು ಬೇರುಸಹಿತವಾಗಿ ಕಿತ್ತು ನಾಶಪಡಿಸುವಬಗೂ ಮಳೆಯ ನೀರನ್ನೂ ಕಟ್ಟಿದ ನೀರನ್ನೂ ಜಾಗ್ರತೆಯಾಗಿ ಹೀರಿಕೊಳ್ಳುವಂತೆ ಮಾಡುವಬಗ್ಗೆ ಸಹಾ ಉಳಬೇಕು.

ಮನುಷ್ಯಜಾತಿ.

ಇಂಡಿಯಾ ನಿವಾಸಿಗಳು.

ಬ್ರಾಹ್ಮಣರು ಜನರ ಆಚರಣ ವ್ಯವಹರಣಗಳನ್ನು ಕುರಿತು ವಿಧಿ ನಿಷೇಧಗಳನ್ನು ಂಟುಮಾಡುವುದು ಅವಶ್ಯಕವೆಂದು ಆಲೋಚಿಸಿ ಧರ್ಮಶಾಸ್ತ್ರಗಳನ್ನು ಮಾಡಿದರು. ಮನುಧರ್ಮಶಾಸ್ತ್ರವು ಕ್ರಿಸ್ತಪೂರ್ವ ೫ನೆಯ ಶತಮಾನದಲ್ಲಿಯೂ ಯಾಜ್ಞವಲ್ಕ್ಯಸಂಹಿತೆಯು ಬುದ್ಧನ ಕಾಲದಲ್ಲಿಯೂ ರಚಿಸಲ್ಪಟ್ಟವೆಂದು ತಿಳಿದುಬಂದಿದೆ. ಇವಲ್ಲದೆ ನಾರದ ಶಂಖಲಿಖಿತ ಪರಾಶರಾದಿಗಳ ಸಂಹಿತೆಗಳು ಬೇರೆಬೇರೆ ಕಾಲಗಳಲ್ಲಿ ರಚಿಸಲ್ಪಟ್ಟುವು. ಈ ಸಂಹಿತೆಗಳಲ್ಲಿ ವರ್ಣಾಶ್ರಮಧರ್ಮಗಳು ನಿರೂಪಿಸಲ್ಪಟ್ಟವೆ. ಬ್ರಾಹ್ಮಣರು ವೇದಾಧ್ಯಯನ ಜಪತಪ ಬ್ರಹ್ಮಯಜ್ಞಾದಿಗಳನ್ನು ಮಾಡಬೇಕೆಂದು ವಿಧಿಸಲ್ಪಟ್ಟಿದೆ. ಇವರು ಮಿಕ್ಕ ವರ್ಣದವರಿಗಿಂತ ಶ್ರೇಷ್ಠರೆಂದೂ ಪೂಜ್ಯರೆಂದೂ ಉಕ್ತವಾಗಿದೆ.

ಕ್ಷತ್ರಿಯರು ರಾಜ್ಯ ಪರಿಪಾಲನೆಯನ್ನು ಮಾಡತಕ್ಕ ಕ್ರಮವೂ ವೈಶ್ಯರು ಕೃಷ್ಯಾದಿ ಕರ್ಮಗಳನ್ನು ಮಾಡಬೇಕಾದ ವಿಧಾನವೂ ಶೂದ್ರರು ಇತರ ವರ್ಣದವರ ಸೇವಾವೃತ್ತಿಯುಳ್ಳಿರಬೇಕಾದ ನಿಯಮಗಳೂ ಸಂಹಿತೆಗಳಲ್ಲಿ ಉಕ್ತವಾಗಿವೆ. ಈ ಸಾಮಾನ್ಯ ಧರ್ಮಗಳಲ್ಲದೆ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿಗಳು ಆಚರಿಸಬೇಕಾದ ವಿಶೇಷ ಧರ್ಮಗಳೂ ನಿರೂಪಿಸಲ್ಪಟ್ಟಿವೆ. ಇದಲ್ಲದೆ ಬೇರೆಬೇರೆ ಜಾತಿಯವರು ನಡೆದುಕೊಳ್ಳಬೇಕಾದ ವಿಧಾನವು ಮತಗ್ರಂಥಗಳಲ್ಲಿ ಸಹ ಹೇಳಲ್ಪಟ್ಟಿದೆ. ಈಗ ಹಿಂದೂದೇಶದಲ್ಲಿ ಸುಮಾರು ೩೦೦ ಕ್ಕೆ ಕಡಮೆಯಿಲ್ಲದೆ ಜಾತಿಭೇದಗಳಿವೆ. ಇವರಿಗೆಲ್ಲಾ ಸಾಮಾನ್ಯ ಧರ್ಮಗಳು ಹೇಳಲ್ಪಟ್ಟಿರುವುದಲ್ಲದೆ, ಆಯಾ ಜಾತಿಯವರು ಆಚರಿಸಬೇಕಾದ ವಿಶೇಷ ಧರ್ಮಗಳೂ ನಿರೂಪಿಸಲ್ಪಟ್ಟಿರುವುವು.

ಬೌದ್ಧಮತ.

ಇದನ್ನು ಸ್ಥಾಪಿಸಿದವನು ಗೌತಮನೆಂಬುವನು. ಇವನು ಕ್ರಿಸ್ತಪೂರ್ವ ಸುಮಾರು ೫೦೦ನೆಯ ವರ್ಷದಲ್ಲಿ ಹುಟ್ಟಿದನೆಂದೂ ಅಯೋಧ್ಯಾ ರಾಜಸಂತತಿಯವರಾದ ಶಾಕ್ಯರ ವಂಶಕ್ಕೆ ಸೇರಿದ್ದನೆಂದೂ ತಿಳಿದುಬಂದಿದೆ. ಈತನು ಮೊದಲು ಬ್ರಾಹ್ಮಣ ಗುರುಗಳ ಬಳಿಯಲ್ಲಿ ಶಿಕ್ಷಿತನಾದನು. ಆಮೇಲೆ ತನ್ನ ೨೯ನೆಯ ವಯ

ಸ್ಸಿನಲ್ಲಿ ಸರ್ವ ರಾಜಭೋಗಗಳನ್ನೂ ತ್ಯಜಿಸಿ, ಎಂಟು ಜನ ಜತೆಗಾರರೊಂದಿಗೆ ವಿಂಧ್ಯಪರ್ವತದ ಉತ್ತರದಲ್ಲಿರುವ ಅಡವಿಗೆ ಹೋಗಿ ಅಲ್ಲಿ ಏಳು ವರ್ಷಗಳ ಪರ್ಯಂತ ಉಗ್ರತಪಸ್ಸನ್ನು ಮಾಡಿದನು. ರಾಗದ್ವೇಷಾದಿಗಳನ್ನು ತ್ಯಜಿಸಿ, ಇಂದ್ರಿಯ ನಿಗ್ರಹವನ್ನು ಮಾಡಿ ಸರ್ವಭೂತಗಳಲ್ಲಿಯೂ ದಯಾಪರನಾಗಿ ಶಮದಮವನ್ನು ಹೊಂದುವುದೇ ಮೋಕ್ಷ ಅಥವಾ ನಿರ್ವಾಣಕ್ಕೆ ಸಾಧನವೆಂದು ತಿಳಿದನು. ಇದೇ ಪರಮಾರ್ಥವೆಂದು ಭಾವಿಸಿ ಇದನ್ನು ತಾನು ತಿಳಿದವನಾದುದರಿಂದ ಬುದ್ಧನೆಂದು ಹೆಸರಿಟ್ಟುಕೊಂಡನು.

ಈ ಪರಮಾರ್ಥವನ್ನು ಲೋಕಕ್ಕೆಲ್ಲಾ ತಿಳಿಸಬೇಕೆಂದು ಆಲೋಚಿಸಿ ಜನರಿಗೆ ಬಹು ಶ್ರದ್ಧಾಳುವಾಗಿ ಉಪದೇಶಿಸಲು ಉದ್ಯುಕ್ತನಾದನು. ಈತನ ಸೌಮ್ಯಾಕಾರವೂ ವರ್ಚಸ್ಸೂ ತೇಜಸ್ಸೂ ಮಧುರ ಧ್ವನಿಯೂ ಬಹುಜನರ ಮನಸ್ಸನ್ನು ಆಕರ್ಷಿಸಿದುವು. ಅನೇಕಾನೇಕರು ಇವನ ಶಿಷ್ಯರಾದರು. ಇವನು ಹೆಂಗಸರಿಗೂ ಕೂಡ ಉಪದೇಶ ಮಾಡಿ ಅನೇಕರನ್ನು ಸನ್ಯಾಸಿನಿಯುರಾಗಿ ಮಾಡಿದನು. ಬಹು ವಂದಿ ಪ್ರಾಯದ ವಿಧವೆಯರೂ ಗಂಡನಿಂದ ತ್ಯಜಿಸಲ್ಪಟ್ಟ ಸ್ತ್ರೀಯರೂ ಜಾತಿಗೆಟ್ಟ ಹೆಂಗಸರೂ ಸನ್ಮಾನಪಾತ್ರವಾದ ಸನ್ಯಾಸಿನೀ ಪದವಿಯನ್ನು ಇವನಿಂದ ಪಡೆದರು. ಬುದ್ಧನು ಕ್ರಿಸ್ತಪೂರ್ವ ೪೮೧ರಲ್ಲಿ ಪರಿನಿರ್ವಾಣವನ್ನು ಹೊಂದಿದನು. ಆ ಕಾಲದಲ್ಲಿ ಜನರು ಇವನನ್ನು ಭಗವದವತಾರ ಪುರುಷನಾಗಿ ಭಾವಿಸಿದರು. ವಿಷ್ಣುವಿನ ಹತ್ತು ಅವತಾರದಲ್ಲಿ ಬೌದ್ಧಾವತಾರವು ಒಂದು ಎಂದು ಹಿಂದೂಗಳು ಭಾವಿಸಿರುವರು. ರೋಮ್ ಮತ್ತು ಗ್ರೀಸ್ ಚರ್ಚಿನ ಕ್ರೈಸ್ತರು ಇವನನ್ನು ಮಹಾ ಸಿದ್ಧವರ್ಗಕ್ಕೆ ಸೇರಿಸಿರುವರು. ಈ ಪ್ರಪಂಚದ ಪ್ರಜಾಸಂಖ್ಯೆಯಲ್ಲಿ $\frac{1}{3}$ ಭಾಗ ಜನರು ಬೌದ್ಧ ಮತವನ್ನವಲಂಬಿಸಿರುವರು.

ಬುದ್ಧನು ಸತ್ತ ೨೦೦ ವರ್ಷಗಳೊಳಗಾಗಿ ಆತನ ಮತವು ಇಂಡಿಯಾದಲ್ಲೆಲ್ಲಾ ವ್ಯಾಪಿಸಿತು. ಕ್ರಿಸ್ತ ಪೂರ್ವ ೨೪೪ರಲ್ಲಿ ಮಗಧ ದೇಶದ ರಾಜನಾದ ಅಶೋಕನು ಆ ಮತವನ್ನವಲಂಬಿಸಿ ೬೪ ಸಹಸ್ರ ಬೌದ್ಧ ಸನ್ಯಾಸಿಗಳನ್ನು ಕಾಪಾಡುತ್ತಾ ಅನೇಕ ಆಶ್ರಮಗಳನ್ನು ಸ್ಥಾಪಿಸಿ, ಆ ಮತಧರ್ಮವನ್ನುಪದೇಶಿಸಲು ಬಹುಜನ ಸನ್ಯಾಸಿಗಳನ್ನು ಬೇರೆಬೇರೆ ಊರುಗಳಿಗೆ ಕಳುಹಿಸಿದನು. ಇವನೊಂದು ಮಹಾ ಸಭೆಯನ್ನು ಸೇರಿಸಿ, ಬೌದ್ಧಮತ ಸಿದ್ಧಾಂತಗಳನ್ನು ನಿರ್ಣಯಿಸಿ ಅನೇಕ ಗ್ರಂಥಗಳನ್ನು ಸಂಗ್ರಹ ಮಾಡಿದನು. ಇವನು ಹಿಂದೂ ದೇಶದಲ್ಲೆಲ್ಲಾ ಬಂಡೆಗಳ ಮೇಲೂ

ಕಂಬಗಳಮೇಲೂ ಮತವಿಷಯವಾಗಿ ಅನೇಕ ಶಾಸನಗಳನ್ನು ಬರೆಸಿದನು. ಹೀಗಿವನು ಬೌದ್ಧಮತವನ್ನು ವಿಶೇಷವಾಗಿ ಪ್ರಚಾರ ಮಾಡುವುದರಲ್ಲಿ ನಿರತನಾಗಿದ್ದನು.

ಆದಾಗ್ಯೂ ಬ್ರಾಹ್ಮಣ ಮತವು ನಾಶವಾಗಲಿಲ್ಲ. ಬೌದ್ಧಮತದ ಜತೆಯಲ್ಲಿ ಹೋರಾಡುತ್ತಲೇ ಇತ್ತು. ಆದರೆ ಬೌದ್ಧಪ್ರಜಾ ಸಂಖ್ಯೆಯು ಬಹಳ ಹೆಚ್ಚಾಗಿತ್ತು. ಕಾನಿಷ್ಕ, ಶಿಲಾದಿತ್ಯ ಮುಂತಾದ ರಾಜರು ಬೌದ್ಧಮತವನ್ನು ಪ್ರೋತ್ಸಾಹಗೊಳಿಸಿದರು. ಹೀಗಿದು ಒಂದು ನಾವಿರ ವರ್ಷ ಪರ್ಯಂತ ಪ್ರಬಲಸ್ಥಿತಿಯಲ್ಲಿದ್ದಿತು. ಆ ಮೇಲೆ ಕ್ರಮೇಣ ಇದು ಹಿಂದೂ ದೇಶದಲ್ಲಿ ಕ್ಷೀಣಿಸುತ್ತಾ ಬಂತು. ಆದರೆ ಚೀನಾ ಬರ್ಮಾ, ಜಪಾನ್ ಮುಂತಾದ ರಾಜ್ಯಗಳಲ್ಲಿದು ಹರಡಿಕೊಂಡಿತು. ಮಹಮ್ಮದೀಯ ಮತವು ಕತ್ತಿಯ ಭಯದಿಂದ ಬಲವಂತವಾಗಿ ಹಬ್ಬಿಸಲ್ಪಟ್ಟಂತೆ ಬೌದ್ಧಮತವು ಹಬ್ಬಿಸಲ್ಪಡಲಿಲ್ಲ. ಇದು ಯಾವ ಭಯಕ್ಕೂ ಅವಕಾಶ ಕೊಡದೆ ಸರಸಪ್ರೇರಣ ಮಾತ್ರದಿಂದಲೇ ಬೇರೆಬೇರೆ ದೇಶಗಳಲ್ಲಿ ವ್ಯಾಪಿಸಿತು.

ಇಂಡಿಯಾ ದೇಶಕ್ಕೆ ಯುರೋಪೀಯರ ಪ್ರಥಮ ಪ್ರವೇಶ.

ಹಿಂದೂ ದೇಶದ ವಿಷಯವು ಪುರಾತನ ಯುರೋಪೀಯರಿಗೆ ಹೆಚ್ಚಾಗಿ ತಿಳಿದಿರಲಿಲ್ಲ. ಸಂಸ್ಕೃತ ಭಾಷೆಯಲ್ಲಿ ತಗರದ ಹೆಸರು ಕಸ್ತೀರವೆಂದು ಹೋಮರ್ ಕವಿಗೆ ಗೊತ್ತಿತ್ತು. ಸಿಂಧೂನದೀ ವಿಷಯವಾಗಿ ಹೆರಡೊಟಸನಿಗೆ ಸ್ವಲ್ಪ ಗೊತ್ತಿತ್ತು. ಆದರೆ ಅಲೇಕಜಾಂದರನನ್ನು ಹಿಂಬಾಲಿಸಿ ಹೋದವರಿಂದ ಇಂಡಿಯಾ ವೃತ್ತಾಂತವು ಯುರೋಪೀಯರಿಗೆ ಹೆಚ್ಚಾಗಿ ತಿಳಿದಿತು. ಅಲೇಕಜಾಂದರನು ಕ್ರಿಸ್ತ ಪೂರ್ವ ೩೨೭ ರಲ್ಲಿ ಹಿಂದೂ ದೇಶದೊಳಕ್ಕೆ ಪ್ರವೇಶಿಸಿ ಜೀಲಂ ನದೀ ತೀರದಲ್ಲಿ ತನ್ನ ಸೈನ್ಯವನ್ನಿಳಿಸಿದನು. ಆ ಕಾಲದಲ್ಲಿ ಪಂಜಾಬ್ ಸೀಮೆಯು ಚಿಕ್ಕಚಿಕ್ಕ ರಾಜ್ಯಗಳಾಗಿ ವಿಭಾಗವಾಗಿತ್ತು. ಅಲ್ಲಿಯ ಒಬ್ಬ ರಾಜನಾದ ಪೋರಸನು ಅಲೇಕಜಾಂದರನ ಸಂಗಡ ಯುದ್ಧವಾಡಿ ಸೋತು ಶರಣಾಗತನಾದನು. ಆಮೇಲೆ ಅಲೇಕಜಾಂದರನು ತನ್ನ ಸೇನೆಯೊಂದಿಗೆ ಬೀಯಸ್ ನದಿಗೆ ಬಂದನು. ಅಷ್ಟುಹೊತ್ತಿಗೆ ಅವನ ಸೇನಾಜನರಿಗೆ ಬಹು ಆಯಾಸವಾದುದರಿಂದ ಅವನು ಗಂಗಾನದಿಗೆ ಹೋಗಬೇಕೆಂಬ ಉದ್ದೇಶವನ್ನು ಬಿಟ್ಟು ಯುರೋಪಿಗೆ ಹಿಂತಿರುಗಿದನು. ಹಿಂದೂ ದೇಶದಲ್ಲಿ ಕೆಲವು ಸೇನಾ ಜನರನ್ನು ಬಿಟ್ಟು, ಅಲ್ಲಲ್ಲಿ ಮಂಡಲಾಧಿಪತಿಗಳನ್ನು ನೇಮಿಸಿದನು.

ಅಲೇಕಜಾಂದರನ ತರುವಾಯ ಸಿಲೂಕಸ್ ಎಂಬಾತನು ಸಿರಿಯಾ ದೇಶವನ್ನಾಳುತ್ತಿದ್ದನು. ಆ ಕಾಲದಲ್ಲಿ ಮಗಧರಾಜ್ಯಕ್ಕೆ ಚಂದ್ರಗುಪ್ತನು ಅರಸಾಗಿದ್ದನು. ಈತನ ರಾಜಧಾನಿಯು ಪಾಟಲೀಪುರ. ಈಗಿದಕ್ಕೆ ಪಟ್ಟಣವೆಂದು ಹೆಸರು. ಸಿಲೂಕಸನು ಚಂದ್ರಗುಪ್ತನನ್ನು ಜಯಿಸಬೇಕೆಂದು ಆಲೋಚಿಸಿ, ಯುದ್ಧವಾಡಿದನು. ಆದರೆ ತಾನೇ ಸೋತು ಅವನೊಂದಿಗೆ ಸಂಧಿಮಾಡಿ ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆ ಮಾಡಿ ತನ್ನ ರಾಯಭಾರಿಯಾದ ಮೆಗಸ್ಥೆನೆಸ್ ಎಂಬುವವನನ್ನು ಪಾಟಲೀಪುರಕ್ಕೆ ಕಳುಹಿಸಿದನು. ಈ ರಾಯಭಾರಿಯು ಅಲ್ಲಿ ಎಂಟು ವರ್ಷಗಳ ಪರ್ಯಂತ ವಾಸವಾಗಿದ್ದು ಹಿಂದೂ ಚರಿತ್ರೆಯನ್ನು ಬರೆದನು. ಇದರಿಂದ ತಿಳಿದು ಬರುವ ಮುಖ್ಯಾಂಶವೇನೆಂದರೆ:—ಆಗಿನ ಕಾಲದಲ್ಲಿ ಇಂಡಿಯಾ ದೇಶವು ಬಹು ರಾಜ್ಯಗಳಾಗಿ ವಿಭಾಗವಾಗಿತ್ತು. ದೇಶವು ಸುಭಿಕ್ಷವಾಗಿಯೂ ಶಾಂತವಾಗಿಯೂ ಇತ್ತು. ಜನರು ಕ್ಷೇಮವಾಗಿದ್ದರು. ಗ್ರಾಮಸಂಘಗಳೂ ಜಾತಿಭೇದಗಳೂ ಇದ್ದುವು. ಜನರು ಮೋಸಗಾರರಲ್ಲ, ಪ್ರಾಮಾಣಿಕರು. ಮೈಗಳ್ಳರಲ್ಲ, ಕೆಲಸವಂತರು. ದಾಸರಲ್ಲ ಸ್ವತಂತ್ರರು, ದುರಾಚಾರಿಗಳಲ್ಲ ಒಳ್ಳೆಯ ನಡತೆಯವರು, ಇತ್ಯಾದಿ. ಹೀಗೀತನು ಹಿಂದೂ ಜನರನ್ನು ತುಂಬಾ ಶ್ಲಾಘಿಸಿರುವನು.

(ಸಶೇಷ) S. V.

— ಮಾನಸಿಕ ಶಿಕ್ಷಣ. —

ಉಪಾಧ್ಯಾಯನು ತನ್ನ ಶಿಷ್ಯವರ್ಗಕ್ಕೆ ಸೇರಿದ ಬಾಲಕರ ಮನಸ್ಸಿನ ಶಕ್ತಿಗಳೆಲ್ಲವೂ ಹೆಚ್ಚುವಂತೆ ಬೋಧಿಸುವುದು ಅತನ ಮುಖ್ಯ ಕರ್ತವ್ಯವು. ಬರೆ ಇಂದ್ರಿಯಗಳಿಗೇನೆ ಗಮನಕೊಟ್ಟರೆ ಬುದ್ಧಿಗೆ ಕೊರತೆಯಾಗುವುದು. ಊಹಿಸುವ ಶಕ್ತಿಯನ್ನು ಹೆಚ್ಚಿಸಿದರೆ ಪರೀಕ್ಷಣ ಶಕ್ತಿಯು ಕಮ್ಮಿಯಾಗುವುದು.

ವಿದ್ಯಾಭ್ಯಾಸದ ಕಾಲವನ್ನು ಮೂರು ತೆರನಾಗಿ ವಿಂಗಡಿಸಬಹುದು.

1 ನೇದು ಶೈಶವ, 2 ನೇದು ಬಾಲ್ಯ, 3 ನೇದು ಯೌವನವು. ಶೈಶವವು 1–7 ವರ್ಷದ ವರಿವಿಗೆ. ಬಾಲ್ಯವು 8–14 ನೇ ವರ್ಷದ ವರಿವಿಗೆ. ಯೌವನವು 15–21 ನೆಯ ವರ್ಷದ ವರಿವಿಗೆಂದು ವಿಧಾಯಕವಾಗಿರುತ್ತದೆ. ಈ ಮೂರು ತೆರನಾದ ಅವಸ್ಥಾಭೇದದಲ್ಲಿ ಶಾರೀರಕ, ಮಾನಸಿಕ-ಬದಲಾವಣೆಗಳು ಸ್ಪಷ್ಟವಾಗಿ

ಕಂಡುಬರುವ ಕಾರಣ, ಬೋಧನೆಯು, ಆಯಾ ಕಾಲಕ್ಕೆ ಅನುಗುಣವಾಗಿರುವುದು ಒಳ್ಳಿತು.

1. ಶೈಶವದಲ್ಲಿ :—ತಾಯಿತಂದೆಗಳೇ ಶಿಕ್ಷಕರು. ಆಟವಾಡುವಾಗ ಮಕ್ಕಳಿಗೂ ಇಂದ್ರಿಯಜ್ಞಾನವಿರುವುದು. ಗಮನ—ಜ್ಞಾಪಕಶಕ್ತಿಗಳಿರುವುದೆಂಬುದು ಸರ್ವಜನ ವಿದಿತವಾಗಿದೆ. ಈ ಶೈಶವಾವಸ್ಥೆಯಲ್ಲಿ ಓದುವುದು, ಬರೆವುದು, ಮುಗ್ಗಿ, ಕಿಂಡರ್‌ಗಾರ್ಟನ್, ಸುಲಭಶೈಲಿಯ ವಸ್ತುಪಾಠಗಳನ್ನು ಬೋಧಿಸುವುದು, ಸುಲಭವಾದ ನೀತಿಬೋಧಕವಾದ ಹಾಡುಗಳನ್ನು ಹೇಳಿಕೊಡುವುದು ಅತ್ಯಾವಶ್ಯಕವು.

2. ಬಾಲ್ಯದಲ್ಲಿ :—ಸರ್ವಸಾಧಾರಣವಾಗಿ ತನ್ನ ಅಭಿಪ್ರಾಯವನ್ನು ಪರರಿಗೆ ತಿಳಿಸಲು ಉಪಯುಕ್ತವಾದ ಮಾತುಗಳೆಲ್ಲವೂ ತಿಳಿದಿರುತ್ತವೆ. ಶರೀರಕ್ಕೆ ಪೌಷ್ಟಿಕವಾದ ಅಂಗಸಾಧನೆಯಲ್ಲಿ ಅಪೇಕ್ಷೆಯು ಹೆಚ್ಚಾಗಿರುತ್ತೆ. ಜ್ಞಾಪಕಶಕ್ತಿಯು ಪ್ರಾರಂಭವಾಗುವುದು. ಮತ್ತು ಅದು ಒಹು ತೀಕ್ಷ್ಣವಾಗಿ ಪರಿಣಮಿಸಲುಪಕ್ರಮಿಸುವುದು. ಈ ಅವಸ್ಥೆಯಲ್ಲಿ ಸ್ವಭಾಷೆಯೊಂದಿಗೆ ಅನ್ಯಭಾಷೆಯನ್ನೂ ಚರಿತ್ರೆ, ಪೊದಲಾದುವನ್ನೂ ಬೋಧಿಸಲು ಅನುಕೂಲವಾಗಿರುತ್ತೆ.

3. ಯೌವನಾವಸ್ಥೆಯಲ್ಲಿ :—ವಿಮರ್ಶನಾಶಕ್ತಿಯು ಪ್ರಚುರಗೊಳ್ಳತೊಡಗುವುದು. ಪಾಠಶಾಲೆಯಲ್ಲಿ ನಿಯಮಿಸಿದ ಸಮಸ್ತ ಪಾಠಗಳನ್ನೂ ಗ್ರಹಿಸುವಷ್ಟು ಸಾಮರ್ಥ್ಯವು ತಲೆದೋರುವುದು. ಈ ಸಮಯದಲ್ಲಿ ಉದ್ಗ್ರಂಥಗಳನ್ನು ಹೇಳಿಕೊಡಬಹುದು. ಇಲ್ಲಿಗೆ ಪಾಠಶಾಲೆಯಲ್ಲಿ ಅಭ್ಯಸಿಸುವ ಎಲ್ಲಾ ಭಾಗಗಳೂ ಪೂರ್ತಿಯಾಗಿ ಅಭ್ಯಸನೀಯಗಳಾಗಿರಬೇಕು. ಮೇಲೆ ಹೇಳಿದ ವಿಶಿಷ್ಟ ಅಂಶಗಳಿಗೂ ತಾಯಿತಂದೆಗಳೂ ಉಪಾಧ್ಯಾಯರೂ ಗಮನಕೊಡಬೇಕು. ಬಾಲಕರನ್ನು ಆರೀತಿಯಲ್ಲಿ ಪ್ರೇರಿಸಿ ನಡೆಯಿಸಿಕೊಂಡು ಬಂದಲ್ಲಿ ನಮ್ಮ ದೇಶದಲ್ಲಿ ನೆಲೆಸಿರುವ ಮೌಢ್ಯವು ತೊಲಗಿ ನವನಾಗರಿಕತೆ ಅಂಕುರಿಸಿ, ಗಿಡವಾಗಿ ಫಲಿಸುವುದೇ ನಿಜವು.

ಮೇಲೆ ಹೇಳಿದ ಮಾನಸಿಕ ಶಿಕ್ಷಣವನ್ನು ನೀತಿಬೋಧನೆಯ ಮೂಲಕ ಸಾರ್ಥಕಗೊಳಿಸುವುದು ಸದುಪಾಯವೆಂದು ನಂಬಿದೇನೆ. "ಬಾಲಕರ ನಡೆನುಡಿಗಳನ್ನು ತಿದ್ದುವುದೆ" ನೀತಿಬೋಧನೆ ಎನಿಸುವುದು. ಬಾಲ್ಯದಲ್ಲಿ ತಂದೆತಾಯಿಗಳೇ ನೀತಿಬೋಧಕರು. ಪಾಠಶಾಲೆಯಲ್ಲಿ ಉಪಾಧ್ಯಾಯನು ಬಾಲಕರ ದುರ್ನಡತೆಯನ್ನು ತಿದ್ದಬೇಕು. ಅವರು ಸನ್ಮಾರ್ಗಪ್ರವರ್ತಕರಾಗುವಂತೆ ಯುಕ್ತಿಸಬೇಕು. ಬಾಲ್ಯದಲ್ಲಿ ನೀತಿಬೋಧನೆಗೆ ದರ್ಪವು ಉಪಾಂಗವಾಗಿರುವುದು. ಕೆಲವು ಸಮಯ

ದಲ್ಲಿ ನಿರ್ಬಂಧವು ಸಹಾಯವಾಗಿರುವುದು. ಬಾಲಕನಿಗೆ ಜನ್ಮಪ್ರಭೃತಿ ವಿಧೇಯತೆಯೇ ನೀತಿಮಾರ್ಗವೆಂದು ಪ್ರಾಚೀನಕಾಲದ ಆರ್ಯರು ನಿರ್ಧರಿಸುತ್ತಾರೆ.

" ಪೂರ್ವಕಾಲದಲ್ಲಿ ವಿದ್ಯಾರ್ಥಿಯು ಗುರುಕುಲವಾಸವನ್ನು ತನ್ನ 16 ನೆಯ ವರ್ಷದ ವರೆಗೂ ಮಾಡುತ್ತಾ, ಗುರುವಿಗೂ, ಆತನ ಕುಟುಂಬದವರಿಗೂ ಎಲ್ಲಾ ಭಾಗಗಳಲ್ಲಿಯೂ ವಿಧೇಯನಾಗಿ, ಅವರ ಆಜ್ಞೋಲ್ಲಂಘನೆ ಮಾಡದೆ, ವಿದ್ಯೆಯನ್ನಾರ್ಜಿಸುತ್ತಿದ್ದನೆಂಬುದಕ್ಕೆ—ರಾಮನೂ, ಕೃಷ್ಣನೂ, ಕೌತ್ಸನೂ, ಪೆದ್ದಭಟ್ಟನೂ ಸಾಕ್ಷಿಗಳಾಗಿರುವರು. ಇವರೆಲ್ಲರೂ ತಮ್ಮ ಜನ್ಮಭೂಮಿಯನ್ನು ಬಿಟ್ಟು, ದೂರದೇಶಗಳಿಗೆ ಹೋಗಿ, " ವಿಧೇಯಾಭರಣಭೂಷಿತರಾಗಿಯೇ " ವಿದ್ಯೆಯನ್ನು ಅರ್ಜಿಸಿದರೆಂದು ಇವರ ಚರಿತ್ರೆಯನ್ನೋದುವುದರಿಂದ ವ್ಯಕ್ತವಾಗುತ್ತದೆ.

ನೀತಿಬೋಧನೆಯು ವಿಷಯದಲ್ಲಿ ಉಪಾಧ್ಯಾಯನು ಎರಡು ಬಗೆಯಾದ ವಿಷಯಗಳಿಗೆ ಗಮನಕೊಡಬೇಕು.

(1) ದುರ್ಗುಣವನ್ನು ಬಿಡಿಸುವುದು. (2) ಸದ್ಗುಣಗಳನ್ನು ಅಭಿವೃದ್ಧಿಪಡಿಸುವುದು.

ಇವುಗಳಿಗೆ ಸಹಕಾರಿಯಾಗಿ ಬಾಲ್ಯದ ಪ್ರಕೃತಿಗಳನ್ನು ಉಪಯೋಗಿಸಿಕೊಳ್ಳಬೇಕು. ಬಾಲ್ಯದ ಪ್ರಕೃತಿಗಳು ಮೂರು ತೆರನಾಗಿವೆ.

(1) ಸ್ವಭಾವವಾಗಿ ಹುಡುಗರು ತಮ್ಮ ಹಿರಿಯರು ಮಾಡಿದುದನ್ನು ಅನುಸರಿಸಲು ಇಷ್ಟವುಳ್ಳವರಾಗಿರುತ್ತಾರೆ.

(2) ಸಹಾನುಭವವು ಬಾಲಕರಲ್ಲಿ ನೆಲೆಯಾಗಿರುತ್ತದೆ. ಅಲ್ಲದೆ ಹುಡುಗರಲ್ಲಿ ಐಕಮತ್ಯ ಹೆಚ್ಚು.

(3) ಒಳ್ಳೆದರಲ್ಲಿ ಹೋಗುವುದಕ್ಕಿಂತ ಕೆಟ್ಟದರಲ್ಲಿ ಅವರ ಮನಸ್ಸು ಎಳೆಯುವುದು ಹೆಚ್ಚು.

ಈ ವಿಧವಾದ ಗುಣಗಳು ಬಾಲಕರಲ್ಲಿ ಸ್ವಭಾವಜನ್ಯವಾಗಿರುವುದರಿಂದ ನೀತಿಬೋಧನೆಗೆ ತಕ್ಕ ಸಾಧಕಗಳು ಯಾವವೆಂದರೆ :—

(1) ನಿದರ್ಶನ (2) ನಿಯಮ (3) ಬೋಧನೆ. ಈ ಮೂರು ವಿಷಯಗಳನ್ನು ಉಪಾಧ್ಯಾಯನು ಚೆನ್ನಾಗಿ ಅನುಸರಿಸಿ, ಹುಡುಗರಿಗೆ ಮಾದರಿಯಾಗಿದ್ದುಕೊಂಡು ಅವರು ಇವನನ್ನನುಸರಿಸುವಂತೆ ಮಾಡಬೇಕು.

ಈ ರೀತಿಯಾಗಿ ತಾಯಿತಂದೆಗಳೂ, ಉಪಾಧ್ಯಾಯರೂ ಎಚ್ಚರಿಕೆಯಿಂದ

ಮಕ್ಕಳನ್ನು ತಿದ್ದುತ್ತಾ, ಪಾಠಶಾಲಾ ನಿಬಂಧನೆಗಳಿಗೆ ಗಮನಕೊಟ್ಟು ಬೋಧನೆಗಳಲ್ಲಿ ಸತ್ಕಥೆಗಳನ್ನು ಹೇಳಿ ತನ್ಮೂಲಕ ನೀತಿಕೋವಿದರನ್ನಾಗಿಯೂ, ವಿದ್ಯಾವಂತರನ್ನಾಗಿಯೂ ಮಾಡಿ ಈ ನಮ್ಮ ದೇಶದ ಮೌಢ್ಯವನ್ನು ತೊಲಗಿಸುವಷ್ಟು ಶಕ್ತರಾಗಲೆಂದು ಜಗತ್ಕರ್ತಾರನನ್ನು ಪ್ರಾರ್ಥಿಸುವೆನು. ಈ ಭಾಗದಲ್ಲಿ ಪ್ರತಿ ಉಪಾಧ್ಯಾಯರೂ ಈ ವಿಧವಾದ ಅಭಿಪ್ರಾಯಕ್ಕೆ ಸತ್ಪಾತ್ರರಾಗಿಧಾರೆ.

ಕಂ॥ ಗುರುವೇ ಜನನೀಜನಕರ್ |
ಗುರುವೇ ನಿಜಬಂಧುಬಳಗವೆನಿಸುಂ ಬಗೆಯಲ್ ॥
ಗುರುವೇ ದೈವಂ ಗೆಳೆಯಂ |
ಗುರುವೇ ಸರ್ವಸ್ವಮೆಂದು ನೀಂ ತಿಳಿ ತರಳಾ ॥

M. S. Srinivasa Iyengar, Malur.

☞ ಸೂಚನೆ ಮತ್ತು ಸಮಾಚಾರಗಳು.

ಶ್ರೀರಂಗಪಟ್ಟಣದ ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಹೆಡ್ಮಾಸ್ಟರ್ ವೀರರಾಘವಶಾಸ್ತ್ರಿ ಎಂಬವರು, ಸ್ಕೂಲಿಗೆ ಸಂಬಂಧಪಟ್ಟ ಕ್ರಿಕೆಟ್ ಕ್ಲಬ್, ಬಾಯ್ಸ್ ರೀಡಿಂಗ್ ರೂಂ, ಲೈಬ್ರರಿಯ ಹಣವನ್ನೂ ಸ್ಕೂಲು ಮಾಸ್ಟರುಗಳಿಗೆ ಸಲ್ಲತಕ್ಕ ಬದಲೀ ಅಲೋಯೆನ್ಸನ್ನೂ ದುರುಪಯೋಗಪಡಿಸಿಕೊಂಡುದರಿಂದ ಇವರನ್ನು ಕೆಲಸದಿಂದ ವಜಾ ಮಾಡಿರುತ್ತಾರೆ. ಸ್ಕೂಲಿನ ಬರಾವರ್ದು ಬುಕ್ಕಿನಲ್ಲಿಯೂ, ರಿಜಿಸ್ಟರಿನಲ್ಲಿಯೂ, ಮತ್ತು ಇತರ ರಿಕಾರ್ಡುಗಳಲ್ಲಿಯೂ ಮೋಸ್ಟಿ ತಿದ್ದಿರುತ್ತಾರಾದುದರಿಂದ ಇವರು ಇನ್ನು ಮುಂದೆ ಪುನಃ ಮೈಸೂರು ಶೀಮೆಯಲ್ಲಿ ಯಾವ ಇಲಾಖೆಯಲ್ಲಿಯೂ ಕೆಲಸ ಮಾಡುವುದಕ್ಕೆ ಅನರ್ಹರಾಗಿರುತ್ತಾರೆ. ಮೈಸೂರು ಸರಕಾರದಲ್ಲಿ ಇವರಿಗೆ ಯಾವ ಕೆಲಸವೂ ದೊರೆಯಲಾರದು.

ಹಾಸನದ ತಾಲ್ಲೂಕಿಗೆ ಸೇರಿದ ಅಲೂರು ಗೌ॥ ಕನ್ನಡ ಸ್ಕೂಲ್ ಹೆಡ್ಮಾಸ್ಟರಾದ ರಾಮಸ್ವಾಮೈಯ್ಯ ಎಂಬುವರು ಬ್ರಾಂಚ್ ಪೋಸ್ಟ್‌ಮಾಸ್ಟರಾಗಿ ಪೋಸ್ಟಲ್ ಮನಿಆರ್ಡರಿನ ಕೆಲವು ಹಣವನ್ನು ದುರುಪಯೋಗಪಡಿಸಿಕೊಂಡುದುದಕ್ಕಾಗಿ ಇವರನ್ನು ಕೆಲಸದಿಂದ ವಜಾ ಮಾಡಿರುತ್ತಾರೆ. ಇನ್ನುಮುಂದೆ ಇವರು ಮೈಸೂರುಶೀಮೆಯಲ್ಲಿ ಯಾವ ಇಲಾಖೆಯಲ್ಲಿಯೂ ಕೆಲಸಮಾಡುವುದಕ್ಕೆ ಅನರ್ಹರಾಗಿರುವುದರಿಂದ ಇವರಿಗೆ ಸರಕಾರದ ಯಾವ ನೌಕರಿಯೂ ದೊರೆಯುಲಿಕ್ಕಿಲ್ಲ.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಇಂಗ್ಲೀಷು ವ್ಯಾಕರಣ ಮತ್ತು ಭಾಷೆ.	೧ ನೆಯ ಭಾಗಕ್ಕೆ ಹಾಸನದ ಗೌ॥ ಹೈಸ್ಕೂಲು ಹೆಡ್ಮಾಸ್ಟರ್ ಮೆ ॥ ಯಸ್. ಕೈನ್, ಬಿ. ಎ. ಯವರು. ೨ ನೆಯ ಭಾಗಕ್ಕೆ ಬೆಂಗಳೂರು ಲಂಡನ್ ಮಿಷನ್ ಹೈಸ್ಕೂಲ್ ಹೆಡ್ಮಾಸ್ಟರ್ ಮೆ॥ ಕೆ. ರಾಮಚಂದ್ರರಾವ್ ಬಿ. ಎ. ಯವರು.
ಇಂಗ್ಲೀಷು ಬರವಣಿಗೆ ಮತ್ತು ಉಕ್ತಲೇಖನ.	ತುಮಕೂರು ಗೌ॥ ಹೈಸ್ಕೂಲ್ ಹೆಡ್ಮಾಸ್ಟರ್ ಮೆ॥ ವಿ. ಸುಬ್ರಹ್ಮಣ್ಯೆಯ್ಯರ್ ಬಿ. ಎ. ಯವರು.
ಭಾಷಾಂತರ (ಲೋವರ್ ಸಕೆಂಡರೀ ಪರೀಕ್ಷೆಗೆ)	ಚಿಕ್ಕಬಳ್ಳಾಪುರದ ಗೌ॥ ಹೈಸ್ಕೂಲ್ ಹೆಡ್ಮಾಸ್ಟರ್ ಮೆ॥ ಯಂ. ಕೃಷ್ಣಾಲಂ ಗಾರ್, ಬಿ. ಎ. ಯವರು.
ಗಣಿತ—ಲೋವರ್ ಸಕೆಂಡರೀ ಇಂಗ್ಲೀಷ್ ವಿದ್ಯಾರ್ಥಿಗಳಿಗೆ ಮಾತ್ರ.	ಕೋಲಾರ್ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಯಸ್. ವೆಂಕಟರಮಣಾಚಾರ್ ಬಿ. ಎ. ಯವರು.
ಗಣಿತ—ಲೋವರ್ ಮತ್ತು ಅಪ್ಪರ್ ಸೆಕೆಂಡರೀ ಪರೀಕ್ಷೆಗೆ. (ಇಂಗ್ಲೀಷ್ ವಿದ್ಯಾರ್ಥಿಗಳು ಹೊರತು)	೧ ನೆಯ ಭಾಗಕೆ ಚಿಕ್ಕಬಳ್ಳಾಪುರದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಕೆ. ಶ್ರೀನಿವಾಸ ಐಯ್ಯಂಗಾರ್ ಯವರು. ೨ ಯಭಾಗಕ್ಕೆ ತುಮಕೂರು ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಯಸ್. ಶ್ರೀನಿವಾಸರಾವ್, ಬಿ. ಎ. ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಅಪ್ಪರ್ ಸೆಕೆಂಡರಿ ಪರೀಕ್ಷೆಗೆ—ರೇಖಾ, ಕ್ಷೇತ್ರ ಮತ್ತು ಬೀಜಗಣಿತ, ಲೋವರ್ ಸೆಕೆಂಡರೀ ಪರೀಕ್ಷೆಗೆ ಕ್ಷೇತ್ರಗಣಿತ.	ಮೈಸೂರು ಮಹಾರಾಜಾ ಕಾಲೇಜು ಸಹಾಯೋಪಾಧ್ಯಾಯರಾದ ಮೆ॥ ಹೆಚ್. ಆರ್. ಕೃಷ್ಣಮೂರ್ತಿರಾವ್ ಬಿ. ಎ. ಯವರು.
ಕನ್ನಡ ಟೆಕ್ಸ್ಟ್ (ಅಪ್ಪರ್ ಸೆಕೆಂಡರೀ ಪರೀಕ್ಷೆಗೆ) ಕನ್ನಡ ಅಡ್ವಾನ್ಸ್ ವ್ಯಾಕರಣ (ಅಪ್ಪರ್ ಸೆಕೆಂಡರೀ ಪರೀಕ್ಷೆಗೆ)	ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ರವರ ಆಫೀಸಿನಲ್ಲಿರುವ ಕನ್ನಡ ಟ್ರಾನ್ಸ್ಲೇಟರ್ ಮೆ॥ ರಾ॥ ಎಸ್. ಜಿ ನರಸಿಂಹಾಚಾರ್ಯರು. ಬೆಂಗಳೂರು.
ಕನ್ನಡ ವ್ಯಾಕರಣ ಲೋವರ್ ಸೆಕೆಂಡರೀ ಪರೀಕ್ಷೆಗೆ.	ಮೈಸೂರು ಗೌ॥ ನಾರ್ಮಲ್ ಸ್ಕೂಲು ಸಹಾಯೋಪಾಧ್ಯಾಯರಾದ ಮೆ॥ ಯಸ್. ತಿಮ್ಮಪ್ಪೈಯ್ಯಶಾಸ್ತ್ರಿಗಳವರು.
ಕನ್ನಡ ಟೆಕ್ಸ್ಟ್ (ಲೋವರ್ ಸೆಕೆಂಡರೀ ಪರೀಕ್ಷೆಗೆ)	ಮೈಸೂರು ಗೌ॥ ಶಾಸನದ ಇಲಾಖೆಯಲ್ಲಿರುವ ಮೆ॥ ರಾ॥ ಆರ್. ನರಸಿಂಹಾಚಾರ್, ಎಂ. ಎ. ಯವರು.
ಕನ್ನಡ ವಾಕ್ಯರಚನೆ. (ಲೋವರ್ ಮತ್ತು ಅಪ್ಪರ್ ಸೆಕೆಂಡರೀ ಪರೀಕ್ಷೆಗೆ)	ತುಮಕೂರು ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾರಾದ ಮೆ॥ ಯಸ್. ಟಿ. ರಾಘವಾಚಾರ್, ಬಿ. ಎ. ಯವರು.
ಕನ್ನಡ ಉಪ್ಪತ್ತಲೇಖನ. (ಲೋವರ್ ಸೆಕೆಂಡರೀ ಪರೀಕ್ಷೆಗೆ)	ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ರವರ ಆಫೀಸಿನಲ್ಲಿರುವ ಮೆ॥ ರಾ॥ ಸಿ. ವಾಸುದೇವಯ್ಯನವರು.
ಕನ್ನಡ ಒರವಣಿಗೆ. (ಲೋವರ್ ಸೆಕೆಂಡರೀ ಪರೀಕ್ಷೆಗೆ)	ತುಮಕೂರು ಎಂಪ್ರೆಸ್ ಸ್ಕೂಲ್ ಹೆಡ್ಮಿಸ್ಟ್ರಸ್ ರಾದ ಶ್ರೀಮತಿ ಡಿ. ಸುಬ್ಬಮ್ಮನವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಹಿಂದೂಸ್ಥಾನಿ ವ್ಯಾಕರಣ, ಹಿಂದೂಸ್ಥಾನಿ ವಾಕ್ಯರಚನೆ, ಫಾರಿಷೀ ಭಾಷಾ ಪುಸ್ತಕಗಳು ಮತ್ತು ವ್ಯಾಕರಣ. (ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ) ಫಾರಿಷಿ ವ್ಯಾಕರಣ ಮತ್ತು ಉಕ್ತಲೇಖನ ಇತರಭಾಷಾ ಪುಸ್ತಕಗಳು, ಭಾಷಾಂತರ ಮತ್ತು ಹಿಂದೂಸ್ಥಾನಿ ಉಕ್ತಲೇಖನ. (ಲೋವರ್‌ಸೆಕೆಂಡರೀ ಪರೀಕ್ಷೆಗೆ)	ಬೆಂಗಳೂರು ಗೌ॥ ಸೆಂಟ್ರಲ್ ಬುಕ್‌ಡಿಪೋನಲ್ಲಿರುವ ಕ್ಯೂರೇಟರ್ ಹಜರತ್ ಯಸ್. ಅಬ್ದುಲ್‌ಹೈ ಯವರು.
ಹಿಂದೂಸ್ಥಾನಿ ಟಿಕ್ಸ್‌ಟ್, ಹಿಂದೂಸ್ಥಾನಿ ಮತ್ತು ಪರಿಷಿಯರ್ಸ್ ಭಾಷೆಯ ಭಾಷಾಂತರ ಮತ್ತು ಇತರ ಭಾಷಾ ಪುಸ್ತಕಗಳು. (ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ) ಹಿಂದೂಸ್ಥಾನಿ ಟಿಕ್ಸ್‌ಟ್, ವ್ಯಾಕರಣ, ವಾಕ್ಯರಚನೆ, ಹಿಂದೂಸ್ಥಾನಿ ಕೈಬರಹ, ಪರಿಷಿಯರ್ಸ್ ಭಾಷಾಂತರ, ಉಕ್ತಲೇಖನ, ಕೈಬರಹ, (ಲೋವರ್‌ಸೆಕೆಂಡರಿ ಪರೀಕ್ಷೆಗೆ)	ಮೈಸೂರು ಗೌ॥ ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ಹಜರತ್ ಮೌಲ್ವಿ ವಿಾರ್‌ಹಯಾತ್ ರವರು.
ಅಪ್ಪರ್‌ಸೆಕೆಂಡರಿ ಪರೀಕ್ಷೆಯ ಹಿಂದೂಸ್ಥಾನಿ ಚರಿತ್ರೆ, ಭೂಗೋಳ, ಗಣಿತರೇಖಾ, ಮತ್ತು	ಬೆಂಗಳೂರಲ್ಲಿರುವ ಹಿಂದೂಸ್ಥಾನಿ ಸ್ಕೂಲ್‌ಗಳ ಡೆಪ್ಟಿ ಇನ್‌ಸ್ಪೆಕ್ಟರಾದ ಹಜರತ್ ಬಿ. ಮಹಮ್ಮದ್ ಜೇಗ್ ಬಿ. ಎ. ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಬೀಜಗಣಿತ, ಕ್ಷೇತ್ರಗಣಿತ, ವ್ಯವಸಾಯ, ಆರೋಗ್ಯ, ಭೌತಿಕಶಾಸ್ತ್ರ ಮತ್ತು ಲೋವರ್‌ಸೆಕೆಂಡರಿ ಪರೀಕ್ಷೆಯ ಹಿಂದೂಸ್ಥಾನಿ ಭಾಷಾಂತರ, ಗಣಿತ, ಹಿಂದೂ ದೇಶದ ಚರಿತ್ರೆ, ಭೂಗೋಳ, ನಕ್ಷೆ ಬರೆಯುವುದು ಆರೋಗ್ಯ ಮತ್ತು ವ್ಯವಸಾಯಶಾಸ್ತ್ರಗಳಿಗೆ.	
ಅರಬ್ಬಿ ಟೆಕ್ಸ್ಟ್, ವ್ಯಾಕರಣ, ಮತ್ತು ಭಾಷಾಂತರ (ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ)	ಮೈಸೂರು ಗೌ॥ ನಾರ್ಮಲ್ ಸ್ಕೂಲ್‌ನಲ್ಲಿರುವ ಹಜರತ್ ಮೌಲ್ವಿ ಮಜಾರ್ ಹಸನ್‌ಖಾನ್‌ರವರು.
ಸಂಸ್ಕೃತ ಟೆಕ್ಸ್ಟ್ ಮತ್ತು ವ್ಯಾಕರಣ (ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ) ಲೋವರ್‌ಸೆಕೆಂಡರಿ ಪರೀಕ್ಷೆಯ ಸಂಸ್ಕೃತ ಟೆಕ್ಸ್ಟ್ ಮತ್ತು ವ್ಯಾಕರಣ, ಭಾಷಾಂತರ, ಕೈಬರಹ, ಉಕ್ತಲೇಖನ.	ಬೆಂಗಳೂರು ಸೆಂಟ್ರಲ್ ಕಾಲೇಜ್ ಪಂಡಿತರಾದ ಗರಣಿ ವಿ. ಕೃಷ್ಣಾಚಾರ್‌ರವರು.
ಸಂಸ್ಕೃತ ಭಾಷಾಂತರ—(ಅಪ್ಪರ್ ಸೆಕೆಂಡರಿ ಪರೀಕ್ಷೆಗೆ) ವ್ಯಾಕರಣ, ಟೆಕ್ಸ್ಟ್ ಮತ್ತು ಭಾಷಾಂತರ, ಉಕ್ತಲೇಖನ, ಕೈಬರಹ.	ಚಿಕ್ಕಬಳ್ಳಾಪುರದ ಗೌ॥ ಹೈಸ್ಕೂಲ್ ಹೆಡ್‌ಮಾಸ್ಟರ್ ಮೆ॥ ಯಂ. ಬಿ. ಶ್ರೀನಿವಾಸೈಯ್ಯಂಗಾರ್ ಎಂ. ಎ. ಯವರು.
(ಲೋವರ್‌ಸೆಕೆಂಡರಿ ಪರೀಕ್ಷೆಗೆ)	

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ತೆಲುಗುಭಾಷೆ ಮತ್ತು ಎಲ್ಲಾ ತೆಲುಗುಗ್ರಂಥಗಳಿಗೆ.	ಮೈಸೂರು ಗೌ॥ ಓರಿಯಂಟಲ್ ಲೈಬ್ರೆರ ಕ್ಯೂರೇಟರ್ ಮೆ॥ ಎ. ಮಹದೇವಶಾಸ್ತ್ರಿ ಬಿ. ಎ. ಯವರು.
ಆರೋಗ್ಯಶಾಸ್ತ್ರ (ಅಪ್ಪರ್ ಮತ್ತು ಲೋವರ್‌ಸೆಕೆಂಡರಿ ಪರೀಕ್ಷೆಗಳಿಗೆ.)	ಮೈಸೂರು ಮಹಾರಾಣಿ ಕಾಲೇಜ್ ಸಹಾಯೋಪಾಧ್ಯಾಯರಾದ ಮೆ॥ ಕೆ. ಸಂಜೀವಶೆಟ್ಟಿ ಬಿ. ಎ. ಯವರು. (೧ ನೇ ಭಾಗ ಲೋವರ್ ಮತ್ತು ಅಪ್ಪರ್‌ಸೆಕೆಂಡರಿ) ಮತ್ತು ಚನ್ನಪಟ್ಟಣದ ಗೌ॥ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಆರ್. ಕೃಷ್ಣೈಯಂಗಾರ್ ಬಿ. ಎ. ಯವರು. (೨ ನೇ ಭಾಗ ಲೋವರ್‌ಸೆಕೆಂಡರಿ)
ವ್ಯವಸಾಯಶಾಸ್ತ್ರ — (ಲೋವರ್ ಮತ್ತು ಅಪ್ಪರ್‌ಸೆಕೆಂಡರಿ ಪರೀಕ್ಷೆಗಳಿಗೆ)	ಬೆಂಗಳೂರು ಲಾಲ್‌ಬಾಗ್ ಕ್ಯೂರೇಟರ್ ಮೆ॥ ವೈ. ರಾಮರಾವ್‌ಯವರು.
ಭೌತಿಕಶಾಸ್ತ್ರ, ಭೌತಿಕಭೂಗೋಳಶಾಸ್ತ್ರ, ಮತ್ತು ಭೂಗೋಳ, ನಕ್ಷೆ. (ಅಪ್ಪರ್‌ಸೆಕೆಂಡರಿ ಪರೀಕ್ಷೆ.)	ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿರುವ ಬೋಧಕರಾದ ಮೆ॥ ಸಿ. ಯಂ, ವಿಜಯರಾಘವಾಚಾರ್ ಬಿ. ಎ. ಯವರು.
ಲೋವರ್‌ಸೆಕೆಂಡರಿ ಪರೀಕ್ಷೆಯ ಹಿಂದೂಚರಿತ್ರೆ, ಮತ್ತು ಅಪ್ಪರ್‌ಸೆಕೆಂಡರಿ ಪರೀಕ್ಷೆಯ ಚರಿತ್ರೆ.	ಲೋವರ್‌ಸೆಕೆಂಡರಿ ಪರೀಕ್ಷೆ ಹಿಂದೂಚರಿತ್ರೆಯ ೧ ನೇ ಭಾಗಕ್ಕೆ ಮತ್ತು ಅಪ್ಪರ್‌ಸೆಕೆಂಡರಿಯ ಇಂಗ್ಲೀಷ್ ಚರಿತ್ರೆಗೆ ಬೆಂಗಳೂರು ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿನಲ್ಲಿರುವ ಮ್ಯಾನೇಜರ್ ಮೆ॥ ಕೇ. ಸೂರಯ್ಯ ಬಿ. ಎ. ಯವರು. ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಯ ಹಿಂದೂಚರಿತ್ರೆ ೨ನೇ ಭಾಗಕ್ಕೆ ಮತ್ತು ಅಪ್ಪರ್‌ಸೆಕೆಂಡರಿ ಪರೀಕ್ಷೆಯ ಹಿಂದೂಚರಿತ್ರೆಗೆ — ಮೈಸೂರು

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
	ಮಹಾರಾಣಿ ಕಾಲೇಜು ಸಹಾಯೋಪಾಧ್ಯಾಯಿನಿಯರಾದ ಮಿಸ್ಟ್ರಸ್‌ರಾದ ಶ್ರೀಮತಿ ಕೆ. ಡಿ. ರುಕ್ಮಿಣಿಯಮ್ಮ ಬಿ. ಎ. ಯವರು.
ನಕ್ಷೆ ಬರೆಯುವುದು. (ಲೋವರ್ ಸೆಕೆಂಡರಿ ಪರೀಕ್ಷೆ.)	ಮೈಸೂರು ಮಹಾರಾಣಿ ಕಾಲೇಜಿನ ಸಹಾಯೋಪಾಧ್ಯಾಯಿನಿಯರಾದ ಶ್ರೀಮತಿ ಶ್ರೀರಂಗಮ್ಮ ಬಿ. ಎ. ಯವರು.
ಭೂಗೋಳಶಾಸ್ತ್ರ. (ಲೋವರ್ ಸೆಕೆಂಡರೀ ಪರೀಕ್ಷೆ.)	೧ ನೇ ಭಾಗ—ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಮೆ॥ ಹೆಚ್. ಎಸ್. ವೆಂಕಟರಮಣಯ್ಯ ಬಿ. ಎ. ಯವರು. ೨ ನೇ ಭಾಗ—ದೇಶೀಯ ಪರೀಕ್ಷೆಗಳ ಆಫೀಸ್ ಮ್ಯಾನೇಜರ್ ಮೆ॥ ಬಿ. ತಿರುಮಲಾಚಾರ, ಬಿ. ಎ. ಯವರು.
ಪಾಕಶಾಸ್ತ್ರ—ಲೋವರ್ ಸೆಕೆಂಡರಿ ಪರೀಕ್ಷೆ.	ಬೆಂಗಳೂರು ಗೌ॥ ಬಾಲಿಕಾಪಾಠಶಾಲೆಯ ಹೆಡ್ ಮಿಸ್ಟ್ರಸ್‌ರಾದ ಶ್ರೀಮತಿ ಪುಟ್ಟಸುಬ್ಬಮ್ಮನವರು.
ಕಸೂತಿ ಕೆಲಸ—ಲೋವರ್ ಮತ್ತು ಅಪ್ಪರ್‌ಸೆಕೆಂಡರಿ ಪರೀಕ್ಷೆ.	ಬೆಂಗಳೂರು ಗೌ॥ ಆರ್ಯಬಾಲಿಕಾಪಾಠಶಾಲೆಯ ಹೆಡ್ ಮಿಸ್ಟ್ರಸ್‌ರಾದ ಶ್ರೀಮತಿ ಎ. ಲಕ್ಷ್ಮೀದೇವಮ್ಮನವರು.
ಸಂಗೀತ—ಅಪ್ಪರ್‌ಸೆಕೆಂಡರಿ ಪರೀಕ್ಷೆ.	ಮೈಸೂರು ಗೌ॥ ಶಾಸನದ ಇಲಾಖೆಯಲ್ಲಿರುವ ಮು॥ ರಾ॥ ಆರ್. ನರಸಿಂಹಾಚಾರ್ ಎಂ. ಎ. ಯವರು.

* ವಿದ್ಯಾದಾಯಿನಿ

ಭಾಗ ೧೪.] ಆಗಸ್ಟ್—೧೯೦೬. [ಸಂಚಿಕೆ ೮.

ನೀತಿಶಿಕ್ಷಣ.

(ತಿಮ್ಮವಿಕೆ.)

ಪ್ರತಿಯೊಬ್ಬ ಮನುಷ್ಯನೂ ನೀತಿಮಾರ್ಗದಲ್ಲಿ ವರ್ತಿಸುವುದು ವಿಹಿತವಾದುದು. ಇದು ಮನುಷ್ಯನಲ್ಲಿ ನೆಲೆಗೊಳ್ಳಬೇಕಾದರೆ ಬಾಲ್ಯದಿಂದಲೂ ಪ್ರಯತ್ನಿಸಬೇಕು; ಅಂದರೆ ಬಾಲಕರನ್ನು ಬಾಲ್ಯದಲ್ಲಿ ತಿದ್ದುವುದು ತಾಯಿತಂದೆಗಳ ಮುಖ್ಯಕರ್ತವ್ಯವು. ಆದರೆ ಬಹುಮಂದಿ ಈ ಗೌರವಕಾರ್ಯಕ್ಕೆ ಲಕ್ಷ್ಯಗೊಡದೆ ಉಪೇಕ್ಷೆಮಾಡಿ, ಒಳಿಕ ದುರ್ಮಾರ್ಗಿಗಳಾದ ತಮ್ಮ ಮಕ್ಕಳ ಸ್ಥಿತಿಯನ್ನು ನೋಡಿ ವ್ಯಥೆಪಡುವರು. ಜನಗಳ ಈ ಮೌಢ್ಯಕ್ಕೆ ಏನುಹೇಳೋಣ? ಕೆಟ್ಟಹಾದಿಗೆ ಬಿದ್ದ ಆ ಮಕ್ಕಳಿಗೆತಾನೇ ಸುಖವುಂಟೇ? ಅನುಭವಿಸಬಾರದ ಕಷ್ಟಕ್ಕೆಲ್ಲಾ ಈಡಾಗುವರು. ಆದುದರಿಂದ ತಾಯಿತಂದೆಗಳು ನೀತಿಶಿಕ್ಷಣದ ಕಡೆಗೆ ಅವಶ್ಯ ಲಕ್ಷ್ಯಗೊಟ್ಟು, ತಮ್ಮತಮ್ಮ ಆಣುಗರನ್ನು ಸನ್ಮಾರ್ಗ ಪ್ರವರ್ತಕರನ್ನಾಗಿ ಗುರಿಪಡಿಸುವುದೇ ನೀತಿಶಿಕ್ಷಣದ ಮುಖ್ಯ ಉದ್ದೇಶವಾಗಿರುತ್ತದೆ.

ನೀತಿಶಿಕ್ಷಣವ ಕಡೆಗೆ ಬಾಲಕರನ್ನು ತರಬೇಕಾದರೆ-

(1) ಉಪಾಧ್ಯಾಯರು,

(2) ತಾಯಿತಂದೆಗಳು,

(3) ನೆರೆಹೊರೆಯವರು,

ಮುಖ್ಯ ಕಾರಣರಾಗಿರುತ್ತಾರೆ. ಕೆಲವರು ಇನ್ನುಗಳನ್ನು ಸನ್ಮಾರ್ಗದರ್ಶಣಗಳೆಂದೆನ್ನುವರು.

(1) "ಗುರುವಿನಂತೆ ಶಿಷ್ಯ" ಎಂಬಂತೆ ಗುರುವು ಅನುಸರಿಸುವ ಮಾರ್ಗವನ್ನೇ ಶಿಷ್ಯನೂ ಅನುಸರಿಸುವನು. ಬಾಲಕರಿಗೆ ನಾಲ್ಕೈದು ಸಂವತ್ಸರಗಳಾದ ಮೇಲೆ ತಂದೆತಾಯಿಗಳ ನೀತಿಬೋಧೆಗಿಂತಲೂ, ಉಪಾಧ್ಯಾಯರೇ ಸನ್ಮಾರ್ಗನಿದರ್ಶಕರಾಗಿರುವರು. ಈ ಕಾಲದಲ್ಲಿ ಮನೆಯವರ ವಿವೇಕವಾದಕ್ಕಿಂತಲೂ ಬೋಧಕರ ವಿವೇಕವಾದವು ಬಹುಬೆಲೆ ಬಾಳುವುದು. "ಅನೇಕ ಪೇಳೆ ಜನರು ಬಾಲಕರ ತುಂಟಾಟಗಳಿಗೆ ಶಿಕ್ಷಕರನ್ನು ದೂಷಿಸುವರು. ಶಿಕ್ಷಕರ ತಿದ್ದುವಿಕೆಯು ಪಾಠಶಾಲೆಯಲ್ಲಿ ಸರಿಯಾಗಿದ್ದರೆ ಎಂದಿಗೂ ಇವರಿಗೆ ದೂಷಣೆ ಬಾರದು." ಬಾಲಕರ ತಂದೆತಾಯಿಗಳು ತಮ್ಮ ಮಕ್ಕಳ ಸನ್ಮಾರ್ಗಪ್ರವರ್ತನೆಗೆ ಬೋಧಕರಿಗೆ ಸಹಾಯವನ್ನು ಕಲ್ಪಿಸಿಕೊಡುತ್ತಾ ಬಂದರೆ, ಕೊನೆಗೆ ಅವರು ಬಗ್ಗಿದ ಬಿದಿರು ರಾಜರ ತಲೆಯ ಮೇಲೆ ಕುಳಿತುಕೊಂಡು ಮರ್ಯಾದೆಯನ್ನು ಸ್ವೀಕರಿಸುವಂತೆ ಪೂಜಾರ್ಹರಾಗುವರು.

ಅನಿತ್ಯವಾದ ಈ ಶರೀರಕ್ಕೆ ಜನ್ಮಾಂತರಪೂ ಸುಖದುಃಖಗಳ ಸಂಘಟನೆಯುಂಟೆಂಬುದೂ ಯಾರಿಗೂ ತಿಳಿಯದ ಅಂಶವಲ್ಲ. ಅದುದರಿಂದ ಬಾಲಕರ ತಂದೆತಾಯಿಗಳು ತಮ್ಮ ಮಕ್ಕಳ ಪುರೋವೃದ್ಧಿಯನ್ನು ಕೋರಿ, ಸತ್ಶಿಕ್ಷಕರಿಗೆ ಈ ಭಾಗದಲ್ಲಿ ಸಹಾಯಕರಾಗಿದ್ದುಕೊಂಡಿರಬೇಕು.

(2) ತಂದೆತಾಯಿಗಳು ತಮ್ಮ ಮಕ್ಕಳುಗಳನ್ನು ಬಾಲ್ಯದಲ್ಲಿ ತಿದ್ದುವುದು ನೀತಿವಿದ್ಯೆಯ ಮೂಲಸೂತ್ರವು. ತಂದೆತಾಯಿಗಳಲ್ಲಿ ದುರ್ಗುಣಗಳಿದ್ದರೆ ಮಕ್ಕಳೂ ಅದನ್ನೇ ಅನುಸರಿಸುವರು. ತಂದೆಗಿಂತಲೂ ತಾಯಿಯು ಮಕ್ಕಳಿಗೆ ಸಮೀಪವಾದ ಸನ್ಮಾರ್ಗದರ್ಶಕಳು; ದಿನಕ್ಕೆ ಅರ್ಧಕಾಲಕ್ಕಿಂತಲೂ ಹೆಚ್ಚಾಗಿಯೇ ತಾಯಿಯು ಒಳಿಯಲ್ಲಾಡಿಕೊಂಡಿರುವರು. ತಿಳಿವಳಿಕೆಯುಳ್ಳ ತಾಯಿಯು ಅವರ ಆಟಗಳಿಗೆ ಎಂದಿಗೂ ವಿಘ್ನಮಾಡದೆ ಅದೇ ಮಾದರಿಯಿಂದ ನೀತಿಯನ್ನು ಕಲಿಸುವಳು. ಮಕ್ಕಳಿಗೆ ವಸ್ತು ಪರೀಕ್ಷಣ ಶಕ್ತಿ ಹೆಚ್ಚಾಗಿರುವುದರಿಂದ ಅಪ್ಪಗಳ ಕೈಲಿದ್ದ ವಸ್ತುಗಳನ್ನು ಸೆಳೆದುಕೊಂಡು, ಅವುಗಳನ್ನು ದಬದಬನೆ ಹೊಡೆಯಬಾರದು. ಕೆಲವು ಮಕ್ಕಳು ಈ ಕಾರಣಗಳಿಂದ ಬಾಲ್ಯದಲ್ಲೇ ಮೊಂಡರಾಗಿಯೂ, ಚಟುವಟಿಕೆಯಿಲ್ಲದವರಾಗಿಯೂ ಆಗುವರು. ಬಾಲ್ಯದಿಂದಲೂ ಹೆಚ್ಚಾದ ಬೆದರಿಕೆಯನ್ನು ತೋರಿಸುತ್ತ ಬಂದರೆ, ತಾಯಿತಂದೆಗಳನ್ನು ಕ್ರೂರವ್ಯಾಘ್ರಗಳಂತೆ ನೋಡುವರು. ಅವರೆದುರಿಗೆ ದುರ್ಭಾಷೆಗಳನ್ನಾಡಬಾರದು. ನಮ್ಮ ಸೀಮೆಯು ಶೂದ್ರಾದಿಗಳಲ್ಲಿ ಈ ವಿಷಯಕ್ಕೆ ಸಾವಿರಾರು ದೃಷ್ಟಾಂತಗಳೊದಗುವವು. ಮಕ್ಕಳನ್ನು ಮುದ್ದುಮಾಡಿ ದುರ್ಭಾಷೆ

ಗಳನ್ನು ಕಲಿಸಿ, ಅವರಿಂದ ಆ ನುಡಿಗಳನ್ನು ಆಡಿಸಿ ಹಿಗ್ಗಬಾರದು. ಸಮಯದಲ್ಲಿ ಅದೇ ಮಾತುಗಳಿಂದಲೇ ತಮಗೆ ಮಾನ ಹೋಗುವುದು. ತಾಯಿಯಾದವಳಿಗೆ ಈ ಕೆಳಗಿನ ಗುಣಗಳಿರಬೇಕೆಂದು ಕೆಲವರು ಅಭಿಪ್ರಾಯಪಡುತ್ತಾರೆ.

1. ಮಾತುಮಾತಿಗೂ ಬೆದರಿಸಿ ಮಕ್ಕಳಿಗೆ ಗಾಬರಿಯನ್ನುಂಟುಮಾಡಬಾರದು.
2. ಚೇಷ್ಟೆ ಮಾಡುವುದನ್ನು ಕಂಡರೆ ಸಿಟ್ಟುಗೊಳ್ಳದೆ ಶಾಂತಸ್ವಭಾವದಿಂದ ಆ ಚೇಷ್ಟೆಯನ್ನು ಉಪಾಯದಿಂದ ತಪ್ಪಿಸಿ, ಮುಂದೆ ಚೇಷ್ಟೆಗೆ ಅವಕಾಶ ಕೊಡದೆ ಎಚ್ಚರಿಕೆಯಾಗಿರಬೇಕು.
3. ಅಲ್ಪಸ್ವಲ್ಪ ತಪ್ಪಿತಕ್ಕೂ ಮನೆಯವರಮೇಲಿನ ಇತರ ಸಿಟ್ಟಿಗೂ ಮಕ್ಕಳನ್ನು ಕ್ರೂರವಾಗಿ ದಂಡಿಸಬಾರದು.
4. ಮಧುರ ವಚನಗಳನ್ನಾಡುತ್ತಲೂ, ಅವರ ಆರೋಗ್ಯಕ್ರಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಲೂ ಇರಬೇಕು.
5. ತಾಯಿಯು ಸಿಡುಕು ಸ್ವಭಾವದಿಂದಿರಬಾರದು. ಮಕ್ಕಳಿದುರಿಗೆ ಇತರರನ್ನು ಕ್ರೂರವಾಗಾಡಬಾರದು.
6. ವಿಧೇಯತೆಯನ್ನು ಅಭ್ಯಾಸ ಮಾಡಿಸಬೇಕು.

"ಮಕ್ಕಳು ಮನಸ್ಸಿಗೆ ಬಂದುದನ್ನು ಮಾಡತಕ್ಕುದಲ್ಲ, ಹೇಳಿದುದನ್ನು ಮಾಡತಕ್ಕುದು" "ಅವರು ಮಕ್ಕಳಲ್ಲ. ಅಳಲ್ಪಡತಕ್ಕವರು" ಎಂಬ ಸೂತ್ರವು ಎಲ್ಲಾ ಬಾಲಕರ ತಂದೆತಾಯಿಗಳ ಹೃದಯದಲ್ಲೂ ನಾಟಬೇಕು. "ತಂದೆತಾಯಿಗಳಿಗೆ ಮಾನಕೊಟ್ಟು, ಶ್ರೇಯೋವಂತನಾಗು" ಎಂಬ ಹಿರಿಯರ ನೀತಿವಚನವುಂಟು. ಇದು ಬಾಲಕರಿಗೆ ಬಾಲ್ಯದಲ್ಲೇ ಅಭ್ಯಾಸವಾಗಬೇಕು. ತಮ್ಮ ಹೇಳಿಕೆಯಂತೆ ನಡೆಯಿರೆಂದು ಕೆಲವುಮಂದಿ ಅನ್ನುವುದನ್ನು ಬಹುಮಂದಿ ಕೇಳಿರುವರು. ಈ ಲೋಪಕ್ಕೆ ತಾವೇ ಕಾರಣರೆಂಬುದು ಅವರ ಕನಸುಮನಸಿನಲ್ಲಿಯೂ ಬಾರದು. "ಮೂರುವರ್ಷದ ಬುದ್ಧಿ ನೂರುವರ್ಷಗಳವರಗೆ" ಎಂಬ ಗಾದೆಯನ್ನು ಅವರು ಯಾಕೆ ಯೋಚಿಸರೋ ತಿಳಿಯದು.

ತಾಯಿತಂದೆಗಳಾಗಲಿ, ಬೋಧಕರಾಗಲಿ, ಯಾವ ಸಂದರ್ಭದಲ್ಲೂ ಮಿತಿಮೀರಿ ಅಪ್ಪಣೆ ಮಾಡಬಾರದು. ಇದರಿಂದ ಬಾಲಕರಿಗೆ ಇಬ್ಬರ ವಿಷಯದಲ್ಲೂ ವಿಶ್ವಾಸ ತಗ್ಗುವುದಲ್ಲದೆ, ಅವಿಧೇಯತೆಯನ್ನು ಪ್ರಕಟಪಡಿಸುವರು. ಮತ್ತು ಮಕ್ಕಳು ತಪ್ಪು

(1) "ಗುರುವಿನಂತೆ ಶಿಷ್ಯ" ಎಂಬಂತೆ ಗುರುವು ಅನುಸರಿಸುವ ಮಾರ್ಗವನ್ನೇ ಶಿಷ್ಯನೂ ಅನುಸರಿಸುವನು. ಬಾಲಕರಿಗೆ ನಾಲ್ಕೈದು ಸಂವತ್ಸರಗಳಾದ ಮೇಲೆ ತಂದೆತಾಯಿಗಳ ನೀತಿಬೋಧೆಗಿಂತಲೂ, ಉಪಾಧ್ಯಾಯರೇ ಸನ್ಮಾರ್ಗನಿದರ್ಶಕರಾಗಿರುವರು. ಈ ಕಾಲದಲ್ಲಿ ಮನೆಯವರ ವಿವೇಕವಾದಕ್ಕಿಂತಲೂ ಬೋಧಕರ ವಿವೇಕವಾದವು ಬಹುಬೆಲೆ ಬಾಳುವ್ರದು. "ಅನೇಕ ಪೇಳಿ ಜನರು ಬಾಲಕರ ತುಂಟಾಟಗಳಿಗೆ ಶಿಕ್ಷಕರನ್ನು ದೂಷಿಸುವರು. ಶಿಕ್ಷಕರ ತಿದ್ದುವಿಕೆಯು ಪಾಠಶಾಲೆಯಲ್ಲಿ ಸರಿಯಾಗಿದ್ದರೆ ಎಂದಿಗೂ ಇವರಿಗೆ ದೂಷಣೆ ಬಾರದು." ಬಾಲಕರ ತಂದೆತಾಯಿಗಳು ತಮ್ಮ ಮಕ್ಕಳ ಸನ್ಮಾರ್ಗಪ್ರವರ್ತನೆಗೆ ಬೋಧಕರಿಗೆ ಸಹಾಯವನ್ನು ಕಲ್ಪಿಸಿಕೊಡುತ್ತಾ ಬಂದರೆ, ಕೊನೆಗೆ ಅವರು ಬಗ್ಗಿದ ಬಿದಿರು ರಾಜರ ತಲೆಯ ಮೇಲೆ ಕುಳಿತುಕೊಂಡು ಮರ್ಯಾದೆಯನ್ನು ಸ್ವೀಕರಿಸುವಂತೆ ಪೂಜಾರ್ಹರಾಗುವರು. ಅನಿತ್ಯವಾದ ಈ ಶರೀರಕ್ಕೆ ಜನ್ಮಾಂತರವೂ ಸುಖದುಃಖಗಳ ಸಂಘಟನೆಯುಂಟೆಂಬುದೂ ಯಾರಿಗೂ ತಿಳಿಯದ ಅಂಶವಲ್ಲ. ಅದುದರಿಂದ ಬಾಲಕರ ತಂದೆತಾಯಿಗಳು ತಮ್ಮ ಮಕ್ಕಳ ಪುರೋವೃದ್ಧಿಯನ್ನು ಕೋರಿ, ಸತ್ಶಿಕ್ಷಕರಿಗೆ ಈ ಭಾಗದಲ್ಲಿ ಸಹಾಯಕರಾಗಿದ್ದುಕೊಂಡಿರಬೇಕು.

(2) ತಂದೆತಾಯಿಗಳು ತಮ್ಮ ಮಕ್ಕಳುಗಳನ್ನು ಬಾಲ್ಯದಲ್ಲಿ ತಿದ್ದುವ್ರದು ನೀತಿವಿದ್ಯೆಯ ಮೂಲಸೂತ್ರವು. ತಂದೆತಾಯಿಗಳಲ್ಲಿ ದುರ್ಗುಣಗಳಿದ್ದರೆ ಮಕ್ಕಳೂ ಅದನ್ನೇ ಅನುಸರಿಸುವರು. ತಂದೆಗಿಂತಲೂ ತಾಯಿಯು ಮಕ್ಕಳಿಗೆ ಸಮೀಪವಾದ ಸನ್ಮಾರ್ಗದರ್ಶಕಳು; ದಿನಕ್ಕೆ ಅರ್ಧಕಾಲಕ್ಕಿಂತಲೂ ಹೆಚ್ಚಾಗಿಯೇ ತಾಯಿಯು ಬಳಿಯಲ್ಲಾಡಿಕೊಂಡಿರುವರು. ತಿಳಿವಳಿಕೆಯುಳ್ಳ ತಾಯಿಯು ಅವರ ಆಟಗಳಿಗೆ ಎಂದಿಗೂ ವಿಘ್ನಮಾಡದೆ ಅದೇ ಮಾದರಿಯಿಂದ ನೀತಿಯನ್ನು ಕಲಿಸುವಳು. ಮಕ್ಕಳಿಗೆ ವಸ್ತು ಪರೀಕ್ಷಣ ಶಕ್ತಿ ಹೆಚ್ಚಾಗಿರುವುದರಿಂದ ಅವುಗಳ ಕೈಲಿದ್ದ ವಸ್ತುಗಳನ್ನು ಸೆಳೆದುಕೊಂಡು, ಅವುಗಳನ್ನು ದಬದಬನೆ ಹೊಡೆಯಬಾರದು. ಕೆಲವು ಮಕ್ಕಳು ಈ ಕಾರಣಗಳಿಂದ ಬಾಲ್ಯದಲ್ಲೇ ಹೊಂಡರಾಗಿಯೂ, ಚಟವಟಿಕೆಯಿಲ್ಲದವರಾಗಿಯೂ ಆಗುವರು. ಬಾಲ್ಯದಿಂದಲೂ ಹೆಚ್ಚಾದ ಬೆದರಿಕೆಯನ್ನು ತೋರಿಸುತ್ತ ಬಂದರೆ, ತಾಯಿತಂದೆಗಳನ್ನು ಕ್ರೂರವ್ಯಾಘ್ರಗಳಂತೆ ನೋಡುವರು. ಆವರೆದುರಿಗೆ ದುರ್ಭಾಷೆಗಳನ್ನಾಡಬಾರದು. ನಮ್ಮ ಸೀಮೆಯು ಶೂದ್ರಾದಿಗಳಲ್ಲಿ ಈ ವಿಷಯಕ್ಕೆ ಸಾವಿರಾರು ದೃಷ್ಟಾಂತಗಳೊದಗುವ್ರವು. ಮಕ್ಕಳನ್ನು ಮುದ್ದುಮಾಡಿ ದುರ್ಭಾಷೆ

ಗಳನ್ನು ಕಲಿಸಿ, ಅವರಿಂದ ಆ ನುಡಿಗಳನ್ನು ಆಡಿಸಿ ಹಿಗ್ಗಬಾರದು. ಸಮಯದಲ್ಲಿ ಅದೇ ಮಾತುಗಳಿಂದಲೇ ತಮಗೆ ಮಾನ ಹೋಗುವುದು. ತಾಯಿಯಾದವಳಿಗೆ ಈ ಕೆಳಗಿನ ಗುಣಗಳಿರಬೇಕೆಂದು ಕೆಲವರು ಅಭಿಪ್ರಾಯಪಡುತ್ತಾರೆ.

1. ಮಾತುಮಾತಿಗೂ ಬೆದರಿಸಿ ಮಕ್ಕಳಿಗೆ ಗಾಬರಿಯನ್ನುಂಟುಮಾಡಬಾರದು.
2. ಚೇಷ್ಟೆ ಮಾಡುವುದನ್ನು ಕಂಡರೆ ಸಿಟ್ಟುಗೊಳ್ಳದೆ ಶಾಂತಸ್ವಭಾವದಿಂದ ಆ ಚೇಷ್ಟೆಯನ್ನು ಉಪಾಯದಿಂದ ತಪ್ಪಿಸಿ, ಮುಂದೆ ಚೇಷ್ಟೆಗೆ ಅವಕಾಶ ಕೊಡದೆ ಎಚ್ಚರಿಕೆಯಾಗಿರಬೇಕು.
3. ಅಲ್ಪಸ್ವಲ್ಪ ತಪ್ಪಿತಕ್ಕೂ ಮನೆಯವರಮೇಲಿನ ಇತರ ಸಿಟ್ಟಿಗೂ ಮಕ್ಕಳನ್ನು ಕ್ರೂರವಾಗಿ ದಂಡಿಸಬಾರದು.
4. ಮಧುರ ವಚನಗಳನ್ನಾಡುತ್ತಲೂ, ಅವರ ಅರೋಗ್ಯ ಕ್ರಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಲೂ ಇರಬೇಕು.
5. ತಾಯಿಯು ಸಿಡುಕು ಸ್ವಭಾವದಿಂದಿರಬಾರದು. ಮಕ್ಕಳೆದುರಿಗೆ ಇತರರನ್ನು ಕ್ರೂರವಾಗಾಡಬಾರದು.
6. ವಿಧೇಯತೆಯನ್ನು ಭ್ಯಾಸ ಮಾಡಿಸಬೇಕು.

"ಮಕ್ಕಳು ಮನಸ್ಸಿಗೆ ಬಂದುದನ್ನು ಮಾಡತಕ್ಕುದಲ್ಲ, ಹೇಳಿದುದನ್ನು ಮಾಡತಕ್ಕುದು" "ಅವರು ಮಕ್ಕಳಲ್ಲ. ಅಳಲ್ಪಡತಕ್ಕವರು" ಎಂಬ ಸೂತ್ರವು ಎಲ್ಲಾ ಬಾಲಕರ ತಂದೆತಾಯಿಗಳ ಹೃದಯದಲ್ಲೂ ನಾಟಬೇಕು. "ತಂದೆತಾಯಿಗಳಿಗೆ ಮಾನಕೊಟ್ಟು, ಶ್ರೇಯೋವಂತನಾಗು" ಎಂಬ ಹಿರಿಯರ ನೀತಿವಚನವುಂಟು. ಇದು ಬಾಲಕರಿಗೆ ಬಾಲ್ಯದಲ್ಲೇ ಅಭ್ಯಾಸವಾಗಬೇಕು. ತಮ್ಮ ಹೇಳಿಕೆಯಂತೆ ನಡೆಯಿರೆಂದು ಕೆಲವುಮಂದಿ ಅನ್ನುವುದನ್ನು ಬಹುಮಂದಿ ಕೇಳಿರುವರು. ಈ ಲೋಪಕ್ಕೆ ತಾವೇ ಕಾರಣರೆಂಬುದು ಅವರ ಕನಸುಮನಸಿನಲ್ಲಿಯೂ ಬಾರದು. "ಮೂರುವರ್ಷದ ಬುದ್ಧಿ ಸೂರುವರ್ಷಗಳವರಗೆ" ಎಂಬ ಗಾದೆಯನ್ನು ಅವರು ಯಾಕೆ ಯೋಚಿಸರೋ ತಿಳಿಯದು.

ತಾಯಿತಂದೆಗಳಾಗಲಿ, ಬೋಧಕರಾಗಲಿ, ಯಾವ ಸಂದರ್ಭದಲ್ಲೂ ಮಿತಿಮೀರಿ ಆಜ್ಞೆ ಮಾಡಬಾರದು. ಇದರಿಂದ ಬಾಲಕರಿಗೆ ಇಬ್ಬರ ವಿಷಯದಲ್ಲೂ ವಿಶ್ವಾಸ ತಗ್ಗುವುದಲ್ಲದೆ, ಅವಿಧೇಯತೆಯನ್ನು ಪ್ರಕಟಪಡಿಸುವರು. ಮತ್ತು ಮಕ್ಕಳು ತಪ್ಪು

ಮಾಡುವುದನ್ನು ಕಂಡರೆ ತಿಳಿವಳಿಕೆ ಸಾಲದವರೆಂದು ಅಸಡ್ಡೆ ಮಾಡಬಾರದು. ಹಾಗೆ ತಾತ್ಸಾರ ಮಾಡಿದರೆ ಆ ತಪ್ಪುಗಳು ಅವರಲ್ಲಿ ರೂಢಮೂಲವಾಗುವುವು. ಕೆಲವುವೇಳೆ ತಾವೇ ಅಕ್ಷೇಪಣೆಗೆ ಗುರಿಪಡಬೇಕಾಗುವುದು. ಮಕ್ಕಳು ತಪ್ಪುದಾರಿಯಲ್ಲಿ ಬಿದ್ದು ತಾಯಿತಂದೆಗಳಿಗೆ ಪ್ರೀತಿ ತೋರಿಸದೆ ಅವರನ್ನು ಬಯ್ಯುವುದಕ್ಕೂ, ದಂಡಿಸುವುದಕ್ಕೂ ಒದ್ದಕಂಕಣರಾಗಿ ವಂಶಕ್ಕೇ ಕುಠಾರಪ್ರಾಯರಾಗಿ ನಿಲ್ಲುವರು. ಆದುದರಿಂದ ಅವರಲ್ಲಿ ವಿಧೇಯತೆಯನ್ನು ನೆಲೆಗೊಳಿಸಬೇಕಾದರೆ ತಾಯಿತಂದೆಗಳು ಆಡಿದಂತೆ ನಡೆಸಿಯೇತೀರಬೇಕು. ಇಲ್ಲದ ಭಾಗದಲ್ಲಿ ಅವರಿಗೆ ಕೆಟ್ಟ ದಾರಿಯನ್ನು ತೋರಿಸಿಕೊಟ್ಟಂತಾಗುವುದು. ಮಕ್ಕಳ ದುಷ್ಕಾರ್ಯಗಳಿಗೆ ಶಿಕ್ಷಕರಾಗಲಿ, ಯಾರೇ ಆಗಲಿ ಸ್ತುತಿಸಬಾರದು, ನಗಬಾರದು ಪಾಠಶಾಲೆಯಲ್ಲಿ ಅವಿಧೇಯತೆಗೆ ಅವಕಾಶ ಕೊಟ್ಟರೆ—

i ಕೆಲವುಮಂದಿಸೇರಿ ವಿಚಾರ ನಡೆಯುವರು.

ii ಪಾಠಗಳನ್ನು ಕಲಿಯದೆ ಕಾರಣಾಂತರಗಳನ್ನು ಕಲ್ಪಿಸಿ ಹೇಳುವರು.

iii ವಿಧೇಯತೆಯುಳ್ಳ ಕೆಲವರು ಇತರರ ಸಹವಾಸದಿಂದ ಅವಿಧೇಯರಾಗುವರು.

iv ಶಿಕ್ಷಕರಿಗೂ, ತಂದೆತಾಯಿಗಳಿಗೂ ಅಪಕೀರ್ತಿತಪ್ಪದು.

v ರಾಜಾಗ್ರಹಕ್ಕೂ ಗುರಿಪಡಬೇಕಾಗುವುದು.

ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಕ್ರೂರಸ್ವಭಾವವನ್ನು ತೋರ್ಪಡಿಸದೆ ವಿಶ್ವಾಸಿಗಳಾಗಿಯೇ ಇರಬೇಕು. ಅವರ ತಪ್ಪಿತಕ್ಕೆ ಅಪರೂಪವಾಗಿ ಸಿಟ್ಟುಮಾಡಬೇಕು. ಇಲ್ಲದ ಭಾಗದಲ್ಲಿ ಅವರ ಕೋಪಕ್ಕೆ ಬೆಲೆ ಕಮ್ಮಿ. ವಿಶ್ವಾಸದ ಜೊತೆಗೆ ಭಯವೂ ಇರಬೇಕು. ಪಾಠವನ್ನು ಶ್ರದ್ಧಾಭಕ್ತಿಗಳಿಂದ ಕಲಿಯುತಕ್ಕ ವಿಧೇಯನಾದ, ಕಪಟವಿಲ್ಲದ ವಿದ್ಯಾರ್ಥಿಯಲ್ಲಿ ಸಂಪೂರ್ಣಾಭಿಮಾನವನ್ನು ನೆಲೆಗೊಳಿಸಬೇಕು. ಬಾಲಕರಿಗೆ ತಪ್ಪಿತಕ್ಕೆ ತಕ್ಕಶಿಕ್ಷೆಯು ಆಗಿಯೇ ತೀರಬೇಕು. ಹಾಗೆ ಮಾಡದೆ ಉಪೇಕ್ಷೆ ಮಾಡಿದರೆ ಶಿಕ್ಷಕರೇ ಅಪ್ರಯೋಜಕರೆಂಬ ಬಿರುದನ್ನು ಹೊಂದುವರು. ಬಾಲಕರ ವಿಷಯದಲ್ಲಿ ಶಿಕ್ಷಕರಿಗೆ ಎಂದಿಗೂ ದ್ವೇಷಬುದ್ಧಿ ಇರಬಾರದು. ಆದುದರಿಂದ ಶಿಕ್ಷಕರು—

(1) ಬಾಲಕರ ತಪ್ಪುಗಳಿಗೆ ಅವಕಾಶ ಕೊಡಬಾರದು.

(2) ತಪ್ಪು ಮಾಡಿದ ಬಾಲಕರು ಯಾರೇ ಆಗಲಿ, ಪಕ್ಷಪಾತವಿಡದೆ ದಂಡಿಸ ಬೇಕು.

(3) ಪಾಠಕಾಲದಲ್ಲಿ ಹುಡುಗರಿಗೆ ಗದ್ದಲಕ್ಕೆ ಅವಕಾಶ ಕೊಡದೆ, ಗೊತ್ತಾದ ಕೆಲಸವನ್ನು ನೇಮಿಸಬೇಕು.

(4) ಪರೀಕ್ಷಾ ಕಾಲದಲ್ಲಿ ಕಾಪಿಗೆ ಅವಕಾಶ ಕೊಡಬಾರದು

(5) ಬಾಲಕರಿಗೆ ಪಾಠ ಹೇಳುವಾಗ ದೃಷ್ಟಾಂತಗಳಿಲ್ಲದೆ ಹೇಳಬಾರದು.

(6) ಪಾಠಕ್ಕೆ ಅಡ್ಡಿಬಾರದಂತೆ ಜಲಮಲ ವಿಸರ್ಜನೆಗಳಿಗೆ ಬಂದು ಕ್ಲುಪ್ತಕಾಲ ವಿಟ್ಟುಕೊಳ್ಳಬೇಕು.

ಮೇಲಿನ ಕಾರಣಗಳಿಗಾಸ್ಪದವನ್ನು ಕೊಡೋಣದರಿಂದ ಪಾಠಶಾಲೆಯಲ್ಲಿ ಸಾಮಾನ್ಯವಾಗಿ ಎಲ್ಲಾ ತರಗತಿಗಳೂ ಕೆಡಬಹುದು. ಜನಗಳಿಗೆ ಪಾಠಶಾಲೆಯ ವಿಷಯದಲ್ಲಿ ಅಶ್ರದ್ಧೆಯುಂಟಾಗಬಹುದು. ಈ ಕಾರಣಗಳನ್ನು ಸುಲಭ ಕ್ರಮದಲ್ಲಿ ತಿದ್ದಿಕೊಳ್ಳುವುದು ಮುಖ್ಯೋಪಾಧ್ಯಾಯರ ಮತ್ತು ಸಹಾಯೋಪಾಧ್ಯಾಯರ ಐಕಮತ್ಯದ ಕರ್ತವ್ಯವಾಗಿರುವುದು. ಇದಕ್ಕಾಗಿ—

(a) ಬಾಲಕರ ನಡತೆ, ವಿದ್ಯೆ ಈ ವಿಷಯದಲ್ಲಿ ಅವರ ತಂದೆತಾಯಿಗಳಿಗೆ ವಾರ ಕ್ಕೊಂದುಬಾರಿಯಾದರೂ ಕಂಡು ಹೇಳಬೇಕು.

(b) ಮೇಲಿನ ಕಾರಣಕ್ಕಾಗಿ ತುಚ್ಛವಾದ ಮಾತುಗಳಿಂದ ಜನಗಳನ್ನೂ ಬಾಲ ಕರನ್ನು ಅಲೆಗಳಿಯಬಾರದು. ಇದರಿಂದ ಶಿಕ್ಷಕರು ಅಪಕೀರ್ತಿಗೊಳ ಗಾಗುವರು.

(c) ಸ್ಕೂಲಿಗೆ ಕ್ರಮವಾಗಿ ಬಾರದೆ ತಪ್ಪಿಸಿಕೊಳ್ಳುವವರಿಗೆ ಮನೆಯಲ್ಲೂ ಸ್ಕೂಲಿನಲ್ಲೂ ತೋರಿಸುವುದಕ್ಕಾಗಿ ಒಂದೊಂದು ನೋಟ್ ಪುಸ್ತಕವ ನ್ನಿಟ್ಟುಕೊಳ್ಳುವಂತೆ ಎಚ್ಚರಿಕೆ ಕೊಡಬೇಕು.

(d) ಈ ವಿಚಾರದಲ್ಲಿ ಶಿಕ್ಷಕರಿಗೆ ಬೇಸರ ಬರಬಾರದು.

ಇದರಿಂದ ಬಾಲಕರ ತಂದೆತಾಯಿಗಳಿಗೆ ಶೋಧಕರ ವಿಷಯದಲ್ಲಿ ಸದಭಿಪ್ರಾಯವೂ ಬಾಲಕರಿಗೆ ನಡತೆಯೂ ಭಯವೂ ಉಂಟಾಗುವುದು. ಉಪಾಧ್ಯಾಯರಿಗೆ ಬಾಲಕರ ನಡೆನುಡಿಗಳನ್ನು ತಿದ್ದುವ ಕರ್ತವ್ಯ ಮಾತ್ರವಲ್ಲದೆ, ಅವರಲ್ಲಿರುವ ಜ್ಞಾನ ಪಕಶಕ್ತಿಯನ್ನೂ ವೃದ್ಧಿಪಡಿಸುವುದು ಮುಖ್ಯಕರ್ತವ್ಯವಾಗಿದೆ. ಜ್ಞಾನಪಕಶಕ್ತಿಯು ವಯೋನುಗುಣವಾಗಿ ವೃದ್ಧಿಯಾಗುವುದು. ಇದು ಸಾನಾತೆರನಾಗಿರುವುದು.

ಮನೋವ್ಯಾಪಾರವು ವಿಶೇಷವಾಗಿ ನಿಲ್ಲದ ವಯಸ್ಸಿನಲ್ಲಿ ಬೇರೆಬೇರೆ ವಿಷಯ ಸಂಬಂಧವಾದ ಅನೇಕ ಚಿಕ್ಕಚಿಕ್ಕ ಸಂಗತಿಗಳನ್ನು ಬಾಲಕರೇ ಕಲಿಯುವರು. ಈ ಗುಣವಿರುವುದರಿಂದ ಶಾಸ್ತ್ರಸಂಬಂಧವಾದ ವಿಷಯಗಳನ್ನು ಬೋಧಿಸಲು ಏಕೆ ನಾಧ್ಯವಲ್ಲವೆಂಬ, ಮತ್ತು ಮಕ್ಕಳ ಜ್ಞಾಪಕಶಕ್ತಿಯನ್ನು, ವಿಷಯಗ್ರಹಣ ಕುತೂಹಲವನ್ನು ವೃದ್ಧಿಗೊಳಿಸಲಾಗುವುದಿಲ್ಲವೆಂಬ ಈ ಶಂಕೆಯು ಅನೇಕರಿಗೆ ತೋರ್ಪಡಬಹುದು. ಜ್ಞಾಪಕಶಕ್ತಿಯು ಕೆಲವರಿಗೆ ವಿಷಯಜ್ಞಾನದಿಂದ ಬರುವುದು. ಕೆಲವರಿಗೆ ಸಂಖ್ಯೆಯು ನೆನಪಿನಿಂದ ಬರುತ್ತೆ. ಕೆಲವರಿಗೆ ವಿಷಯ ಸಂಬಂಧ ಜ್ಞಾನದಿಂದ ಬರುವುದು. ಇದು ಶ್ರದ್ಧಾ, ಪುನರಾವರ್ತನೆ, ವಿಷಯ ಇವುಗಳಿಂದ ಬರುವುದು. ಇಂದ್ರಿಯಗಳ ಉತ್ತೇಜನದಿಂದ ಗ್ರಹಣವು ಉದಯಿಸುವುದು. ಉತ್ತೇಜನವು ಅಡಗಿದರೆ ಗ್ರಹಣವೂ ನಾಶವಾಗುವುದು. ಆದುದರಿಂದ ಜ್ಞಾಪಕಶಕ್ತಿಗೆ ಗ್ರಹಣ ಪ್ರತಿಮಾಕರಣ (ಪ್ರತಿಮಾಕರಣ= ಅನುಭೂತವಾದ ವಸ್ತುಗಳ ಪ್ರತಿಮೆಗಳನ್ನು ಮನಸಿನಲ್ಲುಂಟುಮಾಡಿಕೊಳ್ಳುವುದು) ಗಳು ಸಹಾಯಕಗಳು. ಗ್ರಹಣವಾಗಿದ್ದ ವಸ್ತುಗಳು ಪುನಃ ಸ್ಮರಣೆಗೆ ಬಾರದೆ ಹೋದರೆ ವಿಸ್ಮೃತಿ, ಅಥವಾ ಮರವು ಎಂದು ಹೆಸರು. ಜ್ಞಾಪಕಕ್ಕೆ ಅವಧಾನವೇ ಮುಖ್ಯವಾದುದು. ಜ್ಞಾನಕ್ಕೆ ಅಭಿವೃದ್ಧಿಯನ್ನು ಖನಿಜ ಲೋಹಗಳಲ್ಲು, ಸಸ್ಯಾದಿಗಳಲ್ಲು, ವೃಕ್ಷಗಳಲ್ಲು, ಫಲಪುಷ್ಪಗಳಲ್ಲು ಅದ್ಭುತ ಸೃಷ್ಟಿಗಳನ್ನು ನೋಡುವುದರಲ್ಲೂ ಸಂಪಾದಿಸಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಈ ವಿಷಯದಲ್ಲಿ ತತ್ಸಂಬಂಧವಾದ ಶಾಸ್ತ್ರಗಳನ್ನು ಓದಿ ತಿಳಿದುಕೊಂಡ ಹೊರತು ಯತ್ನವಿಲ್ಲವಾಗಿದೆ. ಜ್ಞಾನವು ಕ್ರಿಮಿಕೀಟ, ಮೃಗಪಕ್ಷಿಗಳಿಂದಲೂ ಕೂಡ ಉಂಟಾಗುವುದು.

ಶಿಕ್ಷಕರಿಗೆ ಬಾಲಕರ ವಿಷಯದಲ್ಲಿ ಪುತ್ರವಾತ್ಸಲ್ಯದಿಂದಿರಬೇಕು. ಕೆಲವು ಕಾಲೂರುಗಳಲ್ಲಿ ಶಿಕ್ಷಕರನ್ನು ತುಚ್ಛವಾಗೆಣಿಸುವರು. ಇದು ನಡತೆಯಿರಲ್ಲದವರ ಮಾರ್ಗ. ಕೆಲವುವೇಳೆ ತುಂಟತನ ಮಾಡಿದ ಮಕ್ಕಳಿಗೆ "ಮೇಷ್ಟರನ್ನು ಕೂಗುತ್ತೇನೆಂದು" ಬೆದರಿಸುವರು. ಜ್ಞಾನಿಗಳು ಶಿಕ್ಷಕರನ್ನು ಮರ್ಯಾದೆಯಿಂದ ಕಾಣದೆ ಎಂದಿಗೂ ಇರರು. ಕೆಲವು ಅವಿಧೇಯರಾದ ಬಾಲಕರು ಸುಭಾಷಿತಗಳಿಗಂಜದೆ ಪರನಿಂದೆ, ಕಳವು, ಸುಳ್ಳು, ಜೂಜು ಈ ಮೊದಲಾದವುಗಳಲ್ಲಿ, ನಿಪುಣತೆಯನ್ನು ಹೊಂದುವರು. ಈ ಗುಣಗಳು ತಾಯಿತಂದೆಗಳ ತಾತ್ಸಾರದಿಂದಲೂ, ಸಹವಾಸದೋಷದಿಂದಲೂ, ಬಾಲಕರಲ್ಲಿ ನೆಲೆಗೊಳ್ಳುವುದು. ಅಂಕುರದಲ್ಲಿ ಈ ಗುಣಗಳನು

ಮುರಿಯದೆ ಹೋಗುವುದರಿಂದ ಕೊನೆಗೆ ಆ ಗುಣಗಳೇ ಅವರಲ್ಲಿ ಬೇರೂರುವುವು. ಅದನ್ನು ತಪ್ಪಿಸಲುಜ್ಜುಗಿಸುವವರಿಗೂ ಅಸಾಧ್ಯವಾಗುವುದು. ಕೊನೆಕೊನೆಗೆ ಬಾಲಕರೂ ಬಹುಕಷ್ಟಕ್ಕೊಳಗಾಗುವರು.

3. ಬಾಲಕರಿಗೆ ಸಹವಾಸವೊಂದು ತಿದ್ದುವಿಕೆಗೆ ಸಹಕಾರಿಯು. 'ಸಜ್ಜನರಿಂದ ಸನ್ಮಾರ್ಗವು, ದುರ್ಜನರಿಂದ ದುರ್ಮಾರ್ಗವು ಬರುತ್ತೆಂಬುದಕ್ಕೆ ಯಾವ ನಿದರ್ಶನವೂ ಬೇಕಿಲ್ಲ. ಮನುಷ್ಯನಿಗೆ ಕಾಲಕ್ಕಿಂತಲೂ ಗುಣವೇ ಪೂಜ್ಯವಾದುದು. ಬಾಲಕರ ವಿದ್ಯಾಭ್ಯಾಸವು ಮುಗಿದ ತರುವಾಯ ಸಹವಾಸದಿಂದ ಲೋಕವ್ಯವಹಾರ ವಿಷಯಗಳನ್ನು ತಿಳಿಯುವುದೇ ಮುಖ್ಯವಾದುದು. ಆದುದರಿಂದ—

(1) ಐಶ್ವರ್ಯ ಮದದಿಂದ ಯಾರನ್ನೂ ಜರಿಯಬಾರದು. ದೈವಾನುಗ್ರಹದಿಂದ ಲಭಿಸಿದ ದ್ರವ್ಯವನ್ನು ಸತ್ಪಾತ್ರದಲ್ಲಿ ಸಮಯೋಚಿತ ದಾನ ಮಾಡಬೇಕು. ಆತ್ಮಪ್ರಶಂಸೆ ಮಾಡತಕ್ಕವರನ್ನೂ, ಪರನಿಂದೆ ಮಾಡತಕ್ಕವರನ್ನೂ ದೂರ ಮಾಡಬೇಕು.

(2) ಆದಾಯಕ್ಕೆ ತಕ್ಕಂತೆ ಖರ್ಚಿಟ್ಟುಕೊಳ್ಳಬೇಕು. ಒಬ್ಬರನ್ನು ಮೆಚ್ಚಿಸಲು ದುಂದುಮಾಡಿದರೆ, ದೇವರೇ ನಮ್ಮ ಹೆಪ್ಪೈಯನ್ನು ಅಡಗಿಸುವನು. ಸಾಲಗಾರರ ಬಲೆಗೊಳಗಾಗಬಾರದು.

ಆದುದರಿಂದ ಮೇಲೆ ಹೇಳಿದ ಎಲ್ಲಾ ವಿಷಯಗಳಿಗೂ ಮನಸ್ಸು ಕೊಟ್ಟು ಬಾಲಕರನ್ನು ತಿದ್ದುತ್ತಾ ಬಂದರೆ, ಸನ್ಮಾರ್ಗಪ್ರವರ್ತಕರಾಗದೆ ಎಂದಿಗೂ ಇರರು. ಮಕ್ಕಳ ಅಭಿವೃದ್ಧಿಯನ್ನು ಕೋರುವವರು ಪರೋಪಕಾರಿಗಳೆಂದು ಎಲ್ಲರೂ ಹೊಗಳುವರು. ಆದುದರಿಂದ ನಡತೆಪರನಾಗುವನು ಸದ್ಗುಣ, ಮಿತವ್ಯಯ, ಸತ್ಯ, ಪರೋಪಕಾರ, ಸನ್ಮಾರ್ಗಪ್ರವರ್ತನೆ ಇತ್ಯಾದಿಗಳಿಗೆ ಅವಕಾಶ ಕೊಟ್ಟು, ಕೀರ್ತಿ ಪಡೆಯಬೇಕು.

ಎಸ್. ಸೂರ್ಯನಾರಾಯಣಪ್ಪ, ಹೆಡ್‌ಮಾಸ್ಟರ್.
ದೊಡ್ಡ ಬಾಣಾವಾರ.

ಅಗ್ನಿ ಪರ್ವತಗಳು.

ಈ ಪರ್ವತಾಗ್ರಗಳಿಂದ ಬಾಯನ್ನು ಮಾಡಿಕೊಂಡು ಜಲರೂಪವಾಗಿ ಹರಿಯುವ ಕರಗಿದ ಭಂಡೆ, ಲೋಹ ಮೊದಲಾದವುಗಳು ಎಷ್ಟು ದೂರ ಹರಿಯುವುದೊ

ಅದನ್ನು ಹೇಳುವುದಕ್ಕಾಗುವುದಿಲ್ಲ. ವಿಸೂವಿಯಸ್ ಬೆಟ್ಟಗಳಿಂದ ಈ ಪ್ರವಾಹವು ಹರಿದು ಕೆಲವುವೇಳೆ ಸಮುದ್ರಕ್ಕೆ ಸಂಗಮವಾಗಿರುವುದು. ಮತ್ತು ಕೆಲವುಕಡೆಗಳಲ್ಲಿ ಕೆಲವು ಗಜಗಳು ಮಾತ್ರ ಹರಿದಿರುವುವು. 1783 ರಿಂದ 85 ರ ವರಿಗೂ ಐಸ್ಲೆಂಡ್ ದ್ವೀಪದಲ್ಲಿ ಸ್ಕಪ್ತರ್ ಜೋಕಲ್ ಎಂಬ ಪರ್ವತಾಗ್ರದಿಂದ ಹರಿದ ಪ್ರವಾಹವು ಅಭೂತಪೂರ್ವವಾದುದು. ಕರಗಿದ ಮಣ್ಣು, ಲೋಹ ಮೊದಲಾದುವುಗಳು ದೊಡ್ಡ ನದಿಯರೂಪವಾಗಿ ಹರಿದು ಅನೇಕ ನದಿಗಳು, ಕಣಿವೆಗಳು, ಸರೋವರಗಳು ಮೊದಲಾದ ನಿಮ್ನಪ್ರದೇಶಗಳನ್ನು ತುಂಬಿ ಸಾವಿರಾರು ಚದರಮೈಲಿಗಳವರಿಗೂ ಭೂಮಿಯನ್ನಾಕ್ರಮಿಸಿಕೊಂಡಿತು. ಈ ಪ್ರವಾಹವು ಒಂದು ದಿಕ್ಕಿನಲ್ಲಿ 45 ಮೈಲಿಗಳು, ಮತ್ತೊಂದು ದಿಕ್ಕಿನಲ್ಲಿ 51 ಮೈಲಿಗಳು ವಿಸ್ತರಿಸಿಕೊಂಡಿತ್ತು. ಅನೇಕ ಸ್ಥಳಗಳಲ್ಲಿ ಈ ಪ್ರವಾಹವು ಹದಿನೈದು ಮೈಲಿ ಅಗಲ, 100 ಅಡಿ ಆಳವುಳ್ಳದಾಗಿತ್ತು. ಈ ಪರ್ವತಾಗ್ರದಿಂದ ಹರಿದ ದ್ರವರೂಪವಾದ ಪದಾರ್ಥವು ಶಿಲಾವಸ್ಥೆಯನ್ನು ಹೊಂದಿದಕೂಡಲೆ ಮೌಂಟ್‌ಬ್ಲಾಂಕ್ ಎಂಬ ಪರ್ವತಕ್ಕೆ ಕಡಮೆ ಇಲ್ಲದಷ್ಟು ಪ್ರಮಾಣ ಪುಳ್ಳದಾಗಿ ಇರುವುದಾಗಿ ಗೊತ್ತಾಯಿತು. ಈ ಪ್ರವಾಹದ ಮೇಲುಭಾಗವು ಔಷ್ಣ್ಯವನ್ನು ಕಳೆದುಕೊಂಡು ಮೇಲುಭಾಗದಲ್ಲಿ ನಡೆಯುವುದಕ್ಕೆ ಸಾಧ್ಯವಾದಮೇಲೂ ಕೆಳಭಾಗದ ಜ್ವಾಲೆಯು ಕೆಲವು ಬಿರಕುಗಳಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. 1858 ನೇ ಇಸವಿಯಲ್ಲಿ ವೆಸೂವಿಯಸ್ ಪರ್ವತದಿಂದ ಹರಿದ ಜ್ವಾಲೆಯು ರೂಪವಾದ ಪ್ರವಾಹದಿಂದ ಹೊಗೆಯೂ ಆವಿಯೂ 1873 ರ ವರಿವಿಗೂ ಹೊರಡುತ್ತಿತ್ತು. ಜ್ವಾಲೆಯು ಪ್ರವಹಿಸುವುದಕ್ಕೆ ಉಪಕ್ರಮವಾಗುತ್ತಲೆ ಬೂದಿ ಮೊದಲಾದುವುಗಳು ಹಾರುವುದು. ಈ ಪ್ರವಾಹವು ಹೊರಡುತ್ತಿರುವಾಗ ಭೂಗರ್ಭದಲ್ಲಿ ಒಂದುವಿಧವಾದ ಶಬ್ದವೂ ಭೂಕಂಪವೂ ಉಂಟಾಗುವುದು. ಪರ್ವತಾಗ್ರದಿಂದ ಹೊಗೆಯೂ ಆವಿಯೂ ಏಳುವುದು. ಈ ಆವಿಯಲ್ಲಿ ವಿಷವು ಸೇರಿಕೊಂಡಿರುವುದು. ಇಂಥಾ ವಾಯುವನ್ನು ಸೇವಿಸುವುದರಿಂದ ಪಕ್ಷಿಗಳು ಮತ್ತು ಕೋತಿಗಳು ಬಿದ್ದು ಸಾಯುವುವು. ಈ ಜ್ವಾಲಾಪ್ರವಾಹವು ನಿಂತುಹೋದಮೇಲೆ ಅನೇಕ ವರುಷಗಳವರಿಗೂ ವಿಷಮಯವಾದ ಆವಿಯು ಆ ಜ್ವಾಲೆಯು ಹೊರಟಸ್ಥಳಗಳಲ್ಲೆಲ್ಲಾ ಏಳುತ್ತಲಿರುವುದು. 1882 ನೇ ಇಸವಿಯಲ್ಲಿ ಈ ಭೂಮಂಡಲದ ಪರ್ವತಗಳಲ್ಲಿ 173 ಪರ್ವತಾಗ್ರಗಳಲ್ಲಿ ಜ್ವಾಲಾಮುಖಿಯು ಇದ್ದಂತೆಯೂ ಇವುಗಳೆಲ್ಲಾ ಸಮುದ್ರ ತೀರಗಳಲ್ಲಿದ್ದಂತೆಯೂ ಗೊತ್ತಾಗುವದು. ದಕ್ಷಿಣ ಅಮೇರಿಕಾಖಂ

ಡದ ಆಂಡಿಂಸ್ ಎಂಬ ಪರ್ವತಗಳಲ್ಲಿ ಈ ಜ್ವಾಲಾಮುಖಿಗಳು ಬಹಳ ವಿಶೇಷವಾಗಿ ಇರುವುವು. ಗ್ವಾಡಿಮಾಲಾ, ಮೆಕ್ಸಿಕೋ, ಉತ್ತರ ಅಮೇರಿಕಾ ಇವುಗಳ ಮಾರ್ಗವಾಗಿ ಅಲ್ಯೂಷ್ಯ ಮತ್ತು ಕ್ಯೂರೈಲ್ ದ್ವೀಪಗಳವರಿಗೂ ಈ ಅಗ್ನಿಪರ್ವತಗಳು ವಿಶೇಷವಾಗಿರುವುವು. ಜಪಾನ್‌ದ್ವೀಪ, ಫಾರ್ಮೊಜ, ಫಿಲಿಪ್ಪೈನ್ ದ್ವೀಪಗಳು, ಮಲಯದ್ವೀಪಸಮುದಾಯಗಳು, ನ್ಯೂಗಿನಿ, ನ್ಯೂಹೆಬ್ರಿಡಿಸ್ ನ್ಯೂಜಿಲೆಂಡ್, ಪೆಸಿಫಿಕ್ ದ್ವೀಪಗಳು, ಸೊಸೈಟಿ ದ್ವೀಪಗಳು, ಮಾರ್ಕ್ವೆಸಾನೀದ್ವೀಪಗಳು, ಈಸ್ಟರ್‌ದ್ವೀಪಗಳು, ಸ್ಯಾಂಡಿಚ್ ಮತ್ತು ಗಾಪೇದ್ವೀಪಗಳು, ಜಾವಾ, ಸುಮಾತ್ರಾ, ಅಜೋಸ್, ಕೆನೆರೀಸ್, ಕೇಪ್‌ವರ್ಡ್, ಜಾರ್ಜಿಯಸ್, ಬೊರ್‌ಬನ್, ಟಿರಡಲ್‌ಕ್ಯೂಯಗೊ ಷೆಟ್ಲೆಂಡ್ ಮೊದಲಾದ ದ್ವೀಪಗಳಲ್ಲೆಲ್ಲಾ ಈ ಅಗ್ನಿಪರ್ವತಗಳು ವಿಶೇಷವಾಗಿರುವುವು. ಇವಲ್ಲದೆ ಪ್ರಚ್ಛನ್ನವಾಗಿರತಕ್ಕ ಅಗ್ನಿಪರ್ವತಗಳನೇಕವಾಗಿರುವುವು. ಅವುಗಳು ಇನ್ನು ಕೊಂಚಕಾಲದಲ್ಲಿ ಅಗ್ನಿಪ್ರವಾಹವುಳ್ಳವುಗಳಾಗಿ ಆಗುವುವು. ಇವುಗಳ ಅಗ್ರಭಾಗದಿಂದ ಬರತಕ್ಕ ಜ್ವಾಲೆಯುನ್ನು ನೋಡಿದರೆ ಭೂಗರ್ಭದ ಅಗ್ನಿಯು ಯಾವ ಸ್ಥಿತಿಯಲ್ಲಿರುವುದೋ ಗೊತ್ತಾಗುವುದು. ಪೂರ್ವಕಾಲದಲ್ಲಿ ಅಗ್ನಿಪರ್ವತಗಳಾಗಿದ್ದು ಈಚೆಗೆ ಜ್ವಾಲೆಯು ಪ್ರವಾಹಗಳನ್ನು ಕಳೆದುಕೊಂಡಿರುವ ಪರ್ವತಗಳು ವಿಶೇಷವಾಗಿರುತ್ತವೆ. ಈಗ ಜ್ವಾಲೆಯು ಪ್ರವಾಹಗಳುಳ್ಳ ಅಗ್ನಿಪರ್ವತಗಳು ಬೇರೇ ಇರುತ್ತವೆ. ಉತ್ತರೋತ್ತರ ಜ್ವಾಲಾಮುಖಿಗಳಾಗತಕ್ಕ ಪರ್ವತಗಳು ಅನೇಕವಾಗಿರುತ್ತವೆ. ಭೂಗರ್ಭದಲ್ಲಿರತಕ್ಕ ಅಗ್ನಿಯ ತೈಕ್ಷ್ಯವನ್ನು ತೋರಿಸುವುದಕ್ಕೆ ಇವುಗಳು ವಿಶೇಷ ಸಾಧಕಗಳಾಗಿರುವುವು.

ಮನುಷ್ಯಜಾತಿ.

ಇಂಡಿಯಾ ನಿವಾಸಿಗಳು.

ಅಲೇಕಜಾಂದರನು ಇಂಡಿಯಾದಿಂದ ಹಿಂತಿರುಗಿಹೋದ ಬಳಿಕ, ಸಿರಿಯಾ ಮತ್ತು ಬಾಕ್ಟ್ರಿಯಾ ದೇಶಗಳ ರಾಜರು ಇಂಡಿಯಾಕ್ಕೆ ಅನೇಕಾವೃತ್ತಿ ದಂಡೆತ್ತಿ ಬಂದು ಹಿಂದೂ ರಾಜರೊಂದಿಗೆ ಕದನಗಳನ್ನು ಮಾಡಿಕೊಂಡರು. ಆ ದೇಶೀಯು

ರಿಂದ ಹಿಂದೂಗಳು ಅನೇಕ ವಿಷಯಗಳನ್ನು ಕಲಿತುಕೊಂಡರು. ಇದಲ್ಲದೆ ಅವರ ಸಂಪರ್ಕದಿಂದ ಹಿಂದೂ ಜನರ ಆಚಾರ ವ್ಯವಹಾರಗಳು ಸ್ವಲ್ಪಮಟ್ಟಿಗೆ ಬದಲಾಯಿಸಲ್ಪಟ್ಟವು.

ಸಿಥಿಯರ ಪ್ರವೇಶ.

ಮಂಗೋಲೀಯ ವಂಶಕ್ಕೆ ಸೇರಿದ ಸಿಥಿಯರು ಕ್ರಿಸ್ತಪೂರ್ವ ೨ನೆಯ ಶತಮಾನದಲ್ಲಿ ಹಿಂದೂದೇಶಕ್ಕೆ ದಂಡೆತ್ತಿ ಬಂದು ಪಂಜಾಬಿನಲ್ಲಿ ನೆಲಸಿ ಅಲ್ಲೊಂದು ತಮ್ಮ ರಾಜ್ಯವನ್ನು ಸ್ಥಾಪಿಸಿದರು. ಇವರು ಬೌದ್ಧಮತವನ್ನವಲಂಬಿಸಿದರು ಮತ್ತು ಬುದ್ಧನು ಸಿಥಿಯರ ವಂಶಿಕನೆಂದು ಒಂದು ಇತಿಹಾಸವನ್ನೂ ಸೃಷ್ಟಿಸಿದರು. ಇವರ ರಾಜರಲ್ಲೊಬ್ಬನಾದ ಕಾಣಿಷ್ಕನು ಬೌದ್ಧರ ೪ನೆಯ ಮಹಾಸಭೆಯನ್ನು ಸೇರಿಸಿ ಆ ಮತವಿಷಯವಾಗಿ ಬಹಳ ಸಂಭಾಷಣೆಗಳನ್ನು ನಡೆಸಿದನು. ಸಿಥಿಯರ ಸಂಪರ್ಕದಿಂದಲೂ ಹಿಂದೂ ಜನರ ಪದ್ಧತಿಗಳು ತಕ್ಕಮಟ್ಟಿಗೆ ಬದಲಾಯಿಸಲ್ಪಟ್ಟವು ಪ್ರಮೇಣ ಸಿಥಿಯರು ದಕ್ಷಿಣದ ಕಡೆಗೆ ಹೊರಟು ನಾಗಪುರಿಯವರೆಗೂ ಹರಡಿಕೊಂಡರು. ಆದರೆ ಇವರನ್ನು ಆರ್ಯರು ಸುಮ್ಮನೆ ಬಿಡಲಿಲ್ಲ. ಅಲ್ಲಲ್ಲಿ ತಡೆದು ಅನೇಕ ಯುದ್ಧಗಳಲ್ಲಿ ಸೋಲಿಸಿದರು. ಹೀಗೆ ಅವ್ಯವಸ್ಥೆಯುಂಟಾದ ಸಮಯದಲ್ಲಿ ಹಿಂದೂದೇಶದ ಪೂರ್ವನಿವಾಸಿಗಳು ಆರ್ಯರಮೇಲೆ ತಿರಿಗಿಬಿದ್ದು ಅವರು ಅನೇಕ ಕಡೆಗಳಲ್ಲಿ ನಾಶಮಾಡಿದ್ದ ತಮ್ಮ ರಾಜ್ಯಗಳನ್ನು ಪುನಃ ಸ್ಥಾಪಿಸಿಕೊಂಡರು.

ಮಹಮ್ಮದೀಯರ ಪ್ರವೇಶ.

ಮುಸಲ್ಮಾನರು ಕ್ರಿಸ್ತಶಕದ ೭೭೪ರಲ್ಲಿ ಇಂಡಿಯಾಕ್ಕೆ ಮೊದಲನೆಯ ಸಾರಿ ದಂಡೆತ್ತಿ ಬಂದು ಪಂಜಾಬಿನೊಳಕ್ಕೆ ನುಗ್ಗಿಬಂದರು. ೭೧೧ರಲ್ಲಿ ಸಿಂಧೂ ದೇಶವನ್ನು ಜಯಿಸಿದರು. ಆದರೆ ೭೫೦ರಲ್ಲಿ ಹಿಂದೂಗಳು ಇವರನ್ನು ಹಿಂತಿರುಗಿ ಓಡಿಸಿದರು. ಇದಾದ ಕೆಲವು ಕಾಲಾನಂತರ, ಗಜನಿ ಸುಲ್ತಾನನಾದ ಮಹಮ್ಮದನು ಹಿಂದೂದೇಶಕ್ಕೆ ಅನೇಕಾವೃತ್ತಿ ದಂಡೆತ್ತಿಬಂದು ಹಿಂದೂ ಜನರನ್ನು ಅನೇಕ ಯುದ್ಧಗಳಲ್ಲಿಸೋಲಿಸಿದರು. ಕಡೆಗಿವನು ೧೦೨೪ರಲ್ಲಿ ಗುಜರಾತಿನೊಳಕ್ಕೆ ನುಗ್ಗಿಬಂದು ಸೋಮನಾಥದಲ್ಲಿರುವ ಶಿವಾಲಯವನ್ನು ಕೊಳ್ಳೆಹೊಡೆದು ಅಲ್ಲಿದ್ದ ಬಹುಧನ ಅಭರಣಾದಿಗಳನ್ನು ಅಪಹರಿಸಿಕೊಂಡು ಸ್ವದೇಶಕ್ಕೆ ಹಿಂತಿರುಗಿ ಹೋದನು.

ಇದಾದ ಕೆಲವು ಕಾಲದನಂತರ ಮಹಮ್ಮದ್ ಘೋರಿ ಎಂಬಾತನು ಇಂದಿ

ಯಾಕ್ಕೆ ಅನೇಕಸಾರಿ ದಂಡೆತ್ತಿ ಬಂದು ಹಿಂದೂ ಜನರನ್ನು ಸೋಲಿಸಿ, ಕುತುಬುದ್ದೀನ್ ಎಂಬುವನನ್ನು ತನ್ನ ಪ್ರತಿನಿಧಿಯಾಗಿ ಹಿಂದೂದೇಶದಲ್ಲಿ ಬಿಟ್ಟು, ತಾನು ತನ್ನ ದೇಶಕ್ಕೆ ಹಿಂತಿರುಗಿ ಹೋಗುತ್ತಿರುವಾಗ ದಾರಿಯಲ್ಲಿ ಗ್ಯಾಕರರು ಎಂಬ ಕಾಡು ಜನರು ಇವನ ಡೇರಾದೊಳಕ್ಕೆ ನುಗ್ಗಿ ಇವನನ್ನು ಭರ್ಜಿಗಳಿಂದ ತಿವಿದು ಕೊಂದು ಹಾಕಿದರು. ಆಮೇಲೆ ದಿಲ್ಲಿಯಲ್ಲಿ ಕುತುಬುದ್ದೀನನೇ ಸ್ವತಂತ್ರ ರಾಜನಾಗಿ ಆಳಿದನು. ಇವನ ತರುವಾಯ ಇವನ ಸಂತತಿಯವರೂ ಆಮೇಲೆ ಇತರ ಮಹಮ್ಮದೀಯ ರಾಜರೂ ಹಿಂದೂ ದೇಶದ ಹಲವು ಭಾಗಗಳಲ್ಲಿ ತಮ್ಮ ರಾಜ್ಯಗಳನ್ನು ಸ್ಥಾಪಿಸಿ ಆಳುತ್ತಾ ಬಂದರು. ಕಡೆಗೆ ಮೊಗಲಾಯಿ ರಾಜನಾದ ಬಾಬರನೂ ಆತನ ತರುವಾಯ ಆತನ ಸಂತತಿಯವರೂ ಇಂಡಿಯಾದಲ್ಲಿ ರಾಜ್ಯಭಾರ ಮಾಡಿದರು. ಇದಲ್ಲದೆ ಹಿಂದೂ ದೇಶದ ಬೇರೆಬೇರೆ ಪ್ರದೇಶಗಳಲ್ಲಿ ಮಹಮ್ಮದೀಯರು ಬೇರೆಬೇರೆ ಕಾಲಗಳಲ್ಲಿ ಚಿಕ್ಕಚಿಕ್ಕ ರಾಜ್ಯಗಳನ್ನು ಸ್ಥಾಪಿಸಿಕೊಂಡಿದ್ದರು. ಈ ವಿಷಯಗಳೆಲ್ಲಾ ಹಿಂದೂದೇಶದ ಚರಿತ್ರೆಯಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ.

ಎರಡನೆಯ ಸಾರಿ ಯೂರೋಪೀಯರ ಪ್ರವೇಶ.

ಪೋರ್ತುಗಲ್ಲಿನಿಂದ ವಾಸ್ಕೊಡಗಾಮ ಎಂಬಾತನು ಹೊರಟು ಸಮುದ್ರದಲ್ಲಿ ಪ್ರಯಾಣ ಬೆಳಸಿ ೧೪೯೯ ರಲ್ಲಿ ಇಂಡಿಯದ ಪಶ್ಚಿಮ ತೀರದಲ್ಲಿರುವ ಕಲ್ಲಿಕೋಟೆಗೆ ಬಂದು ಸೇರಿದನು. ಆ ಕಾಲದಲ್ಲಿ ದಿಲ್ಲಿಯಲ್ಲಿ ಅಫಗಾನಿ ರಾಜವಂಶಿಕರು ಆಳುತ್ತಿದ್ದರು. ದೆಕನ್ನಿನಲ್ಲಿ ಮಹಮ್ಮದೀಯರ ಐದು ಸ್ವತಂತ್ರ ರಾಜ್ಯಗಳಿದ್ದುವು. ಮತ್ತು ಹಿಂದೂ ಸಂಸ್ಥಾನವಾದ ವಿಜಯನಗರವು ಬಹಳ ಪ್ರಬಲಸ್ಥಿತಿಯಲ್ಲಿತ್ತು. ವಾಸ್ಕೊಡಗಾಮನು ಹಿಂತಿರುಗಿ ತನ್ನ ದೇಶಕ್ಕೆ ಹೋಗಿ ಹಿಂದೂದೇಶದ ವೃತ್ತಾಂತವನ್ನೆಲ್ಲಾ ಸ್ವದೇಶೀಯರಿಗೆ ತಿಳಿಸಿದನು.

ಪೋರ್ತುಗೀಸರು ಇಂಡಿಯದ ಸಂಪತ್ತಿಗೆ ಆಶೆಬಿದ್ದು ಸಾಧ್ಯವಾದರೆ ಆ ದೇಶವನ್ನು ಜಯಿಸಿ ಅಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಬೇಕೆಂದು ಆಲೋಚಿಸಿದರು. ೧೫೦೦ ರಲ್ಲಿ ಅವರು ಕಾಬ್ರಾಲ್ ಎಂಬುವನನ್ನು ಇಂಡಿಯಾಕ್ಕೆ ಕಳುಹಿಸಿದರು. ಒಳ್ಳೆಯ ಮಾತುಗಳಿಂದಲೇ ಇಂಡಿಯಾದಲ್ಲಿ ವ್ಯಾಪಾರಕ್ಕೋಸ್ಕರ ಸ್ಥಳಗಳನ್ನು ಸಂಪಾದಿಸಬೇಕು, ಅದು ಸಾಧ್ಯವಾಗದಿದ್ದರೆ ಯುದ್ಧಮಾಡಿ ಸ್ಥಳಗಳನ್ನಾಕ್ರಮಿಸಬೇಕು ಎಂದು ಅತನಿಗೆ ಹೇಳಿ ಕಳುಹಿಸಿದರು. ಆತನು ಇಂಡಿಯಾಕ್ಕೆ ಬಂದ ಸ್ವಲ್ಪ ಕಾಲದಲ್ಲಿಯೇ ಕಲ್ಲಿಕೋಟೆ ಮತ್ತು ಕೊಚ್ಚಿಯಲ್ಲಿ ವರ್ತಕಶಾಲೆಗಳನ್ನು ಏರ್ಪಡಿ

ಸಿದನು. ಹೀಗಿರುವಾಗ ೧೫೦೨ ರಲ್ಲಿ ಪೋರ್ತುಗಲ್ ರಾಜನು ಸಮುದ್ರಯಾನಕ್ಕೂ ಜೈತ್ರಯಾತ್ರೆಗೂ ಇಥಿಯೋಪಿಯ ಅರೇಬಿಯ ಪರಿಸಿಯಾ ಮತ್ತು ಇಂಡಿಯಾ ದೇಶಗಳೊಂದಿಗೆ ವರ್ತಕತನ ಮಾಡಲಕ್ಕೂ ಪೋಪ್ ಗುರುವಿನಿಂದ ಸರ್ವಾಧಿಕಾರವನ್ನು ಪಡೆದನು.

ಇದಾದ ಬಳಿಕ ಪೋರ್ತುಗೀಸರು ವಿಶೇಷವಾಗಿ ಸಮುದ್ರಯಾನ ಮಾಡಲಿಕ್ಕೂ ಪೂರ್ವದೇಶಗಳೊಂದಿಗೆ ವ್ಯಾಪಾರ ನಡೆಸಲಿಕ್ಕೂ ಪ್ರಾರಂಭಿಸಿದರು. ೧೫೦೯ ರಲ್ಲಿ ಆಲ್ಬಿಕರ್ಕ್ ಎಂಬುವನು ಇಂಡಿಯಾದಲ್ಲಿ ಪೋರ್ತುಗೀಸರಿಗೆ ಸೇರಿದ್ದ ಪ್ರದೇಶಗಳಿಗೆ ಗೌರ್ನರಾಗಿ ನೇಮಿಸಲ್ಪಟ್ಟನು. ಇವನು ಗೋವೆಯನ್ನು ಸ್ವಾಧೀನಪಡಿಸಕೊಂಡನು. ಈಗಲೂ ಆ ಪಟ್ಟಣವು ಪೋರ್ತುಗೀಸರ ಸ್ವಾಧೀನದಲ್ಲಿರುವುದು. ಆಲ್ಬಿಕರ್ಕನು ಮಲಾಕವನ್ನೂ ವಶಮಾಡಿಕೊಂಡು ಸಯಾಂ ದೇಶದೊಂದಿಗೂ ಸ್ಪೈನ್ ದ್ವೀಪಗಳೊಂದಿಗೂ ವ್ಯಾಪಾರ ನಡಿಸಲಾರಂಭಿಸಿದನು. ಈ ಕಾಲ ಮೊದಲುಗೊಂಡು ೧೬೦೦ ವರೆಗೂ ಪೋರ್ತುಗೀಸರು ಹಿಂದೂ ದೇಶದೊಂದಿಗೂ ಇತರ ಪೂರ್ವ ರಾಜ್ಯಗಳೊಂದಿಗೂ ವ್ಯಾಪಾರ ನಡೆಸುವ ಹಕ್ಕನ್ನು ಪೂರ್ಣವಾಗಿ ವಹಿಸಿದ್ದರು. ಆಲ್ಬಿಕರ್ಕನು ಹಿಂದೂ ರಾಜರೊಂದಿಗೆ ಸ್ನೇಹಭಾವದಿಂದರಲು ಪ್ರಯತ್ನಿಸಿದನು. ಆದರೆ ರೋಮ್ಕೆಥೋಲಿಕ್ ಮತದಲ್ಲಿ ಪಕ್ಷಪಾತವುಳ್ಳ ಪೋರ್ತುಗೀಸರು ಅನ್ಯಮತದವರನ್ನು ದ್ವೇಷಿಸುತ್ತ ಬಹು ಕ್ರೂರಕೃತ್ಯಗಳನ್ನು ಮಾಡಿದರು.

ಹೀಗಿರಲು ೧೬ನೆಯ ಶತಮಾನದ ಅಂತ್ಯದಲ್ಲಿ ಡಚ್ಚರು ಪೋರ್ತುಗೀಸರನ್ನು ಯುದ್ಧಗಳಲ್ಲಿ ಸೋಲಿಸಿ, ಗೋವೆ ವಿನಾ ಮಿಕ್ಕ ಎಲ್ಲಾ ಊರುಗಳಿಂದಲೂ ಅವರನ್ನೋಡಿಸಿ ಹಿಂದೂ ಮತ್ತು ಇತರ ದೇಶಗಳೊಂದಿಗೆ ತಾವೇ ವರ್ತಕತನ ಮಾಡಲಾರಂಭಿಸಿದರು. ಇವರನ್ನು ಕಂಡು ಇಂಗ್ಲಿಷರೂ ವ್ಯಾಪಾರಕ್ಕೆ ಹೊರಟರು. ಮೊದಲಿವರು ಸೂರ್ತಿಯಲ್ಲಿ ಒಂದು ವರ್ತಕಶಾಲೆಯನ್ನು ಸ್ಥಾಪಿಸಿದರು. ಇಷ್ಟರಲ್ಲಿ ಫ್ರೆಂಚರೂ ಇಂಡಿಯಾಕ್ಕೆ ಬಂದು ಪುದುಚೇರಿಯಲ್ಲಿ ತಮ್ಮ ವರ್ತಕಶಾಲೆಯೊಂದನ್ನು ಸ್ಥಾಪಿಸಿದರು. ಹೀಗಿರಲು ಈ ಮೂರು ಜನಾಂಗದವರಲ್ಲಿ ಹೋರಾಟವೂ ಯುದ್ಧಗಳೂ ಉಂಟಾದುವು. ಕಡೆಗೆ ಇಂಗ್ಲಿಷರೇ ಜಯಶೀಲರಾದರು. ಇದಲ್ಲದೆ ಇಂಗ್ಲಿಷರು ಹಿಂದೂ ಮತ್ತು ಮುಸಲ್ಮಾನ ರಾಜರೊಂದಿಗೆ ಯುದ್ಧಮಾಡುತ್ತಾ ಕ್ರಮೇಣ ಅನೇಕ ರಾಜ್ಯಗಳನ್ನು ಜಯಿಸಿ ಕಡೆಗೆ ಹಿಂದೂದೇಶಕ್ಕೆಲ್ಲಾ

ತಾವೇ ಅಧಿಪತಿಗಳಾಗಿ ನಿಂತರು. ಆದರೆ ಪುದುಚರಿ ಹಿಕಾರಿಕಲ್—ಇವುಮಾತ್ರ ಈಗಲೂ ಫ್ರಂಚರಿಗೆ ಸೇರಿರುವವು.

ಹೀಗೆ ಇಂಡಿಯಾಕ್ಕೆ ಅನೇಕ ಜನಾಂಗವರು ಬಂದು ನೆಲಸಿರುವುದರಿಂದ ಅಲ್ಲಿ ನಾನಾ ಜಾತಿಯವರು ಸಿಕ್ಕುವರು. ಇವರನ್ನು ಪೂರ್ವನಿವಾಸಿಗಳು ಹಿಂದೂ ಆರ್ಯರು ಮಿಶ್ರರು ಮುಸಲ್ಮಾನರು ಯೂರೋಪೀಯರು ಮತ್ತು ಇತರ ಅನ್ಯದೇಶಿಯರು ಎಂದು ೬ ದೊಡ್ಡ ಪಂಗಡವಾಗಿ ವಿಭಾಗಿಸಬಹುದು. ಪೂರ್ವನಿವಾಸಿಗಳು ಅಥವಾ ಅನಾರ್ಯರಲ್ಲಿ ಎರಡು ಗುಂಪುಗಳಿರುವುವು. (೧) ದ್ರಾವಿಡರು. (೨) ಕೋರಿಯರು. ಇವರಲ್ಲಿ ಪುನಃ ಅನೇಕ ಸಣ್ಣಸಣ್ಣ ಗುಂಪುಗಳಿರುವುವು.

ದ್ರಾವಿಡರು.

ದ್ರಾವಿಡರ ಗುಂಪಿಗೆ ನಿಗ್ರರು, ಗೊಂಡರು, ತೋಡರು, ಕಾಡುಕುರುಬರು ಬಡಗರು, ತೋಟಿರು, ಕಾಂಧರು ಮುಂತಾದವರು ಸೇರಿರುವರು. ಇವರಲ್ಲಿ ಅನೇಕರು ಗುಡ್ಡಬೆಟ್ಟಗಳಲ್ಲಿ ವಾಸಮಾಡುತ್ತಿರುವರು.

ನಿಗ್ರರು.—ಇವರು ಮದ್ರಾಸಾಧಿಪತ್ಯದ ದಕ್ಷಿಣದಲ್ಲಿ ಅನೆಮಲೆ ಪರ್ವತಪಂಕ್ತಿಗಳಲ್ಲಿ ವಾಸಮಾಡುತ್ತಿರುವರು. ಇವರು ಆಫ್ರಿಕಾ ಮತ್ತು ಆಸ್ಟ್ರೇಲಿಯಾದಲ್ಲಿರುವ ನಿಗ್ರರಂತೆ ಕಪ್ಪಾಗಿಯೂ ದಪ್ಪತುಟಿ ಉಂಗರ ಕೂದಲುಳ್ಳವರಾಗಿಯೂ ಇರುವರು. ಉದ್ದವಾಗಿಲ್ಲ, ಕುಳ್ಳರು. ಪರ್ವತರಾಜರೆಂದು ಹೆಸರನ್ನಿಟ್ಟುಕೊಂಡಿರುವರು. ಅಡವಿಯಲ್ಲಿ ಸಿಕ್ಕುವ ಹಣ್ಣುಹಂಪಲು ಗಡ್ಡೆಗೆಣಸುಗಳು ಮುಂತಾದವನ್ನು ಗ್ರಾಮಗಳಿಗೂ ಪಟ್ಟಣಗಳಿಗೂ ತಂದು ಮಾರಿ ಅಕ್ಕಿ ಹೊಗೆಸೊಪ್ಪು ಮೊದಲಾದುವುಗಳನ್ನು ಕೊಂಡುಕೊಂಡು ಹಿಂತಿರುಗಿ ತಮ್ಮ ಅರಣ್ಯವಾಸಕ್ಕೆ ಹೋಗುವರು. ಇವರಲ್ಲಿ ಅನೇಕರು ಮೇಲುಸಾಲಿನ ಮುಂಭಾಗದ ನಾಲ್ಕು ಹಲ್ಲುಗಳನ್ನು ಅರದಿಂದ ಉಜ್ಜಿಕೊಂಡು ಚೂಪಾಗಿ ಮಾಡಿಕೊಳ್ಳುವರು. ಈ ನಿಗ್ರರ ಕೈಕೆಳಗೆ ಮಂಡೆವರರು ಪುಲಿಯೂರರು ಎಂಬ ಎರಡು ಕೋಮಿನವರಿರುವರು. ಪುಲಿಯೂರರು ಇಲಿ ಮುಂತಾದ ಸಣ್ಣ ಜೀವಜಂತುಗಳನ್ನು ಹಿಡಿದು ತಿನ್ನುವರು. ಮತ್ತು ಪಿಶಾಚಪೂಜೆ ಮಾಡುವರು.

ನಾಯುರುಗಳು.—ಇವರು ಹಿಂದೂ ಮತಾವಲಂಬಿಗಳಾದಾಗ್ಯೂ ಆರ್ಯವರ್ಗಕ್ಕೆ ಸೇರಿದವರಲ್ಲವೆಂದು ತಿಳಿದುಬಂದಿದೆ. ಇವರು ಆರ್ಯರ ಮತ್ತು ಅನಾರ್ಯರ ವಿಶ್ರದಿಂದುಂಟಾದವರೆಂದು ಕೆಲವರು ಹೇಳುವರು. ಆದರೆ ತಾವೂ ಆರ್ಯಸಂತಾನ

ದವರೆಂದು ನಾಯರಗಳು ಹೇಳಿಕೊಳ್ಳುವರು. ಇವರು ಕೊಚ್ಚಿ, ಅನಂತಶಯನ, ಮಲಬಾರಿನಲ್ಲಿ ಹೆಚ್ಚಾಗಿ ವಾಸಮಾಡುತ್ತಿರುವರು. ಈ ಜನರಲ್ಲಿ ಹೆಂಗಸರೇ ಆಸ್ತಿ ವಾಸ್ತಿಗೆ ಬಾಧ್ಯರು. ಅವರು ಗಂಡನ ಮನೆಯಲ್ಲಿ ವಾಸಮಾಡುವುದಿಲ್ಲ. ತಮ್ಮ ತಾಯಿಯ ಮನೆಯಲ್ಲಿಯೇ ವಾಸಮಾಡುವರು. ಗಂಡನೇ ಹೆಂಡತಿ ಇರುವ ಮನೆಗೆ ಆಗಾಗ ಬರುತ್ತಾ ಹೋಗುತ್ತಾ ಇರುವನು. ಒಂದು ಕುಟುಂಬದ ಆಡಳಿತವನ್ನು ತಾಯಿಯೇ ನೋಡಿಕೊಳ್ಳುವಳು. ಆಕೆಯು ಸತ್ತ ಬಳಿಕ ಹಿರಿಯ ಮಗಳು ಅದನ್ನು ವಹಿಸುವಳು. ಒಂದೇ ಮನೆಯಲ್ಲಿ ದೊಡ್ಡವರಾದ ಅಕ್ಕತಂಗಿಯರೂ ಅಣ್ಣತಮ್ಮಂದಿರೂ ತಾಯಿಯೂ ಸೋದರ ಮಾವಂದಿರೂ ಚಿಕ್ಕಮ್ಮನವರೂ ಮುಂತಾಗಿ ವಾಸವಾಗಿರುವರು. ಇವರಿಗೆ ಕಲಹ ಬರುವುದು ಅಪೂರ್ವ. ಒಬ್ಬ ಗಂಡಸು ಸಂಪಾದಿಸಿದ ಆಸ್ತಿಗೆ ಅಕ್ಕತಂಗಿಯರ ಮಕ್ಕಳು ಬಾಧ್ಯರಾಗುವರು. ಈಗ ನಾಯರುಗಳಲ್ಲಿ ಅನೇಕರು ವಿದ್ಯಾವಂತರಾಗಿ ದೊಡ್ಡದೊಡ್ಡ ಸರಕಾರಿ ಉದ್ಯೋಗಗಳನ್ನು ಮಾಡುತ್ತಿರುವರು. ಹೆಚ್ಚು ಜನರು ಭೂವ್ಯವಸಾಯದಿಂದಲೂ ವ್ಯಾಪಾರದಿಂದಲೂ ಜೀವನ ಮಾಡುವರು. ಅನಂತಶಯನದ ರಾಜವಂಶಿಕರು ನಾಯರ ಜಾತಿಗೆ ಸೇರಿದವರು.

(ಸಶೇಷ)

S.V.

ಎಲಿಫೆಂಟಾ ಗುಹೆಗಳು.

ನಮ್ಮ ಇಂಡಿಯಾ ದೇಶದ ಶಿಲ್ಪಿಗಳು ಪೂರ್ವಕಾಲದಲ್ಲಿ ಅಸಾಧಾರಣವಾದ ಕೌಶಲ್ಯವುಳ್ಳವರಾಗಿದ್ದರು. ಇವರ ಕೌಶಲ್ಯವನ್ನು ತೋರಿಸತಕ್ಕ ಕಲ್ಲುಕೆಲಸಗಳು ಇಂಡಿಯಾ ದೇಶದಲ್ಲಿ ಅಸಂಖ್ಯಾತವಾಗಿರುವುವು. ಭಾರೀಭಂಡೆಗಳನ್ನು ಕೊರೆದು ಒಂದೇ ಭಂಡೆಯಲ್ಲಿ ದೇವಾಲಯಗಳನ್ನೂ, ವಿಗ್ರಹಗಳನ್ನೂ, ಗುಹೆಗಳನ್ನೂ ಕೊರೆದು ಪೂರ್ವೀಕರು ತಮ್ಮ ಅದ್ವಿತೀಯವಾದ ಸಾಹಸವನ್ನು ತೋರಿಸಿರುವರು. ಯಲ್ಲೋರ ಮತ್ತು ಜಲಿಫ್ಯಾಂಟಾ ಎಂಬ ಸ್ಥಳಗಳಲ್ಲಿ ಕೊರೆಯಲ್ಪಟ್ಟಿರುವ ಗುಹಾರೂಪವಾದ ದೇವಸ್ಥಾನಗಳು ಅತ್ಯಂತ ವಿಸ್ಮಯವನ್ನುಂಟುಮಾಡುತ್ತದೆ. ಬೊಂಬಾಯಿ ಪಟ್ಟಣಕ್ಕೆ ಹೋಗಿ ಅಲ್ಲಿಂದ ದೋಣಿಯನ್ನು ಹತ್ತಿ ಹೊರಟರೆ,

ಮುಕ್ಕಾಲು ಘಂಟೆಯ ಪ್ರಯಾಣದಲ್ಲಿ ಆ ಪ್ರಾಂತ್ಯಗಳಲ್ಲಿರತಕ್ಕ ದ್ವೀಪಗಳಲ್ಲಿ ಯ ಲಿಫ್ಯಾಂಟಾ ಎಂಬ ಒಂದು ದ್ವೀಪವಿರುವುದು. ಅಲ್ಲಿಗೆ ಹೋದಕೂಡಲೆ ದೊಡ್ಡ ಕಂಭಗಳ ಮೇಲೆ ನಿಂತಿರತಕ್ಕ ಒಂದು ಮಂಟಪವು ಕಾಣುವುದು. ಇದು ಒಂದೇ ಭಂಡೆಯಲ್ಲಿ ಕೆತ್ತಲ್ಪಟ್ಟುದಾಗಿರುವುದು. ನಿಬಿಡವಾಗಿ ಬೆಳೆದಿರತಕ್ಕ ಎಲೆ ಮತ್ತು ಬಳ್ಳಿಗಳಿಂದ ಪರಿವೃತವಾಗಿರುವುದು. ಇಲ್ಲಿ ಒಂದು ಪುರಾತನವಾದ ಶಿವಲಿಂಗವಿ ರುವುದು. ಈಗಲೂ ಬಹುಜನಗಳು ಹೋಗಿ ಅದಕ್ಕಾರಾಧನೆಯನ್ನು ಮಾಡುವರು. ದಕ್ಷಿಣದ ಗೋಡೆಯಾಗಿರತಕ್ಕ ಶಿಲೆಯಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರೂ ಅವರವ ರಿಗೆ ಉಚಿತವಾದ ವಾಹನಗಳನ್ನು ಪಡೆದು ಇರುವಂತೆ ಕೊರೆಯುಲ್ಪಟ್ಟಿರುವುದು. ಈ ತ್ರಿಮೂರ್ತಿಗಳ ವಿಗ್ರಹವು ೧೯ ಅಡಿ ಉದ್ದವಿರುವುದು. ಅದರ ಸುತ್ತಲೂ ಇರತಕ್ಕ ವಿಗ್ರಹಗಳಲ್ಲಿ ಅರ್ಧನಾರೀಶ್ವರನ ವಿಗ್ರಹವೂ, ಐದು ಮುಖಗಳುಳ್ಳ ಬ್ರಹ್ಮನ ವಿಗ್ರ ಹವೂ, ಗರುಡವಾಹನನಾದ ವಿಷ್ಣುವಿನ ವಿಗ್ರಹವೂ, ಇಂದ್ರಾದೀವತೆಗಳ ವಿಗ್ರ ಹವೂ ಕೇವಲ ರಮಣೀಯವಾಗಿರುವುದಲ್ಲದೆ, ಈ ವಿಗ್ರಹಗಳನ್ನು ಕೊರೆದವನ ಪರಾಕಾಷ್ಠ ದೆಶೆಯನ್ನು ಹೊಂದಿದ ಶಿಲ್ಪವಿದ್ಯಾವಿಶಾರದತ್ವವನ್ನೂ ತೋರಿಸುವುದು. ಇವುಗಳ ದರ್ಶನವನ್ನು ಮಾಡತಕ್ಕವರಿಗೆ ಪೂರ್ವಕಾಲದಲ್ಲಿ ಎಂಥಾ ಶಿಲ್ಪಿಗಳಿದ್ದ ರೋ ಅವರ ಪ್ರಜ್ಞೆಯು ಎಂಥಾದ್ದಾಗಿರುತ್ತಿತ್ತೋ ಅವುಗಳೆಲ್ಲಾ ಸ್ಮೃತಿಪಥಕ್ಕೆ ಬರುವುದು.

ಗಣಿತ.

1 ಸರಳಬಡ್ಡಿಯು ಕ್ರಮದಲ್ಲಿ ಒಬ್ಬನು 1801 ನೇ ಜನವರಿ 8 ರಲ್ಲಿ £ 98-7-6 ಗಳನ್ನು ನೇಕಡಾ 5 ರಂತೆ ಬಡ್ಡಿಗೆ ಹಾಕುತ್ತಾನೆ. ಆಗಸ್ಟ್ ಅಖೈರಿಗೆ ಆ ಪತ್ರಕ್ಕೆ ಷರಾ ಬರೆದು ವಾಪಸು ಕೊಡಬೇಕಾದರೆ ಎಷ್ಟು ಹೊಬಲ ಗಿಗೆ ಒರೆಯುಬೇಕು? ಉತ್ತರ £ 101—10—$10\frac{7}{46}$.

2 ನೇಕಡಾ 6 ರಂತೆ 1901 ನೇ ಜನವರಿ 2 ರಲ್ಲಿ £ 96 ೯. 7. 0 6 ಗಳು ಬಡ್ಡಿಗೆ ಹಾಕಲ್ಪಟ್ಟು ಜೂಲೈ ಅಖೈರು ವರಿಗೆ ಮಾತ್ರವೇ ವಾಯಿದೆ ಇದ್ದರೆ ಎಷ್ಟು ಕೊಟ್ಟು ಆ ಪತ್ರವನ್ನು ವಾಪಸು ಪಡೆಯಬೇಕಾಗುತ್ತದೆ?

£ 99—. 11—$0\frac{1}{2}$.

3 3 ಜನರು 4 ದಿವಸಗಳಲ್ಲಿ 5 ರೂ. ಗಳನ್ನು ಸಂಪಾದಿಸಿದರೆ, 6 ಜನರು 7 ದಿನದಲ್ಲಿ ಎಷ್ಟು ರೂ. ಗಳನ್ನು ಸಂಪಾದಿಸುವರು? ಉ॥ 17—8—0

4 4 ಜನರು 5 ದಿನದಲ್ಲಿ 6 ಕೊಳಗ ರಾಗಿಯನ್ನು ಸಂಪಾದಿಸಿದರೆ 7 ಜನರು 8 ದಿನದಲ್ಲಿ ಎಷ್ಟು ಕೊಳಗವನ್ನು ಸಂಪಾದಿಸುವರು? ಉ—$16\frac{1}{5}$

5 6 ಜನರು 7 ದಿನದಲ್ಲಿ 8 ರೂ. ಗಳನ್ನು ಸಂಪಾದಿಸಿದರೆ 9 ಜನರು 10 ದಿನದಲ್ಲಿ ಎಷ್ಟು ರೂ. ಗಳನ್ನು ಸಂಪಾದಿಸುವರು? ಉ— $=17\frac{1}{7}$

6 7 ಜನರು 8 ದಿನಗಳಲ್ಲಿ £ 9 ಗಳನ್ನು ಸಂಪಾದಿಸುತ್ತಾರೆ. 10 ಜನರು 11 ದಿವಸಗಳಲ್ಲಿ ಎಷ್ಟು £ ಗಳನ್ನು ಸಂಪಾದಿಸುತ್ತಾರೆ? ಉ—$17\frac{1}{2}\frac{9}{8}$ £

7 4 ಡಬ್ಬಾ ಎಣ್ಣೆಯು 6 ಮನೆಯ ಜನರಿಗೆ 10 ದೀಪಗಳನ್ನು ಹತ್ತಿಸಿ ಉರಿಸುವುದಕ್ಕಾದರೆ 5 ಮನೆಯವರಿಗೆ 3 ಡಬ್ಬಾ ಎಣ್ಣೆಯು ಎಷ್ಟು ದೀಪಗಳನ್ನು ಉರಿಸುವುದಕ್ಕೆ ಆಗುತ್ತದೆ? ಉ—9 ದೀಪ.

8 1 ಮನೆಯಲ್ಲಿ ದಿನ 1ಕ್ಕೆ 6 ದೀಪಗಳಂತೆ ಉರಿಯಿಸಲು 20 ದಿನಕ್ಕೆ 5 ಮಣ ಎಣ್ಣೆ ಬೇಕು. ಇನ್ನೂ ದಿನ 1ಕ್ಕೆ 2 ದೀಪಗಳನ್ನು ಹೆಚ್ಚಿಸಿ 1 ದಿನ ಹೆಚ್ಚು ಉರಿಯಿಸಲು ಎಷ್ಟು ಹೆಚ್ಚು ಎಣ್ಣೆ ಬೇಕು? 2 ಮಣ.

9 8 ಕುದುರೆಗಳಿಗೆ 9 ದಿನಕ್ಕೆ 72 ಸೇರು ಹುರುಳಿ ಬೇಕಾಗುವುದಾದರೆ 110 ಸೇರು ಹುರುಳಿಯು 10 ಕುದುರೆಗಳಿಗೆ ಎಷ್ಟು ದಿನಕ್ಕಾಗುವುದು? 11 ದಿವಸ

10 11 ಹಸುಗಳಿಗೆ 12 ದಿವಸಕ್ಕೆ 14 ಹೊರೆ ಹುಲ್ಲು ಬೇಕಾಗುವುದಾದರೆ 15 ಹಸುಗಳಿಗೆ 35 ಹೊರೆ ಹುಲ್ಲು ಎಷ್ಟು ದಿನಕ್ಕಾಗುವುದು? 22 ದಿವಸ.

11 14 ಎಮ್ಮೆಗಳ ಹಾಲಿನಿಂದ 15 ದಿನಕ್ಕೆ 16 ಮಣ ಬೆಣ್ಣೆ ಆಗುವುದಾದರೆ, 18 ದಿನಕ್ಕೆ ಈಗಿನ ಮೂರರಷ್ಟು ಬೆಣ್ಣೆ ತೆಗೆಯಬೇಕಾದರೆ ಎಷ್ಟು ಎಮ್ಮೆಗಳನ್ನು ಸಾಕಬೇಕಾಗುತ್ತದೆ? 35 ಎಮ್ಮೆ.

12 5 ಗಜ ಉದ್ದ 4 ಗಜದ ಅಗಲದ ಕಾಗದಗಳು 1 ಗೋಡೆಗೆ 21 ಬೇಕಾಗುವುದಾದರೆ 7 ಗಜದುದ್ದ, 6 ಗಜದಗಲದ ಕಾಗದಗಳೆಷ್ಟು ಬೇಕಾಗುವವು? ಉತ್ತರ 13.

13 ನಾನು ಒಂದು ಮನೆ ಕಟ್ಟಿಸುವುದಕ್ಕಾಗಿ 30 ಮುಂಡಿಗೆ ಕಂಬಗಳನ್ನೂ ಕೆಲವು ತೊಲೆಗಳನ್ನೂ 1200 ರೂ. ಗಳಿಗೆ ತೆಗೆದುಕೊಳ್ಳುತ್ತೇನೆ. ಖರೀದಿಯಲ್ಲಿ ಮುಂಡಿಗೆ ಮತ್ತು ತೊಲೆ 2:3 ಈ ರೀತಿ ಇದ್ದಲ್ಲಿ ತೆಗೆದ ತೊಲೆಗಳೆಷ್ಟು? ಉತ್ತರ 30.

I. ವ್ಯವಸಾಯದಲ್ಲಿ ಉಪಯೋಗಿಸುವ ಯಾವುದಾದರೂ ಐದು ಯಾನಗಳ ಮತ್ತು ಕೈಕೆಲಸದ ಆಯುಧಗಳ ಹೆಸರು ಬರೆದು ಅವ್ರಗಳನ್ನು ಉಪಯೋಗಿಸುವ ರೀತಿಯನ್ನು ಸೂಕ್ಷ್ಮವಾಗಿ ವಿವರಿಸಿ.

ಯಾನಗಳು.—

ನೇಗಿಲು—ಉಳುವದಕ್ಕೆ ಉಪಯೋಗ.

ಹಲುವೆ (ಗುಂಟಿಗೆ)—ಉಳಲ್ಪಟ್ಟ ಆ ಸಮನಾದ ಮಣ್ಣನ್ನು ಸಮವಾಡುವದಕ್ಕೂ ಹೆಂಟೆ ಒಡೆಯುವ್ರದಕ್ಕೂ ಕಳೆಗಳನ್ನು ಜಪಾಯಿಸುವ್ರದಕ್ಕು ಬಿತ್ತಿದ ಬೀಜವನ್ನು ಮುಚ್ಚುವ್ರದಕ್ಕೂ ಉಪಯೋಗಿಸುತ್ತಾರೆ

ಕಿರುಮರಾ—ಒಣಹೆಂಟೆ ಒಡೆಯುವ್ರದಕ್ಕೂ ನೆಲಮಟ್ಟಾ ಮಾಡುವ್ರದಕ್ಕೂ ಭೂಮಿಯ ತೇವವು ಆರದಂತೆ ನೆಲಾ ಘಟ್ಟಿಮಾಡುವ್ರದಕ್ಕೂ ಉಪಯೋಗ.

ಕೂರಿಗೆ—ಬೀಜ ಬಿತ್ತುವ್ರದಕ್ಕೆ ಉಪಯೋಗ.

ಹರಗುವ್ರದರಿಂದ ಒತ್ತಾದ ಪೈರೂ ಕಳೆಗಳೂ ನಾಶವಾಗಿ ಭೂಮಿ ಸಡಿಲವಾಗುತ್ತದೆ. (ಇವಲ್ಲದೆ ಕೆಳಮಣ್ಣು ನೇಗಿಲು ಕೆಸರುಮರ ಗೊಬ್ಬರದ ಬಂಡಿ ಇವುಗಳನ್ನಾದರೂ ವಿವರಿಸ ಬಹುದು.)

ಆಯುಧಗಳು.—

ಗುದ್ದಲಿ—ಘಟ್ಟಿಮಣ್ಣು ತೋಡುವ್ರದು. ಸೊಸಿಗಳ ನಡುವೆ ನೆಲಾಸಡಿಲಮಾಡುವ್ರದು.

ಸನಿಕೆ (ಮಮಟಿ)—ತೇವದಮಣ್ಣು ತೋಡುವ್ರದು. ನೀರು ಕಟ್ಟುವ್ರದು. ತೆವರು ಕತ್ತರಿಸುವ್ರದು. ಇತ್ಯಾದಿ

ಕುಡುಗೋಲು—ಹುಲ್ಲು ಪೈರುಗಳು ಮೊದಲಾದುದನ್ನು ಕುಯ್ಯುವ್ರದು.

ಕಳಾರಿ (ಪರವಾರಿ)—ಕಳೇಕೀಳುವ್ರದು. ಇವಲ್ಲದೆ ಸನ್ನಿಗೋಲು ಮೊದಲಾದ ಇತರ ಆಯುಧಗಳನ್ನು ವಿವರಿಸಬಹುದು

II. ಈ ದೇಶದ ಭೂಮಿಗಳಲ್ಲಿ ಮುಖ್ಯವಾಗಿ ಕಮ್ಮಿಯಾಗಿರುವ ಸಾರಾಂಶವನ್ನು (ಎಂದರೆ ಕೊಳೆತ ಸೊಪ್ಪಿನ ಗೊಬ್ಬರ) ವನ್ನು ಸೊಪ್ಪು ಸಿಕ್ಕಿದ ಕಡೆ ಸುಲಭವಾಗಿ ವೃದ್ಧಿಮಾಡುವ್ರದು ಹೇಗೆ?

ಚಳಿಗಾಲದಲ್ಲಿ ಹೊಲಗದ್ದೆಗಳನ್ನು ಉಂಡಿದ ಕೂಡ್ಲೆ ಭೂಮಿ ತೇವವಾಗಿ ಇರುವದು–ಹಾಗಿರುವಾಗಲೇ ಉತ್ತು ಹುರಳಿ ಚೆಲ್ಲಿದರೆ ಅದು ಆಮೇಲೆ ಬೀಳುವ ಇಬ್ಬನಿಯಿಂದ ಬೆಳಯುತ್ತದೆ. ಗಿಡವು ತುಂಬಾ ಸೊಪ್ಪುಬಿಟ್ಟು ಹೂವು ಆಗುವದಕ್ಕೆ ಒಂದಾಗ ಆ ಸೈರನ್ನು ಭೂಮಿಯು ಒಳಕ್ಕೆ ಒಳ್ಳೆಸೀಗಲಿನಿಂದ ಉತ್ತು ಬಿಡುವ್ರದು. ಹೀಗೆ ಮಾಡಿದರೆ ಆ ಗಿಡಗಳು ನೆಲದಲ್ಲಿ ಕೊಳೆತು ಸಾರಾಂಶವಸ್ತುವನ್ನು ಹೆಚ್ಚಿಸುವ್ರದು. ಇದು ಸುಲಭಮಾರ್ಗ. ನೀಲಿ, ಕಡಲೆ, ಉದ್ದು ಸೆಣಬು ನೆಲಗಡಲೆ, ಈ ಗಿಡಗಳನ್ನು ಬೆಳಸಿ ಉಳಬಹುದು.

III. ಬದಿಕಟ್ಟು (ಎಂದರೆ ಕೆಸರುಮಾಡಿ) ಮಾಡುವ ಈಗಿನ ತರಿ ಸಾಗುವಳಿ ಪದ್ಧತಿಯಿಂದಾ ನೀರು ವಿಶೇಷವಾಗಿ ನಷ್ಟವಾಗುವ್ರದು ಹೇಗೆ? ವಿವರಿಸಿ.

ಕೆಸರು ಮಾಡಿ ಬಿತ್ತಿದ ಗದ್ದೆಯಮೇಲೆ ನೀರು ಯಾವಾಗಲೂ ಅಂದರೆ ಬಹು ಕಾಲ ನಿಂತಿರಬೇಕು. ಹೀಗೆ ಬಹು ವಿಸ್ತಾರವಾದ ಪ್ರದೇಶದಮೇಲೆ ನೀರು ನಿಲ್ಲುವ್ರದರಿಂದಾ ವಿಶೇಷ ನೀರು ಬಿಸಿಲು ಗಾಳಿಗಳಿಂದ ಇಂಗುವದಕ್ಕೂ ಭೂಮಿಯಲ್ಲಿ ಹೀರಿಹೋಗುವ್ರದಕ್ಕೂ ಆಸ್ಪದ ಹೆಚ್ಚಿ ನೀರು ಹೆಚ್ಚಾಗಿ ನಷ್ಟವಾಗುವ್ರದು.

ಗದ್ದೆಗಳಮೇಲೆ ನೀರು ಯಾವಾಗಲೂ ಹರಿಯುತ್ತಲೆ ಇರುವ್ರದರಿಂದ ಸಾಗು ವಳಿ ಕಾಲದಲ್ಲಿ ಹೀಗೆ ಹರಿಯುವ ಹೆಚ್ಚು ನೀರೆಲ್ಲಾ ಕೊನೆಗೆ ಹಳ್ಳಗಳಿಗೆ ಬಿದ್ದು ಪ್ರವಾಹ ರೂಪವಾಗಿ ಹರಿದು ನದಿಗಳಿಗೆ ಸೇರಿ ಉಪಯೋಗವಿಲ್ಲದೆ ಹೋಗುತ್ತದೆ. ಹೀಗಾಗುವದನ್ನು ನಾವು ಪ್ರತಿಯೊಂದು ಕೆರೆ ಮತ್ತು ನಾಲೆಗಳ ಕೆಳಗೂ ದಿನವಹಿ ನೋಡುತ್ತೇವೆ.

ಕೆಸರು ಮಾಡಿಬಿತ್ತಿ ಭತ್ತಾಬೆಳೆಯುವ್ರದಕ್ಕೆ 120 ಅಂಗುಲ ನೀರು ಬೇಕೆಂದೂ ಕೆರೋಲಿನಾ ದೇಶದ ಪದ್ಧತಿಯಮೇರೆ ನೀರು ಆರಹದವಾಗಿ ಕಟ್ಟಿ ಭತ್ತಾ ಬೆಳೆಯಲು 43 ಅಂಗುಲ ನೀರು ಸಾಕಾಗುತ್ತದೆಯಂತಲೂ ಪರೀಕ್ಷಿಸಿ ನೋಡಿದಾರೆ. ಆದುದರಿಂದಾ ನಮ್ಮ ಪದ್ಧತಿ ಅನುಸರಿಸುವ್ರದರಿಂದಾ 72 ಅಂಗುಲ ನೀರು ಹೆಚ್ಚಾಗಿ ವ್ಯರ್ಥವಾಗುತ್ತೆಂದು ವ್ಯಕ್ತಪಡುತ್ತದೆ. ಇಷ್ಟು ನೀರು ಉಳಿಸಿದರೆ ಒಂದು ಬೆಳೆ ಆಗುವ ಕಡೆ ಎರಡು ಬೆಳೆ ಮಾಡಬಹುದು.

IV. ನೆಲಗಡ್ಲೆ, ಹುರಳಿ, ಹರಳು, ಇವು ಇತರಪೈರುಗಳಂತೆಯೇ ಭೂಮಿಯ ಸಾರವನ್ನು ಹೀರತಕ್ಕುವಾಗಿದ್ದರೂ ಇವುಗಳನ್ನು ಬೆಳೆದನಂತರ ಭೂಮಿಯು ಫಲಕರವಾಗುತ್ತಿದೆಂದು ರೈತರು ಹೇಳುತ್ತಾರೆ. ಕಾರಣವೇನು?

ನೆಲಗಡಲೆ ಹರಳು ಹುರಳಿ ಇವು ಬೆಳೆಯುವಾಗ ಆ ಭೂಮಿಯಲ್ಲಿ ಕಳೆ ಬೆಳೆಯಲು ಅವ್ಕಾಶ ಕೊಡುವದಿಲ್ಲವಾಗಿ ಕಳೆ ನಾಶವುತ್ತದೆ.

ಈ ಮೂರುಪೈರುಗಳು ತಮ್ಮ ಸೊಪ್ಪನ್ನೆಲ್ಲಾ ನೆಲದಮೇಲೆ ಉದರಿಸುವ ಸ್ವಭಾವವುಳ್ಳವಾದುದರಿಂದಾ ನೆಲದಲ್ಲಿ ಸಾರಾಂಶವಸ್ತು ಹೆಚ್ಚುವುದು.

ನೆಲಗಡಲೆ, ಹುರಳಿ ಇವುಗಳ ಬೇರುಗಳು ಸೊಸಿಗಳಿಗೆ ಜೀರ್ಣವಾದ ಬಂದು ಬಹಳ ಬೆಲೆಯಾದ ಆಹಾರವನ್ನು ಸಂಗ್ರಹಿಸುವ ಗುಣವುಳ್ಳವಾದುದರಿಂದ ಅವು ಭೂಮಿಯಲ್ಲಿ ನಿಂತು ಕೊಳೆತು ಹೋಗುವುದರಿಂದ ಅವುಗಳು ಸಂಗ್ರಹಮಾಡಿದ ಪದಾರ್ಥವು ಭೂಮಿಯ ಸಾರವನ್ನು ಹೆಚ್ಚಿಸುವುವು.

ಕಡಲೆಕಾಯಿ ಆರಿಸುವದಕ್ಕೆ ನೆಲಾ ತೋಡಬೇಕಾಗಿರುವುದರಿಂದಾ ಉದುರಿದ ಸೊಪ್ಪು, ಗಿಡ ಮುಂತಾದುದು ನೆಲದಲ್ಲಿ ಸೇರುವುದಲ್ಲದೆ ಮಣ್ಣು ಸಹಾ ಮಾಗಿ ಹದವಾಗುತ್ತದೆ ಈ ನಾಲ್ಕು ಕಾರಣಗಳಿಂದಲೂ ಭೂಮಿಯು ಫಲಕರವಾಗುತ್ತದೆ.

V. ಜೈನರಾಗಿ ಬೆಳೆ ಮಾಡುವವನನ್ನೂ ಜೊಲ ಉಳುವುದು ಮೊದಲು ಬೆಳೆ ಕೊಯಿದು ಮೆಸೆಹಾಕುವವರೆಗೆ ಯಾವಯಾವಕಾಲದಲ್ಲಿ ಏನೇನು ಬೇಸಾಯಮಾಡುತ್ತಾರೋ ಎಲ್ಲಾ ವಿವರಿಸಿ ಬರೆಯಿರಿ.

ಮುಂಗಾರು ಮಳೆ ಬೀಳುತ್ತಲೇ ಉಳುವದಕ್ಕೆ ಪ್ರಾರಂಭಿಸಿ ಜ್ಯೇಷ್ಠಮಾಸದವರೆವಿಗೆ ನಾಲ್ಕು ಸಾಲು ಹೊಡೆದು ಮಣ್ಣು ತೌಡುಕಟ್ಟುವಂತೆ ಮಾಡುವುದು ನಂತರ ಎಕರೆಯೊಂದಕ್ಕೆ 25—30 ಬಂಡಿಗೆ ಕಪ್ಪು ಇಲ್ಲದಂತೆ ಬೆರಕೆ ಗೊಬ್ಬರವನ್ನು ಚೆಲ್ಲುವಿಕು. ಈಗೊಬ್ಬರವು ಇಲ್ಲದಿದ್ದರೆ ಎಕರೆಗೆ 2000 ಕುರಿಗಳನ್ನು ಮಂದೇ ಹಾಕುವುದು. ಗೊಬ್ಬರವು ಮಣ್ಣಿನಲ್ಲಿ ಸೇರುವಂತೆ ಪುನಃ ಎರಡುಸಾಲು ಕೂಡಲೆ ಉಳುವುದು. ಇದು ಆದನಂತರ ಆಷಾಡಮಾಸದಲ್ಲಿ ಜಡಿಮಳೆ ಬಿದ್ದು ನೆಲಾ ಹದವಾದ ಕೂಡಲೆ ಎರಡುಸಾರಿ ಅಲುವೆ ತಿರಿಗಿಸುವದು. ಆ ಕೂಡಲೆ ಒಳ್ಳೆ ಬೀಜದ ರಾಗಿಯನ್ನು ಎಕರೆಗೆ 6 ರಲಾಗಾಯಿತು 8 ಸೇರುಗಳವರಿಗೆ ಕೂರಿಗೆಯಿಂದಲಾಗಲೀ ಕೈಯಿಂದಲಾಗಲೀ ಬಿಕ್ಕುತ್ತಾರೆ. ರಾಗಿ ಯೊಡನೆ ಅವರೆ, ತೊಗರಿ ಮೊದಲಾದುದನ್ನು ಸುಮಾರು ನಾಲ್ಕು ಅಡಿ ದೂರಕ್ಕೆ ಸಾಲಸಾಲಾಗಿ ಹಾಕುವುದು ಉಂಟು. ಬಿತ್ತಿದ ಕೂಡಲೆ ಎಟ್ಟಪೆಂಬ ಬರಲು ಹರಪೆಯನ್ನು ಎಳಸಿ ಕಾಳನ್ನು ಮಣ್ಣಿನಲ್ಲಿ ಮುಚ್ಚುವರು. ಎಟ್ಟಪೆಯಿಂದ ಭಾರಾ ಇಡುವುದರಿಂದಾ ಮಣ್ಣು ಘಟ್ಟಿಯಾಗಿ ತೇವವು ಜೀಗ ಆರುವದಿಲ್ಲ. ರಾಗಿ ಮೊಳಕೆ 4-5 ದಿನದಲ್ಲೆ ಮೇಲೆ ಕಾಣಿಸುವುದು. ಬಿತ್ತಿದ 15 ದಿನಕ್ಕೆ ಸಾಲಿಗೆ ಅಡ್ಡವಾಗಿ ಹರಗುತ್ತಾರೆ. ಇದರಿಂದಾ ಒತ್ತಾದ ಪೈರು ಕಳೆಗಳು

ಎಬ್ಬಲ್ಪಡುತ್ತವೆ. ಭೂಮಿಯು ಸಡಿಲವಾಗುತ್ತದೆ. ತಿಂಗಳು ಪೈರು ಅದಾಗ ಪುನಃ ನಾಲಿಗೆ ಕೋರೆಯಾಗಿ ಹರಗುತ್ತಾರೆ. ಪೈರು ಒತ್ತಾಗಿದ್ದರೆ ಪುನಃ ಒಂದುಸಾರಿ ಹರಗುವುದೂ ಉಂಟು. ಎರಡು ತಿಂಗಳು ಪೈರು ಅದಾಗ ಕಳೇ ಕೀಳುತ್ತಾರೆ. ಮೂರು ತಿಂಗಳಿಗೆ ಹೊಡೆಗೆ ಬರುವದು. ಅದಕ್ಕೆ ಮುಂಚೆ ಕೆಲವುಕಡೆ ಸಣ್ಣನೇಗಲಿನಿಂದಾ ಪೈರಿನ ಮಧ್ಯದಲ್ಲಿ ಉಳುವದೂ ಗೀಚುವದೂ ಉಂಟು. ಇದಕ್ಕೆ ಮೂಸೆಸಾಲು ಹೊಡೆಯುವದೆಂದು ಹೆಸರು. ಇದರಿಂದ ಪೈರು ಮತ್ತಿಷ್ಟು ಚೆನ್ನಾಗಿ ಬೆಳೆಯುವುದು ನಾಲ್ಕು ತಿಂಗಳಿಗೆ ಕಾಳು ಹಾಲು ಹಿಡಿಯುವುದು. ಮಾರ್ಗಶಿರವಾಸ ಸುಮಾರಿಗೆ ಕಾಳು ಬಲಿತು ಗರಿ ತೆನೆಸಹಾ ಒಣಗಲಾರಂಭಿಸುವುದು. ಆಗ ಒಳ್ಳೇಹದದಲ್ಲಿ ಕೊಯ್ದು ಚೆನ್ನಾಗಿ ಒಣಗಿಶಿ ಕಂತೆಕಟ್ಟಿ ಮೆದೆ ಹಾಕುತ್ತಾರೆ. ಕೆಲವುಕಡೆ ಕಂತೆ ಕಟ್ಟದೆ ಅರಿಯುನ್ನೆ ಮೆದೆ ಹಾಕುತ್ತಾರೆ. ಇನ್ನು ಕೆಲವುಕಡೆ ಮೊದಲು ತೆನೆಗಳನ್ನು ಕೊಯ್ದು ಕೊಳ್ಳುತ್ತಾರೆ.

ಸಜ್ಜೆ— ಭರಣಿ ಕೃತ್ತಿಕೆಯಲ್ಲಿ ಬಿತ್ತುವದು.

ಯಳ್ಳು— ,, ,,

ಕಾರುರಾಗಿ— ,, ,,

ಹುರಳಿ— ಪುಬ್ಬ ಉತ್ತರೆ ,,

ಕಡೆ — ಹಸ್ತ ಚಿತ್ತೆ ಸ್ವಾತಿ ,,

ದನಗಳು ಕೆಡುವವಕ್ಕೆ ಕಾರಣಗಳು.—

ದನಕ್ಕೆ ಬೇಕಾದಷ್ಟು ತಿಂಡಿ ಹಾಕುವದಿಲ್ಲ. ಹಗಲು ಮೇಳೆ ಮೇಯುವದಕ್ಕೆ ಗೋಮಾಳ ವಿಸ್ತಾರವಾಗಿಇಲ್ಲ. ಗೋಮಾಳ ವಿದ್ದರೂ ಅದು ಕುಸ್ಕಿ ಯಲ್ಲದ ಬಂಜರಾದುದರಿಂದಾ ಅಪರಲ್ಲಿ ಪುಷ್ಟಿಕರವಾದ ಹುಲ್ಲು ಬೆಳೆಯುವುದಿಲ್ಲ. ರಾತ್ರಿಮೇಳೆ ಹುಲ್ಲು ಹಾಕುವುದು ಅಪರೂಪ. ಇತರವಿಧವಾದ ತಿಂಡಿಗಳು ಸಾಧಾರಣ ದನಕ್ಕೆ ಕೊಡುವುದೇ ಇಲ್ಲ. ಕಾಳು ತೆಗೆದುಕೊಂಡ ನಂತರ ಉಳಿಯುವ ಹುಲ್ಲನ್ನು ಕೆಲವುಕಡೆ ಹಾಕಿದರೂ ಕಮ್ಮಿ ಆದುದರಿಂದಾ ಪುಷ್ಟಿಕರವಾಗಿ ಇರುವುದಿಲ್ಲ. ಈ ಕಾರಣಗಳಿಂದ ದನಗಳು ಹೊಟ್ಟೆಗೆ ನಾಲದೆ ಕೆಟ್ಟು ಹೋಗುತ್ತವೆ. ಮೇವಿಗಾಗಿ ಬೇರೆ ಪೈರುಗಳನ್ನು ಬೆಳಿಸುವ ಪದ್ಧತಿಯಿಲ್ಲ.

ಅನೇಕಕಡೆ ದನಗಳಿಗೆ ಕೊಟ್ಟಿಗೆ ಇಲ್ಲದೆ ಸುತ್ತು ಬೇಲಿಹಾಕಿ ಬೈಲಿನಲ್ಲಿ ನಿಲ್ಲಿಸುತ್ತಾರೆ. ಅಲ್ಲಿ ಅವು ಗಾಳಿ, ಚಳಿ ಮಳೆ ಇಬ್ಬನಿಗಳಿಗೆ ಸಿಕ್ಕಿ ಸಗಣಿ ಗಂಜಲದ ಕೆಸರುಗಳಲ್ಲಿ ರಾತ್ರಿಯೆಲ್ಲಾ ನಿಂತು ಕಾಲಾ ಕಳೆಯುತ್ತವೆ. ವಿಶ್ರಮಿಸಿಕೊಳ್ಳುವದಕ್ಕೆ ಅನುಕೂಲವಾದ ಸ್ಥಳವಿಲ್ಲದೆ ಹೀಗೆ ರೋಗದಿಂದ ಕಷ್ಟಪಟ್ಟು ಕುಂದಿ ಹೋಗು

ತ್ಮವೆ. ಅನೇಕಕಡೆ ಕೊಳೆತ ಕೆಟ್ಟ ನೀರನ್ನು ಕುಡಿಸುವುದರಿಂದ ರೋಗಬಂದು ದನ ಕೆಡುವುದು.



ಸೂಚನೆ ಮತ್ತು ಸಮಾಚಾರ.

ಗವರ್ನ್ಮೆಂಟಿನವರು ಮೈಸೂರು ಮಹಾರಾಣಿಯವರ ಕಾಲೇಜು ಲೇಡಿ ಸೂಪರಿಂಟೆಂಡೆಂಟ್ ರಾದ ಮಿಸ್ ಜೆ. ಯಲ್ ಸೇಲ್‌ಥಾರ್ಪ್‌ಯವರನ್ನು A II (Rs 400-50-700) ಕ್ಲಾಸಿಗೆ ಬಡ್ತಿ ಮಾಡಿರುತ್ತಾರೆ. ಇವರತಲಬು 1—6—06 ರಲಾಗಾಯಿತು Rs 550 ರೂಪಾಯಿನಿಂದ ಪ್ರಾರಂಭವಾಗತಕ್ಕುದು.

ಗವರ್ನ್ಮೆಂಟಿನವರು ಮಹಾರಾಣಿ ಕಾಲೇಜಿನ ಇಬ್ಬರು ಲೇಡಿ ಗ್ರಾಜುಯೇಟ್ಸರವರನ್ನು C III (Rs 100—10—210) ಗ್ರೇಡಿಗೆ ಬಡ್ತಿ ಮಾಡಿರುತ್ತಾರೆ. ಇವರತಲಬು 1—7—06ರ ಲಾಗಾಯಿತು 170 ರೂಪಾಯಿನಿಂದ ಪ್ರಾರಂಭವಾಗತಕ್ಕುದು.

ಈ ಕೆಳಗೆ ನಮೂದಿಸಿರುವ ಹೈಸ್ಕೂಲ್ ಹೆಡ್ಮಾಸ್ಟರುಗಳ ವರ್ಗಾವರ್ಗಿಯನ್ನು ಮಂಜೂರು ಮಾಡಿರುತ್ತಾರೆ.

(1) ಮೆ॥ ಸಿ. ಕೃಷ್ಣರಾಯರವರು ಸರ್ಕಲ್ ಇನ್‌ಸ್ಪೆಕ್ಟರ್ ಆಗಿ ನೇಮಕವಾದುದರಿಂದ ಚಿಕ್ಕಬಳ್ಳಾಪುರದ ಹೈಸ್ಕೂಲ್ ಹೆಡ್ಮಾಸ್ಟರಾದ ಮೆ॥ ಟಿ. ಸುಬ್ರಹ್ಮಣ್ಣಯ್ಯರ್ ಬಿ. ಎ. ಯವರು ತುಮಕೂರು ಹೈಸ್ಕೂಲ್ ಹೆಡ್ಮಾಸ್ಟರಾಗಿ ಕೆಲಸನೋಡತಕ್ಕುದು.

(2) ಚನ್ನಪಟ್ಟಣದ ಹೈಸ್ಕೂಲ್ ಹೆಡ್ಮಾಸ್ಟರು ಮೆ॥ ಎಂ. ಕೃಷ್ಣೈಯಂಗಾರ್ ಬಿ. ಎ. ಯವರು ಚಿಕ್ಕಬಳ್ಳಾಪುರದ ಹೈಸ್ಕೂಲ್ ಹೆಡ್ಮಾಸ್ಟರಾಗಿರತಕ್ಕದ್ದು. ಆದರೆ ಮೈಸೂರು ಮಹಾರಾಜಾ ಕಾಲೇಜು ಪ್ರಿನ್ಸಿಪಾಲ್ ರವರಾದ ಮೆ ॥ ವಿಯರ್ ಸಾ॥ ರವರು, ಬೇರೆ ಕೆಲಸದಮೇಲೆ ಇರುವವರೆಗೂ, ಇವರು ಸದರಿ ಕಾಲೇಜಿನಲ್ಲಿ ಕೆಲಸನೋಡತಕ್ಕುದು.

(3) ಮೈಸೂರು ನಾರ್ಮಲ್ ಸ್ಕೂಲು ಹೆಡ್ಮಾಸ್ಟರಾದ ಮೆ॥ ಕೆ. ನಾರಣಯ್ಯಂಗಾರ್‌ರವರು ಚೆನ್ನಪಟ್ಟಣದ ಹೈಸ್ಕೂಲ್ ಹೆಡ್ಮಾಸ್ಟರಾಗಿರತಕ್ಕುದು.

(4) ನಾರ್ಮಲ್ ಸ್ಕೂಲಿನಲ್ಲಿ ಅಸಿಸ್ಟೆಂಟುಮಾಸ್ಟರಾಗಿರುವ ಮೆ॥ ಯಮ್. ಹಿರಿಯಣ್ಣಯ್ಯ ಎಂ.ಎ. ಯಲ್. ಟಿ. ಯವರು ಸದರಿ ಸ್ಕೂಲಿನ ಹೆಡ್ಮಾಸ್ಟರಾಗಿ ಕೆಲಸನೋಡತಕ್ಕುದು.

5 ಮೆ॥ ಹಿರಿಯಣ್ಣನವರು ನಾರ್ಮಲ್ ಸ್ಕೂಲ್ ಹೆಡ್ಮಾಸ್ಟರಾಗಿ ನಿಯಮಿಸಲ್ಪಟ್ಟುದರಿಂದ ಸದರಿಯವರ ಕೆಲಸಕ್ಕೆ ಮೈಸೂರು ಮಾಹಾರಾಜಾ ಕಾಲೇಜಿನ ಸಹಾಯೋಪಾಧ್ಯಾಯರಾದ ಮೆ॥ ವೆಂಕಟರಾಮಯ್ಯ ಬಿ. ಎ. ಯವರನ್ನು ನೇಮಿಸಿದಾರೆ. ಮತ್ತು ಇವರನ್ನು C IV (50—$\frac{1}{2}$0—100) ಗ್ರೇಡಿಗೆ ಪ್ರಮೋಷ್ಟ ಮಾಡಿರುತ್ತಾರೆ.

(6) ಮೆ॥ ವೆಂಕಟಸಾವಿ-ನಾಯುಡುರವರು ರಜಾದಮೇಲೆ ಇರುವವರಿಗೂ ಮೆ॥ ಚಕ್ರವರ್ತಿ ಅಯ್ಯಂಗಾರ್ ಬಿ. ಎ. ಯವರು ಮಹಾರಾಜಾ ಕಾಲೇಜಿನಲ್ಲಿ. D I (30—$\frac{1}{2}$—50) ನೇ ಗ್ರೇಡಿನಲ್ಲಿ 50 ರೂಪಾಯಿ ತಲಬಿನಲ್ಲಿ ಅ॥ ಮಾಸ್ಟರಾಗಿ ಕೆಲಸನೋಡತಕ್ಕುದು.

ಈ ಕೆಳಗೆ ನಮೂದಿಸಿರುವುವರು ಹೊಸದಾಗಿ ಲ॥ ಡೆ॥ ಇನ್ಸ್ಪೆಕ್ಟರಾಗಿ C VI (50—$\frac{1}{2}$0—100) ನೇ ಗ್ರೇಡಿನಲ್ಲಿ ಕೆಲಸ ನೋಡುವಂತೆ ಮಂಜೂರು ಮಾಡಿರುತ್ತಾರೆ. ಇವರುಗಳು ಈಕೆಳಗೆ ನಮೂಸಿರುವ ಸ್ಥಳಗಳಲ್ಲಿ ಕೆಲಸ ನೋಡತಕ್ಕುದು.

(1) ಶಿವಮೊಗ್ಗಾ ನಾರ್ಮಲ್ ಸ್ಕೂಲ್ ಹೆಡ್ಮಾಸ್ಟರಾದ ಮೆ॥ ಎಂ ಲಕ್ಷ್ಮಿನರಸಿಂಹಯ್ಯ ಬಿ. ಎ. ಯವರು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಅ॥ ಡೆಪ್ಟಿ ಇನಸ್ಪೆಕ್ಟರಾಗಿ 50 ರೂಪಾಯಿ ತಲಬಿನಮೇಲೆ ಕೆಲಸ ನೋಡತಕ್ಕುದು.

(2) ಮೆ॥ ತಿರುಮಲಾಚಾರ್ರವರು ಲೋಕಲ್ ಯಗ್ಜಾಮಿನೇಷ್ಟ ಆಫೀಸಿನ ಮ್ಯಾನೆಜರಾಗಿ ವೊಕರೂರು ಆದುದರಿಂದ ಅವರ ಬದಲು ವೆಸ್ಟ್ ಸರ್ಕಲ್, ಇನಸ್ಪೆಕರವರ ಆಫೀಸು ಹೆಡ್‌ಕ್ಲಾರ್ಕ್‌ರಾದ ಮೆ॥ ಪಿ. ಅನಂತಸುಬ್ಬರಾಯರನ್ನು ನೇಮಿಸಿ 50 ರೂಪಾಯಿ ತಲಬಿನಮೇಲೆ ತುಮಕೂರು ಡಿಸ್ಟ್ರಿಕ್ಟಿಗೆ ವರ್ಗಾಯಿಸಿರುತ್ತಾರೆ.

(3) ಮಹಾರಾಣಿ ಕಾಲೇಜಿನ ಸಹಾಯೋಪಾಧ್ಯಾಯರಾದ ಮೆ॥ ಅಳ್ವಾರ್ ಅಯ್ಯಂಗಾರ್ ಬಿ. ಎ. ಯವರನ್ನು ಹೊಸದಾಗಿ ಲ॥ ಡೆಪ್ಟಿ ಇನ್ಸ್ಪೆಕ್ಟರಾಗಿ ನೇಮಿಸಿ 50 ರೂಪಾಯಿ ತಲಬಿನಮೇಲೆ ತುಮಕೂರು ಡಿ॥ ಪೋಸ್ಟುಮಾಡಿರುತ್ತಾರೆ.

(4) ಕೋಲಾರದ ನಾರ್ಮಲ ಸೂಲ್ ಹೆಡ್ಮಾಸ್ಟರಾದ ಮೆ॥ ತಿರನಾರಣಯ್ಯಂಗಾರ್ ಯವರನ್ನು ಹೊಸದಾಗಿ ಲ॥ ಡೆ॥ ಇನ್ಸ್ಪೆಕ್ಟರಾಗಿ ನೇಮಿಸಿ 50 ರೂಪಾಯಿ ತಲಬಿನಮೇಲೆ ಕೋಲಾರದ ಡಿ॥ ಪೋಸ್ಟುಮಾಡಿರುತ್ತಾರೆ.

(5) ಚನ್ನಪಟ್ಟಣದ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಟಿ. ವಿ. ಕೃಷ್ಣರಾಯರನ್ನು ಹೊಸದಾಗಿ ಲ॥ ಡೆ॥ ಇನ್ ಸ್ಪೆಕ್ಟರಾಗಿ ನೇಮಿಸಿ 50 ರೂಪಾಯಿ ತಲಬಿನಮೇಲೆ ಬೆಂಗಳೂರು ಡಿ॥ ಪೋಸ್ಟು ಮಾಡಿರುತ್ತಾರೆ.

(6) ಚಿಕ್ಕಮಗಳೂರು ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಬಿ.

ರಾಮಯ್ಯನವರನ್ನು ಆ॥ ಡೆ॥ ಇನ್‌ಸ್ಪೆಕ್ಟರಾಗಿ ಮೊಕರೂರುಮಾಡಿ ಶಿವಮೊಗ್ಗಾ ಡಿ॥ ಗೆ ಪೋಸ್ಟು ಮಾಡಿರುತ್ತಾರೆ.

(7) ಕೋಲಾರದ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಸಿ. ಸುಬ್ಬರಾವ್ ಬಿ. ಎ. ಯವರನ್ನು ಆ॥ ಡೆ॥ ಇನಸ್ಪೆಕ್ಟರವರಾಗಿ ಮೊಕರೂರುಮಾಡಿ ಈಗ ಇವರಿಗೆ C VI ಗ್ರೇಡ್ ಅನುಸರಿಸಿ ಹಾಲಿ ಸಲ್ಲುತ್ತಿರುವ 80 ರೂಪಾಯಿ ತಲಬಿನಮೇಲೆ ಚಿತ್ರದುರ್ಗದ ಡಿ॥ ಗೆ ಪೋಸ್ಟು ಮಾಡಿರುತ್ತಾರೆ.

(8) ಮೆ॥ ಸಿ. ಸುಬ್ಬರಾಯರವರನ್ನು ಆ॥ ಡೆ॥ ಇನ್‌ಸ್ಪೆಕ್ಟರವರಾಗಿ ಮೊಕರೂರು ಮಾಡಿದ ಸಂದರ್ಭದಲ್ಲಿ, ಮಹಾರಾಣಿಕಾಲೇಜಿನ ಸಹಾಯೋಪಾಧ್ಯಾಯರಾದ ಮೆ॥ ಹೆಚ್. ಕೃಷ್ಣಪೂಜಾರ್ ಬಿ. ಎ. ಯವರಿಗೆ C IV ಕ್ಲಾಸಿಗೆ ಬಡ್ತಿ ಮಾಡಿರುತ್ತಾರೆ.

(9) ಆ॥ ಡೆ॥ ಇನ್‌ಸ್ಪೆಕ್ಟರಾಗಿ ಮೊಕರೂರು ಆದ ಮೆ॥ ಸಿ. ಸುಬ್ಬರಾಯರವರ ಬದಲಿ ಮೆ॥ ಪಾಂಡುರಂಗರಾವ್ ಬಿ. ಎ. ಯಲ್. ಟಿ. ಯವರನ್ನು ಕೋಲಾರದ ಹೈಸ್ಕೂಲ್ ಸಹಾಯೋಪಾಧ್ಯಾಯರಾಗಿ D I (30—$\frac{1}{2}$—50) ಗ್ರೇಡಿನಲ್ಲಿ 50 ರೂಪಾಯಿ ತಲಬಿನಮೇಲೆ ಮೊಕರೂರು ಮಾಡಿರುತ್ತಾರೆ.

(10) ಮೆ॥ ಲಕ್ಷ್ಮೀನರಸಿಂಹಯ್ಯನವರ ಒದಲಿ ತೀರ್ಥಹಳ್ಳಿ ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಹೆಡ್ಮಾಸ್ಟರಾದ ಮೆ॥ ವೆಂಕಟಕೃಷ್ಣಯ್ಯ ಬಿ. ಎ. ಯಲ್. ಟಿ. ಯವರನ್ನು ಶಿವಮೊಗ್ಗಾ ನಾರ್ಮಲ್ ಸ್ಕೂಲ್ ಹೆಡ್ಮಾಸ್ಟರಾಗಿ (40—2—50) ಗ್ರೇಡಿನಲ್ಲಿ 46 ರೂಪಾಯಿ ತಲಬಿನ ಮೇಲೆ ಮೊಕರೂರು ಮಾಡಿರುತ್ತಾರೆ.

(11) ಹಾಸನದ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಮಾಧವರಾವ್ ಬಿ. ಎ. ಯವರನ್ನು ಮೆ॥ ಅಳ್ವಾರ್ ಅಯ್ಯಂಗಾರ್‌ರವರ ಬದಲಿ ಮಹಾರಾಣಿಯವರಕಾಲೇಜಿಗೆ ವರ್ಗ ಮಾಡಿರುತ್ತಾರೆ.

(12) ಮೆ॥ ಮಾಧವರಾಯರ ಬದಲಿ ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ಸೆ॥ ಸೀತಾರಾಮಯ್ಯನವರನ್ನು D I (30—$\frac{1}{2}$—50) ನೇ ಗ್ರೇಡಿನಲ್ಲಿ 30 ರೂಪಾಯಿ ತಲಬಿನಮೇಲೆ ಮೊಕರೂರು ಮಾಡಿರುತ್ತಾರೆ.

(13) ಮೆ॥ ಬಿ. ರಾಮಯ್ಯ ಸೆಂಬುವರನ್ನು ಆ॥ ಡೆ॥ ಇನ್‌ಸ್ಪೆಕ್ಟರಾಗಿ ನೇಮಿಸಿದ ಸಂದರ್ಭದಲ್ಲಿ ಅವರ ಬದಲು ಮೈಸೂರು ನಾರ್ಮಲ್ ಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ರಾಘವೇಂದ್ರಾಚಾರ್ಯರನ್ನು D I (30—$\frac{1}{2}$—50) ಗ್ರೇಡಿನಲ್ಲಿ 30 ರೂಪಾಯಿ ತಲಬಿನಮೇಲೆ ಚಿಕ್ಕಮಗಳೂರು ಹೈಸ್ಕೂಲ್ ಸಹಾಯೋಪಾಧ್ಯಾಯರಾಗಿ ಮೊಕರೂರು ಮಾಡಿರುತ್ತಾರೆ.

1907 ನೇ ಸಂವತ್ಸರದ ದಿನಚರಿಯು.

ಈ ರಾಯಲ್ ಡೈರಿಗಳು ಬಳ್ಳೇ ಸುಂದರವಾದ ಗ್ಲೇಜ್ ಕಾಗದ ಮೇಲೆ ಸೊಗಸಾದ ಅಕ್ಷರಗಳಿಂದ ಮುದ್ರಿತವಾಗಿವೆ. ಇದರಲ್ಲಿ 1907 ನೇ ವರ್ಷದ ಪಂಚಾಂಗ, ವಷೋರ್ತ್ಸವಗಳೂ, ಸರ್ಕಾರಿ ರಜಾ ದಿವಸಗಳೂ, ಆಯಾಯ ಮತಸ್ಥರಿಗೆ ಮಾತ್ರ ರಜಾ, ಕ್ರಿಶ್ಚಿಯನರ ರಜಾ, ಗ್ರಹಣಗಳು, 1907 ನೇ ಸಂವತ್ಸರದಲ್ಲಿನ ಏಕಾದಶಿ, ಅಮಾವಾಸ್ಯೆ, ಪೂರ್ಣಿಮೆ, ಸಂಕ್ರಮಣ, 1907 ರಲ್ಲಿ ಬರುವ ಹಬ್ಬಗಳೂ ಮತ್ತು ವಿಶೇಷದಿವಸಗಳೂ, ಟಪಾಲಿನ ಮುಖ್ಯ ವಿಷಯಗಳು, ಕ್ವಾರಕ್ಕೆ ದಿವಸಗಳು, ಸ್ಟ್ಯಾಂಪು ಆಕ್ಟ್, ರಿಜಿಸ್ಟ್ರೇಷೀ, ಕೋರ್ಟು ಫೀ ಆಕ್ಟು, ಮೇಜಿಸ್ಟ್ರೇಟರಿಗೆ ಇರತಕ್ಕ ಅಧಿಕಾರ, ಹಲ್ಲು ಬಿದ್ದದ್ದಕ್ಕೆ ಫಲಗಳು, ಪ್ರತಿದಿನದ ಸಂಬಳವನ್ನು ತೋರಿಸುವ ಪಟ್ಟಿ, ಗೌರೀ ಪಂಚಾಂಗ, ಹಿಂದೂ ಸಂವತ್ಸರಗಳು, ರಾಹು ಗುಳಿಕ ಕಾಲ, ಯದುವಂಶ ರತ್ನಾಕರ, ಮೈಸೂರುದೇಶದಲ್ಲಿರುವ ನ್ಯಾಯನಿರ್ಣಕರು ಜಿನ್ನದತೂಕ, ಭೂಮಿಯ ಚದರಳತೆ, ಕುಷ್ಮೀ ಬೀಜವರಿ, ತರೀ ಬೀಜವರಿ, ತೂಕಗಳು, ಅಳತೆಗಳು, ವಾರಶೂಲೆ, ಹಲ್ಲು ಬಿದ್ದದ್ದಕ್ಕೆ ಪರಿಹಾರ, ಪ್ರಯಾಣಪ್ರಕರಣ, ಪ್ರಯಾಣಕ್ಕೆ ಶುಭನಕ್ಷತ್ರಗಳು, ಇಂಡಿಯಾದಲ್ಲಿ ಗೌರವಾರ್ಥವಾಗಿ ಹಾರಿಸತಕ್ಕ ತೋಪುಗಳವಿವರ, ರೈಲ್ವೆ ಪಾರ್ಸಲ್ ಛಾರ್ಜು, ಪ್ಲವಂಗಸಂವತ್ಸರದ ಫಲವಿಚಾರ, ಮುಂತಾದ ಅನೇಕ ವಿಷಯಗಳಿಂದ ಕೂಡಿದೆ. ಹೋದವರ್ಷ ಎರಡುಸಲ ಡೈರಿಗಳು ಮುದ್ರಿತವಾದರೂ ಅನೇಕರಿಗೆ ರಾಯಲ್‌ಡೈರಿಗಳು ಸಿಕ್ಕಲಿಲ್ಲ. ಆದುದರಿಂದ ಜಾಗ್ರತೆಯಾಗಿ ತರಿಸಿಕೊಂಡರೆ ಉತ್ತಮ.

ನಂ ೧ ದೊಡ್ಡಸೈಜು ... ... ೦—೮—೦

" ೨ " ಮುಚ್ಚಳ, ಪೆನ್ಸಿಲ್ ಇರತಕ್ಕವು ೦—೧೦-೦

" ೩ ಚಿಕ್ಕಸೈಜು, ಮುಚ್ಚಳ, ಪೆನ್ಸಿಲ್ ಇರತಕ್ಕವು ೦—೬—೦

" ೪ " ... ... ೦—೪—೦

೧೦ ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಪ್ರತಿ ಉಚಿತ.

ಓ ಜನರಲ್ ಏಜೆನ್ಸಿ, ಮೈಸೂರು.

PRINTED AT THE G. T. A. PRESS,—MYSORE.

* ವಿದ್ಯಾದಾಯಿನಿ. *

ಭಾಗ ೧೪.] ಸೆಪ್ಟಂಬರ್—೧೯೦೬. [ಸಂಚಿಕೆ ೯.

ವಿದ್ಯಾಭ್ಯಾಸ.

ಇಂಗ್ಲೆಂಡ್ ದೇಶದ ಪ್ರಸಿದ್ಧ ಪಂಡಿತನಾದ ಹರ್ಬರ್ಟ್ ಸ್ಪೆನ್ಸರನು ವಿದ್ಯಾಭ್ಯಾಸವನ್ನು ಕುರಿತು ಒಂದು ಗ್ರಂಥವನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದಿರುವನು. ಆತನ ಅಭಿಪ್ರಾಯವು ಬಹು ಉತ್ಕೃಷ್ಟವಾಗಿರುವುದರಿಂದ ಕನ್ನಡ ವಾಚಕರ ಪ್ರಯೋಜನಕ್ಕಾಗಿ ಅದರ ಮುಖ್ಯಸಾರವು ಇಲ್ಲಿ ತಿಳಿಸಲ್ಪಡುವುದು. ಆತನ ಅಮೂಲ್ಯವಾದ ಈ ಗ್ರಂಥವು ನಾಲ್ಕು ಪ್ರಕರಣಗಳಾಗಿ ವಿಭಾಗಿಸಲ್ಪಟ್ಟಿವೆ ಅವುಗಳಲ್ಲಿ ಕ್ರಮವಾಗಿ ಯಾವ ವಿಜ್ಞಾನವು ಅತ್ಯಂತಮೂಲ್ಯವಾದುದು?, ಬುದ್ಧಿವ್ಯವಸಾಯ, ನೀತಿವ್ಯವಸಾಯ, ದೇಹವ್ಯವಸಾಯ ಎಂಬ ಈ ವಿಷಯಗಳು ವಿಸ್ತಾರವಾಗಿ ತಿಳಿಸಲ್ಪಟ್ಟಿದುವುವು. ಅವುಗಳೇ ಇಲ್ಲಿ ಸಂಕ್ಷೇಪವಾಗಿ ಸೂಚಿಸಲ್ಪಡುವುವು.

ಯಾವ ವಿಜ್ಞಾನವು ಅತ್ಯಂತಮೂಲ್ಯವಾಗುವುದು?

ಆದಿಯಲ್ಲಿ ಜನರು ಕೇವಲ ದೇಹಾಲಂಕಾರವನ್ನು ಮಾಡಿಕೊಳ್ಳುತ್ತಿದ್ದು ಆ ಮೇಲೆ ಕ್ರಮೇಣ ಉಡುಪನ್ನು ಹಾಕಿಕೊಳ್ಳಲು ಕಲಿತರೆಂಬುದು ಸತ್ಯವಾಗಿದೆ. ಇದಕ್ಕೆ ಅನೇಕ ನಿದರ್ಶನಗಳುಂಟು. ಕೆಲವರು ಅಂದವಾಗಿ ಹಚ್ಚೆ ಚುಚ್ಚಿಸಿಕೊಳ್ಳಲು ಬಹು ದೇಹಯಾತನೆಯನ್ನಾದರೂ ಸಹಿಸುವರೇ ಹೊರತು ವಿಶೇಷವಾದ ಶೀತೋಷ್ಣ ಬಾಧೆಗಳನ್ನು ನಿವಾರಣ ಮಾಡಿಕೊಳ್ಳಲು ಪ್ರಯತ್ನಿಸರು. ತನ್ನ ದೇಹ ಸೌಖ್ಯಕ್ಕಾಗಿ ಧನಾರ್ಜನೆ ಮಾಡಲೊಲ್ಲದ ಓರಿನೋಕೊ ನಿವಾಸಿಯು ಸ್ವದೇಶೀಯರು ಮೆಚ್ಚುವಂತೆ ಮೈಗೆ ಬಳಿದುಕೊಳ್ಳುವ ಬಣ್ಣವನ್ನು ಕೊಂಡುಕೊಳ್ಳಲು ಬೇಕಾಗುವ ಹಣವನ್ನು ಸಂಪಾದಿಸಲು ಹನಿನೈದು ದಿವಸವಾದಾಗ್ಯೂ ಕಷ್ಟಪಟ್ಟು ಕೆಲಸ ಮಾಡುವನು; ಮತ್ತು ಮೈಸೀಲೆ ಒಂದು ಬಟ್ಟೆಯು ತುಂಡೂ ಇಲ್ಲದೆ ತನ್ನ ಗುಡಿಸ

ಲನ್ನು ಬಿಟ್ಟು ಹೊರಕ್ಕೆ ಹೋಗಲು ಅಂಜದ ಹಿಡಿಸೋಕೊ ಸ್ತ್ರೀಯು ಮೈಗೆ ಬಣ್ಣ ಬಳಿದುಕೊಳ್ಳದೆ ಹೊರಗೆ ಹೋಗಿ ಸ್ವದೇಶ ಮರ್ಯಾದೆಯನ್ನತಿಕ್ರಮಿಸಲು ಭಯಪಡುವಳು ಎಂದು ಹಂಬೋಲ್ಟನು ಹೇಳಿರುವನು. ವನ್ಯರು ಬಟ್ಟೆಗಳಿಂತ ಬಣ್ಣದ ಮಣಿಗಳನ್ನೂ ಒಡವೆಗಳನ್ನೂ ಹೆಚ್ಚಾಗಿ ಅಪೇಕ್ಷಿಸುವುದನ್ನು ಸಮುದ್ರಯಾತ್ರಿಕರು ಕಂಡಿರುವರು. ಅಂಗಿಗಳನ್ನು ಕೊಟ್ಟಾಗ ಕಾಡುಜನರು ಅವನ್ನು ನಗೆಬರುವಂತೆ ಸಿಕ್ಕ ಹಾಗೆ ಮೈಗೆ ಸುತ್ತಿಕೊಳ್ಳುವರೆಂದು ಕಥೆಗಳನ್ನು ಕೇಳಿರುವೆವು.

ಇದರಿಂದ ವನ್ಯರು ಪ್ರಯೋಜನಕ್ಕಿಂತ ಅಲಂಕಾರವನ್ನೇ ಪ್ರಾಮುಖ್ಯವಾಗಿ ಎಣಿಸುವರೆಂದು ವ್ಯಕ್ತವಾಗುವುದು. ಇಷ್ಟೇ ಅಲ್ಲ. ಇನ್ನೂ ಅತಿಶಯವಾದ ಉದಾಹರಣೆಗಳಿರುವುವು. ಆಫ್ರಿಕ ದೇಶೀಯರಾದ ತನ್ನ ಸೇವಕರು ಮಳೆ ಜಳಿ ಇಲ್ಲದಾಗ ಅಡಿನ ಚರ್ಮವನ್ನು ಹೊದ್ದುಕೊಂಡು ಡಂಭವಾಗಿ ಓಡಾಡುವರು; ಚಳಿ ಇದ್ದಾಗ ಅವನ್ನು ಮಡಿಸಿಟ್ಟು ಬರೀ ಮೈಯಲ್ಲಿ ಮಳೆಯಲ್ಲಿ ನಡುಗುತ್ತಾ ಹೋಗುವರು ಎಂದು ಸೇನಾಪತಿಯಾದ ಸ್ಪೆಕನು ಹೇಳಿರುವನು. ಹೀಗೆ ವನ್ಯರ ಚರ್ಯೆಯನ್ನು ಪರೀಕ್ಷಿಸಿದರೆ ನಿಜವಾಗಿಯೂ ಅಲಂಕಾರದಿಂದಲೇ ಕ್ರಮೇಣ ವಸ್ತ್ರಧಾರಣೆಯು ಉಂಟಾಯಿತೆಂದು ತೋರುತ್ತದೆ. ಈಗ ನಮ್ಮಗಳಲ್ಲಿಯೂ ಕೂಡ ಹೆಚ್ಚು ಜನರು ಬಟ್ಟೆಗಳು ಬೆಚ್ಚಗೆ ಅನುಕೂಲವಾಗಿವೆಯೋ ಎಂದು ನೋಡುವ್ರದಕ್ಕೆ ಬದಲಾಗಿ ಹಸನಾಗಿ ಮಾದರಿಯಾಗಿವೆಯೋ ಎಂಬುದರಲ್ಲಿಯೇ ಹೆಚ್ಚಾಗಿ ದೃಷ್ಟಿ ಇಡುವರು. ಈ ರೀತಿಯಲ್ಲಿ ಪ್ರಯೋಜನಕ್ಕಿಂತ ನೋಟಕ್ಕೆ ಅಧಿಕ ಪ್ರಾಶಸ್ತ್ಯವನ್ನು ಕೊಡುವುದರಿಂದ, ಅಲಂಕಾರದಿಂದಲೇ ಉಡುಪುಂಟಾಯಿತೆಂದು ಊಹಿಸಲು ಮತ್ತಷ್ಟು ಆಧಾರವಿರುತ್ತದೆ.

ಮನಸ್ಸಿನ ವಿಷಯದಲ್ಲಿಯೂ ಇಂಥಾ ಸಂಬಂಧವೇ ಇರುವುದು ಆಶ್ಚರ್ಯ. ದೇಹ ವಿಷಯದಲ್ಲಿ ಹೇಗೋ ಹಾಗೆ ಮನೋ ವಿಷಯದಲ್ಲಿಯೂ ಕೂಡ ಸ್ವಯೋಜನಕ್ಕೆ ಬದಲಾಗಿ ಮೊದಲು ಅಲಂಕಾರಕ್ಕೇ ಪ್ರಾಶಸ್ತ್ಯವು ಬಂದಿದೆ. ಪೂರ್ವದಲ್ಲಿ ಮಾತ್ರವಲ್ಲದೆ ನಮ್ಮ ಈ ಕಾಲದಲ್ಲಿಯೂ ಕೂಡ ನೈಮಕಾನಿಯಾದ ವಿದ್ಯೆಯು ತ್ಯಜಿಸಲ್ಪಟ್ಟು ಹೊಗಳಿಕೆಯನ್ನು ಕರುವ ವಿದ್ಯೆಯು ಮೊದಲು ಕಲಿಯಲ್ಪಡುವುದು. ಪೂರ್ವದ ಗ್ರೀಕ್ ಪಾಠಶಾಲೆಗಳಲ್ಲಿ ಸಂಗೀತ ಸಾಹಿತ್ಯ ಅಲಂಕಾರ ದರ್ಶನಗಳು ಕಲಿಯುತಕ್ಕ ಮುಖ್ಯ ವಿಷಯಗಳಾಗಿಯೂ ಜೀವನಕ್ಕೆ ಸಹಾಯಕವಾದ ವಿದ್ಯೆಗಳು ಗೌಣವಾಗಿಯೂ ಇದ್ದುವು. ಸೊಕ್ರಾಟಿಸನು ಉಪದೇಶ ಮಾಡುವುದಕ್ಕೆ

ಮುಂಚೆ ಗ್ರೀಕರ ಶಾಲೆಗಳಲ್ಲಿ ಹೇಳಿಕೊಡುತ್ತಿದ್ದ ದರ್ಶನಗಳು ಯಾವ ಕೆಲಸಕ್ಕೂ ಉಪಯುಕ್ತವಾಗಿರಲಿಲ್ಲ. ಈಗಿನ ನಮ್ಮ ವಿದ್ಯಾಶಾಲೆಗಳಲ್ಲಿಯೂ ಕೂಡ ಇಂಥಾ ವೈಪರೀತ್ಯವೇ ಇರುವುದು. ಇಂಗ್ಲಿಷ್ ಹುಡುಗನು ಈಗ ತಾನು ಕಲಿಯುವ ಲಾಟಿನ್ ಮತ್ತು ಗ್ರೀಕ್ ಭಾಷೆಗಳನ್ನು ನನ್ನ ಮುಂದಿನ ಜೀವಿಕೆಯುಲ್ಲಿ ಹತ್ತಕ್ಕೆ ಒಂಭತ್ತು ಸಂದರ್ಭಗಳಲ್ಲಿ ಯಾವಕೆಲಸಕ್ಕೂ ಉಪಯೋಗಿಸುವುದಿಲ್ಲವೆಂದು ಹೇಳಿದರೆ ಸಪ್ಪೆಮಾತು ಎಂಬ ದೋಷಕ್ಕೆ ಗುರಿಯಾಗಬೇಕಾಗುತ್ತದೆ. ಅಂಗಡಿ ಅಥವಾ ಕಚೇರಿ ಕೆಲಸದಲ್ಲಾಗಲೀ ಕುಟುಂಬದ ಅಥವಾ ಜಮೀನಿನ ಆಡಳಿತದಲ್ಲಾಗಲೀ ರೈಲ್ವೆ ಅಥವಾ ಬ್ಯಾಂಕಿನ ಅಧಿಕಾರದಲ್ಲಾಗಲೀ ಬಹುವರ್ಷ ಕಲಿತಂಥಾ ಈ ಭಾಷೆಗಳ ಪರಿಜ್ಞಾನವು ಅವನಿಗೆ ಸ್ವಲ್ಪವೂ ಸಹಾಯ ಮಾಡುವುದಿಲ್ಲವೆಂಬುದು ಎಲ್ಲರಿಗೂ ತಿಳಿದ ಹಳೆಯ ಮಾತಾಗಿದೆ.

ಹೀಗೆ ಈ ಭಾಷೆಗಳನ್ನು ಸಯೋಗಿಸದೆ ಇರುವುದರಿಂದ ಅವುಗಳಲ್ಲಿ ಹೆಚ್ಚು ಅಂಶವು ಮರತೇ ಹೋಗುತ್ತದೆ. ಅವನು ಯಾವಾಗಲಾದರೂ ಬಂದು ಲಾಟಿನ್ ವಚನವನ್ನಾಗಲೀ ಗ್ರೀಕ್ ಕಟ್ಟುಕಥೆಯನ್ನಾಗಲೀ ಹೇಳಿದರೆ ಹೇಳಿದ ಫಲಮಾತ್ರವೇ ಹೊರತು ಪ್ರಕೃತವಿಷಯಕ್ಕೆ ಅವುಗಳಿಂದ ಪ್ರಯೋಜನವು ಕಡಿಮೆ. ಹುಡುಗರಿಗೆ ಈ ಪೌಢಭಾಷೆಗಳನ್ನು ಕಲಿಸುವುದರಲ್ಲಿ ನಿಜವಾದ ಉದ್ದೇಶವೇನೆಂದು ವಿಚಾರಿಸಿದರೆ ಜನಾಭಿಪ್ರಾಯಾನುಸರಣೆಗೋಸ್ಕರವೇ ಹಾಗೆ ಮಾಡುವುದೆಂದು ಗೊತ್ತಾಗುತ್ತದೆ. ಜನರು ಪ್ರಚಾರದಲ್ಲಿರುವ ಪದ್ಧತಿಯನ್ನನುಸರಿಸಿ ಹೇಗೆ ತಮ್ಮ ಮಕ್ಕಳ ಶರೀರಕ್ಕೆ ಉಡುಪನ್ನು ಹಾಕುವರೋ ಹಾಗೆಯೆ ಪದ್ಧತಿಯನ್ನನುಸರಿಸಿ ತಮ್ಮ ಮಕ್ಕಳಿಗೆ ಮನಸ್ಸಂಸ್ಕರಣವನ್ನು ಮಾಡುವರು. ಬಣ್ಣವನ್ನು ಒಳಿದುಕೊಳ್ಳುವುದರಿಂದ ದೇಹಕ್ಕೆ ಯಾವ ಪ್ರಯೋಜನವೂ ಇಲ್ಲದಿದ್ದಾಗ್ಗೂ ಸ್ವದೇಶೀಯರ ಹಾಸ್ಯಕ್ಕೆ ಗುರಿಯಾಗಬಾರದೆಂದು ಹಿರಿಯೋಕೊ ನಿವಾಸಿಯು ತನ್ನ ಗುಡಿಸಲನ್ನು ಬಿಟ್ಟು ಹೊರಕ್ಕೆ ಹೋಗುವ ಮುಂಚೆ ಹೇಗೆ ಮೈಗೆ ಬಣ್ಣವನ್ನು ಹಚ್ಚಿಕೊಳ್ಳುವನೋ ಹಾಗೆಯೇ ಲಾಟಿನ್ ಗ್ರೀಕ್ ಭಾಷೆಗಳು ಸ್ವಯಂಪ್ರಯೋಜಕವಲ್ಲವಾದಾಗ್ಗೂ ಅವು ಬರುವುದಿಲ್ಲವೆಂಬ ಅವಮಾನಕ್ಕೆ ಗುರಿಯಾಗಬಾರದೆಂದು ಹುಡುಗರಿಗೆ ಆ ಭಾಷೆಗಳನ್ನು ಬಿಡದೆ ಕಲಿಸುವರು. ಅವು ಸಜ್ಜನರು ಕಲಿಯತಕ್ಕ ಭಾಷೆಗಳೆಂದೂ ಘನತೆಗೆ ಗುರುತುಗಳೆಂದೂ ಮರ್ಯಾದೆಯನ್ನು ತರತಕ್ಕುವೆಂದೂ ಎಣಿಸಲ್ಪಟ್ಟಿರುವುವು.

ಇಂಥಾ ವೈಪರೀತ್ಯವು ಸ್ತ್ರೀಯರ ವಿಷಯದಲ್ಲಿ ಇನ್ನೂ ಜೆನ್ನಾಗಿ ವ್ಯಕ್ತವಾ

ಗುವುದು. ಮನೋದೇಹ ಸಂಬಂಧವಾದ ಅಲಂಕರಣಗಳು ಗಂಡಸರಿಗಿಂತ ಹೆಂಗ ಸರಲ್ಲಿ ಅಧಿಕ ಪ್ರಾಶಸ್ತ್ಯವನ್ನು ಹೊಂದಿರುವುವು. ಆದಿಯಲ್ಲಿ ದೇಹಾಲಂಕಾರವು ಇಬ್ಬರಲ್ಲಿಯೂ ಸಮವಾಗಿದ್ದಿತು. ನಾಗರಿಕತೆಯುಂಟಾದ ಬಳಿಕ ಸ್ವಲ್ಪಕಾಲದಿಂ ದೀಚಿಗೆ ಉಡುಪಿನ ವಿಷಯದಲ್ಲಿ ಗಂಡಸರು ನೋಟಕ್ಕೆ ಬದಲಾಗಿ ಅನುಕೂಲತೆಗೆ ಹೆಚ್ಚಾಗಿ ಅವಧಾನವನ್ನು ಕೊಡಲಾರಂಭಿಸಿದರು. ವಿದ್ಯಾವ್ಯಾಸಂಗ ವಿಷಯದ ಲ್ಲಿಯೂ ಕೂಡ ಈಗೀಗ ಅಲಂಕಾರಕ್ಕೆ ಬದಲಾಗಿ ಪ್ರಯೋಜನಾಂಶವನ್ನೇ ಹೆಚ್ಚಾ ಗಿ ನೋಡುತ್ತಿರುವರು ಈ ಎರಡು ವಿಷಯಗಳಲ್ಲಿಯೂ ಹೆಂಗಸರಲ್ಲಿ ಇನ್ನೂ ಅಷ್ಟು ಬದಲಾವಣೆಗಳು ನಡೆದಿಲ್ಲ. ಕವಿಗೆ ಓಲೆಯನ್ನು ಹಾಕಿಕೊಳ್ಳುವುದು ಬೆರಳಿಗೆ ಉಂ ಗುರವನ್ನಿಟ್ಟುಕೊಳ್ಳುವುದು ಕೈಗೆ ಬಳೆಯನ್ನು ತೊಟ್ಟುಕೊಳ್ಳುವುದು ಬಹು ಪ್ರಯಾಸ ಪಟ್ಟು ಜಡೆ ಹೆಣೆಸಿಕೊಳ್ಳುವುದು ಆಗಾಗ ಬಣ್ಣವನ್ನು ಹಚ್ಚಿಕೊಳ್ಳುವುದು ಬಹು ಶ್ರಮಪಟ್ಟು ಉಡುಪನ್ನು ಸೊಗಸಾಗಿ ಮಾಡಿಕೊಳ್ಳುವುದು ದೇಶಪದ್ಧತಿಯನ್ನನು ಸರಿಸಲು ಬಹು ಯಾತನೆಯನ್ನಾದರೂ ಸಹಿಸುವುದು — ಈ ಕಾರ್ಯಗಳು ಹೆಂಗಸರು ತಮ್ಮ ದೇಹಸೌಖ್ಯಾನುಕೂಲತೆಗೆ ಬದಲಾಗಿ ಜನಮೆಚ್ಚಿಕೆಯಲ್ಲಿಯೇ ಅಧಿಕವಾಗಿ ದೃಷ್ಟಿಯಿಟ್ಟಿರುವರೆಂಬುದನ್ನು ತೋರಿಸುವುವು. ಇದಲ್ಲದೆ ಅವರು ಕುಶಲಕಲೆಗಳಿಗೆ ಪ್ರಬಲವಾದ ಅವಧಾನವನ್ನು ಕೊಡುವುದರಿಂದ ವಿದ್ಯಾವ್ಯಾಸಂಗದಲ್ಲಿಯೂ ಕೂಡ ಪ್ರಯೋಜನಕ್ಕೆ ಬದಲಾಗಿ ದಂಭಪ್ರಕಾಶನವೇ ಪ್ರಮುಖವಾಗಿರುವುದು ಸ್ಪಷ್ಟವಾ ಗುವುದು.

ನರ್ತನ ನಡವಳಿಕೆ ಪಿಯಾನೊ ಎಂಬ ರಾಗಮಾಲಿಕೆ ಸಂಗೀತ ಚಿತ್ರ ಬರೆಯು ವುದು—ಇವನ್ನು ಕಲಿಯುವುದರಲ್ಲಿಯೇ ಬಹುಕಾಲವನ್ನು ಕಳೆಯುವರು. ಇಂಗ್ಲಿ ಷ್ ಸ್ತ್ರೀಯರು ಇಟಲಿ ಮತ್ತು ಜರ್ಮನಿ ಭಾಷೆಗಳನ್ನು ಏತಕ್ಕೆ ಕಲಿಯುವರೆಂದು ಕೇಳಿದರೆ ಅದಕ್ಕೆ ಅನೇಕ ಸುಳ್ಳು ಕಾರಣಗಳನ್ನು ಹೇಳುವರು. ಆದರೆ ನಿಜವಾದ ಕಾರಣವೇನೆಂದರೆ, ಆ ಭಾಷೆಗಳ ಪರಿಜ್ಞಾನವುಳ್ಳವರು ಕುಲಾಂಗನೆಯರೆಂದು ಎಣಿ ಸಲ್ಪಡುವರು. ಆ ಭಾಷೆಗಳಲ್ಲಿ ಬರೆದಿರುವ ಪುಸ್ತಕಗಳನ್ನು ಓದಬೇಕೆಂದು ಅವನ್ನು ಕಲಿಯುವುದಿಲ್ಲ. ಅಂಥಾ ಪುಸ್ತಕಗಳನ್ನು ಓದುವುದು ಅಪೂರ್ವ. ಆದರೆ ಆ ದೇಶೀ ಯರ ಹಾಡುಗಳನ್ನು ಹೇಳಿ ಜನರಲ್ಲಿ ಅಧಿಕವಾದ ಶ್ಲಾಘೆಯನ್ನು ಹೊಂದಬೇಕೆಂತ ಲೇ ಆ ಭಾಷೆಗಳನ್ನು ಕಲಿಯುವರು. ಇದಲ್ಲದೆ ಚರಿತ್ರೆಗಳಲ್ಲಿ ಹೇಳಿರುವ ರಾಜರ ಜನನ ಮರಣ ವಿವಾಹಗಳ ತಾರೀಕು ಮುಂತಾದ ಅಲ್ಪ ಸಂಗತಿಗಳನ್ನು ಬಾಯಿಗೆ

ಕಲಿಯುವರು. ಅವುಗಳ ಪರಿಜ್ಞಾನದಿಂದ ಸ್ವಯಂ ಪ್ರಯೋಜನವೇನೂ ಇಲ್ಲದಿದ್ದಾಗ್ಗೂ ಜನರು ಅವನ್ನು ಒಳ್ಳೆಯ ವಿದ್ಯೆ ಎಂದು ಭಾವಿಸಿರುವುದರಿಂದಲೂ ಅವನ್ನು ತಿಳಿಯದಿದ್ದರೆ ಅವಮಾನವಾದೀತೆಂಬ ಭೀತಿಯಿಂದಲೂ ಅವುಗಳನ್ನು ಕಲಿಯುವರು. ಓದುಬರಹ ಅಕ್ಷರವಿನ್ಯಾಸ ವ್ಯಾಕರಣ ಲೆಕ್ಕ ಹೊಲಿಗೆ—ಇವು ಹುಡುಗಿಯರಿಗೆ ಮುಂದಕ್ಕೆ ಪ್ರಯೋಜನಕ್ಕೆ ಬರುವ ವಿಷಯಗಳಾಗಿವೆ. ಇವುಗಳಲ್ಲಿಯೂ ಕೂಡ ಕೆಲವು ಸ್ವಕ್ಷೇಮವನ್ನುಂಟು ಮಾಡುವುದಕ್ಕೆ ಬದಲಾಗಿ ಹೆಚ್ಚಾಗಿ ಜನರ ಮೆಚ್ಚಿಕೆಯನ್ನೇ ತರತಕ್ಕುವಾಗಿವೆ.

ಹೀಗೆ ಸಾಮಾನ್ಯವಾಗಿ ಜನರು ದೇಹಕ್ಕೂ ಮನಸ್ಸಿಗೂ ಉಪಯುಕ್ತಗಳಾದ ವಿಷಯಗಳನ್ನು ಬಿಟ್ಟು ಅಲಂಕಾರ ಪ್ರಾಯಗಳಾದ ವಿಷಯಗಳಿಗೆ ಮೊದಲು ವಿಶೇಷವಾಗಿ ಅವಧಾನವನ್ನು ಕೊಡುವರೆಂದು ತೋರಿಸಿದ ಬಳಿಕ, ಹಾಗೆಮಾಡಲು ಕಾರಣವೇನೆಂಬುದನ್ನು ಸೂಚಿಸಿ, ನಮ್ಮ ಈಗಿನ ವಿದ್ಯಾಭ್ಯಾಸದ ಏರ್ಪಾಡು ಸಮರ್ಪಕವಾಗಿಲ್ಲವೆಂಬುದನ್ನು ತೋರಿಸಿಕೊಡುವನು.

ಮನಸ್ಸಂಸ್ಕರಣದಲ್ಲಿಯೂ ಅಲಂಕಾರವು ಪ್ರಯೋಜನಕ್ಕೆ ಪೂರ್ವಭಾವಿಯಾದುದೆಂಬುದರ ನಿಜತ್ವವನ್ನು ತಿಳಿಯಬೇಕಾದರೆ ಹಾಗಾಗುವುದಕ್ಕೆ ಕಾರಣವೇನೆಂಬುದನ್ನು ವಿಚಾರಿಸುವುದು ಅವಶ್ಯಕ. ಅದೇನೆಂದರೆ ಬಹು ಪುರಾತನ ಕಾಲದಿಂದ ಈಗಿನವರಿಗೂ ಪ್ರತಿಯೊಬ್ಬನು ತನ್ನಪೇಕ್ಷೆಗೆ ತಕ್ಕಂತೆ ನಡೆಯಲವಕಾಶವಿಲ್ಲದೆ ಸಮಾಜದವರ ಅಪೇಕ್ಷೆಗೆ ಹೆಚ್ಚು ಗೌರವವನ್ನು ಕೊಡಬೇಕಾಗಿರುವುದು ಮತ್ತು ಪ್ರತಿಯೊಬ್ಬನನ್ನೂ ವಶದಲ್ಲಿಟ್ಟುಕೊಳ್ಳಬೇಕೆಂಬುದೇ ಸಮಾಜದ ಮುಖ್ಯೋದ್ದೇಶವಾಗಿರುವುದು. ರಾಜರ, ಪ್ರತಿನಿಧಿಗಳ ಸಭೆಗಳ ಮತ್ತು ಇತರ ನಿಯೋಜಿತ ಅಧಿಕಾರಿಗಳ ಪ್ರಭುತ್ವಗಳಲ್ಲದೆ ಬೇರೆ ಪ್ರಭುತ್ವಗಳಿಲ್ಲೆಂದು ಜನರು ವಾಡಿಕೆಯಾಗಿ ಭಾವಿಸುವುದು ಸರಿಯಲ್ಲ. ಈ ಅಂಗೀಕೃತವಾದ ಪ್ರಭುತ್ವಗಳೊಂದಿಗೆ ಅನಂಗೀಕೃತವಾದ ಬೇರೆ ಪ್ರಭುತ್ವಗಳೂ ಸೇರಿವೆ. ಇಂಥಾ ಅನಂಗೀಕೃತವಾದ ಪ್ರಭುತ್ವಗಳು ಎಲ್ಲಾ ಜನಮಂಡಲಿಗಳಲ್ಲಿಯೂ ವರ್ಧಿಸುತ್ತಿರುವುವು. ಅಲ್ಲಿ ಪ್ರತಿಪುರುಷನೂ ಸ್ತ್ರೀಯೂ ರಾಜಾರಾಣಿಗಳಾಗಬೇಕೆಂದಾಗಲೀ ಕಡಿಮೆಯಾದ ಅಧಿಕಾರವನ್ನು ಹೊಂದಬೇಕೆಂದಾಗಲೀ ಪ್ರಯತ್ನಿಸುತ್ತಿರುವರು. ತಾವು ಕೆಲವರ ಮೇಲೆ ಅಧಿಕಾರವನ್ನು ಹೊಂದಿ ಅವರಿಂದ ಪೂಜಿತರಾಗಬೇಕೆಂದೂ ತಮ್ಮ ಮೇಲಿನ ಅಧಿಕಾರಿಗಳನ್ನು

ಪ್ರಸನ್ನರನ್ನಾಗಿ ಮಾಡಿಕೊಳ್ಳಬೇಕೆಂದೂ ಸರ್ವತ್ರಜನರು ಮಹಾ ಪ್ರಯತ್ನಗಳನ್ನು ಮಾಡುತ್ತಾ ತಮ್ಮ ಮುಖ್ಯಶಕ್ತಿ ಸಾಹಸಗಳನ್ನು ವ್ಯಯಮಾಡುತ್ತಿರುವರು.

ಧನಾರ್ಜನೆ ಜೀವಿಸುವ ಶೀವಿ ಉಡುಪಿನ ಸೊಗಸು ವಿದ್ಯಾಪ್ರಕಾಶನ ಮುಂತಾದುವುಗಳಿಂದ ಪ್ರತಿಯೊಬ್ಬನೂ ಇತರರನ್ನು ವಶೀಕರಣ ಮಾಡಿಕೊಳ್ಳಲು ಪ್ರಯತ್ನಿಸುತ್ತಾ ಸಮಾಜವನ್ನು ಸರಿಯಾದ ಕ್ರಮದಲ್ಲಿಡುವ ಬಹು ಶಾಖಾ ವಿಶಿಷ್ಟವಾದ ನಿಯಮಗಳ ಬಲೆಯನ್ನು ಹೆಣೆಯುವುದರಲ್ಲಿ ಸಹಾಯ ಮಾಡುವನು. ಭಯಂಕರವಾಗಿ ಯುದ್ಧದ ಬಣ್ಣವನ್ನು ಮೈಗೆ ಬಳಿದು ನಡುಕಟ್ಟಿನಲ್ಲಿ ನರಕಪಾಲಗಳನ್ನು ಪೋಣಿಸಿಕೊಂಡು ತನ್ನ ಕೈಕೆಳಗಿನವರಿಗೆ ತನ್ನಲ್ಲಿ ಭಯಭಕ್ತಿಯನ್ನು ಹುಟ್ಟಿಸಬೇಕೆಂದು ಉದ್ದೇಶವುಳ್ಳವನು ವನ್ಯಪ್ರಮುಖನು ಮಾತ್ರ ಅಲ್ಲ. ದಿವ್ಯ ವನಾಭರಣಾದಿಗಳಿಂದಲಂಕೃತಳಾಗಿ ನಯನಪೆಗಳುಳ್ಳವಳಾಗಿ ಕುಶಲಕಲೆಗಳನ್ನು ಪ್ರಕಾಶಪಡಿಸುತ್ತಾ ಪುರುಷರನ್ನು ವಶಮಾಡಿಕೊಳ್ಳಲು ಪ್ರಯತ್ನಿಸುವವಳು ಸೊಗಸುಗಾರ್ತಿ ಮಾತ್ರ ಅಲ್ಲ. ಆದರೆ ಪ್ರತಿ ಪಂಡಿತನೂ ಚರಿತ್ರಕಾರನೂ ದಾರ್ಶನಿಕನೂ ಸಹ ತಮ್ಮ ತಮ್ಮ ವಿದ್ಯಾಕೌಶಲ್ಯಗಳಿಂದ ಜನರನ್ನು ವಶೀಕರಣ ಮಾಡಿಕೊಳ್ಳಲು ಪ್ರಯತ್ನಿಸುವರು. ಎಲ್ಲಾ ಸಂದರ್ಭಗಳಲ್ಲಿಯೂ ತಮ್ಮ ತಮ್ಮ ಸಹಜ ಗುಣಗಳನ್ನು ಶಾಂತರಾಗಿ ಯಥಾರೀತಿಯಲ್ಲಿ ತೋರಿಸಲು ನಮ್ಮಲ್ಲಿ ಯಾರೂ ತೃಪ್ತರಾಗಿಲ್ಲ. ಆದರೆ ಸ್ವಪ್ರತಿಷ್ಠೆಯನ್ನು ಪ್ರಕಾಶಪಡಿಸುತ್ತಾ ಇತರರನ್ನು ಯಾವ ವಿಧದಿಂದಲಾದರೂ ತಮ್ಮ ವಶ ಮಾಡಿಕೊಳ್ಳಲು ಆತುರರಾಗಿರುವರು.

ಇಂಥಾ ಉದ್ದೇಶವೆ ನಮ್ಮ ವಿದ್ಯಾಭ್ಯಾಸದ ರೀತಿಯನ್ನೂ ನಿರ್ಧರಿಸುವಂಥಾದ್ದಾಗಿರುವುದು. ಯಾವ ವಿದ್ಯೆಯು ಅತ್ಯಂತ ಪ್ರಯೋಜನಕರವಾದುದೆಂಬುದನ್ನು ಪರ್ಯಾಲೋಚಿಸುವುದಿಲ್ಲ. ಆದರೆ ಯಾವುದು ಅಧಿಕವಾಗಿ ಶ್ಲಾಘನೆಯನ್ನೂ ಪುರಸ್ಕಾರವನ್ನೂ ಮಾನವನ್ನೂ ತರುತ್ತದೋ ಯಾವುದು ದೊಡ್ಡಸ್ತಿಕೆಯನ್ನೂ ಅಧಿಕಾರವನ್ನೂ ಉಂಟುಮಾಡುವುದೋ ಯಾವುದು ಭೂಷಣವಾಗಿರುವುದೋ ಎಂಬುದನ್ನು ನೋಡುವರು. ನಾವು ಹೇಗಿರುವೆವು ಎಂಬುದನ್ನು ಜನ್ಮಾವಧಿ ವಿಚಾರಮಾಡುವುದಿಲ್ಲ. ಆದರೆ ಇತರರು ನಮ್ಮ ವಿಷಯದಲ್ಲಿ ಏನು ಅಭಿಪ್ರಾಯಪಡುವರೆಂಬುದರಲ್ಲಿ ಲಕ್ಷವಿಡುವೆವು. ಹಾಗೆಯೇ ನಮ್ಮ ವಿದ್ಯಾಭ್ಯಾಸ ವಿಷಯದಲ್ಲಿ ಯಾವ ವಿದ್ಯೆಯು ಸ್ವಯಂ ಉಪಯುಕ್ತವಾದುದೆಂಬುದನ್ನು ವಿಚಾರಮಾಡದೆ ಯಾವುದು ಜನರ ಮೆಚ್ಚಿಕೆಯನ್ನು ತರುವುದೆಂಬುದರಲ್ಲಿ ದೃಷ್ಟಿ ಇಡುವೆವು. ನಮ್ಮ ಮುಖ್ಯೋ

ದ್ದೇಶವು ಹೀಗಿರುವುದರಿಂದ, ಅದರಿಂದ ಹಲ್ಲುಗಳನ್ನು ಜ್ಜುವಾಗಲೂ ಉಗುರುಗಳಿಗೆ ಬಣ್ಣವನ್ನು ಹಚ್ಚುವಾಗಲೂ ಅಂಥಾ ಕಾರ್ಯಗಳಿಂದ ಏನುಪ್ರಯೋಜನವೆಂದು ವನ್ಯರು ಎಷ್ಟರಮಟ್ಟಿಗೆ ವಿಚಾರಿಸುವರೋ ನಾವು ಕೂಡ ವಿದ್ಯಾವ್ಯಾಸಂಗದ ಪ್ರಯೋಜನವನ್ನು ಕುರಿತು ಅಷ್ಟರಮಟ್ಟಿಗೇನೆ ವಿಚಾರಮಾಡುವೆವು.

ನಮ್ಮ ಈಗಿನ ವಿದ್ಯಾಭ್ಯಾಸ ಪದ್ಧತಿಯು ಅಸಭ್ಯವಾಗಿಯೂ ಅಪರಿಷ್ಕೃತವಾಗಿಯೂ ಇದೆ ಎಂಬುದಕ್ಕೆ ಬೇರೆ ದೃಷ್ಟಾಂತವೂ ಬೇಕಾದರೆ ಇರುವುದು. ಅದೇನೆಂದರೆ ಇದುವರಿಗೂ ಬೇರೆ ಬೇರೆ ವಿದ್ಯೆಗಳ ಪ್ರಯೋಜನಗಳನ್ನು ಕುರಿತು ವಿಚಾರಮಾಡಿರುವುದೇ ಅಪೂರ್ವ. ಗೊತ್ತಾದ ಫಲ ದೊರಕುವಂತೆ ಕ್ರಮವಾದರೀತಿಯಲ್ಲಿ ವಿಚಾರ ಮಾಡಿರುವುದು ಮತ್ತೂ ಅಪೂರ್ವ. ವಿದ್ಯಾಯೋಗ್ಯತೆಗಳ ತಾರತಮ್ಯವನ್ನು ಕಂಡುಹಿಡಿಯಲು ಬೇಕಾದ ಪ್ರಮಾಣವನ್ನೇ ಇನ್ನೂ ಗೊತ್ತುಮಾಡಿಕೊಂಡಿಲ್ಲ. ಅಂಥಾ ಪ್ರಮಾಣವಿರುವುದೆಂಬುದನ್ನೇ ಚೆನ್ನಾಗಿ ಪರ್ಯಾಲೋಚಿಸಿಲ್ಲ ಮತ್ತು ಅಂಥಾ ಪ್ರಮಾಣವು ಅವಶ್ಯಕವಾಗಿ ಬೇಕೆಂಬುದೂ ಗೊತ್ತಿಲ್ಲ. ಜನರು ಕೆಲವು ಪುಸ್ತಕಗಳನ್ನು ಓದುವರು, ಕೆಲವು ಉಪನ್ಯಾಸಗಳನ್ನು ಕೇಳುವರು, ತಮ್ಮ ಮಕ್ಕಳು ಇಂಥಾ ವಿದ್ಯೆಗಳನ್ನು ವ್ಯಾಸಂಗ ಮಾಡಬೇಕು ಇಂಥವುಗಳನ್ನು ಕಲಿಯುಕೂಡದು ಎಂದು ನಿಶ್ಚಯಿಸುವರು. ಬೇರೆ ಪದ್ಧತಿಯನ್ನನುಸರಿಸಿಯಾಗಲೀ ಪಕ್ಷಪಾತದಿಂದಾಗಲೀ ದುರಾಗ್ರಹದಿಂದಾಗಲೀ ಹೀಗೆ ಮಾಡುವೆವೇ ಹೊರತು ಸರಿಯಾದ ಮಾರ್ಗದಲ್ಲಿ ವಿಚಾರ ಮಾಡಿ ಯಾವ ವಿದ್ಯೆಗಳು ಕಲಿಯುಲಿಕ್ಕೆ ಅತ್ಯಂತ ಯೋಗ್ಯವಾದುವೆಂದು ನಿರ್ಣಯಿಸುವುದು ಬಹಳ ಆವಶ್ಯಕವೆಂಬುದನ್ನು ಪರ್ಯಾಲೋಚಿಸುವುದಿಲ್ಲ.

ಈ ವಿದ್ಯಾವ್ಯಾಸಂಗ ಕ್ರಮವು ಗೌರವವಾದುದು, ಆ ವಿದ್ಯಾವ್ಯಾಸಂಗಕ್ರಮವು ಗೌರವವಾದುದು ಎಂದು ಎಲ್ಲಾ ಜನ ಮಂಡಲಿಗಳಲ್ಲಿಯೂ ಕದಾಚಿತ್ ಆನ್ನುವುದನ್ನು ನಾವು ಕೇಳುವುದು ನಿಜ. ಆದರೆ ಅಂಥಾ ವಿದ್ಯಾರ್ಜನೆಯು ಕಾಲವ್ಯಯಕ್ಕೆ ತಕ್ಕಷ್ಟು ಗೌರವವಾದುದೇ, ಅದೇ ಕಾಲವನ್ನುಪಯೋಗಿಸಿ ಇನ್ನೂ ಹೆಚ್ಚು ಪ್ರಯೋಜನವನ್ನು ಹೊಂದಬಹುದಾದ ಬೇರೆ ಉತ್ತಮತರ ವಿದ್ಯೆಗಳಿಲ್ಲವೇ ಎಂದು ಕೇಳಿದ್ದಿಯಾದರೆ ತಮ್ಮ ಮನಸ್ಸಿಗೆ ಬಂದಂತೆ ಪಕ್ಷಪಾತವಾಗಿ ಸಂಕ್ಷೇಪವಾಗಿ ಉತ್ತರವನ್ನು ಹೇಳುವೆವೇ ಹೊರತು ಸದುತ್ತರವನ್ನು ಕೊಡುವುದಿಲ್ಲ. ಪ್ರೌಢ ಗ್ರಂಥಗಳ ಮತ್ತು ಗಣಿತದ ಯೋಗ್ಯತಾ ತಾರತಮ್ಯವಿಷಯಕವಾದ ಹಳೆಯ ವಿವಾದವು ಆಗಾಗ್ಗೆ ನಡೆಯುತ್ತಿರುವುದನ್ನು ನಾವು ಪುನಃ ಪುನಃ ಕೇಳುವೆವು

ಆದರೆ ಈ ಚರ್ಚೆಯನ್ನು ಯಾವುದೊಂದು ಗೊತ್ತಾದ ಪ್ರಮಾಣವನ್ನನುಸರಿಸಿ ಮಾಡದೆ ತಮ್ಮ ತಮ್ಮ ಮನಸ್ಸಿಗೆ ಬಂದಂತೆ ವಿವಾದಿಸುವರು. ಇದಲ್ಲದೆ ವಿದ್ಯಾಭ್ಯಾಸವೆಂಬ ದೊಡ್ಡ ವಿಷಯಕ್ಕೆ ಹೋಲಿಸಿ ನೋಡಿದರೆ ಆದರಲ್ಲೊಂದು ಭಾಗವಾದ ಈ ಚರ್ಚೆಯು ಅತ್ಯಲ್ಪವಾಗಿರುವುದು. ಅಲುಗಡ್ಡೆಗಿಂತ ರೊಟ್ಟಿಯು ಹೆಚ್ಚು ಪೋಷಣಕಾರಿಯಾದುದೋ ಅಲ್ಲವೋ ಎಂದು ಗೊತ್ತು ಮಾಡಿಕೊಳ್ಳುವುದರಿಂದ ಹೇಗೆ ಆಹಾರವಿಷಯವೆಲ್ಲಾ ತಿಳಿದಂತಾಗುವುದಿಲ್ಲವೋ ಹಾಗೆಯೇ ಗಣಿತ ವ್ಯಾಸಂಗವು ಉತ್ತಮವಾದುದೋ ಅಥವಾ ಪೌರ್ವಾತ್ಯ ಗ್ರಂಥ ವ್ಯಾಸಂಗವು ಉತ್ತಮವಾದುದೋ ಎಂಬುದನ್ನು ನಿರ್ಣಯಿಸುವುದರಿಂದ ಯೋಗ್ಯವಾದ ವಿದ್ಯಾಭ್ಯಾಸ ಕ್ರಮ ಯಾವುದೆಂಬುದು ಗೊತ್ತಾಗುವುದಿಲ್ಲ.

ಈಗ ನಾವು ವಾದಿಸುವ ವಿಷಯವು ಅತ್ಯಂತ ಶ್ರೇಷ್ಠವಾದುದು. ಈ ವಿದ್ಯೆಪ್ರಯೋಜನವು ಅಥವಾ ಆ ವಿದ್ಯೆ ಪ್ರಯೋಜಕವು ಎಂದು ನಾವು ವಾದಿಸುವುದಿಲ್ಲ. ಆದರೆ ವಿದ್ಯೆಗಳ ಯೋಗ್ಯತಾ ತಾರತಮ್ಯವನ್ನು ಕುರಿತು ವಾದಿಸುವೆವು. ಕೆಲವರು ತಮಗೆ ಗೊತ್ತಿರುವ ವ್ಯಾಸಂಗ ಕ್ರಮದಿಂದ ಇಂಥಿಂಥಾ ಲಾಭಗಳು ಉಂಟಾಗುತ್ತವೆಂದು ಹೇಳಿದ ಮಾತ್ರಕ್ಕೆ ಸಾಕೆಂದು ಭಾವಿಸುವರು. ಆವರೆ ಆ ಲಾಭಗಳು ಶ್ರಮಕ್ಕೆ ತಕ್ಕುವೋ ಎಂದು ವಿಚಾರಿಸಬೇಕೆಂಬ ಅಂಶವನ್ನೇ ಪೂರ್ಣವಾಗಿ ಮರೆತು ಬಿಡುವರು. ಜನರು ಅವಧಾನ ಕೊಡುವ ವಿಷಯಗಳಲ್ಲಿ ಪ್ರಾಯಶಃ ಎಲ್ಲಾ ಒಂದಾದರೂ ಸ್ವಲ್ಪವಾದರೂ ಬೆಲೆ ಇಲ್ಲದ್ದಿಲ್ಲ. ಒಂದು ವರ್ಷ ಮಂಶಾನಳೀ ವಿದ್ಯೆಯನ್ನು ಆಸಕ್ತಿಯಿಂದ ವ್ಯಾಸಂಗ ಮಾಡಿದರೆ ಪೂರ್ವಾಚಾರ ನೀತಿಗಳು ಮತ್ತಷ್ಟು ಹೆಚ್ಚಾಗಿ ಗೊತ್ತಾಗಬಹುದು. ಇಂಗ್ಲೆಂಡಿನ ಎಲ್ಲಾ ಪಟ್ಟಣಗಳಲ್ಲಿ ಒಂದಕ್ಕೊಂದಕ್ಕೆ ಇರುವ ದೂರವನ್ನು ಗೊತ್ತುಮಾಡಿಕೊಂಡವನಿಗೆ ಅವನ ಜೀವಿತಕಾಲದಲ್ಲಿ ಯಾವಾಗಲಾದರೂ ಪ್ರಯಾಣ ಬೆಳೆಸುವುದಕ್ಕೆ ಏರ್ಪಾಡು ಮಾಡುವಾಗ ಅವನು ಕಲಿತ ಸಾಮಿತ ಸಂಗತಿಗಳಲ್ಲಿ ಒಂದೆರಡಾದರೂ ಸ್ವಲ್ಪ ಉಪಯೋಗಕ್ಕೆ ಬರಬಹುದು. ಒಂದು ನಾಡಿನ ಹರಟೆಗಳನ್ನೆಲ್ಲ ಸಂಗ್ರಹಿಸುವುದು ಲಾಭವಲ್ಲದ ಕೆಲಸವೆಂದು ತೋರಿದಾಗ್ಯೂ ಒಂದಾನೊಂದುಕಾಲದಲ್ಲಿ ಅದರಿಂದ ಸ್ವಲ್ಪ ಸಹಾಯವಾಗಬಹುದು. ಹೇಗೆಂದರೆ, ಪೈತೃಕಪ್ರೇರಣವು ಅದರಿಂದ ಗೊತ್ತಾಗಬಹುದು. ಅದರೆ ಇಂಥಾ ಕಾರ್ಯಗಳಿಂದ ಪ್ರಯಾಸಕ್ಕೆ ತಕ್ಕ ಫಲವು ದೊರಕುವುದಿಲ್ಲವೆಂದು ಪ್ರತಿಯೊಬ್ಬನೂ ಒಪ್ಪಿಕೊಳ್ಳುವನು. (ಸಶೇಷ). S. V.

ಉಕ್ತಲೇಖನ ಕ್ರಮ.

ಉಕ್ತಲೇಖನವನ್ನು ಬರೆಯುವುದೆಂದರೆ ಇದುವರಿಗೂ ಅನೇಕರು ಹೇಳಿದು ದನ್ನು ಬರೆದರೆ ಸಾಕೆಂಬ ಒಂದೇ ಆಲೋಚನೆಯನ್ನು ಇಟ್ಟಿರುವರು. ಇದರಿಂದ ನಮ್ಮ ವಿದ್ಯಾಭ್ಯಾಸದ ಇಲಾಖೆಯವರ ವಿಧಿಗನುಸಾರವಾದ ಯಾವ ಫಲಿತಾಂಶವೂ ನೆರವೇರುವುದಿಲ್ಲ. ಆದುದರಿಂದ ಉಪಾಧ್ಯಾಯರುಗಳು ತಮ್ಮ ವಿದ್ಯಾರ್ಥಿಗಳಲ್ಲಿ ವಿಶ್ವಾಸವನ್ನು ಇಟ್ಟು ಈ ಕೆಳಗೆ ತಿಳಿಸುವ ಅಂಶಗಳಿಗೆ ಗಮನಕೊಟ್ಟರೆ ಕೊಂಚ ಉತ್ತಮಸ್ಥಿತಿಗೆ ಬಂದೀತೆಂಬದಾಗಿ ಊಹಿಸುತ್ತೇನೆ.

(1) ಉಕ್ತಲೇಖನ ಬರೆಯುವ ಯಾವಕ್ಲಾಸಿನ ವಿದ್ಯಾರ್ಥಿಯೆ ಆಗಲಿ ತಳಹದಿ ಯಂತಿರುವ ಕಾಗುಣಿತವನ್ನು ಧಾರಾಳವಾಗಿ ಕಲಿತಿರಬೇಕು. ಇದನ್ನು ಬರೆಯುವ ಕಾಲದಲ್ಲಿ ತನ್ನ ಮನಸ್ಸಿಗೆ ಅಪ್ಪಾದವುಂಟಾಗುವಂತೆ ಕಾಗುಣಿತವನ್ನು ಜೋಡಿಸು ತ್ತಾ ಹೊಸ ಮಾತುಗಳನ್ನು ತನ್ನ ಸ್ವಬುದ್ಧಿಯಿಂದ ಬರೆಯುವ ಅಭ್ಯಾಸವನ್ನು ಉಪಾ ಧ್ಯಾಯರು ಹುಡುಗರಿಗೆ ಉಪಾಯದಿಂದ ಬೋಧಿಸಬೇಕು.

(2) ಯಾವ ಮಾತುಗಳೇ ಆಗಲಿ ಈಗ ನಡೆಸುತ್ತಿರುವ ಕಾರ್ಯಗಳಿಗೆ ಅನು ಗುಣವಾಗಿದ್ದು ಮುಂದೆ ತಮ್ಮ ಅಭಿಪ್ರಾಯವನ್ನು ಜೋಡಿಸಿ ಬರೆಯುವಂತೆ ಮಾಡು ವಷ್ಟು ಉತ್ಸಾಹವನ್ನು ಉಂಟು ಮಾಡುತ್ತಿರಬೇಕು.

(3) ಒತ್ತುಗಳನ್ನು ಹೇಳುವಾಗ ಅದಕ್ಕೊಸ್ಕರವಾಗಿ ಪ್ರಯತ್ನಪಟ್ಟಂತೆ ತುಂಬಾ ದೇಹಶ್ರಮ ತೆಗೆದುಕೊಂಡು ಹೇಳಬಾರದು. ವಿದ್ಯಾರ್ಥಿಗಳಿಗೆ ಆಗಾಗ್ಯೆ ಒತ್ತುಗಳ ಸ್ವರೂಪವನ್ನೂ ಅದರ ಉಚ್ಚಾರಣೆಯನ್ನೂ ತಿದ್ದಿ ಹೇಳುತ್ತಾ ಬರಬೇಕು.

(4) ಒತ್ತುಗಳನ್ನು ಒಂದೊಂದು ಮಾತಿಗೆ ಎರಡುವಿಧವಾಗಿ ಉಪಯೋಗಿ ಸುತ್ತಿರುವ ಮೇರೆಗೆ ಅವರಿಗೆ ಎರಡು ವಿಧವಾದ ದಾರಿಯನ್ನೂ ಅವುಗಳನ್ನು ಉಪ ಯೋಗಿಸುವ ಕ್ರಮವನ್ನೂ ತಿಳಿಸಬೇಕು. ಉದಾಹರಣೆ (1) ಆರ್ಯರು, ಅರ್ಯರು (2) ಬ್ರಹ್ಮನು, ಸಿಂಹವು ಇತ್ಯಾದಿ.

(5) ಇದಲ್ಲದೆ ಉಕ್ತಲೇಖನವನ್ನು ಬರೆಯುವುದರಲ್ಲಿ ಇನ್ನು ಕೆಲವು ಕ್ರಮ ಗಳುಂಟು. ಮಾತುಗಳನ್ನು ಎಲ್ಲೆಲ್ಲಿಗೆ ನಿಲ್ಲಿಸಬೇಕು ? ವಾಕ್ಯ ಪೂರ್ತಿಯಾಯಿತೆ? ಇಲ್ಲವೆ ? ಆಶ್ಚರ್ಯವೇ ? ದುಃಖವೇ ? ಎಂಬ ವಿಷಯಗಳನ್ನು ತಿಳಿಸುವ ಬಗೆ ಮಧ್ಯೆ ಮಧ್ಯೆ ಒಂದೊಂದು ಸಂಜ್ಞೆಯನ್ನು ಉಪಯೋಗಿಸಬೇಕೆಂಬ ವಿಧಿ ಉಂಟಷೆ.

ಇದಕ್ಕೆ ತುಂಬಾ ಗಮನಕೊಟ್ಟು ಈ ಸಂಜ್ಞೆಗಳನ್ನು ಉಪಯೋಗಿಸತಕ್ಕ ಸಮಯ ಸ್ಥಾನ ಮೊದಲಾದುವುಗಳನ್ನು ತಿಳಿಸುತ್ತಾ ಬರಬೇಕು. ಉದಾಹರಣೆ. ಪೂರ್ಣ ವಿರಾಮ. ಅರ್ಧವಿರಾಮ ; ಅಲ್ಪವಿರಾಮ, ಆಶ್ಚರ್ಯಾರ್ಥಕ ಚಿಹ್ನೆ ! ಪ್ರಶ್ನಾರ್ಥಕ ಚಿಹ್ನೆ ? ಇತ್ಯಾದಿ.

(6) ಇನ್ನೂ ಅನೇಕವಾದ ಸಂಜ್ಞೆಗಳ ವಿಧಿಗಳನ್ನು ಉಪಾಧ್ಯಾಯರು ಬೋಧಿಸುತ್ತಾ ಬರಬೇಕು. ಇವುಗಳಿಂದ ಪ್ರತಿಮಾತುಗಳ ಅರ್ಥವೂ ಸ್ಪಷ್ಟಪಡುವುದು. ಓದುವವರಿಗೆ ಅದು ಸುಲಭವಾಗಿ ತಿಳಿಯುವುದು. ಆದುದರಿಂದ ಉಕ್ತಲೇಖನವನ್ನು ಬರೆಸುವಾಗ ಕಾಪಿಗಳನ್ನು ನೂಡಿಸದೆ ಇಷ್ಟು ಕ್ರಮಗಳನ್ನು ಉಪಕರಣಗಳನ್ನಾಗಿ ಉಪಯೋಗಿಸುತ್ತಾ ಬರುವುದಲ್ಲದೆ ಅಕ್ಷರಭೇದಗಳನ್ನೂ ತಿಳಿಸುತ್ತಾ ಬರಬೇಕು. ಈ ರೀತಿಯಾಗಿ ನಡೆಸುತ್ತಾ ಬಂದಲ್ಲಿ ಉಕ್ತಲೇಖನದ ಕ್ರಮವು ಸಾರ್ಥಕವಾದೀತೆನ್ನುವುದರಲ್ಲಿ ಸಂದೇಹವಿಲ್ಲ.

ಕರ್ಣಾಟಕ ಭಾಷೆಯಲ್ಲಿ ಅಕ್ಷರಗಳೆಷ್ಟು ?

ಹಿಂದೆ ಬಂದಾವರ್ತಿ ಅಚ್ಚಿಗನ್ನಡದಲ್ಲಿ ಅಕ್ಷರಗಳು ಎಷ್ಟು ? ಎಂದು ವಿಚಾರ ಮಾಡಿ ಶಬ್ದಮಣಿದರ್ಪಣಕಾರನೂ ಶಬ್ದಾನುಶಾಸನಕಾರನೂ ಕೂಡ ವಿಸರ್ಗವನ್ನು ಅಚ್ಚಿಗನ್ನಡದಲ್ಲಿ ಸೇರಿಸದೆ ಇರುವುದು ಸಂಗತವಾಗಿಲ್ಲವೆಂದು ಉಪನ್ಯಾಸ ಮಾಡಿ ಕವರ್ಗ ಮತ್ತು ಚವರ್ಗ ಪಂಚಮಾಕ್ಷರಗಳು ಇರುವುವೇ ? ಎಂದು ವಿಚಾರಮಾಡಿ ' ಜವನಂ ' ಇತ್ಯಾದಿಗಳಂತೆ ಅಸಂಯುಕ್ತವಾಗಿ ಆದರೂ ' ಅಜ್ಞಿ, ಯಜ್ಞಿ ' ಇತ್ಯಾದಿಗಳಂತೆ ಸಂಯುಕ್ತಾಕ್ಷರದಲ್ಲಿ ಉತ್ತರಾಕ್ಷರವಾಗಿಯಾದರೂ ಅಚ್ಚಿಗನ್ನಡದಲ್ಲಿ ಈ ಕವರ್ಗ ಚವರ್ಗ ಪಂಚಮಾಕ್ಷರಗಳ ಪ್ರಯೋಗವಿಲ್ಲವೆಂದು ಹೇಳಿತ್ತು. ಈಗಲೂ ಅದೇ ವಿಷಯವೇ ವಿಚಾರಮಾಡಲ್ಪಡುವುದು.

ಅಚ್ಚಿಗನ್ನಡದಲ್ಲಿ ಈ ಕವರ್ಗ ಚವರ್ಗ ಪಂಚಮಾಕ್ಷರಗಳು ಪದದ ಆದಿಯಲ್ಲಾಗಲೀ ಮಧ್ಯದಲ್ಲಾಗಲೀ ಅಂತ್ಯದಲ್ಲಿಯಾಗಲೀ ಅಸಂಯುಕ್ತಾಕ್ಷರವಾಗಿಯಾದರೂ, ಅಥವಾ ಪದಮಧ್ಯದಲ್ಲಿ ಒತತಕ್ಕ ಸಂಯುಕ್ತಾಕ್ಷರದಲ್ಲಿ ಉತ್ತರಾಕ್ಷರವಾಗಿಯಾದರೂ, ಅಥವಾ ' ಪಜ್ಞಿ ' ಎಂಬಂತೆ ಅನ್ಯವರ್ಗಾಕ್ಷರದೊಡನೆ ಸಂಯುಕ್ತವಾಗಿ

ಯಾದರೂ ಕಾಣಿಸುವುದಿಲ್ಲವೆಂದು ಹೇಳಿದರೂ ಪರಮಧ್ಯದಲ್ಲಿರುವ ಸಂಯುಕ್ತಾಕ್ಷರದಲ್ಲಿ ಅಂದರೆ 'ತೆಜ್ಕುಲ್, ಅಜ್ಜೆ' ಇತ್ಯಾದಿಗಳಲ್ಲಿ ಸಂಯುಕ್ತಾಕ್ಷರದ ಪೂರ್ವಾವಯವವಾಗಿ ಕಾಣಬರುವ ಕಾರಣ ಈ ಅಕ್ಷರಗಳು ಇರಬೇಕೆಂದು ಹೇಳುವಪಕ್ಷದಲ್ಲಿ 'ತಾಂರಾನುಂ,' ಇತ್ಯಾದಿಗಳಲ್ಲಿ ಅವಶ್ಯವಾಗಿ ಸ್ವೀಕರಿಸಬೇಕೆಂದು ಹಿಂದೆ ಉಪನ್ಯಾಸ ಮಾಡಿದ ಅನುಸ್ವಾರದಿಂದಲೇ 'ತೆಂಕಲ್, ಅಂಜೆ, ಇತ್ಯಾದಿಗಳಲ್ಲಿಯೂ ಚರಿತಾರ್ಥವಾಗುವಾಗ ಈ ಎರಡಕ್ಷರಗಳು ಅಚ್ಚಗನ್ನಡದಲ್ಲಿರುವುವೆಂದು ಹೆಚ್ಚಾಗಿ ಯಾಕೆ ಸ್ವೀಕರಿಸಬೇಕೆಂಬ ಆಶಂಕೆಯು ಹುಟ್ಟಿಯೇ ಹುಟ್ಟುವುದು.

ಒಂದುವೇಳೆ ಅನುಸ್ವಾರ ವಿಶಿಷ್ಟವಾಗಿ ಬರೆದ ಮಾತಿಗೂ ಪಂಚಮಾಕ್ಷರ ವಿಶಿಷ್ಟವಾಗಿ ಬರೆದ ಮಾತಿಗೂ ಉಚ್ಚಾರಣೆಯಲ್ಲಿ ಯಾವುದಾದರೂ ಒಂದು ಭೇದವು ಕಂಡುಬಂದಲ್ಲಿ ಅಗಲಾದರೂ ಸ್ವೀಕರಿಸಬಹುದೆಂದು ನೋಡಿದಲ್ಲಿ ಉಚ್ಚಾರಣೆಯಲ್ಲಿ ಏನೊಂದು ವ್ಯತ್ಯಾಸವೂ ಕಾಣುವುದಿಲ್ಲವಾಗಿ ಮೇಲೆ ಹೇಳಿದ ಆಶಂಕೆಯು ನಿಂತೇ ನಿಲ್ಲುವುದು.

ಶಬ್ದಾನುಶಾಸನ ಮತ್ತು ಶಬ್ದಮಣಿದರ್ಪಣಗಳಲ್ಲಿ ಹೇಳಿರುವ ವರ್ಣಮಾಲೆಯಲ್ಲಿ ಈ ಪಂಚಮಾಕ್ಷರಗಳನ್ನು ಹೇಳಿದೆಯಾದಕಾರಣ ಸ್ವೀಕರಿಸಬೇಕೆಂದು ಹೇಳೋಣವೆಂದರೆ ಆ ವರ್ಣಮಾಲೆಯುಳ್ಳ ಕನ್ನಡವೆಂದು ಕರೆಯಲ್ಪಡುವ ತತ್ಸಮವೇ ಮೊದಲಾದ ಶಬ್ದಗಳಲ್ಲಿರತಕ್ಕ ವರ್ಣಗಳನ್ನು ಸೇರಿಸಿರುವುದರಿಂದ ಆ ವರ್ಣಮಾಲೆಯ ಆಧಾರದಮೇಲೆ ಈ ಅಕ್ಷರಗಳು ಅಚ್ಚಗನ್ನಡದಲ್ಲಿರುತ್ತವೆಯೆಂದು ಹೇಳಲು ತುಂಬಾ ಕಷ್ಟವಾಗುವುದು.

ಹೀಗಾದಪಕ್ಷದಲ್ಲಿ—ಮಕಾರ ಮತ್ತು ನಕಾರಗಳಿಗೆ ಮುಂದೆ ವರ್ಗಾಕ್ಷರವಿದ್ದಲ್ಲಿ ಆ ವರ್ಗದ ಅಂತ್ಯಾಕ್ಷರವು ವಿಕಲ್ಪದಿಂದ ಆದೇಶವಾಗಿ ಬರುವುದು—ಎಂದು ಅರ್ಥಕೊಡುವ॥ ತದನ್ತ್ಯೋವಾ ವರ್ಗೇ॥ ॥೮೦॥ಎಂಬ ಶಬ್ದಾನುಶಾಸನದಲ್ಲಿರುವ ಸೂತ್ರದ ಅರ್ಥಾನುಸಾರವಾಗಿ ವರ್ಗಾಕ್ಷರಗಳು ಮುಂದೆ ಇರುವಾಗ ಮಕಾರ ಮತ್ತು ನಕಾರಸ್ಥಾನಗಳಲ್ಲಿ ಆದೇಶವಾಗಿಯಾದರೂ ಈ ವರ್ಗಪಂಚಮಾಕ್ಷರಗಳಾದ ಙಕಾರ ಞಕಾರಗಳು ನಿಙ್ಙಾಡಿಕಾರಂ, ತಾಞ್ಞಲಚಿತ್ತರ್ ಇತ್ಯಾದಿ ಲಕ್ಷ್ಯಗಳಲ್ಲಿ ಬರಬೇಕಾದ ಕಾರಣ ಙಕಾರ ಮತ್ತು ಞಕಾರಗಳನ್ನು ಅಚ್ಚಗನ್ನಡದಲ್ಲಿ ಸ್ವೀಕರಿಸಲೇಕಾಗುವುದೆಂದು ಹೇಳಿದಲ್ಲಿ ವಿಚಾರಮಾಡೋಣ—

ಇಷ್ಟೆಲ್ಲಾ ವಿಚಾರಮಾಡತಕ್ಕವರು ವ್ಯಾಕರಣ ಸೂತ್ರವಿದೆ ಎಂದು ವ್ಯಾಕರ

ಣಸೂತ್ರವೊಂದರಲ್ಲಿಯೇ ದೃಷ್ಟಿಯಿಟ್ಟುಕೊಂಡು ಹೇಳುವುದಿಲ್ಲವಾದರೂ ಶಬ್ದಾನುಶಾಸನವನ್ನು ಕರ್ಣಾಟಕ ಭಾಷಾಭಿಜ್ಞರೆಲ್ಲರೂ ಪರಮ ಪ್ರಮಾಣ ಗ್ರಂಥವಾಗಿ ಅಂಗೀಕರಿಸಿರುವಕಾರಣ ಅದರ ವಿಷಯವನ್ನು ವಿಚಾರ ಮಾಡದೆ ಮುಂದೆ ಹೊರಡುವುದು ಸಂಗತವಲ್ಲವಾಗಿ ವಿಚಾರ ಮಾಡಬೇಕಾಗಿರುವುದು.

ಈಗ ಹೇಳಿದ ॥ ತದನ್ತ್ಯೋವಾವರ್ಗೇ ॥ ೯೦ ॥ ಎಂಬ ಸೂತ್ರದ ಅರ್ಥವನ್ನು ಹಿಂದೆಯೇ ಹೇಳಿದೆ. ಈ ಸೂತ್ರದ ಅರ್ಥಾನುಸಾರವಾಗಿ ಪ್ರಾಚೀನರಾದ ಕರ್ಣಾಟಕಭಾಷಾಭಿಜ್ಞರ ಪ್ರಯೋಗಗಳು ಕಂಡುಬಂದರೆ ಅಗಲ್ಲವೇ ಸಹೃದಯರಾದ ಭಾಷಾಭಿಜ್ಞರು ಈ ಸೂತ್ರಕ್ಕೆ ಪ್ರಾಮಾಣ್ಯಪನ್ನು ಕೊಟ್ಟು ಇದರ ಆಧಾರದಮೇಲೆ ಹಿಂದೆ ಹೇಳಿದ ಎರಡು ಅಕ್ಷರಗಳು ಅಚ್ಚಗನ್ನಡದಲ್ಲಿ ಇರುತ್ತವೆಯೆಂದು ಹೇಳಬಹುದು. ಹಾಗಿದ್ದಲ್ಲಿ ಮುಂದೆ ಇಲ್ಲಿ ಬರೆದಿರುವ ಕೆಲವು ಪ್ರಾಚೀನ ಪ್ರಯೋಗಗಳಲ್ಲಿ ಈ ಸೂತ್ರದಂತೆ ಲಕ್ಷ್ಯಸಿದ್ಧಿಯಾಗುವುದೊ? ಇಲ್ಲವೊ? ಪ್ರಮಾಣಿಕರಾದ ಭಾಷಾಭಿಜ್ಞರೇ ವಿಚಾರ ಮಾಡಬೇಕು.

(೧) ಅಡಗಿನ ಬಸನಿಗನ್ನೆ ತಿನ್ ।
ಪಿಡಿಯೆಂದವನಡಗನವನ ಬಾಯೊಳ್ಗಿಡಿವರ್ ॥
ಕುಡಿ ಕಳ್ಳನೆಂದು ಕರಗಿಸಿ ।
ಕುಡಿಯಿಸುವರ್ ಲೋಹರಸಮನೆರ್ದಿಗರಗುವಿನಂ ॥

(ಆದಿಪುರಾಣಂ)

ಈ ಕಂದದಲ್ಲಿ ತಿನ್ನಿಡಿಯೆಂಬಲ್ಲಿ ॥ನಶ್ಚಚಿನ್ದ್ರರನ್ಯತ್ರ ॥೭೯॥ ಎಂಬ ಮತ್ತೊಂದು ಸೂತ್ರದಿಂದ ನಕಾರಕ್ಕೆ ಬದಲು ಅನುಸ್ವಾರವಾಗಲೀ ಮೇಲೆ ಹೇಳಿದ॥ ತದನ್ತ್ಯೋವಾವರ್ಗೇ ॥ ೯೦ ॥ಎಂಬ ಸೂತ್ರದಿಂದ ವರ್ಗ ಪಂಚಮಾಕ್ಷರವಾಗಲೀ ಬರಬಹುದೇ ?

(೨) ಒದವಿದಮುದದಿಂ ತೀನ್ಮಸ ।
ಗಿದಗಂಡಮನುರುತರಪ್ರಕಾಂಡದೊಳೊರಸಲ್ ॥
ಪದೆದೆಂದುಂಬನಮನೆಪುಗು ।
ವುದಱಿಂ ವನಕೇಳಿಯೆಂದುಪೆಸರಾಗಿರ್ಪುಂ ॥

(ಚಂದ್ರಪ್ರಭಪುರಾಣಂ)

ಈ ಕಂದದಲ್ಲಿ ತೀನ್ನಸಗಿದ- ಎಂಬಲ್ಲಿ ಅನುಸ್ವಾರವಾಗಲೀ ವರ್ಗಪಂಚಮಾಕ್ಷರವಾಗಲೀ ಬರಬಹುದೇ ?

ಇದಲ್ಲದೆ

(೩) ಪೇರುವೆಪೊನ್ನಕಲ್ವಾಂಘ್ರಿಪ ।
ಮಾರವೆ ರಸಮೊಱತೆ ಪರುಸವೇದಿಯೆ ಕಣಿ ಬಂ ॥
ಡಾರದೊಳುಂಟೆನೆ ಕುಡುವನ ।
ವಾರಿತದಾನಕ್ಕೆ ಪೋಲ್ವರಾರ್ಬರ್ದೆಗನಂ ॥
(ವಿಕ್ರಮಾರ್ಜುನ ವಿಜಯಂ)

(೪) ತೊಡರೆವಿನ್ಮೃಗಲಾಂಛನಧೀವರಂ ।
ತಿಡಿಗೆಬೀಸಿದ ಜಾಲಮನೊತ್ತಿ ತಂ ।
ದಡಸಿ ಬಾಂಗೆರೆಯೊಳ್ಕೆಗೆವಂತೆವೋ ।
ಲುಡುಗಿವಂದುವು ತಣ್ಗಿದಿರೋಳಿಗಳ್ ॥ (ಲೀಲಾವತಿ)

(೫) ಪಸಿದೊಡೆ ಸಲ್ಲಕೀಕಿಸಲಯಂಗಳನೊಯ್ಯನೆ ನೀಡಿ ಮೆಯ್ಯ ತೀ ।
ನ್ಮಸೆದೊಡೆ ಕೋಡೊಳಿಟ್ಟಿರಸಿ ನೀರ್ಗೆಳಸಿದ್ದೊಡೆ ತಂದುನೀರನೂ
ಡಿಸಿ ನಸೆಯಿಚ್ಚೆಯಾದೊಡೊಡಗೂಡಿ ಒಲಲ್ದೊಡೆ ಕರ್ಣವಾತಮಂ ।
ಪಸರಿಸಿ ತನ್ನ ಕೈಪಿಡಿಯುವೊಲ್ಪಿಡಿಯಂ ಪಿಡಿದಿರ್ದುದೊಂದಿಭಂ ॥
(ಚಂದ್ರಪ್ರಭ ಪುರಾಣಂ)

ಇಲ್ಲಿ ಬರೆದಿರತಕ್ಕ ೩, ೪, ೫ನೇ ಪದ್ಯಗಳಲ್ಲಿ ಅಡ್ಡಗೀಟು ಹಾಕಿರುವ ಕಡೆ ನಕಾರಕ್ಕೆ ವರ್ಗೀಯ ವ್ಯಂಜನಾಕ್ಷರವು ಪರವಾಗಿರುವುದರಿಂದ ಈ ಮೇಲೆ ಹೇಳಿದ ॥ತದನ್ತ್ಯೋವಾವರ್ಗೇ ॥೪೦॥ ಎಂಬ ಸೂತ್ರವನ್ನು ಅನುಸರಿಸಿ ವರ್ಗಪಂಚಮಾಕ್ಷರವಾಗಲೀ ಅಥವಾ ॥ನಶ್ಚ ಬಿಂದುರನ್ಯತ್ರ॥ ೭೯ ॥ ಎಂಬ ಸೂತ್ರದ ಅರ್ಥವನ್ನನುಸರಿಸಿ ಅನುಸ್ವಾರವಾಗಲೀ ಬರಬಹುದೇ? ಯಾವ ಕವಿಯೂ ಇಂಥಾ ಸಂದರ್ಭದಲ್ಲಿ ಬಿಂದುವನ್ನಾಗಲೀ, ವರ್ಗಪಂಚಮಾಕ್ಷರವನ್ನಾಗಲೀ ಹೇಳಿರುವುದಾಗಿಯೇ ಗೊತ್ತಾಗುವುದಿಲ್ಲ.

ಮತ್ತು

ಗಜಿವಿನಾನ್ಸೀಗುಡಿ ಕೆಂಡವಿನಾನ್ಪವಳವಾಯುಂ ಬಾಜೆವಿನಾನ್ಪಾವುವಿನಾ ।
ನ್ಕಿಜುವಿನಾನ್ಕೆಂಗಜಿ ಮಚ್ಚೆಕುಚ್ಚಲತಿಗಂ ಕಾಗೆಂಡೆ ಕೆಂಕಲ್ಸರಲ್ ॥

ಕೊಱಿವಂ ಪೇೞ್ಪಸಿಗಂ ಸಸಿಲೊ್ದಳೆವಿೀನ್ವೊಂಬೊಪ್ಪುವೀನ್ವಂದಿ ವೀ ।
ನ್ಪೆಜೆವೀನ್ಬಗ್ಗಡೆಬಣ್ಣವೀನೆನಿಪಿವೆಲ್ಲಂ ಜಿಱ್ದುವಾತಾಣದೊಳ್ ॥
(ರಾಜಶೇಖರವಿಳಾಸಂ)

ಈ ಮೇಲೆ ಹೇಳಿದ ವೃತ್ತದಲ್ಲಿ ಅನೇಕ ಸ್ಥಳದಲ್ಲಿ ವೀನ್ ಎಂಬ ಶಬ್ದಕ್ಕೆ ವರ್ಗೀಯ ವ್ಯಂಜನಾಕ್ಷರವು ಪರವಾಗಿರುವುದು. ಅಲ್ಲೆಲ್ಲಾ ವರ್ಗಪಂಚಮಾಕ್ಷರವನ್ನಾಗಲೀ ಅನುಸ್ವಾರವನ್ನಾಗಲೀ ಹೇಳಿದಲ್ಲಿ ಸಹೃದಯರಾದ ಭಾಷಾಭಿಜ್ಞರಿಗೆ ಸಮ್ಮತವಾಗಿ ಗಿರುವುದೋ?

ಈ ಸಂದರ್ಭದಲ್ಲಿಯೇ ನಕಾರಕ್ಕೆ ನಿತ್ಯವಾಗಿ ಬಿಂದುವನ್ನು ಹೇಳತಕ್ಕ ॥ ನಶ್ಚ ಬಿಂದುರನ್ಯತ್ರ ॥೭೯॥ ಎಂಬ ಸೂತ್ರವನ್ನೂ ವಿಚಾರ ಮಾಡೋಣ.

ಮೇಲಣ ಪದ್ಯದಲ್ಲಿ ಗಜ್ಜುವೀನ್ನೀಗುಡಿ ಎಂಬಲ್ಲಿ ಬಿಂದುವನ್ನು ಹೇಳಬಹುದೇ? ಶಬ್ದಾನುಶಾಸನದಲ್ಲಿ—ನಕಾರ ಮಕಾರಗಳಿಗೆ ವ್ಯಂಜನವು ಪರವಾದಾಗಲೂ ಅಥವಾ ಯಾವ ವ್ಯಂಜನವೂ ಪರವಾಗದೆ ಇರುವಾಗಲೂ (ಅಂದರೆ ನಕಾರ ಮಕಾರಗಳು ಅಂತ್ಯದಲ್ಲಿ ಬಂದಾಗ) ಆ ನಕಾರ ಮಕಾರಗಳು ನಿತ್ಯವಾಗಿ ಬಿಂದು ಅಂದರೆ ಅನುಸ್ವಾರವಾಗುವುದು—ಎಂದುಅರ್ಥವನ್ನು ಕೊಡುವ ॥ನಶ್ಚ ಬಿಂದುರನ್ಯತ್ರ ॥೭೯॥ ಎಂಬ ಸೂತ್ರವನ್ನನುಸರಿಸಿ ಗಜ್ಜುವೀನ್ನೀಗುಡಿಯೆಂಬಲ್ಲಿ ಗಜ್ಜುವೀವಾಂನೀಗುಡಿಯೆಂದು ಹೇಳಬೇಕಾಗಿರುವುದು. ಈ ರೂಪಸಿದ್ಧಿಯು ಭಾಷಾಭಿಜ್ಞರಿಗೆ ಸಮ್ಮತವೇ? ಮತ್ತು ಪದ್ಯದ ಅಂತ್ಯದಲ್ಲಿ ವೀನ್, ನೋನ್, ಬಾನ್, ಪೊನ್ ಇತ್ಯಾದಿ ಪದಗಳು ಬಂದ ಕಾಲದಲ್ಲಿ ಈ ॥ ನಶ್ಚ ಬಿಂದುರನ್ಯತ್ರ ॥೭೯॥ ಎಂಬ ಸೂತ್ರವನ್ನನುಸರಿಸಿ ನಕಾರಕ್ಕೆ ಬದಲು ಬಿಂದುವನ್ನು ಹೇಳಬಹುದೇ? ಹಾಗಾದಲ್ಲಿ ಈಗಲೂ ಕೂಡ ಈ ನಾಂತವಾದ ಶಬ್ದಗಳಲ್ಲಿ ಕೆಲವು ಪ್ರಥಮಾನ್ತನಾದ ಪದವೆಂತಲೂ ಕೆಲವು ವಿಧಿಯು ಮಧ್ಯಮ ಪುರುಷೈಕವಚನರೂಪವೆಂತಲೂ ಭಾವಿಸಿದಲ್ಲಿ ಎಲ್ಲಾ ನಕಾರಾಂತವಾದ ಪದಗಳಿಗೂ ಶಬ್ದಾನುಶಾಸನದ ಈ ೭೯ನೆಯ ಸೂತ್ರದಂತೆ ಅಂತ್ಯದಲ್ಲಿ ಬಿಂದುವನ್ನು ಹೇಳಬೇಕಾಗುವುದು. ಮತ್ತು ಈ ಸೂತ್ರದ ಅರ್ಥವು ಸಂಗತವಾಗಿದೆಯೆಂದು ಈಗ ಇರುವಂತೆಯೇ ಅಂಗೀಕರಿಸಿದಲ್ಲಿ,

ಪೊಸತೆನಿಸೆ ಪೇೞ್ವತಿರ್ದುವಜ್ಜುವೆನ್ನೊಳೆ ಸನ್ನಿದಮಾದೊಡಂಕರಂ ;
ರಸಿಕರಿನೆಯ್ದೆ ತಿರ್ದಿಸಿದೊಡಲ್ಲದೆ ನಿಲ್ಲದು ಚಿತ್ತಮಂತೆತಿ ।
ರ್ದಿಸುವುದೆನಲ್ಕಯಂ ಬೆಳಗೆ ಕನ್ನಡಿ ಸೋದಿಸೆ ಪೊನ್ವಿರಾಜಿಪಂ ।
ತೆಸೆದುಬಜ್ಜೆಕ್ಕೆ ಮುತ್ಕೃತಿ ಚಮತ್ಕೃತಿಯುಂ ಫರೆಗುಂಟಿಮಾಡುಗುಂ ॥
(ಜಗನ್ನಾಥವಿಜಯಂ)

ಈ ವೃತ್ತದಲ್ಲಿ ಗೀಟು ಎಳೆದಿರತಕ್ಕ 'ಪೊನ್ವಿರಾಜಿಪಂತೆ' ಎಂಬಲ್ಲಿ ಪೊಂವಿರಾಜಿಪಂತೆ ಯೆಂದು ಅನಿಷ್ಟರೂಪವನ್ನು ಹೇಳಬೇಕಾಗುವುದು. ಹೀಗೆ ಅನಿಷ್ಟರೂಪವು ಸಿದ್ಧಿಸತಕ್ಕ ಸೂತ್ರಗಳಲ್ಲಿ ಪ್ರಾಮಾಣ್ಯಗ್ರಹವು ಉಂಟಾಗುವುದುತಾನೆ ಹೇಗೆ? ಅದರ ಆಧಾರದಮೇಲೆ ಕವರ್ಗ ಚವರ್ಗ ಪಂಚಮಾಕ್ಷರಗಳು ಅಚ್ಚಗನ್ನಡದಲ್ಲಿರುವುವು ಎಂದು ಸಿದ್ಧಾಂತಪಡಿಸುವುದುತಾನೆ ಹೇಗೆ?

ಮತ್ತು

ಜಳಮಂ ವಾರಾಶಿಯೊಳ್ಮೀನ್ವೆರಸು ಮೊಗೆತರಲ್ಮೇಘಮಾಬಾಜಿಮೀನ್ಗಳ್ ।
ಪೊಳೆದಾಡುತ್ತಿರ್ದುವಾಕಾಶದೊಳಿನಲವಿಭಿನ್ನಾಂಜನಚ್ಛಾಯೆಯಿಂಗೊಂ ॥
ದಳಿಸಿರ್ದಂಭೋದದೊಳ್ಸಂಚಳಿಸಿಪೊಳೆವ ವಿದ್ಯುಲ್ಲತಾಜಾಳಮಾಗಳ್ ।
ತಳೆದತ್ಯಾಶ್ಚರ್ಯಮಂ ಕಜ್ಜಿಲೆ ಬಿಡೆ ಬಿಸಿಲಂ ಕಾಜುತಿರ್ಪಂದದಿಂದಂ ॥

(ಕಾವ್ಯಸಾರಂ)

ಈ ವೃತ್ತದಲ್ಲಿ ಮೀನ್ವೆರಸು ಎಂಬಲ್ಲಿ ಮೀಂವೆರಸು ಎಂದು ಹೇಳಬಹುದೆ? ಹೀಗೆ ಅನಿಷ್ಟರೂಪವು ಸಿದ್ಧಿಸತಕ್ಕ ಈ ಎರಡು ಸೂತ್ರಗಳೂ ಪ್ರಕೃತದಲ್ಲಿ ಪ್ರಾಮಾಣ್ಯಗ್ರಹವನ್ನು ಹೋಗಲಾಡಿಸುವುದರಿಂದ ಇವುಗಳಲ್ಲಿ ಒಂದಾದ ॥ ತದನ್ತ್ಯೋವಾವರ್ಗೇ ॥೪೦॥ ಎಂಬ ಸೂತ್ರವನ್ನು ಹಿಡಿದು ಅದರ ಆಧಾರದಮೇಲೆ ಕವರ್ಗ ಚವರ್ಗ ಪಂಚಮಾಕ್ಷರಗಳು ಅಚ್ಚಗನ್ನಡದಲ್ಲಿರುತ್ತವೆಯೆಂದು ಹೇಳುವುದು ದುಸ್ಸಾಧವಾಗಿ ಕಾಣುವುದು. (ಸಶೇಷ.)

ಟಿಪ್ಪಣಿ.

ಭೂವಿವರಣೆ.

(ಮಧ್ಯಪ್ರಾಂತ್ಯಗಳು)

ಉಪಕರಣಗಳು, ಇಂಡಿಯಾ ಮ್ಯಾಪ್ ಹಲಗೆಯ ಮೇಲೆ ಬರೆದ ಮಧ್ಯಪ್ರಾಂತ್ಯದ ನಕ್ಷೆ ಸಹ.

ವಿಷಯ.	ಬೋಧನಾಕ್ರಮ.
1. ಮಧ್ಯಪ್ರಾಂತ್ಯ.	
1. ಮೇರೆಗಳು.	ಮ್ಯಾಪಿನ ಸಹಾಯದಿಂದ ಹೆಸರನ್ನು ಬಾಲಕರಿಂದಲೇ ಹೇಳಿಸಬೇಕು. ಅನಂತರ ಮೇರೆಗಳನ್ನು ಬಾಲಕರಿಂದ ಹೇಳಿಸಿ ಹಲಗೆಯಮೇಲೆ ಬರೆದಿರುವ ನಕ್ಷೆಯಲ್ಲಿ ಆಯಾಯ ಸ್ಥಳಗಳಲ್ಲಿ ಹೆಸರನ್ನು ಬರೆಸಬೇಕು.
ಉತ್ತರಕ್ಕೆ—ಬಂದಲ್‌ಖಂಡ	
ಪೂರ್ವಕ್ಕೆ—ಛೋಟಾನಾಗಪುರ	

ದಕ್ಷಿಣಕ್ಕೆ-ಹೈದ್ರಾಬಾದ್
ಪಶ್ಚಿಮಕ್ಕೆ-ಮಧ್ಯದ ಇಂಡಿಯ.
ಬೀರಾರಿನ.ಸ್ವಲ್ಪಭಾಗ.

ಮ್ಯಾಪಿನ ಬಣ್ಣದಿಂದ ಇದು ಬ್ರಿಟಿಷರಿಗೆ ಸೇರಿದ ಭಾಗವೆಂದೂ ಇದರಲ್ಲಿ ಕೆಲವು ಆಶ್ರಿತ ಸಂಸ್ಥಾನಗಳು ಇವೆ ಎಂದೂ ಬಣ್ಣದಿಂದಲೇ ತಿಳಿಸಬೇಕು.

2. ವಿಸ್ತೀರ್ಣ.

ಬ್ರಿಟಿಷವಭಾಗ 86500 ಚ. ಮೈ.

ಮೈಸೂರು ದೇಶಕ್ಕೂ ಇದಕ್ಕೂ ಹೋಲಿಸಿ ಮೈಸೂರು ದೇಶದ $4\frac{1}{7}$ ರಷ್ಟು ಇದೆ ಎಂದು ತಿಳಿಸುವುದು.

ಆಶ್ರಿತರಾಜ್ಯಭಾಗ 29500 ಚೆ.ಮೈ
ಒಟ್ಟು-1,16000 ಚದರಮೈಲಿ.

ಸಾಧಾರಣವಾಗಿ ಇದಕ್ಕೆ ಬೊಂಬಾಯಿ ಶೀಮೆಯನ್ನು ಹೋಲಿಸಿ ಬೊಂಬಾಯಿ ಶೀಮೆಯು ಸ್ವಲ್ಪ ಹೆಚ್ಚೆಂದು ತಿಳಿಸಬಹುದು.

ಜನಸಂಖ್ಯೆ-1,29,50000

ಸುಮಾರು ಮೈಸೂರು ದೇಶದ $2\frac{3}{5}$ರಷ್ಟು ಆಗುವುದೆಂದು ನಿದರ್ಶನಪಡಿಸುವುದು.

ಹಲಗೆಯಮೇಲೆ ಬರೆಸಿ ಪುನರಾವರ್ತನ ಮಾಡಿಸುವುದು.

3. ನದಿಗಳು.

1. ನರ್ಮದಾನದಿ.
2. ಮಹಾನದಿ.
3. ಗೋದಾವರೀನದಿ.
4. ವರದಾ, ವೇಣುಗಂಗಾ. ಇವೆರಡೂ ಸೇರುವದರಿಂದ ಆಗುವ ಪ್ರಾಣಹಿತ

ಮ್ಯಾಪಿನ ಸಹಾಯದಿಂದಲೇ ಇವುಗಳನ್ನು ಬಾಲಕರಿಂದ ಹೇಳಿಸಿ ಹಲಗೆಯಮೇಲಿನ ನಕ್ಷೆಯಲ್ಲಿ ಗುರ್ತುಮಾಡಿಸುವುದು.

ವರದಾ. ವೇಣುಗಂಗಾ. ಇವೆರಡೂ ಪ್ರತ್ಯೇಕವಾಗಿ ಹರಿದು ಒಂದಾಗಿ ಸೇರಿದಾಗಿನಿಂದಪ್ರಾಣಹಿತವೆಂಬ ಹೆಸರನ್ನು ಪಡೆದು ಗೋದಾವರೀ ನದಿಗೆ ಸೇರುವುದನ್ನು ತೋರಿಸುವುದು.

ಹಲಗೆಯಮೇಲಿನ ಗುರ್ತಿನಿಂದಲೇ ನದಿಗಳ ಹೆಸರನ್ನು ಹೇಳುವಂತೆ 4—6 ಹುಡುಗರಿಂದ ಹೇಳಿಸುವುದು.

ಅಮರಕಂಟಕವನ್ನು ತೋರಿಸಿ ನರ್ಮದಾನದಿಯ ಮೂಲವೆಂಬುದನ್ನು ಸ್ಪಷ್ಟಪಡಿಸಬೇಕು.

4. ಬೆಟ್ಟಗಳು.	ಪರ್ವತಗಳನ್ನು ಮ್ಯಾಪಿನ ಸಹಾಯದಿಂದ ತೋರಿಸಿ.
1. ವಿಂಧ್ಯಪರ್ವತ	
2. ಸಾತ್ಪುರ ಬೆಟ್ಟಗಳು	ಸಾತ್ಪುರಪರ್ವತದ ಒಂದು ಭಾಗಕ್ಕೆ ಮಹಾದೇವ ಪರ್ವತವೆಂದೂ ಜಬ್ಬಲ್‌ಪುರದ ದಕ್ಷಿಣದಲ್ಲಿ ಪಂಚಮರ್ಹಿ ಬೆಟ್ಟವಿದೆ ಎಂದೂ ಸ್ಪಷ್ಟಗೊಳಿಸಿ. ಇಂತಹ ಗುರುತು ನದಿ, ಇಂತಹ ಗುರುತು ಪರ್ವತಗಳು, ಎಂದು ಸ್ಪಷ್ಟಪಡುವಂತೆ ನಕ್ಷೆಯಮೇಲೆ ಗುರುತು ಹಾಕಿಸಬೇಕು.
3. ಪಂಚಮರ್ಹಿ ಬೆಟ್ಟಗಳು.	
4. ಮಹಾದೇವ ಪರ್ವತ	
	4—6 ಬಾಲಕರಿಂದ ಬೆಟ್ಟಗಳನ್ನು ಹೇಳಿಸಬೇಕು.
	ಪುನರಾವರ್ತನ ಮಾಡಿಸುವುದು.
5. ರಾಜ್ಯಭಾರಕ್ರಮ.	ಇಂಡಿಯಾ ದೇಶವು ಯಾರ್ಯಾರವಶದಲ್ಲಿದೆ ಎಂಬುದನ್ನು ಹೇಳಿಸಿ ನಂತರ ಫ್ರೀಪ್ ಕವ್ಮಿಶನರವರ ಕೈಕೆಳಗಿದ್ದ ರಾಜ್ಯಗಳನ್ನು ಹೇಳಿಸಿ ಅದರಲ್ಲಿ ಮಧ್ಯಪ್ರಾಂತ್ಯವು ಒಂದೆಂಬುದನ್ನು ಸ್ಪಷ್ಟಗೊಳಿಸಬೇಕು.
1. ಬ್ರಿಟಿಷರಿಗೆ ಸೇರಿದ ಭಾಗ	
2. ಫ್ರೀಪ್ ಕವ್ಮಿಶನರವರ ಆಳ್ವಿಕೆಯಲ್ಲಿದೆ	
3. ಇದರಲ್ಲಿ ಆಶ್ರಿತಸಂಸ್ಥಾನಗಳು ಸೇರಿದೆ	ಇದರಲ್ಲಿ ಕೆಲವು ಚಿಕ್ಕ ಆಶ್ರಿತಸಂಸ್ಥಾನನಿರುವುದೆಂಬುದನ್ನು ಮ್ಯಾಪಿನಬಣ್ಣದಿಂದ ನಿದರ್ಶನಪಡಿಸುವುದು.
	ಈ ಆಶ್ರಿತ ಸಂಸ್ಥಾನಗಳಲ್ಲಿ ಬಸ್ತಾರ್ ಇಂದೂರ್ ಇವೇ ಮುಖ್ಯವಾದುದೆಂತಲೂ ಇದಕ್ಕೆ ಒಬ್ಬ ಗೊಂಡನು ರಾಜನಾಗಿರುವನೆಂತಲೂ ತಿಳಿಸುವುದು.
6. ನಿವಾಸಿಗಳು	1 ಕಾಡುಜನಗಳು ಒರಟರು ಎಂಬುದನ್ನು ತಿಳಿಸಬೇಕು.
1. ಗೊಂಡರು	
2. ಕಬೀರ್ ಪಂತಿಗಳು	2 ಕಬೀರ್‌ದಾಸ್ ಎಂಬುವನು 14ನೇ ಶತಮಾನದಲ್ಲಿ ವರ್ಣಾಶ್ರಮ ಭೇದವನ್ನು ತಿರಸ್ಕರಿಸಿ ಪರಿಶುದ್ಧವಾದ ನಡತೆಯು

	ನ್ನೂ ದೇವತಾರಾಧನೆಯನ್ನೂ ಬೋಧಿಸಿದನೆಂಬುದನ್ನು ತಿಳಿಸುವುದು.
3. ಸತ್ನಾಮಿ ಮತದವರು	3 ಘಾಸೀದಾಸ್ ಎಂಬುವನು ಮನುಷ್ಯರೆಲ್ಲರೂ ಒಂದೆ. ಜಾತಿಭೇದವಿಲ್ಲವೆಂದು ಈ ಮತವನ್ನು ಸ್ಥಾಪಿಸಿದನೆಂದು ತಿಳಿಸುವುದು. ಮತವಿಷಯವನ್ನು ತಿಳಿಸುವುದು.
7. ಪಟ್ಟಣಗಳು ಅಲ್ಲಿನ ವಿಶೇಷಗಳು.	ಪುನರಾವರ್ತನ ಮಾಡಿಸುವುದು.
1. ನಾಗಪುರ—ಛೀಪ್ ಕಮ್ಮಿಷನರವರು ಇರುವ ಸ್ಥಳ.	ನಕಲಾಬತ್ತಿ ಕೆಲಸಗಳು, ಚೀಟೀಬಟ್ಟೆ ಡೇರೆಬಟ್ಟೆ, ತಾಮ್ರ ಹಿತ್ತಾಳೆಪಾತ್ರೆ ಮುಂತಾದುವು ತಯಾರಾಗುತ್ತವೆ. ವ್ಯಾಪಾರ ಸ್ಥಳ.
2. ಕಾಮ್ಟಿ-ಇಂಗ್ಲಿಷ್ ಲಷ್ಕರ್ ಇದೆ	
3. ಜಬ್ಬಲ್‌ಪುರ—ವ್ಯಾಪಾರಸ್ಥಳ	ನರ್ಮದಾತೀರಪಟ್ಟಣ.
4. ಸಾಗರ-ಬೆಟ್ಟಸೀಮೆ	ಇದರ ಹತ್ತರ ಒಂದು ಸರೋವರವಿದೆ.
5. ಹಿಂಗನ್‌ಘಾಟ್-ಹತ್ತಿಯವ್ಯಾಪಾರ ಸ್ಥಳ.	ಈ ಪಟ್ಟಣಗಳನ್ನು ಮ್ಯಾಪಿನಲ್ಲಿ ತೋರಿಸಬೇಕು.
6. ಚಿಂದ್ವಾರ. ದೊಡ್ಡವೂರು	ನಂತರ ನಕ್ಷೆಯಲ್ಲಿ ಗುರುತು ಮಾಡಿಸುವುದು.
7. ಸಂಬಲ್‌ಪುರ. ವಜ್ರಸಿಕ್ಕುವಸ್ಥಳ.	
8. ಬುಹರ್ಹಾಪುರ 9. ರಾಯಪುರ	ಗುರುತನ್ನು ತೋರಿಸಿಕೊಂಡು ಪಟ್ಟಣಗಳ ಹೆಸರನ್ನು ಹೇಳಿಸುವುದು.
10. ಛಾಂಡ 11. ಖಂಡ್ವ	ಬೋರ್ಡಿನಮೇಲೆ ಪಟ್ಟಣಗಳ ಹೆಸರನ್ನೆಲ್ಲಾ ಬರೆಯುವುದು.
12. ನರಸಿಂಗಪುರ 13. ಹೂಸಂಗಾಬಾದ ದೊಡ್ಡವೂರುಗಳು	ಪುನರಾವರ್ತನ ಮಾಡಿಸುವುದು.

ಎಸ್. ಶ್ರೀಕಂಠಯ್ಯ.

ಗಣಿತ.

I (a) $\left(\frac{2\frac{1}{4}-\frac{2}{3}\text{ ರ }1\frac{5}{6}}{\frac{1}{5}\text{ ರ }3\frac{1}{3}+\frac{13}{36}}-\frac{1}{2\frac{1}{2}}\right)\div\frac{1}{1\frac{2}{3}}-\frac{3\frac{1}{2}\text{ ರ }1\frac{1}{4}}{1\frac{5}{6}\text{ ರ }3\frac{3}{4}}\div\frac{1\frac{3}{5}\text{ ರ }2\frac{1}{4}}{1\frac{1}{10}\text{ ರ }2\frac{1}{7}}$

ಇದನ್ನು ಸಂಕ್ಷೇಪಿಸಿರಿ.

(b) $\frac{1\cdot6\times1\cdot6\times1\cdot6+2\cdot5\times2\cdot5\times2\cdot5}{1\cdot6\times1\cdot6-1\cdot6\times2\cdot5+2\cdot5\times2.5}$ ಇದೆಷ್ಟು?

II (a) ಒಬ್ಬ ಸಾಹುಕಾರನು ತನ್ನ ಆಸ್ತಿಯ $\frac{5}{12}$ ಭಾಗವನ್ನು ದೊಡ್ಡ ಮಗನಿಗೂ, ಉಳಿದುದರ $\frac{7}{12}$ ಭಾಗವನ್ನು ಚಿಕ್ಕ ಮಗನಿಗೂ ಉಳಿದ ಆಸ್ತಿಯನ್ನು ತನ್ನ ಹೆಂಡತಿಗೂ ಹಂಚುವಂತೆ ಶಾಸನವನ್ನು ಬರೆದಿಟ್ಟನು. ಹುಡುಗರ ಭಾಗಗಳ ವ್ಯತ್ಯಾಸವು 1320 ರೂಪಾಯಿಗಳಾಗಿದ್ದಲ್ಲಿ ಹೆಂಡತಿಯು ಭಾಗದ ಹಣವೆಷ್ಟು?

(b) ಒಂದು ಪಾಠಶಾಲೆಯಲ್ಲಿ ಒಟ್ಟು 450 ಜನ ವಿದ್ಯಾರ್ಥಿಗಳಿರುವ 5 ತರಗತಿಗಳಿವೆ. ಮೊದಲನೆಯ ತರಗತಿಯಲ್ಲಿ ಒಟ್ಟಿನಲ್ಲಿ 36 ಭಾಗ ವಿದ್ಯಾರ್ಥಿಗಳೂ, II ನೇದರಲ್ಲಿ ಒಟ್ಟಿನ ·28 ಭಾಗ ವಿದ್ಯಾರ್ಥಿಗಳೂ, III ನೇದರಲ್ಲಿ ಒಟ್ಟಿನ ·22 ಭಾಗ ವಿದ್ಯಾರ್ಥಿಗಳೂ, IV ನೇ ಕ್ಲಾಸಿನಲ್ಲಿ 21 ಹುಡುಗರೂ, V ನೇ ಕ್ಲಾಸಿನಲ್ಲಿ IV ನೇದರ 2 ರಷ್ಟು ವಿದ್ಯಾರ್ಥಿಗಳೂ ಇದಾರೆ. 1, 2, 3 ನೇ ಕ್ಲಾಸಿನ ಹುಡುಗರೆಷ್ಟುಮಂದಿ?

III 4 ಕುದುರೆಗಳೂ, ಮತ್ತು 6 ಆಕಳುಗಳೂ ಸೇರಿ 1 ತಿಂಗಳೆಗೆ 82 ರೂ. ಹುರಳಿಯನ್ನು ತಿನ್ನುತ್ತದೆ. 18 ಕುದುರೆಗಳೂ, 9 ಆಕಳುಗಳೂ ಸೇರಿ ಅದೇ ತಿಂಗಳಿಗೆ ಎಷ್ಟು ರೂಪಾಯಿಗಳ ಹುರಳಿಯನ್ನು ತಿಂದಾವು? 7 ಆಕಳುಗಳು ಮೇಯುವಷ್ಟು 9 ಕುದುರೆಗಳು ಮೇಯುತ್ತವೆ.

I (a) 7 ಮಂದಿ ಗುರಿ ಹೊಡೆಯುವರು ಕ್ರಮವಾಗಿ 3,5,7,9, 10, 15, 18 ನಿಮಿಷಗಳಲ್ಲಿ ಒಂದು ಸಲ ಗುಂಡು ಹಾರಿಸುತ್ತಾ ಬಂದರೆ ಎಲ್ಲರೂ

ಯಾವಕಾಲದಲ್ಲಿ ಒಂದೇ ಸಲ ಗುಂಡು ಹಾರಿಸುವರು. ಆ ವೇಳೆಗೆ ಒಬ್ಬೊಬ್ಬನು ಎಷ್ಟು ಸಲ ಗುಂಡುಹಾರಿಸಿದಾನೆ ?

(b) 2 ಸಂಖ್ಯೆಗಳ ಸಂಕಲನವು 272, ಅವುಗಳ ಲ, ಸಾ, 1071 ಆದರೆ ಅವುಗಳ ಮಹತ್ತಮ ಸಂಖ್ಯೆ ಯೇನು ?

II ಮೂರು ಸಂಖ್ಯೆಗಳ ಸಂಕಲನವು 1612; ಮೊದಲನೆಯುದು 2 ನೇದಕ್ಕಿಂತ 94 ಕಮ್ಮಿಯಾಗಿದೆ. ಮೊದಲನೇದರ 3 ರಷ್ಟು ಮೂರನೇ ಸಂಖ್ಯೆಗಿಂತ 1637 ಜಾಸ್ತಿಯಾಗಿದೆ. ಸಂಖ್ಯೆಗಳನ್ನು ಹೇಳಿರಿ.

VI ಒಬ್ಬ ಆಡಿಗೆ ಮಾಡುವವನು 1 ಸಂವತ್ಸರಕ್ಕೆ 27 ಮಾಯಿ ಡೋಂಗಳನ್ನೂ ಕೆಲವು ಬಟ್ಟೆಗಳನ್ನೂ ಪಡೆಯುವ ಕರಾರಿನಿಂದ ಕೆಲಸಕ್ಕೆ ನಿಂತು, 6 ನೇ ಮೇ ಲಾಗಾಯಿತು 30 ನೇ ಡಿಸೆಂಬರವರಿಗೆ ಕೆಲಸ ಮಾಡಿ, £ 23-5-0 ನೊಬಲಗನ್ನೂ ಬಟ್ಟೆಗಳನ್ನೂ ಪಡೆದರೆ ಬಟ್ಟೆಗಳ ಬೆಲೆಯೇನು ?

ವ್ಯವಸಾಯಶಾಸ್ತ್ರ.

1 (1) ಹೆಪ್ಪು (2) ಹುಲ್ಲುಬನ್ನಿ (3) ಹಂಸಾಯ (4) ಖಾತೆ (5) ನೀರು ಸರದಿ (6) ಪರಂಪೋಕು (7) ಕಣಿಗಳು (8) ಮೆಟ್ಟೆ. ಇವುಗಳ ಅರ್ಥವೇನು.

(1) (a) ಹೆಪ್ಪು = ಅಂಡುತೆ ಕಾಲುವೆಯ ಧಡಗಳೂ ಕೆತೆಯೇರಿಯು ಮಣುಮುಂತಾದವುಗಳೂ ಕೊಚ್ಚಿ ಹೋಗಿ ಕೊರಕಲು ಬೀಳದಂತೆ ಕಾಪಾಡುವಬಗ್ಗೆ ಅವುಗಳಮೇಲೆ ಹುಲ್ಲು ಬೆಳೆಸುವದಕ್ಕಾಗಿ ಹುಲ್ಲು ಬೇರು ಸಹಿತವಾಗಿ ಇರುವಂತೆ ಸುತ್ತು ಆಳವಾಗಿ ಎತ್ತರ ತರುವ ಮಣ್ಣುಗಡೆ.

(b) ಹಾಲು. ಮೊಸರಾಗುವದಕ್ಕಾಗಿ ಅದಕ್ಕೆ ಸೇರುವ ಮಜ್ಜಿಗೆ—

(2) ಹುಲ್ಲುಬನ್ನಿ = ಸರ್ಕಾರಿ ಜವಿೂನಿನಲ್ಲಿ ಇರುವ ಹುಲ್ಲನ್ನು ಮೇಯಿಸಿಕೊಳ್ಳುವುದಕ್ಕೆ ಪಡೆಯುವದಕ್ಕಾಗಿ ಕೊಡುವತೆರಿಗೆ.

(3) ಹಂಸಾಯ= ಬಾಜು ಇರತಕ್ಕುದು ಎಂಬರ್ಥ. (ಆದರೆ ಸಾಧಾರಣವಾಗಿ ಬಾಜೂ ಜವಿೂನಿನ ದರವನ್ನು ಸೂಚಿಸುತ್ತದೆ.)

(4) ಖಾತೆ= ಒಂದು ಗ್ರಾಮದಲ್ಲಿ ವೊಂದು ಕುಳಕ್ಕೆ ಇರತಕ್ಕ ಜವಿೂನು ವಗೈರೆ ತಪಶೀಲು ತೋರಿಸುವ ಲೆಖ್ಖ. (5) ನೀರುಸರದಿ = ಸರ್ಕಾರದ ಕೆರೆ, ನಾಲೆ ವಗೈರೆಗಳಿಂದ ಖುಷ್ಕಿ ಜವಿೂನುಗಳಲ್ಲಿ ತರಿ ಬಾಗಾಯಿತು ಬೆಳೆ ಮಾಡುವುದಕ್ಕಾಗಿ ತೆಗೆದುಕೊಂಡ ನೀರಿಗಾಗಿ ಕೊಡುವ ತೆರಿಗೆ (6) ಪರಂಪೋತು = ಸರ್ಕಾರಿ ಬಂಜರು (7) ಕಣಿಗಳು = ಕಬ್ಬನ್ನು ಒತ್ತಿ ರಸ ಹೊರಡಿಸುವುದಕ್ಕಾಗಿ ಜೋಡಿಸಿರುವ ವಿಮುಖವಾಗಿ ಸುತ್ತತಕ್ಕ ಮರ. (8) ಮೆದೆ = ಪೈರುಗಳನ್ನು ಕೊಯಿದು ಹಾಕಿರುವ ಗುಡ್ಡೆಗೂ ಮತ್ತು ಹುಲ್ಲು ಬಣಬೆಗೂ ಸಹ ಮೆದೆಯನ್ನುತ್ತಾರೆ.

2 (a) ಕಲ್ಲಿನಿಂದ ಮಣ್ಣು ಉತ್ಪತ್ತಿಯಾಗುವ ರೀತಿಯನ್ನು ಸೂಕ್ಷ್ಮವಾಗಿ ವಿವರಿಸಿ.

ಕಲ್ಲಿನಿಂದ ಮಣ್ಣು ಉಂಟಾಗುವ ರೀತಿ. (1) ಫಕ್ಕನೆ ಸಂಭವಿಸುವ ಶೀತೋಷ್ಣಗಳ ವ್ಯತ್ಯಾಸಗಳಿಗೆ ಗುರಿಮಾಡಲ್ಪಟ್ಟು ಛಿದ್ರಛಿದ್ರಗಳಾಗಿ ಮಣ್ಣಾಗುತ್ತದೆ (2) ಜೀಳುವ ಅಥವ ಹರಿಯುನೀರಿನ ಅಧೀನಕ್ಕೆ ಸಿಕ್ಕಿದಕಲ್ಲು ಆ ನೀರಿನ ಹೊಡತದಿಂದ ಸವೆದು ಜೂರಾಗುತ್ತದೆ. (3) ಕಲ್ಲುಗಳು ಹೀರುವ ನೀರೂ ಸಹ ಅದನ್ನು ಒಡೆದು ಮಣ್ಣು ಮಾಡುತ್ತದೆ. (4) ಕಬ್ಬಿಣದ ಅಂಶವೂ ಕಲ್ಲುಗಳ ಮೇಲ್ಭಾಗವೂ ಗಾಳಿ ಮತ್ತು ತೇಮಗಳಿಂದ ತುಕ್ಕು ಹಿಡಿದು, ನೀರಿನಿಂದ ಆ ಕೆಲಬು ಕೊಚ್ಚಿ ಹೋಗುವದರ ಮೂಲಕ ಸವೆದು ಮಣ್ಣಾಗುತ್ತದೆ.

(b) ಮಣ್ಣಿನಲ್ಲಿ ಅಡಗಿರುವ ಮುಖ್ಯವಾದ ಸಂಯುಕ್ತಪದಾರ್ಥಗಳು ಯಾವುವು.

ಮರಳು, ಜೇಡು, ಸಾರಾಂಶವಸ್ತು.

3 (a) ಭೂಮಿಯು ಬರಡಾಗುವುದಕ್ಕೆ ಕಾರಣಗಳೇನು.

(1) ಮರಳು, ಜೇಡು, ಸುಣ್ಣ, ಸಾರಾಂಶವಸ್ತುಗಳು ಅಥವ ಪೂರ್ಣವಾಗಿ ತುಕ್ಕುಹಿಡಿದ ಕಬ್ಬಿಣ ಲೋಹವೇ ಆಗಲಿ ಮಿತಿಮೀರಿ ಇರಕೂಡದು.

(2) ಮಣ್ಣು ಬಹು ತೆಳುವಾಗಿ ಘಟ್ಟಿ ಬಂಡೆಯಮೇಲೆ ಇರಕೂಡದು.

(b) ಭೂಮಿಯು ಫಲವತ್ತಾಗಿಯೂ ವ್ಯವಸಾಯಕ್ಕೆ ಸುಲಭವಾಗಿಯೂ ಇರಬೇಕಾದರೆ ಅದರಲ್ಲಿ ಮರಳು, ಜೇಡು, ಕೊಳೆತ ಸೊಪ್ಪಿನ ಗೊಬ್ಬರ ಕರಗುವ ಕ್ಷಾರಗಳು ಸುಮಾರು ಶೇಕಡಾ ಎಷ್ಟೆಷ್ಟು ಇರಬೇಕು ?

ಮರಳು ಸುಮಾರು	45	ಸುಮಾರು ಈ ಅಂಶಗಳಲ್ಲಿ ಒಳ್ಳೆ ಭೂಮಿಯಾಗಿರುವುದು.
ಜೇಡು ...	44	
ಕೊಳೆತಸೊಪ್ಪಿನ ಗೊಬ್ಬರ	10½	
ಕರಗುವ ಷಾರಗಳು ...	½	
	100	

4. ಜೇಡು ಭೂಮಿಗಳನ್ನು ಅಬಾದು ಮಾಡುವುದು ಹೇಗೆ ?

(1) ಮರಳು ಬೆರಸುವುದರಿಂದ (2) ಗೊಬ್ಬರ ಹಾಕುವುದರಿಂದ (3) ದನಗಳ ಹೊಸದಾದ ಮುಗ್ಗದ ಗೊಬ್ಬರ ಹಾಕುವುದರಿಂದ (4) ಹಸಿಸೊಪ್ಪಿನ ಗೊಬ್ಬರ ಹಾಕುವುದರಿಂದ (5) ಕೆಳಮಣ್ಣಿನಿಂದ ಜೌಗು ನೀರು ಹರಿಸುವುದರಿಂದ

5. ಕಾರುಬೆಳೆ ಮಾಡುವುದಕ್ಕೆ ಯಾವ ಮಳೆಗಳಲ್ಲಿ ಬಿತ್ತಬೇಕು ? ಮತ್ತು ಯಾವ ಮಳೆಗಳಲ್ಲಿ ಬಿತ್ತಿದರೆ ಹೈನು ಎನ್ನಿಸಿಕೊಳ್ಳುವುದು ?

ಕಾರುಬೆಳೆಗಳ ಬಿತ್ತನವನ್ನು = (1) ಭರಣಿ, ಕೃತ್ತಿಕೆಯಲ್ಲಿ ಬಿತ್ತುತ್ತಾರೆ. (2) ಆರಿದ್ರಾ, ಪುನರ್ವಸು, ಪುಷ್ಯ, ಆಶ್ಲೇಷದಲ್ಲಿ ಬಿತ್ತಿದರೆ ಬೀಜಗಳು ಹೈನುಬಿತ್ತನ ಎನ್ನಿಸಿಕೊಳ್ಳುತ್ತವೆ.

6. ಉತ್ತ ಭೂಮಿಯಲ್ಲಿ ಹೆಂಟೆಗಳು ನಿಲ್ಲದಂತೆ ಮಣ್ಣನ್ನು ಚೆನ್ನಾಗಿ ಪುಡಿಮಾಡುವುದಕ್ಕೆ ಕಾರಣಗಳೇನು ?

ಉತ್ತ ಭೂಮಿಯನ್ನು ಚೆನ್ನಾಗಿ ಪುಡಿಗುಟ್ಟದೆ ಹೆಂಟೆಗಳೇ ನಿಲ್ಲುವುದರಿಂದ ಉಳುವ ಉದ್ದೇಶಗಳು ಏನೂ ನೆರವೇರಿದ ನಂಬಿಕೆ ಆಗುವುದಿಲ್ಲ. ಹೇಗಂದರೆ :—(1) ಘಟ್ಟಿಯಾದ ಹೆಂಟೆಗಳಲ್ಲಿ ಬೇರುಗಳು

ಸುಲಭವಾಗಿ ಪ್ರವೇಶಿಸುವುದಿಲ್ಲವಾಗಿ ಅವುಗಳಿಗೆ ಹೆಚ್ಚು ಆಹಾರ ಸಿಕ್ಕುವುದಿಲ್ಲ. ಒಲವಾಗಿ ಬೇರೂರಿಕೊಳ್ಳುವುದಿಲ್ಲ. ಮತ್ತು ಮಣ್ಣು ಮಾಗಿ ಆಳವಾಗಿ ಮೃದುವಾಗಿರುವುದಿಲ್ಲ.

(2) ಮಣ್ಣುಹೆಂಟೆಗಳಲ್ಲಿ ಸಿಕ್ಕಿರುವ ಕಳೆಗಳ ಬೇರುಗಳು ಬಿಸಿಲು ಗಾಳಿಗಳಿಂದ ಜಾಗ್ರತೆ ಒಣಗುವುದಕ್ಕೆ ಅವಕಾಶವಿಲ್ಲದೆಹೋಗುವುದು. (3) ಕಟ್ಟಿದ್ದ ನೀರು ಮಳೇನೀರು ಇಷ್ಟು ಸರಾಗವಾಗಿ ಹೆಂಟೆಗಳಲ್ಲಿ ಹೀರುವುದಿಲ್ಲ. (4) ಬಿತ್ತನದ ಕಾಳುಗಳು ಮೊದಲಾದುವುಗಳನ್ನು ನೆನಿಸುವುದು ಕಷ್ಟವಾಗುವುದು. (5) ಸಣ್ಣಸಣ್ಣ ಬೀಜಗಳನ್ನು ಬಿತ್ತಿ ಅವುಗಳ ಮೇಲೆ ತಕ್ಕಷ್ಟು ಮಣ್ಣು ಮುಚ್ಚುವುದು ಅಸಾಧ್ಯವಾಗುತ್ತದೆ.

೪. (a) ತರೀ ಫಸಲ್ ಮಾಡುವಾಗ ಕೆಸರಿನೊಳಗೆ ಜೆಲ್ಲಿ ಬಿತ್ತುವುದಕ್ಕಿಂತ ನಾಟಿ ಹಾಕುವುದರಿಂದಾಗುವ ಹೆಚ್ಚು ಪ್ರಯೋಜನಗಳೇನು? ಮತ್ತು ನಷ್ಟಗಳೇನು?

(b) ನಾಟಿ ಹಾಕತಕ್ಕ ಭತ್ತದ ಪೈರು ಎಷ್ಟು ದಿನದ ಪೈರಾಗಿದ್ದರೆ ಒಳ್ಳೇದು?

(a) ಕೆಸರಿನಲ್ಲಿ ಜೆಲ್ಲುವುದಕ್ಕಿಂತ ಭತ್ತದ ಪೈರು ನಾಟಿ ಹಾಕುವುದರಲ್ಲಿರುವ ಹೆಚ್ಚು ಪ್ರಯೋಜನಗಳು= (1) ಕಾಲಾವದಿಯಲ್ಲಿ ಕೆರೆಗೆ ನೀರು ಬರುವುದು ಸಾವಕಾಶವಾಗಿ ಗದ್ದೆ ಬಿತ್ತುವುದಕ್ಕೆ ಇಲ್ಲದೇಹೋಗುವ ಸಂದರ್ಭದಲ್ಲೂ ಕೂಡ ಅಗೆಹಾಕಿದ್ದು ನೀರು ಬಂದನಂತರ ನಾಟಿ ಹಾಕಿ ಬೆಳೆ ತೆಗೆಯಬಹುದು. (2) ನಾಟಿಪೈರು ಪಾತಿಯಲ್ಲಿ ಬೆಳೆಯುತ್ತಿರುವಾಗ ಗದ್ದೆಯಲ್ಲಿ ಗೊಬ್ಬರದ ಪೈರಾಗಲಿ ಮತ್ತ್ಯಾವ ಬೆಳೆಯಾಗಲಿ ಬೆಳೆಯುತ್ತಾ ಇರಬಹುದು. ಅಥವಾ ಜವಿಾನನ್ನು ಅದುವರಿಗೆ ಸಾವಕಾಶವಾಗಿ ಪಾಕು ಮಾಡಬಹುದು. (3) ಬಿತ್ತನದ ಬೀಜವು ಕಮ್ಮಿಯಾಗಿ ಹಿಡಿಯುವುದು. (4) ನಾಟಿ ಗದ್ದೆಯಲ್ಲಿ ಕಳೆ ವಿಶೇಷವಾಗಿ ಬೆಳೆಯುವುದಿಲ್ಲ. (5) ನಾಟಿಪೈರು ಎಷ್ಟು ವಯಸ್ಸಿನದೋ ಅಷ್ಟು ದಿನ ಗದ್ದೆಗೆ ಕಟ್ಟತಕ್ಕ ನೀರು ಮಾಗುವುದು. (6) ನಾಟಿಪೈರು ನಾಟಿ ಹಾಕುವ ಕಾಲದ ವರಿಗೆ ಒಗ್ಗು ಹೊಯಿದಿದ್ದ ನೆಲದಿಂದ ತೆಗೆದುಕೊ

ಳ್ಳತಕ್ಕಷ್ಟು ಆಹಾರವು ನಾಟೆ ಗದ್ದೆಗೆ ಉಳಿಯುವುದು. ಇದರಿಂದಿರುವ ಅನನುಕೂಲಗಳು= (1) ನಾಟೆ ಹಾಕುವುದಕ್ಕೆ ಜಾಸ್ತಿ ಲಾಗೋಡು ಹಿಡಿಯುತ್ತದೆ.

(b) 35 ದಿನದ ಲಾಗಾಯಿತು 45 ದಿನದ ವರಿಗಿನ ಪೈರು ನಾಟೆ ಹಾಕುವುದು ಉತ್ತಮ.

—ಕ್ಷೇತ್ರಗಣಿತ—

I (a) ಪರಿಘಕ್ಕೂ ವೃತ್ತಕ್ಕೂ, ಇರುವ ವ್ಯತ್ಯಾಸವೇನು?

(b) ಒಂದು ತ್ರಿಕೋಣದ ತಳರೇಖೆಯು 15 ಸರಪಣಿ 25 ಕೊಂಡಿಗಳು, ಲಂಬವು 3 ಸರಪಣಿ, 75 ಕೊಂಡಿಗಳಾದರೆ, ಎಕರೆ 1 ಕ್ಕೆ 4 ಪೌಂಡ್ 16 ಪಿ, ನಂತೆ ಕಂದಾಯು ವೆಷ್ಟು ಬರಬಹುದು?

II 35 ಅಡಿ ಉದ್ದ ಉಳ್ಳ, ಏಣಿಯನ್ನು ಒಂದು ಬೀದಿಯಲ್ಲಿ ಒಂದು ಮನೆಯ ಗೋಡೆಗೆ ಹಾಕಿದರೆ ನೆಲದಿಂದ 21 ಅಡಿಗಳ ಎತ್ತರದಲ್ಲಿ ಗೋಡೆಯನ್ನು ತಗಲುತ್ತದೆ. ಏಣಿಯುಕಾಲುಗಳು, ಇದ್ದಸ್ಥಳದಲ್ಲಿಯೇ, ಇರುವಂತೆ, ಏಣಿಯನ್ನು ತಿರುಗಿಸಿ, ಎದುರು ಶ್ರೇಣಿಯಲ್ಲಿರುವ ಒಂದು ಮನೆಯ ಗೋಡೆಗೆ ಹಾಕಿದರೆ, ಏಣಿಯು ನೆಲದಿಂದ 28 ಅಡಿಗಳ ಎತ್ತರದಲ್ಲಿ ಗೋಡೆಯನ್ನು ತಗಲುತ್ತದೆ. ಬೀದಿಯು ಅಗಲವೆಷ್ಟು?

III ಒಂದು ತ್ರಾಪಿಜ್ಯಾಯದ (ಆಕೃತಿಯುಲ್ಲಿರುವ ಹೊಲದ) ಸಮಾನಾಂತರ ರೇಖೆ, 1346, ಮತ್ತು 1154 ಕೊಂಡಿಗಳಾಗಿವೆ, ಅವುಗಳ ಅಂತರದ ಲಂಬವು 620 ಕೊಂಡಿಗಳು. ಒಟ್ಟು ಹೊಲದ ಕಂದಾಯುವು 38 ಪೌಂ. 15 ಪಿ, ಗಳಾದರೆ 1 ಕ್ಕೆ ಯೆಷ್ಟು?

IV 238 ಅಡಿ ವ್ಯಾಸವುಳ್ಳ ಒಂದು ವರ್ತುಳಾಕಾರದ ಕೊಳದ ಸುತ್ತಲೂ, 7 ಅಡಿ ಅಗಲವುಳ್ಳ ಒಂದು ರಸ್ತೆಯನ್ನ ಮಾಡಿದರೆ ಆರಸ್ತೆಯ ಕ್ಷೇತ್ರಫಲವೆಷ್ಟು?

V ಒಂದು ತ್ರಿಕೋಣದ ಮೂರು ಬಾಹುಗಳು 26, 28, 30, ಅಂಗುಲಗಳಾದರೆ, ಅದರ ಹೊರಗಣ ತ್ರಿಜ್ಯದ ಉದ್ದ ವೆಷ್ಟು?

VI 24 ಅಡಿ ದೂರದಲ್ಲಿ ನಿಂತಿರುವ 8 ಮತ್ತು 15 ಅಡಿಗಳ ಉದ್ದವಿರುವ ಎರಡು ಕಂಭಗಳ ಒಂದು ತುದಿಯಿಂದ ಮತ್ತೊಂದರ ತುದಿಗಿರುವ ದೂರವೆನು?

* ವಿದ್ಯಾದಾಯಿನಿ. *

ಭಾಗ ೧೪.] ಅಕ್ಟೋಬರ್—೧೯೦೬. [ಸಂಚಿಕೆ ೧೦.

ಮೈಸೂರು ಸಂಸ್ಥಾನದ ಶ್ರೀಮಾನ್ ದಿವಾನ್ ಸಾಹೆಬರವರು ಮೈಸೂರು ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ವಿದ್ಯಾಭ್ಯಾಸದ ವಿಚಾರವಾಗಿ ಹೇಳಿದ ವಿಷಯಗಳು.

ಸಂಸ್ಥಾನದಲ್ಲಿರುವ ವಿದ್ಯಾಶಾಲೆಗಳ ಸಂಖ್ಯೆಯು 904—05 ರ ಅಖ್ಯೈರಿನಲ್ಲಿ 3,928 ಇದ್ದದ್ದು 1905—06 ರ ಅಖ್ಯೈರಿನಲ್ಲಿ 4,093 ಕ್ಕೆ ಹೆಚ್ಚಿತು. ಸ್ಕೂಲಿಗೆ ಹೋಗುತ್ತಿದ್ದ ಹುಡುಗರ ಸಂಖ್ಯೆಯು 1,11,945 ರಿಂದ 1,23,057 ಕ್ಕೆ ಹೆಚ್ಚಿತು. ಸ್ಕೂಲಿಗೆ ಹೋಗುವ ವಯಸ್ಸಿನ ಹುಡುಗ ಹುಡುಗಿಯರ ಸಂಖ್ಯೆಗಳು ಶೇಕಡಾ 2·227 ರಿಂದ 25 ಕ್ಕೂ 4·5 ರಿಂದ 4·3 ಕ್ಕೂ ಹೆಚ್ಚಿದವು. ಈ ಸಭೆಯು ಕೆಲವು ಪ್ರತಿನಿಧಿಗಳ ಕೋರಿಕೆಯಂತೆ ಇಂಗ್ಲೀಷ್ ಭಾಷೆಯಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆಗೆ ಮನೆಯಲ್ಲಿ ಓದಿಕೊಂಡು ಹೋಗುವ ವಿದ್ಯಾರ್ಥಿಗಳಿಗೆ ಫೀಜನ್ನು 10 ರೂಪಾಯಿಂದ 7 ರೂಪಾಯಿಗೆ ಇಳಿಸಿತು. ನಾಯಿಂದರು, ಹೊಲೆಯರು, ಕೊರಚರು ಮೊದಲಾದ ಕೀಳುಜಾತಿಗೆ ಸೇರಿದ ವಿದ್ಯಾರ್ಥಿಗಳು ತಾಲ್ಲೂಕು ವರ್ನಾಕ್ಯುಲರ್ ಸ್ಕೂಲುಗಳಲ್ಲಿಯೂ ಬ್ರಾಂಚ್ ಸ್ಕೂಲುಗಳಲ್ಲಿಯೂ ಹೋಬಳಿ ಸ್ಕೂಲುಗಳಲ್ಲಿಯೂ ಸ್ಕೂಲು ಫೀಜುಗಳನ್ನು ಕೊಡುವದರಿಂದ ಖಾಯುವಾಗಿ ವಿನಾಯಿಸಲ್ಪಟ್ಟಿರುತ್ತಾರೆ. ಪ್ರೌಢಶಾಸ್ತ್ರೀಯ ವಿಚಾರಕ್ಕಾಗಿಯೂ ಕಸಬುದಾರಿ ವಿದ್ಯಾಭ್ಯಾಸಕ್ಕಾಗಿಯೂ ದಾವೋದರದಾನ ಧರ್ಮದ ವಿದ್ಯಾರ್ಥಿವೇತನಗಳನ್ನು ಕೊಡುವದಕ್ಕೆ ನಿಬಂಧನೆಗಳನ್ನು ಮಂಜೂರ್ಮಾಡಿತು. ಈ ವಿದ್ಯಾರ್ಥಿ ವೇತನಗಳನ್ನು 1907 ನೆಯ ಜನವರಿಯಿಂದ ಕೊಡಲಾಗುವದು.

ಸ್ತ್ರೀ ವಿದ್ಯಾಭ್ಯಾಸವು ವೃದ್ಧಿಯಾಗುತ್ತಲೇ ಇತ್ತು. ಕಳೆದ ಬಿ. ಎ. ಡಿಗ್ರಿ ಪರೀಕ್ಷೆಯಲ್ಲಿ ಮಹಾರಾಣಿಯವರ ಕಾಲೇಜಿನಿಂದ ಇಬ್ಬರು ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿದ್ದನ್ನು ಕೇಳಿ ನೀವೆಲ್ಲರೂ ಸಂತೋಷಪಡುವಿರಿ.

ಮೈ॥ ಭಾಭಾಯವರು ಫಲೋ ರಜಾದಮೇಲೆ ಯೂರೋಪಿಗೆ ಹೋಗಿರುವದರಿಂದ ಮೈಸೂರು ಸರ್ಕಾರದವರು ಈ ಅವಕಾಶವನ್ನೇ ಉಪಯೋಗಿಸಿಕೊಂಡು ಯೂರೋಪು ಮತ್ತು ಅಮೆರಿಕಾ ದೇಶಗಳಲ್ಲಿ ಹಸ್ತಕೌಶಲ ಶಿಕ್ಷಣವೆಂದು ಪ್ರಸಿದ್ಧವಾಗಿರುವ ಶಿಕ್ಷಣಕ್ರಮವನ್ನು ಈ ದೇಶದ ಉಪಯೋಗಕ್ಕಾಗಿ ಚೆನ್ನಾಗಿ ತಿಳಿದುಕೊಂಡು ಬರುವಂತೆ ಏರ್ಪಡಿಸಿದ್ದಾರೆ.

ಶಿಲ್ಪವೇ ಮೊದಲಾದ ವಿದ್ಯಾಭ್ಯಾಸ.

ಶಿಲ್ಪದ ಮತ್ತು ಕೈಗಾರಿಕೆಯ ವಿದ್ಯಾಭ್ಯಾಸವು ಗತವರ್ಷದಲ್ಲಿ ಕೂಡಿದಮಟ್ಟಿಗೂ ಚೆನ್ನಾಗಿ ಅಭಿವೃದ್ಧಿಯಾಯಿತು. ಮೈಸೂರಿನಲ್ಲಿರುವ ಕೈಗಾರಿಕೆ ಮತ್ತು ಇಂಜಿನೀರಿಂಗ್ ಸ್ಕೂಲುಗಳಿಗೂ ಮತ್ತು ಸಂಸ್ಥಾನದಲ್ಲಿ ಸ್ವಲ್ಪಮಟ್ಟಿಗೆ ಗವರ್ನಮೆಂಟಿನವಾಗಿರುವ ಆರು ಕೈಗಾರಿಕೆ ಮತ್ತು ನೇಯ್ಗೆಯ ಪಾಠಶಾಲೆಗಳಿಗೂ ಖರ್ಚುಬಗ್ಗೆ ಹೆಚ್ಚು ಹಣವನ್ನು ಮಂಜೂರ್ಮಾಡಲಾಯಿತು. ಬಾಗೆಪಲ್ಲಿಯಲ್ಲಿಯೂ ಶ್ರೀನಿವಾಸಪುರದಲ್ಲಿಯೂ ಇಟ್ಟಿರುವ ಸಾಹುಕಾರಿ ಕೈಗಾರಿಕೆ ಪಾಠಶಾಲೆಗಳಿಗೆ ಹೊಸದಾಗಿ ತಿಂಗಳುಗಟ್ಟಲೆ ಗ್ರ್ಯಾಂಟನ್ನು ಮಂಜೂರ್ಮಾಡಲಾಯಿತು. ಮೈಸೂರಿನಲ್ಲಿ ವೆಸ್ಲಿಯನ್ ಮಿಷನಿಂದ ಒಂದು ಹೊಸವ್ಯಾಪಾರ ವಿದ್ಯಾಶಾಲೆಯು ಇಡಲ್ಪಟ್ಟಿತು. ಆ ಸ್ಕೂಲಿಗೆ ಬೇಕಾದ ಉಪಕರಣಗಳಿಗಾಗಿ ಸರ್ಕಾರದವರು ಒಟ್ಟಾಗಿ 900 ರೂಪಾಯನ್ನು ಒಂದೇಸಲ ಮಂಜೂರ್ಮಾಡಿದರು. ಮೈಸೂರು ಇಂಜಿನೀರಿಂಗ್ ಸ್ಕೂಲಿನ ವಿದ್ಯಾರ್ಥಿಗಳನ್ನು ಕಾರ್ಯತಃ ತರಬೇತು ಮಾಡುವದಕ್ಕಾಗಿ ಮುಖ್ಯವಾದ ಇಂಜನೀರಿಂಗ್ ಕಾಂಗಾರಿಗಳಿಗೆ ಒಂದೊಂದುವೇಳೆ ಅವರ ಉಪಾಧ್ಯಾಯರು ಅವರನ್ನು ಕರೆದುಕೊಂಡು ಹೋಗಿ ತೋರಿಸುವಂತೆ ಏರ್ಪಣೆ ಮಾಡಿತು. ಬೊಂಬಾಯಿ ಮದರಾಸಿನಲ್ಲಿರುವ ಶಿಲ್ಪದ ಮತ್ತು ಕೈಗಾರಿಕೆಯ ಪಾಠಶಾಲೆಗಳಲ್ಲಿ ತರಬೇತಾಗುವದಕ್ಕೋಸ್ಕರ ಮೈಸೂರು ವಿದ್ಯಾರ್ಥಿಗಳಿಗೆ 14 ವಿದ್ಯಾರ್ಥಿ ವೇತನಗಳನ್ನು ಕೊಟ್ಟಿತು.

ದೊಡ್ಡಬಳ್ಳಾಪುರದ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನ ವಿದ್ಯಾರ್ಥಿಗಳಿಗೆ ವ್ಯವಸಾಯವನ್ನು ಕಾರ್ಯತಃ ಬೋಧಿಸುವದಕ್ಕಾಗಿ ಆ ಸ್ಕೂಲಿಗೆ ಸಂಬಂಧಪಟ್ಟ ಒಂದು ಸಣ್ಣ ಮಾದರಿ ಹೊಲದ ಕೆಲಸವನ್ನು ಉಪಕ್ರಮಿಸುವದಕ್ಕೋಸ್ಕರ ಸರ್ಕಾರ

ದವರು ಪ್ರತ್ಯೇಕವಾಗಿ 300 ರೂಪಾಯಿನ್ನು ಮಂಜೂರ್ಮಾಡಿದರು. ಚಿತ್ರದುರ್ಗ ದಲ್ಲಿರುವ ಮಹಲ್ ತೋಟವನ್ನೂ ಅದಕ್ಕೆ ಪೂರ್ವದಲ್ಲಿರುವ ಎರಡು ಎಕರೆ ವಿಸ್ತೀರ್ಣವುಳ್ಳ ಜವಿಾನನ್ನೂ ಮಾದರಿ ಮತ್ತು ಪರೀಕ್ಷೆಯು ಹೊಲದಂತೆ ಉಪಯೋಗಿಸ ಬೇಕೆಂಬ ಷರತ್ತಿನಮೇಲೆ ಕೈಗಾರಿಕೆ ಪಾಠಶಾಲೆಯು ಸೂಪರ್ಿಟೆಂಡೆಂಟಿಗೆ ಗುತ್ತಿಗೆಗೆ ಕೊಡುವಂತೆ ಆಪ್ಪಣೆಕೊಟ್ಟಿತು.

ಕೋಲಾರದಲ್ಲಿಯೂ ಶಿವಮೊಗ್ಗೆಯಲ್ಲಿಯೂ ಇರುವ ನಾರ್ಮಲ್ ಮತ್ತು ಹೈಸ್ಕೂಲುಗಳಲ್ಲಿ ನಕ್ಷೆ ಬರೆಯುವದನ್ನು ಬೋಧಿಸುವದಕ್ಕೋಸ್ಕರ ಇಬ್ಬರು ನಕ್ಷೆ ಉಪಾಧ್ಯಾಯರನ್ನು ನೇವಿಸುವಂತೆ ಮಂಜೂರ್ಮಾಡಿತು.

ಪ್ರಖ್ಯಾತರಾಗಿದ್ದು ಗತಿಸಿದ ಲೋಕಹಿತೈಷಿ ಮೆ॥ ತಾತಾಯವರಿಂದ ಬೆಂಗಳೂರಲ್ಲಿ ಏರ್ಪಡಿಸಲ್ಪಟ್ಟ ಪರೀಕ್ಷೆ ರೇಷ್ಮೆ ತೋಟವನ್ನು ಯಾವ ಉತ್ಕೃಷ್ಟವಾದ ರೀತಿಯಲ್ಲಿ ಉಪಯೋಗಿಸಿಕೊಂಡು ಸ್ಥಳೀಯ ರೇಷ್ಮೆಯ ಸಾಗುವಳಿಯು ವಿಧಾನಗಳನ್ನು ಅಭಿವೃದ್ಧಿ ಪಡಿಸಬೇಕೆಂಬ ವಿಷಯವು ಸರಕಾರದವರ ಪರ್ಯಾಲೋಚನೆಯುಲ್ಲಿತ್ತು. ಮೊದಲು ಅದನ್ನು ಸರ್ಕಾರಕ್ಕೆ ಕೊಂಡುಕೊಂಡು ಸಂಪೂರ್ಣವಾಗಿ ಸರ್ಕಾರದ ಆಡಳಿತದಲ್ಲಿ ಇಟ್ಟು ನಡೆಸಬೇಕೆಂಬ ಅಭಿಪ್ರಾಯವಿತ್ತು. ಅದರೆ ತಿರಿಗಿ ಯೋಚಿಸಿದ್ದರಲ್ಲಿ ಸದರಿ ತೋಟವನ್ನು ಈಗಿರುವ ಜನಗಳ ಕೈಕೆಳಗೆ ಇದೇ ಕ್ರಮದಲ್ಲಿ ನಡೆಸುವದು ಉಕ್ತವೆಂದು ತೋರಿಬಂದದ್ದರಿಂದಲೂ ಅದರ ಮಾಲೀಕರ ಮೇಲೆ ಹೆಚ್ಚು ಭಾರವನ್ನು ಹಾಕದೆ ರೇಷ್ಮೆಯ ಸಾಗುವಳಿಯಲ್ಲಿ ಆಸಕ್ತಿಯುಳ್ಳ ಚುನಾಯಿಸಲ್ಪಟ್ಟ ಜನಗಳಿಗೆ ಅದನ್ನು ಒಂದು ತರಬೇತಾಗತಕ್ಕ ಸ್ಥಳವಾಗಿ ಏರ್ಪಡಿಸಬೇಕೆಂದು ತೋರಿದ್ದರಿಂದಲೂ ಆದಕ್ಕೆ ಸಾಲೀಯಾನಾ 3,000 ರೂಪಾಯಿಗಳನ್ನು ಕೊಡುವಂತೆ ಮಂಜೂರ್ಮಾಡಿತು.

ವಿದ್ಯಾಭ್ಯಾಸ.

ಹೆಚ್ಚು ಪ್ರಯೋಜನ ಕರವಾದ ಬೇರೆ ವಿದ್ಯೆಗಳನ್ನು ಬಿಟ್ಟು ಹುಡುಗರು ಇಂಥಾ ವಿದ್ಯೆಗಳನ್ನು ಕೆಲವು ವರ್ಷಗಳ ಪರಿಯಂತರ ಕಲಿಯಬೇಕೆಂದು ಸೂಚಿಸಿದ್ದಾದರೆ ಯಾರೂ ಒಪ್ಪಲಿಕ್ಕಿಲ್ಲ. ಹೀಗೆ ಇಂಥಾ ಸಂದರ್ಭಗಳಲ್ಲಿ ಪ್ರಯೋಜನ

ತಾರತಮ್ಯವನ್ನು ನೋಡಿ ನಿರ್ಣಯಿಸುವ ಪಕ್ಷದಲ್ಲಿ ಎಲ್ಲಾ ಸಂದರ್ಭಗಳಲ್ಲಿಯೂ ಹಾಗೆ ಮಾಡುವುದು ಅವಶ್ಯಕ. ಎಲ್ಲಾ ವಿದ್ಯೆಗಳನ್ನು ಕಲಿಯಲು ನಮಗೆ ಕಾಲವಿದ್ದಿದ್ದಿಯಾದರೆ ಮನಸ್ಸಿಗೆ ಚಿಂತೆಗಿಂತೆ ಅವಕಾಶವಿರಲಿಲ್ಲ. ಒಂದು ಹಳೆಯ ಹಾಡಿನಲ್ಲಿ ಹೇಳಿರುವ ಪ್ರಕಾರ ಮನುಷ್ಯನು ಪೂರ್ವದಂತೆ ಈಗಲೂ ಸಹಪ್ರವರ್ಷ ಕ್ಷೇಮವಾಗಿರುವುದಾದರೆ ಅವನು ಯಾವ ಚಿಂತೆಯೂ ಅವಸರವೂ ಇಲ್ಲದೆ ಎಷ್ಟು ವಿಷಯಗಳನ್ನು ಕಲಿಯಬಹುದು! ಎಂಥೆಂಥಾ ಕಾರ್ಯಗಳನ್ನು ಮಾಡಬಹುದು! ಆದರೆ ಅಲ್ಪಾಯುಷ್ಯರಾದ ನಾವು ವಿದ್ಯಾರ್ಜನೆಗೆ ನಮಗಿರುವ ಅಲ್ಪಕಾಲವನ್ನು ಸರ್ವದಾ ಜ್ಞಾಪಕದಲ್ಲಿಡತಕ್ಕದ್ದು. ಅಲ್ಪಾಯುಷ್ಯದಿಂದ ಮಾತ್ರವಲ್ಲದೆ ನಮ್ಮ ಜೀವನದ ಕೆಲಸಗಳಿಂದಲೂ ಕೂಡ ಅಧಿಕವಾಗಿ ಸಂಕೋಚ ಮಾಡಲ್ಪಟ್ಟು ವಿದ್ಯಾರ್ಜನೆಗೆ ಮಿಕ್ಕಿರುವ ಈ ಅಲ್ಪಕಾಲವನ್ನು ಅತ್ಯಂತ ಲಾಭಕರವಾಗಿ ಉಪಯೋಗಿಸಿ ಕೊಳ್ಳಲು ನಾವು ಬಹು ಜಾಗರೂಕರಾಗಿರಬೇಕು. ದೇಶದ ಪದ್ಧತಿ ಪ್ರಕಾರವಾಗಲಿ ಅಥವಾ ಚಿತ್ತ ಚಾಪಲ್ಯದಿಂದಾಗಲಿ ಯಾವ ವಿಷಯವನ್ನಾದರೂ ಕಲಿಯುವ ಮೊದಲು ಅದರಿಂದುಂಟಾಗುವ ಫಲವೆಂಥಾದ್ದು ? ಅದೇಕಾಲದಲ್ಲಿ ಕಲಿಯ ಬಹುದಾದ ಬೇರೆ ವಿದ್ಯೆಗಳಿಂದಾಗುವ ಫಲಗಳೆಂಥವು? ಎಂಬುದನ್ನು ಚೆನ್ನಾಗಿ ಪರ್ಯಾಲೋಚಿಸುವುದು ಪ್ರಾಜ್ಞರ ಕೆಲಸವಾಗಿದೆ.

ಇದೇ ವಿದ್ಯಾಭ್ಯಾಸ ವಿಷಯದಲ್ಲಿ ಚರ್ಚಿಸತಕ್ಕ ಮುಖ್ಯಾಂಶವಾಗಿರುವುದು. ಸರಿಯಾದ ರೀತಿಯಲ್ಲಿದನ್ನು ಚರ್ಚಿಸಲು ಇನ್ನು ತಡಮಾಡಬಾರದು. ನಮ್ಮ ಅವಧಿಗೆ ಬಂದಿರುವ ನಾನಾ ವಿಷಯಗಳ ಪರಸ್ಪರ ವಿರೋಧವಾದ ಬಾಧ್ಯತೆಗಳನ್ನು ಕುರಿತು ಹೇಗೆ ನಿರ್ಣಯಿಸಬೇಕೆಂಬುದನ್ನು ಮೊದಲು ತಿಳಿಯತಕ್ಕದ್ದು. ಯೋಗ್ಯವಾದ ಪಾಠಕ್ರಮವನ್ನು ಏರ್ಪಡಿಸುವ ಮೊದಲು, ನಮಗೆ ಅತ್ಯಂತ ಆವಶ್ಯಕವಾದ ವಿಷಯಗಳು ಯಾವುವೆಂಬುದನ್ನು ಗೊತ್ತು ಮಾಡಿ ಕೊಳ್ಳಬೇಕು. ಎಂದರೆ ನಾನಾ ವಿದ್ಯೆಗಳ ಯೋಗ್ಯತಾ ತಾರತಮ್ಯವನ್ನು ನಿಶ್ಚಯಿಸಬೇಕು.

ಇದಕ್ಕೋಸ್ಕರ ಮೊದಲು ನಮಗೊಂದು ಮೂಲ್ಯಪ್ರಮಾಣವು ಅಗತ್ಯವಾಗಬೇಕು. ಪುಣ್ಯವಶಾತ್ ಈಗ ನಮ್ಮಲ್ಲಿ ಪ್ರಚಾರದಲ್ಲಿರುವ ಮೂಲ್ಯಪ್ರಮಾಣ ವಿಷಯದಲ್ಲಿ ಯಾವ ಆಕ್ಷೇಪಕ್ಕೂ ಆಸ್ಪದವಿಲ್ಲ. ಪ್ರತಿಮನುಷ್ಯನು ಯಾವುದಾದರು ಒಂದು ವಿದ್ಯೆಯ ಮೂಲ್ಯವನ್ನು ಚರ್ಚಿಸುವಾಗ ಅದು ನಮ್ಮ ಜೀವನಕ್ಕೆ ಎಂಥಾ ಸಂಬಂಧವುಳ್ಳದು ಎಂದು ಪರೀಕ್ಷಿಸಿ ನೋಡುವನು. ಇದರಿಂದೇನು ಪ್ರಯೋಜನ?

ಎಂಬ ಪ್ರಶ್ನೆಗೆ ಗಣಿತಶಾಸ್ತ್ರಜ್ಞನೂ ಬಹು ಭಾಷಾಜ್ಞಾನಿಯೂ ಪ್ರಕೃತಿಶಾಸ್ತ್ರಿಯೂ ದಾರ್ಶನಿಕನೂ ತಮ್ಮತಮ್ಮ ವಿದ್ಯೆಗಳು ಕಾರ್ಯನಿರ್ವಾಹಕ್ಕೆ ಅನುಕೂಲವಾಗಿರುವ ರೀತಿಯನ್ನೂ ಅವು ಹೇಗೆ ಹಾನಿಯಿಂದ ರಕ್ಷಿಸುವುವು, ಹೇಗೆ ಮಂಗಳವನ್ನುಂಟು ಮಾಡುವುವು, ಹೇಗೆ ಸುಖಸಾಧನಗಳಾಗಿರುವುವು ಎಂಬುದನ್ನೂ ವಿವರಿಸಿ ಉತ್ತರ ಹೇಳುವರು. ಬರವಣಿಗೆಯನ್ನು ಕಲಿಸುವವನು ಅದರಿಂದ ಜೀವನಕಾರ್ಯಕ್ಕೆ ಎಂದರೆ ಆಹಾರ ಪದಾರ್ಥ ಮುಂತಾದವುಗಳನ್ನು ಸಂಪಾದಿಸಿ ಸುಖವಾಗಿ ಜೀವಿಸಲಿಕ್ಕೆ ಬಹಳ ಸಹಾಯವಾಗುವುದೆಂದು ತೋರಿಸಿಕೊಟ್ಟರೆ, ಅತನ ಕೆಲಸವು ಸಾರ್ಥಕವೆಂಬುದು ಸಿದ್ಧವಾಗುವುದು. ಹಳೆಯ ಸಂಗತಿಗಳನ್ನು ಸಂಗ್ರಹಿಸುವವನು ಅವು ಜನರ ಕ್ಷೇಮಕ್ಕೆ ಸಾಧಕವೆಂದು ವ್ಯಕ್ತವಾಗಿ ತೋರಿಸಲಾರದೆ ಹೋದರೆ ತನ್ನ ಕಾರ್ಯವು ಅಷ್ಟು ಪ್ರಯೋಜಕವಲ್ಲವೆಂದು ಅತನು ಒಪ್ಪಿಕೊಳ್ಳಲೇಬೇಕು. ಹೀಗೆ ಎಲ್ಲಾ ಕಾರ್ಯಗಳ ಬೆಲೆಯನ್ನು ಕಂಡುಹಿಡಿಯಲಿಕ್ಕೂ ಜನಕ್ಷೇಮವೇ ಮುಖ್ಯ ಪ್ರಮಾಣವಾಗಿರುವುದು.

ಹೇಗೆ ಜೀವಿಸಬೇಕು? ಇದು ನಮಗೆ ಮುಖ್ಯ ಪ್ರಶ್ನೆಯಾಗಿದೆ. ದೇಹವಿಷಯದಲ್ಲಿ ಮಾತ್ರವಲ್ಲದೆ ಸಕಲವಿಷಯಗಳಲ್ಲಿಯೂ ಹೇಗೆ ಜೀವಿಸಬೇಕೆಂಬುದನ್ನು ತಿಳಿಯತಕ್ಕುದು. ಸರ್ವತ್ರ ಸರ್ವಾವಸ್ಥೆಗಳಲ್ಲಿಯೂ ನಮ್ಮ ನಡತೆಯನ್ನು ಸರಿಯಾಗಿಟ್ಟುಕೊಳ್ಳಬೇಕೆಂಬ ದೊಡ್ಡವಿಷಯದಲ್ಲಿ ಮಿಕ್ಕ ವಿಷಯಗಳೆಲ್ಲಾ ಅಡಗಿವೆ. ದೇಹವನ್ನು ಹೇಗಿಟ್ಟುಕೊಳ್ಳಬೇಕು? ಮನಸ್ಸನ್ನು ಹೇಗಿಟ್ಟುಕೊಳ್ಳಬೇಕು? ನಮ್ಮ ಕೆಲಸಗಳನ್ನೆಲ್ಲಾ ಹೇಗೆ ಮಾಡಬೇಕು? ಕುಟುಂಬವನ್ನು ಯಾವರೀತಿಯಲ್ಲಿ ಸಂರಕ್ಷಿಸಬೇಕು? ಪೌರಕಾರ್ಯವನ್ನು ಯಾವ ವಿಧದಲ್ಲಿ ಮಾಡಬೇಕು? ಪ್ರಕೃತಿಯು ನಮಗೊದಗಿಸಿಕೊಡುವ ಸುಖಸಾಧನ ಸಾಮಗ್ರಿಗಳನ್ನು ಯಾವಬಗೆಯಲ್ಲಿ ಉಪಯೋಗಿಸಿಕೊಳ್ಳಬೇಕು? ಎಂದರೆ, ನಮಗೂ ಇತರರಿಗೂ ಅತ್ಯಂತ ಲಾಭವುಂಟಾಗುವಂತೆ ನಮ್ಮ ಬುದ್ಧಿಶಕ್ತಿಗಳನ್ನೆಲ್ಲಾ ಯಾವರೀತಿಯಲ್ಲಿ ಪ್ರಯೋಗಿಸಬೇಕು? ಎಂದರೆ ಪರಿಪೂರ್ಣವಾಗಿ ಹೇಗೆ ಜೀವಿಸಬೇಕು? ಈ ಮಹಾ ವಿಷಯವನ್ನೇ ನಾವು ಅತ್ಯಾವಶ್ಯಕವಾಗಿ ಕಲಿಯಬೇಕಾಗಿರುವುದರಿಂದ ನಮ್ಮ ವಿದ್ಯಾಶಾಲೆಗಳಲ್ಲಿ ಇದನ್ನೇ ನಮಗೆ ಕಲಿಸಬೇಕು. ಪರಿಪೂರ್ಣವಾಗಿ ಜೀವಿಸಲು ನಮ್ಮನ್ನು ಯೋಗ್ಯರಾಗಿ ಮಾಡುವುದೇ ವಿದ್ಯಾಭ್ಯಾಸದ ಕೆಲಸವಾಗಿರುವುದು. ಅದುದರಿಂದ ಯಾವುದಾದರೂ ಒಂದು ವಿದ್ಯಾವ್ಯಾಸಂಗದ ಏರ್ಪಾಡು ಸರಿಯಾಗಿದೆಯೊ ಎಂದು ನೋಡಬೇಕಾದರೆ,

ಈ ಕೆಲಸವನ್ನದು ಎಷ್ಟರಮಟ್ಟಿಗೆ ನೆರವೇರಿಸುತ್ತದೆಂದು ಪರೀಕ್ಷಿಸಬೇಕು.

ಇಂಥಾ ಪರೀಕ್ಷೆಯನ್ನು ಜನರು ಇದುವರೆಗೂ ಸಂಪೂರ್ಣವಾಗಿ ಮಾಡಿಲ್ಲ. ಅಲ್ಪವಾಗಿ ಉಪಯೋಗಿಸಿರುವುದೂ ಅಪೂರ್ವ. ಆದರೆ ವಿವಕ್ಷೆ ಇಲ್ಲದೆ ಅಲ್ಪಜ್ಞಾನದಿಂದ ಪ್ರಯೋಗಿಸಿರುವರು. ಈಗ ನಾವಿದನ್ನು ಸಕಲ ವಿಷಯಗಳಲ್ಲಿಯೂ ಜ್ಞಾನಪೂರ್ವಕವಾಗಿಯೂ ಯಥಾಕ್ರಮವಾಗಿಯೂ ಉಪಯೋಗಿಸಬೇಕು. ಪರಿಪೂರ್ಣವಾದ ಜೀವನವನ್ನು ಹೊಂದಬೇಕೆಂಬ ಉದ್ದೇಶವನ್ನೇ ಯಾವಾಗಲೂ ವ್ಯಕ್ತವಾಗಿ ಮನಸ್ಸಿನಲ್ಲಿಟ್ಟುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಈ ಉದ್ದೇಶಕ್ಕನುಸಾರವಾಗಿಯೇ ಯೋಗ್ಯವಾದ ವಿದ್ಯೆಗಳನ್ನು ಹುಡುಕಿ ಅವುಗಳ ವ್ಯಾಸಂಗಕ್ಕೆ ತಕ್ಕ ಏರ್ಪಾಡನ್ನು ಮಾಡಿ ನಮ್ಮ ಮಕ್ಕಳನ್ನು ಶಿಕ್ಷಿಸುತ್ತಾ ಬರಬೇಕು. ಇತರ ಅನೇಕ ಸಂಪ್ರದಾಯಗಳಿಗಿಂತ ಉತ್ಕೃಷ್ಟವಲ್ಲದ ಈಗ ಪ್ರಚಾರದಲ್ಲಿರುವ ವಿದ್ಯಾವ್ಯಾಸಂಗ ಪದ್ಧತಿಯನ್ನು ಅವಿಚಾರವಾಗಿ ಅನಸರಿಸುವುದನ್ನು ನಾವು ಬಿಡಬೇಕಲ್ಲದೆ ತಮ್ಮ ಮಕ್ಕಳ ವಿದ್ಯಾವ್ಯಾಸಂಗದಲ್ಲಿ ಸ್ವಲ್ಪ ಆಸಕ್ತರಾಗಿಯೂ ಇತರರಿಗಿಂತ ಸ್ವಲ್ಪ ಹೆಚ್ಚು ತಿಳವಳಿಕೆಯುಳ್ಳವರಾಗಿಯೂ ಇರುವ ಕೆಲವರು ಅಪರಿಷ್ಕಾರವಾಗಿಯೂ ಅಶಾಸ್ತ್ರೀಯವಾಗಿಯೂ ನಿರ್ಣಯಿಸುವಂತೆ ನಿರ್ಣಯಿಸದೆ ನಾವು ಅವರಿಗಿಂತ ಮೇಲಾಗಬೇಕು. ಹುಡುಗರ ಮುಂದಿನ ಜೀವಿಕೆಯಲ್ಲಿ ಇಂಥಿಂಥಾ ವಿದ್ಯೆಗಳು ಉಪಯೋಗಕ್ಕೆ ಬರುವುವೆಂದು ಮಾತ್ರ ಆಲೋಚಿಸಿದರೆ ಸಾಲದು. ಅಥವಾ ಈ ವಿದ್ಯೆಗಿಂತ ಆ ವಿದ್ಯೆಯು ಹೆಚ್ಚು ಬೆಲೆಯುಳ್ಳದೆಂದು ಮಾತ್ರ ಆಲೋಚಿಸಿದರೂ ಸಾಲದು. ಆದರೆ ಎಲ್ಲಾ ವಿದ್ಯೆಗಳ ಯೋಗ್ಯತಾ ತಾರತಮ್ಯವನ್ನು ಗೊತ್ತುಮಾಡಿಕೊಳ್ಳುವ ಮಾರ್ಗವನ್ನು ಹುಡುಕಿ ಸಾಧ್ಯವಾದಷ್ಟು ಖಂಡಿತವಾಗಿ ಯಾವ ವಿದ್ಯೆಗಳು ವ್ಯಾಸಂಗಕ್ಕೆ ಅತ್ಯಂತ ಯೋಗ್ಯವಾದುವೆಂಬುದನ್ನು ತಿಳಿಯಬೇಕಾಗಿರುವುದು.

(ಸಶೇಷ). S. V.

ಸ್ವಶಿಕ್ಷಣ.

ಮನುಷ್ಯವರ್ಗಕ್ಕೆ ಪ್ರಾಪ್ತವಾಗಿರುವ ಬುದ್ಧಿಶಕ್ತಿಯು ಪ್ರತಿಮನುಷ್ಯನಮೇಲೆಯೂ ಬಹುಕಾರ್ಯಭಾರವನ್ನು ಹೊರಿಸಿರುವುದು. ಮನುಷ್ಯನಿಗೆ ಉಂಟಾಗಿರುವ

ಶಕ್ತಿಯೂ ಮನುಷ್ಯನು ಮಾಡಬೇಕಾದ ಕರ್ತವ್ಯಗಳೂ ಒಂದಕ್ಕೊಂದು ಬಹಳ ಅನುಗುಣವಾಗಿವೆ. ಮನುಷ್ಯತ್ವವನ್ನು ಪೂರ್ಣಮಾಡಿಕೊಳ್ಳುವುದಕ್ಕೆ ನಮಗುಂಟಾಗಿರುವ ಸಹಜವಾದ ಅನುಕೂಲತೆಗಳನ್ನು ನೋಡಿದರೆ ನಾವು ಎಷ್ಟರಮಟ್ಟಿಗೆ ಈ ಲೋಕದ ಉಪಕರಣವಾಗಿ ಪರಿಣಮಿಸಬಹುದೆಂಬುದು ತಿಳಿಯುತ್ತದೆ. ಮನುಷ್ಯನಿಗೆ ಲಭ್ಯವಾಗಿರುವ ಬುದ್ಧಿವೈಭವ ವಿಶೇಷಗಳ ಅನುಕ್ರಮಣಿಕೆಯು ಅವನು ಏನನ್ನು ಮಾಡಬಲ್ಲನು? ಮತ್ತು ಏನನ್ನು ಮಾಡಬೇಕೆಂಬ ಸಂಗತಿಗಳ ಯಥಾರ್ಥವಾದ ಸೂಚನಾಪತ್ರವಾಗಿದೆ. ಮನುಷ್ಯವರ್ಗದಲ್ಲಿ ಪ್ರತಿಯೊಬ್ಬನೂ ತನ್ನ ಜೀವಮಾನದಲ್ಲಿ ಮಾಡಬೇಕಾದ ಕರ್ತವ್ಯಭಾಗವುಂಟು. ಅದನ್ನು ಮಾಡುವುದಕ್ಕೆ ಅವನು ಶಿಕ್ಷಣೆಯಿಂದ ಸನ್ನದ್ಧನಾಗಬೇಕು. ನಮ್ಮ ಸ್ವಭಾವದಲ್ಲಿ ಸರ್ವಸಾಮಾನ್ಯವಾದ ಮತ್ತು ವಿಶೇಷವಾದ ಸಾಮರ್ಥ್ಯವು ಚೆನ್ನಾಗಿಯೂ ಧಾರಾಳವಾಗಿಯೂ ಪುಷ್ಟಿಗೊಳುವುದು ಶಿಕ್ಷಣೆಯಿಂದಲೇ. ಪಶುವರ್ಗಗಳಿಗಾದರೆ ಶಿಕ್ಷಣೆ ಅನ್ಯರಿಂದಲೇ ನಡೆಯಬೇಕು. ಮನುಷ್ಯನಿಗೆ ಆ ನಿಯಮವಿಲ್ಲ. ತನ್ನನ್ನು ತಾನು ತಿದ್ದಿಕೊಳ್ಳುವ ಶಕ್ತಿಯುಂಟು. ಇದೊಂದು ಅನ್ಯಾದೃಶವಾದ ದೈವಾನುಗ್ರಹ. ಮನುಷ್ಯನ ಸ್ವಭಾವವನ್ನು ಚೆನ್ನಾಗಿ ಊರ್ಜಿತಗೊಳಿಸುವ ಮಹತ್ಕಾರ್ಯವು ಸ್ವಶಿಕ್ಷಣೆಯಿಂದ ನಡೆದಂತೆ ಇತರ ಯಾವ ಉಪಕರಣದಿಂದಲೂ ಆಗುವುದಿಲ್ಲ. ಅಂತಹ ಸರ್ವೋತ್ಕೃಷ್ಟವಾದ ಸ್ವಶಿಕ್ಷಣೆಯು ಇಲ್ಲಿ ವಿವರಿಸಲ್ಪಡುವುದು. ಈ ಸ್ವಶಿಕ್ಷಣೆಯ ವಿಷಯದಲ್ಲಿ ಆಸಕ್ತಿಯನ್ನುಂಟಾಗಿರಬೇಕೆಂಬುದೊಂದು ಮನುಷ್ಯವರ್ಗಕ್ಕೆ ಸಹಜವಾದ ನಿಯಮ. ಸುಖವೆಂಬುದು ಆ ನಿಯಮವನ್ನು ಅನುಸರಿಸಿ ನಡೆಯುವುದರ ಫಲ.

ನಾವು ಮೊದಲು ನಮ್ಮ ಮನಸ್ಸಿಗೆ ಸಂಬಂಧಪಡುವ ಕರ್ತವ್ಯಗಳನ್ನು ಮಾಡಬಲ್ಲವರಾದರೆ ಆಮೇಲೆ ಇತರರಿಗೆ ಸಂಬಂಧಪಡುವ ಕರ್ತವ್ಯಗಳನ್ನು ಮಾಡಲು ಸಮರ್ಥರಾಗುತ್ತೇವೆ. ಆದುದರಿಂದ ನಮ್ಮ ಜೀವಮಾನದಲ್ಲಿ ಬಹಳ ಅಗತ್ಯವಾಗಿ ಮೊದಲು ಸಾಧಿಸಬೇಕಾದುದು ಸ್ವಶಿಕ್ಷಣೆ. ಸ್ವಶಿಕ್ಷಣೆಯೊಂದು ಚೆನ್ನಾಗಿ ನೆರ್ಪಟ್ಟಿದ್ದರೆ ನಮ್ಮ ಮನಸ್ಥಿತಿಯು ನಿರಾತಂಕವಾಗಿರಬಹುದಲ್ಲದೆ ನಮ್ಮ ನೆರೆಹೊರೆಯವರ ನೆಮ್ಮದಿಯನ್ನು ಹೆಚ್ಚಿಸುವುದಕ್ಕೂ ನೆರವಾಗುವುದು. ಒಬ್ಬನ ಜೀವಮಾನವು ಒಳ್ಳೆಯ ಹೆಸರುವಾಸಿಯನ್ನು ಹೊಂದಬೇಕಾದರೆ ಅದು ಕೇವಲ ಅವನ ಉತ್ತಮವಾದ ಉದ್ದೇಶದಿಂದ ನಡೆಸುವ ಸಮರ್ಪಕವಾದ ನಡವಳಿಕೆಗಳಿಂದ ಪಾತ್ರ ಸಾಧ್ಯವು. ಉತ್ತಮವಾದ ಮನುಷ್ಯಜನ್ಮವನ್ನು ಪಡೆದಿರುವವನು ಇತರ ಕ್ಷುಲ್ಲಕವಾದ ಲಾಭ

ಹಾಸಗಳಿಂದ ಪಡೆಯುವುದಕ್ಕಿಂತಲೂ ಈ ಸ್ವಶಿಕ್ಷಣೆಯಿಂದ ಹೆಚ್ಚು ಘನತೆಯನ್ನು ಹೊಂದಬಹುದು.

ಈಗ ಮನುಷ್ಯನಿರುವ ಸ್ಥಿತಿಯನ್ನು ನೋಡಿದರೆ ಅವನ ಸ್ವಭಾವಸೃಷ್ಟಿಯು ಒಂದು ಬಗೆಯ ಉತ್ತ್ರೇಜನಕ್ಕೊಳಗಾಗಿದೆ. ಮನುಷ್ಯನು ಸರ್ವಸಾಮಾನ್ಯವಾಗಿ ತನಗೆ ಜನ್ಮಸಿದ್ಧವಾದ ಸ್ವಭಾವಗಳನ್ನು ಊರ್ಜಿತಗೊಳಿಸಿಕೊಳ್ಳುವುದರೊಂದಿಗೆ ಯಾವಾಗಲೂ ಇತರ ಪ್ರತಿಯೊಂದು ವ್ಯಕ್ತಿಯಿಂದಲೂ ಒಂದೊಂದು ವಿಶೇಷ ಲಕ್ಷಣಗಳುಳ್ಳ ಸ್ವಭಾವಗಳನ್ನು ಸಂಗ್ರಹಿಸುವ ಶಕ್ತಿಯನ್ನುಂಟಾಗಿದಾನೆ. ಈ ಶಕ್ತಿಯಿಂದಲೇ ಆ ವಿಶೇಷ ಸ್ವಭಾವಗಳಿಗೆ ವಿಷಯಗಳಾದ ವ್ಯಕ್ತಿಗಳನ್ನು ವಿಚಾರಬಲದಿಂದ ತನ್ನಲ್ಲಿ ಅಡಗಿಸಿಕೊಳ್ಳುವುದಲ್ಲದೆ ಅಂತಹ ವಿಶೇಷ ಸ್ವಭಾವದ ವಿಷಯದಲ್ಲಿ ತಾನು ಆ ಅನ್ಯವ್ಯಕ್ತಿಯ ಒಂದು ಭಾಗವಾಗಿ ಪರಿಣಮಿಸುತ್ತಾನೆ. ಈ ಬಗೆಯಾದ ನಡವಳಿಕೆಯಿಂದುಂಟಾಗುವ ಜ್ಞಾನವನ್ನು ಜೀರ್ಣಿಸಿಕೊಂಡಷ್ಟೂ ಅವನಲ್ಲಿ ಬಗೆಬಗೆಯಾದ ಶಕ್ತಿಗಳು ಕ್ರಮಕ್ರಮವಾಗಿ ಬೆಳೆಯುವುವು. ಈ ವಿಧವಾದ ಶಿಕ್ಷಣೆಯು ತಾನಾಗಿ ಅಂಕುರಿಸಿ ಬೆಳೆದರೇ ಹೊರತು ಒಂದು ನಿರ್ಬಂಧಕ್ಕೊಳಗಾಗಿ ನಡೆದರೆ ಅಷ್ಟು ಹಿತಕರವಾಗಲಾರದು. ಈ ಶಕ್ತಿಯು ವಿದ್ಯಾಭ್ಯಾಸವನ್ನು ಸುಲಭಸಾಧ್ಯವಾಗಿ ಮಾಡುವುದು. ಈ ವಿಧವಾದ ಶಕ್ತಿಯಲ್ಲಿ ಹುಟ್ಟುವ ಆಸಕ್ತಿಯು ದೆಸೆಯಿಂದ ಮನುಷ್ಯನಿಗೆ ಎಲ್ಲಾ ವಸ್ತುಗಳಲ್ಲಿಯೂ ಬಳಕೆಯಾಗುವುದು, ಮತ್ತು ಹೊಸ ಬೇರೆ ಬೇರೆ ಬುದ್ಧಿ ವೈಭವಗಳನ್ನು ವಿನಿಯೋಗಿಸುವುದಕ್ಕೂ ಅವುಗಳನ್ನು ತೋರಿಸಿಕೊಳ್ಳುವುದಕ್ಕೂ ಅವಕಾಶ ಕೊಡುತ್ತದೆ. ಬುದ್ಧಿಬಲದ ವ್ಯಾವಾರಕ್ಕೆ ಇದೇ ತಲೆಬಾಗಿಲು. ವಿದ್ಯಾಭ್ಯಾಸ ಮಾಡುವುದರ ನಿಜವಾದ ಉದ್ದೇಶವೇ ಆ ಬುದ್ಧಿವ್ಯಾಪಾರವನ್ನು ಪುಷ್ಟಿಗೊಳಿಸುವುದಕ್ಕಾಗಿ. ಅದು ಹೇಗೆಂದರೆ, ವಿದ್ಯಾಭ್ಯಾಸವು ಜೀವನಯಾತ್ರೆಗೊಂದು ಶಿಕ್ಷಣವೇ ಆದಪಕ್ಷದಲ್ಲಿ ಅದು ಜೀವವ್ಯಾಪಾರಗಳ ಶಕ್ತಿಗೆ ಅಗತ್ಯವಾಗಿ ಪೋಷಕವಾಗಿದ್ದೇ ಇರಬೇಕು.

ಈಗ ನಾವು ಇಲ್ಲಿ ಪ್ರಸ್ತಾಪ ಮಾಡುವುದು ಸರ್ವಸಾಮಾನ್ಯವಾದ ಸ್ವಭಾವಗಳನ್ನು ಪುಷ್ಟಿಗೊಳಿಸುವುದರ ವಿಷಯವಾಗಿ ಮನುಷ್ಯನಿಗೆ ಸ್ವಶಿಕ್ಷಣೆ ಎಷ್ಟರಮಟ್ಟಿಗೆ ಇರುವುದೊ ಮತ್ತು ಮನುಷ್ಯನು ತನ್ನ ಬುದ್ಧಿಶಕ್ತಿಗಳನ್ನು ಯಾವರೀತಿಯಲ್ಲಿ ವಿನಿಯೋಗಿಸುತ್ತಾನೊ ಅದರ ಪರಿಣಾಮವನ್ನನುಸರಿಸಿ ಅವನಿಗೆ ಸುಖವು ದೊರೆಯುತ್ತದೆ. ನಾವು ಆ ಸುಖಕ್ಕೆ ಎಷ್ಟು ಹೆಚ್ಚು ಅವಕಾಶವನ್ನು ಕೊಡುವೆವೊ ನಮ್ಮ ಜೀವಮಾನದ ಉತ್ತಮ ಸ್ಥಿತಿಗೆ ಅದು ಅಷ್ಟು ಆಶ್ರಯದಾತೃವಾಗುವುದು.

ಈ ರೀತಿ ಮನೋವ್ಯಾಪಾರವು ಚುರುಕಾದಷ್ಟೂ ವಿಷಯಜ್ಞಾನವು ಬಹಳ ನೇರವಾಗುವುದು. ಅಭಿರುಚಿಯು ಮೊದಲಿಗಿಂತ ಹೆಚ್ಚು ನಾಜೂಕಾಗುವುದು. ನೀತಿಮಾರ್ಗಾನುಸರಣೆಯು ಎಂದಿಗಿಂತಲೂ ಪ್ರಶಸ್ತವಾಗುವುದು. ಬುದ್ಧಿಶಕ್ತಿಯು ಕುಶಾಗ್ರವನ್ನು ವಿಾರಿಸುವುದು. ಮತಸಂಬಂಧವಾದ ಭಾವನೆಗಳು ಮತ್ತಷ್ಟು ಘನತೆಯನ್ನು ಹೊಂದುವುವು. ಮತ್ತು ವಿನೋದಸಾಧನಗಳು ನಿರ್ದುಷ್ಟ ಸಾಧನ ಗಳಾಗುವುವು. ಊಹಿಸತಕ್ಕಶಕ್ತಿಯುಳ್ಳ ಮನುಷ್ಯನ ಭಾಗಕ್ಕೆ ಈ ಬ್ರಹ್ಮಾಂಡವು ಎಷ್ಟು ಮನೋಹರವಾಗಿಯೂ ಮಹಿಮಾಸ್ಪದವಾಗಿಯೂ ಇರುವುದು? ಶಾಸ್ತ್ರ ಜ್ಞಾನವುಳ್ಳವನ ಮನಸ್ಸಿಗೆ ವಸ್ತುಗಳ ಸ್ಥಿತಿಗತಿಗಳ ವಿಚಾರವು ಎಷ್ಟು ಗಂಭೀರವಾಗಿ ತೋರುವುದು? ಶ್ರದ್ಧಾಭಕ್ತಿಯುಳ್ಳವನಿಗೆ ಹರಿನಾಮಸ್ಮರಣೆಯು ಎಷ್ಟು ಇಂಪಾಗಿ ರುವುದು? ಎಂಬ ವಿಚಾರಗಳೂ ಮತ್ತು ಕುಶಲವಿದ್ಯೆಯ ಜಾತುರ್ಯ, ಗಾನದಿಂದಾ ಗುವ ಮೈಮ್ಮರವು, ದೈವಿಕಶಕ್ತಿಯ ವಿಜೃಂಭಣೆಯನ್ನು ತೋರಿಸುವ ಪರಕವಿಗಳ ಪದ್ಯಾರ್ಥರಹಸ್ಯ, ಯಂತ್ರನಿರ್ಮಾಣಕೌಶಲ, ಆಶ್ಚರ್ಯಕರವಾದ ಶಾಸ್ತ್ರಗಳನ್ನೊಳ ಗೊಂಡ ವೇದಗಳು, ಮಿತ್ರಮಂಡಲಿಯ ಸಂಘಾಷಣೆಯಲ್ಲಾಗುವ ಆನಂದ, ಅಗಾಧ ವಾದ ತತ್ವವಿಚಾರ, ತನ್ನ ಮನಸ್ಸೊಪ್ಪುವಂತೆ ತನ್ನ ಕರ್ತವ್ಯವನ್ನು ನೆರವೇರಿಸಿದು ದರಿಂದುಂಟಾದ ಸಂತೋಷ, ಪರಮೇಶ್ವರನಲ್ಲಿ ಉಂಟಾದ ಭಕ್ತಿಯಿಂದುಬ್ಬುವ ರೋ ಮಾಂಚ ಇವುಗಳನ್ನೆಲ್ಲಾ ಸ್ವಶಿಕ್ಷಣೆಯು ವಾಸನಾಬಲವಿರುವವರು ಮಾತ್ರ ಗ್ರಹಿಸಬ ಲ್ಲರು. ಸಂತೋಷಸಾಧನಗಳನ್ನು ಕೈಲಾದಮಟ್ಟಿಗೂ ಕೂಡಿಹಾಕಿಕೊಳ್ಳುವುದೆಂ ಬುದು ಸಂತೋಷಕರವಾದ ಜೀವನಯಾತ್ರೆಗೆ ಉತ್ತಮವಾದ ಮೂಲಧನವಲ್ಲದೆ ಬೇರೆ ಅಲ್ಲ. ಜೀವನಯಾತ್ರೆಯೆಂಬುದು ಕೇವಲ ಶರೀರಧಾರಣೆಯುಳ್ಳಿ ಮಾತ್ರವೇ ಅಲ್ಲವೆಂಬುದನ್ನು ಮರೆಯಬಾರದು. ಕೇವಲ ಶರೀರರಕ್ಷಣ ವ್ಯಾಪಾರವನ್ನು ಮಾತ್ರ ತಾತ್ಕಾಲಿಕ ಲಾಭಕರವಾದುದನ್ನು ಮಾತ್ರ ಮಾಡುವ ಮತ್ತು ಪ್ರಪಂಚದ ವ್ಯರ್ಥ ವಿಷಯುಗಳಿಗೊಳಗಾಗಿ ಅಲ್ಪ ಪರಿವಾರದಲ್ಲಿಯೇ ತನ್ನ ಸರ್ವಾಶಯವನ್ನೂ ಪೂರೈ ಸುವ ನಡವಳಿಕೆಯನ್ನು ತಿದ್ದಿಕೊಳ್ಳಬೇಕು, ಅದನ್ನು ಮುಂದುವರಿಸಬೇಕು, ಅದ ಕ್ಕಿಂತ ಗಂಭೀರವಾದ ಮತ್ತು ಶ್ಲಾಘ್ಯವಾದ ವಿಷಯುಗಳಿಗೆ ಕೈನೀಡಬೇಕು. ಇದೇ ಜೀವನಯಾತ್ರೆ.

ನಾವು ಪ್ರತಿಮನುಷ್ಯನಿಗೂ ಇರಬೇಕೆಂದು ಸೂಚಿಸುವ ಸ್ವಶಿಕ್ಷಣೆಯು ಲಕ್ಷಣ ವೇನೆಂದರೆ, ಅದು ಒಳ್ಳೆಯದಾಗಿಯೂ, ನಿರ್ದುಷ್ಟವಾದ ಘನತೆಯನ್ನುಂಟುಮಾಡು

ವುದಾಗಿಯೂ ಸರ್ವಸಮ್ಮತವಾದ ವಿಷಯಗಳಲ್ಲಿ ಪ್ರೀತಿಯುಂಟಾಗುವಂತೆಯೂ, ಸತ್ಯದಲ್ಲಿ ಮೆಚ್ಚಿಕೆಯೂ ಅಭಿಮಾನವೂ ಗೌರವವೂ ಹುಟ್ಟುವಂತೆಯೂ, ದೇವರಲ್ಲಿ ಭಕ್ತಿಯೂ ಪಾಪದಲ್ಲಿ ಭೀತಿಯೂ ಬೆಳೆಯುವಂತೆಯೂ ಇರಬೇಕು.

ಈ ಶಿಕ್ಷಣೆಯು ಬಗೆಬಗೆಯ ವಿದ್ಯಾಭ್ಯಾಸವನ್ನೊಳಗೊಂಡಿರುವುದಾಗಿಯೂ, ಮನುಷ್ಯತ್ವವನ್ನು ಪೂರ್ಣಗೊಳಿಸುವುದಾಗಿಯೂ, ಸೃಷ್ಟಿಸಮುದಾಯದಲ್ಲಾಗಲೀ ಸಾಮಾಜಿಕ ಪರಿವಾರದಲ್ಲಿಯಾಗಲೀ ತನ್ನ ಅಸಾಧಾರಣ ಸ್ಥಿತಿಗೆ ಅನುಗುಣವಾದ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ತಕ್ಕವನನ್ನಾಗಿ ಮಾಡುವುದಾಗಿಯೂ ಇದೆ. ಹೀಗೆ ಅನೇಕ ಬಗೆಯ ವ್ಯವಹಾರಗಳಲ್ಲಿ ನೇರ್ಪಟ್ಟ ಈ ಶಿಕ್ಷಣೆಯ ದೆಸೆಯಿಂದ ಬುದ್ಧಿವೈಭವವು ಅತ್ಯಗತ್ಯವಾಗಿ ಬೆಳೆದೇ ಬೆಳೆಯುವುದು. ಇಷ್ಟೆಲ್ಲಾ ಪ್ರಯತ್ನಿಸುವುದರಲ್ಲಿಯೂ ಮನುಷ್ಯವ್ಯಕ್ತಿಯನ್ನು ಮನುಷ್ಯನನ್ನಾಗಿ ಮಾಡುವ— ಮನಸ್ಸು ಸ್ವಭಾವಸಿದ್ಧವಾಗಿ ಪಡೆದ ಶಕ್ತಿಯನ್ನು ಕಾರ್ಯಕಾರಿಯಾಗಿ ಮಾಡಿಕೊಳ್ಳುವ ಪ್ರಯತ್ನವಲ್ಲದೆ ಬೇರೆಯೇನೂ ಅಲ್ಲ. ಈ ವಿಧವಾಗಿ ಮನುಷ್ಯತ್ವವನ್ನು ಪೂರ್ಣಮಾಡಿಕೊಳ್ಳುವ ಶಕ್ತಿಯು ಯಾವುದಾದೊಂದು ಜನಾಂಗಕ್ಕಾಗಲಿ, ಪಂಗಡಕ್ಕಾಗಲಿ ಧಾರೆಯೆರೆದಿಲ್ಲ. ಪ್ರತಿಯೊಬ್ಬನೂ ತನಗೆ ಸಾಧ್ಯವಾದಷ್ಟು ವಿಷಯಗಳಲ್ಲಿ ತನ್ನ ಕೈಲಾದಮಟ್ಟಿಗೆ ಈ ಶಿಕ್ಷಣೆಯನ್ನು ನಡೆಸಿಕೊಳ್ಳುವ ವಿಷಯದಲ್ಲಿ ಯಾವ ಅಭ್ಯಂತರವೂ ಇಲ್ಲ. ಪ್ರತಿಯೊಬ್ಬನ ಅಭ್ಯುದಯವೂ ಅವನವನ ಪ್ರಯತ್ನಕ್ಕಧೀನವಾಗಿದೆ. ಶಿಲ್ಪಿಯ ಕಯ್ಯಲ್ಲಿ ಒಂದು ಸಾಮಾನ್ಯವಾದ ಲೋಹದ ತುಂಡು ಇರುತ್ತದೆ. ಅವನು ಅದನ್ನು ಉಳಿ ಮೊದಲಾದುವುಗಳ ಸಹಾಯದಿಂದ ತಿದ್ದುತ್ತಾ ಬಂದರೆ ಆ ಲೋಹದ ತುಂಡೇ ಪೂಜಾರ್ಹವಾದ ಸುಂದರ ವಿಗ್ರಹವಾಗುತ್ತದೆ. ಹಾಗೆಯೇ ನಮ್ಮನ್ನು ಸೃಷ್ಟಿಸುವಾಗಲೇ ದೇವರು ನಮಗೊಂದು ಬುದ್ಧಿಶಕ್ತಿಯನ್ನು ಕೊಟ್ಟಿರುತ್ತಾನೆ. ಅದನ್ನು ನಾವು ಅಂದವಾಗಿ ಮಾಡಿಕೊಳ್ಳಬೇಕಾದರೆ ಅದನ್ನು ತಿದ್ದಿಕೊಂಡು ಅಭ್ಯಾಸಮಾಡಬೇಕು. ಈ ರೀತಿಯಾದ ಶಿಕ್ಷಣೆಯು ಹೆಚ್ಚಿದಹಾಗೆಲ್ಲಾ ಮನುಷ್ಯನಿಗೆ ಮನುಷ್ಯತ್ವವು ಹೆಚ್ಚುವುದು. ಈ ಶಿಕ್ಷಣೆಯು ಪ್ರತಿಫಲದಿಂದಲೇ ಮನುಷ್ಯನು ತನ್ನ ನೆರೆಯವರಿಗಾಗಿ ತಾನು ಮಾಡಬೇಕಾದ ಕರ್ತವ್ಯಗಳನ್ನು ಮಾಡುವುದಕ್ಕೆ ಶಕ್ತನಾಗುವುದು

ಪಶುಗಳು ವಿದ್ಯೆಯನ್ನು ಕಲಿಯಲಾರವು. ಮನುಷ್ಯರು ವಿದ್ಯೆಯನ್ನು ಕಲಿಯಬಲ್ಲರು. ಈ ಶಕ್ತಿಯೇ ಪಶುಗಳಿಗೂ ಮನುಷ್ಯನಿಗೂ ಇರುವ ಭೇದ. ಪಶು

ವರ್ಗದ ಬುದ್ಧಿಶಕ್ತಿಯನ್ನು ಶಿಕ್ಷಣೆಗೊಳಪಡಿಸಿ ಅಭಿವೃದ್ಧಿಗೊಳಿಸಲಾಗದೆಂದು ನಮ್ಮ ಅಭಿಪ್ರಾಯವಲ್ಲ. ಯಾವ ಕಾರ್ಯನಿರ್ವಹಣೆಯು ಭಾರವೂ ಇಲ್ಲದೆ ಮಾರ್ಗಾಂತರ ದೃಷ್ಟಿಯಿಲ್ಲದೆ ಏಕಪ್ರಕಾರವಾಗಿರುವ ಪಶುವರ್ಗಕ್ಕೂ ಅನೇಕ ಕಾರ್ಯಭಾರವನ್ನುಂಟಾಗಿ ಅನೇಕ ಮಾರ್ಗಗಳನ್ನವಲಂಬಿಸಬೇಕಾಗಿರುವ ಮನುಷ್ಯನಿಗೂ ಬಹಳ ಭೇದವುಂಟು.

ನಮ್ಮ ಅವತರಣಕ್ಕೆ ನಮ್ಮ ಶರೀರ ರಕ್ಷಣೆಯು ವ್ಯಾಪಾರವೊಂದೇ ಉದ್ದೇಶವಾಗಿದ್ದ ಪಕ್ಷದಲ್ಲಿ ಅದಕ್ಕೆ ತಕ್ಕ ಏಕಪ್ರಕಾರವಾದ ಕ್ರಿಯೆಗಳನ್ನು ತಪ್ಪದೆ ನಡೆಸುವ ಒಂದು ಯಂತ್ರವು ನಮ್ಮ ದೇಹದಲ್ಲಿ ನಿರ್ಮಿತವಾಗಿರುತ್ತಿತ್ತು. ನಾವು ಯಂತ್ರಕ್ಕೆ ಜೋಡಿಸಿದ ಗಾಲಿಗಳಂತಾಗಿರುತ್ತಿದ್ದೆವೇ ಹೊರತು ಬೇರೆಯಿಲ್ಲ. ನಮ್ಮ ಸ್ವತಂತ್ರ ಶಕ್ತಿಯು ಆಗ ಅನುಪಯೋಗವಾಗುತ್ತಿದ್ದುದಷ್ಟೇ ಅಲ್ಲ. ಖಂಡಿತವಾಗಿ ಅಪಾಯಕರವಾಗಿಯೂ ಆಗುತ್ತಿತ್ತು. ಮತ್ತು ನಮ್ಮ ಸದುದ್ದೇಶಗಳೂ ಸಾಧುವಾದ ಮನಸ್ಸಾ ಮೊದಲಾದುವುಗಳೆಲ್ಲಾ ಕೇವಲ ಅನವಶ್ಯಕಗಳಾಗಿರುತ್ತಿದ್ದುವು: ಪ್ರಕೃತ ಸ್ಥಿತಿಯು ಹಾಗಿಲ್ಲ. ಶರೀರರಕ್ಷಣ ವ್ಯಾಪಾರವು ಇಲ್ಲದೆ ಅದಕ್ಕೆ ಮೇಲಾದ ಕಾರ್ಯಭಾಗಗಳನ್ನು ನಿರ್ವಹಿಸುವ ಶಕ್ತಿಯು ಮನುಷ್ಯನಿಗೆ ಉಂಟು. ಆದರೂ ನಮ್ಮ ಆಯುರ್ದಾಯದಲ್ಲಿ ನಮ್ಮ ಶರೀರ ರಕ್ಷಣೆಗೆ ಅಗತ್ಯವಾಗಿ ಬೇಕಾದಷ್ಟು ಕಾಲವನ್ನು ಆಹಾರನಿದ್ರಾದಿಗಳಿಗೆ ವಿನಿಯೋಗಿಸಿದ ಬಳಿಕ ಪರೋಪಕಾರ ಸಂಬಂಧವಾದ ಶಿಕ್ಷಣೆಗೆ ಬಹುಸ್ವಲ್ಪ ಕಾಲ ಉಳಿದಿರುವುದು. ಈ ಸಮಯದಲ್ಲಿ ಆ ಶಿಕ್ಷಣೆಯನ್ನು ಅಭ್ಯಾಸ ಮಾಡಬೇಕು.

ಸ್ವಶಿಕ್ಷಣೆ ಚೆನ್ನಾಗಿ ನೆರ್ಪಡುವುದಕ್ಕೆ ವಾಡಿಕೆಯು ಅಗತ್ಯವಾದುದು. ವಾಡಿಕೆಯೆಂದರೆ, ಒಂದು ಕ್ರಿಯೆಯನ್ನು ಅನೇಕ ಪೇಳೆ ಮಾಡಿಮಾಡಿ ಪಡೆದ ಅಭ್ಯಾಸ. ಒಳ್ಳೆಯ ವಾಡಿಕೆಗಳನ್ನು ಕಲಿಯುವುದೆಂದರೆ ಜೀವಮಾನಕ್ಕೆ ಸುಖಸಾಧನವಾದ ಕುಶಲವಿದ್ಯೆಗಳನ್ನು ಕಲಿಯುವುದೆಂದಲ್ಲದೆ ಬೇರೆ ಅಲ್ಲ. ವಾಡಿಕೆಯು ಮೊದಲು ಆಲೋಚನಾ ಶಕ್ತಿಯಿಂದಲೇ ಅಂಕುರಿಸುತ್ತದೆ. ಆದರೆ ಆಲೋಚನಾಶಕ್ತಿಯನ್ನು ಕ್ರಿಯೆಯು ಮೇಲೆಮೇಲೆ ಎಡೆಬಿಡದೆ ಹಿಂಬಾಲಿಸುತ್ತ ಹೋದರೆ ಆಮೇಲೆ ಒಂದು ಕ್ರಿಯೆ ನಡೆಯಬೇಕಾದರೆ ಆಲೋಚನಾಶಕ್ತಿಗೆ ಪ್ರಾಮುಖ್ಯತೆಯಿಲ್ಲದೆ, ಅದರ ಸಹಾಯವಿಲ್ಲದೆ, ವಾಡಿಕೆಯಿಂದಲೇ ಕ್ರಿಯೆ ನಡೆಯುವುದು.

ಸಂಭಾವ್ಯವಾದ ಆಲೋಚನಾ ಶಕ್ತಿಗಳಿಂದ ಮುಂದುವರಿಯುವುದೂ, ಸಂಭಾ

ಮ್ಯವಾದ ಉದ್ದೇಶಗಳಿಂದ ಕಾರ್ಯಗಳನ್ನು ಮಾಡುವುದೂ, ಯಾವಾಗಲೂ ಸಂಭಾವ್ಯವಾದ ರೀತಿಯಲ್ಲಿ ಪ್ರವರ್ತಿಸುವುದೂ ಇವುಗಳು ಒಳ್ಳೆಯ ವಾಡಿಕೆಗೆ ತೌರೂರುಗಳು. ಶಿಕ್ಷಣೆಯು ಮನಸ್ಸನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರಬಲ್ಲುದು. ಆದುದರಿಂದ ವಾಡಿಕೆಯು ಪ್ರಥಮದೆಸೆಯಲ್ಲಿ ಬಹಳ ಚೆನ್ನಾಗಿ ನೆರವಾಗುತ್ತದೆ. ಘನವಾದ ಆಲೋಚನೆಗಳೂ, ನೀತಿಪ್ರದರ್ಶನ, ಕಾರ್ಯಪರತೆ, ಇಂದ್ರಿಯನಿಗ್ರಹ ಇವುಗಳನ್ನು ಶಿಕ್ಷಣೆಯಿಂದ ಊರ್ಜಿತಗೊಳಿಸಿಕೊಳ್ಳುವುದೂ ಈ ವಾಡಿಕೆಗಳು ಕಾರ್ಯಕಾರಿಗಳಾಗಿಯೂ ಮುಂದುವರಿದು ಬರುವುವುಗಳಾಗಿಯೂ ಇರುವ ಶಕ್ತಿಯನ್ನು ಹೆಚ್ಚಿಸುವುದೂ ಸಹ ಜನಸಾಧಾರಣ್ಯಕ್ಕೇ ಅಲ್ಲದೆ ಮುಖ್ಯವಾಗಿ ಚಿಕ್ಕವರಿಗೆ ಬಹಳ ಅನುಕೂಲವಾಗಿವೆ. ನಾವು ಈಗಿರುವ ಸೃಷ್ಟಿಯನ್ನು ನೋಡಿದರೆ ನಮ್ಮ ಅಭ್ಯುದಯಕ್ಕೆ ಇನ್ನೂ ಕೆಲವು ಗುಣಗಳಿರಬೇಕಾಗಿ ತೋರುತ್ತದೆ. ಈ ಗುಣಗಳು ನಮ್ಮಲ್ಲಿ ಸೂಕ್ಷ್ಮರೂಪದಲ್ಲಿ ಸೇರಿಕೊಂಡಿವೆ. ಆ ಗುಣಗಳನ್ನು ಬೆಳೆಸಿ ಪುಷ್ಟಿಗೊಳಿಸುವುದು ನಮ್ಮ ಕೆಲಸ.

ವಿಷಯಜ್ಞಾನವು ಮನಸ್ಸಿಗೆ ಕುತೂಹಲವನ್ನುಂಟುಮಾಡುವುದು. ಅನುಭವವು ಆ ವಿಷಯಜ್ಞಾನವನ್ನು ತಿದ್ದಿ ವಿವರಿಸುವುದು. ಮತ್ತು ವಾಡಿಕೆಗಳು ನಾವು ಕಾರ್ಯಭಾಗವನ್ನು ತತ್ಕ್ಷಣದಲ್ಲಿಯೇ ಮಾಡಬಲ್ಲವನ್ನಾಗಿ ಮಾಡುವುದು. ಒಳ್ಳೆಯ ವಾಡಿಕೆಗಳನ್ನು ಕಲಿಯುವುದು. ಒಂದು ಕಾರ್ಯವನ್ನು ಮಾಡಬೇಕಾದ ಅವಸರಸಮಯದಲ್ಲಿ ದೀರ್ಘಾಲೋಚನೆಯು ಅಗತ್ಯವಿಲ್ಲದಂತೆ ಮಾಡುವ ಅಭ್ಯಾಸವು—ಸ್ವಶಿಕ್ಷಣೆಯು ಮಹದುಪಯೋಗಗಳಲ್ಲಿ ಒಂದು.

ಎಚ್. ಚಿದಂಬರಯ್ಯ.

ವಸ್ತುಪಾಠ.

ಸೀಮೆಯ ಸುಣ್ಣ.

ಉಪಯುಕ್ತವಾದ ವಸ್ತುಗಳು:—ಸೀಮೆಯ ಸುಣ್ಣದ ಚೂರುಗಳು, ಸುಣ್ಣ, ಉಪ್ಪು, ನೀರು, ಕಲ್ಲು; ಮುಂತಾದುವು.

1 ವಿವರಣೆ. ಹೆಸರು—ಸೀಮೆಯಸುಣ್ಣ; ಈ ಸೀಮೆಯಸುಣ್ಣವನ್ನು ಗೆಣಿಗಳಿಂದ ತೆಗೆವುದರಿಂದ ಇದೂ ಚಿನ್ನ, ಬೆಳ್ಳಿಗಳಂತೆ ಧಾತುವೆಂದು ಹೇಳಬಹುದು. ಇದೊಂದು ಬಗೆಯ ಸುಣ್ಣಕಲ್ಲು. ಇದನ್ನು ಸುಟ್ಟರೆ ಸುಣ್ಣವಾಗುತ್ತದೆ. ಜಿಳಿಯ ಮಣ್ಣಿನ ಹೆಂಟೆಗಳಂತೆ ಇರುವುದೂ ಉಂಟು.

2 ಗುಣಗಳು. (1) ಮುಟ್ಟಿನೋಡಿದರೆ ಗಟ್ಟಿಯಾಗಿದೆ. ಆದರೆ ಸುಣ್ಣಕಲ್ಲಿನಷ್ಟು ಗಟ್ಟಿಯಲ್ಲ. ಸ್ವಲ್ಪ ತರಿತರಿಯಾಗಿದ್ದರೂ ಒರಟಲ್ಲ. ಕರಡು ಮೊರಡೂ ಅಲ್ಲ. (2) ಸುಣ್ಣಕಲ್ಲಿನಂತೆ ನೀರಿನಲ್ಲಿ ಕರಗುವುದಿಲ್ಲ. (3) ಎತ್ತಿಹಾಕಿದರೆ ಸುಲಭವಾಗಿ ಒಡೆದುಹೋಗುವುದು. (4) ಸುಲಭವಾಗಿ ಪುಡಿಮಾಡಬಹುದು. ಮುಟ್ಟಿದರೆ ಕೆಲವು ಭಾಗವು ಬೆರಳಿಗೆ ಅಂಟಿಕೊಂಡು ಬೆರಳು ಬೆಳ್ಳಗಾಗುತ್ತದೆ. (5) ಉಜ್ಜಿದರೆ ತೇದುಹೋಗುತ್ತದೆ. ಬರೆವಾಗ ಸವೆಯುತ್ತದೆ. (6) ನೀರನ್ನು ಎಳೆದುಕೊಳ್ಳುತ್ತದೆ. ಕಣ್ಣಿಗೆ ಕಾಣಿಸದ ಅನೇಕ ರಂಧ್ರಗಳುಂಟು. (7) ಬೆಂಕಿಯಲ್ಲಿ ಕರಗುವುದಿಲ್ಲ. ಇದನ್ನು ಹುಳಿ ಸೇರಿದ ನೀರಿನಲ್ಲಿ ಹಾಕಿದರೆ ಗುಳ್ಳೆಗಳೆದ್ದು ಉಕ್ಕುತ್ತದೆ. (8) ಇದಕ್ಕೆ ಯಾವ ವಾಸನೆಯೂ ರುಚಿಯೂ ಇಲ್ಲ. (9) ಇದರ ಬಣ್ಣವು ಬಿಳಪು.

3 ಉತ್ಪತ್ತಿ ಮತ್ತು ಪಡೆವ ಕ್ರಮ. (1) ಸಮುದ್ರದಲ್ಲಿರುವ ಬಹಳ ಸಣ್ಣ ಹುಳುಗಳ ಮೈಚಿಪ್ಪುಗಳು ತಳಕ್ಕೆ ಬಿದ್ದು ಪುಡಿಯಾಗಿ, ಗಟ್ಟಿಯಾಗುವುದರಿಂದ ಸೀಮೆಯಸುಣ್ಣವಾಗುತ್ತದೆ. (2) ಇದನ್ನು ಬೆಟ್ಟದಿಂದಲೂ, ಭೂಮಿಯಿಂದಲೂ ಅಗೆದು ತೆಗೆಯುವುದುಂಟು. ಹೀಗೆ ಅಗೆದು ತೆಗೆವುದೇ ಬಳಕೆಯಲ್ಲಿರುತ್ತದೆ. ತೆಗೆದಸುಣ್ಣವನ್ನು ಪುಡಿಮಾಡಿ ಹದಗೊಟ್ಟು, ಕೋಪುಗಳಾಗಿ ಮಾಡುವರು.

4 ಉಪಯೋಗ. (1) ಪಾಠಶಾಲೆಗಳಲ್ಲಿ ಕಪ್ಪು ಹಲಿಗೆಯಮೇಲೆಯೂ, ಸ್ಲೇಟುಗಳ ಮೇಲೆಯೂ, ಬರೆಯುವುದಕ್ಕೆ ಉಪಯೋಗವಾಗುತ್ತದೆ. (2) ಕೆಲವು ತರದ ಸೀಮೆಯ ಸುಣ್ಣದ ಬಂಡೆಗಳನ್ನು ಕಡಿದು ಚಪ್ಪಡಿಗಳನ್ನು ತೆಗೆದು ಕೆಲವು ಕಡೆ ಮನೆಗಳನ್ನು ಕಟ್ಟಲು ಉಪಯೋಗಿಸುತ್ತಾರೆ. (3) ಔಷಧಕ್ಕೆ ಉಪಯೋಗಿಸುತ್ತಾರೆ. (4) ಗೊಬ್ಬರಕ್ಕೆ ಉಪಯೋಗಿಸುತ್ತಾರೆ. (5) ಈ ಸೀಮೆಯಸುಣ್ಣದ ಪುಡಿಯಿಂದ ಲೋಹದ ಪಾತ್ರೆಗಳನ್ನೂ, ಕನ್ನಡಿ ಮುಂತಾದವನ್ನು ತೇದು ಕೊಳೆಯನ್ನು ಹೋಗಗೊಳಿಸುತ್ತಾರೆ. (6) ಸೀಮೆಯ ಸುಣ್ಣವನ್ನು ಸುಟ್ಟು, ಸುಣ್ಣವನ್ನು ಮಾಡಿ, ಗಾರೆ ಮುಂತಾದುವಕ್ಕೆ ಉಪಯೋಗಿಸುತ್ತಾರೆ. ಇದ್ದಲನ್ನೂ,

ಸುಣ್ಣವನ್ನೂ, ಇದಕ್ಕೆ ಹೋಲಿಸಿ, ಸಾಮ್ಯ, ವೈಷಮ್ಯಗಳನ್ನು ವ್ಯಕ್ತಗೊಳಿಸುವುದು ಒಳ್ಳೆಯದು. ಏತದ್ವಿಷಯಕವಾಗಿ ಪ್ರಶ್ನಿಸಿ, ಉತ್ತರವನ್ನು ಪಡೆಯುವುದು. ಹಳದಿ, ಕೆಂಪು, ಹಸಿರುಬಣ್ಣ ಸೇರಿಸಿದ ಸೀಮೆಸುಣ್ಣವುಂಟು. ಈ ತೆರನಾದ ಸುಣ್ಣವನ್ನು ಪಾಠಶಾಲೆಗಳಲ್ಲಿ ಕಪ್ಪುಹಲಿಗೆಯ ಮೇಲೆ ಬರೆಯಲು ಉಪಯೋಗಿಸುವರು.

ಎಂ. ಎಸ್. ಶ್ರೀನಿವಾಸಯ್ಯಂಗಾರ್.

ವ್ಯವಸಾಯ ಶಾಸ್ತ್ರ.

1 ಮೃಗಗಳ ಸ್ಥಿತಿ ನೋಡಿ ಅವುಗಳ ಗೊಬ್ಬರದ ಯೋಗ್ಯತೆಯನ್ನು ಹೇಳುವುದು ಹ್ಯಾಗೆ?

(1) ಬೆಳದ ಮೃಗಗಳ ಗೊಬ್ಬರವು ಯಳೆ ಮೃಗಗಳ ಗೊಬ್ಬರಕ್ಕಿಂತ ಹೆಚ್ಚು ಸಾರವುಳ್ಳದ್ದು. (2) ಗರ್ಭದ ಅಥವಾ ಕರೆಯುವ ದನಗಳ ಗೊಬ್ಬರವು ಗೊಡ್ಡು ಅಥವ ಬತ್ತಿಹೋದ ದನಗಳ ಗೊಬ್ಬರದಷ್ಟು ಸಾರವತ್ತಾದ್ದಲ್ಲ.

2 (a) ದನಗಳ ದೊಡ್ಡ ರೋಗದ ಚಿಹ್ನೆಗಳ್ಯಾವುವು?

(b) ದೊಡ್ಡ ರೋಗ ತಗಲಿವ ದನಗಳು ಹಿಂಡಿನಲ್ಲಿದ್ದರೆ ಅವುಗಳನ್ನು ಏನುಮಾಡಬೇಕು? ಮತ್ತು ಹ್ಯಾಗೆ ಪೋಷಿಸಬೇಕು?

(a) (1) ನಿತ್ರಾಣ. (2) ನರಗಳು ಸೆಳೆಯುತ್ತಿರುವುವು. (3) ನೀರಾಗಿ ಆಮು ರಕ್ತ ಮಿಶ್ರವಾಗಿ ಉಚ್ಚುವುದು. (4) ಉಚ್ಚಿದರೆ ದುರ್ಗಂಧ. (5) ಮೂಗು ಬಾಯಿಗಳೊಳಗೆಲ್ಲಾ ಹುಣ್ಣಾಗುವುದು. (6) ಕೆಚ್ಚಲು ಮೊದಲಾದಕಡೆ ಸಿಡಿವುಗಳೇಳುವುದು. (7) ಒಂದು ವಿಧವಾದ ಕೆಮ್ಮು ಹುಟ್ಟುವುದು.

(b) (1) ರೋಗವು ಹೆಚ್ಚು ದನಗಳಿಗೆ ವ್ಯಾಪಿಸದಂತೆ ಮಾಡುವುದಕ್ಕಾಗಿ ರೋಗ ತಗಲಿದ ಕೂಡ್ಲೆ ಅಂಥಾ ದನಗಳನ್ನು ಹಿಂಡಿನಿಂದ ಪ್ರತ್ಯೇಕಿಸಿ ಬಹಳ ದೂರದಲ್ಲಿ ಇಡಬೇಕು.

(c) ದೊಡ್ಡರೋಗ ತಗಲಿದ ಪಶುಗಳನ್ನು ಪೋಷಿಸುವ ಕ್ರಮ—

(1) ಶುಚಿಯಾದ ಸ್ಥಳದಲ್ಲಿ ಕಟ್ಟಬೇಕು. ಸಗಣಿಗಳನ್ನು ತೆಗೆದು ಹಾಕಿ ಮೇಲೆ ಹೊಸ ಮಣ್ಣು ಹಾಕಬೇಕು. (2) ಬಾಯಿ ಮೂಗುಗಳನ್ನು ಬಿಸಿನೀರಿನಿಂದ ಪದೇ ಪದೇ ತೊಳೆಯಬೇಕು. (3) ರೋಗಕಲಿದ ದನವು ಆಹಾರ ಕಮ್ಮಿಯಾಗಿ ಸಾಯಬಹುದುದಾದ್ದರಿಂದ ಅಕ್ಕಿ ಅಥವ ರಾಗಿ ಗಂಜಿಯನ್ನು ಮಾಡಿ ಅದರಲ್ಲಿ ಬಾಳೆಹಣ್ಣು ಸಕ್ಕರೆ ಸಹ ಕಲಿಸಿ ಕಾಲಕಾಲಕ್ಕೆ ಬೇಕಾದಷ್ಟು ಕುಡಿಸಬೇಕು. (4) ಈ ರೋಗಕ್ಕೆ ತಂಪು ಉಂಟುಮಾಡತಕ್ಕ ನಾನಾವಿಧ ಔಷಧಗಳನ್ನು ಕೊಡುವ ಪದ್ಧತಿ ಇದೆ. ಅದರಂತೆ ಮಾಡಬಹುದು. (5) ಬಿಸಿಲು ಗಾಳಿಗಳಿಗೆ ಸಿಕ್ಕದಂತೆ ಮರೆಯಾದ ಸ್ಥಳದಲ್ಲಿ ಕಾಪಾಡಬೇಕು.

ಮಾನಸ ಗಣಿತ.

ಮುಖತಃ ಕೇಳುವುದಕ್ಕೆ ಪ್ರಶ್ನೆಗಳು.

(1). 5, 6, 7, 8, 9, 10, 11, 12, 13, 14 ಇವುಗಳನ್ನು ಕೂಡಿಸಿದರೆ?

(2). 45, 34, 76, 68, 67 ಇವುಗಳನ್ನು ಕೂಡಿಸಿದರೆ?

(3). 339, 846, 525 ಇವುಗಳನ್ನು ಕೂಡಿಸಿದರೆ ಎಷ್ಟಾಗುವುದು?

(4). 600 ರಲ್ಲಿ 239 ನ್ನು ಕಳೆದುಬಂದುದಕ್ಕೆ 56 ನ್ನು ಸೇರಿಸು.

(5). 2500 ಪೈಗಳಿಗೆ ಎಷ್ಟು ರೂಪಾಯಿಗಳು?

(6). 17 ರೂ. 12 ಆ. ಗಳಿಗೆ ಪೈಗಳೆಷ್ಟು? ದುಡ್ಡುಗಳೆಷ್ಟು?

(7), 425 ನ್ನು 350 ರಿಂದ ಗುಣಿಸಿ ಹೇಳು?

(8). 2, 0, 4, 6 ಇವುಗಳಲ್ಲಿ ಎರಡು ಅಂಕೆಗಳಿಂದಾಗುವ ಅತಿ ಸಣ್ಣ ಸಣ್ಣ ಸಂಖ್ಯೆ ಯಾವುದು? ಅಂತಹ ದೊಡ್ಡ ಸಂಖ್ಯೆಯಾವುದು!

(9). 6, 3, 8, 0, 5 ಇವುಗಳಲ್ಲಿ ಮೂರು ಅಂಕೆಗಳಿಂದ ಆಗುವ ಅತಿ ಸಣ್ಣ ಸಂಖ್ಯೆಯೊಂದನ್ನೂ, ಬಹು ದೊಡ್ಡ ಸಂಖ್ಯೆಯೊಂದನ್ನೂ ಹೇಳು?

(10). 3 ಆಣೆಗಳಿಗೆ 8 ಹಣ್ಣುಗಳು ಸಿಕ್ಕಿದರೆ 6 ರೂಪಾಯಿಗಳಿಗೆ ಎಷ್ಟು ಹಣ್ಣುಗಳು ?

(11). ಒಬ್ಬೊಬ್ಬರು 4 ಆ. 8 ಪೈ. ಗಳಂತೆ 15 ಮಂದಿ ಹಂಚಿಕೊಂಡ ಮೇಲೆ 10 ಆಣೆಗಳು ಉಳಿದರೆ ಅಲ್ಲಿದ್ದ ಹಣವೆಷ್ಟು ?

(12). ಚೈತ್ರ ಬಹುಳ ೫ ಯಲ್ಲಿ ಹುಟ್ಟಿದ ಮಗುವಿಗೆ ರಥಸಪ್ತಮಿಯ ದಿನಕ್ಕೆ ಎಷ್ಟು ತಿಂಗಳು ತುಂಬಿರುವುದು?

(13). ಡಿಸೆಂಬರು 12 ರಲ್ಲಿ ತೀರಿಸಬೇಕಾದ ಸಾಲವನ್ನು ಮಾರ್ಚಿ 24 ರಲ್ಲಿಯೇ ಕೊಟ್ಟುಬಿಟ್ಟರೆ ಎಷ್ಟು ದಿನಗಳ ಬಡ್ಡಿ ಮಿಗುವುದು?

(14). ಮಣ 1 ಕ್ಕೆ 6 ರೂ. 12 ಆಣೆಯಾದರೆ ಸವಾಶೇರಿಗೆ ಕ್ರಯವೆಷ್ಟು?

(15). ಒಂದು ಖಂಡಗದ ಬೆಲೆಯ ಎಷ್ಟನೇ ಭಾಗವು ಒಂದು ಬಳ್ಳದ ಬೆಲೆ?

K. R.

ದೇವರ ಪ್ರಾರ್ಥನೆ.

ದಶಸ್ತೋತ್ರಂ.

ಸ್ವಾಮಿದೇವನೆ ಲೋಕಪಾಲನೆ ತೇನವೋಸ್ತು ನಮೋಸ್ತುತೇ ।
ಪ್ರೇಮದಿಂದಲಿ ನೋಡುನಮ್ಮನು ತೇನವೋಸ್ತು ನಮೋಸ್ತುತೇ ॥
ನೇಮಿಸೆಮ್ಮೊಳು ಧರ್ಮಕಾರ್ಯವ ತೇನವೋಸ್ತು ನಮೋಸ್ತುತೇ ।
ಕ್ಷೇಮದಿಂದಲಿ ಪಾಲಿಸೆಮ್ಮನು ತೇನವೋಸ್ತು ನಮೋಸ್ತುತೇ ॥೧॥

ದೇವದೇವನೆ ಹಸ್ತಪಾದಗಳಿಂದಲೂ ಮನದಿಂದಲೂ ।
ನಾವುಮಾಡಿದ ಪಾಪವೆಲ್ಲವ ಹೋಗಲಾಡಿಸು ಬೇಗನೆ ।
ಕಾವರಿಲ್ಲವು ನಿನ್ನಬಿಟ್ಟರೆ ಸೂರ್ಯನೇ ಜಗದೀಶನೇ ।
ಜೀವಕೋಟಿಯು ನಿನ್ನ ಯಾಜೆಳಕಿಂದ ಜೀವಿಸ್ಯದಲ್ಲವೆ ॥ ॥೨॥

ರಾತ್ರಿ ನಿದ್ದೆಯ ಗೈವಕಾಲದಿ ನೀನೆ ನಮ್ಮನು ಕಾದೆಯೈ ।
ಮಿತ್ರನೆಂಬುವ ನಾಮಧೇಯವು ಸತ್ಯವಾಯಿತು ನಿನ್ನೊಳು ॥
ಸ್ತೋತ್ರಮಾಡುವಹಾಗೆ ನಿನ್ನನು ಹಕ್ಕಿಗಳ್ದನಿಗೈವವೈ ।
ಚಿತ್ರಭಾನುವೆ ನಿನ್ನನೋಡಿಯದೆಲ್ಲಿ ಪೋದುದೊ ಕತ್ತಲೆ॥ ॥೩॥

ಉತ್ತಮೋತ್ತಮ ನಿನ್ನಪಾದದ ಭಕ್ತಿಯೇ ಸ್ಥಿರವಲ್ಲದೇ ।
ವಿತ್ತವೆಂಬುದು ಗಾಳಿಯಲ್ಲಿಹ ದೀಪದಂದದಿ ಚಂಚಲ ॥
ಮತ್ತರಾಗುತ ಬಿಟ್ಟು ನಿನ್ನನು ಕೆಟ್ಟಯೋಜನೆಗೈಯದಾ ।
ಚಿತ್ತವಂ ನಮಗಿತ್ತು ರಕ್ಷಿಸು ಪದ್ಮನಾಭ ಸುರೇಶನೇ ॥ ॥೪॥

ಆಡುವಾಗಲು ನಾವು ಭೋಜನಮಾಡುವಾಗಲು ಸರ್ವದಾ ।
ನೋಡಿ ನೀ ದಯದಿಂದ ನಮ್ಮನು ಪಾಲಿಸೈ ಭಗವಂತನೇ ॥
ಬೇಡಿಕೊಂಬೆವು ನಮ್ಮದೇಹಕೆ ಸೌಖ್ಯವಂ ಬಲಪುಷ್ಟಿಯಂ ।
ನೀಡು ನಿನ್ನಯ ಪಾದಭಕ್ತಿಯನೆಂದಿಗೂ ಬಿಡಲಾರೆವೈ ॥ ॥೫॥

ನಿನ್ನ ದರ್ಶನ ಗೈವ ನೇತ್ರದ ಜನ್ಮ ಸಾರ್ಥಕವಲ್ಲವೇ ।
ನಿನ್ನ ಪೂಜಿಪ ಹಸ್ತವೇ ಬಲುದೊಡ್ಡದಲ್ಲವೆ ದೇವನೆ ।
ನಿನ್ನ ನಾಮವ ಜೇಳ್ವ ನಾಲಗೆ ಧನ್ಯವಲ್ಲವೆ ಸರ್ವದಾ ।
ನಿನ್ನ ಜಾನಿಪ ಚಿತ್ತವೃತ್ತಿಯೆ ಯೋಗ್ಯವಲ್ಲವೆ ಲೋಕದಿ ॥ ॥೬॥

ನೀನೆ ತಾಯಿಯು ನೀನೆ ತಂದೆಯು ನೀನೆ ನಮ್ಮೊಡನಾಡಿಯೂ ।
ನೀನೇ ಬಂಧುವು ನೀನೆ ಭಾಗ್ಯವು ನೀನೆ ವಿದ್ಯೆಯು ಬುದ್ಧಿಯೂ ।
ನೀನು ಪಾಲಿಸದಿದ್ದರೆಮ್ಮನು ಬೇರೆ ಪಾಲಿಪರಿಲ್ಲೆಲ್ಲೆ ।
ದೀನಪಾಲನೆ ನಿನ್ನಧೀನದೊಳಿರ್ಪ ನಮ್ಮನು ಪಾಲಿಸೈ ॥ ॥೭॥

ಶ್ರೀಮುಕುಂದನೆ ಗಾಳಿಯಲ್ಲಿಯು ನೀರಿನಲ್ಲಿಯು ನೀನಿಹೇ ।
ಭೂಮಿಯಲ್ಲಿಯುಮಗ್ನಿಯಲ್ಲಿಯು ಖಾನಿನಲ್ಲಿಯು ನೀನಿಹೇ ।
ರಾಮನೂ ನರಸಿಂಹನೂ ಪರಮಾತ್ಮ ಕೃಷ್ಣನು ನೀನೆಯೇ ।
ನೀ ಮಹಾತ್ಮನು ನಮ್ಮ ತಪ್ಪುಗಳೆಲ್ಲ ಮನ್ನಿಸಿ ಪಾಲಿಸೈ ॥ ॥೮॥

ರಾತ್ರಿಯಲ್ಲಿ ಹೇಳುವುದು.

ಹೊತ್ತು ಪಶ್ಚಿಮ ದಿಕ್ಕಿನೊಳ್ಮರೆಯಾಯ್ತು ಕತ್ತಲೆ ಲೋಕವಂ ।
ಮುತ್ತಿಕೊಂಡಿತು ನೋಡಲೀಯಿರುಳೆನ್ನ ನಂಜಿಸುವಂತಿದೆ ।
ಒತ್ತುತಿಪ್ಪುದು ನಿದ್ದೆ ಕಣ್ಣಾ ಮಲಂಗಿಕೊಳ್ಳುವೆನೆನ್ನ ನೀಂ ।
ಸುತ್ತ ರಕ್ಷಿಸಬೇಕು ನಾನಿದೊ ನಿನ್ನಪಾದಕೆ ಬೀಳುವೆ ॥ ॥೯॥

ನೀನು ನಿದ್ದೆಯ ಮಾಡುತಿದ್ದರು ಬೇಗಹೋಗಿ ಪನಾಂತರ ।
ಕ್ಕಾನೆಯೊಂದನು ಕಾಯಲಿಲ್ಲವೆ ಜಾಗರೂಕನು ನೀನಲಾ ।
ನಾನು ನಿದ್ದೆಯ ಗೈವೆನೆನ್ನನು ಶತ್ರುಮುಟ್ಟದಹಾಗೆ ಮ।
ತ್ತೇನುಬಾಧೆಯು ಬಾರದಂತಿರೆ ನೀನೆ ರಕ್ಷಿಸು ದೇವಸೇ ॥ ॥೧೧॥

ಸಮಾಪ್ತಂ.

ಭೂಗೋಳಶಾಸ್ತ್ರ.

I (a) ಋತುಗಳ ಉತ್ಪತ್ತಿಗೆ ಶಾಸ್ತ್ರೋಕ್ತವಾದ ಕಾರಣಗಳನ್ನು ಸ್ಪಷ್ಟವಾಗಿ ವಿವರಿಸಿ.

ಭೂಗೋಳದ ಅಕ್ಷವು ಭೂಪಥ ವಿರುವ ಸರಳ ಕ್ಷೇತ್ರಕ್ಕೆ ಸಮಕೋಣದಲ್ಲಿರುವ ಸರಳ ರೇಖೆಗೆ $23\frac{1}{2}$ ಅಂಶದ ಕೋಣದಲ್ಲಿರುವುದೊಂದು. ಭೂಗೋಳವು ಸೂರ್ಯ ಪ್ರದಕ್ಷಿಣೆ ಮಾಡುವುದೊಂದು.

ಭೂಗೋಳದ ಅಕ್ಷವು ಭೂಪಥದ ಸರಳ ಕ್ಷೇತ್ರಕ್ಕೆ ಮೇಲೆ ಹೇಳಿದಂತಲ್ಲದೆ ಸಮಕೋಣದಲ್ಲಿದ್ದರೆ ಸೂರ್ಯನು ಸಮಭಾಜ ವೃತ್ತಕ್ಕೆ ಉಚ್ಚಸ್ಥಾನದಲ್ಲಿಯೇ ಸದಾ ಕಾಣುತ್ತಿರುವನು. ಮತ್ತು ಪೃಥ್ವಿಯಲ್ಲೆಲ್ಲಾ ಅಹೋರಾತ್ರಿಗಳು ದಿನಂಪ್ರತಿಯಲ್ಲಿಯೂ ಹನ್ನೆರಡು ಘಂಟೆಗಳಾಗುತ್ತಿರುವುವು. ಮತ್ತು ಋತುಭೇದಗಳೂ ಅಯನ ಭೇದಗಳೂ ಇರುತ್ತಿರಲಿಲ್ಲ.

ಭೂಗೋಳವು ಸೂರ್ಯ ಪ್ರದಕ್ಷಿಣೆ ಮಾಡದೇ, ಅಕ್ಷದಮೇಲೆ ಮಾತ್ರ ತಿರುಗಿ ತಾನಿದ್ದ ಸ್ಥಳದಲ್ಲಿಯೇ ಇರುತಿದ್ದರೆ ಏಕಪ್ರಕಾರವಾದ ಹಗಲಿರುಳುಗಳಲ್ಲದೆ ಋತು ಭೇದ ಅಯನ ಭೇದಗಳಾವುವೂ ಕಾಣುತಿರಲಿಲ್ಲ.

(b) ಪಂಚವಲಯಗಳಾವುವು ? ಪ್ರತಿಯೊಂದು ವಿಸ್ತರಿಸಿರುವ ಪ್ರದೇಶವನ್ನೂ ಅವರ ಮುಖ್ಯ ಗುಣವನ್ನೂ ಹೇಳಿರಿ.

ಉಷ್ಣವಲಯ, ಉತ್ತರದಕ್ಷಿಣ ಸಮಶೀತೋಷ್ಣವಲಯಗಳೆರಡು, ಉತ್ತರ ದಕ್ಷಿಣ ಶೀತವಲಯಗಳೆರಡು, ಒಟ್ಟು ಐದು.

ಉಷ್ಣವಲಯವು, ಸಮಭಾಜಕವೃತ್ತಕ್ಕೆ ಇಕ್ಕೆಲಗಳಲ್ಲಿಯೂ $23\frac{1}{2}$ ಅಂಶಗಳ

ವರಿವಿಗೂ ವ್ಯಾಪಿಸಿರುವುದು. ಕರ್ಕಾಟಕ ಮಕರ ಸಂಕ್ರಾಂತಿವೃತ್ತಗಳ ಮಧ್ಯದಲ್ಲಿರುವ ಪ್ರದೇಶವೆಲ್ಲವೂ ಉಷ್ಣವಲಯವೇ. ಈ ವಲಯದಲ್ಲಿ ಸೂರ್ಯನು ನೆಟ್ಟನೆ ತಲೆಯಮೇಲೆ ಒಂದು ಸ್ಥಳಕ್ಕಿಲ್ಲದಿದ್ದರೆ ಮತ್ತೊಂದಕ್ಕಾದರೂ ಕಾಣುವನು. ಅಹೋರಾತ್ರಿಗಳ ಪರಿಮಾಣಗಳಲ್ಲಿ ವಿಶೇಷಭೇದವಿಲ್ಲ.

ಶೀತವಲಯುಗಳು ಉಭಯ ಮೇರುಗಳ ಸುತ್ತಲೂ, 23½ ಅಂಶಗಳ ವರಿವಿಗೆ ಅಂದರೆ ಮೇರು ವೃತ್ತಗಳ ವರಿವಿಗೂ ವ್ಯಾಪಿಸಿರುವುವು. ಈ ಪ್ರದೇಶಗಳಲ್ಲಿ ಗ್ರೀಷ್ಮರ್ತುವಿನ ಮಧ್ಯಕಾಲದಲ್ಲಿ ಒಂದು ದಿವಸವೂ ಸೂರ್ಯಾಸ್ತಮಯವಿಲ್ಲ. ಹೇಮಂತರ್ತುವಿನ ಮಧ್ಯಕಾಲದಲ್ಲಿ ಒಂದು ದಿವಸವೂ ಸೂರ್ಯೋದಯವಿಲ್ಲ. ಸೂರ್ಯನು ಬಹು ಮೇಲಕ್ಕೆ ಒಂದು ದಿವಸವೂ ಬರುವುದಿಲ್ಲ. ಗ್ರೀಷ್ಮರ್ತುವಿನಲ್ಲಿ ಅನೇಕ ದಿವಸಗಳ ವರಿವಿಗೆ ಸೂರ್ಯನು ಮುಳುಗದೆ ಚಕ್ರಾಕಾರವಾಗಿ ಸುತ್ತುತ್ತಿರುವಂತೆ ಕಾಣುವನು. ಹೇಮಂತರ್ತುವಿನಲ್ಲಿ ಅನೇಕ ದಿವಸಗಳವರಿಗೆ ಗೋಚರನಾಗದಿರುವನು.

ಉಷ್ಣವಲಯು ಶೀತವಲಯುಗಳಿಗೆ ಮಧ್ಯದಲ್ಲಿರುವ ಅಂದರೆ ಸಂಕ್ರಾಂತಿ ವೃತ್ತಗಳಿಗೂ ಮೆರು ವೃತ್ತಗಳಿಗೂ ನಡುವೆ ಇರುವ ಪ್ರದೇಶಗಳಿಗೆ ಸಮಶೀತೋಷ್ಣವಲಯುಗಳೆಂದು ಹೆಸರು. ಉತ್ತದಲ್ಲಿರುವದಕ್ಕೆ ಉತ್ತರ ಸಮಶೀತೋಷ್ಣವಲಯ ದಕ್ಷಿಣದಲ್ಲಿರುವುದಕ್ಕೆ ದಕ್ಷಿಣ ಸಮಶೀತೋಷ್ಣವಲಯು ಎಂಬದಾಗಿ ಹೆಸರುಗಳು. ಇವುಗಳಲ್ಲಿ ಸೂರ್ಯನು ನೆಟ್ಟನೆ ತಲೆಯಮೇಲೆ ಯಾವದಿವಸವೂ ಕಾಣುವುದಿಲ್ಲ. ಅದರೆ ದಿನಕ್ಕೊಂದಾವೃತ್ತಿ ಸೂರ್ಯದರ್ಶನ ವಾಗುವುದು. ಈ ವಲಯುಗಳಲ್ಲಿ ಅಹೋರಾತ್ರಿಗಳಲ್ಲಿ ವಿಶೇಷ ಭೇದಗಳು ಕಾಣಬರುವುವು.

II (a) ಗ್ರಹಗಳಿಗೂ ನಕ್ಷತ್ರಗಳಿಗೂ ಇರುವ ಭೇದವನ್ನೂ ಸಮುದ್ರತಾಳಿಗೂ ಕೊಲ್ಲಿಗೂ ಇರುವ ಭೇದವನ್ನೂ ಆರ್ಯಕುಲದವರಿಗೂ ಮಂಗೋಲಿಯನ್ ಕುಲದವರಿಗೂ ಇರುವ ಮುಖ್ಯರೂಪ ಭೇದವನ್ನೂ ತಿಳಿಸಿರಿ.

(b) ಈ ಪದಗಳ ಅರ್ಥವೇನು ?

ಪೆಸ್ಸರು, ಅಳಿವೆ, ಜಲಾನಯನಸಭೂಮಿ, ನದೀಮುಖಜಭೂಮಿ, ದೋಆಬ್ ಮಿಸ್ಸಿಸ್ಸಿಪ್ಪಿ, ಹಿಮಪಂತಿ.

ಗ್ರಹಗಳು ಸೂರ್ಯನ ಸುತ್ತಲೂ ತಿರುಗುವುವು. ಇವುಗಳಿಗೆ ಸ್ವಯಂ ಪ್ರಕಾಶವಿಲ್ಲವು. ಸೂರ್ಯತೇಜಸ್ಸನ್ನು ಪ್ರತಿಬಿಂಬಿಸಿ ಹೊಳೆಯುವುವು. ನಕ್ಷತ್ರಗಳು ಸ್ವಯಂ-ಪ್ರಕಾಶವುಳ್ಳವುಗಳು. ಸೂರ್ಯನ ಸುತ್ತಲೂ ಹೋಗುವುದಿಲ್ಲವು. ಮತ್ತು ಇವುಗಳನ್ನು ದೂರದಲ್ಲಿರುವ ಸೂರ್ಯರೆಂದು ಹೇಳುವರು.

ದೇಶದೊಳಕ್ಕೆ ಸ್ವಲ್ಪ ಮಟ್ಟಿಗೆ ನುಗ್ಗಿ ಸಮುದ್ರದಕಡೆಗೆ ವಿಶಾಲವಾದ ನೀರಿನ ಭಾಗವು ಕೊಲ್ಲಿಯೆನಿಸುವುದು. ದೇಶದೊಳಕ್ಕೆ ಹೆಚ್ಚಾಗಿ ನುಗ್ಗಿ ಸ್ವಲ್ಪ ಕಡಮೆಯಾಗಿ ಎಲ್ಲಾ ಕಡೆಯಲ್ಲೂ ನೆಲದಿಂದ ಆವರಿಸಲ್ಪಟ್ಟ ನೀರಿನ ಭಾಗವು ಸಮುದ್ರಶಾಖೆಯೆನಿಸಿಕೊಳ್ಳುವುದು.

ಆರ್ಯಕುಲದವರಿಗೆ ಬಿಳಿಯ ಚರ್ಮವೂ, ಅಂಡಾಕಾರವಾದ ಮುಖವೂ, ಚಪ್ಪಟೆಯಾಗಿಲ್ಲದ ಮೂಗೂ, ಎತ್ತರವಾದ ಹಣೆಯೂ, ಸಮನಾದ ಹಲ್ಲುಗಳೂ, ಇರುವುವು. ಇವರು ಉಷ್ಣವಲಯದಲ್ಲಿ ಕಪಿಲವರ್ಣದವರಾಗಿಯೂ ಇರುವುದುಂಟು. ಮಂಗೋಲಿಯರ್ ಕುಲದವರಿಗೆ ಹಳದಿ ಅಥವಾ ಕಪಿಲ ವರ್ಣದ ಚರ್ಮವೂ, ಉದ್ದವಾದ ಮತ್ತು ಒರಟಾಗಿರುವ ಕರಿಯಕೂದಲೂ, ಚಪ್ಪಟೆಯಾಗಿರುವ ಮತ್ತು ಗಡ್ಡಿಬೆಳೆಯದ ಮುಖವೂ, ಓರೆಯಾಗಿರುವ ಮತ್ತು ಸಣ್ಣಗಿರುವ ಕಣ್ಣುಗಳೂ ಇವೆ.

ಮೇರು:—ಭೂಗೋಳದ ಅಕ್ಷದ ಕೊನೆಗಳನ್ನು ಮೇರುಗಳೆಂದು ಕರೆಯುತ್ತಾರೆ.

ಅಳಿವೆ:—ನದಿಯ ಮುಖವು ಬಹಳ ಅಗಲವಾಗಿದ್ದರೆ ಆ ಪ್ರದೇಶಕ್ಕೆ ಸಮುದ್ರದ ನೀರು ಕೆಲವುನೇಳೆ ನುಗ್ಗಿ ಬರುವುದು. ಈ ಸ್ಥಳಕ್ಕೆ ಅಳಿವೆಯೆಂದು ಹೆಸರು.

ಜಲಾನಯನ ಭೂಮಿ:—ಯಾವ ಪ್ರದೇಶದಮೇಲೆ ಬಿದ್ದ ನೀರು ನದಿಗೆ ಬಂದು ಸೇರುತ್ತದೋ ಆ ಪ್ರದೇಶ.

ನದೀಮುಖಜ ಭೂಮಿ:—ಕೆಲವು ದೊಡ್ಡ ನದಿಗಳು ತಮ್ಮ ಮುಖದಕಡೆಗೆ ಸಮುದ್ರದ ತಳವನ್ನು ಮುಚ್ಚಿ ಹೊಸನೆಲವನ್ನು ಮಾಡಿಕೊಂಡು ಅದರಮೇಲೆ ತಾವು ಶಾಖೆಗಳಾಗಿ ಹರಿಯುತ್ತವೆ.

ದೋ ಆಬ್:—ಎರಡು ನದಿಗಳ ನಡುವೆ ಇರುವ ಪ್ರದೇಶ.

ಮಿಲ್‌ಸ್ಟ್ರೀಮ್:—ಇದಿರು ಬದಿರಾಗಿ ಬರುವ ಎರಡು ಸಮುದ್ರದ ಪ್ರವಾಹಗಳು ಇದಿರ್ಗೊಳ್ಳುವ ಸಳದಲ್ಲಿ ಗಿರ್ರನೆ ತಿರುಗಿ ಸುಳಿಯನ್ನುಂಟುಮಾಡುವುವು. ನಾವ್ಯೆಯು ಹತ್ತಿರವಿರುವ ಈ ಸುಳಿಯೇ ಮಿಲ್‌ಸ್ಟ್ರೀಮ್.

ಹಿಮಪಂತಿ:—ಪ್ರತಿಯೊಂದು ಸ್ಥಳದಲ್ಲಿಯೂ, ಮೇಲೆ ಮೇಲೆ ಹೋಗುತ್ತ ಎಷ್ಟು ಎತ್ತರದಲ್ಲಿ ನೀರು ಗಡ್ಡಿಕಟ್ಟಿ ವರ್ಷವೆಲ್ಲವೂ ಕರಗದೇ ಇರುವುದೋ ಆ ಎತ್ತರಕ್ಕೆ ಹಿಮಪಂತಿಯೆಂದು ಹೆಸರು. ಇದು ಒಂದೊಂದು ಸ್ಥಳದಲ್ಲಿ ಒಂದೊಂದು ಎತ್ತರದಲ್ಲಿರುವುದು.

III (a) ವಾಯುಗುಣವನ್ನು ತಿಳಿಯಿಲಿಕ್ಕೆ ಸಹಕಾರಿಯಾದ ವಿಷಯುಗಳನ್ನು ಹೇಳಿ ಅವುಗಳಿಗೆ ಉದಾಹರಣೆಗಳನ್ನು ಕೊಡಿರಿ.

(b) ವಾಣಿಜ್ಯಸಹಾಯಕ ಮಾರುತಗಳಾವುವು? ಎರಡು ಅಧಿಕೊಷ್ಣ ಮಾರುತಗಳ ಹೆಸರುಗಳನ್ನೂ ಎರಡು ಅವರ್ತ ಮಾರುತಗಳ ಹೆಸರುಗಳನ್ನೂ ಹೇಳಿ ಅವು ಬೀಸುವ ಸ್ಥಳಗಳನ್ನು ಸೂಚಿಸಿರಿ.

ಅಕ್ಷಾಂಶದ ಸಂಖ್ಯೆ:—ಇದು ಹೆಚ್ಚಿದಷ್ಟು ಉಷ್ಣಕಡಮೆ. ಕೊನೆಗೆ ಬಹಳ ಚಳಿಯು. ಉದಾ. ಇಂಡಿಯಾ ದೇಶಕ್ಕಿಂತಲೂ ಇಂಗ್ಲೆಂಡಿನಲ್ಲಿ ಚಳಿ ಹೆಚ್ಚು.

ಎತ್ತರ:—ಮೇಲೆ ಮೇಲೆ ಹೋದಹಾಗೆಲ್ಲಾ ಉಷ್ಣಕಡಮೆ. ಸಮುದ್ರಮಟ್ಟದಮೇಲೆ 333 ಅಡಿ ಹೋದರೆ 1° ಉಷ್ಣಕಡಮೆ. ಉದಾ. ಮದರಾಸಿಗಿಂತಲೂ ಮೈಸೂರಲ್ಲಿ ಉಷ್ಣವುಕಡಮೆ.

ಸಮುದ್ರತೀರಕ್ಕಿರುವ ದೂರ:—ತೀರಪ್ರದೇಶಗಳಲ್ಲಿ ಶೀತೋಷ್ಣಗಳು ವಿಶೇಷ ಹೆಚ್ಚುವುದಿಲ್ಲ. ಸಮುದ್ರತೀರಕ್ಕೆ ದೂರದಲ್ಲಿರುವ ಪ್ರದೇಶಗಳಲ್ಲಿ ಶೀತೋಷ್ಣಗಳು ಅತ್ಯಧಿಕವಾಗಿರುವುವು. ಎಡಿಂಬರೋಗಿಂತಲೂ ಮಾಸ್ಕೋಪಟ್ಟಣದಲ್ಲಿ ಶೀತೋಷ್ಣಗಳೆರಡೂ ಹೆಚ್ಚು.

ಸುತ್ತಮುತ್ತಲೂ ಇರುವ ಪ್ರದೇಶಗಳ ವಿವರ:—ಅಲ್ಲಿನ ಎತ್ತರ, ಮಳೆ ಮುಂತಾದವುಗಳು ಉದಾ. ದಕ್ಷಿಣ ಅಮೆರಿಕದ ಪಶ್ಚಿಮದಲ್ಲಿರುವ ಪರ್ವತಗಳು ಪಶ್ಚಿಮದ ಶೀತಗಾಳಿಯನ್ನು ತಡೆಯುವುವು. ಇದರಿಂದ ಚಳಿ ಕಡಮೆ. ಪೂರ್ವದಿಕ್ಕಿನಿಂದ ಬರುವ ಉಷ್ಣಮಾರುತಗಳಿಗೆ ಅಡ್ಡವಾಗಿರುವುದರಿಂದ ಮಳೆ ವಿಶೇಷ ಹುಯ್ಯುವುದು.

ಅಕಡೆಗೆ ಬೀಸುವ ಗಾಳಿಗಳ ವಿವರ:—ಉದಾ. ಇಂಡಿಯಾದೇಶದಲ್ಲಿ ಮುಂಗಾರು ಗಾಳಿಯು ವಾಯು ಗುಣವನ್ನು ಬಹಳವಾಗಿ ಬದಲಾಯಿಸುವುದು. ಗಲ್ಫ್‌ಸ್ಟ್ರೀ

ವಿನಿಂದ ಇಂಗ್ಲೆಂಡಿನಕಡಗೆ ಬೀಸುವ ಗಾಳಿಯುಸೆಕೆಯನ್ನೂ ದ್ರವವನ್ನೂ ತರುವು ದರಿಂದ ಚಳಿಯನ್ನು ಕಡಮೆ ಮಾಡುವುದು.

ವಾಣಿಜ್ಯಮಾರುತಗಳು:—ಸಮಭಾಜಕವೃತ್ತಕ್ಕೆ ಇಕ್ಕೆಲಗಳಲ್ಲಿಯೂ ಸುಮಾರು 30 ಅಂಶಗಳಲ್ಲಿ ಪೊದಲಾಗಿ ಉತ್ತರಭಾಗದಲ್ಲಿ ಈಶಾನ್ಯಮುಖವಾಗಿಯೂ, ದಕ್ಷಿಣಭಾಗದಲ್ಲಿ ಆಗ್ನೇಯ ಮುಖವಾಗಿಯೂ ನಿರಂತರದಲ್ಲೂ ಬೀಸುವ ಗಾಳಿಗೆ ವಾಣಿಜ್ಯಮಾರುತಗಳೆಂದು ಹೆಸರು. ಇವು ವ್ಯಾಪಾರಸ್ಥರಿಗೆ ಬಹು ಸಹಾಯಕರವಾಗಿರುವುದರಿಂದ ಈ ಹೆಸರು ಇವುಗಳಿಗೆ ಬಂದಿರುವುದು. ಸಮಭಾಜಕ ವೃತ್ತದ ಹತ್ತಿರ ವಾಯುವು ವಿಶೇಷವಾಗಿ ಕಾಯ್ದು ಮೇಲಕ್ಕೇಳುವುದರಿಂದ ಇದರ ಸ್ಥಳವನ್ನು ಆಕ್ರಮಿಸುವುದಕ್ಕೆ ದಕ್ಷಿಣೋತ್ತರಗಳ ಶೀತವಾಯುವು ನುಗ್ಗುವುದು. ಇದು ಭೂಮಿಯ ಚಲನೆಯಿಂದ ಆಗ್ನೇಯವಾಗಿಯೂ ಈಶಾನ್ಯವಾಗಿಯೂ ಪರಿಣಮಿಸುವುದು.

ಅರೇಬಿಯಾದಲ್ಲಿ ಬೀಸುವ "ಸೈಮೂ," ಎಂಬುವುದು, ಆಫ್ರಿಕಾ ಖಂಡದ ಒಳಭಾಗದಲ್ಲಿ ಬೀಸುವ "ಹರ್ಮಟ್ಟ್ಯಾನ್" ಮತ್ತು "ಸಿರಕ್ಕೊ" ಎಂಬಿವು ಅಧಿಕೋಷ್ಣಮಾರುತಗಳು.

ಹಿಂದೂಸಾಗರದಲ್ಲಿ ಬೀಸುವ ಸೈಕ್ಲೋನ್ ಮತ್ತು ಚೀನಾಸಮುದ್ರದಲ್ಲಿ ಬೀಸುವ "ಟೈಫೂನ್" ಎಂಬಿವು ಆವರ್ತಮಾರುತಗಳು.

VI ಇವುಗಳಿಗೆ ಕಾರಣಗಳನ್ನು ಹೇಳಿರಿ.

1 ಸಂಕ್ರಾಂತಿವೃತ್ತಗಳ ದೊಡ್ಡ ಪರ್ವತಗಳಲ್ಲಿ ಪಂಚವಲಯಗಳ ಉದ್ಭವಗಳೂ ಇರುವುವು.

2 ಅಮಜಾನ್ ನದಿಯು ಸಂವತ್ಸರವೆಲ್ಲವೂ ಇಳಿಯದೆ ತುಂಬಿ ಹರಿಯುವುದು.

3 ಸೈಬೀರಿಯಾದಲ್ಲಿ ಮಳೆ ಕೊಂಚವಾಗಿದ್ದರೂ ನದಿಗಳು ದೊಡ್ಡದಾಗಿರುವುವು.

4 ಸಾಗರದ ನೀರಿಗಿಂತಲೂ, ಬಾಲ್ಟಿಕ್‌ಸಮುದ್ರದ ನೀರು ಉಪ್ಪಿನಲ್ಲಿ ಕಡಮೆಯಾಗಿಯೂ, ಭೂಮಧ್ಯ ಸಮುದ್ರದ ನೀರು ಉಪ್ಪಿನಲ್ಲಿ ಹೆಚ್ಚಾಗಿಯೂ, ಇರುವುವು.

5 ಸಮಭಾಜಕವೃತ್ತದ ಪ್ರದೇಶದಲ್ಲಿ ದಿನಂಪ್ರತಿಯಲ್ಲಿಯೂ ಮಳೆ ಸುರಿಯುವುದೆಂದು ಹೇಳಬಹುದು.

ವಾಯುಗುಣವು ಆಕ್ಷಾಂಶವನ್ನೂ ಎತ್ತರವನ್ನೂ ಅನುಸರಿಸಿರುವುವು. ಆದ ಕಾರಣ ಸಂಕ್ರಾತಿವೃತ್ತಗಳ ದೊಡ್ಡ ಪರ್ವತಗಳಲ್ಲಿ ಬುಡದಲ್ಲಿ ಉಷ್ಣವಲಯದ ಗುಣವೂ ಮಧ್ಯಭಾಗದಲ್ಲಿ ಸಮಶೀತೋಷ್ಣವಲಯದ ಗುಣವೂ, ಮೇಲ್ಭಾಗದಲ್ಲಿ ಶೀತವಲಯದ ಗುಣವೂ ಇರುವುದರಿಂದ ಪಂಚವಲಯಗಳ ಉದ್ಭಿಜ್ಜಗಳೂ ಈಪರ್ವತಗಳಲ್ಲಿರುವುವು.

ಸೂರ್ಯನು ಸಮಭಾಜಕ ವೃತ್ತಕ್ಕೆ ಉತ್ತರದಲ್ಲಿರುವಾಗ ಅಲ್ಲಿ ಮಳೆ ಹೆಚ್ಚಾಗಿರುವುದರಿಂದ ಅಮಜಾರ್ ನದಿಯು ಉತ್ತರ ಭಾಗದ ಉಪನದಿಗಳೆಲ್ಲವೂ ತುಂಬಿ ಹರಿಯುವುವು. ಸೂರ್ಯನು ದಕ್ಷಿಣ ಭಾಗದಲ್ಲಿರುವಾಗ ಅಲ್ಲಿ ಬಿಸಿಲು ಮಳೆ ಹೆಚ್ಚಾಗಿರುವುದರಿಂದ ದಕ್ಷಿಣ ಭಾಗದ ಉಪನದಿಗಳೆಲ್ಲವೂ ತುಂಬಿ ಹರಿಯುವು. ಆದಕಾರಣ ಅಮಜಾರ್ ನದಿಯು ವರ್ಷವೆಲ್ಲವೂ ಪೂರ್ಣಪ್ರವಾಹಿನಿಯಾಗಿರುವುದು.

ಸೈಬೀರಿಯಾದಲ್ಲಿ ಶೈತ್ಯಾಧಿಕ್ಯದಿಂದ ಭೂಮಿಯು ಕೆಲವಂಗುಲಗಳ ಕೆಳಗೆ ಘನೀಭೂತವಾಗಿ ನೀರಿಗೆ ದಾರಿಯುನ್ನು ಕೊಡದಿರುವುದರಿಂದ ನೆಲದೊಳಕ್ಕೆ ನೀರು ಇಳಿಯುವುದೇ ಇಲ್ಲವು. ನೆಲದಮೇಲೆ ಬಿದ್ದ ಮಳೆಯ ನೀರೆಲ್ಲವೂ ನದಿಗೇನೇ ಹೋಗುವುದು.

ಬಾಲ್ಟಿಕ್ ಸಮುದ್ರದಲ್ಲಿ ನೀರು ಅವಿಯಾಗಿ ಹೋಗುವುದು ಬಹಳ ಕಡಮೆ. ಭೂಮಧ್ಯಸಮುದ್ರದಲ್ಲಿ ಬಹು ಹೆಚ್ಚು. ನದಿಗಳು ಸೀನೀರನ್ನು ತರುವುದು ಬಾಲ್ಟಿಕ್ ಸಮುದ್ರಕ್ಕೆ ಬಹು ಹೆಚ್ಚು. ಭೂ ಮಧ್ಯಸಮುದ್ರಕ್ಕೆ ಬಹು ಕಡಮೆ. ಬಾಲ್ಟಿಕ್ ಸಮುದ್ರದಲ್ಲಿ ನೀರು ಹೆಚಿ ಸಾಗರದ ಕಡಗೆ ಹರಿದು ಹೋಗುವುದು. ಭೂಮಧ್ಯಸಮುದ್ರದಲ್ಲಿ ನೀರು ಕಡಮೆಯಾಗಿ ಸಾಗರದ ನೀರು ಭೂಮಧ್ಯಸಮುದ್ರದೊಳಕ್ಕೆ ಹರಿದು ಬರುವುದು. ಬಾಲ್ಟಿಕ್ ಸಮುದ್ರದಮೇಲೆ ವರ್ಷವೆಲ್ಲವೂ ಮಳೆಯು ಸುರಿಯುವುದು. ಭೂಮಧ್ಯಸಮುದ್ರದಮೇಲೆ ಕೆಲವುಕಾಲಮಾತ್ರ.

ವಿಪರೀತವಾಗಿ ಬೀಸುವ ಈಶಾನ್ಯಾಗ್ನೇಯ ಮಾರುತಗಳೂ ಸಮಭಾಜವೃತ್ತಕ್ಕೆ ಸ್ವಲ್ಪ ಉತ್ತರದಲ್ಲಿ ಸಂಧಿಸುವುವು. ಇವು ಸಂಧಿಸುವುದರಿಂದ ಗಾಳಿಯು ಮೇಲಕ್ಕೊಯ್ಯಲ್ಪಟ್ಟ ಅಲ್ಲಿನ ಶೈತ್ಯದಿಂದ ಅದರ ಜಲಾಂಶವು ಸಾಂದ್ರತೆಯನ್ನು ಹೊಂದಿ ಮಳೆಯು ಹನಿಗಳಾಗಿ ಕೆಳಕ್ಕೆ ಬೀಳುವುದು ಮೇಲೆ ಹೇಳಿದ ಈ ಮಾರುತಗಳು ನಿರಂತರವಾಗಿ ಬೀಸುವುದರಿಂದ ಮಳೆಯು ನಿತ್ಯವೂ ಸುರಿಯುವುದು.

ಹೊಸಪತ್ರಿಕೆ ! ಹೊಸಪತ್ರಿಕೆ ! !

"ಅವಕಾಶ ತೋಷಿಣೀ."

(ವಿವಿಧಪ್ರಬಂಧ ಪೂರ್ಣ ಮಾಸಪತ್ರಿಕೆ.)

ಪ್ರಬಂಧಗಳು ಶಿಕ್ಷಣ ಪ್ರದವಾದುವಾಗಿಯೂ ಮನೋಹರವಾದುವಾಗಿಯೂ ಇರುವುವು.

ಪತ್ರಿಕೆಯು

—:0:—

ಅನೇಕ ಉಪನ್ಯಾಸಲೇಖಕರಾದ ಬಿ. ವೆಂಕಟಾಚಾರ್ಯರಿಂದ ಸಂಪಾದಿತವಾದುದು. ಲಬ್ಧ ಪತಿಷ್ಠರಾದ ಪಂಡಿತರೂ ಲೇಖಕರಾಗಿರುವರು.

ಬಿ.ವೆಂಟಾಚಾರ್ಯರಿಂದ ರಚಿತವಾಗುವ ಹೊಸ ಹೊಸ ಗ್ರಂಥಗಳಲ್ಲೊಂದೆರಡು ಗ್ರಂಥಗಳು ಪ್ರತಿ ಸಂಚಿಕೆಯಲ್ಲಿಯೂ ನಿಯತವಾಗಿ ಪ್ರಕಾಶಿಸಲ್ಪಡುವುದು.

ವರ್ಷಕ್ಕೆ ಚಂದಾ (ಅಂಚೆವೆಚ್ಚ ಸೇರಿ) ... ... 1—4—0

ಬೇಕಾದವರು, "ದಿ. ಜನರಲ್ ಏಜೆನ್ಸಿ, ಲಕ್ಷ್ಮೀವಿಲಾಸರೋಡು, ಮೈಸೂರು" ಈ ವಿಲಾಸಕ್ಕೆ ಬರೆದುಕೊಳ್ಳಬಹುದು—ಅಲ್ಲಲ್ಲಿ ಏಜಂಟರಿರುವರು ಮತ್ತು ಬೇಕಾಗಿರುವುದು.

ನೋಟೀಸ್.

4 ನೆಯ ತರಗತಿಯ ಗಣಿತದ ಕ್ರಯ 5 ಆಣೆ. 3 ನೆಯ ತರಗತಿಯ ಗಣಿತದ 2 ನೆಯ ಛಾಪೆಯೂ 2 ನೆಯ ತರಗತಿಯ ಗಣಿತವೂ ಅಚ್ಚಾಗುತ್ತಾ ಇವೆ. ಒಟ್ಟು 12 ಪ್ರತಿ ತೆಗೆದು ಕೊಂಡರೆ 1 ಪ್ರತಿ ಉಚಿತವಾಗಿ ದೊರಕುತ್ತದೆ. 50 ಪ್ರತಿ ತೆಗೆದುಕೊಂಡರೆ 5 ಪ್ರತಿ ಉಚಿತವಾಗಿ ದೊರಕುತ್ತದೆ. 4, 5 ನೆಯ ತರಗತಿಯ ಗಣಿತಗಳು ಎಷ್ಟು ಬೇಕಾದರೂ ಗ್ರಂಥಕರ್ತರಲ್ಲಿ ದೊರಕುತ್ತವೆ.

R. Alvar Iyengar, B.A.,
Assistant Deputy Inspector of Schools, Tumkur.

* ವಿದ್ಯಾದಾಯಿನಿ. *

ಭಾಗ ೧೪.] ನವೆಂಬರ್—೧೯೦೬. [ಸಂಖ್ಯೆ ೧೧.

ವಿದ್ಯಾಭ್ಯಾಸ.

(ಕಳೆದ ತಿಂಗಳ ೨೨೨ ನೇ ಪುಟದ ಶೇಷ.)

ಈ ಕಾರ್ಯವು ಕಷ್ಟವೆಂಬುದರಲ್ಲಿ ಸಂದೇಹವಿಲ್ಲ. ವಾಸ್ತವಿಕವಾಗಿ ಇದನ್ನು ಸಂಪೂರ್ಣವಾಗಿ ನೆರವೇರಿಸಲು ಎಂದಿಗೂ ಆಗುವುದಿಲ್ಲ. ಆದರೆ ಕೆಲಸವು ಕಷ್ಟವೆಂದು ಹೆದರಿ ಅದನ್ನು ಸಾಧಿಸದೆ ಬಿಡಕೂಡದು. ಬಿಟ್ಟುದೇಯಾದರೆ ಬಹುನಷ್ಟಕ್ಕೆ ಕಾರಣವಾಗುತ್ತದೆ. ಅದನ್ನು ನೆರವೇರಿಸಲು ನಮ್ಮ ಶಕ್ತಿ ಸಾಹಸಗಳನ್ನೆಲ್ಲಾ ಉಪಯೋಗಿಸಬೇಕು. ಸರಿಯಾದ ರೀತಿಯಲ್ಲಿ ನಾವದನ್ನು ಸಾಧಿಸಿದರೆ ಶ್ರಿಸ್ರದಲ್ಲಿಯೇ ಉತ್ತಮಫಲಗಳನ್ನು ಹೊಂದುವೆವು.

ಆದುದರಿಂದ ನಾವು ಮನುಷ್ಯ ಜೀವನದ ಮುಖ್ಯಕಾರ್ಯಗಳನ್ನು ಅವುಗಳ ಗೌರವಾನುಸಾರವಾಗಿ ಮೊದಲು ವಿಂಗಡಿಸಿಕೊಳ್ಳಬೇಕು. ಅವನ್ನು ಸಹಜರೀತಿಯಲ್ಲಿ ಹೀಗೆ ವಿಭಾಗಿಸಬಹುದು:—(೧) ಆತ್ಮರಕ್ಷಣಕ್ಕೆ ನಾಕ್ಷಾತ್ತಾಗಿ ಒದಗುವ ಕಾರ್ಯಗಳು, (೨) ಜೀವನಕ್ಕೆ ಅವಶ್ಯಕವಾದ ಸಾಮಗ್ರಿಗಳನ್ನೊದಗಿಸಿ ಅವುಗಳ ದ್ವಾರಾ ಆತ್ಮರಕ್ಷಣಕ್ಕೆ ಸಾಧಕವಾದ ಕಾರ್ಯಗಳು, (೩) ಮಕ್ಕಳ ಪೋಷಣಕ್ಕೂ ಶಿಕ್ಷಣಕ್ಕೂ ಉಪಯುಕ್ತವಾದ ಕಾರ್ಯಗಳು, (೪) ಯಥಾಕ್ರಮದಲ್ಲಿ ಸಮಾಜಪಾಲನಕ್ಕೂ ರಾಜ್ಯಪಾಲನಕ್ಕೂ ಬೇಕಾದ ಕಾರ್ಯಗಳು, (೫) ವಿಶ್ರಮಕಾಲದಲ್ಲಿ ವಿನೋದಗಳಿಗಾಗಿ ಮಾಡಬೇಕಾದ ವಿವಿಧಕಾರ್ಯಗಳು.

ಇವುಗಳು ಕ್ರಮವಾಗಿ ಒಂದರಮೇಲೊಂದು ಆಧೀನವಾಗಿರುವುವೆಂದು ತೋರಿಸಲು ದೀರ್ಘವಿಚಾರವು ಬೇಡ. ಪ್ರತಿ ಕ್ಷಣದಲ್ಲಿಯೂ ಆತ್ಮರಕ್ಷಣಕ್ಕೆ ಬೇಕಾದ ಕಾರ್ಯಗಳೂ ಮುಂಜಾಗ್ರತೆಗಳೂ ಮಿಕ್ಕ ಕಾರ್ಯಗಳಿಗಿಂತ ಗೌರವವಾಗಿ

ರುವುದು ವ್ಯಕ್ತವಾಗಿಯೇ ಇದೆ. ಶಿಶುವಿನಂತೆ ಸುತ್ತಮುತ್ತಲಿರುವ ಪದಾರ್ಥಗಳನ್ನೂ ಅವುಗಳ ಚಲನಗಳನ್ನೂ ಅರಿಯದ ಮನುಷ್ಯನು ಯಾವನಾದರೂ ಇದ್ದರೆ, ಅವುಗಳ ಸಂಗಡ ಹೇಗೆ ನಡೆದುಕೊಳ್ಳಬೇಕೆಂದು ಅವನಿಗೆ ತಿಳಿಯದೆ ಹೋದರೆ, ಅವನು ಮೊದಲನೆಯಸಾರಿ ಬೀದಿಗೆ ಕಾಲಿಡುತ್ತಲೇ ಪ್ರಾಣವನ್ನು ಕಳೆದುಕೊಳ್ಳುವುದು ಸಿದ್ಧ. ಇತರ ವಿಷಯಗಳಲ್ಲಿ ಅವನು ಎಷ್ಟು ಬುದ್ಧಿವಂತನಾದಾಗ್ಯೂ ಪ್ರಾಣವನ್ನುಳಿಸಿಕೊಳ್ಳಲಾರನು. ಇತರ ವಿಷಯಕವಾದ ಪೂರ್ಣಅಜ್ಞಾನವು ಆತ್ಮಸಂರಕ್ಷಣದ ಪೂರ್ಣ ಅಜ್ಞಾನದಷ್ಟು ಕ್ಷಿಪ್ರದಲ್ಲಿ ಮರಣವನ್ನುಂಟುಮಾಡುವುದಿಲ್ಲವಾದುದರಿಂದ, ತತ್ಕ್ಷಣದಲ್ಲಿ ಆತ್ಮರಕ್ಷಣಕ್ಕೆ ಸಾಧಕವಾದ ಜ್ಞಾನವು ಗುರುತಮವಾದುದೆಂದು ಒಪ್ಪಿಕೊಳ್ಳಲೇಬೇಕು.

ಹೀಗೆ ಪ್ರತ್ಯಕ್ಷವಾಗಿ ಎಂದರೆ ತತ್ಕ್ಷಣದಲ್ಲಿ ಮಾಡಬೇಕಾದ ಆತ್ಮರಕ್ಷಣಕಾರ್ಯಗಳನ್ನು ಕುರಿತು ವಿಚಾರ ಮಾಡಿದ ಬಳಿಕ ಪರೋಕ್ಷವಾಗಿ ಎಂದರೆ ವಿಳಂಬವಾಗಿ ಮಾಡಬಹುದಾದ ಆತ್ಮರಕ್ಷಣ ಕಾರ್ಯಗಳನ್ನು ಕುರಿತು ವಿಚಾರಮಾಡಬೇಕು. ಈ ವಿಷಯದಲ್ಲಿ ನಿರಾಕ್ಷೇಪ. ಪರೋಕ್ಷ ಆತ್ಮರಕ್ಷಣ ಕಾರ್ಯಗಳೆಂದರೆ ದೇಹಸಂರಕ್ಷಣಕ್ಕೆ ಬೇಕಾದ ಆಹಾರ ಮುಂತಾದ ಸಾಮಗ್ರಿಗಳನ್ನು ಒದಗಿಸಿಕೊಡುವ ಕಾರ್ಯಗಳು ಎಂದರೆ ಜೀವನೋಪಾಯ ಕಾರ್ಯಗಳು. ಜೀವನೋಪಾಯಗಳನ್ನು ಕಲ್ಪಿಸಿಕೊಂಡ ಬಳಿಕಲೇ ಮಕ್ಕಳ ಪೋಷಣವು ಸಾಧ್ಯವಾದುದರಿಂದ, ಈ ಸಂಬಂಧವಾದ ಕಾರ್ಯಗಳಿಗೆ ಮೊದಲು ಜೀವನೋಪಾಯ ಕಾರ್ಯಗಳನ್ನೇ ಪರ್ಯಾಲೋಚಿಸಬೇಕು. ಇದಲ್ಲದೆ ಮನುಷ್ಯರಿಗೆ ಮಕ್ಕಳ ಸಂರಕ್ಷಣಶಕ್ತಿಗಿಂತಲೂ ಸ್ವರಕ್ಷಣ ಶಕ್ತಿಯೇ ಮೊದಲುಂಟಾಗುವುದರಿಂದ, ಸ್ವರಕ್ಷಣ ಸಂಬಂಧವಾದ ವಿದ್ಯೆಯು ಮಕ್ಕಳ ಪೋಷಣ ಸಂಬಂಧವಾದ ವಿದ್ಯೆಗಿಂತಲೂ ಹೆಚ್ಚಾದ ಬಾಧ್ಯತೆಯನ್ನುಂಟಾಗಿರುವುದು. ಆದ ಕಾರಣ ಪರೋಕ್ಷಾತ್ಮರಕ್ಷಣ ವಿದ್ಯೆಯು ಪ್ರತ್ಯಕ್ಷಾತ್ಮರಣವಿದ್ಯೆಯನ್ನು ಬಿಟ್ಟರೆ ಮಿಕ್ಕ ಯಾವ ವಿದ್ಯೆಗಳಿಗೂ ಬೆಲೆಯಲ್ಲಿ ಎರಡನೆಯುದಾಗಿಲ್ಲ.

ಹಾಗೆಯೆ ಕಾಲಗತಿಯಲ್ಲಿ ಕುಟುಂಬವು ರಾಜ್ಯಕ್ಕೆ ಪೂರ್ವಭಾವಿಯಾದುದರಿಂದಲೂ, ರಾಜ್ಯವು ಸ್ಥಾಪಿಸಲ್ಪಡುವ ಮೊದಲೂ ನಷ್ಟವಾದ ಬಳಿಕಲೂ ಮಕ್ಕಳ ಸಂರಕ್ಷಣವು ಸಾಧ್ಯವಾದುದರಿಂದಲೂ, ಮತ್ತು ಮಕ್ಕಳ ಶಿಕ್ಷಣದಿಂದಲೇ ರಾಜ್ಯ ಸ್ಥಾಪನವು ಶಕ್ಯವಾದುದರಿಂದಲೂ, ನಾವು ರಾಜ್ಯಕಾರ್ಯಗಳಿಗಿಂತ ಮಕ್ಕಳ ಸಂರಕ್ಷಣ ಕಾರ್ಯಗಳಿಗೆ ಪ್ರಬಲವಾದಅವಧಾನವನ್ನು ಕೊಡಬೇಕು. ಇದಲ್ಲದೆ ಸಮಾ

ಜದ ಒಳ್ಳೇತನವು ಪೌರರ ಸ್ವಭಾವವನ್ನಾಶ್ರಯಿಸಿರುವುದರಿಂದಲೂ, ಬಾಲ್ಯಶಿಕ್ಷಣ ದಿಂದ ಪೌರರ ಸ್ವಭಾವವು ವಿಶೇಷವಾಗಿ ಬದಲಾಯಿಸಲ್ಪಡಬಹುದಾದರಿಂದಲೂ, ಕುಟುಂಬ ಕ್ಷೇಮವು ಸಮಾಜಕ್ಷೇಮಕ್ಕೆ ಆಧಾರಭೂತವಾದುದೆಂದು ಎಣಿಸಬೇಕಾಗಿರುವುದು. ಆದಕಾರಣ ಸಮಾಜಕ್ಷೇಮ ಸಾಧಕವಾದ ವಿದ್ಯೆಗೆ ಮೊದಲು ಕುಟುಂಬಕ್ಷೇಮ ಸಾಧಕವಾದ ವಿದ್ಯೆಯನ್ನೇ ಕಲಿಯುತಕ್ಕುದು.

ಮೇಲೆ ಹೇಳಿದ ಗುರುತರವಾದ ಕೆಲಸಗಳನ್ನು ಮುಗಿಸಿದ ಬಳಿಕ ಉಳಿದ ಸಾವಕಾಶಕಾಲದಲ್ಲಿ ನಡೆಸಬಹುದಾದ ನಾನಾ ವಿನೋದ ಕಾರ್ಯಗಳು ಎಂದರೆ ಸಂಗೀತ ಸಾಹಿತ್ಯ ಚಿತ್ರಲೇಖನಾದಿಗಳು ಪೂರ್ವಭಾವಿಯಾದ ಒಂದು ಸಮಾಜದ ಇರುವಿಕೆಯನ್ನು ಸೂಚಿಸುವುವು. ಚಿರಕಾಲಸ್ಥಾಪಿತವಾದ ಸಮಾಜವಿಲ್ಲದೆ ವಿನೋದಕಾರ್ಯಗಳ ಅಭಿವೃದ್ಧಿಯು ಅಸಾಧ್ಯ ಇದಲ್ಲದೆ ಅವುಗಳಲ್ಲಿ ಸೂಚಿತವಾದ ವಿಷಯಗಳು ಹೆಚ್ಚಾಗಿ ಸಮಾಜದ ಅಭಿಪ್ರಾಯಗಳೂ ಅನುವೇದಗಳೂ ಆಗಿಯೇ ಇರುವುವು. ಹೀಗೆ ಸಮಾಜವು ಅವುಗಳ ವೃದ್ಧಿಗೆ ಅವಕಾಶ ಕೊಡುವುದಲ್ಲದೆ, ಅವುಗಳಿಗೆ ಬೇಕಾದ ಭಾವನೆಗಳನ್ನೂ ಅಭಿಪ್ರಾಯಗಳನ್ನೂ ಸಹ ಒದಗಿಸಿಕೊಡುವುದು. ಈ ನಿಮಿತ್ತದಿಂದ ಸತ್ಪೌರಕಾರ್ಯಗಳು ಸಂಗೀತಾದಿ ಕುಶಲಕಲೆಗಳಿಗಿಂತಲೂ ಗುರುತರವಾಗಿಯೇ ಇರುವುವು. ಆದುದರಿಂದ ಕುಶಲಕಲಾಭ್ಯಾಸವನ್ನು ಮಾಡುವುದಕ್ಕೆ ಮುಂಚೆಯೇ ಪೌರಕಾರ್ಯಗಳನ್ನು ಕಲಿಯಬೇಕು.

ಹೀಗೆ ಪ್ರತ್ಯಾಕ್ಷಾತ್ಮ ರಕ್ಷಣವಿದ್ಯೆಯೂ ಪರೋಕ್ಷಾತ್ಮ ರಕ್ಷಣವಿದ್ಯೆಯೂ ಮಕ್ಕಳ ಸಂರಕ್ಷಣವಿದ್ಯೆಯೂ ಪೌರವಿದ್ಯೆಯೂ ಬಳಿಕ ಕುಶಲಕಲಾಭ್ಯಾಸವೂ — ಇವು ಯಥಾಕ್ರಮದಲ್ಲಿ ಒಂದನ್ನು ಮತ್ತೊಂದು ಆಶ್ರಯಿಸಿರುವುವು. ಆದರೆ ಈ ವಿಭಾಗಗಳಲ್ಲಿ ಪ್ರತಿ ಒಂದನ್ನೂ ಸಂಪೂರ್ಣವಾಗಿ ಪ್ರತ್ಯೇಕಿಸಲಾಗುವುದಿಲ್ಲ. ಇವೆಲ್ಲಾ ಬಹು ತೊಡಕಾಗಿ ಸೇರಿರುವುದರಿಂದ, ಯಾವುದಾದರೂ ಒಂದು ವಿಭಾಗದಲ್ಲಿ ಶಿಕ್ಷಣವನ್ನು ಹೊಂದಿದನೆ ವಿುಕ್ಕವುಗಳಲ್ಲೆಲ್ಲಾ ಸ್ವಲ್ಪ ಮಟ್ಟಿಗಾದರೂ ಶಿಕ್ಷಣವಾಗದೆ ಇರುವುದಿಲ್ಲ. ಇದಲ್ಲದೆ ಉತ್ತರವಿಭಾಗಗಳ ಕೆಲವು ಅಂಶಗಳು ಪೂರ್ವವಿಭಾಗಗಳ ಕೆಲವು ಅಂಶಗಳಿಗಿಂತ ಗುರುತರವಾಗಿರುವುವು. ಹೇಗೆಂದರೆ, ಬೇರೆ ವಿಷಯಗಳನ್ನರಿಯದೆ ಧನಾರ್ಜನೆಯಲ್ಲಿ ಮಾತ್ರ ಬಹು ಬುದ್ಧಿವಂತನಾದವನು, ಅದರಲ್ಲಿ ಅಷ್ಟು ಜಾಣನಲ್ಲದ ಆದರೆ ಮಕ್ಕಳ ಸಂರಕ್ಷಣದಲ್ಲಿ ಬಹು ಸಮರ್ಥನಾದ ಮನುಷ್ಯನಿಗಿಂತ ಪೂರ್ಣಜೀವನ ಪ್ರಮಾಣಕ್ಕೆ ಬಹಳ ಕಡಿಮೆ ತರದವನಾಗಬಹುದು. ಮತ್ತು

ಕುಶಲಕಲಾಭ್ಯಾಸದಲ್ಲಿ ಸ್ವಲ್ಪವೂ ಪರಿಚಿತಿ ಇಲ್ಲದೆ ಪೌರವಿದ್ಯೆಯಲ್ಲಿ ಮಾತ್ರ ಪೂರ್ಣ ಪಾಂಡಿತ್ಯವಿರುವುದಕ್ಕಿಂತ ಅವೆರಡರಲ್ಲಿಯೂ ತಕ್ಕಮಟ್ಟಿಗೆ ಪರಿಚಿತಿ ಇರುವುದು ಲೇಸೆಂದೆಣಿಸಬಹುದಾಗಿದೆ. ಹೀಗಾದಾಗ್ಯೂ ಮೇಲೆ ಹೇಳಿದ ದೊಡ್ಡ ಐದು ವಿಭಾಗಗಳು ಸಾಕಾದಷ್ಟು ವ್ಯಕ್ತವಾಗಿಯೇ ಇರುವುವು. ಇದಲ್ಲದೆ ಈ ವಿಭಾಗಗಳಿಗೆ ಸಂಬಂಧಪಟ್ಟ ಜೀವನಾವಸ್ಥೆಗಳು ಮೇಲೆ ಹೇಳಿದ ಕ್ರಮದಲ್ಲಿಯೇ ಒಂದರಿಂದ ಮತ್ತೊಂದು ಸಾಧ್ಯವಾಗಿರುವುದರಿಂದ, ಈ ವಿಭಾಗಗಳೂ ಕೂಡ ಯಥಾಕ್ರಮದಲ್ಲಿ ಒಂದನ್ನು ಮತ್ತೊಂದು ಆಶ್ರಯಿಸಿರುವುವು. N. V. (ಸಶೇಷ.)

ತಾಯಿಯ ಕರ್ತವ್ಯ.

ನಾಗರಿಕತೆಯುಳ್ಳ ಎಲ್ಲಾ ದೇಶಗಳಲ್ಲಿಯೂ ಜನನ ಮರಣದ ರಿಕಾರ್ಡುಗಳಿರುತ್ತವೆ. ಇವುಗಳನ್ನು ನೋಡಿದರೆ ಜನಿಸಿದ ಮಕ್ಕಳ ಪೈಕಿ ಅರಕ್ಕೆ ಒಂದರಪ್ರಕಾರ ಶಿಶುಗಳು ಆರೋಗ್ಯವುಳ್ಳ ಪ್ರದೇಶಗಳಲ್ಲಿಯೂ ಕೂಡಾ ಸಾಯುವುವು. ಜನಿಸಿದವರಲ್ಲಿ ಅರ್ಧಭಾಗ ಮಕ್ಕಳು ಒಂದನೇ ವರುಷವು ಪೂರೈಸುವುದರೊಳಗಾಗಿ ಮೃತಪಡುವುವು. ಈ ವಿಷಯದಲ್ಲಿ ಡಾಕ್ಟರ್ ಫಾರ್‌ರವರು ಹೇಳಿರತಕ್ಕ ಕೆಲವು ಅಂಶಗಳು ಮಕ್ಕಳನ್ನು ಪೋಷಣೆ ಮಾಡತಕ್ಕ ಜನಗಳಿಗೆ ಶ್ರೋತವ್ಯವಾಗಿರುವುವು. ಅವರು ಹೇಳುವುದೇನಂದರೆ:—

ಹುಟ್ಟಿದ ಮಕ್ಕಳಲ್ಲಿ ಅರ್ಧಪಾಲು ಮಕ್ಕಳು ಸಾಯುವುದಕ್ಕೆ ಪ್ರಥಮತಃ ತಾಯಿಗೆ ಮಕ್ಕಳ ಪೋಷಣೆಯ ವಿಧಾನವು ತಿಳಿಯದೇ ಇರತಕ್ಕುದು ಒಂದು ಮುಖ್ಯಕಾರಣ. ಇತರ ಕಾರಣಗಳು ಅನೇಕವಾಗಿರುವುವು. ಆದರೆ ಇದಕ್ಕಿಂತಲೂ ಬಲವಾದ ಕಾರಣವು ಯಾವುದೂ ಇಲ್ಲ. ನಿರ್ಮಲವಾದ ವಾಯು, ನಿರ್ಮಲವಾದ ನೀರು, ಆರೋಗ್ಯವಾಗ ವಾಸಸ್ಥಾನ, ಕ್ರಮವಾದ ಸ್ನಾನ, ಶುಭ್ರವಾದ ಬಟ್ಟೆಗಳು, ವಿಚ್ಛಿತ್ತಿಯಿಲ್ಲದೇ ನಿದ್ರೆ, ಇವುಗಳನ್ನೆಲ್ಲಾ ಹೊಂದಿರುವುದು ಆರೋಗ್ಯಕ್ಕೆ, ಅಕಾಲಮರಣವನ್ನು ಹೊಂದದೇ ಇರುವುದಕ್ಕೂ ಮುಖ್ಯವಾದ ಕಾರಣಗಳು. ತಾಯಿಯರು ವಿದ್ಯಾವತಿಯರಾಗಿಯೂ ಮಕ್ಕಳ ಪೋಷಣೆಯನ್ನು ತಿಳಿದವರಾಗಿಯೂ ಇದ್ದರೆ ಮಕ್ಕಳಿಗೆ ಯಾವನಿಷ್ಠವಾದ ಆಹಾರವನ್ನು ಕೊಡಬೇಕೋ,

ಎಂಥಾ ಪಾನವನ್ನು ಕೊಡಬೇಕೋ, ಹೇಗೆ ಸ್ನಾನವನ್ನು ಮಾಡಿಸಬೇಕೋ, ಯಾವ ರೀತಿಯಲ್ಲಿ ಉಡುಪುಗಳನ್ನು ಹಾಕಬೇಕೋ, ಎಂಥಾ ವಾಸಸ್ಥಾನವನ್ನು ಹೊಂದ ಬೇಕೋ, ಆರೋಗ್ಯಕ್ಕೆ ವಿರೋಧವಾಗದಂತೆ ಗಾಳಿಯು ಸಂಚಾರಕ್ಕೆ ಮನೆಯಲ್ಲಿ ಎಂಥಾ ಏರ್ಪಾಡನ್ನು ಮಾಡಿಕೊಳ್ಳಬೇಕೋ, ವಿಶ್ರಾಂತಿ, ನಿದ್ದೆ ಮೊದಲಾದವುಗಳ ವಿಷಯದಲ್ಲಿ ಮಕ್ಕಳನ್ನು ಯಾವರೀತಿಯಲ್ಲಿ ಇಟ್ಟುಕೊಂಡಿರಬೇಕೋ ಇವುಗಳಿ ಗೆಲ್ಲಾ ಗಮನವನ್ನು ಕೊಡುವ ಶಕ್ತಿಯನ್ನು ಹೊಂದಬಹುದು. ವಿದ್ಯಾವಿಹೀನೆಯು ರಾಗಿಯೂ, ಆರೋಗ್ಯನಿದಾನವನ್ನು ತಿಳಿಯದವರಾಗಿಯೂ, ಇರುವ ತಾಯಿಗಳಾದ ವರು ಆರೋಗ್ಯಸ್ಥಿತಿಗೆ ಜನ್ಮಾಂತರಕೃತವಾದ ಪಾಪಗಳೇ ಕಾರಣವೆಂದೂ, ಅಕಾಲ ಮರಣಕ್ಕೆ ಹಣೇಬರಹವೇ ಕಾರಣವೆಂಬದಾಗಿಯೂ, ಆರೋಗ್ಯಶಾಸ್ತ್ರ, ವೈದ್ಯಶಾಸ್ತ್ರ, ಇವುಗಳೆಲ್ಲಾ ಕಲ್ಪಿತಗಳೆಂಬುದಾಗಿಯೂ, ಹಣೇಬರಹವು ತೀರಿದಾಗ ಇವುಗಳು ಯಾವುದೂ ಪ್ರಯೋಜನಕಾರಿಯಾಗುವುದಿಲ್ಲವೆಂಬದಾಗಿಯೂ, ಔಷಧಸೇವನೆಯೂ, ಆರೋಗ್ಯಸೂತ್ರಗಳ ಅನುಷ್ಠಾನವೂ ಪ್ರಯೋಜನಕಾರಿಯಾದುದಲ್ಲವೆಂಬುದಾಗಿ ಯೂ, ತಿಳಿದುಕೊಂಡು ದೇವರು ಮಾಡಿದಂತಾಗಲೆಂದು ಶಾಸ್ತ್ರವಿಧಿಗಳನ್ನು ಉಲ್ಲಂಘಿಸಿ ನಡೆಯುತ್ತಾ ಬಂದರೆ ಅಂಥಾ ತಾಯಿಗಳ ಮಕ್ಕಳ ಪೈಕಿ ಅನೇಕರು ಅಕಾಲಮರಣ ವನ್ನು ಹೊಂದುವುದು ಏನೂ ಆಶ್ಚರ್ಯವಲ್ಲ. ಇಂಥಾ ಆರೋಗ್ಯಸೂತ್ರಗಳನ್ನು ತಿಳಿ ದುಕೊಂಡು ಮಕ್ಕಳ ಪೋಷಣೆಯನ್ನು ಸರಿಯಾಗಿ ಮಾಡುತ್ತಾ ಬಂದರೆ ಈ ಅಕಾಲ ಮರಣಗಳು ತಪ್ಪುವುವಲ್ಲದೆ ಮಕ್ಕಳು ಆರೋಗ ದೃಢಕಾಯರಾಗುವುದರಲ್ಲಿಯೂ ಸಂದೇಹವಿಲ್ಲ. ರೋಗವು ಪ್ರಾಪ್ತವಾದಮೇಲೆ ಅದನ್ನು ವಾಸಿಮಾಡುವುದಕ್ಕೋಸ್ಕರ ವೈದ್ಯಶಾಸ್ತ್ರವು ಹುಟ್ಟಿರುವುದು. ಈ ಶಾಸ್ತ್ರದಿಂದ ಪ್ರಯೋಜನವಿಲ್ಲದೇ ಇದ್ದರೆ ಲೋಕದಲ್ಲಿ ಆಸ್ಪತ್ರೆಗಳಿಗೂ, ಚಿಕಿತ್ಸಿಕರುಗಳಿಗೂ ಅವಕಾಶವೇ ಇರುತ್ತಿರ ಲಿಲ್ಲ. ದೇವತೆಗಳಲ್ಲಿಯೂ ಧನ್ವಂತರಿ ರೂಪವಾಗಿ ಜಗದೀಶ್ವರನು ಅವತರಿಸುತ್ತಲಿ ರಲಿಲ್ಲ. ನಾವು ಮಾಡತಕ್ಕ ಪಾಪಕೃತ್ಯಗಳಿಂದ ರೋಗಗಳು ಬರುವುದು ನಿಜವಾ ದಾಗ್ಗೂ ಚಿಕಿತ್ಸೆಯಿಂದ ಆ ರೋಗಗಳು ಪರಿಹಾರವಾಗುವುದೂಕೂಡಾ ನಿಜವಾ ದುದು. ಆರೋಗ್ಯಸೂತ್ರಗಳು ರೋಗವು ಒರುವುದಕ್ಕೆ ಮುಂಚೆ ಅದನ್ನು ಬರ ದಂತೆ ಮಾಡಿಕೊಳ್ಳತಕ್ಕದ್ದಕ್ಕೋಸ್ಕರ ಹುಟ್ಟಿದುವುಗಳು. ಇದನ್ನು ಸರ್ವರೂ ತಿಳಿ ದುಕೊಳ್ಳಬೇಕು. ಪಾಪಗಳು ಮೂರು ವಿಧವಾಗಿರುವುವು. ಮನಸ್ಸಿನಲ್ಲಿಯೂ, ವಾಕ್ಕುಗಳಲ್ಲಿಯೂ, ಕಾಯದಲ್ಲಿಯೂ ಮಾಡಲ್ಪಟ್ಟವುಗಳೇ ಈ ಮೂರುವಿಧವಾದ

ಪಾಪಗಳು. ಮಾನಸಿಕವಾದ ಮತ್ತು ವಾಕ್ಯುಗಳಿಂದ ಹುಟ್ಟಿದ ಪಾಪಗಳು ಕೆಲವು ಸಂದರ್ಭಗಳಲ್ಲಿ ಸುಲಭವಾದ ಚಿಕಿತ್ಸೆಯಿಂದ ಹತೋಟಿಗೆ ಬರುವುದುಂಟು. ಕಾಯಿಕವಾದ ಪಾಪಗಳಿಗೆ ಬಲವಾದ ಚಿಕಿತ್ಸೆಯು ಬೇಕು. ಇಂಥಾ ಅನೇಕ ರೋಗಗಳು ದೇಹದ ಜೊತೆಯಲ್ಲಿ ಪರಿಹಾರವಾಗುವುದೂ ಉಂಟು. ಆದರೂ ಅನೇಕ ರೋಗಗಳು ಸುಲಭವಾಗಿ ವಾಸಿಯಾಗುವುವು. ಬಾಲ್ಯದಲ್ಲಿ ದೇಹವು ಸಮಸ್ತ ರೋಗಗಳಿಗೂ ಗುರಿಯಾಗಿರುವುದು. ಹದಿನೆಂಟು ವಯಸ್ಸಿನೊಳಗಾಗಿ ದೇಹವು ಬಲಿಯುವುದಿಲ್ಲ. ಆದುದರಿಂದಲೇ ಸಿಡುಬೂ, ಕಣ್ಣುನೋವೂ, ದಡಾರ ಮೊದಲಾದ ಅನೇಕ ಸಾಂಕ್ರಾಮಿಕ ರೋಗಗಳು ಈ ವಯಸ್ಸಿನೊಳಗಾಗಿ ಬಂದು, ಜನಿಸಿದವರಲ್ಲಿ ಬಹುಮಂದಿಗಳು ಸಾಯುವರು. ಆದುದರಿಂದಲೇ ಹದಿನೆಂಟು ವರುಷವಾಗುವವರೆಗೂ ಲೈಫ್‌ಇನ್ಷ್ಯೂರೆನ್ಸ್ ಕಂಪೆನಿಯವರೂ ಕೂಡ ಇನ್ಷ್ಯೂರು ಮಾಡಿಸಲು ಒಪ್ಪುವುದಿಲ್ಲ. ತಂದೆತಾಯಿಗಳು ಇಂಥಾ ಅಪಮೃತ್ಯುಗಳಿಗೆ ಮಕ್ಕಳು ಬಲಿಗಳಾಗಬಾರದೆಂದು ಅಭಿಲಾಷೆಪಟ್ಟಪಕ್ಷದಲ್ಲಿ ಹದಿನೆಂಟು ವಯುಸ್ಸಾಗುವವರೆಗೂ ಮಕ್ಕಳನ್ನು ಯಾವರೀತಿಯಲ್ಲಿ ಪೋಷಿಸಬೇಕೋ ಆದನ್ನು ತಿಳಿದುಕೊಳ್ಳಬೇಕು. ಇದಕ್ಕಾಗಿ ಮಕ್ಕಳ ಪೋಷಣೆ ಎಂಬ ಒಂದು ಶಾಸ್ತ್ರವೇ ಉಂಟಾಗಿರುವುದು. ಈ ಶಾಸ್ತ್ರವನ್ನು ಅನೇಕ ಪಂಡಿತರು ಸೇರಿ ಬರೆದು ಇಟ್ಟಿರುವರು. ಇದನ್ನು ಸ್ತ್ರೀಯರು ಹೇಗೋ ಹಾಗೆಯೆ ಪುರುಷರೂ ಕೂಡ ಅಭ್ಯಾಸ ಮಾಡಿ ತಿಳಿದುಕೊಳ್ಳಬೇಕು. ನಾಗರಿಕರಾದ ಪಾಶ್ಚಾತ್ಯರಲ್ಲಿ ಸ್ತ್ರೀಪುರುಷರಿಗೆ ಪ್ರಥಮ ಶಾರೀರಕ ಧರ್ಮಶಾಸ್ತ್ರವನ್ನೂ, ಆರೋಗ್ಯಧರ್ಮಶಾಸ್ತ್ರವನ್ನೂ ತಿಳಿಸುವುದೇ ವಿದ್ಯಾಭ್ಯಾಸವಾಗಿ ಇರುತ್ತದೆ. ಇದು ಸಾಧುವಾದುದು. ಸಮಸ್ತ ವಿದ್ಯಗಳಿಗೂ ಇಹಪರ ಸಾಧನೆಯೇ ಮುಖ್ಯ ಉದ್ದೇಶವಾಗಿರುವುದು. ಇಹವನ್ನು ತಪ್ಪಿಸಿಕೊಂಡವರಿಗೆ ಫಲವು ಲಭ್ಯವಾಗುವುದಿಲ್ಲ. ಜನರು ಅರೋಗ ದೃಢಕಾಯರಾಗಿದ್ದರೆ ತಮಗೂ ತಮ್ಮನ್ನು ಸೇರಿದವರಿಗೂ ಬೇಕಾದ ಅನ್ನವಸ್ತ್ರಗಳನ್ನು ಸಂಪಾದಿಸಿ ಎಲ್ಲರೂ ಸುಖವಾಗಿರುವಂತೆ ಮಾಡಿ ನಿಶ್ಚಿಂತೆಯಾದ ಮನಸ್ಸುಳ್ಳವರಾಗಿ ಆಮುಷ್ಮಿಕ ಪ್ರಾಪ್ತಿಗೆ ಬೇಕಾದ ಧರ್ಮಗಳನ್ನು ಆಚರಿಸಬಹುದು. ಹಾಗಿಲ್ಲದೇ ಹೋದರೆ ಈ ಲೋಕದ ಸೌಖ್ಯಕ್ಕೆ ಬೇಕಾದ ಸಂಪಾದನೆಗೂ ಅವಕಾಶವು ಇರುವುದಿಲ್ಲ. ಇದನ್ನು ಕಳೆದುಕೊಂಡವರಿಗೆ ಲೋಕಾಂತರದ ಮಾತೇತಕ್ಕೆ ? ಅದು ಹೇಗಾದರೂ ಇರಲಿ. ಜನಿಸಿದ ಮಕ್ಕಳು ಅಕಾಲಮೃತ್ಯುವಿಗೆ ತುತ್ತಾಗದಂತೆ ಮಾಡುವುದು ಪ್ರತಿಯೊಬ ತಾಯಿಗೂ

ಕರ್ತವ್ಯವಾದುದು. ಹೀಗೆ ಮಾಡುವುದಕ್ಕೆ ಸಾಧಕವಾದ ವಿಧಿಗಳನ್ನು ಅವರಿಗೆ ತಿಳಿಸುವುದು ಆವಶ್ಯಕ. ಅವುಗಳನ್ನು ಸಂಕ್ಷೇಪವಾಗಿ ತಿಳಿಸುತ್ತೇವೆ.

ಮಕ್ಕಳ ಆರೋಗದೃಢಕಾಯತೆಗೆ ಎರಡು ವಿಷಯಗಳನ್ನು ಸ್ತ್ರೀಯರು ತಿಳಿದುಕೊಳ್ಳಬೇಕು:—ಗರ್ಭಿಣಿಯುರಾದವರು ಗರ್ಭವನ್ನು ಧರಿಸಿದಕಾಲದಲ್ಲಿ ಯಾವ ರೀತಿಯುಲ್ಲಿ ನಡೆದುಕೊಳ್ಳಬೇಕೆಂಬುವುದೊಂದು.

ಜನನವಾದಮೇಲೆ ಮಗುವನ್ನು ಹೇಗೆ ಪೋಷಿಸಬೇಕೆಂಬುವುದೊಂದು.

ಮೊದಲನೇ ವಿಷಯುವು ಪ್ರಥಮತಃ ತಿಳಿದುಕೊಳ್ಳತಕ್ಕುದಾಗಿರುವುದು. ತಂದೆ ತಾಯಿಗಳಿಗಿರತಕ್ಕ ಜಾಡ್ಯಗಳು ಮಕ್ಕಳಿಗೂ ಬರುವುದುಂಟು. 'ಮಾತಾಪಿತೃಗಳಾಗತಕ್ಕವರು ಒಳ್ಳೇ ಸಂತಾನವನ್ನು ಪಡೆಯಬೇಕಾದರೆ ಆಹಾರವಿಹಾರಗಳಲ್ಲಿ ಸ್ವೇಚ್ಛೆಯಿಂದ ನಡೆದು ದೇಹವನ್ನು ಕೆಡಿಸಿಕೊಳ್ಳಕೂಡದು. ಜನನವಾದಮೇಲೆ ಮಾತಾಪಿತೃಗಳ ಅಜ್ಞಾನವಶದಿಂದ ಅನೇಕ ರೋಗಗಳು ಮಕ್ಕಳಿಗೆ ಸಂಭವಿಸುವುದುಉಂಟು. ತಾಯಿಯು ಬುದ್ಧಿಶಾಲಿನಿಯಾಗಿಯೂ, ಆರೋಗ್ಯಶಾಸ್ತ್ರವನ್ನು ಅರಿತವಳಾಗಿಯೂ, ತಿಳಿದ ಆರೋಗ್ಯ ವಿಧಿಗಳನ್ನು ಅನುಷ್ಠಾನಕ್ಕೆ ತಂದುಕೊಳ್ಳತಕ್ಕವಳಾಗಿಯೂ ಇದ್ದರೆ ನಿವಾರಣೀಯವಾದ ಅನೇಕ ರೋಗಗಳು ಮಕ್ಕಳಿಗೆ ಇರುವುದಿಲ್ಲ. ತಂದೆತಾಯಿಗಳಿಂದ ಬಂದ ರೋಗಗಳೂ ಕೂಡ ಸರಿಯಾದ ಪೋಷಣೆಯಿಂದ ನಿವಾರಣೆಯಾಗುವುದುಂಟು.

ಹೆರಿಗೇ ಮನೆಗೆ ನಿರ್ಮಲವಾದ ವಾಯುವೂ ಬೆಳಕೂ ಆವಶ್ಯಕವಾದುದು. ಇದಕ್ಕೂ ಅವಕಾಶ ಮಾಡಿಕೊಳ್ಳುತ್ತೇವೆಯೆಂದು ಕಿಟಕಿ ಅಥವಾ ಬಾಗಲಿಂದ ಬೀಸತಕ್ಕ ಗಾಳಿಯು ಮಗುವಿನಮೇಲೆ ಅಥವಾ ತಾಯಿಯಮೇಲೆ ಬೀಸುವಂತೆ ಏರ್ಪಾಡು ಮಾಡಿಕೊಂಡಿದ್ದರೆ ಕೂಡಲೇ ರೋಗವು ಬರುವುದು. ಗಾಳಿಯು ಸಂಚಾರವು ಇರುವಂತೆಯೂ, ಬೆಳಕು ಬೀಳುವಂತೆಯೂ, ಬಾಣಂತಿಯು ಮೇಲೂ ಶಿಶುವಿನಮೇಲೂ ಗಾಳಿಯು ಬೀಸದಂತೆಯೂ, ಅತ್ಯಂತ ಶೀತವಾದ ಕಾಲದಲ್ಲಿ ಈ ಗಾಳಿಗೆ ಅವಕಾಶವು ಇಲ್ಲದಂತೆಯೂ ಏರ್ಪಾಡು ಮಾಡಿಕೊಂಡಿದ್ದರೆ ಮಗುವಿಗೂ ತಾಯಿಗೂ ಯಾವ ಅನರ್ಥವೂ ಉಂಟಾಗುವುದಿಲ್ಲ. ಆರೋಗ್ಯವಿಧಿಯನ್ನನುಸರಿಸುತ್ತೇವೆಯೆಂದು ಈ ಬಾಬುಗಳಲ್ಲಿ ಸರಿಯಾದ ಏರ್ಪಾಡುಗಳನ್ನು ಮಾಡಿಕೊಳ್ಳದೆ ಎದುರು ಗಾಳಿಯ ಏಟಿಗೆ ಗುರಿಯಾಗಿ ರೋಗಾದಿಗಳನ್ನು ಹೊಂದಿ ಆರೋಗ್ಯ ವಿಧಿಯನ್ನನುಸರಿಸಿದ್ದರಿಂದ ತಮಗೆ ಈ ಕಷ್ಟವು ಬಂದಿತೆಂದು ಅಂದುಕೊಳ್ಳತಕ್ಕ ಜನರೂ ಉಂಟು. ಯಾವ

ವಿಧಿಯನ್ನನುಸರಿಸಬೇಕಾದರೂ ಅದರ ಮರ್ಮವನ್ನು ಸಮಗ್ರವಾಗಿ ತಿಳಿದಹೊರತು ಅದರಲ್ಲಿ ಪ್ರವರ್ತಿಸಬಾರದು. ಮರ್ಮವನ್ನು ತಿಳಿಯದೆ ಪ್ರವರ್ತಿಸಿದವರಿಗೆ ಅನರ್ಥವು ತಪ್ಪುವುದಿಲ್ಲ.

ಭೂಮಿಯ ಸ್ವರೂಪ ಮತ್ತು ವ್ಯತ್ಯಾಸ.

ಭೂಮಿಯ ರೂಪವು ಯಾವಾಗಲೂ ಒಂದೇವಿಧವಾಗಿರುವುದಿಲ್ಲ. ಬಂದು ಕಾಲದಲ್ಲಿ ಭೂಮಿಯ ಮೇಲುಭಾಗವು ಒಂದುಕಡೆ ನಿಮ್ನವಾಗಿಯೂ ಮತ್ತೊಂದು ಕಡೆ ಎತ್ತರವಾಗಿಯೂ ಮತ್ತೊಂದುಕಡೆ ಬೆಟ್ಟಗಳುಳ್ಳದಾಗಿಯೂ ಇನ್ನೊಂದುಕಡೆ ಉನ್ನತವಾದ ಪರ್ವತಗಳುಳ್ಳದ್ದಾಗಿಯೂ ಇರುವುದು. ಮತ್ತೊಂದುಕಾಲದಲ್ಲಿ ಉನ್ನತವಾದ ಪರ್ವತಗಳು ಕುಸಿದು ಬಿದ್ದು ಅತ್ಯಂತ ನಿಮ್ನವಾಗಿ ಸಮುದ್ರದ ಕೆಳ ಭಾಗಕ್ಕೆ ಸೇರುವುದು. ಅತ್ಯಂತ ನಿಮ್ನವಾಗಿ ಸಮುದ್ರದ ಅಡಿಯಲ್ಲಿದ್ದ ಭೂಭಾಗವು ಉನ್ನತವಾದ ಪರ್ವತವಾಗಿ ಪರಿಣಮಿಸುವುದು. ಇದಕ್ಕೆ ಉದಾಹರಣೆಗಳನ್ನೂ ಕಾರಣಗಳನ್ನೂ ನಾವು ಪೂರ್ವದಲ್ಲಿಯೇ ಹೇಳಿರುವೆವು. ಹಿಮವತ್ಪರ್ವತವೇ ಮೊದಲಾದವುಗಳ ಶಿಖರದಲ್ಲಿ ಜಲಚರಗಳ ಮೂಳೆಗಳಿರುವುದು ಒಂದೇ ಇದರ ನಿಜಾಂಶವನ್ನು ತಿಳಿಸುವುದಕ್ಕೆ ಸಾಕಾಗಿರುವುದು. ಭೂಗರ್ಭದಲ್ಲಿರುವ ಅತ್ಯಂತ ತೀಕ್ಷ್ಣವಾದ ಅಗ್ನಿಯು ಗುಪ್ತಗಾಮಿನಿಗಳಾದ ಜಲಾಶಯುಗಳ ಸಂಸರ್ಗವುಳ್ಳದಾಗಿ ಆ ನೀರನ್ನು ಅನಿಲಾವಸ್ಥೆಗೆ ತಂದು, ಆವಿಯಾಗಿ ಎಲ್ಲಿ ಮಾಡುವುದೋ ಅಲ್ಲಿ ಭೂಕಂಪವೂ, ಜ್ವಾಲಾಮುಖಿಗಳೂ ಉಂಟಾಗುವುದಲ್ಲದೆ ಭೂಮಿಯ ಸ್ವರೂಪದಲ್ಲಿಯೂ ಮೇಲೆ ಹೇಳುವ ವ್ಯತ್ಯಾಸಗಳು ನಡೆಯುವುವು. ಈ ಭೂಕಂಪವು ಬಹಳ ಅಲ್ಪವಾಗಿರುವುದೂ ಉಂಟು. ಅತ್ಯಂತ ಜೋರಾಗಿರುವುದೂ ಉಂಟು. ನಮ್ಮ ದೇಶದಲ್ಲಿ ಆಗಾಗ್ಗೆ ಉಂಟಾಗತಕ್ಕ ಭೂಕಂಪವು ಅಲ್ಪವಾದುದು. ಉತ್ತರ ದೇಶದಲ್ಲಿ ಕಾಂಗ್ರ ಮೊದಲಾದ ಪ್ರದೇಶಗಳಲ್ಲಿ ಈಗ ಸ್ವಲ್ಪಕಾಲಕ್ಕೆ ಮುಂಚೆ ಉಂಟಾದ ಭೂಕಂಪವು ಜೋರಾದುದು. ಇಂಥಾ ಜೋರಾದ ಭೂಕಂಪಗಳಲ್ಲಿ ಭೂಮಿಯು ಸೀಳಲ್ಪಡುವುದು. ಬಂಡೆಗಳು ಸಡಲಿಸಲ್ಪಡುವುದು. ಮರಗಳು ಮೂಲೋತ್ಪಾಟನ ಮಾಡಲ್ಪಡುವುವು. ಪಟ್ಟಣಗಳೂ ಗ್ರಾಮಗಳೂ ಅನರ್ಘಕ್ಕೆ ಗುರಿಯಾಗುವುವು. ಮನೆಗಳು ಬಿದ್ದುಹೋಗುವುವು. ಮನೆಯಲ್ಲಿದ್ದವರು ಪ್ರಾಣ

ನಿರುವಾಗಲೇ ಹೂಳಲ್ಪಡುವರು. ಇಷ್ಟು ಅನರ್ಥಗಳು ನಿರೀಕ್ಷಣೆ ಇಲ್ಲದೆ ಉಂಟಾಗುವುವು. ಇದು ಉಂಟಾಗುವ ಕಾಲದಲ್ಲಿ ದೂರದಲ್ಲಿ ಗುಡಿಗಿಡಂತೆ ಶಬ್ದವು ಕೇಳುವದು. ಈ ಶಬ್ದದ ವಿಷಯವನ್ನು ಯೋಚಿಸುತ್ತಿರುವಾಗಲೇ ಭೂಮಿಯು ಭಯಂಕರವಾದ ಕಂಪನಕ್ಕೆ ಒಳಗಾಗಿ ಮೇಲೆ ಹೇಳಿದ ಅನರ್ಥಗಳೆಲ್ಲಾ ಆಗುವುವು. ಒಂದೆರಡು ನಿಮಿಷಗಳಲ್ಲಿ ಲಕ್ಷಾಂತರ ಜನಗಳು ಸಾಯುವರು. ೧೭೫೫ ರಲ್ಲಿ ಉಂಟಾದ ನಿಲಿಸ್ಬನ್ ಭೂಕಂಪದಲ್ಲಿ ೬೦ ಸಾವಿರ ಜನರು ಒಂದು ನಿಮಿಷದಲ್ಲಿ ಸತ್ತರು. ಕೆಲೇಬ್ರಿಯಾದಲ್ಲಿ ಉಂಟಾದ ಭೂಕಂಪದಲ್ಲಿ ೪೦ ಸಾವಿರ ಜನರು ಸತ್ತರು. ಸಾಂಕ್ರಾಮಿಕ ರೋಗಗಳು ದೇಶದಿಂದ ದೇಶಕ್ಕೆ ಹರಡಿಕೊಳ್ಳುವಂತೆ ಈ ಭೂಕಂಪಗಳು ಕೂಡ ದೇಶದಿಂದ ದೇಶಕ್ಕೆ ಹರಡುವುದುಂಟು. ಎಲ್ಲಿ ಉಪಕ್ರಮವಾಗುತ್ತದೆಯೋ ಅಲ್ಲಿ ಜೋರಾಗಿಯೂ ದೂರಕ್ಕೆ ಹೋದಹಾಗೆಲ್ಲಾ ಜೋರು ಕಡಮೆಯಾಗಿಯೂ ಆಗುವುದುಂಟು. ಕೆಲವು ಸ್ಥಳಗಳಲ್ಲಿ ಉತ್ಪತ್ತಿಯಾದ ಸ್ಥಳಕ್ಕಿಂತಲೂ ಮುಂದಕ್ಕೆ ಹೋದಹಾಗೆಲ್ಲಾ ಜೋರು ಹೆಚ್ಚುವುದೂ ಉಂಟು. ಈ ಭೂಕಂಪದ ಪ್ರಯಾಣವು ಸಮುದ್ರದಮೇಲೆ ಅಲೆಯು ಪ್ರಯಾಣವನ್ನು ಹೋಲುವುದು. ಈ ಭೂಕಂಪವಾಗುವಾಗ್ಯೆ ಭೂಮಿಯು ಮೇಲಿರತಕ್ಕ ಸ್ಥಾವರಾತ್ಮಕವಾದ ಸಮಸ್ತ ಪದಾರ್ಥಗಳೂ ಅಲ್ಲಾಡುವುವು. ಭಂಡೆ ಮಣ್ಣು ಮೊದಲಾದುವು ಉರಳಾಡುವುವು. ಅನೇಕ ಸ್ಥಳಗಳಲ್ಲಿ ಭೂಮಿಯು ಸೀಳುವುದು. ಹೀಗೆ ಸೀಳಲ್ಪಟ್ಟ ಸೀಳು ಅನೇಕ ಮೈಲಿ ಪ್ರಮಾಣವುಳ್ಳದಾಗಿಯೂ, ತುಂಬಾ ಆಳವೂ, ಅಗಲವೂ ಉಳ್ಳದಾಗಿಯೂ ಇರುವುದು. ಈ ಸೀಳಿನ ಅಂಚಿನಲ್ಲಿರತಕ್ಕ ಮನೆಗಳೂ ವೃಕ್ಷಗಳೂ ಮತ್ತು ಇತರ ವಿಧವಾದ ಪದಾರ್ಥಗಳೂ ಆ ಸೀಳಿನಲ್ಲಿ ಪಾತಾಳಕ್ಕೆ ಬಿದ್ದುಹೋಗುವುವು. ಈ ಸೀಳುಗಳು ಅನೇಕ ದಿವಸಗಳ ವರಿಗೂ ಬಾಯಿ ತೆರೆದಿರುವುದುಂಟು. ಹಟಾತ್ತಾಗಿ ಮುಚ್ಚಿಕೊಳ್ಳುವುದೂ ಉಂಟು. ೧೮೫೫ ನೇ ಇಸವಿಯಲ್ಲಿ ದಕ್ಷಿಣ ಅಮೆರಿಕಾಖಂಡದ ಚಿಲೀ ಎಂಬ ದಡದಲ್ಲಿ ಒಂದು ವಿಸ್ತಾರವಾದ ಸೀಳುಂಟಾಯಿತು. ಈ ಸೀಳಿಗೆ ಸಮುದ್ರದ ನೀರು ಜಲಚರಗಳೊಡನೆ ಪ್ರವಹಿಸಿತು. ಕೆಲವು ದಿನಗಳಲ್ಲಿ ನೀರು ಇಂಗಿಹೋಯಿತು. ಆ ಜಲಚರಗಳೆಲ್ಲಾ ಅಲ್ಲೇ ಮೃತಪಟ್ಟು ಕೊಳೆತು ದುಸ್ಸಹವಾದ ದುರ್ಗಂಧವು ಆ ಪ್ರಾಂತ್ಯದಲ್ಲೆಲ್ಲಾ ಹರಡಿಕೊಂಡಿತು. ೧೮೫೯ ಮತ್ತು ೧೮೬೦ ನೇ ಇಸವಿಗಳಲ್ಲಿ ಮಿಸಿಸಿಪೀ ನದಿಯು ತೀರದಲ್ಲಿ ಭೂಕಂಪ ಉಂಟಾಗಿ ಅನೇಕ ಭಾಗಗಳು ಹಾಸಿಗೊಂಡವು. ಇದರಮೇಲೆ ನೀರು ಹರಿದು ದೊಡ್ಡ ಸರೋವರಗಳಾ

ದುವು. ಈ ಸರೋವರಗಳಲ್ಲಿ ಕೆಲವು ೫೦ ಮೈಲಿ ಸುತ್ತಳತೆಯುಳ್ಳವುಗಳಾಗಿಯೂ ಇರುತ್ತವೆ. ಭೂಕಂಪ ಉಂಟಾದಾಗ ನೀರೂಕೂಡ ಈ ಕಂಪಕ್ಕೆ ಗುರಿಯಾಗುತ್ತದೆ. ಅತ್ಯಂತ ರಭಸದಿಂದ ದಶದಿಕ್ಕುಗಳಲ್ಲಿಯೂ ನೀರು ಹಾರಿಸಲ್ಪಡುವುದು. ಗಂಗಾ ನದಿಯು ನೀರು ಸಮುದ್ರದ ನೀರಿನಿಂದ ಹಿಂದಕ್ಕೆ ತಳ್ಳಲ್ಪಟ್ಟಾಗ ನೂರಾರು ಅಡಿಗಳವರಿಗೂ ವಿಪರೀತ ಘರ್ಜನೆಯನ್ನು ಮಾಡಿಕೊಂಡು ಹೊಗೆ ಏಳುವಹಾಗೆ, ಭೂಮಿಯು ಬಲವಾದ ಭೂಕಂಪಕ್ಕೆ ಗುರಿಯಾದಾಗ ಸರೋವರಗಳಿಂದಲೂ ಸಮುದ್ರಗಳಿಂದಲೂ ನೀರು ಏಳುವುದುಂಟು. ಕೆಲವು ಸಂದರ್ಭಗಳಲ್ಲಿ ಸಮುದ್ರದ ಕೆಳಗೆ ಇದ್ದ ಭೂಮಿಯು ದೃಷ್ಟಿಪಥವನ್ನು ಹೊಂದುವುದೂ ಉಂಟು. ಮೇಲುಭೂಮಿಯು ಅದೃಶ್ಯವಾಗಿ ಸಮುದ್ರದ ಕೆಳಕ್ಕೆ ಹೋಗುವುದೂ ಉಂಟು. ೧೮೬೮ನೇ ಇಸವಿಯಲ್ಲಿ ದಕ್ಷಿಣ ಅಮೆರಿಕಾಖಂಡದಲ್ಲಿ ಒಂದು ಭೂಕಂಪ ಉಂಟಾಗಿ ಪೆರು ಈಕ್ವೆಡಾರ್ ಎಂಬ ಎರಡು ರಾಜ್ಯಗಳು ಭಯಂಕರವಾದ ಅನರ್ಥಕ್ಕೆ ಗುರಿಯಾದುವು. ಆಗಷ್ಟು ಹದಿಮೂರನೇ ತಾರೀಕಿನಲ್ಲಿ ಸಮುದ್ರವು ಪೆರೂದೇಶದ ಕಡೆಗೆ ನುಗ್ಗಿ ಅರಿಕಾ ಎಂಬ ರೇವು ಪಟ್ಟಣವನ್ನು ಮುಳುಗಿಸಿಬಿಟ್ಟಿತು. ಒಂದೆರಡು ನಿಮಿಷಗಳಲ್ಲಿ ಈ ಪಟ್ಟಣವು ಳಿಗಿದುದಲ್ಲದೆ ಆ ರೇವಿನಲ್ಲಿದ್ದ ಹಡಗುಗಳಲ್ಲಿ ಕೆಲವು ಛಿದ್ರವಾದುವು. ಮತ್ತೆ ಕೆಲವು ಮೇಲುಭಾಗವು ಕೆಳಗಾಗಿ ಅಡಿಯು ಮೇಲಾಗಿ ತೇಲುತ್ತಿದ್ದುವು. ಈ ಪ್ರಳಯವಾದ ನಂತರ ಅರಿಕಾ ಎಂಬ ರೇವುಪಟ್ಟಣವನ್ನು ಗುರ್ತು ಹಿಡಿಯುವುದಕ್ಕೂ ಆಗಲಿಲ್ಲ. ಭೂಗರ್ಭದಲ್ಲಿ ಗುಹೆಗಳಂತೆ ಅವಕಾಶವುಳ್ಳ ಸ್ಥಳಗಳಿರುವುವು. ಇಂಥಾ ಸ್ಥಳಗಳಲ್ಲಿ ಭೂಗರ್ಭಾಗ್ನಿಗೂ ಜಲಕ್ಕೂ ಸಂಸರ್ಗವುಂಟಾಗಿ ಆದು ಆವಿಯಾಗಿ ಈ ಅವಕಾಶಗಳಲ್ಲಿ ಸೇರಿದರೆ ಬಾಂಬುಗಳು ರೈಲುಗಾಡಿಗಳನ್ನು ಎಳೆದುಕೊಂಡು ಹೋಗುವ ಹಾಗೆ ಭೂಮಿಯನ್ನು ಎಳೆಯುವ ಪ್ರಯತ್ನವನ್ನು ಮಾಡುವುದು. ಈ ಭೂಕಂಪಗಳಿಗೆ ಅದೇ ಮುಖ್ಯ ಕಾರಣ.

ವ್ಯಾಕರಣ ಶಾಸ್ತ್ರ.

ಕರ್ನಾಟಕ ಭಾಷೆಯಲ್ಲಿ ಅಕ್ಷರಗಳೆಷ್ಟು?

(207 ನೇ ಪುಟದ ಶೇಷ)

ಇದುವರಿವಿಗೂ ॥ ನಶ್ಚಜೆಂದುರನ್ಯತ್ರ ॥ ೭೯ ॥ ತದನ್ತ್ಯಾವಾವರ್ಗೆ ॥ ೮೦ ॥ ಎಂಬ ಸೂತ್ರಗಳಲ್ಲಿ ಹೇಳಿರುವ ನಕಾರದ ವಿಷಯವಾಗಿ ಹಿಂದೆ ವಿಚಾರ ಮಾಡಲಾ

ಯಿತು. ಹೀಗೆಯೇ ಪದಾನ್ತವಾದ ಮಕಾರವು ಅನ್ತ್ಯದಲ್ಲಿ ಬಂದರೂ ಅಥವಾ ಅವರ್ಗೀಯ ವ್ಯಂಜನಗಳು ಮುಂದೆ ಬಂದರೂ ಬಿಂದುವಾಗುವುದೆಂದೂ, ವರ್ಗೀಯ ವ್ಯಂಜನಗಳು ಮುಂದೆ ಬಂದರೆ ಬಿಂದುವಾಗಲೀ ಅಥವಾ ಅಯಾಯ ವರ್ಗದ ಪಂಚಮಾಕ್ಷರವಾಗಲೀ ಆಗುವುದೆಂದೂ ಈ ಎರಡು ಸೂತ್ರಗಳಿಗೂ ನಿಷ್ಕೃಷ್ಟವಾದ ಅರ್ಥವನ್ನು ವ್ಯಾಖ್ಯಾನಕಾರನು ಪ್ರಕಾಶಪಡಿಸಿರುವನು. ಈ ಮಕಾರ ವಿಷಯವೇನಾದರೂ ಸಂಗತವಾಗಿದೆಯೇ? ವಿಚಾರ ಮಾಡೋಣ.

ಈ ಸೂತ್ರಗಳ ಅರ್ಥವು ಸರಿಯಾಗಿದ್ದಲ್ಲಿ,

ತಂತಮ್ಮ ರಾಜ್ಯಚಿಹ್ನಂ।
ತಂತಮ್ಮ ಮಹಾವಿಭೂತಿ ತಂತಮ್ಮ ಬಲಂ॥
ತಂತಮ್ಮಿಸೆವ ವಿಲಾಸಂ।
ತಂತಮ್ಮಿರ್ಪೆಡೆಯೊಳೋಳಿಯಿಂ ಕುಳ್ಳಿರ್ದರ್॥

(ವಿಕ್ರಮಾರ್ಜುನವಿಜಯಂ)

ಇಲ್ಲಿ ಇರತಕ್ಕ ತಂತಮ್ಮ ಎಂಬಲ್ಲಿ ತನ್ತನ್ಮ ಎಂದು ಹೇಳಬಹುದೆ? ಯಾಕೆಂದರೆ, ಪದಾನ್ತವಾದ ಮಕಾರಕ್ಕೆ ವರ್ಗೀಯ ವ್ಯಂಜನವು ಪರವಾಗಿದ್ದಲ್ಲಿ ಮಕಾರಕ್ಕೆ ಬದಲು ಬಿಂದುವಾಗಲೀ ಮಕಾರವಾಗಲೀ ಬರುವುದು ಎಂದು ಹೇಳಿರುವುದರಿಂದ ನಕಾರವು ಬಂದರೂ ಬರಬಹುದೆಂದು ಅರ್ಥವಾಗುವುದಾದಕಾರಣ ನಕಾರವು ಬಂದು ತನ್ತನ್ಮ ಎಂಬ ರೂಪವೂ ಸಿದ್ಧಿಯಾಗುವುದೆಂದು ಹೇಳಬೇಕಾಗುವುದು.

ಇಲ್ಲಿ ಮೊದಲನೆಯ ಪದದಲ್ಲಿ ಇರತಕ್ಕ ಮಕಾರವು ಪದಾನ್ತದ್ದಲ್ಲವೆಂದು ಹೇಳುವುದು ಅಸಂಗತವು. ಒಂದುವೇಳೆ ನಿರ್ಮೂಲವಾದ ಹಟ ಹಿಡಿಯುವ ಪಕ್ಷದಲ್ಲಿ ತಂತಮ್ಮ ಎಂದು ಬಿಂದುವನ್ನು ಹೇಳುವುದು ಕೂಡ ದುಸ್ತರವಾಗುವುದು. ಯಾಕೆಂದರೆ—ಪದಾನ್ತರ ಮಕಾರಕ್ಕೆ ಬಿಂದು ಅಥವಾ ವರ್ಗಪಂಚಮಾಕ್ಷರಗಳು ಆದೇಶವಾಗಿ ಬರುವುವು ಎಂದು ಹೇಳಿರುವುದರಿಂದ ಪದಾನ್ತದ್ದಲ್ಲದ ಮಕಾರಕ್ಕೆ ಈ ಎರಡೂ ಬರಲಾರದು. ಆದಕಾರಣ ಪದಾನ್ತವಲ್ಲವೆಂದಲ್ಲಿ ತಂತಮ್ಮ ಎಂದು ಬಿಂದುವನ್ನು ಹೇಳುವುದು ಕೂಡ ಅಸಂಗತವಾದೀತು.

ಇದೂ ಅಲ್ಲದೆ ಈ ಸೂತ್ರಗಳ ಅರ್ಥವನ್ನು ನೋಡಿದಲ್ಲಿ ಅಣ್ಣಂಗೆ, ಅಣ್ಣಂದಿರ್—ಇತ್ಯಾದಿ ರೂಪಗಳೂ ಸಿದ್ಧಿಸಲಾರವು. ಹೇಗೆಂದರೆ—

ಅಣ್ಣ, ಎಂಬ ಅಕಾರಾನ್ತವಾದ ಲಿಂಗನೆಂದರೆ ಪ್ರಾತಿಪದಕದಮೇಲೆ ಚತು ರ್ಥೀವಿಭಕ್ತಿಯ ಪ್ರತ್ಯಯವಾದ ಗೆತ-ಎಂಬ-ಗೆ—ಪ್ರತ್ಯಯವನ್ನು ಸೇರಿಸಿದರೂ ಮತ್ತು ಅದೇ ಪ್ರಾತಿಪದಿಕದ ಮೇಲೆ ಬಹುತ್ವವು ವಿವಕ್ಷೆಯಾಡಾಗ, ದಿರ-ಎಂಬ ಪ್ರತ್ಯಯವನ್ನು ಸೇರಿಸಿದರೂ ॥ ಚತೊಮಗ್ಗೆದ್ದಿರಿ ॥ 257 ॥ ಎಂಬ ಸೂತ್ರವನ್ನನು ಸರಿಸಿ ವಿಧಾನಮಾಡಿದ ಮಗಾಗಮವು ಪ್ರಾತಿಪದಿಕದ ಅನ್ತ್ಯಾವಯವವಾಗಿ ಬಂದ ಲ್ಲಿ ಅಣ್ಣ+ಮ್+ಗೆ, ಅಣ್ಣ+ಮ್+ದಿರ-ಎಂದು ಹೇಳಿದಾಗ ಮಧ್ಯದಲ್ಲಿ ಇರ ತಕ್ಕ ಮಕಾರವು ಪದಾನ್ತದ್ದಲ್ಲನಾದಕಾರಣ ಬಿಂದುವಾಗಲೀ ವರ್ಗಪಂಚಮಾಕ್ಷರ ವಾಗಲೀ ಬರಲು ಅಧಾರವಿಲ್ಲವಾಗಿ—ಅಣ್ಣಗ್ಗೆ, ಅಣ್ಣಮ್ಮಿರ, ಇತ್ಯಾದಿ ರೂಪವಾ ಗದೇಕೇ ಹೊರಟು ಪ್ರಾತಿಪದಿಕದ ಮಧ್ಯದಲ್ಲಿರತಕ್ಕ ಮಕಾರಕ್ಕೆ ಬಿಂದುವು ಬಂದು ಅಣ್ಣಂಗೆ, ಅಣ್ಣಂದಿರ-ಇತ್ಯಾದಿ ರೂಪಗಳು ಸಿದ್ಧಿಸಲು ಅಪ್ಪದವೇ ಇಲ್ಲ. ॥ ನಶ್ಚ ಬಿಂದುರನ್ಯತ್ರ ॥ 79 ॥ ॥ ತದನೆತ್ಯಾವಾವರ್ಗೆ ॥ 80 ॥ ಇತ್ಯಾದಿ ಸೂತ್ರಗಳು ಪದಾನ್ತವಿಷಯಕಗಳಾದುದರಿಂದ ಅಪದಾನ್ತವಾದ ಅಣ್ಣ+ಮ್+ಗೆ—ಇತ್ಯಾದಿಗ ಳಲ್ಲಿ ಇರತಕ್ಕ ಮಕಾರಕ್ಕೆ ಬಿಂದುವನ್ನು ಹೇಗೆತಾನೆ ವಿಧಾನಮಾಡಬಹುದು.

ಹೀಗೆ ॥ ನಶ್ಚ ಬಿಂದುರನ್ಯತ್ರ ॥ 79 ॥ ತದನ್ತ್ಯಾವಾವರ್ಗೆ ॥ 80 ॥ ಎಂಬ ಎರಡು ಸೂತ್ರಗಳ ಅರ್ಥವನ್ನು ವಿಚಾರ ಮಾಡಿದಲ್ಲಿ " ಬಾಳೆವಿಾನ್ಹವುವಿಾನ " ಇತ್ಯಾದಿಗಳಲ್ಲಿ ಅನಿಷ್ಟರೂಪವು ಸಿದ್ಧಿಸುವುದರಿಂದಲೂ—ಅಣ್ಣಂಗೆ, ಅಣ್ಣಂದಿರ, ಇತ್ಯಾದಿ ಇಷ್ಟರೂಪಗಳು ಸಿದ್ಧಿಸುವುದಿಲ್ಲವಾದುದರಿಂದಲೂ ಈ ಎರಡು ಸೂತ್ರಗಳೂ ಪ್ರಾಮಾಣ್ಯಗ್ರಹವನ್ನುಂಟುಮಾಡುವುದಿಲ್ಲನಾದಕಾರಣ ಈ ಸೂತ್ರಗಳ ಆಧಾರ ದಮೇಲೆ ಅಚ್ಚಗನ್ನಡದಲ್ಲಿ ಕವರ್ಗ ಚವರ್ಗ ಪಂಚಮಾಕ್ಷರಗಳು ಇರುವುವು ಎಂದು ಸಾಧಿಸುವುದು ಕಷ್ಟವಾಗಿ ಕಾಣುವುದು.

ಮೇಲೆ ಹೇಳಿದ ಶಬ್ದಾನುಶಾಸನದ 79 ಮತ್ತು 80 ನೇ ಸೂತ್ರಗಳಲ್ಲಿ ಮಕಾರ ನಕಾರಗಳು ಪದಾನ್ತವಾಗಿರಬೇಕೆಂಬಂಶವು ವಾಚ್ಯವಾಗಿಯೂ ಇಲ್ಲ. ಅನುವೃತ್ತಿಯಿಂದಲೂ ಲಭ್ಯವಾಗುವುದಿಲ್ಲ ಆದಕಾರಣ ಪದಾನ್ತ ಮತ್ತು ಪದಮಧ್ಯ ವೆಂಬ ಉಭಯವಿಷಯಗಳಲ್ಲಿಯೂ ಈ ಸೂತ್ರಗಳು ಪ್ರವರ್ತಿಸಬಹುದಾಗಿ-ಅಣ್ಣ+ ಮ್+ಗೆ, ಅಣ್ಣ+ಮ್+ದಿರ-ಇತ್ಯಾದಿಗಳಲ್ಲಿ ಪದಮಧ್ಯಸ್ಥವಾದ ಮಕಾರಕ್ಕೂ ಬಿಂದುವಾಗಲೀ ವರ್ಗಪಂಚಮಾಕ್ಷರವಾಗಲೀ ಬರಲು ಅಭ್ಯಂತರವಿಲ್ಲವಾಗಿ ಅಣ್ಣಂಗೆ, ಅಥವಾ ಅಣ್ಣಂಗೆ ಇತ್ಯಾದಿ ಬಿಂದು ಅಥವಾ ವರ್ಗಪಂಚಮಾಕ್ಷರ ವಿಶಿಷ

ವಾದ ರೂಪವು ಸಿದ್ಧಿಸುವುದೇ ಹೊರತು, ಅಣ್ಣವ್ಗೆ—ಇತ್ಯಾದಿಗಳಂತೆ ಮಕಾರವು ಇದ್ದಂತೆಯೇ ಇರುವುದಿಲ್ಲವೆಂದು ಹೇಳಿದಲ್ಲಿ ವಿಚಾರಮಾಡೋಣ—

ಸೂತ್ರಕಾರನೂ ತಾನೇ, ವ್ಯಾಖ್ಯಾನಕಾರನೂ ತಾನೇ, ಎಂದು ಹೇಳಿಕೊಳ್ಳುವ ಭಟ್ಟಾಕಲಂಕನು " ಮಕಾರಕ್ಕೆ ಸ್ವರವು ಪರವಾದರೆ ಆ ಮಕಾರವು ನಕಾರವಾಗುವುದು " ಎಂಬ ಅರ್ಥವಾಗುವ ॥ ನೋನಸ್ಸ್ವರೆ ॥ 77 ॥ ಎಂಬ ಸೂತ್ರದ ವ್ಯಾಖ್ಯಾನದಲ್ಲಿ—ಬೆಮರ್, ತೆಮರ್ ಇತ್ಯಾದಿಗಳಲ್ಲಿ ಪದಗಳ ಮಧ್ಯದಲ್ಲಿರತಕ್ಕ ಮಕಾರಕ್ಕೆ ಅಕಾರಾತ್ಮಕವಾದ ಸ್ವರವು ಪರವಾಗಿರುವುದರಿಂದ ಈ ॥ ನೋನಸ್ಸ್ವರೆ ॥ 77 ॥ ಎಂಬ ಸೂತ್ರದಂತೆ ನಕಾರವು ಬರಬೇಕಾಗಿರುವುದು.. ಎಂದು ಆಶಂಕೆ ಮಾಡಿ ತುಂಬಾ ಶ್ರಮಪಟ್ಟು ಈ ಸೂತ್ರವು ಪದಾನ್ತವಿಷಯಕವೆಂಬದಾಗಿ ಸಾಧಿಸಿ—ಬೆಮರ್, ತೆಮರ್, ಇತ್ಯಾದಿಗಳಲ್ಲಿ ಮಕಾರವು ಪದಮಧ್ಯದಲ್ಲಿರುವುದರಿಂದ ಮಕಾರಕ್ಕೆ ನಕಾರಾದೇಶವು ಬರುವುದಿಲ್ಲವೆಂದು ವಿವರಿಸಿರುತ್ತಾನೆ. ಹಾಗೆಯೇ ॥ ನಪಿವಾ ॥ ॥ 78 ॥ ಎಂಬ ಮುಂದಿನ ಸೂತ್ರವೂ ಪದಾನ್ತವಿಷಯಕವೆಂದು ಹೇಳಿ ಅದರ ಮುಂದಿನ ಸೂತ್ರಗಳಾದ ॥ ನಷ್ಟಬಿಂದುರನ್ಯತ್ರ ॥ 79 ॥ ತದನ್ತ್ಯಾವಾವರ್ಗೆ ॥ 80 ॥ ಎಂಬ ಸೂತ್ರಗಳೂ ಪದಾನ್ತವಿಷಯಕಗಳೆಂದು ವ್ಯಾಖ್ಯಾನದಲ್ಲಿ ವಿಶದಪಡಿಸಿರುವನು. ಹಾಗೆ ತಾನೇ ಸೂತ್ರಕಾರನೆಂದು ಹೇಳಿಕೊಂಡು ಸೂತ್ರದ ಭಾವವನ್ನೂ ತಾನೇ ವ್ಯಾಖ್ಯಾನದಲ್ಲಿ ವ್ಯಕ್ತಪಡಿಸಿರುವಾಗ ನಾವು ಹೇಗೆತಾನೇ ಅದನ್ನು ಮೀರಬಹುದು? ಆದುದರಿಂದ ಅಣ್ಣಂಗೆ, ಅಣ್ಣಂದಿರ್ ಇತ್ಯಾದಿಯಾದ ರೂಪಗಳು ಸಿದ್ಧಿಸದೆ—ಅಣ್ಣಮ್ಗೆ, ಅಣ್ಣಮ್ದಿರ್, ಇತ್ಯಾದಿ ರೂಪಗಳೇ ಸಿದ್ಧಿಸಬೇಕಾಗಿರುವುದು.

ಹೀಗೆ, ತಾನೇ ಸೂತ್ರಕಾರನು ತಾನೇ ವ್ಯಾಖ್ಯಾಕಾರನೆಂದು ಹೇಳಿಕೊಳ್ಳುವ ಭಟ್ಟಾಕಳಂಕನು ॥ ನೋನಸ್ಸ್ವರೆ ॥ 77 ॥ ಎಂಬ ಸೂತ್ರಕ್ಕೆ " ಮಕಾರಕ್ಕೆ ಸ್ವರವು ಪರವಾದರೆ ಆ ಮಕಾರವು ನಕಾರವಾಗುವುದು " ಎಂದು ಅರ್ಥವನ್ನು ಹೇಳಿ ಅನರ ಮೇಲೆ ಬೆಮರ್, ತೆಮರ್—ಇತ್ಯಾದಿ ಪದಗಳ ಮಧ್ಯದಲ್ಲಿ ಇರತಕ್ಕ ಮಕಾರಕ್ಕೆ ಅಕಾರಾತ್ಮಕವಾದ ಸ್ವರವು ಪರವಾಗಿರುವುದರಿಂದ ನಕಾರಾದೇಶವು ಬರಬೇಕಾಗುವುದು. ಎಂದು ಆಶಂಕೆ ಮಾಡಿಕೊಂಡು ಆ ಅನಿಷ್ಟರೂಪವನ್ನು ನಿವಾರಣೆ ಮಾಡುವುದಕ್ಕಾಗಿ ॥ ನಸ್ಯಮಿಚಬಹುಳಂ ॥259॥ ಎಂಬ ಸೂತ್ರದಲ್ಲಿ ವಿಧಾನಮಾಡಿರತಕ್ಕ ಮಗಾಗಮದಬಲದಿಂದ, ಈ ॥ ನೋನಸ್ಸ್ವರೆ ॥ 77 ॥ ಎಂಬ ಸೂತ್ರವು ಪದಾನ್ತವಿಷಯಕವು. ಎಂದು ಜ್ಞಾಪನಮಾಡಿರುವುದರಿಂದ ಈ ಸೂತ್ರವು ಪದಾನ್ತದಲ್ಲಿ ಇರತಕ್ಕ ಮಕಾರಕ್ಕೆ

ನಕಾರಾದೇಶವನ್ನು ವಿಧಿಸುತ್ತದೆ. ಎಂದು ಅರ್ಥವನ್ನು ಕಲ್ಪಿಸಿ— ಜೆಮರ್, ತೆಮರ್ ಇತ್ಯಾದಿ ಪದಮಧ್ಯದಲ್ಲಿ ಇರತಕ್ಕ ಮಕಾರಕ್ಕೆ ನಕಾರಾದೇಶವು ಬರ ಲಾರದೆಂದು ಅನಿಷ್ಟರೂಪವನ್ನು ನಿವಾರಣೆ ಮಾಡಿ, ಜಿನಮ್+ಈತಂ ಇತ್ಯಾದಿಗ ಳಲ್ಲಿ ಮಕಾರವು ಪದಾಂತ ಸಂಬಂಧಿಯಾದಕಾರಣ 'ಜಿನನೀತಂ' ಎಂದು ನಕಾ ರಾದೇಶವು ಬರುವುದಾದುದರಿಂದ ಇಷ್ಟರೂಪವು ಸಿದ್ಧಿಸುವುದು, ಎಂದು ಹೇಳಿದರೂ ವಿಷ್ಣುವಕ್ಕುಮ್+ಈತಂ, ಇವರ್ತ್ತುಮ್+ಅಸುರರ್, ಗುರುಗಳಿರಾಬೆಸಸಿಮ್+ಎಮ ಗೆ, ವಿಷ್ಣುವಿಂದಮ್+ಈಲೋಕಂ—ಇತ್ಯಾದಿಗಳಲ್ಲಿ ಮಕಾರವು ಪದಾಂತದಲ್ಲಿರ ವುದರಿಂದ ಇಂಥಾ ಮಕಾರಕ್ಕೆ ಮುಂದೆ ಸ್ವರವು ಪರವಾಗಿರುವಾಗ, ಹಿಂದೆ ಹೇಳಿದ ॥ ಮೋನಸ್ಸ್ವರೆ ॥ 77 ॥ ಎಂಬ ಸೂತ್ರವನ್ನನುಸರಿಸಿ ನಕಾರಾದೇಶವು ಯಾಕೆ ಬರ ಲಿಲ್ಲವೆಂಬ ನಮ್ಮದೊಂದಾಕ್ಷೇಪಣೆಯು ಇದ್ದೇ ಇರುವುದು.

ಹೀಗೆಯೇ ಇದರ ಮುಂದಿನ ಸೂತ್ರವಾದ ॥ ನಪಿವಾ ॥ 73 ॥ ಎಂಬ ಸೂ ತ್ರದಮೇಲೂ ಒಂದು ಚಿಕ್ಕ ಆಕ್ಷೇಪಣೆಯು ಇದ್ದೇ ಇರುವುದು. ಏನಂದರೆ— ಈ ॥ ನಪಿವಾ ॥ 78 ॥ ಎಂಬ ಸೂತ್ರದಲ್ಲಿ ಇರತಕ್ಕ ವಾ ಶಬ್ದವು ವ್ಯವಸ್ಥಿತವಿಭಾ ಷಾಬೋಧಕವಾದುದರಿಂದ ನೆಲಮ್+ಇದು—ಇತ್ಯಾದಿಗಳಲ್ಲಿ, ನೆಲನಿದು–ಎಂದು ನಕಾರವನ್ನೂ, ಕಸಮ್+ಇದು–ಇತ್ಯಾದಿಗಳಲ್ಲಿ ಕಸಮಿದು–ಎಂದು ಮಕಾರವನೂ (ಭಿನ್ನಭಿನ್ನವಾದ ಕರ್ಣಾಟಕ ನಪುಂಸಕಪದಗಳ ಅನ್ತ್ಯದಲ್ಲಿ ಬರತಕ್ಕ ಮಕಾರಕ್ಕೆ ಸ್ವರವು ಪರವಾದಾಗ ವ್ಯವಸ್ಥಿತಿಯಿಂದ) ವಿಧಾನ ಮಾಡಿದರೂ ಸಂಸ್ಕೃತಪದ ವಾದ ವೃಕ್ಷದಿಮ್+ಉದಿರ್ದು, ವೃಕ್ಷದಿಂದಮ್+ಉದಿರ್ದು, ಇತ್ಯಾದಿಗಳಲ್ಲಿ ಒಂದೇ ಪದದಲ್ಲಿಯೇ ಒಂದೇ ಅರ್ಥದಲ್ಲಿಯೇ ವೃಕ್ಷದಿನುದಿರ್ದು, ವೃಕ್ಷದಿಂದಮುದಿರ್ದು, ಎಂಬದಾಗಿ ಒಂದುಕಡೆ ನಕಾರವೂ ಒಂದುಕಡೆ ಮಕಾರವೂ ಬಂದಿರುವುದರಿಂದ ಹೇಳಬೇಕಾದ ವಿಧಿಯನ್ನು ಯಾಕೆ ಹೇಳಲಿಲ್ಲವೆಂಬ ಒಂದು ಚಿಕ್ಕ ಆಕ್ಷೇಪಣೆಯು ಇದ್ದೇ ಇರುವುದು.

ಹೀಗೆ ಮಕಾರಕ್ಕೆ ನಕಾರಾದೇಶವನ್ನೂ ಮತ್ತು ಮಕಾರ ನಕಾರಗಳಿಗೆ ಬಿಂದು ಅಥವಾ ವರ್ಗಪಂಚಮಾಕ್ಷರಗಳ ಆದೇಶವನ್ನೂ ವಿಧಾನಮಾಡತಕ್ಕ ॥ ಮೋನಸ್ಸ್ವರೆ ॥ 77 ॥ ನಪಿವಾ ॥ 78 ॥ ನಶ್ಚ ಬಿಂದುರನ್ಯತ್ರ ॥ 79 ॥ ತದಸ್ತ್ಯೋವಾ ವರ್ಗೆ ॥ 80 ॥ ಎಂಬ ನಾಲ್ಕು ಸೂತ್ರಗಳಲ್ಲಿ ॥ ನಪಿವಾ ॥ 78 ॥ ಎಂಬ ಸೂತ್ರವು ಆಕ್ಷೇಪಣಾರ್ಹವಾಗಿಯೂ, ಮಿಕ್ಕ ಮೂರು ಸೂತ್ರಗಳೂ ಸರಿಯಾದ ರೂಪಗ

ಳನ್ನು ಸಿದ್ಧಿಮಾಡಿಕೊಡುವುದಿಲ್ಲವಾದುದರಿಂದಲೂ ಶಬ್ದಾನುಶಾಸನವೆಂಬ ಗ್ರಂಥದ ದಲ್ಲಿಯೇ ಅಪ್ರಾಣ್ಯಜ್ಞಾನವು ಉಂಟಾಗುವಾಗ ತದನ್ತಃಪಾತಿಯಾದ ॥ ತದನ್ತ್ಯೋ ಪಾವರ್ಗೆ ॥ 80 ॥ ಎಂಬ ಸೂತ್ರವು ಅಚ್ಚಗನ್ನಡದಲ್ಲಿ ಕವರ್ಗ ಚವರ್ಗ ಪಂಚಮಾಕ್ಷರಗಳಿರುತ್ತವೆ ಎಂದು ಹೇಳಲು ಏನೇನೂ ಸಾಧಕವಾಗಲಾರದು.

(ಸಶೇಷ.)

ಭೂ ವಿ ವ ರ ಣೆ.

(ಟಪ್ಪಣಿ.)

॥ ಜಪಾನ್ ಚಕ್ರಾಧಿಪತ್ಯ. ॥

ಸಾಮಗ್ರಿಗಳು--ಪೂರ್ವಾರ್ಧಗೋಳವು, ಮತ್ತು ಬೇರೆಯಾಗಿ ಬರೆದಿರುವ ಜಪಾನ್ ಚಕ್ರಾಧಿಪತ್ಯದ ಪಠವು.

ವಿಷಯ.	ಬೋಧನಾ ಕ್ರಮ.
1. (1) ಪಸಿಪಿಕ್ ಸಾಗರದಲ್ಲಿ ಚೀನಾಕ್ಕೆದುರಾಗಿರುವ ದೊಡ್ಡ ದ್ವೀಪಸ್ತೋಮಗಳಿಗೆ "ಜಪಾನ್ ದ್ವೀಪಗಳು" ಎಂದು ಹೆಸರು.	ಬಾಲಕರೇ ಜಪಾನ್ ದ್ವೀಪಸ್ತೋಮಗಳನ್ನು ತೋರಿಸಿ, ಆದಕ್ಕೆ ಸರಹದ್ದುಗಳನ್ನು ಹೇಳುವಂತೆ ಪ್ರಶ್ನೆ ಮಾಡಬೇಕು. [ದ್ವೀಪಸ್ತೋಮವೆಂದರೇನೆಂಬುವುದನ್ನು ಅವರಿಂದಲೇ ಹೇಳಿಸಿರಿ.]
(2) 165,000 ಚದರಮೈಲಿಗಳು 44,000,000 ಜನಸಂಖ್ಯೆಯೂ ಉಳ್ಳದಾಗಿರುತ್ತೆ.	ಮೈಸೂರು ಸೀಮೆಯ ವಿಸ್ತೀರ್ಣಕ್ಕೂ ಜನಸಂಖ್ಯೆಗೂ, ಹೋಲಿಸಿ ಎಷ್ಟುಪಾಲು ಜಾಸ್ತಿಯಾಗಿರುವುದೆಂಬ ಅಂಶವನ್ನು ಪ್ರಶ್ನೆಮಾಡಿ ಬಾಲಕರಿಂದಲೇ ಉತ್ತರವನ್ನು ಹೇಳಿಸಬೇಕು.
2. ರಾಜ್ಯದವಿಭಾಗಗಳು— (a) ಈ ಚಕ್ರಾಧಿಪತ್ಯಕ್ಕೆ 1 ನಿಪ್ಪ. 2. ಹಿಕ್ಕೋಕು. (4 ರಾಷ್ಟ್ರಗಳು).	ರಾಜ್ಯದ ವಿಭಾಗಗಳನ್ನು ಉಪಾಧ್ಯಾಯರೇ ಮೊದಲು ಒಂದಾವೃತ್ತಿ ಹೇಳಿ ಬಳಿಕ ವ್ಯಾಪಿನಲ್ಲಿ ತೋರಿಸಿ, ಇಬ್ಬರು

3 ಕೋಷಿಯು (9 ರಾಷ್ಟ್ರಗಳು). ಸಯಸ್ಸೊ. ಮತ್ತು ಉತ್ತರದಲ್ಲಿ—ಕ್ಯೂರೈಲಾದ್ವೀಪಸ್ತೋಮು. ದಕ್ಷಿಣದಲ್ಲಿ-ಲೂಜೂದ್ವೀಪಸ್ತೋಮು. ಮಧ್ಯದಲ್ಲಿ, ಜಪಾರ್ದ್ವೀಪಸ್ತೋಮು. ಮತ್ತು ಪಾಪೊಸ್ತೋಸದ್ವೀಪ. ಇಷ್ಟು ಸೇರಿರುತ್ತವೆ.

ಮೂವರು ಬಾಲಕರಿಂದಲೂ ಪುನರುಕ್ತಿಯನ್ನು ಮಾಡಿಸಿ. ಮ್ಯಾಪನಲ್ಲಿ ತೋರಿಸುವಂತೆ ಹೇಳಬೇಕು. ಈಗ ಹಲಗೆಯ ಮೇಲೆ ಅದನ್ನು ಬರೆಯಬೇಕು. ಬಾಲಕರಿಗೂ ಈ ವಿಭಾಗಗಳನ್ನು ನೋಟ್ ಬುಕ್ಕಿನಲ್ಲಿ ಬರೆದುಕೊಳ್ಳುವಂತೆ ಹೇಳಬೇಕು.

(b) ಬ್ರಿಟ್ಕಗೂ, ಜಪಾನಿಗೂ ಇರುವ ಸಾಮ್ಯಗಳು.—

(1) ಈ ದ್ವೀಪಸ್ತೋಮಗಳೆರಡೂ ನಾಗರಮಧ್ಯದಲ್ಲಿ ವ್ಯಾಪಾರಕ್ಕೆ ಅನುಕೂಲವಾದ ಸ್ಥಳದಲ್ಲಿದ್ದು, ಲೋಹಯುಕ್ತವಾದ, ಫಲವತ್ತಾದ, ಭೂಮಿಯನ್ನಾವರಿಸಿಕೊಂಡು, ಸಾಹಸಿಗಳಾಗಿಯೂ, ಸುಗುಣಶಾಲಿಗಳಾಗಿಯೂ, ನ್ಯಾಕಂಕ್ಷ್ಯ ಪ್ರಿಯರಾಗಿಯೂ, ನಾವಿಕರಾಗಿಯೂ, ವಿದ್ಯಾಭಿವೃದ್ಧಿ ಒದ್ದಾದವರಾಗಿಯೂ ಇರುವ ಜನರನ್ನುಂಟಾಗಿಸಿ.

ಬ್ರಿಟಿಷ್ ದ್ವೀಪಗಳಿರುವ ಸ್ಥಳವನ್ನು ಸ್ಪಷ್ಟಪಟ್ಟಿಗೆ ವಿವರಿಸಿ, ಅನಂತರ ಬ್ರಿಟ್ಕ ಮತ್ತು ಜಪಾರ್ ದ್ವೀಪಗಳಿಗಿರುವ ಸಾಮ್ಯಗಳನ್ನು ಮ್ಯಾಪಿನಲ್ಲಿ ತೋರಿಸುತ್ತಾ, ವಿಷಯಗಳನ್ನು ಶಿಕ್ಷಕರು ವಿವರಿಸಬೇಕು

(2) ಲಂರ್ಡ ಪಟ್ಟಣವು ಇಟ್ಟಿಗೆ, ಸುಣ್ಣದಿಂದಲೂ, ಟೋಕಿಯೋ ಪಟ್ಟಣವು ಬಿದಿರು, ಕಾಗದಗಳಿಂದಲೂ ವ್ಯಾಪಿಸಲ್ಪಟ್ಟಿದೆ.

ಮೇಲಿನ ಕಾರಣಗಳಿಂದಲೇ ಅದಕ್ಕೆ ಅಟ್ಲಾಂಟಿಕ್ ನಾಗರದ ಬ್ರಿಟ್ಕ ಎಂತಲೂ ಜಪಾರ್ ಚಕಾಧಿಪತ್ಯಕ್ಕೆ ಪಸಿಫಿಕ್ ನಾಗರದ ಬ್ರಿಟ್ಕ ಎಂತಲೂ, ಹೆಸರುಬಂದಿದೆ. ಎಂದು ಬಾಲಕರಿಗೆ ತಿಳಿಸಿ, ಎದಕ್ಕೂ ಹಲಗೆಯಮೇಲೆ ಬರೆದು ಮೇಲಿನ 2 ಹೆಸರುಗಳು ಬಂದುದಕ್ಕೆ ಬಾಲಕರಿಂದಲೂ ಕಾರಣಗಳನ್ನು ಹೇಳಿಸಬೇಕು.

೫. ಭೂಸ್ವರೂಪ —

ಅನೇಕ ಜ್ವಾಲಾಮುಖಿಪರ್ವತಗಳುಳ್ಳದಾಗಿದೆ. ಭೂಕಂಪ ಹೆಚ್ಚು. ಟೋಕಿಯೊ, ಓಸಾಕ

ನೀರಾವರಿಯೆಂಬುವ ಅರ್ಥವನ್ನು ಕುರಿತು ಹೇಳಬೇಕು. ಬಾವಿಯನ್ನು ಮಾಡುವ ವಿಧಾನ ಮುಂತಾದ

ಮುಖ್ಯ ಸಮುದ್ರ ಶಾಖೆಗಳು. ಫೂಸಿಯಾಮವೆಂಬುದು ಮುಖ್ಯಶಿಖರ. ನೆಲವು ಫಲವತ್ತಾಗಿದೆ. ಜೈವ ಮುಖ್ಯ ಸರೋವರವು.

ಡುಹಿಡಿಯುವ ಕ್ರಮಹೇಗೆ? (ಪ್ರಶ್ನೆಮಾಡಿರಿ.) ಜ್ವಾಲಾಮುಖಿಗೆ ಕಾರಣಗಳನ್ನು ತಿಳಿಸಬೇಕು. ಈ ಶಿಖರವು ಅಷ್ಟದಳದ ಪದ್ಮದಂತೆ ಕಾಣುವುದೆಂದು ತಿಳಿಸಬೇಕು. ಬಾಲಕರನ್ನು ಸಮುದ್ರಶಾಖೆ ಮತ್ತು ಶಿಖರವನ್ನು ಬರೆದುಕೊಳ್ಳುವಂತೆ ಹೇಳಬೇಕು.

4. (1) ಹವಾ (2) ಬೆಳೆಗಳು --

ಸಮಶೀತೋಷ್ಣವಲಯದಲ್ಲಿದೆ. ಮುಂಗಾರು ಮಳೆ ಹೆಚ್ಚು. ದೊಡ್ಡ ನದಿಗಳಿಲ್ಲ. ಜಲವಸತಿ ಚೆನ್ನಾಗಿದೆ. ಕುರೋಸೀವೊ. ಒಯೊಸೀವೊ ಮುಖ್ಯವಾದ ಪ್ರವಾಹ

(2) ಬೆಳೆ—ಹಿಸ್ಪಲುನೇರಿಳೆ, ಕಬ್ಬು, ಬಿದಿರು, ಭತ್ತ, ಹತ್ತಿ, ಹೊಗೇಸೊಪ್ಪು, ಟೀ, ಕರ್ಪೂರಗಿಡ, ಲಾಕರ್‌ಗಿಡ.

ಈ ಚಕ್ರಾಧಿಪತ್ಯವು ಯಾವ ವಲಯದಲ್ಲಿದೆ? ಎಂಬುದನ್ನು ಬಾಲಕರಿಂದಲೇ ಹೇಳಿಸಬೇಕು. [ನದಿಗಳು ಇಲ್ಲದೇ ಇರುವುದಕ್ಕೆ ಕಾರಣಗಳನ್ನು ತಿಳಿಸಿಕೊಡಬೇಕು.] ಕುರೋಸೀವೋ ಎಂಬ ಬಿಸಿನೀರಿನ ಪ್ರವಾಹದಿಂದ ಜಪಾನ್ ಚಳಿ ಹೆಚ್ಚದಂತಿದೆ. (ಇದು ಪೂರ್ವದಕಡೆಯಿಂದ ಬರುತ್ತದೆ.) ಒಯುನೀವೋ ಎಂಬ ಶೀತೋದಕ ಪ್ರವಾಹವು ಒಕಟನ್ಸ್ಕ್ ಸಮುದ್ರದಿಂದ ಬಂದು, ಹಿಮಂತಕಾಲದಲ್ಲಿ ಯಸ್ಸೋದ್ವೀಪದ ತೀರದಲ್ಲಿ ನೀರ್ಗಲ್ಲಿಂದ ಗಡ್ಡಿ ಕಟ್ಟಿ ನಿಪ್ಪನಿಗೆ ವಿಘಾತವನ್ನು ತಂದು ಒದಗಿಸುತ್ತದೆ. ಎಂದು ತಿಳಿಸಿದರೆ ಸಾಕು. [ಪ್ರವಾಹಗಳ ಹೆಸರನ್ನು ಬರೆದುಕೊಳ್ಳುವಂತೆ ಹೇಳಿರಿ.]

5. ಜನ, ಭಾಷೆ, ವ್ಯಾಪಾರ ಮುಂತಾದ್ದು-

ಮಂಗೋಲಿಯನ್ನ್, ಮತ್ತು ಸಂಕರ ಜಾತಿಯವರೂ, ಐನೋಸ್ ಎಂಬ ಜನಗಳೂ ಇರುತ್ತಾರೆ. ಜಪಾನ್ ಭಾಷೆ ರೂಢಿಯಲ್ಲಿದೆ. ಬೌದ್ಧಮತವು ಹರಡಿರುವುದು. ಪಿತೃದೇವತೆಗಳನ್ನು ಆರಾಧಿಸುವ ಮತವು ಹರಡಿರುವುದು.

ಮಂಗೋಲಿಯನರು ಕೃಷಿಮಾಡುತ್ತಾರೆಂದೂ, ಐನೋಸ್ ಎಂಬ ಜನಗಳು ಯಸ್ಸೋದ್ವೀಪದಲ್ಲಿರುತ್ತಾರೆಂದೂ, ಇವರ ದೇಹವೆಲ್ಲಾ ಬಿರುನಾದ ರೋಮಗಳಿಂದ ತುಂಬಿರುವುದೆಂತಲೂ ತಿಳಿಸಬೇಕು.

[ಬೌದ್ಧಮತಸ್ಥಾಪಕನು ಯಾರು? ಈ ಚಕ್ರಾಧಿಪತ್ಯಕ್ಕೆ ಆ ಮತವು ಹರಡಿದುದು ಹೇಗೆ? ಪ್ರಶ್ನೆಮಾಡಿರಿ.]

ರಫ್ತು—ತಾಮ್ರ, ಕರ್ಪೂರ, ಗೇಮ್ಸ್ ಟ್ಟೆ, ಪೋರ್ಸ್ಲಿನ್ ಸಾಮಾನುಗಳು, ಬೆಂಕಡ್ಡಿಗಳು ಮುಂತಾದವು.

ರಫ್ತು ಆಮದುಗಳನ್ನು ತಿಳಿಸಿ ಹಲಗೆಯಮೇಲೆ ಬರೆಯಬೇಕು. ಇಬ್ಬರು ಮೂವರಿಂದ ಪುನರುಕ್ತಿಯನ್ನು ಮಾಡಿಸಿರಿ. ಬಾಲಕರಿಗೆ ರಫ್ತು, ಆಮದುಗಳನ್ನು, ಐನೋಸ ಎಂಬುದನ್ನೂ ಗುರ್ತುಮಾಡಿಕೊಳ್ಳುವಂತೆ ಹೇಳಿರಿ.

ಆಮದು—ಲೋಹಗಳು, ಹತ್ತಿ, ಉಣ್ಣೆ ಒಟ್ಟೆಗಳು, ಸಕ್ಕರೆ.

ಕೈಗಾರಿಕೆಗಳು—ಚಿತ್ರತರವಾದ ಮಡಕೆಗಳು, ಕೊಳಾಯಿಗಳು, ದೀಪದಕಡ್ಡಿಗಳು, ಲಾಕರ್ (ಬಣ್ಣದ ಮೆರುಗೆಣ್ಣೆ ಹಾಕಿದ) ಸಾಮಾನುಗಳು, ಕಾಗದ ಮುಖ್ಯವಾದುವುಗಳು.

[ಲಾಕರ್‌ಗಿಡದಿಂದ ಲಾಕರ್‌ವಾರ್‌ನಿಷ್ ದೊರಕುತ್ತದೆಂದು ತಿಳಿಸಿ. ಪೋರ್ಸ್ಲಿನ್ ಸಾಮಾನುಗಳನ್ನು ದೊಡ್ಡ ದೊಡ್ಡ ಸ್ಥಳಗಳಲ್ಲಿ ಉಪಯೋಗಿಸುವುದನ್ನು ತಿಳಿಸಿರಿ. ಮಂಗೋಲಿಯನರು ಹಿಂದೆ ನಮ್ಮ ದೇಶಕ್ಕೆ ಬಂದಿದ್ದರೇ ಎಂಬ ಅಂಶವನ್ನು ಪ್ರಶ್ನೆಮಾಡಿರಿ.]

ವ್ಯಾಪಾರ—ಉತ್ತರಅಮೆರಿಕ, ಫ್ರಾನ್ಸ್, ಚೀನಾ, ಇಂಡಿಯಾದೇಶಗಳ ಸಂಗಡ ವ್ಯಾಪಾರ ನಡೆಯುತ್ತದೆ.

ವ್ಯಾಪಾರ ಸ್ಥಳಗಳನ್ನು ಮ್ಯಾಪಿನಲ್ಲಿ ತೋರಿಸುವಂತೆ ಬಾಲಕರಿಗೆ ಹೇಳಬೇಕು.

6. ರಾಜ್ಯಭಾರ—

ಸಾಂಕುಶಪ್ರಭುತ್ವ. ಪಾರ್ಲಿಮೆಂಟ್ ಎಂಬ ಪ್ರಜಾಪ್ರತಿನಿಧಿಸಭೆ ಇದೆ. ಚಕ್ರವರ್ತಿಗೆ ಮಿಕಾಡೊ ಎಂಬ ಬಿರುದಿದೆ. ವಿದ್ಯಾಭ್ಯಾಸವು ಚೆನ್ನಾಗಿ ನಡೆಯುತ್ತದೆ.

ಬಾಲಕರಿಂದಲೇ ಪ್ರಶ್ನೆ ಮೂಲಕ ಹೇಳಿಸಲು ಯತ್ನಿಸಬೇಕು. ಮಿಕಾಡೊ ಎಂಬುದನ್ನು ಬರೆದುಕೊಳ್ಳುವಂತೆ ಹೇಳಬೇಕು. ತಾವೂ ಹಲಗೆಯಲ್ಲಿ ಬರೆಯಬೇಕು.

[ಪಾರ್ಲಿಮೆಂಟ್ ಎಂದರೇನೆಂಬುದನ್ನು ಪ್ರಶ್ನೆ ಮಾಡಿ ತಿಳಿಯದಿದ್ದರೆ ಉಪಾಧ್ಯಾಯರೇ ತಿಳಿಸಿಕೊಡಬೇಕು. ಮತ್ತು ಪಾರ್ಲಿಮೆಂಟಿನವರ ಕರ್ತವ್ಯವನ್ನು ಬಾಲಕರಿಂದಲೇ ಹೇಳಿಸಬೇಕು.

7. ಮುಖ್ಯಸ್ಥಳಗಳು—

(1) ಟೋಕಿಯೊ—ಮುಂಚೆ ಎಡೊ ಎಂಬ ಹೆಸರಿತ್ತು. ಕಂಚು, ಪೋರ್ಸ್ಲಿನ್ ಕೆಲಸಕ್ಕೆ ಪ್ರಸಿದ್ಧಿಗೊಂಡಿವೆ. ಬ್ಯಾಂಕ್, ಲಾಕರ್ ಕೆಲಸಗಳು ಜೆನ್ನಾಗಿ ನಡೆಯುತ್ತವೆ. ಮತ್ತು ರಾಜಧಾನಿ.

ಈ ಪಟ್ಟಣದಲ್ಲಿ ಭೂಕಂಪದ ಭಯದಿಂದ, ಬಿದಿರು, ಕಾಗದಗಳ ರಟ್ಟುಗಳಿಂದ ಮನೆಗಳನ್ನು ಕಟ್ಟಿರುತ್ತಾರೆ. ಆದರೂ ಬೆಂಕಿಭಯ ಹೆಚ್ಚು. ಈ ಪಟ್ಟಣದ ಜೀದಿಗಳು ಜಿನ್ರಿಕಿಷ ಎಂಬ ಒಬ್ಬಿಬ್ಬರಿಂದ ಎಳೆಯಲ್ಪಡುವ ಬಂಡಿಗಳಿಂದ ತುಂಬಿರುವುದೆಂದು ತಿಳಿಸಿಕೊಡಬೇಕು. [ರಾಜಧಾನಿ ಎಂದರೇನು ಪ್ರಶ್ನೆಮಾಡಿರಿ.]

(2) ಯೋಕೋಹಾಮ- ಯೂರೋಪಿಯಂಡದೊಂದಿಗೆ ವ್ಯಾಪಾರ ಮಾಡುವ ಸ್ಥಳ.

(3) ಒಸಾಕ—ಒಳದೇಶದ ವ್ಯಾಪಾರಕ್ಕೆ ಮುಖ್ಯಸ್ಥಳ (ಜಪಾನ್ ವೆನಿಸ್ ಎಂದು ಹೆಸರು.)

(4) ಕಿಯೋಟು—ಪೂರ್ವದ ರಾಜಧಾನಿ. ಈ ದೇಶದ ಉತ್ತಮಪದಾರ್ಥಗಳು ಇಲ್ಲಿ ತಯಾರಾಗುತ್ತವೆ.

ಈ ನಾಲ್ಕು ಪಟ್ಟಣಗಳ ಹೆಸರುಗಳನ್ನು ಮಾತ್ರ ಮೊದಲು ತಿಳಿಸಿ, ಬಾಲಕರು ಆ ಸ್ಥಳಗಳನ್ನು ಮ್ಯಾಪಿನಲ್ಲಿ ತೋರಿಸುವಂತೆ ಹೇಳಿ. ತಾವು ಹಲಗೆಯಮೇಲೆ ಒರೆದಿರುವ ಮ್ಯಾಪಿನಲ್ಲಿ ಆ ಸ್ಥಳಗಳನ್ನು ಎಲ್ಲಿಲ್ಲಿ ಬರೆಯುಬೇಕೆಂಬುದನ್ನು ಉಪರಿಂದಲೇ ಹೇಳಿಸುತ್ತ, ಗುರ್ತು ಮಾಡಬೇಕು. ಬಾಲಕರು ತಮ್ಮ ಪುಸ್ತಕದಲ್ಲಿ ಈ ನಾಲ್ಕು ಪಟ್ಟಣಗಳನ್ನು ಮತ್ತು ಪ್ರಸಿದ್ಧಿಗಳನ್ನು ಬರೆದುಕೊಳ್ಳಬೇಕು, ಎಂದು ಹೇಳಬೇಕು.

8. ಮುಖ್ಯವೇವೇ ಪಟ್ಟಣಗಳು—ನಾಗಸಾಕಿ (ಕಿಷ್ಯೂದ್ವೀಪದಲ್ಲಿ). ಕೋಬೆ ಒಸಾಕ. ಯೋಕೋಹಾಮ. ನಿಯಿಗಟ. ಹಾಕೋಡಾಟ.

ಇವುಗಳನ್ನು ತಿಳಿಸಿ ಬೇರೆ ಮ್ಯಾಪಿನಲ್ಲಿ ಗುರ್ತುಮಾಡಿ, ಬಾಲಕರಿಂದಲೂ ಹೇಳಿಸಿ, ಅವರೂ ಬರೆದುಕೊಳ್ಳುವಂತೆ ತಿಳಿಸಬೇಕು. ಇವುಗಳಲ್ಲಿ ಮಾತ್ರ ಅನ್ಯದೇಶೀಯರು ಬಂದು ವ್ಯಾಪಾರಮಾಡಬಹುದಾದ ಟ್ರೀಟಿಪೋರ್ಟ್‌ಗಳಾಗಿರುತ್ತವೆಂದು ತಿಳಿಸಬೇಕು.

ಒಟ್ಟು ಪುನರಾವರ್ತನೆ

ಪುನರಾವರ್ತನೆಯ ಪ್ರಶ್ನೆಗಳು.

9. (1) ಈ ಚಕ್ರಾಧಿಪತ್ಯದ ವಿಭಾಗಗಳು ಯಾವುವು?

(2) ಇದಕ್ಕೆ ಪಸಿಫಿಕ್ ಸಾಗರದ ಬ್ರಿಟ್ ಎಂದು ಹೇಗೆ ಹೆಸರು ಬಂತು?

(3) ಲಂಡನ್ ಮತ್ತು ಟೋಕಿಯೋ ಪಟ್ಟಣಗಳನ್ನು ಹೇಗೆ ಹೋಲಿಸಬಹುದು?

(4) ಈ ದ್ವೀಪದ ಮುಖ್ಯ ಶಿಖರವು ಯಾವುದು?

(5) ಐನೋಸ್, ಯಿಕಾಡೊ, ಕುರೋಸೀವೋ, ಒಯುಸೀವೊ ಜನ್ರಿಕಿಷ, ಎಂಬುವುಗಳೇನು ತಿಳಿಸಿ?

(6) ಜಪಾನಿನ ವೆನಿಸ್, ಟೋಕಿಯೋ ಪೂರ್ವದ ಹೆಸರು ಯಾವುವು?

(7) ಟ್ರೀಟಿಪೋರ್ಟ್‌ಗಳೆಂದರೇನು? ಯಾವುವು?

(8) ಮುಖ್ಯಸ್ಥಳಗಳನ್ನೂ, ಅವುಗಳ ಪ್ರಸಿದ್ಧಿಗಳನ್ನೂ ತಿಳಿಸು.

ಎಚ್. ಸೂರ್ಯನಾರಣಪ್ಪ,
ಹೆಡ್ ಮಾಸ್ಟರ್.

ಭೂಗೋಳಶಾಸ್ತ್ರ.

V (a) 1. ಏಷ್ಯಾ ಖಂಡದ ಉತ್ತರವಾವ ಎರಡು ಸೀಸೀರಿನ ಸರೋವರಗಳನ್ನೂ 2. ಯೂರೋಪ್ ಖಂಡದಲ್ಲಿ ಸರೋವರಗಳ ಮುಖಾಂತರ ಹರಿಯುವ ಎರಡು ನದಿಗಳನ್ನೂ, 3. ಆಫ್ರಿಕಾ ಖಂಡದಲ್ಲಿ ಮಾತ್ರವಿರುವ ಪ್ರಾಣಿಗಳನ್ನೂ, 4. ದಕ್ಷಿಣ ಅಮೆರಿಕಾ ಖಂಡದ ದೊಡ್ಡ ಮೈದಾನವನ್ನೂ, 5. ಆಸ್ಟ್ರೇಲಿಯ ಖಂಡದ ಒಂದು ಪರ್ಯಾಯ ದ್ವೀಪವನ್ನೂ ಹೇಳಿರಿ.

1. ಸಿಂಕೋಲ್ ಮತ್ತು ಮಾನಸ ಸರೋವರ. 2. ರೈನ್ ಮತ್ತು ರೋನ್ ನದಿಗಳು. 3. ಜಿರಾಫೆ ಹಿಪಾಪೋಟಮಸ್ (River-horse) ಜೀಬ್ರಾ. 4. ಅಮಜಾನ್ ಮೈದಾನ ಅಥವಾ ಸಿಲ್ವಾಸ್. 5. ಯಾರ್ಕ್‌ಪರ್ಯಾಯ ದ್ವೀಪ.

(b) ಈ ಹೆಸರುಗಳಲ್ಲಿ ಪ್ರತಿಯೊಂದೂ ಅವಾವುದಕ್ಕೆ ಸಲ್ಲುವುದು?

1. ಕಂಚೀರಿನ ಬಾಗಲು, 2. ಭುವನಭವನದ ಕರುಮಾಡ, 3. ಇಂಡಿಯಾ ನೌಕದ ಲಿವರ್‌ಪೂಲ್, 4. ಕಲ್ಕತ್ತೆಯ

ಕಣಜ, 5. ಪೆಸಿಫಿಕ್ ಸಾಗರದ ಬ್ರಿಟಿಷ್, 6. ಲಕ್ಸೆಂಬರ್ಗ್ ಉದ್ಯಾನ ಪುರಿ, 7. ಲವಂಗದ ತೌರುಮನೆ, 8. ಶತಗೋಪುರ ನಗರ, 9. ಅಮೆರಿಕದ ಆಥೆನ್ಸು, 10. ಎಡ್ರಿಯಾಟಿಕ್ ಸಮುದ್ರದ ರಾಣಿ.

1. ಜೇಬಲ್ಟಾಂಡೆಬ್ ಜಲಸಂಧಿ, 2. ಪಾವಿಸ್ ಪ್ರಸ್ಥಭೂಮಿ, 3. ಕರಾಚಿ, 4. ಬಾಕರ್‌ಗಂಜ್, 5. ಜಪಾನ್, 6. ಹಿರಾರ್, 7. ಅಂಬಾಯ್ನ, 8. ಪ್ರೇಗ್, 9. ಬಾಸ್ಪ್, 10. ವೆನಿಸ್.

VI (a) ಚಂದ್ರದ್ರೋಣಪರ್ವತ, ಯದುಗಿರಿ, ವೇದಾವತಿ, ದ್ವಾರಸಮುದ್ರ. ಇವು ಎಲ್ಲಿರುವುವು? ಇವುಗಳಿಗೆ ಈಗ ರೂಢಿಯಲ್ಲಿರುವ ಬೇರೆ ಹೆಸರುಗಳಾವುವು?

ಚಂದ್ರದ್ರೋಣಪರ್ವತ = ಬಾಬಾಬುಡನ್‌ಬೆಟ್ಟ—ಮೈಸೂರು ದೇಶದ ಪಶ್ಚಿಮ ಭಾಗದ ಬೆಟ್ಟಗಳಲ್ಲೊಂದು.

ಯದುಗಿರಿ = ಮೇಲುಕೋಟೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹಿರೋಡೆಯ ಹತ್ತಿರವಿದೆ.

ವೇದಾವತಿ = ಹಗರಿ. ತುಂಗಭದ್ರೆಯ ಉಪನದಿ. ಬಾಬಾಬುಡನ್ ಬೆಟ್ಟದಲ್ಲಿ ಹುಟ್ಟಿ ಚಿತ್ರದುರ್ಗದಲ್ಲಿ ಹರಿಯುವುದು.

ದ್ವಾರಸಮುದ್ರ = ಹಳೇಬೀಡು. ಹಾಸನಡಿಸ್ಟ್ರಿಕ್ಟ್ ಬೇಲೂರು ಹತ್ತಿರವಿದೆ.

(b) ಮೈಸೂರು ದೇಶದಲ್ಲಿ ಕಬ್ಬಿಣ ದೊರೆಯುವ ನಾಲ್ಕು ತಾಲ್ಲೂಕುಗಳ ಹೆಸರುಗಳನ್ನೂ, ಸೊಗಸಾದ ಕಂಬಳಿಗಳಾಗುವ ನಾಲ್ಕು ತಾಲ್ಲೂಕುಗಳ ಹೆಸರುಗಳನ್ನೂ ಸ್ಲೇಟುಕಲ್ಲು, ಸಾಣೇಕಲ್ಲು, ಕರಿಯಕಲ್ಲು, ಕಲ್ನಾರು ದೊರೆಯುವ ಸ್ಥಳಗಳನ್ನೂ ಹೇಳಿರಿ.

ಮಳವಳ್ಳಿ ಚಿಕ್ಕನಾಯಕನಹಳ್ಳಿ, ಅರಸೀಕೆರೆ, ಹೆಗ್ಗಡದೇವನಕೋಟೆ. ಈ ಸ್ಥಳಗಳಲ್ಲಿ ಕಬ್ಬಿಣ ದೊರೆಯುವುದು.

ಚಿತ್ರದುರ್ಗ, ಮಂಡ್ಯ, ದಾವಣಗೆರೆ, ಕೋಲಾರ, ಸೊಗಸಾದ ಕಂಬಳಿಗಳಾಗತಕ್ಕ ಸ್ಥಳಗಳು. ಸ್ಲೇಟುಕಲ್ಲು ಚಿತ್ರದುರ್ಗದ ತಾಲ್ಲೂಕಿನಲ್ಲಿಯೂ, ಕರಿಯಕಲ್ಲು

ತುರುವೆಕೆರೆಯಲ್ಲಿಯೂ, ನಾಣೇಕಲ್ಲು ಚಿಕ್ಕನಾಯಕನಹಳ್ಳಿಯಲ್ಲಿಯೂ, ಕಲ್ಲಾರು ಚಾಮರಾಜನಗರದ ತಾಲ್ಲೂಕುಗಳಲ್ಲಿಯೂ ದೊರೆಯುವುವು.

VII (a) ಮೈಸೂರು ದೇಶದಲ್ಲಿ ಅತ್ಯುನ್ನತವಾದ ಶಿಖರದ ಹೆಸರನ್ನೂ ಅದರ ಎತ್ತರವನ್ನೂ ಮತ್ತು ಮೈಸೂರು ದೇಶದ ಎಲ್ಲಿಯ ಸವಿಾಪದಲ್ಲಿರುವ ಪ್ರಸಿದ್ಧವಾದ ಮೂರು ಜಲಪಾತಗಳ ಹೆಸರುಗಳನ್ನೂ ಹೇಳಿರಿ.

ಬಾಬಾಬುಡನ್ ಬೆಟ್ಟದ ಮುಳ್ಳಯ್ಯನಗಿರಿ ಅತ್ಯುನ್ನತವಾದ ಶಿಖರ. 6317 ಅಡಿ ಎತ್ತರ. ಗೇರುಸೊಪ್ಪೆ—ಗಗನಚುಕ್ಕಿ, ಬರಚುಕ್ಕಿ ಎಂಬಿವು ಜಲಪಾತಗಳು.

(b) ಮೈಸೂರು ದೇಶದಲ್ಲಿ ದಕ್ಷಿಣಕೇದಾರ, ದಕ್ಷಿಣಕಾಶಿ ಎಂಬ ಸ್ಥಳಗಳನ್ನೂ ಎತ್ತಿನ ವ್ಯಾಪಾರಕ್ಕೆ ಪಸಿದ್ಧವಾದ ಎರಡು ಜಾತ್ರೆಯಾಗುವ ಸ್ಥಳಗಳನ್ನೂ ಎರಡು ದೊಡ್ಡ ಕೆರೆಗಳ ಹೆಸರುಗಳನ್ನೂ ಹೇಳಿರಿ.

ದಕ್ಷಿಣಕೇದಾರ = ಬೆಳಗಾವಿ. ದಕ್ಷಿಣಕಾಶಿ = ಶಿವಗಂಗೆ.

ನಂದಿ, ವಾನರಾಶಿ ಎಂಬ ಸ್ಥಳಗಳ ಜಾತ್ರೆಗಳಲ್ಲಿ ಎತ್ತಿನ ವ್ಯಾಪಾರವು ವಿಶೇಷವಾಗಿ ನಡೆಯುವುದು.

ಸೂಳೆಕೆರೆ 40 ಮೈಲಿ ಸುತ್ತಳತೆ— ಕುಣಿಗಲುಕೆರೆ—14 ಮೈಲಿ ಸುತ್ತಳತೆ.

VIII (a) ಇವು ಪೂರ್ವದಲ್ಲಿ ಯಾವ ರಾಜ್ಯಗಳಾಗಿದ್ದುವು. 1. ಬಂಗಾಳ, 2. ಬಿಹಾರ, 3. ಓರಿಸ್ಸಾ, 4. ಗಂಜಾಂಜೆಲ್ಲೆ, 5. ಟಿರ್‌ಹೂಟ್, 6. ಭಾಗಲ್ಪುರ.

1. ವಂಗ, 2. ಮಗಧ, 3. ಉತ್ಕಲ, 4. ಕಳಿಂಗ, 5. ಮಿಥಿಲ, 6. ಅಂಗ.

(b) ಈ ಪಟ್ಟಣಗಳು ಯಾತಕ್ಕೆ ಪ್ರಸಿದ್ಧಿಯಾಗಿವೆ :—ಚನ್ನಪಟ್ಟಣ, ಶ್ರವಣಬೆಳಗೊಳ, ಸೊರಬ, ಮೊಳಕಾಲ್ಮುರು, ಎಲಿಫಂಟ್, ಸಹರ್ಪುರ, ಕಾಚಾರ್, ಪಿರಾಜ್ ನಿಜ್ಜಿ ನೌಗರಾಡ್, ನಂದೇರು.

ಚನ್ನಪಟ್ಣ = ಒಣ್ಣದ ಸಾಮಾನು—ವೀಣೆಯ ತಂತಿ—ವ್ಯಾಪಾರಸ್ಥಳ.

ಶ್ರವಣಬಳಗೊಳ = ಹಿತ್ತಾಳೆಯ ಸಾಮಾನು—ಜೈನರ ಪುಣ್ಯಸ್ಥಳ. 60 ಅಡಿ ಎತ್ತರವಿರುವ ಗೋಮಟೇಶ್ವರ ವಿಗ್ರಹ.

ಸೊರಬ = ಗಂಧದ ಮರದಲ್ಲಿ ಮಾಡಿದ ಚಿತ್ರದ ಸಾಮಾನು.

ಮೊಳಕಾಲ್ಮುರು = ರೇಷ್ಮೆಯ ಬಟ್ಟೆ—ಸೀರೆ ಧೋತ್ರ, ಪ್ರತಿಧ್ವನಿಕೊಡುವ ಜೋಗಪ್ಪನ ಗುಡ್ಡ.

ಎಲಿಫಾಂಟ = ಗುಹಾಂತರ್ದೇವಾಲಯಗಳು :—

ಸದರ್ಕ ಪುರ -- ಬೊಟಾನಿಕಲ್ ತೋಟಗಳು.

ನಂದೇರಿ = ಸಿಕ್ಕರ ಯಾತ್ರಾಸ್ಥಳ, ಪ್ರಸಿದ್ಧವಾದ ವಿದ್ಯಾಶಾಲೆ.

ಕಾಚಾರ್ = ಪ್ರಸಿದ್ಧವಾದ ತೇಯಿಲೆ.

ಪಿರಾಜು = ಪನ್ನೀರು ಮತ್ತು ಅತ್ತರು.

ನಿಜ್ನಿ ನೌಗರಾಡ್ = ದೊಡ್ಡ ಸಂತೆ.

IX ಇಂಗ್ಲೆಂಡಿನಲ್ಲಿ ತಾಮ್ರ, ತವರ, ಸೀಸ, ಸಿಕ್ಕುವ ಸ್ಥಳಗಳನ್ನೂ ಶಾಲುಗಳೂ, ರತ್ನ ಕಂಬಳಿಗಳೂ ಆಗತಕ್ಕ ಸ್ಥಳಗಳನ್ನೂ. ಫ್ರಾನ್ಸಿನಲ್ಲಿ ವೈಕ್ ವ್ಯಾಪಾರಕ್ಕೆ ಪ್ರಸಿದ್ಧವಾದ ಪಟ್ಟಣವನ್ನೂ ನ್ಯೂಸೌತ್ ವೇಲ್ಸಿನಲ್ಲಿ ಕಲ್ಲಿದ್ದಲು ರಫ್ತಾಗುವ ಸ್ಥಳವನ್ನೂ ಜರ್ಮನಿಯಲ್ಲಿ ಪುಸ್ತಕ ವ್ಯಾಪಾರಕ್ಕೆ ಪ್ರಸಿಸಿದ್ಧವಾದ ಪಟ್ಟಣವನ್ನೂ ಹೇಳಿರಿ.

ತಾಮ್ರ ಆಂಗ್ಲಿಸೀ ದ್ವೀಪದಲ್ಲಿಯೂ, ತವರ ಕಾರ್ನ್‌ವಾಲಿನಲ್ಲಿಯೂ, ಸೀಸವು ಡಾರ್ಬಿಷೈರಿನಲ್ಲಿಯೂ ದೊರೆಯುವವು. ರತ್ನಕಂಬಳಿಗಳು ಕಿಡ್ಡಾರ್‌ಮಿನಸ್ಟರಿನಲ್ಲಿಯೂ ಶಾಲುಗಳು ನಾರಿಚ್ಚಿನಲ್ಲಿಯೂ ಆಗುವುವು. ಫ್ರಾನಿನಲ್ಲಿ ಜೋಡೋ ಎಂಬುದು ವೈಕ್ ವ್ಯಾಪಾರಕ್ಕೂ ಜರ್ಮನಿಯಲ್ಲಿ ಲೆಪ್ಸಿಗ್ ಎಂಬುದು ಪುಸ್ತಕ ವ್ಯಾಪಾರಕ್ಕೂ ನ್ಯೂಸೌತ್‌ವೇಲ್ಸಿನಲ್ಲಿ ನ್ಯೂಕ್ಯಾಸಲ್ ಎಂಬುವುದು ಕಲ್ಲಿದ್ದಲ ವ್ಯಾಪಾರಕ್ಕೂ ಪ್ರಸಿದ್ಧಿಯಾಗಿವೆ.

X ಇಂಗ್ಲೆಂಡು ದೇಶದ ವ್ಯಾಪಾರ ಮತ್ತು ಉತ್ಪತ್ತಿಗಳ ಮೊತ್ತ

ಗಳೆಷ್ಟು? ಲಂಡನ್ ಪಟ್ಟಣದಿಂದ ಬೊಂಬಾಯಿಗೆ ಶೀಘ್ರವಾಗಿ ಬರಲಿಕ್ಕೆ ಎಷ್ಟು ದಿನಗಳು ಹಿಡಿಯುವುವು?

ಇಂಗ್ಲೆಂಡಿನ ವ್ಯಾಪಾರದ ಮೊತ್ತವು 700 ಕೋಟಿ. ಉತ್ಪತ್ತಿ 93 ಕೋಟಿ ರೂಪಾಯಿ. ಶೀಘ್ರವಾಗಿ ಬರುವುದಕ್ಕೆ 16 ದಿವಸಗಳು ಹಿಡಿಯುವುವು.

ಗಣಿತ.

1. (a) $(3\frac{1}{7} - \frac{2}{3})$ ಇದನ್ನು $(\frac{4}{4\frac{4}{7}} \times 7\frac{7}{12})$ ಇದರಿಂದ ಭಾಗಿಸಿ. ಮತ್ತು ·0036 ನ್ನು ·006 ರಿಂದ ಭಾಗಿಸಿರಿ?

   (b) $\frac{8}{1\frac{1}{4}}$ ರ ಒಂದು ಪೆನ್ನಿಯನ್ನು 1 ಪೌಂಡಿನ ದಶಮಾಂಶದಲ್ಲಿಡಿರಿ?

2. ಕ್ವಿಂಸ್ 1 ಕ್ಕೆ 3 ಪೌಂ. 17 ಷಿ. 6 ಪೆಂಗಳಂತೆ 16 ಕ್ವಿಂಸ್. 6 ಪೆನ್ನಿವೇಟ್. 29 ಗ್ರೇಗಳಿಗೆ ಆಗುವ ಬೆಲೆಯನ್ನು ರೂಢಿಗಣಿತ ರೀತಿಯಿಂದ ಮಾಡಿರಿ?

3. ನಾನು ಕೆಲವು ಸೇಬುಹಣ್ಣುಗಳನ್ನೂ, ಅವುಗಳ 3 ರಷ್ಟು ಕಿತ್ತಲೇ ಹಣ್ಣುಗಳನ್ನೂ, ಅವುಗಳ 4 ರಷ್ಟು ಮಾವಿನಹಣ್ಣುಗಳನ್ನೂ ಸಹಾ 2 ರೂ. 8 ಆ. 10 ಪೈ. ಗಳಿಗೆ ತೆಗೆದುಕೊಳ್ಳುತ್ತೇನೆ. ಸೇಬು 1 ಕ್ಕೆ 3 ಪೈಗಳು. ಕಿತ್ತಲೆ 1 ಕ್ಕೆ $2\frac{1}{2}$ ಪೈಗಳು. ಮಾವು 1 ಕ್ಕೆ $3\frac{1}{2}$ ಪೈಗಳಾದರೆ ಪ್ರತಿಯೊಂದನ್ನೂ ಎಷ್ಟೆಷ್ಟು ತೆಗೆದುಕೊಂಡೆನು?

4. 5 ಪೌಂಡುಗಳನ್ನು 6 ಜನ ಗಂಡಸರಿಗೂ, 12 ಜನ ಹೆಂಗಸರಿಗೂ, 17 ಹುಡುಗರಿಗೂ, ಸಹಾ ಹಂಚಬೇಕು. ಹೇಗೆಂದರೆ—2 ಗಂಡಸರಿಗೆ 5 ಹುಡುಗರಿಗೆ ಎಂದಷ್ಟು, 2 ಹೆಂಗಸರಿಗೆ 3 ಹುಡುಗರಿಗೆ ಬರುವಷ್ಟು ಕೊಡಬೇಕು. ಆದರೆ ಪ್ರತಿಯೊಬ್ಬ ಗಂ. ಹೆಂ. ಹು. ಗೂ ಎಷ್ಟೆಷ್ಟು ಬರುತ್ತದೆ?

5. A. ಗೆ $2\frac{1}{2}$ ಬಂದರೆ B ಗೆ 4 ಬರುವಂತೆಯೂ, B ಗೆ 2 ಬಂದರೆ C ಗೆ 3 ಬರುವಂತೆಯೂ, 500 ರೂ. ಗಳನ್ನು A. B. C ಗಳಿಗೆ ಹಂಚಿರಿ?

6. 1 ಕುದುರೆಯನ್ನು 37 ಗಿನಿಗೆ ಮಾರಿದುದರಿಂದ ಸೇಕಡಾ $7\frac{1}{2}$ ನಷ್ಟವಾಯಿತು. ಶೇಕಡಾ $12\frac{1}{2}$ ಲಾಭ ಬರಬೇಕಾದರೆ ಆ ಕುದುರೆಯನ್ನು ಎಷ್ಟಕ್ಕೆ ಮಾರಬೇಕು?

* ವಿದ್ಯಾದಾಯಿನಿ. *

ಭಾಗ ೧೪.] ಡಿಸಂಬರ್—೧೯೦೬. [ಸಂಚಿಕೆ ೧೦.

ವಿದ್ಯಾಭ್ಯಾಸ.

ಎಲ್ಲಾ ವರ್ಗಗಳಲ್ಲಿಯೂ ಪೂರ್ಣವಾಗಿ ಶಿಕ್ಷಣವನ್ನು ಹೊಂದುವುದೇ ಪರಮೋತ್ಕೃಷ್ಟವಿದ್ಯಾಭ್ಯಾಸವೆನಿಸುವುದು. ಆದರೆ ನಮ್ಮ ಈಗಿನ ನಾಗರಿಕಸ್ಥಿತಿಯುಲ್ಲಿ ಇಂಥಾ ಅಭ್ಯಾಸವು ದುಸ್ತರವಾದುದರಿಂದ, ಪ್ರತಿವರ್ಗದಲ್ಲಿಯೂ ಯಥಾನುಗುಣವಾದ ಶಿಕ್ಷಣವನ್ನಾದರೂ ಹೊಂದಲು ಪ್ರಯತ್ನಿಸಬೇಕು. ಅತಿ ಮುಖ್ಯವಾದ ಒಂದೇ ವರ್ಗದಲ್ಲಿ ಮಾತ್ರ ಪೂರ್ಣ ಶಿಕ್ಷಣವನ್ನು ಹೊಂದಿದರೆ ಸಾಲದು. ಅಥವಾ ಮುಖ್ಯವಾದ ಎರಡು ಮೂರು ಅಥವಾ ನಾಲ್ಕು ವರ್ಗಗಳಿಗೆ ಮಾತ್ರ ಅವಧಾನವನ್ನು ಕೊಟ್ಟರೆ ಸಾಲದು. ಆದರೆ ಎಲ್ಲವುಗಳಿಗೂ ಅವಧಾನವನ್ನು ಕೊಡಬೇಕು. ಹೆಚ್ಚು ಬೆಲೆಯುಳ್ಳದಕ್ಕೆ ಹೆಚ್ಚಾಗಿಯೂ ಕಡಿಮೆ ಬೆಲೆಯುಳ್ಳದಕ್ಕೆ ಕಡಿಮೆಯಾಗಿಯೂ ಕನಿಷ್ಠಮೂಲ್ಯವುಳ್ಳದಕ್ಕೆ ಕನಿಷ್ಠವಾಗಿಯೂ ಅವಧಾನವನ್ನು ಕೊಡುತ್ತಾ ಬರಬೇಕು. ಇದಲ್ಲದೆ ಯಾರಿಗೆ ಯಾವ ವಿದ್ಯೆಯಲ್ಲಿ ವಿಶೇಷ ಯೋಗ್ಯತೆ ಇರುವುದೋ ಆತನು ಆ ವಿದ್ಯೆಯನ್ನೇ ಸಾಧಿಸುತ್ತಾ ಅದನ್ನು ಜೀವನೋಪಾಯವಾಗಿ ಇಟ್ಟುಕೊಳ್ಳಬೇಕು. ಪರಿಪೂರ್ಣವಾದ ಜೀವನಕ್ಕೆ ಸಾಧಕವಾದ ವಿದ್ಯೆಗಳಲ್ಲಿ ಪೂರ್ಣಶಿಕ್ಷಣವನ್ನು ಹೊಂದುವುದೂ ಅಂಥಾ ಜೀವನಕ್ಕೆ ದೂರದೂರ ಸಂಬಂಧವುಳ್ಳ ವಿದ್ಯೆಗಳಲ್ಲಿ ಯಥೋಚಿತವಾದ ಶಿಕ್ಷಣವನ್ನು ಹೊಂದುವುದೂ ಜನಸಾಮಾನ್ಯಕ್ಕೆ ಅಭೀಷ್ಟವೆಂದು ಹೇಳಬಹುದು.

ಈ ಪ್ರಮಾಣಕ್ಕನುಸಾರವಾಗಿ ವಿದ್ಯಾಭ್ಯಾಸದ ಏರ್ಪಾಟನ್ನು ಮಾಡುವಾಗ

ಕೆಲವು ಅಲೋಚನೆಗಳು ನಮಗೆ ತೋರದೆ ಇರಲಾರವು. ಏನೆಂದರೆ, ಪೂರ್ಣ ಜೀವನಕ್ಕೆ ಸಹಾಯವಾಗುವ ವಿದ್ಯೆಗಳ ಉಪಯೋಗವು ಅವಶ್ಯಕವಾಗಿರಬಹುದು. ಇಲ್ಲವೆ ಆಗಂತುಕವಾಗಿರಬಹುದು. ಇದಲ್ಲದೆ ವಿದ್ಯೆಗಳಲ್ಲಿ ಕೆಲವು ಸಹಜಮೂಲ್ಯ ವುಳ್ಳವಾಗಿಯೂ ಕೆಲವು ಸಹಜಕಲ್ಪ ಎಂದರೆ ಸಹಜವೆಂದು ತೋರುವ ಮೂಲ್ಯ ವುಳ್ಳವಾಗಿಯೂ ಬೇರೆ ಕೆಲವು ಸಾಂಕೇತಿಕ ಮೂಲ್ಯವುಳ್ಳವಾಗಿಯೂ ಇರು ವುವು. ಉದಾಹರಣೆಗಳು :—ಪಾರ್ಶ್ವವಾಯುರೋಗವು ಹುಟ್ಟುವುದಕ್ಕೆ ಮೊದಲು ಜೋಮೂ ಚಳಕೂ ತೋರಿಕೊಳ್ಳುವುವು, ನೀರಿನಲ್ಲಿ ಜಲಿಸುತ್ತಿರುವ ವಸ್ತುವಿಗೆ ಉಂಟಾಗುವ ತಡೆಯು ವೇಗದವರ್ಗಕ್ಕನುಸಾರವಾಗಿ ಬದಲಾಯಿಸುವುದು, ಬ್ಲೋರಿನ್ ಎಂಬ ವಸ್ತು ವಿಷಘ್ನವಾದುದು,—ಈ ವಿಷಯಗಳು ಮತ್ತು ಶಾಸ್ತ್ರಸಾಮಾ ನ್ಯತತ್ವಗಳು ಸಹ ಸಹಜವಾದ ಬೆಲೆಯುಳ್ಳವಾಗಿರುವುವು. ಈಗ ಇವು ಮಾನುಷ ಕಾರ್ಯಕ್ಕೆ ಎಂಥಾ ಸಂಬಂಧವನ್ನು ತೋರಿಸುವುವೋ ಅಂಥಾ ಸಂಬಂಧವನ್ನೇ ಇನ್ನು ಹತ್ತುಸಾವಿರ ವರ್ಷಗಳಾದ ಒಳಕೆಲೂ ತೋರಿಸುವುವು.

ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳ ಪರಿಚಿತಿಯಿಂದ ನಮಗೆ ಇಂಗ್ಲಿಷಿನಲ್ಲಿ ಉಂಟಾಗುವ ಅಧಿಕ ಪಾಂಡಿತ್ಯವು ಸಹಜಕಲ್ಪವಾದ ಬೆಲೆಯುಳ್ಳದೆಂದು ಹೇಳಬ ಹುದು. ಈ ಬೆಲೆಯು ಇಂಗ್ಲಿಷ್ ಬಲ್ಲವರಿಗೂ ಮತ್ತು ಲ್ಯಾಟಿನ್ ಗ್ರೀಕ್ ಭಾಷೆ ಗಳಿಂದುಂಟಾದ ಬೇರೆ ಬೇರೆ ಭಾಷೆಗಳನ್ನಾಡುವ ಇತರ ಜಾತಿಯವರಿಗೂ ಮಾತ್ರ ಇರುವುದು. ಆದರೆ ಅವರ ಭಾಷೆಗಳಿರುವವರೆಗೆ ಮಾತ್ರ ಇದು ಇರುವುದೇ ಹೊರತು ಆಮೇಲೆ ಇಲ್ಲ. ಮತ್ತು ನಮ್ಮ ಪಾಠಶಾಲೆಗಳಲ್ಲಿ ಕಲಿಸುವ ಚರಿತ್ರೆ ಎಂಬ ಹೆಸ ರನ್ನು ಪಹರಿಸಿರುವ ವಿದ್ಯೆಗೆ ಎಂದರೆ ಬರೀ ಹೆಸರುಗಳು ತಾರೀಕುಗಳು ಮತ್ತು ಗತಿ ಸಿದ ನಿರರ್ಥಕವಾದ ಸಂಗತಿಗಳು—ಇವುಗಳ ಪಾಠಕ್ಕೆ ಸಾಂಕೇತಿಕವಾದ ಬೆಲೆ ಮಾತ್ರ ಇರುವುದು. ಇಂಥಾ ವಿದ್ಯೆಗೂ ನಮ್ಮ ಕಾರ್ಯಗಳಿಗೂ ಅತಿದೂರ ಸಂಬಂ ಧಗಳು ಕೂಡ ಇಲ್ಲ. ಇದನ್ನರಿಯದಿದ್ದರೆ ಜನರು ಮಾಡಿದ ಪರಿಹಾಸ್ಯವನ್ನು ತಪ್ಪಿ ಸಿಕೊಳ್ಳುವುದಕ್ಕೆ ಮಾತ್ರ ಇದು ಪ್ರಯೋಜನವಾಗಿರುವುದು. ಆದರೆ ಸರ್ವಕಾಲ ದಲ್ಲಿಯೂ ಸರ್ವರಿಗೂ ಉಪಯುಕ್ತವಾದ ವಿಷಯಗಳು ಕೆಲವು ಕಾಲದವರೆಗೆ ಕೆಲ ವರಿಗೆ ಮಾತ್ರ ಉಪಯುಕ್ತವಾದ ವಿಷಯಗಳಿಗಿಂತ ಗೌರವವಾದುವೆಂದೂ ಮತ್ತು ಒಂದು ಪದ್ಧತಿ ಇರುವತನಕ ಕೆಲವರಿಗೆ ಮಾತ್ರ ಉಪಯುಕ್ತವಾದ ವಿಷಯಗಳಿ ಗಿಂತ ಅತ್ಯಧಿಕವಾಗಿ ಗೌರವವಾದುವೆಂದೂ ಎಲ್ಲರೂ ಒಪ್ಪಿಕೊಳ್ಳಬೇಕು. ಆದು

ದರಿಂದ ಯೋಗ್ಯವಾದ ವಿದ್ಯಾಭ್ಯಾಸದ ಏರ್ಪಾಟನ್ನು ಮಾಡುವಾಗ ಸಹಜಕಲವಾದ ಅಥವಾ ಸಾಂಕೇತಿಕವಾದ ಬೆಲೆಯುಳ್ಳ ವಿದ್ಯೆಗಳಿಗೆ ಪ್ರಥಮಸ್ಥಾನವನ್ನು ಕೊಡದೆ ಸಹಜಮೂಲ್ಯವುಳ್ಳ ವಿದ್ಯೆಗಳಿಗೇ ಅಂಥಾ ಸ್ಥಾನವನ್ನು ಕೊಡಬೇಕು.

ಇನ್ನೊಂದು ವಿಷಯವನ್ನು ಪರ್ಯಾಲೋಚಿಸಬೇಕು. ಅದೇನೆಂದರೆ, ವಿದ್ಯಾರ್ಜನೆಯ ಪ್ರಯೋಜನವು ಎರಡುವಿಧವಾಗಿರುವುದು. ಅದರಿಂದ ಪಾಂಡಿತ್ಯವೂ ನೀತಿಯೂ ಉಂಟಾಗುವುವು. ಬುದ್ಧಿ ವ್ಯವಸಾಯವು ಪಾಂಡಿತ್ಯ ಅಥವಾ ವಿಜ್ಞಾನವೆನಿಸುವುದು. ನಡತೆಯನ್ನು ಸರಿಪಡಿಸಿಕೊಳ್ಳುವುದು ನೀತಿ ಅಥವಾ ನಯವೆನಿಸುವುದು. ಪರಿಪೂರ್ಣ ಜೀವನಸಾಧನೆಗೆ ವಿದ್ಯಾರ್ಜನೆಯಿಂದುಂಟಾಗುವ ಈ ಎರಡು ವಿಧವಾದ ಪ್ರಯೋಜನಾಂಶಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಹೀಗೆ ಜೀವನದ ವಿವಿಧಕಾರ್ಯಗಳು, ಅವುಗಳಲ್ಲಿ ಹೆಚ್ಚು ಗೌರವವಾದುವು, ಗೌರವದಲ್ಲಿ ಕಡಿಮೆಯಾದುವು, ಈ ಕಾರ್ಯಗಳ ಸಾಧನಕ್ಕೆ ಬೇಕಾದ ವಿದ್ಯೆಗಳು, ಅವುಗಳ ಮೂರುವಿಧವಾದ ಬೆಲೆಗಳು, ಆ ವಿದ್ಯೆಗಳಿಂದುಂಟಾಗುವ ಪಾಂಡಿತ್ಯ ಮತ್ತು ನಯ,—ಈ ಸಾಮಾನ್ಯ ವಿಷಯಗಳನ್ನು ಪರ್ಯಾಲೋಚಿಸಿ ಪಾಠದ ಪಟ್ಟಿಯನ್ನು ವಿವೇಚನ ಮಾಡತಕ್ಕದ್ದು.

ಪುಣ್ಯವಶಾತ್ ಪ್ರತ್ಯಕ್ಷಾತ್ಮರಕ್ಷಣಕ್ಕೆ ಸಾಧಕವಾದ ಅತಿ ಮುಖ್ಯವಾದ ವಿದ್ಯೆಯು ನಮಗೆ ಆಗಲೇ ಬಹಳಮಟ್ಟಿಗೆ ಒದಗಿಸಲ್ಪಟ್ಟಿದೆ. ಅತ್ಯಂತ ಗೌರವವಾದ ಆ ವಿದ್ಯೆಯು ನಮ್ಮ ಪ್ರಮಾದಕ್ಕೆ ಗುರಿಯಾಗಬಾರದೆಂದು ಪ್ರಕೃತಿಯು ಅದನ್ನು ತಾನೇ ವಹಿಸಿಕೊಂಡಿರುವುದು. ಇನ್ನೂ ದಾದಿಯು ಕಂಕುಳಲ್ಲಿರುವಾಗಲೇ ಮಗುವು ಗುರುತಿಲ್ಲದವರನ್ನು ಕಂಡು ಅಳುವುದರಿಂದಲೂ ಮುಖವನ್ನಡಗಿಸಿಕೊಳ್ಳುವುದರಿಂದಲೂ, ಹಾನಿಯನ್ನುಂಟುಮಾಡುವಾಗ ಅಗೋಚರವಾದ ವಸ್ತುವಿನಿಂದ ತಪ್ಪಿಸಿಕೊಂಡು ಭದ್ರತೆಯನ್ನು ಹೊಂದಲುಪಯುಕ್ತವಾದ ಅಗತಾನೇ ಉದಯಿಸುತ್ತಿರುವ ತನ್ನ ಸಹಜಬುದ್ಧಿಯನ್ನು ಪ್ರಕಾಶಪಡಿಸುವುದು. ನಡೆದಾಡಲು ಸಮರ್ಥವಾದ ಬಳಿಕ ಮಗುವು, ಅಪರಿಚಿತವಾದ ನಾಯಿಯು ಹತ್ತರ ಬಂದಾಗ ಹೆದರಿಕೊಳ್ಳುವುದರಿಂದಲೂ ಭಯಾನಕವಾದ ವಸ್ತುವನ್ನು ನೋಡಿ ಅಥವಾ ಶಬ್ದವನ್ನು ಕೇಳಿ ಕಿರುಚಿಕೊಂಡು ತಾಯಿಯ ಬಳಿಗೆ ಓಡಿಬರುವುದರಿಂದಲೂ, ತನ್ನ ಈ ಸಹಜ ಬುದ್ಧಿಯು ವೃದ್ಧಿಹೊಂದುತ್ತಿರುವುದನ್ನು ತೋರಿಸುವುದು. ಇದಲ್ಲದೆ ಮಗುವು ಪ್ರತ್ಯಕ್ಷಾತ್ಮರಕ್ಷಣಕ್ಕೆ ಸಾಧಕವಾದ ವಿಜ್ಞಾನವನ್ನು ಪ್ರತಿ ಗಂಟೆಯಲ್ಲಿಯೂ ಸಂಪಾದಿಸು

ವುದರಲ್ಲಿ ಉದ್ಯುಕ್ತವಾಗಿರುವುದು. ಬೀಳದಂತೆ ಶರೀರವನ್ನು ಸಮತೂಕದಲ್ಲಿಟ್ಟು ಕೊಳ್ಳುವುದು; ವಸ್ತುಗಳು ಶರೀರಕ್ಕೆ ತಗಲದಂತೆ ತನ್ನ ಚಲನೆಗಳನ್ನು ಸರಿಪಡಿಸಿಕೊಳ್ಳುವುದು, ಯಾವ ವಸ್ತುಗಳು ಗಟ್ಟಿಯಾಗಿರುವುವು, ಮತ್ತು ಬಡಿದರೆ ಗಾಯಮಾಡುವುವು, ಯಾವ ಪದಾರ್ಥಗಳು ಭಾರವಾಗಿರುವುವು ಮತ್ತು ಮೈಮೇಲೆ ಬಿದ್ದರೆ ಬಾಧೆಯನ್ನುಂಟುಮಾಡುವುವು, ಯಾವ ವಸ್ತುಗಳು ತನ್ನ ಭಾರವನ್ನು ತಡೆಯುವುವು ಮತ್ತು ಯಾವುವು ತಡೆಯಲಾರವು, ಬೆಂಕಿ ಮತ್ತು ಶಸ್ತ್ರಾಸ್ತ್ರಗಳಿಂದುಂಟಾಗುವ ನೋವು—ಇವನ್ನೂ ಮತ್ತು ವಿಪತ್ತುಗಳನ್ನೂ ಮರಣವನ್ನೂ ತಪ್ಪಿಸಿಕೊಳ್ಳಲು ಅವಶ್ಯಕವಾಗಿ ಬೇಕಾಗುವ ಇತರ ಸಂಗತಿಗಳನ್ನೂ ಮೆಗುವು ಸರ್ವದಾ ಕಲಿಯುತ್ತಿರುವುದು.

ಕೆಲವು ವರ್ಷಗಳಾದ ಬಳಿಕ ಹುಡುಗನು ಓಡುವುದರಲ್ಲಿಯೂ ಹತ್ತುವುದರಲ್ಲಿಯೂ ಹಾರುವುದರಲ್ಲಿಯೂ ದೇಹಬಲವನ್ನೂ ಬುದ್ಧಿಚಮತ್ಕಾರವನ್ನೂ ಹೊರಪಡಿಸುವ ಆಟಗಳಲ್ಲಿಯೂ ತನ್ನ ಶಕ್ತಿಸಾಹಸಗಳನ್ನು ಪಯೋಗಿಸುವನು. ಇಂಥಾ ಕಾರ್ಯಗಳು ಆತನ ಮಾಂಸಖಂಡಗಳನ್ನು ದೃಢಪಡಿಸಿ ಗ್ರಹಣಶಕ್ತಿಯನ್ನು ಚುರುಕು ಮಾಡಿ ವಿಚಾರಶಕ್ತಿಯನ್ನು ವೃದ್ಧಿಗೊಳಿಸಿ, ಸುತ್ತಮುತ್ತಲಿರುವ ವಸ್ತುಗಳಿಂದಲೂ ಅವುಗಳ ಚಲನೆಗಳಿಂದಲೂ ಬಾಧೆಯುಂಟಾಗದಂತೆ ದೇಹವನ್ನು ರಕ್ಷಿಸಿಕೊಳ್ಳಲಿಕ್ಕೂ ಜೀವಿತಕಾಲದಲ್ಲಿ ಯಾವಾಗಲಾದರೂ ಹೆಚ್ಚಿನ ಅಪಾಯಗಳು ಸಂಭವಿಸಿದರೆ ಅವುಗಳಿಂದ ತಪ್ಪಿಸಿಕೊಳ್ಳಲಿಕ್ಕೂ ಆತನನ್ನು ಸಮರ್ಥನಾಗಿ ಮಾಡುವುವು. ಹೀಗೆ ಪ್ರಕೃತಿಯೇ ಚೆನ್ನಾಗಿ ಪರಾಮರಿಕೆ ತೆಗೆದುಕೊಳ್ಳುವುದರಿಂದ, ಈ ಪ್ರಧಾನವಿದ್ಯಾಭ್ಯಾಸ ವಿಷಯದಲ್ಲಿ ನಾವು ಹೆಚ್ಚಾಗಿ ಅವಧಾನ ಕೊಡುವ ಆವಶ್ಯಕವಿಲ್ಲ. ಆದರೆ ನಾವು ಮಾಡಬೇಕಾದ್ದೇನೆಂದರೆ, ಈ ವಿಷಯಕವಾದ ಅನುಭವವನ್ನೂ ಶಿಕ್ಷಣವನ್ನೂ ಹುಡುಗರು ನಿರಾತಂಕವಾಗಿ ಹೊಂದುವಂತೆ ತುಂಬಾ ಅವಕಾಶವನ್ನು ಕೊಡಬೇಕು. ಮೂಢರಾದ ಕೆಲವರು ಉಪಾಧ್ಯಾಯನಿಯರು ತಮ್ಮ ವಶದಲ್ಲಿರುವ ಹುಡುಗಿಯರು ಸ್ವೇಚ್ಛೆಯಾಗಿ ಶರೀರ ವ್ಯವಸಾಯರೂಪವಾದ ಆಟಪಾಟಗಳನ್ನಾಡದಂತೆ ತಡೆದು ಗಂಡಾಂತರಗಳಲ್ಲಿ ಅವರು ಸ್ವರಕ್ಷಣಮಾಡಿಕೊಳ್ಳಲು ಸಾಕಾದಷ್ಟು ಸಮರ್ಥರಾಗದಂತೆ ಮಾಡಿ ಪ್ರಕೃತಿಯ ಕಾರ್ಯಕ್ಕೆ ಪ್ರತಿಕೂಲಪಡಿಸುವರು. ಇಂಥಾ ಪ್ರತಿಕೂಲತೆಗೆ ಅವಕಾಶವಿಲ್ಲದಂತೆ ನಾವು ನೋಡಿಕೊಳ್ಳಬೇಕು.

ಪ್ರತ್ಯಕ್ಷಾತ್ಮರಕ್ಷಣಕ್ಕೆ ಸಂಬಂಧಿಸಿದ ಶಿಕ್ಷಣವೆಲ್ಲಾ ಇಷ್ಟೇ ಅಲ್ಲ. ಗಾಯ

ದಿಂದ ಮಾತ್ರವಲ್ಲದೆ ಇತರ ಕಾರಣಗಳಿಂದಲೂ ದೇಹಕ್ಕೆ ಹಾನಿಯೂ ಮರಣವೂ ಸಂಭವಿಸದಂತೆ ಅದನ್ನು ಕಾಪಾಡಿಕೊಳ್ಳಬೇಕು. ಶರೀರ ನಿಯಮಗಳನ್ನತಿಕ್ರಮಿಸಿ ರೋಗವನ್ನೂ ಅಕಾಲಮರಣವನ್ನೂ ತಂದುಕೊಳ್ಳಬಾರದು. ಪರಿಪೂರ್ಣಜೀವನವನ್ನು ಹೊಂದಬೇಕಾದರೆ, ಅಕಸ್ಮಾತ್ತಾದ ಮೃತ್ಯುವಿನಿಂದ ತಪ್ಪಿಸಿಕೊಳ್ಳುವುದು ಮಾತ್ರವಲ್ಲದೆ ಅವಿವೇಕವಾದ ನಡತೆಯಿಂದುಂಟಾಗುವ ಅಶಕ್ತಿಯಿಂದಲೂ ನಾಶದಿಂದಲೂ ದೇಹವನ್ನು ರಕ್ಷಿಸಿಕೊಳ್ಳಬೇಕು. ಆರೋಗ್ಯವೂ ಬಲವೂ ಇಲ್ಲದೆ ಜೀವನೋಪಾಯ ಮಕ್ಕಳಪೋಷಣ ಪೌರಕಾರ್ಯ ಮತ್ತು ಇತರ ಕೆಲಸಗಳು ಜರುಗುವುದು ಅಸಾಧ್ಯವಾದುದರಿಂದ, ಈ ಎರಡನೆಯ ಬಗೆಯ ಪ್ರತ್ಯಕ್ಷಾತ್ಮರಕ್ಷಣಕ್ಕೆ ಸಾಧಕವಾದ ವಿಜ್ಞಾನವು ಬಹಳ ಶ್ರೇಷ್ಠವಾಗಿಯೇ ಇರುವುದು. ಮತ್ತು ಈ ಆತ್ಮರಕ್ಷಣ ಕಾರ್ಯವು ಮೇಲೆ ಹೇಳಿದ ಒಂದನೆಯಬಗೆಯ ರಕ್ಷಣಕಾರ್ಯಕ್ಕೆ ಗೌರವದಲ್ಲಿ ಸ್ವಲ್ಪ ಕಡಿಮೆಯಾಗಿರುವುದೇ ಹೊರತು ಮಿಕ್ಕ ಎಲ್ಲಾ ಕಾರ್ಯಗಳಿಗಿಂತಲೂ ಬಹು ಶ್ರೇಷ್ಠವಾಗಿಯೇ ಇರುವುದು. (ಸಶೇಷ) S. V.

ಬಲಾತ್ಕಾರವಾದ ವಿದ್ಯಾಭ್ಯಾಸ.

ಮಕ್ಕಳಿಗೆ ಅನ್ನೋದಕಗಳನ್ನೂ ಬಟ್ಟೇಬರೆಗಳನ್ನೂ ಕೊಟ್ಟು ಸಾಕುವುದು ಎಷ್ಟು ಆವಶ್ಯಕವೋ ಯುಕ್ತಾಯುಕ್ತ ಜ್ಞಾನವನ್ನು ಉಂಟುಮಾಡುವುದು ಅಷ್ಟು ಆವಶ್ಯಕವಾದುದು. ಎಲ್ಲಾ ದೇಶಗಳಲ್ಲಿಯೂ ಪೊಲೀಸಿನವರು, ಕೋರ್ಟುಗಳು, ಕಛೇರಿಗಳು, ಜೈಲುಗಳು, ಇವುಗಳೆಲ್ಲಾ ಇರುವುದು ಎಲ್ಲರಿಗೂ ಅನುಭವಸಿದ್ಧವಾಗಿಯೇ ಇರುವುದು. ಇವುಗಳು ಇರುವುದಕ್ಕೆ ಕಾರಣವೇನು? ಮಕ್ಕಳಿಗೆ ತಂದೆತಾಯಿಗಳು ದೇಹಪೋಷಣೆಯನ್ನು ಹೇಗೆ ಮಾಡುವರೋ ಹಾಗೆಯೇ ಯುಕ್ತಾಯುಕ್ತ ವಿಚಾರವನ್ನು ಬೋಧಿಸಿ, ಯುಕ್ತವಾದವುಗಳನ್ನು ಮಾಡುವಂತೆಯೂ, ಅಯುಕ್ತವಾದವುಗಳನ್ನು ಬಿಡುವಂತೆಯೂ ಕಲಿಸುವುದೂ ತಂದೆತಾಯಿಗಳಿಗೆ ಕರ್ತವ್ಯವು. ಈ ಕರ್ತವ್ಯವನ್ನು ಮಾಡದೇ ಇರುವುದು ದೊಡ್ಡಪಾತಕ. ಈ ಪಾತಕಕ್ಕೆ ಶಿಕ್ಷೆ ಇಲ್ಲದೇ ಹೋಗುವುದಿಲ್ಲ. ಮಕ್ಕಳ ವಿದ್ಯಾಭ್ಯಾಸವನ್ನು ಉಪೇಕ್ಷೆ ಮಾಡತಕ್ಕವರಿಗೆ ಶಿಕ್ಷೆಯು ತಪ್ಪುವುದಿಲ್ಲ. ತಂದೆತಾಯಿಗಳಿಗೆ ಮಕ್ಕಳು ಬುದ್ಧಿಶಾಲಿಗಳಾಗಿಯೂ, ವಿವೇಕವುಳ್ಳವರಾಗಿಯೂ, ಯಶಸ್ವಿಗಳಾಗಿಯೂ ಆಗಬೇಕೆಂಬ ಆಭಿ

ಲಾಷೆಯು ಇದ್ದೇ ಇರುವುದು. ಹಾಗಾಗದೆ, ಅವರು ವಿದ್ಯಾವಿಹೀನರಾಗಿ ಸ್ವಶಕ್ತಿಯಿಂದ ಜೀವನವನ್ನು ಸಂಪಾದಿಸಿಕೊಳ್ಳುವುದಕ್ಕೆ ಇಲ್ಲದೆ, ಮಾಡಬಾರದ ಕೆಲಸಗಳನ್ನು ಮಾಡಿ, ಅನುಭವಿಸುವುದಕ್ಕೆ ದುಸ್ಸಹವಾದ ಫಲಗಳನ್ನು ಅನುಭವಿಸುವ ಸ್ಥಿತಿಗೆ ಒಂದರೆ ಅದು ತಂದೆತಾಯಿಗಳಿಗೆ ದೈವಿಕ ಶಿಕ್ಷೆಯಲ್ಲವೆ? ಈ ವಿಷಯಗಳನ್ನು ಜರ್ಮನಿ ದೇಶದವರು ಚೆನ್ನಾಗಿ ತಿಳಿದುಕೊಂಡು ಇರುವರು. ಓದುಬರಹಗಳನ್ನು ಮಾತ್ರವೇ ಅಲ್ಲದೆ, ಸ್ವಶಕ್ತಿಯಿಂದ ಬದುಕುವುದಕ್ಕೆ ಯಾವ ಯಾವ ವಿದ್ಯೆಗಳು ಅವಶ್ಯಕವಾಗಿರಬೇಕೋ ಅವುಗಳನ್ನೆಲ್ಲಾ ಸ್ತ್ರೀಪುರುಷರಿಬ್ಬರಿಗೂ ಬಾಲ್ಯದಿಂದಲೇ ಕಲಿಸುವುರು. ನಮ್ಮ ಇಂಡಿಯಾ ದೇಶದಲ್ಲಿ ಬಗೋಡಾದ ಮಹಾರಾಜರವರು ಅಲ್ಲಿನ ವಿದ್ಯಾಭ್ಯಾಸ ಕ್ರಮವನ್ನು ನೋಡಿ ತಿಳಿದುಕೊಂಡು ಬಂದು ಅವರ ದೇಶದಲ್ಲಿ ಬಲಾತ್ಕಾರವಾಗಿ ಸ್ತ್ರೀಪುರುಷರಿಬ್ಬರಿಗೂ ತಕ್ಕ ಏರ್ಪಾಡುಗಳನ್ನು ಮಾಡುತ್ತಲಿರುವರು. ಈ ವಿದ್ಯಾಭ್ಯಾಸವು ಉಪಕ್ರಮಿಸುವುದಕ್ಕೆ ಮುಂಚೆ ಗೌರ್ನಮೆಂಟಿನವರು ಇಂಥಾ ವಿದ್ಯಾಭ್ಯಾಸವನ್ನು ಮಾಡಿಸುವ ಪಾಠಶಾಲೆಗಳನ್ನು ಏರ್ಪಡಿಸಬೇಕು. ಹುಡುಗರಿಗೆ ಮಾತ್ರವೇ ಅಲ್ಲದೆ, ಹುಡುಗಿಯರಿಗೂ ಈ ವಿದ್ಯಾಭ್ಯಾಸವು ಕಡ್ಡಾಯವಾಗಿರುವಂತೆ ಮಾಡಲ್ಪಡಬೇಕು. ಹುಡುಗಿಯರಿಗೆ 7 ವರ್ಷಗಳಿಂದ 10 ವರ್ಷದವರಿಗೂ, ಹುಡುಗರಿಗೆ 7 ವರ್ಷದಿಂದ 12 ವರುಷದವರಿಗೂ ವಿದ್ಯಾಭ್ಯಾಸವು ಬಲಾತ್ಕಾರವಾಗಿರಬೇಕು. ಈ ವಿದ್ಯಾಭ್ಯಾಸವು ಮುಖ್ಯವಾಗಿ ಚೆನ್ನಾಗಿ ಓದುವುದು, ಬರೆಯುವುದು, ಲೆಖ್ಖಾಚಾರ ಇದಿಷ್ಟಿ ಕಡ್ಡಾಯವಾಗಿ ತಿಳಿಯುವಂತೆ ಮಾಡತಕ್ಕದ್ದಾಗಿರಬೇಕು. ಅದರಮೇಲೆ ಗೃಹಿಣೀಯರಾಗಿರುವುದಕ್ಕೆ ಬೇಕಾದ ವಿದ್ಯೆಗಳನ್ನು ಬಾಲೆಯರಿಗೂ ಜೀವಿಕೆಯನ್ನು ಸಂಪಾದಿಸುವುದಕ್ಕೆ ಬೇಕಾದ ವಿದ್ಯೆಗಳನ್ನು ಬಾಲಕರಿಗೂ ಕಲಿಸಬೇಕು. ಸ್ತ್ರೀಯರ ವಿಷಯದಲ್ಲಿ ಮನೆಕೆಲಸವನ್ನು ಮಾಡುವುದು, ಅಡಿಗೆ ಮಾಡುವುದು, ಆರೋಗ್ಯವಿಧಿಗಳನ್ನು ಆಚರಣೆಗೆ ತಂದುಕೊಳ್ಳುವುದು ಇವುಗಳಿಗೆ ಸಹಾಯಭೂತವಾದ ಎಲ್ಲಾ ವಿದ್ಯೆಗಳೂ ಹುಡುಗಿಯರಿಗೆ ಬೇಕಾದ ವಿದ್ಯೆಗಳು, ಇನ್ನೂ ಅವಕಾಶವಿದ್ದರೆ ಆರೋಗ್ಯಶಾಸ್ತ್ರದ ಜೊತೆಗೆ ಮಕ್ಕಳ ಪೋಷಣೆಯನ್ನು ಮಾಡುವ ವಿಧಾನವನ್ನು ಕೂಡಾ ಅವರಿಗೆ ಹೇಳಬಹುದು. ಹುಡುಗರಿಗೆ ಪ್ರೈಮರಿ ವಿದ್ಯಾಭ್ಯಾಸದ ಜೊತೆಯಲ್ಲಿಯೇ ಯಾರ್ಯಾರಿಗೆ ಯಾವ ಯಾವ ಕೈಗಾರಿಕೆಗಳಲ್ಲಿ ಆಸಕ್ತಿ ಕಾಣಬರುವುದೋ ಅಂಥಾ ಪ್ರತಿಭೆಯನ್ನೆಲ್ಲಾ ಶಕ್ತಿಯನ್ನು ಉಂಟುಮಾಡುವುದು ಬಹಳ ಆವಶ್ಯಕ.

ಗಾಯಕವಾಡಿ ಮಹಾರಾಜರವರು ಈ ವಿದ್ಯಾಭ್ಯಾಸದ ಮರ್ಮಗಳನ್ನು ತಿಳಿದುಕೊಂಡು ತಮ್ಮ ದೇಶೀಯರಿಗೆ ಸುಲಭವಾಗಿ ಪ್ರೈಮರಿ ಕಲಾಭ್ಯಾಸವು ಉಂಟಾಗುವಂತೆ ಏರ್ಪಾಡು ಮಾಡುತ್ತಲಿದಾರೆ. ಈ ತಿಂಗಳು 29 ನೇ ತಾ॥ ನಲ್ಲಿ ಕಲ್ಕತ್ತಾ ಕೈಗಾರಿಕೆ ಕಾರ್ಪರೇಸ್ ಸಭೆಯಲ್ಲಿ ಇವರು ಮಾಡುವ ಉಪನ್ಯಾಸದಿಂದ ಈ ದೇಶಸಂಚಾರದಿಂದ ಇವರು ತಿಳಿದುಕೊಂಡು ಬಂದಿರತಕ್ಕ ವಿಷಯಗಳನ್ನು ವ್ಯಕ್ತಗೊಳಿಸುವರು.

ವ್ಯಾಪಾರದ ವಿದ್ಯಾಭ

ಪಂಜಾಬ್ ದೇಶದಲ್ಲಿ ಜನಗಳಿಗೆ ವ್ಯಾಪಾರವನ್ನು ತಿಳಿಸುವುದಕ್ಕೆ ಕೆಲವು ಏರ್ಪಾಡುಗಳನ್ನು ಮಾಡಿರುವರು. ಒಳ್ಳೇ ಕೈಬರಹ, ವ್ಯಾಪಾರಕ್ಕೆ ಸಂಬಂಧಪಟ್ಟ ಲೆಖ್ಖಾಚಾರ, ಯಾವ ಯಾವ ದೇಶದಲ್ಲಿ ಯಾವ ಯಾವ ದಿನಸುಗಳು ಉತ್ಪತ್ತಿಯಾಗುವುವೋ ಅವುಗಳಿಗೆ ಸಂಬಂಧಪಟ್ಟ ಭೂಗೋಳ, ವ್ಯಾಪಾರದ ಲೆಖ್ಖಗಳನ್ನು ಇಡತಕ್ಕ ಕ್ರಮ, ಸಂಕ್ಷೇಪವಾದ ಬರವಣಿಗೆ, ಟೈಪುರೈಟಿಂಗ್ ಎಂಬ ಅಕ್ಷರವನ್ನು ಜೋಡಿಸುವುದು, ಇವೇ ಮೊದಲಾದ ವರ್ತಕಧರ್ಮಗಳೆಲ್ಲವೂ ಇಲ್ಲಿ ಬೋಧಿಸಲ್ಪಡುವುವು. ಈ ಶಿಕ್ಷೆಯು ಅನೇಕ ಹೈಸ್ಕೂಲುಗಳಲ್ಲಿ ಮಾಡಲ್ಪಡುತ್ತಲಿರುವುದು. ಅಮೃತಸರ್ ಎಂಬ ಪಟ್ಟಣದಲ್ಲಿ ಈ ವಿದ್ಯಾಭ್ಯಾಸವನ್ನು ಕ್ರಮವಾಗಿ ಮಾಡಿಸುವ ಸ್ಕೂಲು ಒಂದು ಪ್ರತಿಷ್ಠಿಸಲ್ಪಟ್ಟಿರುವುದು. ವ್ಯಾಪಾರ ಧರ್ಮಗಳನ್ನು ಸಮಗ್ರವಾಗಿ ಬೋಧಿಸುವುದಕ್ಕೆ ತಕ್ಕ ಯೋಗ್ಯತೆಯುಳ್ಳ ಪಾಠಕರನ್ನು ತಯಾರ್ಮಾಡುತ್ತಲಿರುವರು. ವ್ಯಾಪಾರ ವಿಷಯಗಳಲ್ಲಿಯೂ ಪ್ರೈಮರಿ ಪಾಠವೂ ಪೌಢಪಾಠವೂ ಇರುವುವು. ವಿಲಾಯಿತಿ ಮೊದಲಾದ ಸ್ಥಳಗಳಲ್ಲಿ ಪೌಢವಿದ್ಯಾಭ್ಯಾಸಕ್ಕೆ ಅವಕಾಶಗಳು ಬೇಕಾದಹಾಗೆ ಇರುವುವು. ಇಂಡಿಯಾ ದೇಶದಲ್ಲಿ ವ್ಯಾಪ್ಯಾರ ಧರ್ಮಗಳ ಒನಾಮಗಳು ಕೂಡಾ ಶಾಸ್ತ್ರವಿಧಿಗನುಸಾರವಾಗಿ ನಡೆಯುತ್ತಲಿಲ್ಲವಾದುದರಿಂದ ಈಗ ಸಧ್ಯಕ್ಕೆ ಪ್ರೈಮರಿ ವಿದ್ಯಾಭ್ಯಾಸವನ್ನು ಪಂಜಾಬ್ ದೇಶದಲ್ಲಿ ಉಪಕ್ರಮಿಸಿ ಇರುವರು. ಈ ಸಂಸ್ಥಾನದ ಬಾಲಕರಿಗೆ ಪ್ರೈಮರಿ ಕೈಗಾರಿಕೆಗಳನ್ನು ಕಲಿಸುವುದಕ್ಕೋಸ್ಕರ ನಮ್ಮ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರಾದ ಮೆ॥ ಭಾಭಾಸಾಹೇಬರವರನ್ನು ವಿಲಾಯಿತಿಗೆ ಕಳುಹಿಸಿ ಇದಾರೆ. ಅವರು ಅಲ್ಲಿಂದ ಬಂದು, ಈ ಕಲೆಗಳನ್ನು ಅಭ್ಯಾ

ಸಮಾಡಿಸುವ ಏರ್ಪಾಡು ಮಾಡಬಹುದು. ವ್ಯಾಪಾರದ ವಿಷಯದಲ್ಲಿಯೂ, ಜೊಂಗ ಳೂರಿನಲ್ಲಿ ಒಂದು ಪಾಠಶಾಲೆಯು ಏರ್ಪಾಡಾಗಿರುವುದು. ಗೌರ್ನಮೆಂಟಿನವರು ಇದಕ್ಕೂ ಸಹಾಯ ಮಾಡುತ್ತಲಿರುವರು. ಮೈಸೂರು ಹಾರ್ಡಿವಿಕ್ ಕಾಲೇಜಿನ ಲ್ಲಿಯೂ ವ್ಯಾಪಾರಕ್ಕೆ ಸಾಧಕವಾದ ಕೆಲವು ಅಂಶಗಳನ್ನು ಅಭ್ಯಾಸ ಮಾಡಿಸುತ್ತಲಿ ರುವರು. ಇದಕ್ಕೂ ಗೌರ್ನಮೆಂಟಿನವರ ಸಹಾಯವು ಸಲ್ಲುತ್ತಿರುವುದು. ವ್ಯಾಪಾ ರದಲ್ಲಿ ಪ್ರೈಮರಿ ವಿದ್ಯಾಭ್ಯಾಸವು ಈ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ರೂಢಿಗೆ ಬಂದರೆ ಕ್ರಮಕ್ರಮವಾಗಿ ಪ್ರೌಢವಿದ್ಯಾಭ್ಯಾಸಕ್ಕೂ ಅವಕಾಶವಾಗುವುದು.



ಕೈ ಬರಹ.

ಮಾತುಗಳ ಉದ್ದೇಶವು ಶಬ್ದಗಳನ್ನು ಉಚ್ಚರಿಸುವುದರಿಂದ ಒಬ್ಬರ ಅಭಿಪ್ರಾ ಯವನ್ನು ಮತ್ತೊಬ್ಬರಿಗೆ ತಿಳಿಸತಕ್ಕುದಾಗಿರುವುದು. ಹಾಗೆಯೇ ಬರಹದ ಉದ್ದೇ ಶವು ಬರೆಯುವುದರ ಮೂಲಕ ಬರೆದವರ ಅಭಿಪ್ರಾಯವು ಯಾರಿಗೆ ಬರೆಯುತ್ತಾ ರೋ ಅವರಿಗೆ ತಿಳಿಯುವಂತೆ ಮಾಡುವುದಾಗಿರುವುದು. ಹೀಗೆ ಇರಬೇಕಾದರೆ ಬರವಣಿಗೆಯು ಹೇಗಿರಬೇಕು. ಓದತಕ್ಕವನು ಸುಲಭವಾಗಿ ಓದಿ ತಿಳಿದುಕೊ ಳ್ಳುವಂತೆ ಬರೆಯುವುದೇ ಬರವಣಿಗೆಯ ಮುಖ್ಯಲಕ್ಷಣ. ಈ ವಿಷಯದಲ್ಲಿ ವಿದ್ಯಾ ರ್ಥಿಗಳು ಎಷ್ಟು ಶ್ರದ್ಧೆಯುಳ್ಳವರಾಗಿರಬೇಕೋ ಅಷ್ಟು ಶ್ರದ್ಧೆಯುಳ್ಳವರಾಗಿರುವು ದಿಲ್ಲ. ಅವಯವ ಸೌಷ್ಟವಗಳುಳ್ಳ ಸ್ತ್ರೀಪುರುಷರು ಹೇಗೆ ಪ್ರೀತಿಗೆ ಪಾತ್ರರಾಗು ತ್ತಾರೋ ಹಾಗೆಯೇ ಒಳ್ಳೇ ಕೈಬರಹವೂ ಕೂಡ ಓದತಕ್ಕವರ ಮನಸ್ಸಿಗೆ ಬಹಳ ಸಂತೋಷ ಉಂಟುಮಾಡುವುದು. ಈಕಾಲದಲ್ಲಿ ಅನೇಕರಿಗೆ ಭಾರೀ ಪರೀಕ್ಷೆಗ ಳನ್ನು ಕೊಡುವುದರಲ್ಲಿ ಇರುವ ಶ್ರದ್ಧೆಯು ಒಳ್ಳೇ ಕೈಬರಹವನ್ನು ಬರೆಯುವುದರಲ್ಲಿ ಇರುವುದಿಲ್ಲ. ಇದು ಬಹಳ ಶೋಚನೀಯವಾದುದು. ಭಾರೀ ಪರೀಕ್ಷೆಗಳನ್ನು ಕೊಟ್ಟವರು ಅನೇಕ ಸಂದರ್ಭಗಳಲ್ಲಿ ತಾವು ಕೊಟ್ಟ ಪರೀಕ್ಷೆಗಳಿಗೆ ಅನುರೂಪ ವಾದ ಅಧಿಕಾರವನ್ನು ಹೊಂದುವುದು ಅಸಾಧ್ಯವಾಗುತ್ತದೆ. ಒಳ್ಳೇ ಕೈಬರಹ ವನ್ನು ಬರೆಯತಕ್ಕವರಿಗೆ, ಸರಕಾರದ ಉದ್ಯೋಗಗಳಿಗೆ ಮಾತ್ರವೇ ಅಲ್ಲದೆ ಸಾವು

ಕಾರೀ ಉದ್ಯೋಗಗಳಿಗೆ ಹೋದಾಗ್ಯೂ ಅಲ್ಲಿಕೂಡ ಸುಲಭವಾದ ಜೀವಿಕೆಯು ಸಿಕ್ಕುವುದು. ಒಳ್ಳೆ ಕೈಬರಹವನ್ನು ಬರೆಯುತಕ್ಕುದು ಕಷ್ಟವೆಂದು ಬಹುಜನರು ತಿಳಿದುಕೊಂಡಿರುವರು. ಈ ತಿಳುವಳಿಕೆಯು ಅಜ್ಞಾನಜನ್ಯವಾದುದು. ಹುಟ್ಟಿದ ಅಕ್ಷರಗಳನ್ನು ಹುಟ್ಟಿದಂತೆಯೇ ಬರೆಯುತ್ತಾ, ಬರೆಯುವುದರಲ್ಲಿ ಸ್ವಲ್ಪಸ್ವಲ್ಪವಾಗಿ ವೇಗವಾಗಿ ಬರೆಯುವುದನ್ನು ಅಭ್ಯಾಸಮಾಡುತ್ತಾ ಬೆರಳುಗಳು ಹತೋಟಿಗೆ ಬರುವುದಕ್ಕೆ ಮುಂಚೆಯೇ ಜೋರಾಗಿ ಬರೆಯುವುದನ್ನು ಬಿಟ್ಟು ಬೆರಳುಗಳನ್ನು ಬುದ್ಧಿಯ ಹತೋಟಿಯಲ್ಲಿರುವಂತೆ ಮಾಡಿಕೊಂಡು ಬರೆಯುತ್ತಾ ಬಂದರೆ ಒಂದೆರಡು ವರುಷಗಳೊಳಗಾಗಿ ಮುಕ್ತಾಫಲಗಳಂತೆ ಅಕ್ಷರಗಳನ್ನು ಬರೆಯುವುದು ಬಹಳ ಸುಲಭ. ಈಗ ವಿದ್ಯಾವಂತರಿಗೆ ಇರುವ ಗಿರಾಕಿಗಿಂತಲೂ ಲಕ್ಷಣವಾಗಿ ಬರೆಯತಕ್ಕವರಿಗೆ ಹೆಚ್ಚಾದ ಗಿರಾಕಿಯು ಇರುವುದರಿಂದ ವಿದ್ಯಾರ್ಥಿಗಳೆಲ್ಲಾ ಜೀವಿಕೆಯನ್ನು ಸಂಪಾದಿಸಿಕೊಳ್ಳುವುದಕ್ಕೆ ಅತ್ಯಂತ ಸಾಧಕವಾದ ಕೈಬರಹವನ್ನು ಚೆನ್ನಾಗಿ ಮಾಡಿಕೊಳ್ಳುವುದು ಬಹಳ ಆವಶ್ಯಕ. ಅವರ ಜೊತೆಗೆ ಯಾವಭಾಷೆಯು ಬರಹವನ್ನು ಬರೆಯುತ್ತೀವೆಯೊ ಆ ಭಾಷೆಯ ಅಕ್ಷರಲಕ್ಷಣದ ಮರ್ಯಾದೆಗಳೂ ಕೂಡ ತಿಳಿದುಕೊಳ್ಳಲ್ಪಡಬೇಕು. ಈ ಮರ್ಯಾದೆಗಳೆಲ್ಲಾ ಆಯಾ ಭಾಷೆಯ ವ್ಯಾಕರಣಗಳಲ್ಲಿ ಗರ್ಭೀಕರಿಸಲ್ಪಟ್ಟಿರುವುವು. ಒಳ್ಳೇ ಕೈಬರಹವಿರಬೇಕಾದರೆ ಸ್ವಲ್ಪಮಟ್ಟಿಗೆ ವ್ಯಾಕರಣ ಜ್ಞಾನವೂ ಸ್ವಲ್ಪಮಟ್ಟಿಗೆ ಭಾಷಾಜ್ಞಾನವೂ ಇದ್ದರೆ ಸಾಕು. ಪ್ರಥಮತಃ ಎಲ್ಲಾ ವಿದ್ಯಾರ್ಥಿಗಳೂ ಈ ವಿಷಯದಲ್ಲಿ ಶ್ರದ್ಧೆಯಿಂದ ಕೆಲಸಮಾಡಿ ಒಳ್ಳೆ ಬರಹವನ್ನು ಬರೆಯುತಕ್ಕ ಶಕ್ತಿ ಸಂಪಾದಿಸಿಕೊಂಡರೆ ಅನಂತರ ಮಾಡತಕ್ಕ ವಿದ್ಯಾಭ್ಯಾಸಕ್ಕೂ ಇದು ಸಹಾಯವಾಗುವುದು. ವಿದ್ಯಾಭ್ಯಾಸವು ಪೂರೈಸುವುದಕ್ಕೆ ಮುಂಚೆಯೇ ನಮ್ಮ ಜೀವನವನ್ನು ನಾವೇ ಸಂಪಾದಿಸಿಕೊಳ್ಳಬೇಕಾದರೆ ಇದಕ್ಕೂ ಒಳ್ಳೇ ಕೈಬರಹವು ಸಾಧಕವಾಗುವುದು.

ಭೂಮಿಯ ಚಲನೆ.

ಭೂಕಂಪವಾದ ತರುವಾಯ ಈ ಕಂಪದಿಂದ ಭೂಮಿಯಲ್ಲಿ ಆಗತಕ್ಕ ಬಿರಕುಗಳಿಂದ ಈ ಕಂಪಕ್ಕೆ ಉಪಕ್ರಮವು ಎಲ್ಲಿ ಆಗಿರುವುದೋ ಅದನ್ನು ಗೊತ್ತುಮಾಡ

ಬಹುದು. ಸಾಮಾನ್ಯವಾಗಿ ಭೂಮಿಯ ಒಳಗೆ 30 ಮೈಲಿಗಳಲ್ಲಿ ಭೂಮಿಯ ಒಳಗಿನ ಶಾಖಕ್ಕೂ ಅಲ್ಲಿನ ಜಲಕ್ಕೂ ಸಂಬಂಧ ಉಂಟಾಗಿ ಆವುಗಳು ಆವಿಯಾಗಿ ಪರಿಣಮಿಸುವುದರಿಂದ ಭೂಕಂಪ ಉಂಟಾಗುವುದು. ಹೀಗೆ ಕಂಪ ಉಂಟಾಗಬೇಕಾದರೆ ಭೂಮಿಯ ಒಳಗೆ ಆವಿಯು ಸೇರುವುದಕ್ಕೆ ಅವಕಾಶವು ಇರಬೇಕು. ಸಾಮಾನ್ಯವಾಗಿ ಪರ್ವತಗಳಿರತಕ್ಕ ಪ್ರಾಂತ್ಯಗಳೇ ಇಂಥಾ ಅವಕಾಶವುಳ್ಳ ಸ್ಥಳಗಳು. ಅಜೋರ್ಸ ದ್ವೀಪಗಳಿಂದ ಆಸ್ಯಾಖಂಡದ ಮಧ್ಯಭಾಗದ ವರಿಗೂ ಇಂಥಾ ಅವಕಾಶವುಳ್ಳ ಪ್ರಾಂತ್ಯಗಳು ವಿಶೇಷವಾಗಿರುವುವು. ಅಮೆರಿಕಾ ಖಂಡದಲ್ಲಿ ಬಾಟಮಾಲಾ ದೇಶ ಮೊದಲ್ಗೊಂಡು ಈಕ್ವೆಡಾರ್, ಪೆರೂ, ಚಿಲ್ಲಿ ಪ್ರಾಂತ್ಯಗಳ ವರಿಗೂ ಭೂಕಂಪಕ್ಕೆ ಪರ್ವತ ಪ್ರಾಂತ್ಯಗಳು ಜನ್ಮಸ್ಥಾನವಾಗಿರುವುವು. ಲಿಸ್‌ಬಿ ಪಟ್ಟಣದಲ್ಲಿ ಉಂಟಾದ ಭೂಕಂಪವು ಯೂರೊಪ್ ಖಂಡದ ವಿಸ್ತೀರ್ಣವು ಎಷ್ಟಿರುವುದೋ ಅಷ್ಟು ದೂರದ ವರೆಗೂ ಪ್ರತಿಯೊಂದು ಪ್ರಾಂತ್ಯವನ್ನೂ ವ್ಯಾಪಿಸಿತ್ತು. 1868 ನೇ ಇಸವಿಯ ಆಗಸ್ಟ್ 13 ನೇ ತಾರೀಖಿನಲ್ಲಿ ಅಮೆರಿಕಾ ಖಂಡದಲ್ಲಿ ಒಂದು ಭೂಕಂಪವು ಉಂಟಾಯಿತು. ಇದು ಪೆರೂ ಎಂಬ ಪಟ್ಟಣದಲ್ಲಿ ಉಪಕ್ರಮವಾದಾಗ್ಗೂ ಇದು 2000 ಮೈಲಿಗಳ ವರಿಗೂ ವ್ಯಾಪಿಸಿತ್ತು. ಈ ಕಂಪವಾದ ಕೂಡಲೆ, ಇದು ಯಾವ ಪ್ರಾಂತ್ಯದಲ್ಲಿ ವ್ಯಾಪಿಸಿತ್ತೋ ಅದರ ಮೇಲ್ಭಾಗವನ್ನು ಅಜಮಾಯಿಷಿ ಮಾಡಿದಾಗ ಕೆಲವು ಭಾಗಗಳು ಕುಸೀಬಿದ್ದು ಅಗಾಧವಾದ ಹಳ್ಳವಾಗಿತ್ತು. ಇನ್ನು ಕೆಲವು ಭಾಗಗಳು ಮೇಲಕ್ಕೆ ಎದ್ದು ಅತ್ಯುನ್ನತವಾದ ಪರ್ವತಗಳಾದುವು. ಭೂಮಿಯ ಮೇಲ್ಭಾಗದ ಸ್ವರೂಪವೇ ಬದಲಾಯಿಸಿತು. ಸಮುದ್ರ ತೀರದಲ್ಲಿ ಆಗತಕ್ಕ ವ್ಯತ್ಯಾಸಗಳು ಬಹಳ ಆಶ್ಚರ್ಯವನ್ನು ಉಂಟುಮಾಡುವುವು. ಸಮುದ್ರದಿಂದ ಪ್ರತ್ಯೇಕಿಸಲ್ಪಟ್ಟ ಖಂಡಗಳು ಮತ್ತು ದ್ವೀಪಗಳು ಒಂದಾಗಿ ಅಖಂಡವಾಗುವುವು. ಸಮುದ್ರದ ಕೆಳಗಿದ್ದ ಗುಹೆಗಳೇ ಮೊದಲಾದುವುಗಳು ಮೇಲಕ್ಕೆ ಬರುವುವು. ಹೀಗೆ ಬಂದ ಭಾಗಗಳಲ್ಲಿ ಇರತಕ್ಕ ಭಂಡೆಗಳಿಗೆ ಜಲಚರಗಳ ಚಿಪ್ಪುಗಳು, ಮೂಳೆಗಳು ಹತ್ತಿಕೊಂಡಿರುವುವು. ಸಮುದ್ರದ ಕೆಳಗಿದ್ದ ಮರಳು, ಕಲ್ಲು, ಜಲಚರಗಳ ಚಿಪ್ಪುಗಳು ಇವುಗಳೆಲ್ಲಾ ರಾಶಿ ರಾಶಿಯಾಗಿ ಮೇಲಕ್ಕೆ ಬರುವುವು. ಈ ರಾಶಿಗಳು ಕೆಲವು ಭಾಗಗಳಲ್ಲಿ 1300 ಅಡಿಗಳ ವರಿಗೂ ಇರುವುದು. ದಕ್ಷಿಣಅಮೆರಿಕಾಖಂಡದ ಪಶ್ಚಿಮ ಭಾಗದಲ್ಲಿ ಈಗಲೂ ಇಂಥಾ ರಾಶಿಗಳನ್ನು ನೋಡಬಹುದು. ಸ್ವೀಡ್ ರಾಜಧಾನಿಯಾದ ಸ್ಟಾಕ್‌ಹೋಂ ಎಂಬ ಪಟ್ಟಣದ ಸಮೀಪದಲ್ಲಿ ಇಂತಹ ಮರಳು ದಿಣ್ಣೆಗಳು ನೂರು ಸರು

ಷದಲ್ಲಿ 2½ ಅಡಿ ಮೇಲಕ್ಕೆ ಏಳುವುದು. ಸ್ವಿಟ್‌ಬರ್ಲ್ಯಾ ಬರ್ಜಿ೯ ಎಂಬ ದ್ವೀಪದ ಲ್ಲಿರತಕ್ಕ ಕೆಲವು ಭೂಮಿಯು ಈಚೆಗೆ 147 ಅಡಿಗಳು ಮೇಲಕ್ಕೆ ಎದ್ದಿರುವುವು. ರಷ್ಯಾ ಮತ್ತು ಸೈಬೀರಿಯಾ ದೇಶದ ಉತ್ತರ ಭಾಗದ ದಡವು 106 ಮೈಲಿಗಳ ವರೆಗೂ ಮೇಲಕ್ಕೆ ಎದ್ದಿರುವುದು. ಅಲ್ಲಿನ ಮಣ್ಣಿನಲ್ಲಿ ಸಿಕ್ಕತಕ್ಕ ಜಲಚರಗಳ ಮೂಳೆಗಳಿಂದ ಒಂದಾನೊಂದು ಕಾಲದಲ್ಲಿ ಈ ಭೂಮಿಯು ಸಮುದ್ರದ ಕೆಳಗೆ ಇತ್ತೆಂದು ಗೊತ್ತಾಗುವುದು. ಮೆಡಿಟರೇನಿಯರ್ ಸಮುದ್ರದ ತೀರದಲ್ಲಿಯೂ ಹೀಗೆ ಮೇಲಕ್ಕೆ ಎದ್ದ ಭಾಗಗಳು ಇರುವುವು. ಆಫ್ರಿಕಾಖಂಡದ ಸಹಾರ ಎಂಬ ಮರಳುಕಾಡನ್ನೂ ಅದರ ಮರಳುನಲ್ಲಿ ಇರತಕ್ಕ ಜಲಚರಗಳ ಅಸ್ಥಿಗಳನ್ನೂ ನೋಡಿದರೆ ಈ ಭಾಗವು ಒಂದಾನೊಂದು ಕಾಲದಲ್ಲಿ ಸಮುದ್ರವಾಗಿತ್ತೆಂಬುದಾಗಿಯೂ, ಈ ಸಮುದ್ರದ ಅಡಿಭಾಗವು 900 ಅಡಿ ಮೇಲಕ್ಕೆ ಎದ್ದುದರಿಂದ ಸಮುದ್ರದ ನೀರೆಲ್ಲಾ ನಿಮ್ನಪ್ರಾಂತ್ಯಗಳಿಗೆ ಹರಿದು ಈ ಪ್ರಾಂತ್ಯವು ದೊಡ್ಡ ಮರಳು ಕಾಡಾಗಿ ಪರಿಣಮಿಸಿತ್ತೆಂಬದಾಗಿಯೂ ಗೊತ್ತಾಗುವುದು. ಕೆಲವು ಭಾಗಗಳು ಹೀಗೆ ಮೇಲಕ್ಕೆ ಏಳುವುವು. ಇನ್ನು ಕೆಲವು ಭಾಗಗಳು ಪರ್ವತಗಳಾಗಿಯೂ, ಗುಡ್ಡಗಳಾಗಿಯೂ, ಜನಗಳ ಆವಾಸಕ್ಕೆ ಯೋಗ್ಯವಾದ ಭೂಮಿಯಾಗಿಯೂ, ಇದ್ದು ಕುಸೀಬೀಳುವುದರಿಂದ ಸುತ್ತುಮುತ್ತು ಇರತಕ್ಕ ನೀರೂ ಕೂಡ ಹರಿದು ಆದು ಸಮುದ್ರವಾಗಿ ಪರಿಣಮಿಸುವುದು. ಸ್ಕಾಟ್ಲೆಂಡುತೀರದಲ್ಲಿಯೂ ಇಂಗ್ಲೆಂಡಿನ ನೈರುತ್ಯ ದಿಕ್ಕಿನಲ್ಲಿಯೂ ಈ ರೀತಿಯಲ್ಲಿ ಭೂಮಿಯು ಮುಳುಗಿಹೋಗಿ ಅನೇಕ ಮರಗಳು ಹೂತುಹೋಗಿರುವುದೂ ಕೂಡ ಗೊತ್ತಾಗುವುದು. ಇದಲ್ಲದೆ ಫೆಸಿಫಿಕ್ ಮತ್ತು ಇಂಡಿಯಾ ನಾಗರಗಳಲ್ಲಿ ಹವಳದ ಭಂಡೆಗಳು ಬೇಕಾದ ಹಾಗೆ ಸಿಕ್ಕುವುವು. ಹವಳದ ಹುಳುಗಳಿಂದ ಸಮುದ್ರದ ಕೆಳಗೆ ಮಾಡಲ್ಪಟ್ಟ ಒಂದು ವಿಧವಾದ ಸುಣ್ಣದಕಲ್ಲೇ ಹವಳವೆನ್ನಿಸಿಕೊಳ್ಳುವುದು. ತೀರದಿಂದ ಸುಮಾರು 2—3 ಮೈಲಿಗಳಲ್ಲಿ ವಿಶೇಷ ಆಳವಿಲ್ಲದೆ ಇರತಕ್ಕ ಸ್ಥಳಗಳಲ್ಲಿ ಹವಳವು ಸಿಕ್ಕುವುವು. ಆಫ್ರಿಕಾಖಂಡದ ಪೂರ್ವತೀರದಲ್ಲಿಯೂ, ಬ್ರಿಜಿಲ್‌ಗೆ ಅಭಿಮುಖವಾಗಿ ಇರತಕ್ಕ ವೆಸ್ಟ್‌ಇಂಡೀಸ್ ಈ ನಲ್ಲಿಯೂ ಹವಳವು ವಿಶೇಷವಾಗಿ ಸಿಕ್ಕುವುದು. ಈ ಹವಳದ ಪರ್ವತಗಳೇ ದ್ವೀಪಗಳಾಗಿರುವುದುಂಟು. ಆಸ್ಟ್ರೇಲಿಯಾಖಂಡದ ಈಶಾನ್ಯ ದಿಕ್ಕಿನಲ್ಲಿ ಈ ಹವಳದ ಭಂಡೆಗಳು, ಹವಳದ ದ್ವೀಪಗಳು 1000 ಮೈಲಿಗಳ ವರಿಗೂ ವಿಸ್ತರಿಸಿಕೊಂಡಿರುವುವು. ಸಮುದ್ರದ ಅಡಿಯಿಂದ ಈ ಹವಳದ ದ್ವೀಪಗಳು ಹವಳದ ಹುಳುಗಳಿಂದ ಕಟ್ಟಲ್ಪಡುವುದು. ಇವುಗಳು ನೀರಿನ ಮೇಲಕ್ಕೆ ಬಂದಕೂಡ

ಲೆ, ಅಲೆಗಳಿಂದ ಅನೇಕ ಬೀಜಗಳು ಆ ದ್ವೀಪಕ್ಕೆ ಸೇರಿ ಗಿಡಗಳಾಗುವುವು. ಸಾ ಮಾನ್ಯರಾಗಿ ಇಂಥಾ ದ್ವೀಪಗಳು ನೀರಿನಕೆಳಗೆ ಒಂದೆರಡು ಅಡಿಗಳ ಮಟಿಗೂ ಬಂ ದಿರುವುದು. ಅಂಥಾ ಸಂದರ್ಭಗಳಲ್ಲಿ ಪ್ರಯಾಣ ಮಾಡತಕ್ಕ ಹಡಗುಗಳನ್ನು ನಾಶ ಮಾಡುವುದಕ್ಕೆ ಇವು ಬಹಳ ಸಾಧಕವಾಗುವುವು. ಸಮುದ್ರದ ಕೆಳಭಾಗದ ಭೂ ಮಿಯೂ ಕೂಡ ಅನೇಕ ಸ್ಥಳಗಳಲ್ಲಿ ಇನ್ನೂ ಕೆಳಕ್ಕೆ ಹೋಗುವುದುಂಟು. ಅಂಥಾ ಪ್ರಾಂತ್ಯಗಳಲ್ಲಿ ಆ ಭಾಗವು ಕುಸಿದಮೇಲೆ ಸಮುದ್ರದ ಆಳವು ಹೆಚ್ಚಾಗುವುದು. ಮೆಡಿಗಾಸ್ಕರ್ ಮತ್ತು ಇಂಡಿಯಾ ದೇಶಕ್ಕೂ ಮಧ್ಯೆ ಇರತಕ್ಕ ಸಮುದ್ರದ ಕೆಳಗೆ ಇರತಕ್ಕ ಭೂಮಿಯು ಈ ರೀತಿಯಲ್ಲಿ ಕುಸಿದಿದ್ದು, ಪೂರ್ವದಲ್ಲಿ ಇದ್ದುದಕ್ಕಿಂತ ಈಗ ಆಳವು ಹೆಚ್ಚಾಗಿರುವುದು. ಹೀಗೆ ಭೂಮಿಯು ಏಳುವುದರಿಂದಲೂ, ಕುಸಿಯು ವುದರಿಂದಲೂ ಅನೇಕ ದ್ವೀಪಗಳು ಹೊಸದಾಗಿ ಆಗುವುದೂ ಉಂಟು. ದ್ವೀಪ ಗಳು ಕುಸಿದಿದ್ದು ಮಾಯವಾಗುವುದೂ ಉಂಟು. ಈ ರೀತಿಯಲ್ಲಿ ಭೂಮಿಯ ಮೇಲ್ಭಾಗದಲ್ಲಿ ಸ್ಥಿತ್ಯಾಸವು ಆಗಾಗ್ಗೆ ಆಗುವುದು. ಇದಕ್ಕೆ ಭೂಗರ್ಭದಲ್ಲಿ ಇರ ತಕ್ಕ ಅಗ್ನಿಯು ಮತ್ತು ಜಲದ ಪರಸ್ಪರ ಸಂಬಂಧವೇ ಮುಖ್ಯಕಾರಣವು.



ವ್ಯಾಕರಣಶಾಸ್ತ್ರ.

[255 ನೇ ಪುಟದ ಶೇಷ]

ಇದುವರೆವಿಗೂ ಕವರ್ಗ ಚವರ್ಗ ಪಂಚಮಾಕ್ಷರಗಳು ಅಚ್ಚಗನ್ನಡದಲ್ಲಿ ಇರು ತ್ತವೆ ಎಂದು ಹೇಳುವುದಕ್ಕೆ ಸಾಧಕವಾಗಿ ಕರ್ಣಾಟಕ ಶಬ್ದಾನುಶಾಸನದಲ್ಲಿ ಏನಾ ದರೂ ಆಧಾರ ಸಿಕ್ಕುವುದೇನೋ ಎಂದು ವಿಚಾರ ಮಾಡಿದ್ದಾಯಿತು. ಇನ್ನು ಮೇಲೆ ಶಬ್ದಮಣಿದರ್ಪಣವೆಂಬ ಕರ್ಣಾಟ ವ್ಯಾಕರಣದಲ್ಲಿ ಏನಾದರೂ ಆಧಾರವು ಸಿಕ್ಕು ವುದೇನೋ ವಿಚಾರ ಮಾಡೋಣ.

ಈ ಶಬ್ದಮಣಿದರ್ಪಣದ ಸೂತ್ರಗಳು ಶಬ್ದಾನುಶಾಸನದ ಸೂತ್ರಗಳಂತೆ ಒಂದು ನಿಯತವಾದ ನಿಯಮಕ್ಕೆ ಒಳಪಡುವುದಿಲ್ಲ. ಆದರೂ ವಿಚಾರಮಾಡಿ ದಲ್ಲಿ 105 ನೆಯ ಸೂತ್ರದಲ್ಲಿ 'ಬಿಂದುವದಂತಕ್ಕೆ' ಎಂದು ಅಕಾರಾನ್ತವಾದ ಲಿಂಗ ಅಥವಾ ಪ್ರಾತಿಪದಿಕದ ಮೇಲೆ ಬಂದಿರತಕ್ಕ ಪ್ರಥಮೈಕವಚನದ 'ಮ್' ಎಂಬ ಪ್ರತ್ಯಯಕ್ಕೂ, 161 ನೆಯ ಸೂತ್ರದಲ್ಲಿ 'ಮನಕಾರದ ಪರದೊಳ್ವ್ಯಂಜನವಿ

ರ್ೊಡವಿಲ್ಲದೊಡವನುನುಸ್ವಾರಂ' ಎಂದು ಅನ್ತ್ಯದಲ್ಲಿ ಬರತಕ್ಕ ವಿಕ್ಕ ಮಕಾರ ಕ್ಕೂ, ಬಿಂದುವನ್ನು ವಿಧಾನಮಾಡಿರುವುದರಿಂದ ಆಂಥಾ ಬಿಂದುವಿಗೂ, ಏಗಂ, ಪಲಂ, ಇತ್ಯಾದಿ ಪದಗಳ ಅನ್ತ್ಯದಲ್ಲಿ ಸ್ವಭಾವವಾಗಿರುವಂತೆ ಹೇಳಿದ ಬಿಂದುವಿಗೂ ಸ್ವರವು ಪರವಾದಾಗ 104 ನೆಯ ಸೂತ್ರದಲ್ಲಿ 'ಪರದೊಳ್ಸ್ವರವಿರೆ ಬಿಂದುಗೆ ದೊರಕೊಳ್ಗುಂ ನತ್ವಮುತ್ವಂ, ಎಂದು ಹೇಳಿರುವಂತೆ ಬಿಂದುವಿಗೆ ನಕಾರವೂ ಮಕಾರವೂ ಆದೇಶ ವಾಗಿರುವುದು. ಇಲ್ಲಿ ನಕಾರ ಮಕಾರಗಳೆರಡೂ ಬರಬಹುದೇ? ಅಥವಾ ಭಿನ್ನ ಭಿನ್ನ ಲಕ್ಷ್ಯಗಳಲ್ಲಿ ಪ್ರತ್ಯೇಕಪ್ರತ್ಯೇಕವಾಗಿ ಬರಬಹುದೆ ಎಂದು ವಿಚಾರ ಮಾಡಿ ದರೆ ಲಕ್ಷ್ಯಾನುಸಾರವಾಗಿ ನೋಡಿಕೊಳ್ಳುವಂತೆ ತೇಲಿಸಿರುವುದೇ ಹೊರತು ಶಬ್ದಾ ನುಶಾಸನದ ॥ ಮೊನಸ್ಸ್ವರೆ ॥ 77 ॥ ನಪಿವಾ ॥ 78 ॥ ಎಂಬ ಸೂತ್ರಗಳಂತೆ ನಿಷ್ಕೃ ಷ ವಾಗಿ ಹೇಳಿ ಆಕ್ಷೇಪಣೆಯು ಬರುವಂತೆ ಮಾಡಿಕೊಳ್ಳಲಿಲ್ಲ. ಆದಮಾತ್ರಕ್ಕೆ ಶಬ್ದ ಮಣಿದರ್ಪಣಕ್ಕಿಂತಲೂ ಶಬ್ದಾನುಶಾಸನವು ನಿಕೃಷ್ಟವೆಂದು ನನ್ನ ಭಾವವಲ್ಲ.

ಮತ್ತು ಅಣ್ಣಂದಿರ್, ಅಣ್ಣಂಗೆ— ಇತ್ಯಾದಿಗಳಲ್ಲಿ ಬಿಂದುವೇ ಬರುವಂತೆ

ಉದಯಿಸುಗುಂ, ಗಳ್ದಿರ್ಗಳ।
ಪೊದಲೊಳದಂತಕ್ಕೆ ಬಿಂದು ಪುಂಸ್ತ್ರೀಲಿಂಗ ॥

ಕ್ಕೆ ..... ದೊಳ್ 103. ಎಂದೂ, ಮತ್ತು

ಒದವುವುದದಂತಪುಲ್ಲಿಂ ಎಂದೂ ಗದೊಳ್ಗೆಯೆಂದಾವಿಬಿಂದುವಿಂ...ಎಲ್ಲಂ ॥ 113 ॥ ಶಬ್ದಮಣಿದರ್ಪಣದಲ್ಲಿ ಹೇಳಿರುವುದರಿಂದ ಅಣ್ಣಮ್ಗೆ— ಇತ್ಯಾದಿ ರೂಪ ಸಿದ್ಧಿಯಾಗಬೇಕೆಂದು ಶಬ್ದಾನುಶಾಸನದ ಸೂತ್ರದಮೇಲೆ ಹೇಳಿದಂತೆ ಆಕ್ಷೇಪಣೆ ಹೇಳಲು ಅವಕಾಶವಿಲ್ಲ. ಆದರೂ ವರ್ಗಪಂಚವರ್ಣಾಕ್ಷರದ ವಿಷಯವಾಗಿ ವಿಚಾರ ಮಾಡಿದಲ್ಲಿ ಶಬ್ದಾನುಶಾಸನದ ॥ ನಶ್ಚ ಬಿಂದುರನ್ಯಕ್ರ ॥ 79 ॥ ತದನ್ತ್ಯೋವಾ ವರ್ಗೆ ॥ 80 ॥ ಎಂಬ ಸೂತ್ರಗಳಂತೆಯೇ ಈ ಗ್ರಂಥದಲ್ಲಿಯೂ

ಮನಕಾರದಪರದೊಳ್ವ್ಯಂ।
ಜನವಿರ್ದೊಡ ವಿಲ್ಲದೊಡ ನುನುನ್ವಾರಂ ಸಂ॥
ಜನಿಯಿಪುದು ವರ್ಗವಿದಿರಿರೆ।
ತನಗೆ ವಿಕಲ್ಪದೆ ತದೀಯ ಪಂಚಮುಮಕ್ಕುಂ॥161॥ ಎಂದು ಹೇಳಿದೆ.

ಇದನ್ನು ನೋಡಿದಲ್ಲಿ ಶಬ್ದಾನುಶಾಸನ ಸೂತ್ರಗಳಮೇಲೆ, ಗಱುವಿಂನ್ಸೀಗುಡಿ ಕೆಂಡವಿಂನ್ಸವಳವಾಯಂಬಾಳೆ ವಿಂನ್ಸಾವುವಿಂನ— ಇತ್ಯಾದಿಗಳಲ್ಲಿ ದೋಷವು

ಬರುವುದೆಂದು ಹೇಳಿದ ಆಕ್ಷೇಪಣೆಯು ಈ ಶಬ್ದಮಣಿದರ್ಪಣದ 161 ನೇ ಸೂತ್ರದ ಮೇಲೆಯೂ ಬಂದು ಕವರ್ಗ ಚವರ್ಗ ಪಂಚಮಾಕ್ಷರಗಳ ಸಾಧನೆಗೆ ಈ ಸೂತ್ರವು ಸರಿಯಾದ ಆಧಾರವಾಗಲಾರದು.

ಈಗ ಈ ಸೂತ್ರವು ಕೆಲವು ಲಕ್ಷ್ಯಗಳಲ್ಲಿ ವ್ಯಭಿಚರಿತವಾದುದರಿಂದ ಸೂತ್ರವನ್ನು ಅಸಂಗತವೆಂದು ಹೇಳಿದರೂ ಪರಮಪ್ರಾಮಾಣಿಕನೂ ಕವಿಯೂ ಆದ ಕೇಶಿರಾಜನು ಕೊಟ್ಟಿರತಕ್ಕ ಅವಜ್ಕಡುಗಲಿ, ಅವಜ್ಞಾಲವಾದಿ—ಇತ್ಯಾದಿ ಉದಾಹರಣೆಗಳಲ್ಲಿ ಕವರ್ಗಚವರ್ಗ ಪಂಚಮಾಕ್ಷರಗಳು ಕಾಣಬರುವುದರಿಂದ ಕವರ್ಗ ಚವರ್ಗ ಪಂಚಮಾಕ್ಷರಗಳು ಅಚ್ಚಿಗನ್ನಡದಲ್ಲಿ ಇರುತ್ತವೆಯೆಂದು ನಾವು ಸಮಾಧಾನವನ್ನು ಹೇಳಬಹುದೋ ಎಂದರೆ ಅಗ್ಯೆ ಈ ಸಮಾಧಾನವನ್ನು ಭಟ್ಟಾಕಳಂಕನ ಸೂತ್ರಾರ್ಥವಿವರಣ ಪ್ರಸ್ತಾಪದಲ್ಲಿಯೇ ಹೇಳಬಹುದಾಗಿತ್ತಲ್ಲವೇ? ಎಂಬ ಒಂದು ಆಕ್ಷೇಪಣೆಯು ಹುಟ್ಟುವುದು. ಆದರೆ ಭಟ್ಟಾಕಳಂಕನು ತಾನೇ ಮಾಡಿದ್ದೆಂದು ಹೇಳಿಕೊಳ್ಳುವ ಕರ್ಣಾಟಕ ಶಬ್ದಾನುಶಾಸನಕ್ಕೂ ಕೇಶಿರಾಜನು ಬರೆದಿರತಕ್ಕ ಶಬ್ದಮಣಿದರ್ಪಣವೆಂಬ ಕರ್ಣಾಟಕ ವ್ಯಾಕರಣಕ್ಕೂ ಒಂದು ವ್ಯತ್ಯಾಸವು ನಮಗೆ ಕಾಣಬರುವುದು. ಏನಂದರೆ—

ಶಬ್ದಮಣಿದರ್ಪಣದಲ್ಲಿ ವೃತ್ತಿ ಮತ್ತು ಸೂತ್ರಗಳೆರಡನ್ನೂ ಕೇಶಿರಾಜನೆಂಬ ಕವಿಯೊಬ್ಬನೇ ಬರೆದು ತನಗಿಂತಲೂ ಪ್ರಾಚೀನರಾದ ವೈಯಾಕರಣರ ಮಾರ್ಗವನ್ನೇ ಅನುಸರಿಸಿ ಅವರು ಕೊಟ್ಟಿರತಕ್ಕ ಉದಾಹರಣೆಯನ್ನು ಕೊಟ್ಟಿರುವುದಲ್ಲದೆ ಕೆಲವ್ಕಡೆ ಪ್ರಾಚೀನರಾದ ಕವಿಗಳ ಪ್ರಯೋಗಗಳನ್ನೂ ಕೆಲವ್ಕಡೆ ತನಗೆ ಸಾಧುವೆಂದು ತೋರಿದ ಲಕ್ಷ್ಯಗಳನ್ನೂ ಉದಾಹರಿಸಿರುತ್ತಾನೆ.

ಆದರೆ ಭಟ್ಟಾಕಳಂಕನು ಹಾಗೆ ಮಾಡದೆ ಮತ್ತೊಬ್ಬನು ಮಾಡಿರುವ ಸೂತ್ರಗಳನ್ನು ತಾನು ಮಾಡಿದ್ದೆಂದು ಹೇಳಿಕೊಂಡು ಸೂತ್ರಕಾರನ ಆಶಯವನ್ನು ಕಂಡು ಹಿಡಿಯದೆ ತನಗೆ ತೋರಿದಂತೆ ಸೂತ್ರಗಳಿಗೆ ಅರ್ಥವನ್ನು ಕಲ್ಪಿಸಿ ಅಂಥಾ ಅರ್ಥಕ್ಕೆ ಅನುಸಾರವಾಗಿರುವಂತೆ ಉದಾಹರಣೆಗಳನ್ನು ಕಲ್ಪಿಸಿ ಪ್ರಾಚೀನರಾದ ಕರ್ಣಾಟಕರ ಸಂಪ್ರದಾಯವನ್ನು ವಿಾರಿ ಹೋಗಿರುತ್ತಾನೆಂದು ಕಂಡುಬರುವುದರಿಂದ ಆ ಭಟ್ಟಾಕಳಂಕನು ಬರೆದಿರಬಹುದೆಂದು ಊಹಿಸಬಹುದಾದ ಭಾಷಾಮಂಜರಿಯೆಂಬ ವೃತ್ತಿಯಲ್ಲಿಯೂ ಅದರ ವ್ಯಾಖ್ಯಾನವಾದ ಮಂಜರೀಮಕರಂದದಲ್ಲಿಯೂ ಪ್ರಾಮಾಣಿಕರಿಗೆ ಅಷ್ಟು ಪ್ರಾಮಾಣ್ಯವು ಹುಟ್ಟಲಾರದೆಂದು ತೋರುತ್ತದೆ. ಈ ಭಟ್ಟಾ

ಕಲಂಕನು ಕರ್ಣಾಟಕ ಶಬ್ದಾನುಶಾಸನವೆಂಬ ಸೂತ್ರಗಳನ್ನು ಬರೆದವನಲ್ಲನೆಂಬಂ
ಶವನ್ನು ಮುಂದೆ ಈ ವಿಚಾರಕ್ಕೆ ತಕ್ಕಷ್ಟು ವಿಶದಪಡಿಸುವೆನು.

ಪ್ರಕೃತದಲ್ಲಿ ಭಟ್ಟಾಕಳಂಕನಂತಲ್ಲದೆ ಪಾಣಿನೀಯನಾದ ಕೇಶಿರಾಜನು
ತನ್ನ ಶಬ್ದಮಣಿದರ್ಪಣದಲ್ಲಿ ಹೇಳಿರುವ

ಮನಕಾರದಪರದೊಳ್

.....ವರ್ಗಮಿದಿರೆ

ತನಗೆವಿಕಲ್ಪದೆತರೀಯುಪಂಚಮಮಕ್ಕುಂ ॥ ಎಂಬ ಸೂತ್ರವು ॥ 161 ॥
ನಕಾರಾನ್ತನಾದ ಜಾತಿವಾಚಕ.....
ವಾಗಲೀ ಧಾತುವಾಗಲೀ ಪೃಥಕ್ಪದವಾಗಿದ್ದಕಡೆ ಪ್ರವರ್ತಿಸುವುದಿಲ್ಲ. ಮತ್ತು
ಮಾನ್ತವಾದ ಪ್ರಕೃತಿಯು ಪದಸ್ವರೂಪದಲ್ಲಿರುವಾಗಲೂ ಪ್ರವರ್ತಿಸುವು
ದಿಲ್ಲ. ಆದ್ದರಿಂದ ವಿಾನ್, ಪೊನ್, ತಿನ್— ಇತ್ಯಾದಿಪದಗಳು ಪೃಥಕ್ಪದ
ವಾಗಿರುವಾಗ ಅಂಥಾ ನಕಾರಕ್ಕೆ ವ್ಯಂಜನವು ಪರವಾದಾಗಲೂವಾನ್ತವಾದ
ತನ್ನು, ನಿನ್ನು, ಇತ್ಯಾದಿ ಪ್ರಕೃತಿಗಳೇ ತಂತಮ್ಮ ಇತ್ಯಾದಿ ದ್ವಿರುಕ್ತಿಯಲ್ಲಿ
ಯೂ ತಂತಂಗೆಡೆಗಳ್ ಇತ್ಯಾದಿ ಸಮಾಸದಲ್ಲಿಯೂ ಪದವಾಗಿರುವುದರಿಂದ
ಅಂಥಾ ಮಕಾರಕ್ಕೆ ವ್ಯಂಜನವು ಪರವಾದಾಗಲೂ ವರ್ಗಾಕ್ಷರವು ಬರುವುದಿಲ್ಲ.
ಮಿಕ್ಕ ಮಕಾರ ನಕಾರಗಳಿಗೆ ವರ್ಗೀಯ ವ್ಯಂಜನವು ಪರವಾದರೆ ಅಯಾಯವರ್ಗ
ಪಂಚಮಾಕ್ಷರದ ಆದೇಶವು ವಿಕಲ್ಪವಾಗಿ ಬರುವುದು. ಎಂಬ ಭಾವದಿಂದ ಸೂತ್ರ
ವನ್ನು ಹೇಳಿ ಅವಷ್ಟ್ಟಲವಾದಿ, ಅವಙ್ಕಡುಗಲಿ, ಇತ್ಯಾದಿಗಳಲ್ಲಿ ಮೇಲೆ ಹೇಳಿ
ದಂಥಾ ಮಕಾರವೆಲ್ಲದೆ ಪ್ರಥಮಾಪ್ರತ್ಯಯದ ಮಕಾರವಾದ ಕಾರಣ, ಅಂಥಾ ಮ
ಕಾರಕ್ಕೆ ಆದೇಶವಾಗಿ ಕವರ್ಗ ಚವರ್ಗ ಪಂಚಮಾಕ್ಷರಗಳನ್ನು ಹೇಳಿರುವನಾದು
ದರಿಂದ ಪಾಣಿನೀಯನಾಗಿ ಕರ್ಣಾಟಕ ವೈಯಾಕರಣನಾದ ಕೇಶಿರಾಜನಲ್ಲಿ
ಪಾಣಿನೀಯಾದಿಂದ ಐಕಾರ ಔಕಾರಗಳು ಅಚ್ಚಗನ್ನಡದಲ್ಲಿವೆಯೆಂದು ಹೇಳೋ
ಣವೆಂದರೆ, ಇರತಕ್ಕ ಅಕ್ಷರಗಳನ್ನು ಆದೇಶ ಮಾಡಬೇಕೋ? ಇಲ್ಲದ ಅಕ್ಷ
ರಗಳನ್ನು ಆದೇಶಮಾಡಬೇಕೋ? ಇಲ್ಲದ ಮನುಷ್ಯನನ್ನು ಕೆಲಸಕ್ಕೆ ನೇಮಿ
ಸಿಕೊಳ್ಳುವುದು ಹೇಗೆ? ಎಂಬ ಆಕ್ಷೇಪಣೆಯು ಹುಟ್ಟುವುದು. ವಸ್ತುತಃ ವಿಚಾ
ರಮಾಡಿದಲ್ಲಿ ಅಸಂಯುಕ್ತವಾಗಿ ಒಂದು ಪದದ ಆದಿಯಲ್ಲಾಗಲೀ ಅನ್ಯಾದಲ್ಲಿ
ಯಾಗಲೀ ಮಧ್ಯದಲ್ಲಿಯಾಗಲೀ ಇಲ್ಲದ, ಜ್ಞಾನಂ— ಇತ್ಯಾದಿಗಳಂತೆ ಸಂಯು

ಕ್ತಾಕ್ಷರದಲ್ಲಿ ಉತ್ತರಾಕ್ಷರವಾಗಿಯಾದರೂ ಇಲ್ಲದ, ಪ್ರಾಜ್ಮುಖಂ. ಇತ್ಯಾದಿಗಳಂತೆ ಅನ್ಯವರ್ಗೀಯ ವ್ಯಂಜನದೊಂದಿಗೆ ಸಂಯುಕ್ತವಾಗಿಯೂ ಇಲ್ಲದ ಈ ಕವರ್ಗ ಚವರ್ಗ ಪಂಚಮಾಕ್ಷರಗಳನ್ನು ಆದೇಶವಾಗಿ ಹೇಳಬೇಕಾದರೆ ಮೊದಲು ಅಕ್ಷರಗಳ ಅಚ್ಚಿಗನ್ನಡದಲ್ಲಿರುತ್ತವೆಯೆಂದು ಎಲ್ಲಿಯಾದರೂ ಒಂದುಕಡೆ ತೋರಿಸಿ ಅನಮೇಲೆ ಈ ಅಕ್ಷರಗಳನ್ನು ಆದೇಶವಾಗಿ ಹೇಳಬೇಕಾಗಿತ್ತು. ಎಂಬ ಆಕ್ಷೇಪಣೆಯು ಹುಟ್ಟುವುದು. ಹೀಗಾಗಿ ಶಬ್ದಮಣಿದರ್ಪಣವೂ ಕೂಡ ನಮ್ಮ ಸಾಧನೆಗೆ ಅವಕಾಶವನ್ನು ಕೊಡದಿರುವುದು.

ಭೂಗೋಳಶಾಸ್ತ್ರ.

ನೀರು.

ಭೂಗೋಳವು 157,000,000 ಚದರ ಮೈಲಿಗಳ ವಿಸ್ತಾರವುಳ್ಳದೆಂತಲೂ, ಇದರಲ್ಲಿ ಜಲಪ್ರದೇಶವು ಮುಕ್ಕಾಲುವಾಲೆಂತಲೂ, ಉಳಿದ ಭಾಗವು ನೆಲವೆಂತಲೂ ನಿಷ್ಕರ್ಷಿಸಲ್ಪಟ್ಟಿರುತ್ತದೆ. ಜಲಪ್ರದೇಶದೊಳಗೆ ಕ್ರಮವರಿತು ಸಾಗರಾದಿ ಭೇದಗಳನ್ನು ಕಲ್ಪಿಸಿರುತ್ತಾರೆ. ಆದರೆ ವಾಯುಮಂಡಲದಿಂದ ಭೂಮಿಗೆ ಬೀಳತಕ್ಕ ನೀರನ್ನು ಸಾಗರಕ್ಕೆ ಸಂಬಂಧಪಟ್ಟ ಜಲವೆಂತಲೂ, ಖಂಡಕ್ಕೆ ಸಂಬಂಧಪಟ್ಟ ಜಲವೆಂತಲೂ ಮುಖ್ಯವಾದ ಎರಡು ದೊಡ್ಡ ವಿಭಾಗವಾಗಿ ಶಾಸ್ತ್ರಜ್ಞರು ನಿಷ್ಕರ್ಷಿಸಿಕೊಂಡಿರುವರು.

ಸಾಗರಕ್ಕೆ ಸಂಬಂಧಪಟ್ಟ ಜಲಗಳಲ್ಲಿ—

1. ಉಪ್ಪು ಬಹಳವಾಗಿ ಕರಗಿರುತ್ತದೆ.

2. ಉಷ್ಣವು ಸಾಧಾರಣವಾಗಿ ಒಂದೇಸಮನಾಗಿರುತ್ತದೆ.

3. ಉಷ್ಣೋದಕ ಮತ್ತು ಶೀತೋದಕ ಪ್ರವಾಹಗಳು, ಕಾಲಕಾಲಕ್ಕೆ ಉಬ್ಬರವಿಳಿತಗಳು, ಮತ್ತು ಅಲೆಗಳು ಇವೇ ಮುಂತಾದ ಜಲನೆಗಳಿರುವುವು.

4. ಆಳವು ಬಹಳ ಹೆಚ್ಚಾಗಿಯೂ, ಮತ್ತು ಕಡಮೆಯಾಗಿಯೂ ಇರುವುದು.

5. ಆಪರೂಪವಾಗಿ ರಾತ್ರಿವೇಳೆಗಳಲ್ಲಿ ವಿದ್ಯುಚ್ಛಕ್ತಿಯ ಪ್ರಕಾಶದಂತೆ ಹೊಳೆಯುವ ಅಣುಗಳು ಕಾಣಿಸುತ್ತವೆ.

6. ಈ ನೀರು ಶುದ್ಧವಾಗ ನೀಲಿಬಣ್ಣದಂತಿರುವುದು.

ಈ ಗುಣಗಳೆಲ್ಲಾ ಇರುತ್ತವೆ. ಆದರೆ ಸಾಗರದ ಜಲದಲ್ಲಿ ಉಪ್ಪಿನ ಅಂಶವು ಸೇಕಡ 3½ ಪಾಲು ಇರುತ್ತದೆಂದು ನಿಷ್ಕರ್ಷಿಸಲ್ಪಟ್ಟಿರುವುದು. ನಾವು ಮನೆಯಲ್ಲಿ ಉಪಯೋಗಿಸುವ ಅಡಿಗೆಯ ಉಪ್ಪು (ಸೋಡಿಯಂಕ್ಲೋರೈಡ್) ಈ ಜಲದಲ್ಲಿ ಬಹಳವಾಗಿರುತ್ತದೆ. ಸಮುದ್ರಗಳ ಉಷ್ಣಪರಿಮಾಣವು ಸಮುದ್ರಗಳ ಮೇಲಾಗದಲ್ಲಿ ಅಕ್ಷಾಂಶಸಂಖ್ಯೆಯಂತೆ ವ್ಯತ್ಯಸ್ತವಾದರೂ 300 ಅಡಿಗಳ ಕೆಳಗೆ ಜಲವು ಸಾಧಾರಣವಾಗಿ ಒಂದೇ ಸಮನಾದ ಉಷ್ಣಸ್ಥಿತಿಯನ್ನು ಹೊಂದಿರುವುದು.

ಉಬ್ಬರವಿಳಿತಗಳು, ಮತ್ತು ಪ್ರವಾಹಗಳು.

ಸಮುದ್ರದ ಚಲನೆಗಳಲ್ಲಿ ಮೇಲೆ ಹೇಳಿದ ಉಬ್ಬರವಿಳಿತಗಳು, ಮತ್ತು ಪ್ರವಾಹಗಳು ಮುಖ್ಯವಾದುವುಗಳಾಗಿವೆ. ಈ ಉಬ್ಬರವಿಳಿತಗಳಿಗೆ ಸೂರ್ಯ ಚಂದ್ರರ ಆಕರ್ಷಣೆಯೇ ಮುಖ್ಯವಾದ ಕಾರಣವಾಗಿರುವುದು. ಸೂರ್ಯನಿಗಿಂತಲೂ ಚಂದ್ರನು ಭೂಮಿಗೆ ಸನಿಹಪದಲ್ಲಿರುವುದರಿಂದ ಸೂರ್ಯನಿಗಿಂತಲೂ ಚಂದ್ರನೇ ಸಮುದ್ರದ ಉಬ್ಬರವಿಳಿತಗಳಿಗೆ ಮುಖ್ಯಕಾರಣನಾಗಿರುವನು. ಪರ್ವಕಾಲಗಳಲ್ಲಿ ಪ್ರಾಪ್ತವಾಗುವ ಉಬ್ಬರವಿಳಿತಗಳು ಬಹಳ ಎತ್ತರವಾಗಿರುವುವು. ಏತಕ್ಕಂದರೆ—ಆ ಪರ್ವಕಾಲಗಳಲ್ಲಿ ಸೂರ್ಯಚಂದ್ರರ ಆಕರ್ಷಣ ಶಕ್ತಿಗಳು ಪರಸ್ಪರ ಸಹಾಯವನ್ನು ಮಾಡುತ್ತದೆ. ಹೀಗೆ ಸಹಾಯ ಮಾಡುವುದರಿಂದುಂಟಾಗುವ ಉಬ್ಬರವಿಳಿತಕ್ಕೆ "ಸ್ಪ್ರಿಂಗ್ ಟೈಡ್" ಎಂಬ ಅಂಕಿತವನ್ನು ಶಾಸ್ತ್ರಜ್ಞರು ಕೊಟ್ಟಿರುವರು.

ಅಷ್ಟಮಿಯಲ್ಲಿ ಉಂಟಾಗುವ ಸಮುದ್ರದ ಉಬ್ಬರವಿಳಿತಗಳು ಬಹಳ ಕಮ್ಮಿಯಾಗಿರುವುವು. ಮೇಲೆ ಹೇಳಿದ ಕಾರಣದ ವ್ಯತ್ಯಾಸದಿಂದ ಹೀಗಾಗುವುದು. ಅಂದರೆ ಸೂರ್ಯಚಂದ್ರರ ಆಕರ್ಷಣೆಯು ಪರಸ್ಪರ ಸಹಾಯ ಮಾಡದೆ ವಿರೋಧವಾಗಿರುವುದೇ ಇದಕ್ಕೆ ಕಾರಣವಾಗಿರುತ್ತೆ. ಇಂಥಾ ಉಬ್ಬರವಿಳಿತಗಳಿಗೆ ತಿಳಿದವರು "ನೀಪ್ ಟೈಡ್" ಅಂಕಿತವನ್ನು ಕೊಟ್ಟಿರುವ್ವರು.

ಮೇಲೆ ಹೇಳಿದ ಆಕರ್ಷಣೆಗಳಿಂದ ಪ್ರತಿ ದಿನವೂ 25 ಘಂಟೆಗಳೊಳಗೆ ಕ್ಲುಪ್ತಕಾಲಗಳಲ್ಲಿ ಸಮುದ್ರಸಾಗರಗಳಲ್ಲಿ ಉಂಟಾದ ಉಬ್ಬರವಿಳಿತಗಳು ಎರಡಾವೃತ್ತಿಯುಬ್ಬಿ ಎರಡಾವೃತ್ತಿ ಇಳಿಯುವುದು. ಉಬ್ಬಿದಾಗ ಸಮುದ್ರಸಾಗರಗಳ ಮಟ್ಟವು ಹೆಚ್ಚಾಗಿಯೂ, ಇಳಿದಾಗ ಮಟ್ಟವು ಕಡಮೆಯಾಗಿಯೂ ಆಗುವುದು. ಉಬ್ಬಿದಾಗ ನದೀಮುಖಗಳ ಕಡೆಗೆ ನೀರು ನುಗ್ಗುವದು. ಹಡಗು ಜಹಜು ಮುಂತಾದುವುಗಳು ನದೀತೀರಗಳಲ್ಲಿಯೂ, ನದೀಮುಖಗಳಲ್ಲಿಯೂ ಇರುವ ಸ್ಥಳಗಳಿಗೆ ಹೋಗಿ ಬರುವುದಕ್ಕೆ ಈ ಉಬ್ಬರವಿಳಿತಗಳು ಸಹಾಯಕಾರಿಗಳಾಗಿರುತ್ತವೆ. ದೈನಂದಿನದ ಉಬ್ಬರವಿಳಿತಗಳಿಗಿಂತಲೂ, ಪಾಕ್ಷಿಕದ ಉಬ್ಬರವಿಳಿತಗಳಲ್ಲಿ ಸಮುದ್ರವು ಇನ್ನೂ ಹೆಚ್ಚಾದ ಮಟ್ಟಕ್ಕೆ ಎದ್ದು ಇಳಿಯುವುದು.

ಸಾಗರಗಳಮೇಲೆ ಗಾಳಿ ಜೋರಾಗಿ ಬೀಸಿದರೆ ಸುಮಾರು ಎಂಟು ಅಳುದ್ದಕ್ಕೆ

ವರೆಗೆ ಅಲೆಗಳು ಎದ್ದು ಸಾಗರವನ್ನು ಅಲ್ಲೋಲಕಲ್ಲೋಲಮಾಡಿ ಬಿಡುವುದು. ಸಾಧಾರಣವಾಗಿ ಬೀಸುವಾಗ ಈ ಆರ್ಭಟವಿಲ್ಲ. ಸಾಗರಗಳ ಆಳವು 5 ಮೈಲಿಯಿಂದ ಪ್ರಾರಂಭಿಸಿ ಕಡಮೆ ಕಡಮೆಯಾಗಿ ಸುಮಾರು 50—60 ಮಾರಿನಷ್ಟು ಆಳವಾಗಿರುವುದು. ಆಳವು ಹೆಚ್ಚಾಗಿರುವ ಕಡೆಗಳಲ್ಲಿ ತಳದ ನೀರು ಹಿಮದಂತೆ ಶೀತಳವಾಗಿರುವುದು. ಇದೇ ಕಾರಣದಿಂದಲೇ ಸೈಬೀರಿಯದ ನದಿಗಳು ಶೈತ್ಯಾಧಿಕ್ಯದಿಂದ ಘನೀಭೂತವಾಗಿರುವವು.

ಸಾಗರಪ್ರವಾಹಗಳಿಗೆ ಮುಖ್ಯಕಾರಣಗಳು.

1. ಸಾಗರದ ಮೇಲ್ಮಡೆಯಲ್ಲಿರುವ ಬೇರೆಬೇರೆ ಪ್ರದೇಶಗಳಲ್ಲಿ ಬೇರೆಬೇರೆ ಉಷ್ಣಸ್ಥಿತಿಯು ಇರುವುದರಿಂದ ಅದರ ಮಟ್ಟದಲ್ಲಿ ವ್ಯತ್ಯಾಸವುಂಟಾಗುವುದು. ಇದರಿಂದ ನೀರು ಒಂದೇ ಸಮಮಟ್ಟಕ್ಕೆ ಬರುವುದಕ್ಕೆ ಯತ್ನಿಸುವುದು. ಇದರಿಂದ ಸಾಗರಪ್ರವಾಹವುಂಟಾಗುವುದು.

2. ಭೂಗೋಳವು ತನ್ನ ಅಕ್ಷದ ಸುತ್ತಲೂ ಪಶ್ಚಿಮದಿಂದ ಪೂರ್ವಕ್ಕೆ (ಅಪ್ರದಕ್ಷಿಣವಾಗಿ) ಸುತ್ತೋಣದರಿಂದ ಅದರಮೇಲಿರುವ ನೀರಿಗೂ ಚಲನೆಯುಂಟಾಗುವುದು.

3. ಸಾಗರದಮೇಲೆ ಬೀಸುವ ಮಾರುತಗಳು ನೀರನ್ನು ತಳ್ಳಿಕೊಂಡು ಹೋಗುವುದರಿಂದ ನೀರಿಗೆ ಚಲನೆಯುಂಟಾಗುವುದು. ಇವೇ ಸಾಗರಪ್ರವಾಹಗಳಿಗೆ ಮುಖ್ಯಕಾರಣಗಳಾಗಿವೆ.

ಇವುಗಳಲ್ಲಿ—ನಿರಕ್ಷವೃತ್ತದಿಂದ ಹೊರಡುವ ಉಷ್ಣೋದಕ ಪ್ರವಾಹಗಳೂ ಉತ್ತರ ದಕ್ಷಿಣ ಸಾಗರಗಳಿಂದ ಬರುವ ಶೀತೋದಕ ಪ್ರವಾಹಗಳೂ ಬಹುಮುಖ್ಯವಾದುವುಗಳು. ಈ ಪ್ರವಾಹಗಳಲ್ಲಿ ಅಟ್ಲಾಂಟಿಕ್ ಸಾಗರದಲ್ಲಿ ಹೋಗತಕ್ಕ ಉಷ್ಣೋದಕ ಪ್ರವಾಹವಾದ "ಗಲ್ಫ್‌ಸ್ಟ್ರೀಂ" ಎಂಬುದು ಮುಖ್ಯವಾದುದು. ಇದು ಕರಿಬಿಯನ್ ಸಮುದ್ರದಲ್ಲಿ ಹುಟ್ಟಿ ಮೆಕ್ಸಿಕೋ ಸಮುದ್ರಶಾಖೆಯನ್ನು ಪ್ರವೇಶಿಸಿ ಅಲ್ಲಿಂದಾ ಹೊರಟು ಅಟ್ಲಾಂಟಿಕ್ ಸಾಗರ ಮಧ್ಯೆ ಈಶಾನ್ಯವಾಗಿ ಪ್ರವಹಿಸಿ ಬ್ರಿಟಿಷ್ ದ್ವೀಪಗಳನ್ನು ನೈರುತ್ಯದಲ್ಲಿ ಸಂಧಿಸಿ, ಅನಂತರ 2 ಭಾಗವಾಗಿ ಒಡೆದು ಆ ದ್ವೀಪಗಳನ್ನು ಬಳಸಿಕೊಂಡು ನಾರ್ವೆ ಸಮೀಪದಲ್ಲಿ ಪುನಃ ಒಂದಾಗಿ ಸೇರಿ "ಮಿಲ್‌ಸ್ಟ್ರೀಂ" (ಗಿರ್ರನೆ ಸುತ್ತುವ ಪ್ರವಾಹ) ಎಂಬ ಸುಳಿಯನ್ನುಂಟುಮಾಡಿ ಮುಂದಕ್ಕೆ ಹೊರಟು ಉತ್ತರಸಾಗರವನ್ನು ಸೇರುವುದು. ಈ ಪ್ರವಾಹದಿಂದ ಬ್ರಿಟಿಷ್ ದ್ವೀಪಗಳ ಮತ್ತು ಸ್ಕ್ಯಾಂಡಿನೇವಿಯದ ವಾಯುಗುಣವು ಹಿತಕರವಾಗಿರುತ್ತದೆ. ಇದೇ ಪ್ರವಾಹವು ಉತ್ತರಅಮೇರಿಕಾಕ್ಕೆ ಸೇರಿದ ನ್ಯೂಫೌಂಡ್‌ಲ್ಯಾಂಡಿನ ಸಮೀಪದಲ್ಲಿ ಪ್ರವಹಿಸುವಾಗ ಉತ್ತರಸಾಗರದಿಂದ ಬರುವ ಶೀತೋದಕಪ್ರವಾಹವು ಇದನ್ನು ಸಂಧಿಸಿ ಆ ದ್ವೀಪದ ಪೂರ್ವತೀರವನ್ನು ಯಾವಾಗಲೂ ನಿಬಿಡವಾದ ಮಂಜಿ

ನಿಂದ ಅವ್ಯತವಾಗಿರುವಂತೆ ಮಾಡಿರುವುದರಿಂದ ಅಲ್ಲಿ ಹಡಗುಗಳ ಪ್ರಯಾಣವು ಬಹುಕಷ್ಟವಾಗಿದೆ. ಮೆಕ್ಸಿಕೋಸಮುದ್ರಶಾಖೆಯಲ್ಲಿ ಗಲ್ಫಸ್ಟ್ರೀಮಿನ ಉಷ್ಣಾಂಶವು ಫಾರ್ಹೀಟ್‌ನಲ್ಲಿ 86 ಡಿಗ್ರಿಗಳು, ಅಗಲ 60 ಮೈಲಿ, ಘಂಟೆಗೆ 3½ ಮೈಲಿ ವೇಗ. ಅಟ್ಲಾಂಟಿಕ್ ಮಧ್ಯದಲ್ಲಿ ಉಷ್ಣಾಂಶವು ಫಾರ್ಹೀಟನಲ್ಲಿ 75 ಡಿಗ್ರಿಗಳು, ಎಂದು ಶಾಸ್ತ್ರಜ್ಞರು ನಿಶ್ಚಯಿಸಿರುತ್ತಾರೆ.

ಖಂಡಕ್ಕೆ ಸಂಬಂಧಪಟ್ಟ ಜಲಗಳು—ಈ ಜಲಗಳನ್ನು ನದಿ, ಸರೋವರಗಳ ಜಲವೆಂದು ಎರಡು ತರಗತಿಗಳಾಗಿ ವಿಂಗಡಿಸಿಕೊಂಡಿದಾರೆ.

॥ ನದಿಗಳು ॥

ಮೇಘಮಂಡಲದಿಂದ ನೆಲಕ್ಕೆ ಬೀಳುವ ನೀರಿಗೆ 3 ವಿಧಗಳಲ್ಲಿ ವ್ಯಯವುಂಟು. ಅವುಗಳು ಯಾವುವೆಂದರೆ—

1. ಮಳೆಯು ನೀರಿನ ಸ್ವಲ್ಪಭಾಗವನ್ನು ನೆಲವು ಹೀರುವುದು.
2. ನೆಲವು ಹೀರಿ ನೆನೆದನಂತರ ಬಿಡತಕ್ಕ ಮಳೆಯ ನೀರು ಹರಿಯಲು ಆರಂಭಿಸುವುದು.
3. ನೆಲದಲ್ಲಿರುವ ನೀರಿನ ಸ್ವಲ್ಪಭಾಗವು ಆವಿಯುರೂಪವನ್ನು ಹೊಂದಿ ಪುನಃ ವಾಯುಮಂಡಲದಲ್ಲಿ ಐಕ್ಯವಾಗುವುದು.

ಮೇಲೆ ಹೇಳಿದ ರೀತಿಯಲ್ಲಿ ಹರಿಯುವುದಕ್ಕಾರಂಭಿಸಿದ ನೀರು ಅನುಕೂಲವಾದ ಸ್ಥಳದಲ್ಲಿ ನಿಲ್ಲುವುದಕ್ಕೆ ಪ್ರಾರಂಭಿಸಿ, ಸಣ್ಣ ಸಣ್ಣ ಹಳ್ಳಗಳನ್ನುಂಟುಮಾಡುವುವು. ಇಂಥಾ ಹಳ್ಳಗಳು ಅನೇಕ ಸೇರುವುದರಿಂದ ನದಿಯುಂಟಾಗುವುದು. ಹೀಗೆ ಮಳೆ ಬೀಳುವುದರಿಂದ ಹರಿಯುವ ನೀರೇ ನದಿಗಳನ್ನುಂಟುಮಾಡುವಪಾಗಿದ್ದರೆ ಬೇಸಿಗೆಯಲ್ಲಿ ನದಿಗಳೆಲ್ಲಾ ಬತ್ತಿ ಹೋಗುತ್ತಿದ್ದುವು. ಆದರೆ ಮಳೆಗಾಲದಲ್ಲಿ ಭೂಮಿಯೊಳಕ್ಕೆ ಪ್ರವೇಶವಾಡಿದ ನೀರು ಭೂಮಿಯಲ್ಲಿರುವ ರಂಧ್ರಗಳ ಮೂಲಕವಾಗಿ ಹೊರಗೆ ಬರುವುದರಿಂದ ಆ ನೀರು ಕ್ರಮೇಣ ನದಿಗೆ ಬಂದು ಸೇರುವುದು. ಆದುದರಿಂದಲೇ ದೊಡ್ಡ ದೊಡ್ಡ ನದಿಗಳಲ್ಲಿಯೂ ಬೇಸಿಗೇಕಾಲಗಳಲ್ಲಿ ಸ್ವಲ್ಪ ಸ್ವಲ್ಪ ನೀರು ಹರಿಯುತ್ತಾ ಇರುವುದು. ನೆಲದೊಳಕ್ಕೆ ಹೋದ ನೀರು ಸವಿಾಪದಲ್ಲಿರುವ ನದಿಗಳಿಗೆ ಸೇರುವುದಕ್ಕೆ ಅಡಚಣೆಯು ಪ್ರಾಪ್ತಿಸಿದರೆ ಹೊಳ್ಳದ ದಾರಿಯನ್ನೇ ಹುಡುಕಿಕೊಂಡು ಹೋಗಿ ಮತ್ತೆ ತನಗೆ ಅನುಕೂಲವಾದ ಸ್ಥಳವು ದೊರೆತಕಡೆಗಳಲ್ಲಿ ಮೇಲಕ್ಕೆ ಏಳುವುದು. ಈರೀತಿಯಲ್ಲಿ ಹರಿಯುವ ನೀರುಗಳಿಗೆ ಚಿಲುಮೆ, ಊಟೆ, ಶಲೆ, ಎಂಬ ವಿಧವಿಧವಾದ ಹೆಸರುಗಳಿರುವುವು. (ಸತೀಷ)

ಶ್ರೀಮಾನ್. ಕುಂಡಿತರತ್ನಂ ಕಸ್ತೂರಿ ರಂಗಾಚಾರ್ಯರವರು.

ಈ ಮಹನೀಯರು ಬೆಂಗಳೂರು ಡಿಸ್ಟ್ರಿಕ್ಟ್ ಮಾಗಡೀ ತಾಲ್ಲೂಕ್ ಕಸಬಾ ತಿರುಮಲೆ ಎಂಬ ಗ್ರಾಮದವರು. ರಕ್ತಾಕ್ಷಿಸಂವತ್ಸರ ಆಷಾಢಮಾಸದಲ್ಲಿ ಇವರು ಕೊರಟಿಗೆರೆ ತಾಲ್ಲೂಕು ಹೊಳೆವನಹಳ್ಳಿಯಲ್ಲಿ ಮಾತಾಮಹರ ಗೃಹದಲ್ಲಿ ಜನಿಸಿದರು ಇವರು ತಾಯಿಯ ಗರ್ಭದಲ್ಲಿರುವಾಗ ಅಂದರೆ ಜನನಕ್ಕೆ ಒಂದುತಿಂಗಳು ಮುಂಚೆ ಇವರ ತಂದೆಗಳು ಶೇಷಾಚಾರ್ಯರು ಕಾಶೀಯಾತ್ರೆಗಾಗಿ ಪಾದಚಾರಿಗಳಾಗಿ ಹೊರಟುಹೋಗಿ ಬದರಿಕಾಶ್ರಮದಲ್ಲಿ ವಿರಕ್ತಿಯನ್ನು ಹೊಂದಿ ಅಲ್ಲಿಯೇ ನಿಂತು ಬಿಟ್ಟರು. ಇವರ ತಾಯಿಯು ಇವರು ಜನಿಸಿದ ೫ನೇವರ್ಷ ಸ್ವರ್ಗಸ್ಥರಾದರು. ಅನಂತರ ಇವರ ಜೇಷ್ಠಪ್ಪಂದಿರಾದ ವೆ|| ಬಾಲಕೃಷ್ಣಾಚಾರ್ಯರೆಂಬುವರ ಪೋಷಣೆಯಲ್ಲಿ ಬೆಳೆದು ಬಾಲ್ಯವಿದ್ಯಾಭ್ಯಾಸವನ್ನು ಮಾಡಿದರು. ಅನಂತರ ಶ್ರೀ ಶ್ರೀ ರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿಗಳವರು ಈ ಸಂಸ್ಥಾನದ ರಾಜಗುರು ಪದವಿಯನ್ನಲಂಕರಿಸಿ ಶ್ರೀ ಪರಕಾಲಸ್ವಾಮಿಗಳವರ ಮಠದಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾವ್ಯಾಸಂಗಕ್ಕೆ ಬೇಕಾದ ವಿಶಿಷ್ಟ ಅನುಕೂಲ್ಯಗಳನ್ನು ಏರ್ಪಡಿಸಿದುದರಿಂದ ಶ್ರೀಮಾನ್ ಕಸ್ತೂರಿರಂಗಾಚಾರ್ಯರವರ ಜೇಷ್ಠಪ್ಪನವರು ವಿಶಿಷ್ಟಾದ್ವೈತ ವೇದಾಂತ ಗ್ರಂಥಗಳ ವ್ಯಾಸಂಗಕ್ಕೋಸ್ಕರ ಇವರನ್ನು ಮೈಸೂರಿಗೆ ಕರೆದುಕೊಂಡ್ಬಂದು ಶ್ರೀ. ಶ್ರೀ ಮಠದಲ್ಲಿ ವಿದ್ಯಾಭ್ಯಾಸಕ್ಕೆ ಏರ್ಪಡಿಸಿದರು. ಆಗ ಇವರಿಗೆ ಹತ್ತುವರುಷ ವಯಸ್ಸಾಗಿತ್ತು. ಅನಂತರ ೮-೩ ವರ್ಷಗಳಲ್ಲಿ ಇವರು ವೇದಾಧ್ಯಯನವು ಸಾಂಗವಾಗಿ ಸಾಹಿತ್ಯದಲ್ಲಿಯೂ ಬಹಳಮಟ್ಟಿಗೆ ಜ್ಞಾನವನ್ನು ಹೊಂದಿದರು. ಅಮೇಲೆ ಶ್ರೀ ಶ್ರೀ ಸ್ವಾಮಿಗಳವರಲ್ಲಿ ತರ್ಕಶಾಸ್ತ್ರವನ್ನು ಓದುವವಕ್ಕೆ ಉಪಕ್ರಮಿಸಿದರು. ನಮ್ಮ ಶ್ರೀಮನ್ಮಹಾರಾಜಾ ಶ್ರೀಚಾಮರಾಜೇಂದ್ರವಡೆಯರವರಿಗೆ ಅರಮನೆಯಲ್ಲಿ ಚಕ್ರಾಂಕನ, [ಮುದ್ರಾಧಾರಣೆ] ಮಂತ್ರೋಪದೇಶಗಳಾದ ಕಾಲವಲ್ಲಿಯೇ ಇವರಿಗೂ ಸಹಾ ಅಲ್ಲಿಯೇ ಅವರ ಜೊತೆಯಲ್ಲಿಯೇ ಮುದ್ರಾಧಾರಣೆಯೂ ಮಂತ್ರೋಪದೇಶವೂ ಸಹಾ ಶ್ರೀರಂಗನಾಥಸ್ವಾಮಿಗಳವರಿಂದ ಮಾಡಲ್ಪಟ್ಟವು. ಅನಂತರ ತರ್ಕಶಾಸ್ತ್ರದ ಜೊತೆಗೆ ವಿಶಿಷ್ಟಾದ್ವೈತವೇದಾಂತಗ್ರಂಥಗಳನ್ನು ಶ್ರೀ ಸ್ವಾಮಿಗಳವರ ಸನ್ನಿ

ಧಾನವಲ್ಲೇ ವ್ಯಾಸಂಗಮಾಡಲಾರಂಭಿಸಿ ಹದಿನೆಂಟುವರುಷ ವಯಸ್ಸನ್ನು ಪೂರ್ತಿ ಯಾಗುವದರೊಳಗಾಗಿ ತರ್ಕ, ವೇದಾಂತ, ಸಾಹಿತ್ಯಗಳಲ್ಲಿ ವಿಶೇಷ ಪಾಂಡಿತ್ಯ ವನ್ನು ಹೊಂದಿದರು. ಈ ವಯಸ್ಸಿನಲ್ಲಿಯೇ ಸರಳವಾಗಿ ಸಂಸ್ಕೃತದಲ್ಲಿ ಕವಿತ್ವವನ್ನು ಮಾಡುತ್ತಲಿದ್ದರು. ಮತ್ತು ಮೈಸೂರು ಸದ್ವಿದ್ಯಾಶಾಲಾಧ್ಯಕ್ಷ ರಾಗಿದ್ದ ಶ್ರೀಮತ್ ಪೆರೀಸ್ವಾಮಿತಿರುಮಲಾಚಾರ್ಯರು ಮಾಡಿದ ಸಮುದ್ರ ಯಾನದ ವಿಷಯವಾದ ಬಂದು ಗ್ರಂಥವನ್ನು ಖಂಡನೆಮಾಡಿ ಸಮುದ್ರಯಾನ ವಿಮಾಂಸಾ ಎಂಬ ಗ್ರಂಥವನ್ನು ರಚಿಸಿದರು. ಇನ್ನೇ ವಯಸ್ಸಿನಲ್ಲಿ ಶ್ರೀಮತ್ ಮಹಾರಾಜರವರ ಸಂಸ್ಕೃತಕಾಲೇಜಿನಲ್ಲಿ ತರ್ಕಶಾಸ್ತ್ರದಲ್ಲಿ ಪರೀಕ್ಷೆ ಕೊಟ್ಟು ಉತ್ತಮವಾದ ತರಗತಿಯಲ್ಲಿ ತೇರ್ಗಡೆಯನ್ನು ಹೊಂದಿ ಶ್ರೀಮತ್ ಮಹಾರಾಜರವರಿಂದ ಸನ್ಮಾನಿಸಲ್ಪಟ್ಟರು. ಈ ಸಂಸ್ಕೃತ ಪಾಠಶಾಲೆಯಲ್ಲಿ ತರ್ಕಶಾಸ್ತ್ರದಲ್ಲಿ ಪರೀಕ್ಷೆ ಕೊಟ್ಟವರಲ್ಲಿ ಇವರೇ ಪ್ರಥಮರು. ಇದಾದ ಕೆಲವುದಿನಗಳಲ್ಲಿಯೇ ಶ್ರೀ ರಂಗನಾಥಸ್ವಾಮಿ. ಳವರು ಪರಂಧಾನವ ನ್ನೈದಿದರು. ಈ ಸ್ವಾಮಿಗಳ ಪೂರ್ವಾಶ್ರಮದ ಸಮಾಪಜ್ಞಾತಿಗಳು. ಅಯೋ ಧ್ಯೆಯಲ್ಲಿದ್ದುದರಿಂದಲೂ, ಇವರಿಗೆ ಶ್ರೀಮತ್ ಕಸ್ತೂರಿರಂಗಾಚಾರ್ಯರು ಪೂ ರ್ವಾಶ್ರಮದ ಜ್ಞಾತಿಗಳೇ ಆಗಿದ್ದುದರಿಂದಲೂ ಶ್ರೀಸ್ವಾಮಿಗಳವರಿಗೆ ನಡೆಯ ಬೇಕಾದ ಕರಮ ಕ್ರಿಯೆಗಳನ್ನೆಲ್ಲಾ ಇವರೇ ನಡಿಸಿದರು ಅನಂತರ ಇವರು ಶ್ರೀಮತ್ ಮಹಾರಾಜರವರ ಆಜ್ಞಾನುಸಾರವಾಗಿ ಪೌಢವಿದ್ಯಾವ್ಯಾಸಂಗಕ್ಕೆ ಉತ್ತರದೇಶಕ್ಕೆ ಪ್ರಯಾಣಮಾಡಿದರು. ಆಗ್ಯೆ ಇವರಿಗೆ ೨೦ ವರ್ಷವಯ ಸ್ಸಾಗಿತ್ತು. ಉತ್ತರದೇಶದಲ್ಲಿ ಕಾಶೀ, ಪ್ರಯಾಗ, ಕಲ್ಕತ್ತಾ, ನದ್ಯಾ [ನವ ದ್ವೀಪ] ಮುಂತಾದ ಸ್ಥಳಗಳಲ್ಲಿ ತರ್ಕ, ವ್ಯಾಕರಣ, ಸಾಹಿತ್ಯ, ಮಿಮಾಂಸಾ ಸಾಂಖ್ಯ, ಯೋಗವೊದಲಾದ ಶಾಸ್ತ್ರಗಳ ಪೌಢಗ್ರಂಥಗಳನ್ನು ವ್ಯಾಸಂಗ ಮಾಡಿ ಕಲ್ಕತ್ತಾದಲ್ಲಿರುವ (ಟೈಟಲ್ ಯೂನಿವರ್ಸಿಟಿ) ಎಂಬ ಭಟ್ಟಾಚಾರ್ಯ ರ ಸಂಘದಲ್ಲಿ ಪರೀಕ್ಷೆಯನ್ನು ಕೊಟ್ಟು ತರ್ಕಾಚಾರ್ಯ (ತರ್ಕತೀರ್ಥ) ರೆಂಬ ನಾಮಧೇಯವನ್ನೂ, ಜಿನ್ನದ ಮೆಡಲನ್ನೂ, ಪರೀಕ್ಷೆಯಲ್ಲಿ ಅಗ್ರಗ ಣ್ಯರಾಮವರಿಗೆ ಏರ್ಪಟ್ಟಿದ್ದ ದ್ರವ್ಯರೂಪವಾದ ಮರ್ಯಾದೆಯನ್ನೂ, ಯೋಗ್ಯ ತಾ ಪತ್ರಿಕೆಯನ್ನೂ [ಸರಿಟಿಫಿಕೇಟ್] ಪಡೆದರು. ವೇ|| ಭಟ್ಟಾಚಾರ್ಯಸಂಘ ದವರು ಇವರಿಗೆ ಪ್ರತಿತಿಂಗಳೂ ವಿದ್ಯಾರ್ಥಿ ವೇತನವನ್ನು ಕೊಡುತ್ತಿದ್ದರು.

ಇವರ ಜೊತೆಯಲ್ಲಿಯೇ ಇದ್ದ ಇವರ ಸೋದರತ್ತೆಯವರು ಜಡಿ
ಗಳನ್ನು ಬೆಳೆಸಿಕೊಂಡು ತಪಸ್ವಿಗಳಾಗಿ ಇದ್ದ ಇವರ ತಂದೆಗಳನ್ನು ಹಿಮವ
ತ್ಪರ್ವತದ ಸವಿಾಪದಲ್ಲಿ ಅಕಸ್ಮಾತ್ ನೋಡಿ ಗುರುತು ಹಿಡಿದು ತಂದೆ ಮಕ್ಕ
ಳಿಗೆ ಪರಿಚಯವನ್ನುಂಟುಮಾಡಿದನಂತರ ತಂದೆಯನ್ನು ಕರೆದುಕೊಂಡು ಇವ
ರು ತಮ್ಮ ಎಂಜಿನೇವಯಸ್ಸಿನಲ್ಲಿ ತಮ್ಮ ದೇಶಕ್ಕೆ ವಾಪಸು ಬಂದು ಸೇರಿ
ದರು. ಈ ರೀತಿ ನಮ್ಮದೇಶವನ್ನು ಬಿಟ್ಟು ಪುನಃ ವಾಪಸು ಬಂದು ಸೇರುವ
ವರೆಗೂ ಶ್ರೀಚಾಮರಾಜೇಂದ್ರ ವಡೆಯರವರು ಇವರಿಗೆ ಮಾಸಾಶನವನ್ನು
ದಯಪಾಲಿಸುತ್ತಿದ್ದರು. ಇವರ ಅದ್ವಿತೀಯ ಪಾಂಡಿತ್ಯವು ಎಲ್ಲಾ ದೇಶಗಳ
ಲ್ಲಿಯೂ ಪ್ರಸಿದ್ಧಿ ಹೊಂದಿದ್ದರಿಂದ ವಿದ್ಯಾವ್ಯಾಸಂಗಕ್ಕೆ ವಿದ್ಯಾರ್ಥಿಗಳು
ಬಹುದೂರದೇಶಗಳಿಂದ ಬಂದು ಇವರಲ್ಲಿ ವ್ಯಾಸಂಗ ಮಾಡಿ ಬಹಳ ದೊಡ್ಡ
ವಿದ್ವಾಂಸರಾಗಿರುತ್ತಾರೆ. ಶ್ರೀಮನ್ ಮಹಾರಾಜರವರ ಸಂಸ್ಕೃತ ಕಾಲೇಜಿ
ನಲ್ಲಿ ಪ್ರತಿವರ್ಷವಲ್ಲಿಯೂ ಪಂಡಿತಪರೀಕ್ಷೆಯಲ್ಲಿ ಇವರ ವಿದ್ಯಾರ್ಥಿಗಳು
ತರ್ಕ, ಸಾಹಿತ್ಯ, ವೇದಾಂತ, ಮಿಾಮಾಂಸಾ, ಸಾಂಖ್ಯ, ಯೋಗ ಮೊದಲಾದ
ಶಾಸ್ತ್ರಗಳಲ್ಲಿ ೩—೪ ಜನರಿಗೆ ಕಡಿಮೆಯಿಲ್ಲದೆ ತೇರ್ಗಡೆಯನ್ನು ಹೊಂದು
ತ್ತಾ ಬಂದರು. ದಿವಾನ್ ಸರ್ ಶೇಷಾದ್ರಿಐಯರ್‌ರವರು ಮತ್ತು ಮು|| ಚಂತ್ಸ
ಲರಾಯರೂ ಸಹಾ ಯೋಚಿಸಿ ಓರಿಯಂಟಲ್ ಲೈಬ್ರರಿಎಂಬ ಬಂದು ರಾಜ
ಕೀಯ ಪುಸ್ತಕಾಲಯವನ್ನು ಏರ್ಪಡಿಸಿ ಅಲ್ಲಿ ಇವರನ್ನು ಮುಖ್ಯಪಂಡಿತರ
ನ್ನಾಗಿ ಮಾಡಿ ಮೈಸೂರಲ್ಲಿರುವ ಎಲ್ಲಾ ಪಂಡಿತರಿಗಿಂತಲೂ ಅಧಿಕವಾದ
ವೇತನವನ್ನು ಕೊಡುತ್ತಾ ಬಂದರು. ವೇದವೇದಾಂತಾದಿ ಗ್ರಂಥಗಳಲ್ಲಿ
ಅಚ್ಚು ಹಾಕಲ್ಪಡದೇ ಕೈಬರವಣಿಗೆಯಲ್ಲಿ ಬರೆಯಲ್ಪಟ್ಟು ಶಿಥಿಲವಾಗು
ತ್ತಿದ್ದ ಅನೇಕ ಪುಸ್ತಕಗಳನ್ನು ಪರಿಶೋಧಿಸಿ ಸಂದಿಗ್ಧವಾದ ಸ್ಥಳಗಳಲ್ಲೆ
ಲ್ಲಾ ಟಿಪ್ಪಣಿಯನ್ನು ಬರೆದು ಅಚ್ಚು ಹಾಕಿಸಿ ಪ್ರಚಾರಪಡಿಸಿದರು. ಮತ್ತು
ಇವರು ಸ್ವತಂತ್ರವಾಗಿ ಸುಮಾರು ೩೦ ಗ್ರಂಥಗಳನ್ನು ಬರೆದಿರುತ್ತಾರೆ. ಈ
ಗ್ರಂಥಗಳಲ್ಲಿ ಮಿಾಮಾಂಸಾಶಾಸ್ತ್ರದ ವ್ಯಾಖ್ಯಾನ ಮೊದಲಾದ ಗ್ರಂಥಗ
ಳು ಮಾತ್ರ ಅಚ್ಚಾಗಿರುತ್ತವೆ. ಮತ್ತು "ಹಂಸಸಂದೇಶವ್ಯಾಖ್ಯಾಪಾದುಕಾ"
ಎಂಬ ಗ್ರಂಥವು ಅಚ್ಚಾಗಿರುತ್ತದೆ. ಶ್ರೀಮನ್ ಮಹಾರಾಜರವರಾದ ಶ್ರೀಚಾ

ಮಹಾರಾಜ ಪ್ರಭುಗಳವರು ಇವರ ಅಸಾಧಾರಣಪಾಂಡಿತ್ಯವನ್ನು ಚನ್ನಾಗಿ ತಿಳಿದು ೧೯೨೯ನೇ ಇಸವಿಯ ದಸರಾ ದರ್ಬಾರಿನಲ್ಲಿ "ಪಂಡಿತರತ್ನಂ" ಎಂಬ ನಾಮಧೇಯವನ್ನೂ, ರತ್ನಖಚಿತವಾದ ಅಮೂಲ್ಯವಾದ ಪಸ್ತಾ ಭರಣಗಳನ್ನೂ ದಯಪಾಲಿಸಿದರು. ಪ್ರಯಾಗೆಯಲ್ಲಿ ನಡೆದ ಇಂಡಿಯನ್ ಸೋಷಿಯಲ್ ಕಾನ್ಫರೆನ್ಸ್ ಎಂಬ ಸಂಘಕ್ಕೆ ನಮ್ಮ ಶ್ರೀಚಾಮರಾಜ ಪ್ರಭುಗಳಿಂದ ನಿಯಮಿಸಲ್ಪಟ್ಟವರಾಗಿ ಅಲ್ಲಿಗೆ ಹೋಗಿ ಸಮುದ್ರಯಾನ ವಿಷಯವಾಗಿ ಉಪನ್ಯಾಸವಮಾಡಿ "ಸತ್ತರಣತರಣಿ" ಎಂಬ ಗ್ರಂಥವನ್ನು ರಚಿಸಿದರು. ಶ್ರೀಚಾಮರಾಜಪ್ರಭುಗಳವರು ಇವರನ್ನು ಅನೇಕಾವರ್ತಿ ದೇಶಾಂತರಗಳಿಗೆ ಕರೆದುಕೊಂಡುಹೋಗಿ ಆಯಾ ದೇಶಗಳ ಮಹಾರಾಜರುಗಳಿಗೂ ಮಹಾವಿದ್ವಾಂಸರುಗಳಿಗೂ ಪರಿಚಯ ಮಾಡಿಸಿದರು. ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ತರ್ಕ ಸಾಹಿತ್ಯಗಳಲ್ಲಿ ಪ್ರೌಢಪಾಠಗಳನ್ನು ಹೇಳುತ್ತಿದ್ದ ಶ್ರೀ ಪಂಡಿತರತ್ನಂ ಸೀತಾರಾಮಶಾಸ್ತ್ರಿಗಳೆಂಬುವರು ಸ್ವರ್ಗಸ್ಥರಾಗಲು ಅವರ ಸ್ಥಾನಕ್ಕೆ ಶ್ರೀ ಪಂಡಿತರತ್ನಂ ಕಸ್ತೂರಿರಂಗಾಚಾರ್ಯರವರು ಶ್ರೀಮನ್ಮಹಾರಾಜರವರಾದ ಶ್ರೀಚಾಮರಾಜೇಂದ್ರ ಪ್ರಭುಗಳವರಿಂದ ನಿಯಮಿಸಲ್ಪಟ್ಟರು.

ಇವರು ಪ್ರತಿನಿತ್ಯದಲ್ಲಿಯೂ ಪ್ರಾತಃಕಾಲ ೬ ಘಂಟೆ ಒಳಗಾಗಿ ಸ್ನಾನ ಸಂಧ್ಯಾವಂದನಾದಿ ಆಹ್ನಿಕಗಳನ್ನು ತೀರಿಸಿಕೊಂಡು ೮ ಘಂಟೆಗೆ ವಿಶಿಷ್ಟಾದ್ವೈತ ವೇದಾಂತವನ್ನು ಮನೆಯಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳಿ ಅನಂತರ ಸಂಸ್ಕೃತಕಾಲೇಜಿಗೆ ಹೋಗಿ ಅಲ್ಲಿ ತರ್ಕ, ಮೀಮಾಂಸಾ, ಸಾಹಿತ್ಯಗಳಲ್ಲಿ ಪ್ರೌಢಪಾಠವನ್ನು ೧೦॥ ಘಂಟೆಯವರಿಗೂ ಹೇಳಿದನಂತರ ಮನೆಗೆ ಬಂದು ಮಾಧ್ಯಾಹ್ನಿಕ ಸ್ನಾನಮಾಡಿ ದೇವತಾರಾಧನೆ ಪಾರಾಯಣ ಮುಂತಾದುದನ್ನು ನೆರವೇರಿಸಿಕೊಂಡು ೧೨ ಘಂಟೆಗೆ ಓರಿಯಂಟಲ್ ಲೈಬ್ರರಿಗೆ ಹೋಗುತ್ತಿದ್ದರು. ಅಲ್ಲಿ ಗ್ರಂಥಶೋಧನೆ, ನೂತನಗ್ರಂಥರಚನೆ, ಮುಂತಾದ ಕಾರ್ಯಗಳನ್ನು ಸಾಯಂಕಾಲ ೫ ಘಂಟೆಯವರಿಗೂ ಮಾಡುತ್ತಿದ್ದರು. ಮತ್ತು ಶಾಸ್ತ್ರವಿಚಾರಗಳನ್ನು ತಿಳಿಯಬೇಕೆಂಬ ವೈದಿಕರೂ ಲೌಕಿಕರೂ ಇತರ ದೇಶದವರೊಡನೆ ಸಂಭಾಷಿಸುತ್ತಲೂ ಇದ್ದರು. ಸಾಯಂಕಾಲ ೬ ಘಂಟೆ ಲಾಗಾಯಿತು ೮ ಘಂಟೆಯವರಿಗೂ ಶ್ರೀಪರಕಾಲಸ್ವಾಮಿಗಳವರ ಮಠಕ್ಕೆ ಹೋಗಿ ಶ್ರೀಗಳವರ ಸಂಗಡ ಶಾಸ್ತ್ರವಿಚಾರವನ್ನು

ಇವರ ಜೊತೆಯಲ್ಲಿಯೇ ಇದ್ದ ಇವರ ಸೋದರತ್ತೆಯವರು ಜಡೆಗಳನ್ನು ಬೆಳೆಸಿಕೊಂಡು ತಪಸ್ವಿಗಳಾಗಿ ಇದ್ದ ಇವರ ತಂದೆಗಳನ್ನು ಹಿಮವತ್ಪರ್ವತದ ಸವಿಾಪದಲ್ಲಿ ಅಕಸ್ಮಾತ್ ನೋಡಿ ಗುರುತು ಹಿಡಿದು ತಂದೆ ಮಕ್ಕಳಿಗೆ ಪರಿಚಯವನ್ನುಂಟುಮಾಡಿದನಂತರ ತಂದೆಯನ್ನು ಕರೆದುಕೊಂಡು ಇವರು ತಮ್ಮ ಎಳನೇವಯಸ್ಸಿನಲ್ಲಿ ತಮ್ಮ ದೇಶಕ್ಕೆ ವಾಪಸು ಬಂದು ಸೇರಿದರು. ಈ ರೀತಿ ನಮ್ಮದೇಶವನ್ನು ಬಿಟ್ಟು ಪುನಃ ವಾಪಸು ಬಂದು ಸೇರುವವರೆಗೂ ಶ್ರೀಚಾಮರಾಜೇಂದ್ರ ವಡೆಯರವರು ಇವರಿಗೆ ಮಾಸಾಶನವನ್ನು ದಯಪಾಲಿಸುತ್ತಿದ್ದರು. ಇವರ ಅದ್ವಿತೀಯ ಪಾಂಡಿತ್ಯವು ಎಲ್ಲಾ ದೇಶಗಳಲ್ಲಿಯೂ ಪ್ರಸಿದ್ಧಿ ಹೊಂದಿದ್ದರಿಂದ ವಿದ್ಯಾವ್ಯಾಸಂಗಕ್ಕೆ ವಿದ್ಯಾರ್ಥಿಗಳು ಬಹುದೂರದೇಶಗಳಿಂದ ಬಂದು ಇವರಲ್ಲಿ ವ್ಯಾಸಂಗ ಮಾಡಿ ಬಹಳ ದೊಡ್ಡ ವಿದ್ವಾಂಸರಾಗಿರುತ್ತಾರೆ. ಶ್ರೀಮನ್ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿ ಪ್ರತಿವರ್ಷದಲ್ಲಿಯೂ ಪಂಡಿತಪರೀಕ್ಷೆಯಲ್ಲಿ ಇವರ ವಿದ್ಯಾರ್ಥಿಗಳು ತರ್ಕ, ಸಾಹಿತ್ಯ, ವೇದಾಂತ, ಮಿಾಮಾಂಸಾ, ಸಾಂಖ್ಯ, ಯೋಗ ಮೊದಲಾದ ಶಾಸ್ತ್ರಗಳಲ್ಲಿ ೫—೬ ಜನರಿಗೆ ಕಡಿಮೆಯಿಲ್ಲದೆ ತೇರ್ಗಡೆಯನ್ನು ಹೊಂದುತ್ತಾ ಬಂದರು. ದಿವಾನ್ ಸರ್ ಶೇಷಾದ್ರಿಅಯರ್‌ರವರು ಮತ್ತು ಮು|| ಚಂತ್ನಲರಾಯರೂ ಸಹಾ ಯೋಚಿಸಿ ೧೯೧೦ನೇ ಇಸವಿಯಲ್ಲಿ ಇವರ ಪಾಂಡಿತ್ಯವನ್ನು ವೃದ್ಧಿಪಡಿಸುವದಕ್ಕಾಗಿ ಓರಿಯಂಟಲ್ ಲೈಬ್ರರಿ ಎಂಬ ಬಂದು ರಾಜಕೀಯ ಪುಸ್ತಕಾಲಯವನ್ನು ಏರ್ಪಡಿಸಿ ಅಲ್ಲಿ ಇವರನ್ನು ಮುಖ್ಯಪಂಡಿತರನ್ನಾಗಿ ಮಾಡಿ ಮೈಸೂರಲ್ಲಿರುವ ಎಲ್ಲಾ ಪಂಡಿತರಿಗಿಂತಲೂ ಅಧಿಕವಾದ ವೇತನವನ್ನು ಕೊಡುತ್ತಾ ಬಂದರು. ವೇದವೇದಾಂತಾದಿ ಗ್ರಂಥಗಳಲ್ಲಿ ಅಚ್ಚು ಹಾಕಲ್ಪಡದೇ ಕೈಬರವಣಿಗೆಯಲ್ಲಿ ಬರೆಯಲ್ಪಟ್ಟು ಶಿಥಿಲವಾಗುತ್ತಿದ್ದ ಅನೇಕ ಪುಸ್ತಕಗಳನ್ನು ಪರಿಶೋಧಿಸಿ ಸಂದಿಗ್ಧವಾದ ಸ್ಥಳಗಳಲ್ಲೆಲ್ಲಾ ಟಿಪ್ಪಣಿಯನ್ನು ಬರೆದು ಅಚ್ಚು ಹಾಕಿಸಿ ಪ್ರಕಾರಪಡಿಸಿದರು. ಮತ್ತು ಇವರು ಸ್ವತಂತ್ರವಾಗಿ ಸುಮಾರು ೫೦ ಗ್ರಂಥಗಳನ್ನು ಬರೆದಿರುತ್ತಾರೆ. ಈ ಗ್ರಂಥಗಳಲ್ಲಿ ಮಿಾಮಾಂಸಾಶಾಸ್ತ್ರದ ವ್ಯಾಖ್ಯಾನ ಮೊದಲಾದ ಗ್ರಂಥಗಳು ಮೊತ್ರ ಅಚ್ಚಾಗಿರುತ್ತವೆ. ಮತ್ತು "ಹಂಸಸಂದೇಶವ್ಯಾಖ್ಯಾಪಾದುಕಾ" ಎಂಬ ಗ್ರಂಥವು ಅಚ್ಚಾಗಿರುತ್ತದೆ. ಶ್ರೀಮನ್ಮಹಾರಾಜರವರಾದ ಶ್ರೀಚಾ

ಮರಾಜ ಪ್ರಭುಗಳವರು ಇವರ ಅಸಾಧಾರಣಪಾಂಡಿತ್ಯವನ್ನು ಚನ್ನಾಗಿ ತಿಳಿದು ೧೪೯೬ನೇ ಇಸವಿಯ ದಸರಾ ದರ್ಬಾರಿನಲ್ಲಿ "ಪಂಡಿತರತ್ನಂ" ಎಂಬ ನಾಮಧೇಯವನ್ನೂ, ರತ್ನಖಚಿತವಾದ ಅಮೂಲ್ಯವಾದ ಹಸ್ತಾ ಭರಣಗ ಳನ್ನೂ ದಯಪಾಲಿಸಿದರು. ಪ್ರಯಾಗೆಯಲ್ಲಿ ನಡೆದ ಇಂಡಿಯನ್ ಸೋಷಿ ಯಲ್ ಕಾನ್ಫರೆನ್ಸ್ ಎಂಬ ಸಂಘಕ್ಕೆ ನಮ್ಮ ಶ್ರೀಚಾಮರಾಜ ಪ್ರಭು ಗಳಿಂದ ನಿಯಮಿಸಲ್ಪಟ್ಟವರಾಗಿ ಅಲ್ಲಿಗೆ ಜೋಗಿ ಸಮುದ್ರಯಾನ ವಿಷಯ ವಾಗಿ ಉಪನ್ಯಾಸವನ್ನಾಡಿ "ಸತ್ತ್ರಣತರಣಿ" ಎಂಬ ಗ್ರಂಥವನ್ನು ರಚಿಸಿದರು. ಶ್ರೀಚಾಮರಾಜಪ್ರಭುಗಳವರು ಇವರನ್ನು ಅನೇಕಾವರ್ತಿ ದೇಶಾಂತರಗಳಿಗೆ ಕರೆದುಕೊಂಡುಹೋಗಿ ಆಯಾ ದೇಶಗಳ ಮಹಾರಾಜರುಗಳಿಗೂ ಮಹಾವಿ ದ್ವಾಂಸರುಗಳಿಗೂ ಪರಿಚಯ ಮಾಡಿಸಿದರು. ವೈಸೂರು ಸಂಸ್ಕೃತ ಕಾಲೇ ಜಿನಲ್ಲಿ ತರ್ಕ ಸಾಹಿತ್ಯಗಳಲ್ಲಿ ಪ್ರೌಢಪಾಠಗಳನ್ನು ಹೇಳುತ್ತಿದ್ದ ಶ್ರೀ ಪಂಡಿತರತ್ನಂ ಸೀತಾರಾಮಶಾಸ್ತ್ರಿಗಳೆಂಬುವರು ಸ್ವರ್ಗಸ್ಥರಾಗಲು ಅವರ ಸ್ಥಾನಕ್ಕೆ ಶ್ರೀ ಪಂಡಿತರತ್ನಂ ಕಸ್ತೂರಿರಂಗಾಚಾರ್ಯರವರು ಶ್ರೀಮನ್ಮಹಾ ರಾಜರವರಾದ ಶ್ರೀಚಾಮರಾಜೇಂದ್ರ ಪ್ರಭುಗಳವರಿಂದ ನಿಯಮಿಸಲ್ಪಟ್ಟರು.

ಇವರು ಪ್ರತಿನಿತ್ಯದಲ್ಲಿಯೂ ಪ್ರಾತಃಕಾಲ ೬ ಘಂಟೆ ಒಳಗಾಗಿ ಸ್ನಾನ ಸಂಧ್ಯಾವಂದನಾದಿ ಆಹ್ನಿಕಗಳನ್ನು ತೀರಿಸಿಕೊಂಡು ೮ ಘಂಟೆಗೆ ವಿಶಿ ಷ್ಟಾದ್ವೈತ ವೇದಾಂತವನ್ನು ಮನೆಯಲ್ಲಿ ನಿದ್ಯಾರ್ಥಿಗಳಿಗೆ ಪಾಠ ಹೇಳಿ ಅನಂತರ ಸಂಸ್ಕೃತಕಾಲೇಜಿಗೆ ಹೋಗಿ ಅಲ್ಲಿ ತರ್ಕ, ಮೀಮಾಂಸಾ, ಸಾಹಿತ್ಯಗಳಲ್ಲಿ ಪ್ರೌಢಪಾಠವನ್ನು ೧೦॥ ಘಂಟೆಯ ವರಿಗೂ ಹೇಳಿದನಂತರ ಮನೆಗೆ ಬಂದು ಮಾಧ್ಯಾಹ್ನಿಕ ಸ್ನಾನಮಾಡಿ ದೇವತಾರಾಧನೆ ಪಾರಾಯಣ ಮುಂತಾದುದನ್ನು ನೆರವೇರಿಸಿಕೊಂಡು ೧೨ ಘಂಟೆಗೆ ಓರಿಯಂಟಲ್ ಲೈಬ್ರೆ ರಿಗೆ ಹೋಗುತ್ತಿದ್ದರು. ಅಲ್ಲಿ ಗ್ರಂಥಶೋಧನೆ, ನೂತನಗ್ರಂಥರಚನೆ, ಮುಂತಾದ ಕಾರ್ಯಗಳನ್ನು ಸಾಯಂಕಾಲ ೫ ಘಂಟೆಯವರಿಗೂ ಮಾಡುತ್ತಿ ದ್ದರು. ಮತ್ತು ಶಾಸ್ತ್ರವಿಚಾರಗಳನ್ನು ತಿಳಿಯಬೇಕೆಂಬ ವೈದಿಕರೂ ಲೌಕಿ ಕರೂ ಇತರ ದೇಶದವರೊಡನೆ ಸಂಭಾಷಿಸುತ್ತಲೂ ಇದ್ದರು. ಸಾಯಂ ಕಾಲ ೬ ಘಂಟೆ ಆಗಾಯಿತು ೮ ಘಂಟೆಯ ವರಿಗೂ ಶ್ರೀಪರಕಾಲಸ್ವಾಮಿ ಗಳವರ ಮಠಕ್ಕೆ ಹೋಗಿ ಶ್ರೀಗಳವರ ಸಂಗಡ ಶಾಸ್ತ್ರವಿಚಾರವನ್ನು

ಮಾಡುತ್ತಿದ್ದರು. ಅನಂತರ ಮನೆಗೆ ಬಂದು ಪರಸ್ಥಳಗಳಿಂದ ಶಾಸ್ತ್ರ ಆಚಾರ ವಿಷಯಗಳನ್ನು ಕುರಿತು ಬಂದ ಲೇಖನಗಳನ್ನು ನೋಡಿ ಅವುಗಳಿಗೆ ಸಮುತ್ತರಗಳನ್ನು ಬರೆದಿಟ್ಟು ಅನಂತರದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದರು. ಮೈಸೂರು ಪಟ್ಟಣದಲ್ಲಿರುವ ಅರಮನೆಗೆ ಸೇರಿದ ದೇವಾಲಯ ಮತ್ತು ಛತ್ರಗಳಿಗೆ ಇವರು ಧರ್ಮಕರ್ತರಾಗಿ ನಿಯಮಿಸಲ್ಪಟ್ಟಿದ್ದರು.

೧೯೦೬ನೇ ಇಸವಿಯಲ್ಲಿ ದೆಹಲಿಯಲ್ಲಿ ನಡೆದ ದರ್ಬಾರಿಗೆ ನಮ್ಮ ಶ್ರೀಮನ್ ಮಹಾರಾಜ ಶ್ರೀಕೃಷ್ಣರಾಜವಡೆಯರ್ ಬಹದ್ದೂರವರು ಇವರನ್ನು ಕರೆದುಕೊಂಡು ಹೋಗಿದ್ದರು ಇವರು ಕಾಶೀ, ಗಯಾ, ಹರಿದ್ವಾರ, ಅಯೋಧ್ಯ, ಜಗನ್ನಾಥ, ಇವೇ ಮೊಲಾದ ಉತ್ತರದೇಶದಲ್ಲಿರುವ ಪುಣ್ಯಕ್ಷೇತ್ರಗಳಿಗೂ, ತಿರುಪತಿ, ಕಂಚಿ, ಶ್ರೀರಂಗ, ಕುಂಭಕೋಣ, ಮನ್ನಾರುಗುಡಿ, ಸೇತು, ಮೇಲುಕೋಟೆ ಮೊದಲಾದ ದಕ್ಷಿಣದೇಶದಲ್ಲಿರುವ ಪುಣ್ಯಕ್ಷೇತ್ರಗಳಿಗೂ ಯಾತ್ರಾರ್ಥವಾಗಿ ಹೋಗಿದ್ದರು.

ನಮ್ಮ ಮಹಾ ಮಾತೋಶ್ರೀ ಮಹಾರಾಣೀ ವಾಣೀವಿಲಾಸ ಸನ್ನಿಧಾನ ಸಿ. ಐ. ಯವರು ತಮ್ಮ ಆಳಿಕೆಯಲ್ಲಿ ಇವರನ್ನು ಅರಮನೆಯ ವಿದ್ವಾಂಸರನ್ನಾಗಿ ಮಾಡಿ ಅರಮನೆಯಲ್ಲಿಯೂ ಪಂಡಿತ ವೇತನವನ್ನು ಕಲ್ಪಿಸಿಕೊಟ್ಟರು.

ನಮ್ಮ ಮಹಾರಾಜರವರಾದ ಶ್ರೀಕೃಷ್ಣರಾಜವಡೆಯರ್ ಬಹದ್ದೂರವರು ಈಚೆಗೆ ಜ್ಯೇಷ್ಠಮಾಸದಲ್ಲಿ ಇವರನ್ನು ತಮ್ಮ ಸಂಸ್ಥಾನದ ಧರ್ಮಾಧಿಕಾರಿಗಳನ್ನಾಗಿ ನಿಯಮಿಸಿ ವೇತನವನ್ನು ಹೆಚ್ಚಿಸಿದರು. ಇವರು ಪರಕಾಲಮಠೀಯರ ರಿಕ್ತದೆಶೆಯನ್ನು ಹೋಗಲಾಡಿಸಬೇಕೆಂಬ ಉದ್ದೇಶದಿಂದ ಇವರುಗಳ ವಿದ್ಯಾಭ್ಯಾಸಕ್ಕೆ ಅನುಕೂಲ್ಯವನ್ನು ಕಲ್ಪಿಸಿ ವಿದ್ಯೋದಯ ಸಭಾಎಂಬ ಒಂದು ಸಂಘವನ್ನು ಏರ್ಪಡಿಸಿ ಈ ಸಂಘಕ್ಕೆ ತಾವೇ ಪ್ರೆಸಿಡೆಂಟರಾಗಿದ್ದರು.

ಇವರಲ್ಲಿದ್ದ ಅಪೂರ್ವವಾದ ವಿದ್ಯಾ, ಬುದ್ಧಿ, ಕುಶಲತೆಗಳಿಗೆ ಮೀರಿಯೇ ಸೌಲಭ್ಯ, ತಾಳ್ಮೆ, ದಯೆ, ಉದಾರತ್ವ, ಗಾಂಭೀರ್ಯ ಇವೇ ಮೊದಲಾದ ಸದ್ಗುಣಗಳು ಇವರಲ್ಲಿ ನೆಲೆಗೊಂಡಿದ್ದವು. ಇವರಿಗೆ ಅಕಾಲಮರಣವು ೪೫ನೆಯ ವಯಸ್ಸಿನಲ್ಲಿ ಪ್ರಾಪ್ತವಾಯಿತು.